ವಚನಕಾರರ ದೃಷ್ಟಿಯಲ್ಲಿ ಸಮಾನತೆ ಮತ್ತು ವೈಚಾರಿಕತೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ತೋಟಯ್ಯ ತೆಗ್ಗಿನಮಠ

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೦

ವಚನಕಾರರ ದೃಷ್ಟಿಯಲ್ಲಿ ಸಮಾನತೆ ಮತ್ತು ವೈಚಾರಿಕತೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ತೋಟಯ್ಯ ತೆಗ್ಗಿನಮಠ

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೨೦

ಸಂಶೋಧಕರ ಪ್ರಮಾಣ ಪತ್ರ

"ವಚನಕಾರರ ದೃಷ್ಟಿಯಲ್ಲಿ ಸಮಾನತೆ ಮತ್ತು ವೈಚಾರಿಕತೆ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಹೆಬ್ಬಾಲೆ ಕೆ. ನಾಗೇಶ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಸಮಾಜವಿಜ್ಞಾನಗಳ ನಿಕಾಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಈ ಸಂಶೋಧನ ಮಹಾಪ್ರಬಂಧವು ಮೂಲವಾಗಿದ್ದು, ಇಡಿಯಾಗಿ ಇಲ್ಲವೆ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

ತೋಟಯ್ಯ ತೆಗ್ಗಿನಮಠ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ:

ಮಾರ್ಗದರ್ಶಕರ ದೃಢೀಕರಣ ಪತ್ರ

ತೋಟಯ್ಯ ತೆಗ್ಗಿನಮಠ ಇವರು **"ವಚನಕಾರರ ದೃಷ್ಟಿಯಲ್ಲಿ ಸಮಾನತೆ ಮತ್ತು ವೈಚಾರಿಕತೆ"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಸಲ್ಲಿಸಿದ್ದಾರೆ. ಈ ಮಹಾಪ್ರಬಂಧವು ಮೂಲವಾಗಿದ್ದು, ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರೆ ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

20/11/2020

ಡಾ. ಹೆಬ್ಬಾಲೆ ಕೆ. ನಾಗೇಶ್
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ:

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಪ್ರಸ್ತಾವನೆ

ಎಂಟುನೂರು ವರ್ಷಗಳಹಿಂದೆ ಕರ್ನಾಟಕದಲ್ಲಿ ನಡೆದ ಶರಣರ ಆಂದೋಲನ ಕೇವಲ ಧಾರ್ಮಿಕ ಆಯಾಮಕ್ಕಷ್ಟೇ ಸೀಮಿತವಾಗದೆ, ಅಂದಿನ ಅನೇಕ ಪ್ರಚಲಿತ ಗಂಭೀರ ಸಮಸ್ಯೆಗಳಿಗೆ ಪರಿಣಾಮಕಾರಿಯಾಗಿ ಸ್ಪಂದಿಸಿತು, ಎನ್ನುವುದು ಗಮನಾರ್ಹ ಸಂಗತಿ. ವಚನಕಾರರು ವರ್ಣ-ವರ್ಗ-ಲಿಂಗ-ಭೇದಗಳನ್ನು ಹೋಗಲಾಡಿಸಿ ದೀನದಲಿತರ ಆಶಾಕಿರಣವಾದರು. ನವಸಮಾಜವೊಂದನ್ನು ನಿರ್ಮಿಸಿದರು. ಆತ್ಮವಿಶ್ವಾಸ ಮೂಡಿಸುವ ದಿಶೆಯಲ್ಲಿ ಜನಮಾನಸದ ಸಂಗಾತಿಗಳಾದರು, ಮಾರ್ಗದರ್ಶಕರಾದರು. ಅವರು ರಚಿಸಿದ ವಚನವಾಙ್ಮಯ ಕನ್ನಡ ಪರಂಪರೆಯ ಅಪೂರ್ವ ಸಾಹಿತ್ಯಕ-ಸಾಂಸ್ಕೃತಿಕ ಆಧ್ಯಾತ್ಮಿಕ ಸಂಪತ್ತು.

ಶರಣ-ಶರಣೆಯರ ವಚನಗಳು ಅವರ ವ್ಯಕ್ತಿತ್ವದ ಪ್ರಾಮಾಣಿಕ ಪ್ರತಿಬಿಂಬಗಳಂತೆ ಇದ್ದುದರಿಂದ, ದಿನನಿತ್ಯದ ಬದುಕಿನಲ್ಲಿ ಪಾರಮಾರ್ಥಿಕ ಶಕ್ತಿಯನ್ನು ತುಂಬಿದ್ದವು. ಅಂತೆಯೇ ಈ ಆಂದೋಲನದ ವೈಚಾರಿಕ ನಿಲುವನ್ನು ಸದೃಢಗೊಳಿಸಿದವು. ಚೈತನ್ಯ ಜೀವನಾಡಿಗಳಾಗಿ ಸಾರ್ವಕಾಲಿಕ ಮೌಲ್ಯಗಳನ್ನು ಬಿತ್ತರಿಸಿದವು. ಇವೆಲ್ಲದರ ಪರಿಣಾಮವಾಗಿ ಜನತೆ ಪರಿಪೂರ್ಣ ಆದರ್ಶ ಸಮಾಜದ ಕನಸನ್ನು ಕಾಣತೊಡಗಿತು. ಬದುಕಿನ ಸಾರ್ಥಕತೆಗೆ ಪೂರಕವಾದ ಕಾಯಕ-ದಾಸೋಹ ಆಚರಣೆ, ನಿರಹಂಕಾರ ಮನೋಧರ್ಮ, ಭಾವಶುದ್ಧಿ, ನುಡಿದಂತೆ ನಡೆದ ನಿಲುವು ಮೂದಲಾದ ವಿಶಿಷ್ಟ ಗುಣಗಳನ್ನು ಗೌರವಿಸಿತು.

ಹನ್ನೆರಡನೆ ಶತಮಾನ ಜನಪದ ನಿಲುವಿನತ್ತ ಒಲಿದು ಜನಸಾಮಾನ್ಯರ ಭಾಷೆಯ ಮೂಲಕ ಭಕ್ತಿ, ಆಧ್ಯಾತ್ಮ, ಅನುಭಾವ, ಸಮಾನತೆ, ವೈಚಾರಿಕತೆ, ಹೀಗೆ ಹಲವು ವಿಚಾರದಾರೆಗಳನ್ನು ಅಭಿವ್ಯಕ್ತಿಸಿ ಕನ್ನಡ ಸಾಹಿತ್ಯದಲ್ಲಿಯೂ ಬದಲಾವಣೆಯ ಗಾಳಿ ಬೀಸಲು ಅವಕಾಶ ಮಾಡಿಕೊಟ್ಟಿತು. ಬದಲಾದ ಜೀವನ, ಸಂಸ್ಕೃತಿ, ಮೌಲ್ಯ, ಕ್ರಮಗಳಿಗೆ ತಕ್ಕಂತೆಯೇ ಶರಣರು ತಮ್ಮ ಅಭಿವ್ಯಕ್ತಿಯ ಮಾದ್ಯಮವಾಗಿ ಜನಸಾಮಾನ್ಯರಾಗಿ ಆಡುಭಾಷೆ ಗದ್ಯ-ಪದ್ಯ ಮಿಶ್ರಿತವಾದ 'ವಚನ' ಪ್ರಕಾರಗಳನ್ನೇ ಆಯ್ದುಕೊಂಡರು, ಇಲ್ಲಿ ವಚನಕ್ಕೆ 'ಮಾತು' ಮತ್ತು 'ಪ್ರಮಾಣ' ಎಂದು ಅರ್ಥಗಳು ದೊರಕಿಕೊಂಡವು.

ನುಡಿದಂತೆ ನಡೆಯುವ, ನಡೆದಂತೆ ನುಡಿಯುವ ಜೀವನ ಮೌಲ್ಯದ ಅಭಿವ್ಯಕ್ತಿಗೆ 'ವಚನ' ಒಂದು ಸುವರ್ಣ ಮಾಧ್ಯಮವಾಯಿತು. ನೂರಾರು ವಚನಕಾರರು, ವಚನಕಾರ್ತಿಯರು ತಮ್ಮ ಅನುಭವಗಳಿಗೆ ಅಭಿವ್ಯಕ್ತಿ ಕೊಟ್ಟು ಸಾವಿರಾರು ವಚನಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯದ ಜನಪರ ಸಂಸ್ಕೃತಿ, ಮೌಲ್ಯಗಳಿಗೆ ಐತಿಹಾಸಿಕ ದಾಖಲೆಗಳನ್ನಾಗಿ ಇರಿಸಿದ್ದಾರೆ.

ಹನ್ನೆರಡನೆಯ ಶತಮಾನದ ಈ ಶರಣಸಂಸ್ಕೃತಿಯ ಸಾಮಾಜಿಕ ಆಂದೋಲನದಲ್ಲಿ ಮಹಿಳೆಗೆಸಿಕ್ಕ ಸ್ಥಾನಮಾನ, ಗೌರವ, ಘನತೆಗಳು ಗಮನಾರ್ಹವಾದವು. ಲಿಂಗಾಧಾರಿತ ಅಸಮಾನತೆಯ ಒಳಸುಳಿಗಳು ಇಂದಿಗೂ ಸಮಾಜವನ್ನು ಅಸ್ವಸ್ಥಗೊಳಿಸುತ್ತಿರುವಾಗ ಆ ಕಾಲದ ಮಹಿಳೆಯರ ಸ್ಥಿತಿಗತಿಗಳು ಹೇಗಿತ್ತು ಎಂಬುದನ್ನು ಸುಲಭವಾಗಿಯೇ ಊಹಿಸಬಹುದು. ವಚನಕಾರರು ಈ ಪರಿಮಿತಿಯಿಂದ ಹೊರ ಬಂದು ತಾನು ಕನಸು ಕಂಡ ಸಮಾನತೆ, ಸ್ವಾತಂತ್ರ್ಯಗಳ ಸಮಾಜದಲ್ಲಿ ಗಂಡು-ಹೆಣ್ಣೆಂಬ ಭೇದವನ್ನು ಉಳಿಸಿಕೊಳ್ಳದ ಹಿರಿತನವನ್ನು ತೋರಿತು. ಗಂಡು ಹೆಣ್ಣೆಂಬ ಭೇದವನ್ನು ಶರಣರು ನಿರಾಕರಿಸಿದ ಕಾರಣವಾಗಿಯೇ ಮಹಿಳೆಯರು ಅಂದು ಧಾರ್ಮಿಕಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯ, ವೈಯಕ್ತಿಕಸ್ವಾತಂತ್ರ್ಯಗಳನ್ನು ಹೊಂದುವಲ್ಲಿ ಯಶಸ್ವಿಯಾದರು. ಗಂಡು ಹೆಣ್ಣಿನ ಅಸಮಾನತೆಯನ್ನು ಸಮಾಜ ಯಾವ ಕಾಲದಲ್ಲಿಯು ದೈಹಿಕ ವ್ಯತ್ಯಾಸಗಳ ಮೂಲಕವೇ ಗುರುತಿಸುತ್ತದೆ. ಶರಣರು ಆ ದೇಹ ಮೂಲವಾದ ವ್ಯತ್ಯಾಸವನ್ನೇ ನಿರಾಕರಿಸುವ ಮೂಲಕ ಸ್ತ್ರೀ ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸಿದರು.

ಒಟ್ಟಾರೆ ಹನ್ನೆರಡನೆಯ ಶತಮಾನದಲ್ಲಿ ಸಾಧ್ಯವಾದ ಸಮಾನತೆ ಮತ್ತು ವೈಚಾರಿಕತೆ ದೃಷ್ಟಿಯಲ್ಲಿ ಸ್ವಾತಂತ್ರ್ಯಗಳನ್ನು ಪಡೆದುಕೊಂಡು ಆ ಬಹುಮುಖ ಆಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ತಾವೂ ಬೆಳೆದು ಘನತೆಯನ್ನು ಮೆರೆಯುವಂತಹ ಬದುಕನ್ನು ಸಾಗಿಸಿದ ಹಲವಾರು ಶಿವಶರಣೆಯರನ್ನು ಇತಿಹಾಸದಲ್ಲಿ ಕಾಣಬಹುದು. ತಮ್ಮ ಅನುಭವಗಳಿಗೆ ಅಭಿವ್ಯಕ್ತಿ ನೀಡಿದ ಅನೇಕ ವಚನಕಾರರ ವಿಚಾರಧಾರೆಯನ್ನು ಅವರ ಸಾಹಿತ್ಯಕ ಕೊಡುಗೆಯ ಸ್ವರೂಪವನ್ನು ವ್ಯಕ್ತಿಗಳ ನೆಲೆಯಲ್ಲಿ ನಿರೂಪಿಸುವ ಪ್ರಯತ್ನವನ್ನು ಮುಂದಿನ ಅಧ್ಯಾಯಗಳಲ್ಲಿ ನಡೆಸಲಾಗಿದೆ.

೧.೨. ಅಧ್ಯಯನದ ಉದ್ದೇಶ

ವಚನ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯಕ ಚರಿತ್ರೆಯಲ್ಲಿ ಪ್ರಮುಖವಾದ ಸ್ಥಾನವಿದೆ. ಸಾಹಿತ್ಯಕ ಮತ್ತು ಸಂಸ್ಕೃತಿಕ ಎರಡೂ ನೆಲೆಗಳಲ್ಲೂ ವಚನ ಚಳವಳಿ ತನ್ನದೇ ಆದ ಛಾಪು ಮೂಡಿಸಿದೆ. ಇಂತಹ ವಚನಗಳ ರಚನೆಗೈದ ಶರಣ-ಶರಣೀಯರ ಸಾಧನೆ ಸಿದ್ಧಿಗಳನ್ನು ಕೇವಲ ಹುಟ್ಟು, ಬಾಲ್ಯ, ತಂದೆ-ತಾಯಿ, ವಿವಾಹ ದಾಂಪತ್ಯ, ಬದುಕು ಜೀವನಕ್ರಮವಾಗಿ ಗ್ರಹಿಸದೇ ಅವರ ಒಟ್ಟು ವ್ಯಕ್ತಿ ಚಿತ್ರವನ್ನು ನಿರ್ಮಿಸುವುದು ಅಧ್ಯಯನದ ಪ್ರಮುಖ ಉದ್ದೇಶ, ಮತ್ತು ವಚನ ಚಳುವಳಿಯ ಚಾರಿತ್ರಿಕ ನೆಲೆಯನ್ನು, ವಚನಕಾರರ ವಚನಗಳಲ್ಲಿ ಸಮಾನತೆಯ ಸಂವೇದನೆಗಳು ಮತ್ತು ವೈಚಾರಿಕತೆಯ ವ್ಯಾಪಕತೆಯ ಲೋಕಾನುಸಂಧಾನ, ಸಮಾನತೆ, ಲೋಕಾನುಭವವನ್ನು ತಿಳಿಸುವುದು ಉದ್ದೇಶವಾಗಿದೆ.

ಹಾಗೂ ವಚನಗಳು ಮತ್ತು ವರ್ತಮಾನದ ತಲ್ಲಣಗಳು, ವಚನಕಾರರಲ್ಲಿ ಹಸಿವಿನ ಹಪಹಪಿಸುವಿಕೆ, ವಚನಗಳಲ್ಲಿ ಸಮಾಜೋಧಾರ್ಮಿಕ, ಆರ್ಥಿಕ ಸಮಾನತೆಯ ವಿಶ್ವಾಸಾರ್ಹತೆಯ ತಾತ್ವಿಕತೆ ಸ್ತ್ರೀಸಮಾನತೆ ಕುರಿತು ತಿಳಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ವಚನಕಾರರ ದೃಷ್ಟಿಯಲ್ಲಿ ಸಮಾನತೆ ಮತ್ತು ವೈಚಾರಿಕತೆಗಳ ಕುರಿತು ನನ್ನ ಮಾರ್ಗದರ್ಶಕರೊಡನೆ ಚರ್ಚಿಸಿದಾಗ ಮತ್ತು ಪ್ರಕಟಿತ ವಚನಗಳನ್ನು ಗಮನಿಸಿದಾಗ ನನ್ನ ಅಧ್ಯಯನಕ್ಕೆ ಒಂದು ಸೀಮಿತ ಚೌಕಟ್ಟನ್ನು ಹಾಕಿಕೊಳ್ಳಬೇಕಾದ ಅನಿವಾರ್ಯತೆಯುಂಟಾಯಿತು. ಒಂದು ಸೈದ್ಧಾಂತಿಕ ಅಧ್ಯಯನಕ್ಕೆ ನಿರ್ದಿಷ್ಟವಾದ ಚೌಕಟ್ಟು ಬಹಳ ಮುಖ್ಯ. ನಿರ್ದಿಷ್ಟವಾದ ಚೌಕಟ್ಟು ಇದ್ದಾಗ ಮಾತ್ರ ನಿಶ್ಚಿತವಾದ ಫಲಿತಗಳನ್ನು ತಗೆದುಕೊಳ್ಳುವುದಕ್ಕೆ ಸಾಧ್ಯ. ಪ್ರಸ್ತುತ ಅಧ್ಯಯನವು ತನ್ನದೇ ಆದ ವ್ಯಾಪ್ತಿಯನ್ನು ಒಳಗೊಂಡಿದೆ. ೧೨ ನೇ ಶತಮಾನದ ಆದಿಯಿಂದ ಅಂತ್ಯದವರೆಗೆ ಬದುಕಿದ ಎಲ್ಲ ವಚನಕಾರರ ದೃಷ್ಟಿಯನ್ನು ಕುರಿತಾದ ಅಧ್ಯಯನದ ಮುಖ್ಯ ತಿರುಳಾಗಿದ್ದರೂ, ಬಸವನ ಬಾಗೇವಾಡಿ, ಇಂಗಳೇಶ್ವರ, ಕೂಡಲಸಂಗಮ, ಉಳವಿ, ಬಸವಕಲ್ಯಾಣ, ಬನವಾಸಿ, ಬಳ್ಳಿಗಾವೆ, ಉಡುತಡಿ, ಸೊನ್ನಲಿಗೆ(ಸೊಲ್ಲಾಪೂರ), ಮುದೆನೂರು ಮೊದಲಾಗಿ ಅಧ್ಯಯನದ ವ್ಯಾಪ್ತಿಯು ಇತರೆ ಧಾರ್ಮಿಕ ಧಾರೆಗಳಾದ ಶಿಷ್ಟ ಮತ್ತು ಪರಿಶಿಷ್ಟ ನೆಲೆಯ ಪಂಥಗಳವರೆಗೆ ಚಾಚಿದೆ. ಈ ಅಧ್ಯಯನವು ಸ್ವಲ್ಪ ಮಟ್ಟಿಗೆ ಕ್ಷೇತ್ರಕಾರ್ಯವನ್ನು ಒಳಗೊಂಡಿದ್ದು ವಕ್ತೃಗಳನ್ನು ಭೇಟಿ ಮಾಡಿ ಅವರು ನೀಡಿರುವ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಒಟ್ಟಿನಲ್ಲಿ ಇದುವರೆಗಿನ ವಿದ್ವಾಂಸರ ಚರ್ಚೆ, ಗ್ರಂಥಗಳ ಪರಾಮರ್ಶನ ಕ್ಷೇತ್ರಕಾರ್ಯಗಳ ಮೂಲಕ ಅಲ್ಲಿಯ ಅಧ್ಯಯನವನ್ನು ಪೂರೈಸುವ ಪ್ರಯತ್ನ ಮಾಡಲಾಗಿದೆ.

೧.೪. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಒಂಬತ್ತು ಅಧ್ಯಾಯಗಳನ್ನು ಒಳಗೊಂಡಿರುತ್ತದೆ. ಅಧ್ಯಾಯ ಒಂದರಲ್ಲಿ ಅಧ್ಯಯನದ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ವಿಧಾನಗಳು ಮತ್ತು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಗುರುತಿಸಲಾಗುವುದು.

ಅಧ್ಯಾಯ ಎರಡರಲ್ಲಿ ವಚನಗಳ ಹುಟ್ಟು, ಅರ್ಥ, ವ್ಯಾಖ್ಯಾನ, ಬೆಳೆದು ಬಂದ ದಾರಿ, ಜಾನಪದ ಮತ್ತು ವಚನಕಾರರು ಹಾಗೂ ವಚನಚಳುವಳಿ ಸಂದರ್ಭವನ್ನು ವಿವರಿಸಲಾಗುವುದು. ಚಳುವಳಿ ಸ್ವರೂಪವನ್ನು ಸಾಮಾಜಿಕ ಇತ್ಯಾದಿ ಅಂಶಗಳ ಹಿನ್ನಲೆಯಲ್ಲಿ ವಿವರಿಸಲಾಗುವುದು. ಈ ಸಂದರ್ಭಕ್ಕೆ ಕಾರಣೀಭೂತವಾಗುವ ಅಂಶಗಳು ಹಾಗೂ ಸಾಂದರ್ಭಿಕ ಪರಿಣಾಮಗಳನ್ನು ಅಧ್ಯಯನದ ಪೂರ್ವಪೀಠಿಕೆಯಾಗಿ ನಿರೂಪಿಸಲಾಗುವುದು.

ಅಧ್ಯಾಯ ಮೂರರಲ್ಲಿ ವಚನಕಾರರ ವಚನಗಳಲ್ಲಿ ಸಮಾನತೆಯ ಸಂವೇದನೆಗಳು ಮತ್ತು ವೈಚಾರಿಕತೆಯ ವ್ಯಾಪಕತೆಯನ್ನು ಅಲ್ಲಮ, ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮರ ದೃಷ್ಟಿಯಲ್ಲಿ ತಿಳಿಸುವುದಾಗಿದೆ ಮತ್ತು ಕಸುಬುಗಳ ಜಾತ್ಯಾತೀತ ನೆಲೆಗಳನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ತಳಸಮುದಾಯಗಳ ವಚನಕಾರರ ವಚನಗಳಲ್ಲಿ ವೈಚಾರಿಕತೆ ಮತ್ತು ಸಮಾನತೆಯಲ್ಲಿ ತಾತ್ವಿಕತೆಯ ತತ್ವಗಳನ್ನು ಅಂಬಿಗರ ಚೌಡಯ್ಯ, ಗಣೇಶ ಮಸಣಯ್ಯ, ಜೇಡರ ದಾಸೀಮಯ್ಯ, ಮಡಿವಾಳ ಮಾಚಯ್ಯ, ಮಾದರ ಧೂಳಯ್ಯ, ಡೋಹರ ಕಕ್ಕಯ್ಯ, ಉರಿಲಿಂಗಿ ಪೆದ್ದಿ, ಆಯ್ದಕ್ಕಿ ಲಕ್ಕಮ್ಮ, ಸೂಳೆ ಸಂಕವ್ವೆ, ಕಾಳವ್ವೆ, ಗುಡ್ಡವ್ವೆ ಇವರೆಲ್ಲರ ಜೀವನ ಕ್ರಮದಲ್ಲಿ ತಿಳಿಸಲಾಗಿದೆ.

ಅಧ್ಯಾಯ ಐದರಲ್ಲಿ ವಚನಗಳು ಮತ್ತು ಪ್ರಸ್ತುತ ಕಾಲದ ತಲ್ಲಣಗಳನ್ನು ಅವಲೋಕಿಸುವುದು.

ಅಧ್ಯಾಯ ಆರರಲ್ಲಿ ವಚನಕಾರರಲ್ಲಿ ಮಾನಸಿಕವಾಗಿ, ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಹಸಿವಿನ ಹಪಹಪಿಸುವಿಕೆಯನ್ನು ಗುರುತಿಸಿ, ಅವರ ವಚನ ಸಾಹಿತ್ಯದಲ್ಲಿ ಜಾತ್ಯಾತೀತ ನಿಲುವುಗಳನ್ನು ಗುರುತಿಸಲಾಗುವುದು.

ಅಧ್ಯಾಯ ಏಳರಲ್ಲಿ ಸಮಾಜೋಧಾರ್ಮಿಕ, ಆರ್ಥಿಕ ಸಮಾನತೆಯ ವಿಶ್ವಾಸಾರ್ಹತೆಯ, ತಾತ್ವಿಕತೆಯ ಪರಿಕಲ್ಪನೆಯನ್ನು ಮಂಡಿಸುವುದು.

ಅಧ್ಯಾಯ ಎಂಟರಲ್ಲಿ, ವಚನಗಳಲ್ಲಿ ಮಹಿಳಾ ಸಮಾನತೆ ಮತ್ತು ವೈಚಾರಿಕತೆಯ ಅನುಸಂಧಾನವನ್ನು ಕುರಿತು ಚರ್ಚಿಸುವುದು ಹಾಗೂ ಫಲಿತಗಳನ್ನು ತಿಳಿಸುವುದು.

ಅಧ್ಯಾಯ ಒಂಬತ್ತರಲ್ಲಿ ಮೇಲ್ಕಂಡ ಎಂಟು ಅಧ್ಯಾಗಳ ಒಟ್ಟು ಸಾರಾಂಶವನ್ನು ಒದಗಿಸಲಾಗುವುದು. ಅಲ್ಲದೆ ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ಆಧಾರ ಗ್ರಂಥಗಳ ವಿವರವನ್ನು ನೀಡಲಾಗುವುದು ಮತ್ತು ವೈಚಾರಿಕತೆಗೆ ಸಂಬಂಧಪಟ್ಟಂತೆ ಛಾಯಾಚಿತ್ರಗಳನ್ನು ನೀಡಲಾಗುವುದು.

ಅನುಬಂಧಗಳು

ಇದರಲ್ಲಿ ಪರಾಮರ್ಶನ ಗ್ರಂಥಗಳು, ವಕ್ತೃವಿನ ವಿವರ, ಲೇಖನಗಳು ಹಾಗೂ ಇಂಗ್ಲೀಷ್ ಗ್ರಂಥಗಳನ್ನು ಕಾಣಿಸಲಾಗುವುದು.

೧.೫. ಅಧ್ಯಯನದ ವಿಧಾನಗಳು

ವಿವಿಧ ಗ್ರಂಥಾಲಯಗಳಲ್ಲಿ ಮಾಹಿತಿ ಸಂಗ್ರಹ ವಿಧಾನದ ಮೂಲಕ ವಿಷಯವನ್ನು ಸಂಗ್ರಹಿಸಿ ಅವುಗಳನ್ನು ಗ್ರಹಿಸುವ ಹಾಗೂ ಆ ವಿಷಯಗಳಿಗೆ ಸ್ಪಷ್ಟತೆಯನ್ನು ಒದಗಿಸುವ ನಿಟ್ಟಿನಲ್ಲಿ ಕ್ಷೇತ್ರಕಾರ್ಯ ಅನುಸರಿಸಿ ಪ್ರಸ್ತುತ ಅಧ್ಯಯನವನ್ನು ರೂಪಿಸಲಾಗುವುದು. ಅಂದರೆ ಈ ಅಧ್ಯಯನಕ್ಕೆ ಮಾಹಿತಿಸಂಗ್ರಹ ವಿಧಾನ ಮತ್ತು ಕ್ಷೇತ್ರಕಾರ್ಯ ವಿಧಾನವನ್ನು ಅನುಸರಿಸಲಾಗುವುದು.

ವಿಶ್ಲೇಷಣಾತ್ಮಕ ವಿಧಾನ

ವಿಶ್ಲೇಷಣೆಯ ಮೊದಲಹಂತ ಸಂಗ್ರಹಿಸಿದ ಸಾಮಾಗ್ರಿಗಳನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸುವುದು. ಅಂದರೆ ಈ ಅಧ್ಯಯನಕ್ಕೆ ಎಷ್ಟರ ಮಟ್ಟಿಗೆ ವಿಷಯ ಪ್ರತಿಪಾದನೆಗೆ ಸಹಾಯಕವಾಗಿವೆ, ಊಹನಾ

ಸಿದ್ಧಾಂತಕ್ಕೆ ಎಷ್ಟು ಹೊಂದುತ್ತವೆಂಬುದನ್ನು ನಿಷ್ಕರ್ಷಿಸಬಹುದು. ಆದರೆ ವಚನಕಾರರ ದೃಷ್ಟಿಯಲ್ಲಿ ಸಮಾನತೆ ಹಾಗೂ ವೈಚಾರಿಕತೆಯನ್ನು ಜನಸಮುದಾಯಕ್ಕೆ ತಮ್ಮ ಸಂದೇಶದಿಂದ ಅರಿವು ಮೂಡಿಸುತ್ತಿರುವಾಗ ಸಾಕಷ್ಟು ವಿರೋಧಗಳು ಬರುತ್ತವೆ. ಆ ಎಲ್ಲ ವಿರೋಧಕ್ಕೆ ಸರಿಯಾಗಿ ಉದಾಹರಣೆಯೊಂದಿಗೆ ವಿಶ್ಲೇಷಣೆಯನ್ನು ತಮ್ಮ ವಚನಗಳ ಮೂಲಕ ತಿಳಿಸಿದ್ದಾರೆ. ಇಂತಹ ವಿಚಾರ ವಿಮರ್ಶೆಯ ಈ ಅಧ್ಯಯನದಲ್ಲಿ ಪರಿಕಲ್ಪನೆಯೊಂದಿಗೆ ಸ್ಪಷ್ಟೀಕರಿಸಲಾಗುವುದು.

ಚಾರಿತ್ರಿಕ ವಿಧಾನ

ಬದಾಮಿ ಚಾಳುಕ್ಯರ ವಂಶಜರೆಂದು ತಮ್ಮನ್ನು ಕರೆದುಕೊಂಡಿರುವ ಕಲ್ಯಾಣದ ಚಾಳುಕ್ಯರು ರಾಷ್ಟ್ರಕೂಟರನ್ನು ಪದಚ್ಯುತಗೊಳಿಸಿ ಅಧಿಕಾರ ಪಡೆದರು. ಇವರನ್ನು ಪಶ್ಚಿಮದ ಚಾಳುಕ್ಯರೆಂದು ಕರೆಯುವರು. ಇವರ ರಾಜಧಾನಿ ಬೀದರ್ ಜಿಲ್ಲೆಯ ಕಲ್ಯಾಣ. ಇವರ ಲಾಂಛನ ವರಹ. ರಾಷ್ಟ್ರಕೂಟರ ಸಾಮಂತರಾಗಿದ್ದ ೨ ನೇ ತೈಲಪ ಈ ಮನೆತನದ ಮೂಲ ಪುರುಷ. ತೈಲಪನು ೨ನೇ ಕರ್ಕನನ್ನು ಸೋಲಿಸಿ ಈ ರಾಜ್ಯಕ್ಕೆ ತಳಹದಿ ಹಾಕಿದನು.

೨ನೇ ತೈಲಪ (ಕ್ರಿ.ಶ. ೯೭೩–೯೯೭) ಈತ ಕಲ್ಯಾಣಿ ಚಾಳುಕ್ಯರ ಸ್ಥಾಪಕ ದೊರೆ. ತೈಲನು ಪ್ರಾಂತ್ಯದಲ್ಲಿ ರಾಷ್ಟ್ರಕೂಟರ ಮಾಂಡಲಿಕನಾಗಿದ್ದು ತರ್ದವಾಡಿ ಪ್ರಾಂತ್ಯದಲ್ಲಿ ಆಳುತ್ತಿದ್ದನು. ದಕ್ಷಿಣ ಕೊಂಕಣದ ಶಿಲಾಹಾರರನ್ನು ತನ್ನ ಮಾಂಡಲಿಕರಾಗಿ ತೈಲನು ಮಾಡಿಕೊಂಡನಲ್ಲದೆ ಚೋಳ ಉತ್ತಮನನ್ನು ಸೋಲಿಸಿದ. ತೈಲ ಎಂಬುದು ತ್ರೈಲೋಕಮಲ್ಲ ಎಂಬುದರ ರೂಪ. ಇವನ ದಂಡನಾಯಕ ಬರ್ಪೆ. ೨ನೇ ತೈಲಪನಿಗೆ ತ್ರೈಲೋಕಮಲ್ಲ ಎಂಬ ಬಿರುದಿದೆ. ರನ್ನನಿಗೆ ಕವಿ ಚಕ್ರವರ್ತಿ ಎಂಬ ಬಿರುದನ್ನು ನೀಡಿದವನು ಈತನಾಗಿದ್ದಾನೆ. ಈತ ಕ್ರಿ.ಶ. ೯೯೭ರಲ್ಲಿ ಮರಣ ಹೊಂದಿದ. ಈತನ ನಂತರ ಸತ್ಯಾಶ್ರಯ ಅಧಿಕಾರಕ್ಕೆ ಬಂದನು.

ಇರಿವಬೆಡಂಗ–ಸತ್ಯಾಶ್ರಯ (ಕ್ರಿ.ಶ. ೯೯೭–೧೦೦೮)

ಈತನೇ ತೈಲಪನ ಮಗ. ಇವನಿಗೆ ಅಕಲಂಕಚರಿತ, ಇರಿವಬೆಡಂಗ ಎಂಬ ಬಿರುದುಗಳಿದ್ದವು. ಸತ್ಯಾಶ್ರಯನು ರನ್ನನಿಗೆ ಆಶ್ರಯದಾತನಾಗಿದ್ದ. ಸತ್ಯಾಶ್ರಯನು ಉತ್ತರ ಕೊಂಕಣದ ಶಿಲಾಹಾರ ಅಪರಾಜಿತನನ್ನು ತನ್ನ ಮಾಂಡಲಿಕನಾಗುವಂತೆ ಮಾಡಿದ. ಗುಜರಾತಿನಲ್ಲಿ ಚಾಳುಕ್ಯರನ್ನು ಸೋಲಿಸಿ ತನ್ನ ಚಾಳುಕ್ಯ ಮಾಂಡಲಿಕ ಗೊಗ್ಗಿರಾಜರ ಸ್ಥಾನವನ್ನು ಭದ್ರಪಡಿಸಿದ್ದು ಸತ್ಯಾಶ್ರಯನ ಇನ್ನೊಂದು ಸಾಧನೆಯಾಗಿದೆ. ಸತ್ಯಾಶ್ರಯನಿಗೆ ಮಕ್ಕಳಿಲ್ಲದ ಕಾರಣ ಆತನ ಮೃತ ಸೋದರನ ಮಗ ಇಮ್ಮಡಿ ಜಯಸಿಂಹನು ಪಟ್ಟವೇರಿದನು.

ಇಮ್ಮಡಿ ಜಯಸಿಂಹ (ಕ್ರಿ.ಶ. ೧೦೧೫–೧೦೪೩)

ಜಗದೇಕಮಲ್ಲ ಎಂದು ಪರಿಚಿತನಾಗಿರುವ ೨ನೇ ಜಯಸಿಂಹನಿಗೆ ಮಲ್ಲಿಕಾಮೋಹ ಎಂಬ ಬಿರುದಿತ್ತು. ಜಯಸಿಂಹನು ಕೆಲವೇ ವರ್ಷಗಳಲ್ಲಿ ಉತ್ತರಕೊಂಕಣವನ್ನು ಮತ್ತೆ ಗೆದ್ದನಲ್ಲದೆ,

ಬಿಲ್ಲಮನನ್ನು ಸೋಲಿಸಿದನು. ೩ನೇ ಬಿಲ್ಲಮನಿಗೆ ತನ್ನ ಮಗಳಾದ ಅವ್ವಲ್ಲದೇವಿಯನ್ನು ಮದುವೆಮಾಡಿಕೊಟ್ಟನು. ಜಯಸಿಂಹನ ರಾಣಿ ಸುಗ್ಗಲದೇವಿ ದೇವರದಾಸಿಮಯ್ಯನೆಂಬ ಶೈವನ ಭಕ್ತೆಯಾಗಿದ್ದಳು. ಜಯಸಿಂಹನು ಜೈನ ಸಂಪ್ರದಾಯಕ್ಕೆ ಮತಾಂತರವಾದವನು. ಜಯಸಿಂಹನಿಗೆ ಸೋಮೇಶ್ವರ ಮತ್ತು ಜಯಸಿಂಹ ಎಂಬ ಪುತ್ರರಿದ್ದರು.

೧ನೇ ಸೋಮೇಶ್ವರ (ಕ್ರಿ.ಶ. ೧೦೪೩-೧೦೬೮)

ಜಯಸಿಂಹನ ಮರಣಾನಂತರ ೧೦೪೩ರಲ್ಲಿ ಪಟ್ಟವೇರಿದ ೧ನೇ ಸೋಮೇಶ್ವರನು ಚಾಳುಕ್ಯರ ಗಣ್ಯ ಅರಸರಲ್ಲಿ ಒಬ್ಬ. ತನ್ನ ತಂದೆಯ ಕಾಲದಲ್ಲಿ ಯುವರಾಜನಾಗಿ, ಆಗಿಂದಲೇ ಚೋಳರ ವಿರುದ್ಧ ಕಾದಾಟ ನಡೆಸಿದ್ದ. ಪಟ್ಟಕ್ಕೆ ಬಂದ ನಂತರ ಚೋಳರನ್ನು ಅಮರಾವತಿ ಬಳಿ ಎದುರಿಸಿದ. ಸೋಮೇಶ್ವರನ ನಂತರ ಆತನ ಹಿರಿಯ ಮಗ ಇಮ್ಮಡಿ ಸೋಮೇಶ್ವರ ಪಟ್ಟವೇರಿದ ತಕ್ಷಣವೇ ಗುತ್ತಿಯನ್ನು ಆಕ್ರಮಿಸಿದ್ದ ಚೋಳರನ್ನು ಎದುರಿಸಬೇಕಾಯಿತು. ಇವನ ನಂತರ ೧೦೭೬ರಲ್ಲಿ ವಿಕ್ರಮಾದಿತ್ಯ ಪಟ್ಟವೇರಿದ.

೬ನೇ ವಿಕ್ರಮಾದಿತ್ಯ

ಕಲ್ಯಾಣ ಚಾಲುಕ್ಯರ ಅತ್ಯಂತ ಪ್ರಸಿದ್ಧ ದೊರೆ ವಿಕ್ರಮನು ಅನೇಕ ಗಣ್ಯ ಯುದ್ಧಗಳನ್ನು ನಡೆಸಿದನಾದರೂ ಅವನ ಆಡಳಿತ ಶಾಂತಿ ಮತ್ತು ಸಮೃದ್ಧಿಯಿಂದ ಕೂಡಿತ್ತು. ಇವನ ತಂದೆ ೧ನೇ ಸೋಮೇಶ್ವರ, ತಾಯಿ ಬಾಚಲಾದೇವಿ. ಈ ೦೯/೦೩/೧೦೭೬ರಲ್ಲಿ 'ಚಾಳುಕ್ಯ ವಿಕ್ರಮ ಶಕೆ' ಎಂಬ ಹೊಸ ಶಕೆಯನ್ನು ಸ್ಥಾಪಿಸಿದ. ಈತನಿಗೆ ಭುವನೈಕ್ಯಮಲ್ಲ ಮತ್ತು ಪೆರ್ಮಾಡಿದೇವ ಎಂಬ ಬಿರುದಿತ್ತು. ಈತನ ದಂಡನಾಯಕ ದಂಡಾಧೀಶನಾಗಿದ್ದಾನೆ. ದಂಡಾಧೀಶ ಮಹಾದೇವ ದೇವಾಲಯದ ನಿರ್ಮಾತೃವಾಗಿದ್ದಾನೆ. ಈ ದೇವಾಲಯನ್ನು ದೇವಾಲಯಗಳ ಚಕ್ರವರ್ತಿ ಎಂದು ಕರೆಯುತ್ತಾರೆ. ಬೆಳ್ಳಿಗಾಂವೆ ೬ನೇ ವಿಕ್ರಮಾದಿತ್ಯನ ಕಾಲದ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಇವನು ವಿಕ್ರಮಪುರ ಎಂಬ ನಗರವನ್ನು ನಿರ್ಮಿಸಿದ. ಈತ ೧೧೨೬ರಲ್ಲಿ ಮರಣ ಹೊಂದಿದ.

೩ನೇ ಸೋಮೇಶ್ವರ

ಈತ ೬ನೇ ವಿಕ್ರಮಾದಿತ್ಯನ ನಂತರ ಅಧಿಕಾರಕ್ಕೆ ಬಂದನು. ೩ನೇ ಸೋಮೇಶ್ವರನು ಮಾನಸೊಲ್ಲಾಸ ಮತ್ತು ವಿಕ್ರಮಾಭ್ಯುದಯ ಎಂಬ ಕೃತಿಗಳನ್ನು ರಚಿಸಿದ್ದಾನೆ. ಮಾನಸೊಲ್ಲಾಸ ಕೃತಿಯನ್ನು ಅಭಿಲಾಷಿತಾರ್ಥ ಚಿಂತಾಮಣಿ ಎಂತಲೂ ಕರೆಯುತ್ತಾರೆ. ಬರೋಡದ ಗಾಯಕ್‌ವಾಡ್ ಓರಿಯಂಟಲ್ ಸಂಸ್ಥೆಯು "ಅಭಿಲಾಷಿತಾರ್ಥ ಚಿಂತಾಮಣಿ" ಕೃತಿಯ ಪ್ರತಿಗಳನ್ನು ೩ ಭಾಗಗಳಾಗಿ ಪ್ರಕಟಿಸಿದ. ೩ನೇ ಸೋಮೇಶ್ವರನಿಗೆ ಸರ್ವಜ್ಞ ಚಕ್ರವರ್ತಿ, ಭೂಲೋಕಮಲ್ಲ, ತ್ರಿಭುವನಮಲ್ಲ ಎಂಬ ಬಿರುದುಗಳಿದ್ದವು.

೩ನೇ ಸೋಮೇಶ್ವರನ ಮಗ ೨ನೇ ಜಗದೇಕಮಲ್ಲನ ಕಾಲದಲ್ಲಿ ಹೊಯ್ಸಳರು ಪ್ರಬಲಿಸಿದರಲ್ಲದೆ, ವೆಂಗಿ ಪ್ರದೇಶ ಅವನ ಕೈತಪ್ಪಿತು. ನಂತರ ೩ನೇ ತೈಲಪ ೧೧೪೯ರಲ್ಲಿ ಪಟ್ಟವೇರಿದ. ಈತ ಕಾಕತೀಯ ಪೋಲನಿಂದ ಸೋತು ಸೆರೆಯಾಳಾದನು. ಮಾಂಡಲಿಕ ಕಲಚೂರಿ ಬಿಜ್ಜಳ ೧೧೫೦ರಲ್ಲಿ ಗೆದ್ದ ೧೧೬೨ರಲ್ಲಿ ತೈಲಪನ ಕೊಲೆಯಾಯಿತು. ೧೧೬೨ರಿಂದ ೧೧೮೪ ರವರೆಗೆ ಕಲಚೂರಿಗಳು ಸಾಮ್ರಾಜ್ಯ ಆಳಿದರು.

ಕಲಚೂರಿಗಳು

ಕರ್ನಾಟಕದ ಕಲಚೂರಿಗಳು ಕಾಲಿಂಜರಿಂದ ಬಂದವರಾಗಿದ್ದು ಸುವರ್ಣ ವೃಷಭವು ಅವರ ಲಾಂಛನವಾಗಿತ್ತು. ಉಚಿತವೆಂಬ ಈ ವಂಶದ ಅರಸು ಕಲ್ಯಾಣದ ಚಾಳುಕ್ಯರ ಮಾಂಡಲಿಕನಾಗಿದ್ದು ಮುಂದೆ ೧ನೇ ಬಿಜ್ಜಳ, ಕರ್ಣ, ಜೋಗಮ ಮತ್ತಿತರು ಆಳಿದರು.

೨ನೇ ಬಿಜ್ಜಳ

ಈ ವಂಶದ ಗಣ್ಯ ಅರಸನಾದ ಬಿಜ್ಜಳ ಕಲ್ಯಾಣದಲ್ಲಿ ಸಾಮ್ರಾಟನಾಗಿ ವಂಶದ ಖ್ಯಾತಿಗೆ ಕಾರಣನಾದನು. ಖ್ಯಾತ ಧಾರ್ಮಿಕ ಪ್ರವರ್ತಕರಾದ ಬಸವಣ್ಣನವರು ಈತನಲ್ಲಿ ಭಂಡಾರದ ಅಧಿಕಾರಿಗಳಾಗಿದ್ದರು. ಮಂಗಳವಾಡದಿಂದ ಕಲ್ಯಾಣಕ್ಕೆ ರಾಜಧಾನಿಯನ್ನು ಬದಲಾಯಿಸಿದ. ಹೊಯ್ಸಳ ನರಸಿಂಹ, ಉಚ್ಚಂಗಿಯ ವಿಜಯಪಾಂಡ್ಯರನ್ನು ಬಗ್ಗಿಸಿದ್ದಲ್ಲದೆ, ಸೇಉಣರನ್ನೂ ಅದ್ದುಬಸ್ತಿನಲ್ಲಿಟ್ಟನು. ಬಿಜ್ಜಳನು ಶೈವನಾಗಿದ್ದ, ಉತ್ತಮ ಸಾಮ್ರಾಟನಾಗಿದ್ದ. ಬಿಜ್ಜಳನು ಸ್ವಲ್ಪಕಾಲ ಮಾತ್ರ ಆಳ್ವಿಕೆ ನಡೆಸಿದ. ೧೧೬೦ರಲ್ಲಿ ತನ್ನ ಮಗ ಸೋವಿದೇವನಿಗೆ ಸಿಂಹಾಸನ ಬಿಟ್ಟುಕೊಟ್ಟನು. ಅದೇ ವರ್ಷ ಭಂಡಾರಿ ಬಸವಣ್ಣನವರು ಕಲ್ಯಾಣದಲ್ಲಿ ಕೆಲ ಘಟನೆಗಳಿಂದ ಮನನೊಂದು ಕಲ್ಯಾಣವನ್ನು ತ್ಯಜಿಸಿದರು. ಬಿಜ್ಜಳನ ಸಾವಿನ ನಂತರ ಪಟ್ಟಕ್ಕಾಗಿ ಅಂತಃಕಲಹವಾಯಿತು. ನಂತರ ಹಲವರು ಆಳಿದರಾದರೂ ೧೧೮೪ರಲ್ಲಿ ಚಾಳುಕ್ಯ ೪ನೇ ಸೋಮೇಶ್ವರನ ಅಧಿಪತ್ಯದಿಂದಾಗಿ ಕಲಚೂರಿ ಸಾಮ್ರಾಜ್ಯ ಕೊನೆಯಾಯಿತು.

ಕಲ್ಯಾಣ ಪಟ್ಟಣವನ್ನು ಆಳಿದ ಕಲಚೂರಿ ಸಾಮ್ರಾಜ್ಯದ ೨ನೇ ಬಿಜ್ಜಳನ ಕಾಲಾವಧಿಯಲ್ಲಿ ಬರುವ ಎಲ್ಲ ಶರಣ-ಶರಣೆಯರ ಸಮಗ್ರ ಕ್ರಾಂತಿಯನ್ನು ಒಳಗೊಂಡ ಚಾರಿತ್ರಿಕ ವಿಧಾನವನ್ನು ಅನುಸರಿಸಲಾಗುವುದು. ಕನ್ನಡ ಇತಿಹಾಸದಲ್ಲಿಯೇ ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ಹಾಗೂ ಆರ್ಥಿಕ ಸರ್ವಸಮಾನತೆಯ ಚಿಂತನೆಗಳಿಂದ ಎಲ್ಲ ಕಾಲಕ್ಕೂ ಉಪಯುಕ್ತ ಮಾನವೀಯ ಮೌಲ್ಯಗಳ ಗುಣಗಳ ಸುವರ್ಣಲೇಪನ ಮಾಡಿದ್ದು ಹನ್ನೆರಡನೇ ಶತಮಾನ, ನೊಂದವರ, ಬೆಂದವರ ಪಾಲಿಗೆ ಮಹೋನ್ನತಿ ತಂದು, ಪ್ರತಿಭೆಯ ಉತ್ತುಂಗ ಶಿಖರಕ್ಕೆ ನಾಂದಿ ಹಾಡಿ ಆತ್ಮಸಾಕ್ಷಾತ್ಕಾರದ ಮಹಾಬೆಳಕನ್ನು ಹರಿಸಿದ್ದು ವಿಶಿಷ್ಟವಾಗಿದೆ. ಅನುಭಾವಿಗಳಾದ ಅನೇಕ ವಚನಕಾರರು ಪ್ರತಿಪಾದಿಸಿದ ಸಮಾನತೆ ಹಾಗೂ ವೈಚಾರಿಕತೆಯ ಒಲವು-ನಿಲುವುಗಳು ಮೈದುಂಬಿ ನಿಂತಿವೆ. ಕರ್ನಾಟಕ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನದ ವಚನಚಳುವಳಿ ಪರಿವರ್ತನೆಯ ಕಾಲಘಟ್ಟವಾಗಿದೆ.

ವಚನಕಾರರು ನಿಷ್ಠುರವಾದಿಗಳು ಜೊತೆಗೆ ಪರಂಪರೆಯನ್ನು ಕುರಿತು, ಧರ್ಮವನ್ನು ಕುರಿತು ಎಲ್ಲಕ್ಕೂ ಮಿಗಿಲಾಗಿ ತಮ್ಮನ್ನೇ ತಾವು ಪ್ರಶ್ನಿಸುವಂತದ್ದು ಜೊತೆಗೆ ಸರಿಯಾದ ದಾರಿಗೆ ಹೋಗುವ ಮಾರ್ಗವನ್ನು ಅನುಭವ ಮಂಟಪದಲ್ಲಿ ಚರ್ಚೆಯಮೂಲಕ ಕಂಡುಕೊಳ್ಳುವ ಸೃಜನಶೀಲವ್ಯಕ್ತಿತ್ವ ಹೊಂದಿದವರು. ಅಲ್ಲದೆ ತಮ್ಮ ನಡೆ-ನುಡಿಗಳಲ್ಲಿ ಎಚ್ಚೆತ್ತು ಸಮಾಜದ ಸುವ್ಯವಸ್ಥೆಗೆ ಹೊಸ ಮೌಲ್ಯಗಳನ್ನು ಹುಟ್ಟುಹಾಕಲು ಕಾರಣರಾದರು.

ಇಂತಹ ಕ್ರಾಂತಿಕಾರಿ ಚಳುವಳಿಯಲ್ಲಿ ಎಲ್ಲ ಜಾತಿಯ ಜನಾಂಗ ಸೇರಿದ್ದು ವಿಶೇಷವೆನಿಸಿದೆ. ಇಲ್ಲಿ ಸೇರಿದ ಶರಣರಲ್ಲಿ ಜಾತಿ, ಭೇದಭಾವನೆಗಳು ದೂರವಾಗಿ ಸರ್ವರೂ ಸಮಾನರು ಎಂಬ ತತ್ವದ ನೆಲೆಯಲ್ಲಿ ಜೀವಿಸಿದ್ದು ಕಂಡುಬರುತ್ತದೆ. ಇಂತಹ ಶತಮಾನವನ್ನು ವೈಚಾರಿಕ ಯುಗ, ಸರ್ವಸಮತೆಯ ಯುಗ ಎಂದು ಪ್ರಸ್ತುತ ಅಧ್ಯಯನದ ಮೂಲಕ ನಾವು ಅವಲೋಕಿಸಲಾಗುವುದು.

ರಾಷ್ಟ್ರೀಯ ಮೂಲ ಸಿದ್ಧಾಂತ, ವಿಧಾನ

ಕನ್ನಡದಲ್ಲಿ 'ಕುಮಾರರಾಮನ ಸಾಂಗತ್ಯ' 'ಕೆಳದಿನೃಪ ವಿಜಯ' 'ಕಂಠೀರವ ನರಸರಾಜ ವಿಜಯ'ದಂತಹ ಕೆಲವೇ ಕೆಲವು ಐತಿಹಾಸಿಕ ಕಾವ್ಯಗಳು ರಚನೆಗೊಂಡಿವೆ. ಪಂಪನ 'ವಿಕ್ರಮಾರ್ಜುನ ವಿಜಯ' ರನ್ನನ 'ಸಾಹಸ ಭೀಮ ವಿಜಯ'ದಂತಹ ಕೃತಿಗಳಲ್ಲಿ ಆಯಾ ಕವಿಗಳಿಗೆ ಆಶ್ರಯವಿತ್ತ ದೊರೆಗಳ ಚರಿತ್ರೆ ಸಂಕ್ಷೇಪವಾಗಿ ಬಂದಿದೆ. ಇತಿಹಾಸ ರಚನೆಗೆ ಹೆಚ್ಚು ನಂಬಲಾರ್ಹ ದಾಖಲೆಗಳೆಂದರೆ ಕರ್ನಾಟಕದ ಉದ್ದಗಲಕ್ಕೂ ಹರಡಿರುವ ಶಾಸನಗಳು ಇವೆಲ್ಲವುಗಳಲ್ಲಿ ರಾಜ ಮಹರಾಜರ ಅವರ ಸಮಾಂತ ದಂಡಾಧಿಪರ ಚರಿತ್ರೆ ಮತ್ತು ಯುದ್ಧಗಳ ವಿವರ ದೊರೆಯುತ್ತದೆ. ವೀರಗಲ್ಲುಗಳು ಮಾತ್ರ ಸಾಮಾನ್ಯ ಜನತೆಯ ಸಾಹಸಗಳನ್ನು ಬಿತ್ತರಿಸುತ್ತವೆ. ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸ ರಚನೆಗೆ ಇವೆಲ್ಲ ಸಾಮಗ್ರಿಗಳನ್ನೊದಗಿಸುತ್ತವೆ. ಆದರೆ ಕೆಲಮಟ್ಟಿಗೆ ಮಧ್ಯಕಾಲೀನ ಹಾಗೂ ಅಲ್ಲಿಂದೀಚಿನ ಮುಖ್ಯವಾಗಿ ಆಂಗ್ಲ ಪ್ರಭುತ್ವದ ವಿರುದ್ಧ ದಂಗೆಯೆದ್ದ ಸಂಸ್ಥಾನಿಕರ, ಚಿಕ್ಕಪುಟ್ಟ ಅರಸರ ಮತ್ತು ಅವರ ಅಧಿಕಾರಿಗಳ ಸೇವಕರ ಚರಿತ್ರೆ ಜನಪದ ಸಾಹಿತ್ಯದಲ್ಲಿ ಅದರಲ್ಲೂ ಲಾವಣಿಗಳಲ್ಲಿ ಬಂದಿರುವುದು ಗಮನಾರ್ಹ. ಅದೆಲ್ಲವನ್ನು ಕ್ರೋಢೀಕರಿಸಿ ವ್ಯವಸ್ಥೆಗೊಳಿಸಿದಾಗ ನಾಡಿನ ಇತಿಹಾಸದ ಒಂದು ಬಗೆಯ ಚಿತ್ರ ಸಿದ್ಧವಾಗಬಹುದು. ಆದರೆ ಭಾವ ಜೀವಿಗಳಾದ ಜನಪದರಿಂದ ರಚನೆಗೊಂಡ ಆ ಕೃತಿಗಳಲ್ಲಿ ನಂಬಲು ಹಿಂದುಮುಂದೆ ನೋಡಬೇಕಾದ ಕೆಲವು ವಿಷಯಗಳು ಸೇರಿಕೊಂಡಿರುವ ಸಾಧ್ಯತೆಯೂ ಇದೆ. ಮುಗ್ಧರಾದ ಅವರು ಕೊಟ್ಟಿರುವ ಕಾಲ, ಕೆಲವು ಘಟನೆ ಮತ್ತು ಹೆಸರುಗಳು ನೈಜವಲ್ಲದಿರಬಹುದು. ಆದುದರಿಂದ ಎಚ್ಚರಿಕೆ ಅವಶ್ಯ. ಇತಿಹಾಸ ರಚನೆಗೆ ಸಾಮಗ್ರಿಗಳ ಕೊರತೆಯಿರುವ ಇಂದಿನ ಸಂದರ್ಭದಲ್ಲಿ ಅವುಗಳನ್ನು ಸಂಪೂರ್ಣ ತಳ್ಳಿಹಾಕಲು ಬರುವುದಿಲ್ಲ. ಇತರ ಐತಿಹಾಸಿಕ ಸಾಮಾಗ್ರಿಗಳ ಜೊತೆಗೆ ಅವುಗಳನ್ನು ಹೋಲಿಸಿದಾಗ ಒಂದು ಖಚಿತ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುತ್ತದೆ. ಆದುದರಿಂದ ಇತಿಹಾಸಕ್ಕೆ ಸಂಬಂಧಿಸಿದ ಲಾವಣಿಗಳನ್ನು ಒಂದೆಡೆ ಸಂಗ್ರಹಿಸಿ

ಇಲ್ಲವೆ ಅವುಗಳಲ್ಲಿಯ ಮುಖ್ಯ ಭಾಗಗಳನ್ನು ಆಯ್ದುಕೊಂಡು ಪರಿಶೀಲಿಸುವುದೂ ಇಂದಿನ ಅಗತ್ಯಗಳಲ್ಲಿ ಒಂದು.

ಕುಮಾರರಾಮ, ಹುಕ್ಕ-ಬುಕ್ಕ, ಬೆಳವಡಿ ಮಲ್ಲಮ್ಮ, ಕೆಳದಿಯ ಚೆನ್ನಮ್ಮ-ವೀರಮ್ಮ, ಹೈದರಾಲಿ-ಟೀಪೂ ಸುಲ್ತಾನ, ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ನರಗುಂದ ಬಾಬಾ ಸಾಹೇಬ, ಮುಂಡರಗಿ ಭೀಮರಾಯ ಮೊದಲಾದ ಐತಿಹಾಸಿಕ ವ್ಯಕ್ತಿಗಳ ಬಗೆಗೆ ಲಾವಣಿಗಳಲ್ಲಿ ಬಂದಿರುವ ಮುಖ್ಯ ಸಂಗತಿಗಳು ಮತ್ತು ಜನಪದ ಸಂಪ್ರದಾಯದ ಹಾಡುಗಳ ವಿಚಾರ-ವಿಮರ್ಶೆಯಿದೆ. ಸಂಪ್ರದಾಯಗಳ ಆಚರಣೆ ಪ್ರದೇಶದಿಂದ ಪ್ರದೇಶಕ್ಕೆ ಕೆಲಮಟ್ಟಿಗೆ ಭಿನ್ನವಾಗಿರಬಹುದು. ಯಾವುದನ್ನು ಸಂಪ್ರದಾಯದಲ್ಲಿ ಸೇರಿಸಬೇಕೆಂದ ಬಗೆಗೂ ಏಕಾಭಿಪ್ರಾಯವಿಲ್ಲದಿರಬಹುದು. ಆದರೆ ಹಳ್ಳಿಗಳಲ್ಲಿ ಜೀವಿಸುವ ಹೆಣ್ಣು-ಗಂಡುಗಳು ಮುಂಜಾನೆಯಿಂದ ಮೊದಲುಗೊಂಡು ಸಂಜೆಯವರೆಗೆ ವಿವಿಧ ಕೆಲಸಗಳಲ್ಲಿ ಹೇಗೆ ನಿರತರಾಗಿರುತ್ತಾರೆ, ಹೊಲ ಹಸನ ಮಾಡುವುದರಿಂದ ಮೊದಲುಗೊಂಡು ಒಕ್ಕಿದ ರಾಶಿಯನ್ನು ಮನೆಗೆ ತರುವವರೆಗೆ ಏನೇನು ನಡೆಯುತ್ತದೆ, ಇವೇ ಮೊದಲಾದ ಹಾಗೂ ಇನ್ನಿತರ ವಿವರಗಳನ್ನು ಹಾಡುಗಳ ಹಿನ್ನಲೆಯಲ್ಲಿ ಒಳಗೊಂಡಿದೆ. ಬೇಸಾಯಕ್ಕೆ ನೆರವೀಯುವ ಎತ್ತು (ಬಸವಣ್ಣ) ಹಾಗೂ ವಿವಿಧ ಉಪಕರಣಗಳ ಬಗೆಗೆ ಮುಗ್ಧ ಜನಪದರ ಭಾವನೆಗಳೆಂತಹವೆಂಬುದನ್ನು, ಮದುವೆಯ ಸಂದರ್ಭದಲ್ಲಿ ಬೀಗರು ಪರಸ್ಪರರನ್ನು ಹಾಸ್ಯ ಮಾಡುವ ರೀತಿ, ಗಂಡನ ಮನೆಯಲ್ಲಿಯ ಸರಸ-ವಿರಸ, ತಾಯಿಯಾಗ ಬಯುಸುವ ಹೆಣ್ಣುಗಳ ಆಸೆ, ಅದಕ್ಕಾಗಿ ಅವರು ದೇವರಿಗೆ ಸಲ್ಲಿಸುವ ಪ್ರಾರ್ಥನೆ, ಮಕ್ಕಳ ಬಗೆಗಿರುವ ಅವರ ಮಧುರ ಭಾವನೆಗಳು, ತವರು ಮನೆಗೆ ಅವರು ಹೋಗುವಾಗ ಪಡುವ ಸಂಭ್ರಮ, ಅಲ್ಲಿಂದ ಬರುವಾಗ ಅವರಿಗಾಗುವ ದುಃಖ, ತವರಿಗೆ ಅವರು ಕೊಡುವ ಹರಕೆ, ನಾಗಪಂಚಮಿ, ಶೀಗೆ ಹುಣ್ಣಿಮೆಯಂತಹ ಹಬ್ಬಗಳಲ್ಲಿ ಅವರು ಆಯಾ ದೇವರಿಗೆ ತೋರುವ ಭಕ್ತಿ ಇತ್ಯಾದಿ ಹಲವಾರು ವಿಷಯಗಳ ವಿವರ ಹಾಡುಗಳನ್ನೇ ಆಧರಿಸಿ ಬಂದಿದೆ. ಅದು ಹೆಚ್ಚಾಗಿ ಹೆಣ್ಣುಮಕ್ಕಳಿಗೆ ಸಂಬಂಧಿಸಿದ್ದು. ಮಕ್ಕಳ ಆಟದ ಹಾಡುಗಳಿಗೂ, ಜೋಕುಮಾರಮ ಹಾಡುಗಳಿಗೂ, ಬನ್ನಿ ಹಬ್ಬದ ಹಾಡುಗಳಿಗೂ ಇಲ್ಲಿ ಎಡೆ ದೊರೆತಿದೆ.

ಒಟ್ಟಾರೆ ಬಹುಕಾಲ ಶಿಷ್ಟರ ತಿರಸ್ಕಾರಕ್ಕೆ ಪಕ್ಕಾಗಿದ್ದ ಜನಪದ ಸಾಹಿತ್ಯ, ಇತ್ತೀಚೆಗೆ ಅವರ ಪುರಸ್ಕಾರಕ್ಕೆ ಪಾತ್ರಾವಾಗುತ್ತಿರುವುದು ಸಮಾಧಾನಕರ ಸಂಗತಿ. ಒಂದು ನಾಡಿನ ಸಂಸ್ಕೃತಿಗೆ ಸಂಬಂಧಿಸಿದಂತೆ ಕೆಲವು ವಿವರಗಳು ಶಿಷ್ಟಸಾಹಿತ್ಯದಲ್ಲಿ ಕಂಡುಬರುವವಾದರೂ ಜನಪದ ಸಂಸ್ಕೃತಿಯ ನೈಜ ಸ್ವತ್ವ-ಸತ್ವಗಳು ಅಭಿವ್ಯಕ್ತಿ ಪಡೆದಿರುವುದು ಜನಪದದಿಂದಲೇ ರಚನೆಗೊಂಡ ಕೃತಿಗಳಲ್ಲೆಂಬುದು ನಿರ್ವಿವಾದ. ಜೀವನದ ಬಗೆಗಿರುವ ಜನಪದರ ದೃಷ್ಟಿ-ಧೋರಣೆಗಳ, ಧ್ಯೇಯೋದ್ದೇಶಗಳ, ಅವರ ಆಚಾರ-ವಿಚಾರ-ಸಂಪ್ರದಾಯ-ನಂಬಿಕೆಗಳ ಒಟ್ಟಿನಲ್ಲಿ ಅವರ ಜೀವನ ವಿಧಾನದ ಪ್ರಾಮಾಣಿಕ ಪರಿಚಯ ಪಡೆಯಬಯಸುವವರಿಗೆ ಜನಪದ ಸಾಹಿತ್ಯ ಒಂದು ಅಕ್ಷಯ ನಿಧಿ. ಆದುದರಿಂದಲೇ ಜನಪದ ಸಾಹಿತ್ಯದ ಅಧ್ಯಯನ-ಅಧ್ಯಾಪನಗಳು ಇದೀಗ ವಿಶ್ವವಿದ್ಯಾಲಯದ ಮಟ್ಟದಲ್ಲಿ ನಡೆಯುತ್ತಿರುವ

ರಾಷ್ಟ್ರೀಯ ಮೂಲಸಿದ್ಧಾಂತದಂತೆ ಜನಪದರ ದೃಷ್ಟಿಯಲ್ಲಿ ೧೨ ನೇ ಶತಮಾನದ ಶಿವಶರಣ-ಶರಣೆಯರ ಚಿಂತನೆ, ಸಮಾಜಸುಧಾರಣೆ, ಜೊತೆಗೆ ಸಮಾನತೆಯ ಅಂಶಗಳು ಹಾಗೂ ಲಿಂಗಭೇದವನ್ನು ಕಾಣದೆ ಹೋಗಬೇಕು ಎಂಬುದು ಮುಖ್ಯ ಅಂಶವಾಗಿತ್ತು. ಹಾಗಾಗಿ ಸ್ತ್ರೀತತ್ವವನ್ನು ಗೌಣವಾಗಿಸಿದ ವೈದಿಕ ಚಿಂತನಾಕ್ರಮವನ್ನು ನಿರಾಕರಿಸಿ ಆತ್ಮತತ್ವದ ಮೂಲಕ ಸ್ತ್ರೀ-ಪುರುಷ ಸಮಾನತೆಯನ್ನು ಪುರಸ್ಕರಿಸಿದರು. ಈ ಎಲ್ಲಅಂಶಗಳನ್ನು ಪ್ರಸ್ತುತ ಅಧ್ಯಯಯನದ ಮೂಲಕ ಅವಲೋಕಿಸಲಾಗುವುದು.

ಮನೋವಿಶ್ಲೇಷಣಾತ್ಮಕ ವಿಧಾನ

ವರ್ತಮಾನದಲ್ಲಿ ಹೆಚ್ಚು ಆಕರ್ಷಣೆಗೆ ಗುರಿಯಾಗಿರುವ ಕ್ಷೇತ್ರ ಮನೋವಿಶ್ಲೇಷಣಾತ್ಮಕ ವಿಧಾನವಾಗಿದೆ. ಇದು ಇಂದು ಸಾಹಿತ್ಯ ಸಂಶೋಧನೆಯಲ್ಲಿಯೂ ಪ್ರವೇಶಿಸಿ, ಭಾಷಿಕ, ಸಾಹಿತ್ಯಕ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಈ ಅಧ್ಯಯನದಲ್ಲಿ ವಚನಕಾರರ ಭಾಷೆ ಮತ್ತು ಸಾಹಿತ್ಯವು ಮನುಕುಲದ ಮನಸ್ಸಿನ ಅಭಿವ್ಯಕ್ತ ರೂಪಗಳಾಗಿವೆ. ಮತ್ತು ಅವುಗಳನ್ನು ಮನಸ್ಸಿನ ವಿಕಾಸದ ದ್ಯೋತಕಗಳೆಂದೂ ತಿಳಿಯಲಾಗುತ್ತಿದೆ. ಶಿಷ್ಟ ಸಾಹಿತ್ಯ ಜನಪದ ಸಾಹಿತ್ಯ ಎಂದು ಗುರುತಿಸುವುದು ಅವುಗಳ ಭಾಷೆ ಮತ್ತು ಸಾಹಿತ್ಯಕ ಗುಣಗಳಿಂದ ಹಾಗೂ ವಚನಗಳನ್ನು ರಚಿಸಿರುವ ಮನೋವೃತ್ತಿಯ ಅಭ್ಯಾಸದಿಂದ.

ವಚನಕಾರನ ಮನಸ್ಸು ವಚನಗಳ ರಚನೆಯ ಕಾಲದಲ್ಲಿ ರಸರೂಪವಾಗಿ ಪ್ರವಹಿಸುತ್ತದೆ. ವಚನಗಳಲ್ಲಿ ಬರುವ ಸ್ಥಾಯೀಭಾವ, ವಿಭಾವ, ಅನುಭಾವ, ಸಂಚಾರಿಭಾವಗಳು ಆ ವಚನಕಾರನ ಮನೋಭಾವವನ್ನು ರೂಪಿಸಲು ಕಾರಣೀಭೂತವಾದ ಸಮಾಜದ ಮನೋಭಾವವನ್ನು ವ್ಯಕ್ತಗೊಳಿಸುತ್ತವೆ. ಮನುಷ್ಯನ ಮನಸ್ಸು ಹದಗೊಂಡಂತೆ ಭಾಷೆ, ಸಾಹಿತ್ಯಗಳೂ ಮಾಗುತ್ತಾ ನಡೆಯುತ್ತವೆ. ಇದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುವುದುಂಟು.

ಒಟ್ಟಾರೆ ವಚನಕಾರರ ಮನೋವಿಶ್ಲೇಷಣಾತ್ಮಕ ಅಭ್ಯಾಸದಿಂದ ಅವರ ಮಾನಸಿಕ ಸ್ಥಿತಿ, ಆ ವಚನ ಸಾಹಿತ್ಯದಲ್ಲಿ ವ್ಯಕ್ತವಾದ ಸಮಾಜ, ಆ ವಚನಸಾಹಿತ್ಯ ರಚನೆಗೆ ಪ್ರೇರಕವಾದ ಅಂಶಗಳು, ವಚನ ರಚನೆಯ ವಿಕಾಸದಲ್ಲಿ ನಡೆದ ಮಾನಸಿಕ ಪ್ರಕ್ರಿಯೆಗಳನ್ನು ಈ ಅಧ್ಯಯನದ ಮೂಲಕ ವಿಶ್ಲೇಷಿಸಲಾಗುವುದು.

ತುಲನಾತ್ಮಕ ವಿಧಾನ :

ಒಂದು ಕೃತಿಯ ಮಹತ್ವ ಗೊತ್ತಾಗಬೇಕಾದರೆ ಅದನ್ನು ಇನ್ನೊಂದು ಅಂಥದೇ ಕೃತಿಯೊಂದಿಗೆ ಹೋಲಿಸಿ ನೋಡಬೇಕಾಗುತ್ತದೆ. ಹೀಗೆ ಹೋಲಿಸಿದಾಗಲೇ ಒಂದು ಕೃತಿಯ ವಿಶೇಷತೆಯೇನು ಎಂಬುದರ ಪರಿಚಯ ಆಗುತ್ತದೆ. ಆದ್ದರಿಂದ ಹೋಲಿಕೆಯಿಲ್ಲದ ಒಂದು ಸಂಶೋಧನೆ ಒಂದು ವಿಮರ್ಶಪೂರ್ಣವಾಗಲಾರದು. ಅದೇ ರೀತಿ ವಚನಕಾರರು ಭಿನ್ನ ಭಿನ್ನ ಉದಾಹರಣೆಯನ್ನು ಕೊಡುತ್ತಾ ಅನೇಕ ಮೌಢ್ಯಾಚರಣೆಯ ಮತ್ತು ಅಸಮಾನತೆಯ ವಿರುದ್ಧವಾಗಿ ಬೇರೆ ಬೇರೆ

ವಚನಕಾರರು ಬೇರೆ ಬೇರೆ ರೀತಿಯಲ್ಲಿ ಹೇಳಿರುವುದನ್ನು ಒಬ್ಬ ವಚನಕಾರನ ಚಿಂತನೆಯನ್ನು ಮತ್ತೊಬ್ಬ ವಚನಕಾರನ ಚಿಂತನೆಯೊಂದಿಗೆ ಹೋಲಿಸುವಾಗ ಸಂಪೂರ್ಣವಾಗಿ ಅನುಸರಿಸಿದ ಭಾಗ, ಇಲ್ಲಿ ಮಾಡಿಕೊಂಡ ಬದಲಾವಣೆ, ಅವುಗಳಲ್ಲಿ ತೋರಿದ ಔಚಿತ್ಯಜ್ಞಾನ ಮೊದಲಾದುವನ್ನು ಈ ತುಲನಾತ್ಮಕ ವಿಧಾನದಿಂದ ಚರ್ಚಿಸಲಾಗುವುದು. ಉದಾಹರಣೆಗೆ ೧೬ನೇ ಶತಮಾನದ ಲೋಕಾನುಭವವನ್ನು ಸಂಪಾದಿಸಿಕೊಂಡ ಸರ್ವಜ್ಞ ಖಂಡಿತವಾದಿಯಾಗಿದ್ದ, ತನ್ನ ಸ್ವತಂತ್ರ ವಿಚಾರ ಧಾರೆಯನ್ನು ಹರಿಯಬಿಡುವಲ್ಲಿ ಅವನಿಗೆ ಯಾರ ಅಂಜಿಕೆಯೂ ಇದ್ದಂತೆ ಕಾಣುವುದಿಲ್ಲ. ಅಂಥ ಸಂಪ್ರದಾಯದ ದಳ್ಳುರಿಯಲ್ಲಿ ಸಿಲುಕಿದ ಮಾನವರ ಅಜ್ಞಾನವನ್ನು ನಿರ್ದಾಕ್ಷಿಣ್ಯವಾದ ಮಡಿಯಲ್ಲಿ ಖಂಡಿಸಿದ್ದಾನೆ. ಸಮಾಜದ ನಡೆನುಡಿಯನ್ನು ಸಾಮಾಜಿಕ ವ್ಯವಸ್ಥೆಯಿಲ್ಲದ ವಿರೋಧಾಭಾಸಗಳನ್ನು ಕಂಡು ಕೆರಳಿದ್ದಾನೆ. ಚತುರ್ವರ್ಣಗಳನ್ನು ಜಾತಿ ಪದ್ಧತಿಯನ್ನು ಖಂಡಿಸಿ ಮಾನವ ಕುಲವೆಲ್ಲ ಒಂದೇ ಎನ್ನುವಂತಹ ಮಾತನ್ನು ತನ್ನ ವಚನಗಳಲ್ಲಿ ನಿರೂಪಿಸಿದ್ದಾನೆ. ವರ್ಣಾಶ್ರಮ ಧರ್ಮವು ಸಮಾಜವನ್ನು ಛಿದ್ರಗೊಳಿಸುವುದು ಅವನಿಗೆ ಬೇಕಿರಲಿಲ್ಲ. ವ್ಯಕ್ತಿ ಮತ್ತು ಸಮಾಜದ ವಿಕಾಸಕ್ಕೆ ಇದು ಹಾನಿಕಾರಕ ಎನ್ನುವುದು ಅವನ ದೃಷ್ಟಿಯಾಗಿತ್ತು. ಶುದ್ಧ ಮಾನವತಾವಾದಿಯಾದ ಸರ್ವಜ್ಞನ ವಚನಗಳಲ್ಲಿ ಇದು ಮಡುಗಟ್ಟಿರುವುದನ್ನು ನೋಡಬಹುದು. 'ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು, ಸುಡವಗ್ನಿಯೊಂದೇ ಇರುತಿರಲು, ಕುಲಗೋತ್ರ ನಡುವೆ ಎತ್ತಣದು? ಸರ್ವಜ್ಞ, ಜಾತಿ ಹೀನರ ಮನೆಯ ಜ್ಯೋತಿತಾ ಹೀನವೇ? ಜಾತಿ ವಿಜಾತಿ ಎನಬೇಡ ದೇವನೊಲಿದಾತನೇ ಜಾತ ಸರ್ವಜ್ಞ.'

ಸರ್ವಜ್ಞನ ವಚನಗಳಲ್ಲಿ ಇಂಥ ಮಾತುಗಳು ಅಭಿವ್ಯಕ್ತಿಗೊಂಡಿರುವುದನ್ನು ಗಮನಿಸಿದಾಗ ದಲಿತೋದ್ಧಾರದ ಮುಂಚೂಣಿಯಲ್ಲಿ ಸರ್ವಜ್ಞನಿದ್ದಿರಬೇಕು ಎನಿಸುತ್ತದೆ. ದಲಿತರ ಬಗ್ಗೆ ಅವನಿಗಿದ್ದ ಸಹಾನುಭೂತಿ, ಅವರ ಧಾರುಣ ಪರಿಸ್ಥಿತಿಯ ಬಗ್ಗೆ ಅವನಿಗಿದ್ದ ಕಳಕಳಿ ಅವನ ಹಲವಾರು ವಚನಗಳಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ಕಾಣುತ್ತದೆ.

೧.೬. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೧. ಡಾ. ಸಂಗಮೇಶ ಸವದತ್ತಿಮಠ ಇವರು ೨೦೦೩ ರಲ್ಲಿ 'ವಚನಗಳಲ್ಲಿ ಲೋಕಾನುಭವ' ಎಂಬ ಗ್ರಂಥವನ್ನು ಮೈಸೂರಿನ ಜೆ.ಎಸ್.ಎಸ್. ಮಹಾವಿದ್ಯಾ ಪೀಠದ ಸುವರ್ಣ ಮಹೋತ್ಸವದಲ್ಲಿ ಪ್ರಕಟನೆಗೊಳಿಸಲಾಗಿದೆ. ಇದರಲ್ಲಿ ವಚನಕಾರರು ನುಡಿದಂತೆ ನಡೆದದ್ದು ಮತ್ತು ನಡೆದಂತೆ ನುಡಿದಿರುವ ಅನೇಕ ಮಾಹಿತಿಗಳನ್ನು ನೀಡಲಾಗಿದೆ.

೨. ಡಾ. ಶಿವಮೂರ್ತಿ ಮುರುಘಾ ಶರಣರು ೨೦೧೭ ರಲ್ಲಿ 'ವಚನ ಮಾರ್ಗ' ಎಂಬ ಗ್ರಂಥವನ್ನು ಅಲ್ಲಮಪ್ರಭು ಸಂಶೋಧನ ಕೇಂದ್ರ ಶ್ರೀ ಮುರುಘಾಮಠ ಚಿತ್ರದುರ್ಗದಲ್ಲಿ ಪ್ರಕಟಗೊಳಿಸಿದ್ದಾರೆ. ಇದರಲ್ಲಿ ೧೨ ನೇ ಶತಮಾನದಲ್ಲಿ ಜರುಗಿದ ಎಲ್ಲ ಬಗೆಯ ಅನ್ಯಾಯ ಅಸಮಾನತೆಗಳ ವಿರುದ್ಧವಾಗಿ ಧ್ವನಿ ಎತ್ತಿದ ಪರ್ಯಾಯ ಸಂಸ್ಕೃತಿ ನಿರ್ಮಾಣಕ್ಕೆ ಬಹುದೊಡ್ಡ ಹೋರಾಟದ ಒಳ ಸ್ವರೂಪನ್ನು ಬಿಂಬಿಸುವ ವಚನಗಳು ಮತ್ತು ಜಾತಿ ವ್ಯವಸ್ಥೆಯ ಮೂಲ

ಪಠ್ಯಗಳೆನ್ನುವ ಎಲ್ಲ ವೈದಿಕ ರಚನೆಗಳನ್ನು ವಚನಕಾರರು ತಮ್ಮ ವಚನಗಳಲ್ಲಿ ಯಾವ ಮುಲಾಜಿಲ್ಲದೆ ತಿರಸ್ಕರಿಸುವುದನ್ನು ಅನೇಕ ವಿದ್ವಾಂಸರು ಈ ಗ್ರಂಥದಲ್ಲಿ ಮಂಡಿಸಲಾಗಿದೆ.

೩. ಪ್ರೊ॥ ಬಿ.ವಿ. ವೀರಭದ್ರಪ್ಪ ಇವರು ೨೦೦೯ ರಲ್ಲಿ 'ಧರ್ಮ ಮತ್ತು ವೈಚಾರಿಕತೆ' ಎಂಬ ಗ್ರಂಥವನ್ನು ನವಕರ್ನಾಟಕ ಪ್ರಕಾಶನದವರು ಪ್ರಕಟಿಸಿದ್ದಾರೆ. ಇದರಲ್ಲಿ ೧೨ ನೇ ಶತಮಾನದಲ್ಲಿ, ಕರ್ನಾಟಕದಲ್ಲಿ ನಡೆದ ಶರಣರ ಚಳುವಳಿ ಧಾರ್ಮಿಕ ಮತ್ತು ವೈಚಾರಿಕತೆಯ ಸಮನ್ವಯವನ್ನು ಸಾಧಿಸಿದ ಒಂದು ಅಪೂರ್ವ ಆಂದೋಲನ, ಯಜ್ಞ ಯಾಗಾದಿಗಳ ಹಾಗೂ ದೇವಾಲಯಗಳ ಮೂಲಕ ಮೇಲುಜಾತಿಯವರು ಕೆಳಜಾತಿಯವರು ವ್ಯವಸ್ಥಿತವಾಗಿ ಶೋಷಣೆಗೆ ಗುರಿಪಡಿಸಿರುವಂತಹ ಕಾಲದಲ್ಲಿ ವಚನಕಾರರ ವಿಚಾರಧಾರೆಯನ್ನು ಇದರಲ್ಲಿ ಮಾರ್ಮಿಕವಾಗಿ ತಿಳಿಸಲಾಗಿದೆ.

೪. ಡಾ. ಎಸ್.ಸಿ. ಬಾಳೇಕುಂದ್ರಿ ಅವರು ೨೦೦೬ ರಲ್ಲಿ 'ಶರಣರು ರೂಪಿಸಿದ ಸ್ತ್ರೀ ಸಮಾನತೆ' ಎನ್ನುವ ಗ್ರಂಥವನ್ನು 'ಪಾರು ಪ್ರಕಾಶನ' ಗದಗ ಇವರು ಪ್ರಕಟಿಸಿದ್ದಾರೆ. ಇದರಲ್ಲಿ ಸ್ತ್ರೀ ಸಮಾನತೆಯ ಚಿಂತನೆ ಮತ್ತು ಚಳುವಳಿ, ಶೋಷಣೆಯ ಚಕ್ರವ್ಯೂಹದಲ್ಲಿ ಸಿಲುಕಿರುವ ಸ್ತ್ರೀ, ಶರಣರು ಪ್ರತಿಪಾದಿಸಿದ ಸಾಮಾಜಿಕ ನ್ಯಾಯ, ಸ್ತ್ರೀ ವಿಮೋಚನೆಗಾಗಿ ಶರಣರ ಆಲೋಚನೆ ಹೀಗೆ ಹಲವಾರು ವಿಚಾರಧಾರೆಯನ್ನು ಸ್ತ್ರೀ ಸಮಾನತೆಯ ಕುರಿತಾಗಿ ಉಲ್ಲೇಖಿಸಲಾಗಿದೆ.

೫. ಡಾ. ಸಿದ್ಧರಾಮ ಶರಣರು ಬೆಲ್ದಾಳ, ಡಿ.ಎಂ. ಧನ್ನೂರ ಇವರು ೧೯೯೯ ರಲ್ಲಿ 'ಬಸವತತ್ವ ಪ್ರದೀಪಿಕೆ' ಎನ್ನುವ ಗ್ರಂಥವನ್ನು ಅಲ್ಲಮಪ್ರಭು ಸಂಶೋಧನ ಕೇಂದ್ರ ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ ಶ್ರೀ ಮುರುಘಾಮಠ ಚಿತ್ರದುರ್ಗ ಇವರಿಂದ ಪ್ರಕಟಿತವಾಗಿದೆ. ಈ ಗ್ರಂಥದಲ್ಲಿ ವೈಚಾರಿಕತೆಯ ವಿವೇಚನೆಯನ್ನು ಕುರಿತು ಮಾರ್ಮಿಕವಾಗಿ ಚರ್ಚಿಸಲಾಗಿದೆ.

೬. ಡಾ॥ ಎಚ್. ತಿಪ್ಪೇರುದ್ರಸ್ವಾಮಿ ಇವರ ೨೦೧೧ ರಲ್ಲಿ ದ್ವಿತೀಯ ಮುದ್ರಣಗೊಂಡ 'ವೀರಶೈವ ವೈಚಾರಿಕ ವಿವೇಚನೆ' ಎಂಬ ಗ್ರಂಥವನ್ನು ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ, ಮೈಸೂರು ಇವರು ಮುದ್ರಣಗೊಳಿಸಿದ್ದಾರೆ. ಈ ಗ್ರಂಥದಲ್ಲಿ 'ಸರ್ವೇಜನಾಃ ಸುಖಿನೋಭವಂತು' ಎಂಬ ಶೋಷಣೆಯ ಜೊತೆಯಲ್ಲಿಯೇ ಮಾನವ ವರ್ಗವೊಂದನ್ನು ಅಸ್ಪೃಶ್ಯರೆಂದು ಪ್ರಾಣಿಗಳಿಗಿಂತಲೂ ಕೀಳಾಗಿ ನಡೆಸಿಕೊಳ್ಳುತ್ತಿದ್ದ ಉತ್ತಮರ ಧಾರ್ಮಿಕ ಬುದ್ಧಿವಂತಿಕೆಯ ವಿರುದ್ಧವಾಗಿ ಧ್ವನಿ ಎತ್ತಿದ ವಚನಕಾರರ ಕುರಿತು ಮಾಹಿತಿಯನ್ನು ನೀಡಲಾಗಿದೆ.

೭. ಪ್ರೊ. ಎ.ಎಸ್. ಜಯರಾಂ ಅವರು ೨೦೦೮ ರಲ್ಲಿ 'ವಚನಗಳಲ್ಲಿ ಸಮಾನತೆ' ಎಂಬ ಗ್ರಂಥವನ್ನು ಮೈಸೂರಿನ ಜೆ.ಎಸ್.ಎಸ್. ಮಹಾವಿದ್ಯಾಪೀಠದ ಸುವರ್ಣಮಹೋತ್ಸವದಲ್ಲಿ ಬಿಡುಗಡೆಗೊಳಿಸಿದ್ದಾರೆ. ಇದರಲ್ಲಿ ೧೨ ನೇ ಶತಮಾನದ ವಚನಕಾರರು ಮತ್ತು ವಚನಕಾರ್ತಿಯರ ಬದುಕು, ಸಿದ್ಧಾಂತ ಅವರ ದೃಷ್ಟಿಕೋನಗಳನ್ನು ಸ್ಪಷ್ಟೀಕರಿಸಲಾಗಿದೆ.

೮. ಡಾ. ಪಿ.ವಿ. ನಾರಾಯಣ ಅವರು ೨೦೧೬ ರಲ್ಲಿ ತೃತೀಯ ಮುದ್ರಣಗೊಂಡ 'ವಚನ ಸಾಹಿತ್ಯ' ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಪ್ರಬಂಧವನ್ನು ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ ಚಿತ್ರದುರ್ಗ ಇವರು ಪ್ರಕಟಿಸಿದ್ದಾರೆ. ಇದರಲ್ಲಿ ವಚನ ಸಾಹಿತ್ಯ, ಸಾಮಾಜಿಕ ವ್ಯವಸ್ಥೆ, ಆರ್ಥಿಕ, ರಾಜಕೀಯ ವ್ಯವಸ್ಥೆ ವೈಜ್ಞಾನಿಕ ತಿಳುವಳಿಕೆ ಕುರಿತು ತುಂಬ ಉಪಯುಕ್ತವಾದ ಮಾಹಿತಿ ನೀಡಲಾಗಿದೆ.

ಅಧ್ಯಾಯ : ಎರಡು

ವಚನಗಳ ಮಹಾಪರಿಕಲ್ಪನೆ

೨.೧. ವಚನಗಳ ಹುಟ್ಟು, ಅರ್ಥ, ವ್ಯಾಖ್ಯಾನ

೨.೨. ವಚನಗಳ ವಿಕಾಸದ ನೆಲೆ

೨.೩. ಜಾನಪದ ಮತ್ತು ವಚನಕಾರರು

ಅಧ್ಯಾಯ : ಎರಡು

ವಚನಗಳ ಮಹಾಪರಿಕಲ್ಪನೆ

೨.೧ ವಚನಗಳ ಹುಟ್ಟು, ಅರ್ಥ, ವ್ಯಾಖ್ಯಾನ

ಹುಟ್ಟು

'ಅಭಿವ್ಯಕ್ತಿ', ಎಂದರೆ ಹೇಳುವ ಕ್ರಿಯೆ. ವ್ಯಕ್ತಿಯಿಂದ ವ್ಯಕ್ತವಾಗುವ ಎಲ್ಲ ಚಟುವಟಿಕೆಗಳು. ಅದು ಅಂಗಿಕ ಸಂಕೇತವಾಗಿರಬಹುದು. ವ್ಯವಸ್ಥಿತ ಧ್ವನಿಯಾಗಿರಬಹುದು, ಅಕ್ಷರಗಳ ಜೋಡಣೆಯ ಲಿಖಿತ ಭಾಷೆಯಾಗಿರಬಹುದು. ವ್ಯಕ್ತಿ, ವ್ಯಕ್ತಿಯೊಂದಿಗೆ ಅಥವಾ ಜೀವಿಯೊಂದಿಗೆ ಅಥವಾ ತನ್ನನ್ನು ಕುರಿತು ತನಗೆ ತಾನೇ ಹೇಳಿಕೊಳ್ಳುವ ಕ್ರಿಯೆಯೂ ಆಗಿರಬಹುದು. ಇನ್ನೊಬ್ಬರೊಂದಿಗೆ ಹೇಳಿಕೊಂಡರೆ ಬಹಿರಂಗ ಸಂವಾದ, ತನ್ನಷ್ಟಕ್ಕೆ ತಾನೇ ಹೇಲಿಕೊಳ್ಳುವುದು ಅಂತರಂಗದ ಅನುಸಂಧಾನ. ಉದ್ದೇಶಿತ ಭಾವ ಹೊರಹೊಮ್ಮಿದರೆ ಅನಿಸಿಕೆಗಳು; ತಟಸ್ಥವಾಗಿದ್ದರೆ ನಿರ್ಭಾವ; ಇಲ್ಲದೇ ಇರುವುದು ಅಭಾವ. ಹಸಿವು, ನಿದ್ರೆ, ನೀರಡಿಕೆಗಳಂತೆ ಆಲೋಚನೆ ಕೂಡ ಒಂದು ಜೈವಿಕ ಕ್ರಿಯೆ. ಮೆದುಳು ಅದರ ಕೇಂದ್ರ ಸ್ಥಾನ. ಉದ್ದೇಶಿತ ಬಯಕೆಯನ್ನು ಈಡೇರಿಸಿಕೊಳ್ಳುವ ಬಗೆಗಿನ ಈ ಆಲೋಚನೆ ಕ್ರಿಯೆಗೆ ಇಂಥದ್ದೇ ಎನ್ನುವ ಆಯಾಮವಿಲ್ಲ, ಆಕಾರ–ಆಕೃತಿ ಇಲ್ಲ. ಆಯಾ ಸಂದರ್ಭಕ್ಕೆ ಸಿದ್ಧಗೊಳ್ಳುವ, ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರಕವಾಗಿಯೋ ಹೊರಬೀಳುವ ದೈಹಿಕ ಮತ್ತು ಮಾನಸಿಕ ಚಟುವಟಿಕೆ.

ಪರಿಣಾಮಕಾರಿ ಅಭಿವ್ಯಕ್ತಿ ಎಂದರೆ, ಫಲಿತ ಆಲೋಚನೆಗಳನ್ನು ಹೊರ ಹಾಕಲೇಬೇಕೆಂಬ ಒತ್ತಡದಿಂದ ಸೃಷ್ಟಿಯಾದ ಸಂವಹನ ಮಾರ್ಗ. ಮಾರ್ಗಗಳಿಗೆ ಮೂಲ ಉದ್ದೇಶಗಳೇ. ಹೇಳುವ ಮತ್ತು ಕೇಳುವವರ ನಡುವಿನ ಅಂತರವನ್ನು ಬೆಸೆಯುವ ಅಥವಾ ತುಂಬುವ ತಂತು–ನಿಸಂತು ಸಾಧನವೇ ಮಾಧ್ಯಮ. ಮಾಧ್ಯಮವಲ್ಲದೆ ಸಂವಹನ ಅಸಾಧ್ಯ. ಇಂಥ ಮಾಧ್ಯಮಗಳಲ್ಲಿ ಭಾಷೆ ಕೂಡ ಒಂದಾಗಿದೆ. ಭಾಷೆ ಮನುಕುಲ ಸಾಧಿಸಿದ ಒಂದು ವಿಶೇಷ ಅಭಿವ್ಯಕ್ತಿ ಮಾಧ್ಯಮ. ಸಂವಹನ ಸಾಧನ. ಅಂತರಂಗದ ಭಾವಾಲೋಚನಗಳು ಬಹಿರಂಗಗೊಳ್ಳುವ ಕ್ರಿಯಗಳೆಲ್ಲವೂ ಅಭಿವ್ಯಕ್ತಿಯೇ ಆಗಿರಯತ್ತದೆ. ಭಾವಕ್ಕೆ ಭಾಷೆ ಅಭಿವ್ಯಕ್ತಿಯಾದರೆ ಭಾಷೆಗೆ ಶಬ್ದ, ಅಕ್ಷರಗಳೇ ಸೌಂದರ್ಯ. ಅಭಿವ್ಯಕ್ತಿಯು ಧ್ವನಿ ರೂಪದಲ್ಲಿದ್ದರೆ ಮೌಖಿಕ ಭಾಷೆ; ಅಕ್ಷರ ರೂಪದಲ್ಲಿದ್ದರೆ ಲಿಖಿತ ಭಾಷೆ: ಚಿತ್ರ,

ಸಂಕೇತಗಳ ರೂಪದಲ್ಲಿದ್ದರೆ ಸಾಂಕೇತ ಭಾಷೆ. ಸಂವಹನದ ತುರ್ತು ತೀವ್ರತೆಗಳೇ ಆ ಭಾಷೆಯ ಬೆಳವಣಿಗೆ; ವಸ್ತು, ಉದ್ದೇಶ, ವಿಧಾನಗಳೇ ಪ್ರೇರಣೆಗಳು. ಧ್ವನಿ, ಅಕ್ಷರ, ಶಬ್ದ, ವಾಕ್ಯ, ವ್ಯಾಕರಣ, ಅಲಂಕಾರ, ಸಂಕೇತ ಮೊದಲಾದವುಗಳೆಲ್ಲವೂ ಸಂವಹನ ಪರಿಪೂರ್ಣ ಸಾಧ್ಯತೆಯ ಸಾಧನಗಳು.

ಹನ್ನೆರಡನೆಯ ಶತಮಾನದ ಶರಣರಿಗೆ ತಮ್ಮ ಅನುಭವ, ಆಲೋಚನೆಗಳನ್ನು ಹೇಳಲು, ದಾಖಲಿಸಲು ಸರಳ ಸ್ವರೂಪದ ಮತ್ತು ಕಾವ್ಯ ಸೌಂದರ್ಯದ ಭಾಷಾ ಪ್ರಕಾರವೊಂದು ಅನಿವಾರ್ಯವಾಗಿದ್ದರಿಂದ ಅವರು ಸಂಶೋಧಿಸಿಕೊಂಡ ಪ್ರಕಾರವೇ 'ವಚನ'. ಗದ್ಯ-ಪದ್ಯಗಳ ಹೃದಯ ಸಂಗಮ ಅದು. ಘನ ಭಾಷೆಗೆ ಸಂವಾದಿಯಾಗಿ ರೂಪುಗೊಂಡು ಜನಭಾಷೆ ರೂಢಿಗತವಾಗಿ 'ವಚನ' ಎಂದರೆ, 'ಪ್ರಮಾಣ ಮಾಡುವುದು' ಅಥವಾ 'ನಿರ್ದಿಷ್ಟ ಕೆಲಸವನ್ನು ಪ್ರಾಮಾಣಿಸಿ ನಿರ್ವಹಿಸುವ ಪ್ರತಿಜ್ಞೆ'ಯಾಗಿದೆ. ಲೆಕ್ಕಾಚಾರದ ಛಂದಸ್ಸಿನೊಳಗೆ ಬಂಧಿಸಿಡುವ ಅಥವಾ ಭಾವನೆಗಳಿಗೆ ತೊಡಿಸುವ ಅಸಹಜ ಚೌಕಟ್ಟನ್ನು ಕಿತ್ತು ಸಹಜ ಸ್ವಭಾವದಲ್ಲಿ ಧಾರೆಯಾಗಿ ಹರಿಯುವ ಝರಿಯಂತೆ, ಭೋರ್ಗರೆವ ಜಲಪಾತದಂತೆ, ತಣ್ಣಗೆ ನಿಂತು ಮತ್ತೆ ಹರಿಯುವ ನದಿಯಂತೆ ಚಲನೆಗೊಳಿಸುವುದೇ ವಚನಾಭಿವ್ಯಕ್ತಿಯ ಉದ್ದೇಶ.ಶರಣರ ಅನುಭವ, ಅನುಭಾವಗಳೇ ಈ ಹರಿವಿನ ವೈವಿಧ್ಯಮಯ ಸ್ವರೂಪ.

ವ್ಯಕ್ತಿ ಮತ್ತು ಸಮುದಾಯಗಳ ಕ್ರಿಯಾಶೀಲತೆಗೆ ಭಾಷೆ ಹೇಗೆ ಮಾಧ್ಯಮವೋ ಹಾಗೆಯೇ ಸ್ಥೈರಣೆ, ಸ್ಥಗಿತತೆಗೂ ಅದು ಮಾಧ್ಯಮ. ಕಾಂಡ ಸಮೃದ್ಧವಿದ್ದಷ್ಟು ಬೇರಿನ ಮೂಲದಿಂದ ಪ್ರವಹಿಸುವ ನೀರು - ಲವನಾದಿಗಳಿಗೆ ಮರದ ರೆಂಬೆ-ಕೊಂಬೆಗಳನ್ನು, ಎಲೆ-ಹೂಗಳನ್ನು, ಚಾಚುವ ಚಿಗುರನ್ನು ತಲುಪುವುದು ಸುಲಭ ಸಾಧ್ಯ. ಬೇರುಗಳು ಗಟ್ಟಿ ಇದ್ದಷ್ಟೂ, ಹರವು ಹೆಚ್ಚಿದಷ್ಟೂ ನೀರು-ಲವಣಗಳನ್ನು ಕಾಂಡಕ್ಕೆ ಕಳಿಸಲು ಸಾಧ್ಯ. ಅದರಂತೆ ಭಾಷೆ ಪರಿಣಾಮಕಾರಿಯಾದಷ್ಟೂ ಸಂವಹನ ಸಾಧ್ಯತೆ, ಸ್ಪಷ್ಟತೆ, ಸುಲಭ. ಶೋಷಣೆಗೊಳಗಾದ ಕೆಳವರ್ಗದ ಜನಸಮುದಾಯದ ಜನರನ್ನು ಜಾಗೃತಗೊಳಿಸುವ ವಿಚಾರಗಳು ಅವರ ಮನಸ್ಸು-ಹೃದಯಗಳಿಗೆ ತಲುಪುವಂತೆ ಸಂವಹನಿಸುವ ಭಾಷಾ ಮಾಧ್ಯಮದ ಶೋಧ ಮತ್ತು ಬಳಕೆಯ ಯಶಸ್ವಿ ಪ್ರಯೋಗ ಎಂದರೆ, ಶರಣರ 'ವಚನ' ಪ್ರಕಾರವೇ ಆಗಿದೆ. ಸಾಮಾಜಿಕ ಪರಿವರ್ತನೆಯಲ್ಲಿ ಚಳುವಳಿಯ ಪಾತ್ರ ಮತ್ತು ಚಳುವಳಿಯನ್ನು ರೂಪಿಸುವಲ್ಲಿ ಬೇಕಾದ ಸಂಘಟನಾ ಕೌಶಲ್ಯ ಹಾಗೂ ಆ ಸಂಘಟನೆಯಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ವ್ಯಕ್ತಿಯನ್ನು ಪ್ರಭಾವಿಸುವಂತೆ ಹೇಳಲು ಸರಳ ಸಂವಹನ ಸಾಧ್ಯತೆಯ ಭಾಷೆ ಬಹುಮುಖ್ಯ. ಜೊತೆಗೆ, ಜನರಿಂದ ಸಕಾರಾತ್ಮಕ ಪ್ರತಿಕ್ರಿಯೆ ಪಡೆಯಲು ಆ ಭಾಷೆಯೊಳಗೆ ತುಂಬಬೇಕಾದ ವಿನಯ, ಮತ್ತು ಸೌಂದರ್ಯಗಳಿಗೆ ಶರಣರು ಅನ್ವೇಷಿಸಿಕೊಂಡ 'ವಚನ' ಪರಿಭಾಷೆ ಜಗತ್ತಿನ ಇತಿಹಾಸದಲ್ಲೇ ಅನನ್ಯ ವಿಧಾನ ಎಂದರೆ ತಪ್ಪಾಗಲಾರದು. ಲೌಕಿಕ-ಅಲೌಕಿಕ ಅನುಭವಾವ್ಯಕ್ತಿಗೆ, ಪ್ರತಿಮೆ-ಪ್ರಮೇಯಗಳಿಗೆ, ವಸ್ತು-ವಿನ್ಯಾಸಗಳಿಗೆ ಅಪ್ರತಿಮ ಮಾದರಿ ಈ ಪರಿಭಾಷೆ. ಪರಿನಾಮಕಾರಿ ಅಭಿವ್ಯಕ್ತಿ ಮಾಧ್ಯಮ ಎಂದರೆ ಸರಳ ಮತ್ತು ಸ್ಪಷ್ಟವಾದ ಭಾಷೆಯೇ ಆಗಿದೆ.

ಬಸವಣ್ಣನ ನೇತೃತ್ವದಲ್ಲಿ ರೂಪುಗೊಂಡ ಅಪ್ರತಿಮ ಮಾದರಿ ಇದು. ಆದಿ ವಚನಕಾರ ಜೇಡರ ದಾಸಿಮಯ್ಯರಿಂದ ಮೊದಲುಗೊಂಡು ಆಧ್ಯಾತ್ಮ ಚಕ್ರವರ್ತಿ ಅಲ್ಲಮನ ವಚನಗಳವರೆಗೆ ಹೇಳುವುದಾದರೆ, ಇವು ಸರಳರಿಗೆ ಸರಳವೂ, ಶ್ರೇಷ್ಠರಿಗೆ ಶ್ರೇಷ್ಠವೂ, ಸವಾಲಿಗರಿಗೆ ಸಂಕೀರ್ಣವೂ ಆಗಿ ರಚಿತವಾಗಿವೆ. ವಚನಗಳ ಅಭಿವ್ಯಕ್ತಿ ವೈಶಿಷ್ಟ್ಯತೆ ಇದೇ ಆಗಿದೆ.

"ವಚನಗಳ ಕ್ರಾಂತಿಕಾರಕ ಗುಣವನ್ನು ಕುರಿತು ಸಾಕಷ್ಟು ಮಾತು ಕೇಳಿದ್ದೇವೆ. ವಚನಗಳಲ್ಲಿರುವ ಕ್ರಾಂತಿಕಾರಕತೆ ಅಂತರಂಗಕ್ಕೆ ಸಂಬಂಧಿಸಿದ್ದು. ವಚನಗಳಲ್ಲಿ ಬರುವ ಹಿಂದು ಮತ್ತು ಮುಂದು ಎಂಬ ಮಾತುಗಳನ್ನು ಭೂತ ಮತ್ತು ಭವಿಷ್ಯ ಎಂಬರ್ಥದಲ್ಲಿಯೇ ನೋಡುವುದು ಸೂಕ್ತವೆಂದು ತೋರುತ್ತದೆ. ಭೂತವೆನ್ನುವುದು ಮನಸ್ಸಿನ, ನಿರಂತರ ಆಲೋಚನೆಯ ಸೃಷ್ಟಿ ಭವಿಷ್ಯವೆನ್ನುವುದು ಆಸೆ ಮತ್ತು ಭಯಗಳಿಂದ ಮೂಡುವ ಕಲ್ಪನೆ. ಇಂಥ ಕಾಲ್ಪನಿಕವಾದ ಮಾನಸಿಕ ಕಾಲವನ್ನು ಇಲ್ಲವಾಗಿಸಿಕೊಂಡು ಸತತ ಎಚ್ಚರದೊಡನೆ ವರ್ತಮಾನದಲ್ಲಿ ಇರುವುದು ಸಾಧ್ಯವಾಗುತ್ತದೆ"೧.

ವಚನಗಳನ್ನು ಶಾಸ್ತ್ರವೆಂದೂ ಸಾಹಿತ್ಯ (ವಾಙ್ಮಯ)ವೆಂದೂ ಎರಡೂ ದೃಷ್ಟಿಗಳಿಂದ ಗುರುತಿಸುವ ಪರಿಪಾಠ ಮೊದಲಿನಿಂದಲೂ ಬೆಳೆದುಕೊಂಡು ಬಂದಿದೆ. ಈಗಲೂ ವಚನಗಳು ಶಾಸ್ತ್ರವೋ ಸಾಹಿತ್ಯವೋ ಎಂಬ ಅನುಮಾನ ತಾಳುವುದು ಅನವಶ್ಯಕವೆನಿಸುತ್ತದೆ. ಕನ್ನಡ ಸಾಹಿತ್ಯದಲ್ಲಿ ಲೌಕಿಕ ಮತ್ತು ಅಲೌಕಿಕ ಕೃತಿಗಳೆಂಬ ಎರಡು ಬಗೆಯ ಸಾಹಿತ್ಯ ಕೃತಿಗಳನ್ನು ಗುರುತಿಸುವ ಪರಿಪಾಠ ಮೊದಲಿನಿಂದಲೂ ಇದೆ. ಪಂಪನಿಂದ ಪ್ರಾರಂಭವಾಗುವ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ, ಒಬ್ಬ ಕವಿಯು ಒಂದು ಧಾರ್ಮಿಕ (ಅಲೌಕಿಕ) ಕಥೆಯುಳ್ಳ ಕೃತಿಯನ್ನೂ ಇನ್ನೊಂದು ಲೌಕಿಕ ಕಥೆಯುಳ್ಳ ಕೃತಿಯನ್ನೂ ಬರೆಯುವ ಪರಿಪಾಠ ಹೊಂದಿರುವುದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಹೊಸದೇನೂ ಅಲ್ಲ. ಅಂತೆಯೇ ಪಂಪ ರನ್ನ ಮುಂತಾದ ಪ್ರಸಿದ್ಧ ಕವಿಗಳ ಕೃತಿಗಳನ್ನು ಹಾಗೆ ನೋಡುವ ಪರಿಪಾಠವೂ ಇದೆ. ಮುಂದೆ ನಡುಗನ್ನಡದ ಕವಿಗಳಂತೂ ಒಂದೇ ಕೃತಿಯನ್ನು, ಅದು ಲೌಕಿಕವೂ ಅಲೌಕಿಕವೂ ಆಗುವಂತೆ ಬರೆದಿರುವುದನ್ನು ಕಾಣುತ್ತೇವೆ. ಹರಿಹರನ ರಗಳೆಗಳು, ಸಿದ್ಧರಾಮ ಪುರಾಣ, ಪ್ರಭುಲಿಂಗಲೀಲೆ, ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಮುಂತಾದವು ಈ ಮಾತಿಗೆ ಉದಾಹರಣೆಗಳಾಗಿ ನಿಲ್ಲುತ್ತವೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ೧೦ನೇ ಶತಮಾನದ ಕವಿಗೆ ಲೌಕಿಕ ಕೃತಿ ರಚಿಸಲು ವಸ್ತುವಾದ ಮಹಾಭಾರತ ಕಥೆ, ನಡುಗನ್ನಡ ಕವಿಗಳಿಗೆ ಆ ಲೌಕಿಕ ವಸ್ತುವಿಗೆ ಅಲೌಕಿಕ ಸ್ಪರ್ಷ ಕೊಡಲು ಸಾಧ್ಯವಾಗಿದೆ ಎಂಬುದು.

ಪಂಪನ ಧಾರ್ಮಿಕ ಕೃತಿಯಾದ 'ಆದಿಪುರಾಣ'ವನ್ನು ಲೌಕಿಕ ಕೃತಿಯಾದ 'ವಿಕ್ರಮಾರ್ಜುನ ವಿಜಯ'ವನ್ನು – ಕನ್ನಡದ ಜನ ಸಾಹಿತ್ಯ ಕೃತಿಗಳೆಂದೇ ಪರಿಗಣಿಸಿದ್ದಾರೆ. ಒಂದು ಧಾರ್ಮಿಕ ಕಥೆಯುಳ್ಳ ಪ್ರಸಿದ್ಧ ಕೃತಿಯನ್ನು ಅದೇ ಧರ್ಮದವರು ಗಮನಿಸುವಾಗ ಹೆಚ್ಚು ಧಾರ್ಮಿಕ ದೃಷ್ಟಿಯಿಂದಲೂ, ಅನ್ಯರು ಗಮನಿಸುವಾಗ ಹೆಚ್ಚು ಸಾಹಿತ್ಯಕ ದೃಷ್ಟಿಯಿಂದಲೂ ನೋಡುವುದು ಸಹಜ. ನಮಗೆ ಕನ್ನಡ ಸಾಹಿತ್ಯದ ಇತಿಹಾಸ ಹಾಗೆ ದಾಖಲೆಗಳನ್ನು ಒದಗಿಸುತ್ತದೆ. ಕುಮಾರವ್ಯಾಸನ 'ಕರ್ನಾಟಕ ಭಾರತ

ಕಥಾಮಂಜರಿ'ಯು ಬ್ರಾಹ್ಮಣ ಸಹೃದಯನಿಗೆ ಒಂದು ಪವಿತ್ರಗ್ರಂಥವಾಗಿ ಕಂಡರೆ, ಅನ್ಯಧರ್ಮೀಯರಿಗೆ ಅದೊಂದು ಅದ್ಭುತ ಪ್ರತಿಭೆಯ ಸಾಹಿತ್ಯ ಸೃಷ್ಟಿಯಾಗಿ ಕಂಡಿರುವುದು ಸಹಜ. ಹಿಂದಿನ ಕೃತಿಗಳಂತೆ ವಚನಗಳು ಕೂಡ ಧಾರ್ಮಿಕ, ಲೌಕಿಕ ಸಂಗತಿಗಳನ್ನು ಭಾವನೆಗಳನ್ನು ಒಳಗೊಂಡಿದೆ. 'ವಚನ ಗ್ರಂಥಗಳು ಕನ್ನಡ ಭಾಷೆಯಲ್ಲಿ ಬಹುಮಹತ್ವದ ಗ್ರಂಥಗಳಾಗಿವೆ. ಅವು ಒಂದು ಬಗೆಯ ವಾಙ್ಮಯವನ್ನೇ ಹುಟ್ಟಿಸಿರುತ್ತವೆಂದು ನಾವು ಹೇಳಬಹುದು' ಎನ್ನುವ ಹಳಕಟ್ಟಿ ಅವರಿಗೆ ವಚನಗಳು ಪ್ರಕಾರಗಳಾಗಿಯೇ ಕಂಡಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಜೊತೆಗೆ ಅವನ್ನು ಅವರು ಧಾರ್ಮಿಕ-ತತ್ವಗಳನ್ನು ಹೇಳುವ ಶಾಸ್ತ್ರಗಳಂತೆ ಕಂಡಿರುವುದೂ ಸಹಜ. ಈ ಹಿನ್ನಲೆಯಲ್ಲಿ 'ಈ ಕನ್ನಡ ವಾಙ್ಮಯಕ್ಕೆ 'ವಚನಶಾಸ್ತ್ರ'ವೆಂಬ ಹೆಸರು ಉಂಟಾಗಿದೆ' ಎಂಬ ಮಾತನ್ನೂ ಆಡುತ್ತಾರೆ. ಇದು ಒಬ್ಬ ಶರಣಧರ್ಮೀಯನಾಗಿ ಆಡಿದ ಮಾತೆಂಬುದು ಸ್ಪಷ್ಟ. ಹಳಕಟ್ಟಿ ಅವರು ವಚನಗಳನ್ನು ಉತ್ತಮ ವಾಙ್ಮಯವೆಂದು ಗುರುತಿಸುವಲ್ಲಿ ಯಾವುದೇ ರೀತಿಯಲ್ಲಿ ಅನುಮಾನ ಪಟ್ಟಿಲ್ಲ. ಹೀಗೆ ವಚನಗಳನ್ನು ವಾಙ್ಮಯವೆಂದು, 'ವಚನಶಾಸ್ತ್ರ'ವೆಂದು ಕರೆಯುವಲ್ಲಿ, ಕನ್ನಡ ಸಾಹಿತ್ಯ ಪರಂಪರೆಯಂತೆ ಅವುಗಳ ಲೌಕಿಕ ಮತ್ತು ಅಲೌಕಿಕ(ಧಾರ್ಮಿಕ) ಗುಣಗಳನ್ನು ಗುರುತಿಸಿದ್ದಾರೆ ಎಂದಿಟ್ಟುಕೊಳ್ಳಬೇಕಾದುದು ಸರಿಯಾದ ಕ್ರಮ.

'ಹೀಗೆ ವಚನಗಳನ್ನು ಎರಡು ದೃಷ್ಟಿಗಳಿಂದ ಗಮನಿಸಬಹುದಾದ ವಿಚಾರವನ್ನು ನಾವು ತಿನಂಶ್ರೀ ಅವರಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ. 'ವೀರಶೈವ ಶರಣರ ವಚನಗಳನ್ನು ಒಟ್ಟಿನ ಮೇಲೆ ಎರಡು ರಾಶಿಯಾಗಿ ವಿಂಗಡಿಸಬಹುದು. ತಾವು ಕಂಡ ಅಥವಾ ತಿಳಿದ ತತ್ತ್ವವನ್ನು ಉಪದೇಶಿಸುವುದನ್ನೇ ಮುಖ್ಯೋದ್ದೇಶವಾಗಿಟ್ಟುಕೊಂಡು ಅದಕ್ಕೆ ಯಾವ ಬಗೆಯ ಸವಿಯನ್ನೂ ಕೂಡಿಸದೆ ರಚಿಸಿದ ವಚನಗಳು ಒಂದು ಗುಂಪಾಗುತ್ತವೆ. ಇಂಥ ರಚನೆಗೆ 'ವಚನಶಾಸ್ತ್ರ' ಎಂಬ ಹೆಸರು ಸರಿಯಾಗಿ ಒಪ್ಪುತ್ತದೆ. ಎರಡನೆಯ ಗುಂಪಿನ ವಚನಗಳು ಸಂಖ್ಯೆಯಲ್ಲಿ ಅಷ್ಟೊಂದಿಲ್ಲ. ಆದರೆ ಸಾಹಿತಿಯ ದೃಷ್ಟಿಯಲ್ಲಿ ಅವುಗಳ ಬೆಲೆ ಬಲು ಹಿರಿದು. ವಚನ ವಾಙ್ಮಯಕ್ಕೆ ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠ ಸ್ಥಾನವನ್ನು ಗಳಿಸಿಕೊಟ್ಟಿರತಕ್ಕವು ಇವು. ...ಯಾವುದೇ ಅದರ ವಿಷಯವಾಗಿರಲಿ, ವಚನಕಾರನ ಹೃದಯರಸದಲ್ಲಿ ಅದ್ದಿ ತೆಗೆದಿರುವುದರಿಂದ, ನಿಜವಾಗಿ ಅದೊಂದು ಬಿಡಿಕವನ 'ಮುಕ್ತಕ'. ಶರಣನು ತನ್ನ ಜೀವನದ ಒಂದು ವಿಶಿಷ್ಟ ಘಟನೆಯಿಂದ ವಿಶಿಷ್ಟ ಸನ್ನಿವೇಶದಿಂದ ಆವೇಶಗೊಂಡು ಹಾಡಿರತಕ್ಕ ವಚನಗಳೂ ಉಂಟು' ತೀನಂಶ್ರೀ ಅವರ ಈ ಸ್ಪಷ್ಟವಾದ ತಿಳುವಳಿಕೆಯನ್ನು ಮುಂದಿನ ವಿದ್ವಾಂಸರಲ್ಲೂ ಕಾಣುತ್ತೇವೆ'. ಎಂ. ಆರ್. ಶ್ರೀನಿವಾಸಮೂರ್ತಿ ಅವರು ಇದನ್ನು ಸ್ಪಷ್ಟವಾಗಿ ಹೀಗೆ ಹೇಳುತ್ತಾರೆ: 'ವಚನಗಳು ಧರ್ಮವನ್ನು ಬೋಧಿಸುವುದರಿಂದ ಧರ್ಮಗ್ರಂಥಗಳಾಗಿವೆ; ತತ್ತ್ವವನ್ನು ಬೋಧಿಸುವುದರಿಂದ ಸಿದ್ಧಾಂತ ಗ್ರಂಥಗಳಾಗಿವೆ. ಕಾವ್ಯಲಕ್ಷಣಗಳನ್ನು ಒಳಗೊಂಡಿರುವುದರಿಂದ ಉತ್ತಮ ಸಾಹಿತ್ಯ ಗ್ರಂಥಗಳೂ ಆಗಿವೆ' ವಚನಗಳನ್ನು ಈಗ ರೂಢಿಯಾಗಿರುವ ಕಾವ್ಯದ ರೂಪದಲ್ಲಿ ಮೊದಲಿಗೆ ಪ್ರಕಟಿಸಿದ ವಿದ್ವಾಂಸರಾದ ಶಿ.ಶಿ.ಬಸವನಾಳ ಅವರು ಕೂಡ ವಚನಗಳ ಈ ಎರಡೂ

ಗುಣಗಳನ್ನು ಪ್ರಸ್ತಾಪಿಸುತ್ತಾರೆ. 'ವಚನಸಮೂಹ ಒಂದು ಶಾಸ್ತ್ರವೆಂಬ ಅದರಲ್ಲಿಯೂ ವೀರಶೈವ (ಎಂದರೆ ಲಿಂಗಾಯತ) ಮತದ ಶಾಸ್ತ್ರವೆಂಬ ಅಭಿಪ್ರಾಯ ಸಾಮಾನ್ಯವಾಗಿದೆ. ಈ ಅಭಿಪ್ರಾಯ ಒಂದು ದೃಷ್ಟಿಯಿಂದ ಸರಿಯೆನಿಸಿದರೂ, ವಚನಗಳಲ್ಲಿ ಸಾಹಿತ್ಯ ಲಕ್ಷಣಗಳು ವಿಪುಲವಾಗಿವೆ, ಪರಿಪುಷ್ಟವಾಗಿವೆ ಯೆಂಬುದನ್ನು ಸಾಹಿತ್ಯಕೋವಿದರು ಕಂಡುಹಿಡಿದು ಅವನ್ನು ಸಾಹಿತ್ಯ ಕೋಟಿಯಲ್ಲಿ ಪರಿಗಣಿಸಿದ್ದಾರೆ' ಈ ಮಾತನ್ನಾಡಿ ಆಗಲೇ ವಚನಗಳನ್ನು ಸಾಹಿತ್ಯವೆಂದೂ ಶಾಸ್ತ್ರವೆಂದೂ ವಿದ್ವಾಂಸರು ಪರಿಗಣಿಸಿರುವುದನ್ನು ಖಾತ್ರಿಪಡಿಸಿದ್ದಾರೆ. 'ಮತ ಧರ್ಮದ ದೃಷ್ಟಿಯಿಂದ ನೋಡುವವರಿಗೆ, ಸಿದ್ಧಾಂತವೊಂದನ್ನು ವ್ಯಾಖ್ಯಾನಿಸತಕ್ಕವರಿಗೆ ಇವು ಶಾಸ್ತ್ರದ ಹಾಗೆ ತೋರಿದರೆ, ಸಾಹಿತ್ಯ, ಕಾವ್ಯಮೀಮಾಂಸೆಯ ದೃಷ್ಟಿಯಿಂದ ನೋಡತಕ್ಕವರಿಗೆ ಕಾವ್ಯದ ಹಾಗೆ ತೋರುತ್ತವೆ' ಎಂಬ ಜಿ.ಎಸ್. ಶಿವರುದ್ರಪ್ಪ ಅವರ ಮಾತಿನವರೆಗೆ ಈ ಅನುಮೋದನೆ ಬೆಳೆದುಕೊಂಡಿದೆ.

ಲೌಕಿಕ ಮತ್ತು ಧಾರ್ಮಿಕ ಎರಡೂ ಧೋರಣೆಗಳನ್ನಿಟ್ಟುಕೊಂಡು ವಚನಗಳನ್ನು ಬರೆದ ವಚನಕಾರರು ಈ ದೃಷ್ಟಿಯಲ್ಲಿ ಕನ್ನಡ ಸಾಹಿತ್ಯ ಕಾವ್ಯಮಾರ್ಗವನ್ನು ಅನುಸರಿಸದ್ದಾರೆಂದೇ ಹೇಳಬೇಕು. ಸಾಮಾನ್ಯವಾಗಿ ಧಾರ್ಮಿಕವಲ್ಲದ ವಚನಗಳಿಗೂ ವಚನಾಂಕಿತಗಳು ಒಂದೆಡೆ ಅಲೌಕಿಕ ಸ್ಪರ್ಷ ಕೊಡುತ್ತವೆ. ವಚನಗಳು ರೂಪದಲ್ಲಿ ಸಣ್ಣ ರಚನೆಗಳಾಗಿದ್ದು, ಪ್ರತಿಯೊಂದು ಪ್ರತ್ಯೇಕ ಅಸ್ತಿತ್ವ, ಅರ್ಥ ಹೊಂದಿರುವುದರಿಂದ, ಒಂದೆಡೆ ಧಾರ್ಮಿಕ ವಚನಗಳನ್ನು, ಇನ್ನೊಂದೆಡೆಯಲ್ಲಿ ಲೌಕಿಕ ವಸ್ತುವುಳ್ಳ ವಚನಗಳನ್ನು ಪ್ರತ್ಯೇಕವಾಗಿ ಹಿಡಿದಿಡುವ ಪ್ರಯತ್ನ ಮೊದಲಿನಿಂದಲೂ ಬೆಳೆದು ಬಂದಿಲ್ಲ. ಹೀಗಾಗಿ ಅವೆಲ್ಲ ಬೆರೆತುಕೊಂಡಿವೆ. ನಾವು ಅಷ್ಟಾವರಣ, ಪಂಚಾಚಾರ ಮುಂತಾಗಿ ಧಾರ್ಮಿಕ ವಿಧಿವಿಧಾನಗಳನ್ನೇ ಶುದ್ಧವಾಗಿ ಹೇಳುವ ವಚನಗಳನ್ನು ಧರ್ಮಶಾಸ್ತ್ರ ವಚನಗಳೆಂದು ಒಂದೆಡೆ ಮಾಡಬಹುದು. 'ಧಾರ್ಮಿಕ ಸಂಗತಿಯನ್ನುಳಿದು ಸಾಮಾಜಿಕ ಸಂಗತಿಗಳನ್ನು, ಮತ್ತೆ ಬೇರೆ ಸಂಗತಿಗಳನ್ನು ಹೊಂದಿದ ವಚನಗಳನ್ನು ಸಾಹಿತ್ಯಕ ವಚನಗಳೆಂದು ಗುರುತಿಸಬಹುದು. ಆದರೆ ಹಿಂದಿನಿಂದಲೂ ಧಾರ್ಮಿಕ ವಸ್ತುವುಳ್ಳ ಕಾವ್ಯಗಳನ್ನು ಸಾಹಿತ್ಯಕೃತಿಗಳೆಂದು ಮನ್ನಿಸುತ್ತ ಬಂದ ಕನ್ನಡ ವಾಙ್ಮಯಲೋಕದಲ್ಲಿ ಧಾರ್ಮಿಕ ವಸ್ತುವುಳ್ಳ ವಚನಗಳನ್ನು ಕೂಡ ಸಾಹಿತ್ಯರಚನೆಗಳೆಂದು ಗಣಿಸುವಲ್ಲಿ ಯಾವುದೇ ತೊಡಕಾಗಿಲ್ಲ. ಅದಕ್ಕಾಗಿ ವಚನಗಳು ಸಾಹಿತ್ಯಪ್ರಕಾರಗಳೇ ಎಂಬುದರಲ್ಲಿ ಎರಡು ಮಾತಿಲ್ಲ'.

ಅರ್ಥ

'ವಚನಗಳು ಒಂದೇ ವೇಳೆಗೆ ಉತ್ತಮವಾದ ಸಾಹಿತ್ಯವೂ ಹೌದು, ಉತ್ತಮವಾದ ಧಾರ್ಮಿಕ– ಆಧ್ಯಾತ್ಮಿಕ ಸಾಹಿತ್ಯವೂ ಹೌದು. ಅದಕ್ಕಾಗಿ ಇವನ್ನು 'ಅನುಭಾವ ಸಾಹಿತ್ಯ' ಎಂದು ಕರೆಯಲಾಗುತ್ತಿದೆ'. ವಚನಕಾರರ ಈ ಮನೋಧರ್ಮದಿಂದಾಗಿಯೇ ಮುಂದೆ ಕರ್ನಾಟಕ ಭಾರತ ಕಥಾಮಂಜರಿ, ಪ್ರಭುಲಿಂಗಲೀಲೆ, ಜೈಮಿನಿಭಾರತ, ಹರಿಹರನ ರಗಳೆಗಳು– ಈ ಮುಂತಾದವುಗಳನ್ನು ಒಂದೇ ವೇಳೆಗೆ ಧಾರ್ಮಿಕ ಮತ್ತು ಲೌಕಿಕ ಕೃತಿಗಳನ್ನಾಗಿ ಬರೆಯಲು ಸಾಧ್ಯವಾಗಿಸಿದೆ. 'ಲಿಂಗಾಯತ

ಪ್ರಸಾರವು ಹೊಸ ಪಂಥ ಒಂದನ್ನು ರೂಪಿಸುವ ಬಹುಸಂಖ್ಯೆಯ ಬರಹಗಾರರ ರಚನೆಗಳ ನೆರವು ಪಡೆದಿದ್ದಿತು. ಈ ರಚನೆಗಳನ್ನು ವಚನಗಳು ಅಥವಾ ರಚನೆಗಳು ಎಂದು ಕರೆಯಲಾಗುತ್ತಿದ್ದು, ಇವು ವೀರಶೈವ ಸಾಹಿತ್ಯದ ಪ್ರಮುಖ ಲಕ್ಷಣವಾಗಿದ್ದುವು. ಇವು ಸುಲಭವಾಗಿದ್ದು ಅರ್ಥಮಾಡಿಕೊಳ್ಳಲು ವಿಶೇಷ ಅಧ್ಯಯನವೇನೂ ಅಗತ್ಯವಾಗುತ್ತಿರಲಿಲ್ಲ. ಇದಕ್ಕೆ ನಿಸ್ಸಂದೇಹವಾಗಿ, ಬಹುಮಟ್ಟಿಗೆ, ಈ ಆಂದೋಲನದ ಜನಪ್ರೀಯತೆಯೇ ಕಾರಣವಾಗಿದ್ದಿತು. ಹದಿನಾಲ್ಕನೆಯ ಶತಮಾನದಲ್ಲಿ, ಇಂಗ್ಲೆಡಿನಲ್ಲಿ, ವೈಕ್ಲಿಫ್ ಮತ್ತವನ ಮತಪ್ರಚಾರಕರು ಹಾಗೂ ಕ್ರಿಸ್ತನ ಸುವಾರ್ತೆಗಳು ಮಾಡಿದ ಪ್ರಭಾವಕ್ಕೆ ಇವನ್ನು ಹೋಲಿಸಬಹುದೆಂದು ತೋರುತ್ತದೆ. ರೂಪದಲ್ಲಿ ವಚನಗಳು ಅಡಕವಾಗಿ ಬಿಡಿಬಿಡಿ ಮುಕ್ತಕಗಳಾಗಿದ್ದವು. ಇವುಗಳ ಕೊನೆಗೆ ಶಿವನನ್ನು ಪೂಜಿಸುವ ಯಾವುದಾದರೊಂದು ಸ್ಥಳೀಯ ಅಂಕಿತ ಇರುತ್ತಿದ್ದಿತು. ಶೈಲಿಯಲ್ಲಿ ಇವು ಹೃದಯಕ್ಕೆ ಸಮಾಂತರವೂ ಅಪ್ರತ್ಯಕ್ಷ ಸೂಚಕವೂ ಆಗಿ ನಾಟುವಂಥವು.

ಇವು ಸಿರಿತನದ ಗರ್ವ, ನಿರರ್ಥಕವಾದ ಓದು ಮತ್ತು ಮತಾಚರಣೆಗಳು ಹಾಗೂ ಬದುಕಿನ ಅನಿಶ್ಚಿತತೆಗಳನ್ನೆ ಅಲ್ಲದೆ ಶಿವಭಕ್ತರ ಆಧ್ಯಾತ್ಮಿಕ ಭಾಗ್ಯಗಳನ್ನು ಕುರಿತು ಇವೆ. ಪ್ರಾಪಂಚಿಕ ಐಶ್ವರ್ಯ ಹಾಗು ಸೋಮಾರಿತನಗಳನ್ನು ತ್ಯಜಿಸಬೇಕೆಂದೂ ಅಪ್ರಮತ್ತರಾಗಿ ಮತ್ತೆ ಪ್ರಾಪಂಚಿಕದಿಂದ ನಿರ್ಲಿಪ್ತರಾಗಿ ಶಿವನಿಗೆ ಶರಣು ಹೋಗಬೇಕೆಂದೂ ಇವು ಕರೆನೀಡುತ್ತವೆ. ಇವು ನಿರ್ವಿವಾದವಾದವು ಆದರೆ ಧರ್ಮನಿಷ್ಠವು ವ್ಯಾಖ್ಯಾನಾತ್ಮಕವೂ ಆಗಿ ಪೂರ್ಣವಾಗಿ ಹುರಿದುಂಬಿಸುವಂಥವಾಗಿವೆ.

೧. ವಚನಗಳು ಹೊಸ ಧರ್ಮದ ತತ್ವಗಳನ್ನು ಹೇಳಲು ಬಳಸಿದ ಪ್ರಾದೇಶಿಕ ರೂಪಗಳು.
೨. ವಚನವು ಸಾಹಿತ್ಯದ ವಿಶಿಷ್ಟ ಪ್ರಕಾರ.
೩. ವಚನವು ಸರಳವಾದ ಅನುಪ್ರಾಸಗಳನ್ನೊಳಗೊಂಡ ಗದ್ಯರೂಪ.
೪. ವಚನಗಳನ್ನು ತಿಳಿದುಕೊಳ್ಳಲು ಶಿಕ್ಷಣದ ಅವಶ್ಯಕತೆ ಇಲ್ಲ.
೫. ವಚನಗಳ ಒಂದೊಂದು ಪ್ಯಾರಾಗಳು ಪ್ರತ್ಯೇಕ ಅಸ್ತಿತ್ವ ಹೊಂದಿದ್ದು, ಒಂದೊಂದು ಅಂಕಿತದಿಂದ ಮುಕ್ತಾಯ ಹೊಂದುತ್ತದೆ, ಈ ಎಲ್ಲ ಅಂಕಿತಗಳು ಶಿವನನ್ನು ನಿರ್ದೇಶಿಸುತ್ತವೆ.
೬. ಇವು ವಿಶಿಷ್ಟ ಶೈಲಿಯನ್ನು ಹೊಂದಿದ್ದು, ಸಂಕ್ಷೇಪೋಕ್ತಿಗಳಾಗಿವೆ.
೭. ಸಮಾಂತರತೆಯ ಲಕ್ಷಣಗಳನ್ನು ಹೊಂದಿವೆ.
೮. ಸೂಚ್ಯವಾಗಿ ಹಿಂದಿನದನ್ನು ಉಲ್ಲೇಖಿಸುತ್ತವೆ.
೯. ವಚನಗಳು ವಿಲಕ್ಷಣವಾದ ಶೈಲಿಯನ್ನು ಹೊಂದಿವೆ.
೧೦. ವಚನಗಳ ವಿಚಾರಗಳು ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡುತ್ತವೆ.
೧೧. ಬೇರೆ ಭಾಷೆಯಲ್ಲಿ ಇಲ್ಲದ ವಿಶಿಷ್ಟ ವಾಙ್ಮಯ.
೧೨. ವಚನಗಳು ವ್ಯಾಕರಣದ ಕಟ್ಟುಗಳನ್ನು ಮೀರಿವೆ.
೧೩. ವಚನಗಳು ಚಮತ್ಕಾರವಾದ ವಾಕ್ಯರಚನೆಗಳನ್ನು ಹೊಂದಿವೆ.

೧೪. ಸ್ಪಷ್ಟವಾದ ಅಭಿಪ್ರಾಯಗಳು ಮೂಡಿಬರುವಲ್ಲಿ ಅನಿಶ್ಚಿತತೆ ಉಂಟಾಗದು.

೧೫. ಕನ್ನಡ ಭಾಷೆಯಲ್ಲಿ ವಚನಗಳು ಆಶ್ಚರ್ಯಕರವಾಗಿವೆ.

ವ್ಯಾಖ್ಯಾನ

೧. 'ಕನ್ನಡ ಸಾಹಿತ್ಯ ಮಂದಿರದಲ್ಲಿ ವಚನವಾಙ್ಮಯಕ್ಕೆ ವಿಶಿಷ್ಟ ಸ್ಥಾನವನ್ನು ಕೊಟ್ಟು ಅದರ ಸ್ವತಂತ್ರ ವಿಚಾರ ಮಾಡುವುದು ಅವಶ್ಯವಿರುವುದು'. ತಮ್ಮ ಈ ಮಾತಿನಲ್ಲಿ ವಚನಗಳನ್ನು ವಾಙ್ಮಯ ಎಂದು ಕರೆದು, ಕನ್ನಡ ಸಾಹಿತ್ಯದಲ್ಲಿ ಅದರ ಪ್ರತ್ಯೇಕ ಚರ್ಚೆ ನಡೆಯಬೇಕೆನ್ನುತ್ತಾರೆ. 'ಈ ವಾಙ್ಮಯವು ಸಾಹಿತ್ಯ ದೃಷ್ಟಿಯಿಂದ ಕನ್ನಡ ವಾಙ್ಮಯದಲ್ಲಿ ಒಂದು ಪ್ರತ್ಯೇಕ, ಶ್ರೇಷ್ಠ ಸ್ಥಾನವನ್ನು ಪಡೆಯಲರ್ಹವಿದೆ' ಎನ್ನುವ ಮಾತನ್ನು ಮತ್ತೆ ಮತ್ತೆ ಒತ್ತಿ ಹೇಳುತ್ತಾರೆ. 'ವಚನಕಾರರು ಬರೆದ ವಚನಗಳ ಸಂಗ್ರಹಕ್ಕೆ ನಾವು 'ವಚನವಾಙ್ಮಯ' ಎಂದು ಅನ್ನುವ ಕಾರಣವೇನೆಂದರೆ, ಅವರು ತಮ್ಮ ಉಚ್ಚವಾದ ವಿಚಾರಗಳನ್ನೂ ಭಾವಗಳನ್ನೂ ಮನೋವೇಧಕ ರೀತಿಯಿಂದ ಈ ವಚನಗಳಲ್ಲಿ ವ್ಯಕ್ತಗೊಳಿಸಿರುವರು'. ಹೀಗೆ ಪ್ರಸ್ತಾವ ಹಾಕುವ ಅವರು ವಚನಗಳ ಸಾಹಿತ್ಯಕ ಲಕ್ಷಣಗಳನ್ನು ಒಂದೊಂದೇ ಒಂದೊಂದೇಯಾಗಿ ದಾಖಲಿಸುತ್ತ ಹೋಗುತ್ತಾರೆ. ಈ ಮೇಲಿನ ಮಾತಿನಲ್ಲಿಯೇ ವಚನಗಳು ಕೇವಲ ಭಾವನಾತ್ಮಕ ಅಭಿವ್ಯಕ್ತಿಗಳಲ್ಲ, ಅವು ಬದುಕಿನ ವೈಚಾರಿಕ ಮತ್ತು ಸಮಾನತೆಯ ಅಭಿವ್ಯಕ್ತಿಗಳಾಗಿವೆ ಎಂಬ ಗ್ರಹಿಕೆ ಮುಖ್ಯವಾಗಿ ಕಾಣುತ್ತದೆ. ಭಾವನೆಗಳನ್ನು, ವಿಚಾರಗಳನ್ನು ಮನಸ್ಸಿಗೆ ನಾಟುವಂಥ ಶೈಲಿಯಲ್ಲಿ ಹೇಳುವ ವಚನಗಳ ಗುಣಗಳಾಗಿವೆ.

೨. 'ಹಲವು ರಂಗದಲ್ಲಿ ಹಾಡಲಿಕ್ಕೆ ಬರುವಂಥ ಪದಗಳು ಇರುವುವು. ಅವುಗಳನ್ನು ವಚನಕಾರರೇ ಬರೆದಿದ್ದರೂ ಅವು ವಚನಗಳಲ್ಲ'. ಸ್ವರವಚನಗಳನ್ನು ಗುರುತಿಸದ ರೀತಿಯಿದು.

೩. 'ವಚನ ಸಾಮಾನ್ಯ ಅಥವಾ ಸಾಧಾರಣ ಸ್ವರೂಪವು ಚಿಕ್ಕದೆ ಇರುವುದು... ವಚನವು ಆ ಚಿಕ್ಕ, ಮಾಟಾದ, ಬಿಡಿಬಿಡಿಯಾದ ಸ್ವರೂಪವನ್ನು ತಾಳಿದ್ದೇ ಯೋಗ್ಯವು. ...ಬಹುಶಃ ಎಲ್ಲ ವಚನಗಳು ಅಥವಾ ವಚನಗಳಲ್ಲಿಯ ಬಹಳ ದೊಡ್ಡ ಸಂಖ್ಯೆಯು ೭-೮ ವಾಕ್ಯಗಳುಳ್ಳವುಗಳು ಮತ್ತು ೨೦-೩೦ ಶಬ್ದಗಳುಳ್ಳವುಗಳೇ ಇರುವವು ಎಂದು ಹೇಳಬಹುದು. ಹಲವು ಇದಕ್ಕೂ ಚಿಕ್ಕವಿರುವವು'

೪. ಬಿಡಿಬಿಡಿಯಾಗಿ ಒಂದೊಂದು ವಚನವು ಒಂದೊಂದೇ ವಿಷಯವನ್ನು ಹೇಳಿಬಿಡುವುದರಿಂದ ಬೇಸರಾಗದೆ ಮುದ್ರೆಯೊತ್ತಿದಂತೆ ಅವು ಮನಸಿನ ಮೇಲೆ ಒಮ್ಮೆಲೆ ಪರಿಣಾಮ ಮಾಡುವವು. ಮತ್ತು ನೆನಪಿನಲ್ಲಿಡಲು ಸುಲಭ ಹಾಗೂ ಯೋಗ್ಯವಿರುವವು'.

೫. 'ಪದ್ಯಕಿಂತ ಗದ್ಯದಲ್ಲಿ ಯಾವಾಗಲೂ ಅಲಂಕಾರಗಳು ಕಡಿಮೆ. ವಚನಗಳಲ್ಲಿಯ ಗದ್ಯವಂತೂ ಸಾಹಿತ್ಯ ದೃಷ್ಟಿಯಿಂದ ಬರೆಯಬೇಕೆಂದು ಬರೆಯಲ್ಪಟ್ಟುದಲ್ಲ. ಆದುದರಿಂದ ಅವುಗಳಲ್ಲಿ ನಾವು ಅಲಂಕಾರಗಳನ್ನು ಅಷ್ಟೊಂದು ಅಪೇಕ್ಷಿಸುವ ಕಾರಣವಿಲ್ಲ. ಆದರೆ ಅರ್ಥಬೋಧವು

ಚೆನ್ನಾಗಿ ಆಗಲಿಕ್ಕೆ ಮತ್ತು ಲೇಖಕರ ವಿಚಾರಗಳು ಓದುಗರ ಮನಸಿನ ಮೇಲೆ ಮುದ್ರೆಯಂತೆ ಅಚ್ಚಾಗಲಿಕ್ಕೆ ಹಲವು ಅಲಂಕಾರಗಳ ಸಹಾಯವಾದರೂ ಬೇಕೇಬೇಕಾಗುವುದು. ಆ ಮಟ್ಟಿಗೆ ವಚನಗಳಲ್ಲಿ ಅಲಂಕಾರಗಳು ಸಹಜವಾಗಿ ಬಂದಿವೆ ಎಂದು ಹೇಳಬಹುದು'.

೬. 'ಕೇವಲ ಲೌಕಿಕ ವಿಷಯಗಳನ್ನು ವರ್ಣಿಸುವ ಕಾವ್ಯಗಳಲ್ಲಿರುವ ಕಾಲಹಾರಕ ಮನೋಹರತೆಯು ಇವುಗಳಲ್ಲಿರಕ್ಕಿಲ್ಲ. ಲಲಿತ, ಮಧುರ, ಗಾನಮಯ ಪದಗಳಲ್ಲಿರುವ ಮೋಹಕ ಬೆಡಗು ಇವುಗಳಲ್ಲಿರಕ್ಕಿಲ್ಲ. ಆದರೆ ಉತ್ಕಟ ಈಶ್ವರ ಪ್ರೇಮದಿಂದ, ಸತ್ಯ ಪ್ರೀತಿಯಿಂದ, ಪ್ರೇರಿತರಾದ ಭಕ್ತಗಣಗಳ ಮನಗಳನ್ನು ಆಕರ್ಷಿಸುವ ಒಂದು ಬಗೆಯ ಉಚ್ಚವಾದ ಭಾವ ಭಾಷೆಗಳ ಸೌಂದರ್ಯವು ಅವುಗಳಲ್ಲಿದೆ ಮತ್ತು ಅದು ಜನಮನದಲ್ಲಿ ನವಜೀವನವನ್ನುಂಟು ಮಾಡುತ್ತಿದೆ'.

೭. 'ವಚನಗಳು ಗದ್ಯವಾಗಿದ್ದರೂ ಅವುಗಳನ್ನು ವಿಶಿಷ್ಟ ರೀತಿಯಿಂದ ವಿಭಾಗಿಸಿದರೆ ಅವುಗಳಲ್ಲಿರುವ ಸಮಪದಗಳ ಅಥವಾ ಸಮಕ್ಷರಗಳ ನಿಯತವಾದ ಆವೃತ್ತಿಯನ್ನು ನಾವು ಕಂಡುಹಿಡಿಯಬಹುದು'.

೮. 'ವಚನಕಾರರು ವಚನಗಳಲ್ಲಿ ಪದಗಳ ಅಥವಾ ಪದಸಮೂಹಗಳ ಮತ್ತು ಅವುಗಳ ಅರ್ಥಗಳ ಸಮತೂಕವನ್ನು ಅನೇಕಕಡೆ ಬಹಳ ಚೆನ್ನಾಗಿ ಸಾಧಿಸಿರುವರು. ಅದರಿಂದ ಅವುಗಳಿಗೆ ವಿಶೇಷ ಶೋಭೆಯುಂಟಾಗಿರುವುದು'.

೯. 'ಅವರು (ವಚನಕಾರರು) ರೇಖಿಸಿದ ಹಲವು ಶಬ್ದಚಿತ್ರಗಳು ಬಹಳ ಅಚ್ಚುಕಟ್ಟು ಮತ್ತು ಸತ್ಯಾರ್ಥವನ್ನು, ಪ್ರಾಮಾಣಿಕವಾಗಿ ಪ್ರತಿಬಿಂಬಿಸುವಂತಹವು ಇರುವವು. ...ಉಪಮೆ, ರೂಪಕ ಮತ್ತು ವಿರಳವಾಗಿ ಉತ್ಪ್ರೇಕ್ಷೆ ಇವು ವಚನಗಳಲ್ಲಿ ಉಪಯೋಗಿಸಲ್ಪಟ್ಟ ಮುಖ್ಯ ಅರ್ಥಾಲಂಕಾರಗಳು ಎಂದು ಹೇಳಬಹುದು. ಇವು ನಮಗೆ ಅಲ್ಲಲ್ಲಿ ಕಂಡುಬರುವವು. ವಚನಕಾರರು ಕೊಟ್ಟ ದೃಷ್ಟಾಂತಗಳಲ್ಲಿಯೂ ಅನೇಕಾನೇಕ ಉಪಮಾ ರೂಪಕಾದಿಗಳು ತುಂಬಿರುವವು'.

೧೦. 'ವಚನವು ಗದ್ಯರೂಪವಿದ್ದು ಚಿಕ್ಕದಿರುವುದರಿಂದ ವಿಚಾರಪ್ರದರ್ಶನಕ್ಕೆ ಮತ್ತು ಭಾವ ಪ್ರಕಟನೆಗೆ ಒಳ್ಳೇ ಹಗುರವಾದ ಸಾಧನವಿರುವುದು. ...ಸಾಮಾನ್ಯ ಲೇಖಕರು ಸಹ ವಚನಗಳನ್ನು ಬರೆಯುವ ಪ್ರಯತ್ನವನ್ನು ಮಾಡಬಹುದು. ಒಮ್ಮೆಲೆ ಮನಸ್ಸಿನಲ್ಲಿ ಉಂಟಾದ ಯಾವದೊಂದು ಶ್ರೇಷ್ಠ ವಿಚಾರಕ್ಕೆ ಅಥವಾ ಭಾವನೆಗೆ ವಚನರೂಪ ಕೊಟ್ಟು ಅದನ್ನು ಒಂದು ಬಾಣದಂತೆ ಎಸೆದು ಬಿಡಬಹುದು. ಅದು ತಿಳಿದುಕೊಳ್ಳಲಿಕ್ಕೂ ನೆನಪಿಡಲಿಕ್ಕೂ ಸುಲಭವಿರುವುದು.'

೧೧. ವಚನಕಾರರು ಈ ಸರಸ, ಸಬಲ, ಸುಲಭ, ಸರಳ, ಸಾಧನವನ್ನು–ಕೆಡುಕನ್ನು ಕೊಲ್ಲಲಿಕ್ಕೆ, ದುರ್ಜನರನ್ನು ಜರಿಯಲಿಕ್ಕೆ; ಶಲ್ಯದಂತೆ, ಶಿಡಿಲಂತೆ, ಬಾಣದಂತೆ, ಬರ್ಚಿಯಂತೆ ಎಸೆದಿರುವರು. ಅದೇ ರೀತಿ ಒಳಿತನ್ನು ವರ್ಧಿಸಲಿಕ್ಕೆ ಗುಣವನ್ನು ಬೆಳಸಲಿಕ್ಕೆ, ನಿರ್ಮಲ ನಿರ್ಝರದಂತೆ ನೀರತೊರೆಯಂತೆ, ಮಳೆಯ ಕರೆಯಂತೆ ಅವರು ಅದನ್ನು ಉಪಯೋಗಿಸಿರುವರು. ಅಮೃತಾನುಭವದ ಧನ್ಯತೆಯನ್ನು ವರ್ಣೀಸುವಾಗ ಅವರ ವಚನಗಳು ಬಂಡುಂಡ ತುಂಬಿಯ ಝೇಂಕಾರದಂತೆ, ವಸಂತದ ಕೋಕಿಲೆಯ ಕುಕಿಲಿನಂತೆ ಕಂಗೊಳಿಸುವವು. ಭಕ್ತನ ಅಂತರಂಗದಲ್ಲಿ

ಉಕ್ಕುವ ಭಾವಲಹರಿಗಳನ್ನುಸುರುವಾಗ ವಚನಗಳಿಗೆ ಮುನ್ನೀರ ಅಲೆಗಳಂತೆ, ವಿರಹಿಣಿಯ ಗದ್ಗದಿತ ಉಲಿವಿನಂತೆ, ವೀಣೆಯ ಮಧುರ ಸ್ವರದಂತೆ ಅವರು ರೂಪಕೊಟ್ಟಿರುವರು. ಧರ್ಮಮಾರ್ಗವನ್ನು ತೋರಿಸಲಿಕ್ಕೆ ಹೊಡೆಮಿಂಚಿನಂತೆ, ನಿರ್ಮಲ ಜ್ಯೋತಿಯಂತೆ ಆ ವಚನಗಳ ಉಪಯೋಗವನ್ನು ಅವರು ಮಾಡಿರುವರು'. ವಚನಾರ್ಥದ ಚರ್ಚೆಯಲ್ಲಿ ನಾವು ಇಲ್ಲಿಗೆ ಒಂದು ಘಟ್ಟವೆಂದು ಗುರುತಿಸಬಹುದಾಗಿದೆ.

೨.೨. ವಚನಗಳ ವಿಕಾಸದ ನೆಲೆ

೧೨ ನೇ ಶತಮಾನದ ವಚನ ಚಳುವಳಿ ಹಳೆಯದನ್ನು ಸಂಪೂರ್ಣ ವಿಶ್ಲೇಷಿಸಿ ಹೊಸದನ್ನು ಕಟ್ಟುವಂತಹ ಭವಿಷ್ಯದ ಕನಸುಗಳನ್ನು ಪೋಣಿಸಿದ ಬಗೆ ವೈಶಿಷ್ಟ್ಯಪೂರ್ಣವಾಗಿದೆ. ವೇದ ವಿರೋಧಿ ಅಷ್ಟೇ ಅಲ್ಲ, ಅದರ ಜೊತೆಗೆ ನ್ಯಾಯ ನೀತಿ, ಕರ್ತವ್ಯಪ್ರಜ್ಞೆ ಹೀಗೆ ಹಲವಾರು ದ್ವಂದ್ವಗಳನ್ನು ತನ್ನಲ್ಲಿ ಇಟ್ಟುಕೊಂಡು ಮೈದಾಳಿದ ಪರಿ ತುಂಬ ಮಹತ್ವದಾಗಿದೆ. ಇಂತಹ ಕಾಲಘಟ್ಟದಲ್ಲಿ ಸೃಜನಗೊಂಡ ಅಸ್ಪೃಶ್ಯ ನಿರಾಕರಣೆ, ವೈಚಾರಿಕತೆ, ಕಾಯಕನಿಷ್ಠೆ, ದಾಸೋಹ, ಶರಣತ್ವ, ಜಂಗಮ ಪರಿಕಲ್ಪನೆ, ಸ್ತ್ರೀ ಸಮಾನತೆ ಹೀಗೆ ಹತ್ತು ಹಲವಾರು ಪರಿಕಲ್ಪನೆಗಳು ಚಿಂತನಾರ್ಹವೆನಿಸಿದೆ.

ಜೇಡರ ದಾಸೀಮಯ್ಯನ ಸದ್ಯದ ಮಟ್ಟಿಗೆ ಮೊದಲ ವಚನಕಾರ ಎಂಬುದನ್ನು ಬಹುತೇಕ ಎಲ್ಲ ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ. ನೇಯ್ಗೆ ವೃತ್ತಿಯಲ್ಲಿ ಇದ್ದ ದಾಸೀಮಯ್ಯನ ಹೆಂಡತಿ ದುಗ್ಗಳೆಯೂ ವಚನಕಾರ್ತಿಯಾಗಿದ್ದಳು. ಈತನ ಸಮಕಾಲೀನ ಶರಣರಾದ ಶಂಕರ ದಾಸಿಮಯ್ಯ, ಆದಯ್ಯನವರು ಇವನಿಗಿಂತ ಸ್ವಲ್ಪ ಮುಂಚಿತ ಕಾಲದಲ್ಲಿದ್ದ ಡೋಹರ ಕಕ್ಕಯ್ಯ, ಕೊಂಡಗುಳಿ ಕೇಶಿರಾಜ, ಮಾದರ ಚನ್ನಯ್ಯ, ಮುಂತಾದ ವಚನಕಾರರು ಬಸವಣ್ಣನ ಪೂರ್ವದಲ್ಲಿ ವಚನ ಚಳುವಳಿಯನ್ನು ಬಿಡಿಬಿಡಿಯಾಗಿ ಹುಟ್ಟುಹಾಕಿದ್ದರು. ಇವರೆಲ್ಲರೂ ವೀರಶೈವದ ಶ್ರೇಷ್ಠತೆಯನ್ನು ಎತ್ತಿ ಇಡಿಯುತ್ತ ಶಿವಾನುಭವ ಮಾರ್ಗದಲ್ಲಿ ನಡೆದಿದ್ದರು. ಕ್ರಿ. ಶ. ಸುಮಾರು ೧೧೧೦ ರಿಂದ ಕ್ರಿ. ಶ. ೧೧೭೨ ರ ವರೆಗೆ ತುಂಗಭದ್ರ ಮತ್ತು ಗೋದಾವರಿ ನದಿಗಳ ನಡುವಿನ ಪ್ರದೇಶದಲ್ಲಿ ನಡೆದ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಕುಲಚುರಿ ಬಿಜ್ಜಳರ ಆಳ್ವಿಕೆಯ ಏಳು- ಬೀಳುಗಳ ರಾಜಕೀಯ ದೊಂಬರಾಟದ ಮಧ್ಯೆಯೇ ಸಾಮಾಜಿಕ ಚಳವಳಿಯೊಂದನ್ನು ವಚನಕಾರರು ತಮ್ಮ ಅಭಿವ್ಯಕ್ತಿ ವಚನಗಳ ಮೂಲಕ ಸಂಘಟಿಸಿದ್ದು ಅಚ್ಚರಿಯ ಸಂಗತಿ. ವೀರಶೈವ ಧರ್ಮ ಜೈನ-ವೈದಿಕ-ಶೈವ ಧರ್ಮಗಳ ಮಧ್ಯೆ ಸಿಕ್ಕು ಅಸ್ತಿತ್ವವೇ ಇಲ್ಲದಂತಾದ ಕಾಲದಲ್ಲಿ ವಚನಕಾರರು ಪ್ರಗತಿಪರ ತತ್ತ್ವಗಳನ್ನು ಒಳಗೊಂಡಿದ್ದ ವೀರಶೈವವನ್ನು ಕೈಗೆತ್ತಿಕೊಂಡರು. ಅದರಲ್ಲಿದ್ದ ಇಷ್ಟಲಿಂಗೋಪಾಸನೆ ಹಾಗೂ ಅದರ ಮೂಲಕ ಅನುಭಾವಮಾರ್ಗದಲ್ಲಿ ಆತ್ಮೋನ್ನತಿಯ ಮುನ್ನಡೆ ಸಾಧಿಸಬಹುದಾದ ತತ್ತ್ವಗಳನ್ನು ವಚನಕಾರರು ಒಂದು ಚಳುವಳಿಯ ಮಾರ್ಗವಾಗಿ ಸ್ವೀಕರಿಸಲು ಪಣತೊಟ್ಟರು. ಅರಸರು, ಅಧಿಕಾರಿಗಳು ಅವರ ವಾರಸುದಾರರು, ಪುರೋಹಿತಶಾಹಿಗಳು, ಮಧ್ಯವರ್ತಿಗಳು, ಸಾಮಾಜಿಕ ಧಾರ್ಮಿಕ ಸ್ವಾಸ್ಥ್ಯವನ್ನು ಕೆಡಿಸಿಬಿಟ್ಟಿದ್ದರು, ದಲಿತರ, ಅಸಹಾಯಕರ ಶೋಷಣೆ ತಾರಕಕ್ಕೇರಿತ್ತು.

ಆಳುವವರ ಊಳಿಗದಲ್ಲಿ ಆತ್ಮವಿಶ್ವಾಸವನ್ನು ಕಳೆದುಕೊಂಡು ಬದುಕಬೇಕಿತ್ತು. ಇಂತಹ ಸ್ಥಿತಿಯನ್ನು ಪ್ರತಿರೋಧಿಸಿದ ವಚನಕಾರರು ಆಗ ಹುಟ್ಟಿಕೊಂಡಿದ್ದರು. ಕೆಂಭಾವಿಯ ಭೋಗಣ್ಣ ಅಸ್ಪೃಶ್ಯನನ್ನು ಮನೆಯಲ್ಲಿ ಸತ್ಕರಿಸಿ ಅವನ ಪಾದೋದಕ ಸ್ವೀಕರಿಸಿದ್ದು, ಅಲ್ಲಿನ ಅರಸು ಚಂದಿಮರಸನು ಇದನ್ನು ತಿಳಿದು ಭೋಗಣ್ಣನನ್ನು ಗಡಿಪಾರು ಮಾಡಿದಾಗ ಇಡೀ ಊರಿಗೆ ಊರೇ ಹೊರಟು ನಿಂತಾಗ ಅರಸು ಭೋಗಣ್ಣನ ಕ್ಷಮೆ ಕೇಳಿದ್ದು, ಶಂಕರದಾಸೀಮಯ್ಯ ಬ್ರಾಹ್ಮಣ ಧರ್ಮವನ್ನು ತ್ಯಜಿಸಿದ್ದು, ಕೊಂಡಗುಳಿ ಕೇಶಿರಾಜನು ಮೇದರರ ಮನೆಯಲ್ಲಿ ಅನುಭಾವ ಗೋಷ್ಠಿಯಲ್ಲಿದ್ದ ಸಮಯದಲ್ಲಿ ಅರಸು ಹೇಳಿಕಳಿಸಿದರೂ ಹೋಗದೇ ಇದ್ದದ್ದು, ಇವೆಲ್ಲ ಘಟನೆಗಳು ವಚನಕಾರರು ಸಾಮಾಜಿಕ ಚಳುವಳಿಯೊಂದನ್ನು ಹುಟ್ಟುಹಾಕುತ್ತಲಿದ್ದರೆಂಬುದನ್ನು ಸೂಚಿಸುತ್ತವೆ. "ವಚನಗಳ ರಚನೆಯಲ್ಲಿ ವೈವಿಧ್ಯತೆ ಇರುವಂತೆ ಅದು ಒಳಗೊಂಡ ವಿಚಾರಗಳಲ್ಲೂ ವಿಭಿನ್ನತೆ ಇರುವುದನ್ನು ಕಾಣಬಹುದು. ಇವು ಕೇವಲ ಉಪನಿಷತ್ತಿನ ವಾಕ್ಯಗಳಂತೆ ತಾತ್ವಿಕ ನಿವೇದನೆಯನ್ನು ಮಾಡುವುದಕ್ಕೆ ಮಾತ್ರ ಸೀಮಿತವಾಗದೆ ಆತ್ಮವಿಮರ್ಶೆ, ಸಮಾಜದ ವಿಡಂಬನೆ, ಖಂಡನೆ, ಉಪದೇಶ ಇವುಗಳ ಜೊತೆಗೆ ವಚನಕಾರನ ಉದ್ವೇಗ, ಸಂಘರ್ಷ, ಅನುನಯ ಮೊದಲಾದ ಭಾವಗಳನ್ನು ಕೂಡಾ ಒಳಗೊಂಡಿವೆ"೨.

ಬಸವ ಪೂರ್ವಕಾಲೀನ ವಚನಕಾರರಲ್ಲಿ ಜೇಡರದಾಸಿಮಯ್ಯನ ವಚನಗಳು ನೂರೈವತ್ತರಷ್ಟು ದೊರೆಯುತ್ತವೆ. ಆದರೆ ಕೆಂಭಾವಿ ಭೋಗಣ್ಣ, ಕೊಂಡಗುಳಿ ಕೇಶಿರಾಜ, ತೆಲಗು ಬೊಮ್ಮಯ್ಯ, ಶಂಕರದಾಶಿಮಯ್ಯ, ಸಕಳೇಶ ಮಾದರಸ ಮುಂತಾದವರ ವಚನಗಳು ಅಷ್ಟಾಗಿ ದೊರತಿಲ್ಲ. ಆದಯ್ಯಯನ ವಚನಗಳು ಸಾಕಷ್ಟು ದೊರೆತಿವೆ. ಈ ವಚನಕಾರರಲ್ಲಿ ಕೆಲವರು ಬಸವಣ್ಣನ ಹಿರಿಯ ಸಮಕಾಲೀನರೂ ಆಗಿರಬಹುದು. ಬಸವಣ್ಣನು ಸಣ್ಣ ವಯಸ್ಸಿನಲ್ಲಿದ್ದಾಗ ಇವರು ಆಗಲೇ ೪೦-೫೦ ವರ್ಷಗಳ ಹಿರಿಯರಾಗಿ ತಮ್ಮ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಸಾಮಾಜಿಕ ಧಾರ್ಮಿಕ ಪರಿವರ್ತನೆಯ ಚಳವಳಿಯನ್ನು ಸಣ್ಣಗೆ ಹುಟ್ಟುಹಾಕಿದ್ದರು. ಅವರ ಲೋಕಾನುಭವದ ವಚನಗಳಲ್ಲಿ ಚಳವಳಿಯ ಎಳೆಗಳು ನಮಗೆ ದೊರೆಯುವುದರ ಜೊತೆಗೆ ಇಹ ಲೋಕದ ಅನುಭವ ಅವರಲ್ಲಿ ಎಷ್ಟು ಗಾಢವಾಗಿದೆಯೆಂಬುದೂ ತಿಳಿಯುತ್ತದೆ.

ಅಸ್ಪೃಶ್ಯತೆ ಆಗಿನ ಸಮಾಜದಲ್ಲಿ ಒಂದು ಪಿಡುಗಿನಂತಿತ್ತು. ಅಸ್ಪೃಶ್ಯರನ್ನು ಹೊಲೆಯರೆಂದು ಹೊರಗಿಡುತ್ತಿದ್ದುದನ್ನು ದಾಸಿಮಯ್ಯ ತನ್ನ ವಚನದ ಮೂಲಕ ಹೀಗೆ ಖಂಡಿಸುತ್ತಾನೆ.

'ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದರೆ
ಹೊಲೆ ಹೊಲೆಯೆಂಬುದು ಲೋಕವೆಲ್ಲ
ಹಲವೆಲುವಿದ್ದ ಬಾಯಿ ಒಲವರವ ನುಡಿದರೆ
ಹೊಲೆಯರ ಬಾವಿಗಿಂತ ಕರಕಷ್ಟ ಕಾಣಾ ರಾಮನಾಥ' -(ವ.ಶಾ.ಸಾ.ವ.೪೭೭)

ಎಲ್ಲವನ್ನೂ ಎಲ್ಲರೂ ಮಾಡಲಿಕ್ಕೆ ಆಗದು. ಇದು ಸೃಷ್ಟಿಯ ನಿಯಮ. ಲೋಕದಲ್ಲಿ ಹುಟ್ಟಿದವರು ಕೆಲಕೆಲವು ಮಹತ್ವದ ಕಾರ್ಯವನ್ನು ಮಾತ್ರ ಮಾಡಬಲ್ಲರು. ತುಂಬಿದ ಸಭೆಗೆ ಸಭೆಯೇ

ದಾನ ನೀಡಬಹುದೇ? ಯುದ್ಧಕ್ಕೆ ಹೋದವರು ಎಲ್ಲರೂ ಸಾಯುತ್ತಾರೆಯೇ? ಚೆನ್ನಾಗಿ ಯುದ್ಧ ಮಾಡಬಲ್ಲರು ನೂರಕ್ಕೊಬ್ಬ ಸಾವಿರಕ್ಕೊಬ್ಬ ಇದ್ದಾನು, ಹುಣಸೆಯ ಹೂವು ಎಲ್ಲವೂ ಕಾಯಾಗುತ್ತದೆಯೇ? ಎಂದು ಕೇಳುವಲ್ಲಿ ದಾಸೀಮಯ್ಯನ ಲೋಕಾನುಭವ ನಮ್ಮನ್ನು ದಂಗುಬಡಿಸುತ್ತದೆ.

ಲೋಕದಲ್ಲಿ ದುಷ್ಟರು ಯಾವಾಗಲೂ ದುಷ್ಟರೇ. ಅವರನ್ನು ದಾರಿಗೆ ತರುವುದು ಅಸಾಧ್ಯ ಎಂಬುದು ಚಂದಿಮರಸನ ಅನುಭವ.

'ನಾಯ ಕುನ್ನಿಯ ಕಚ್ಚಬೇಡ

ಬಗುಳಬೇಡವೆಂದಡೆ ಮಾಣ್ಬುದೇ?

ಹಂದಿಯನ ಶುದ್ಧವ ತಿನಬೇಡ, ಹೊರಳಬೇಡವೆಂದಡೆ ಮಾಣ್ಬುದೆ

ನಯದಿ ಬುದ್ಧಿಗಲಿಸಿದಡೆ ಮಾಣ್ಬನೆ ತಮ್ಮ ಸಹಜವ

ದುರ್ವಿಷಯಿಗೆ ಸದ್ಗುರು ಬೋಧೆಯಿಂದ

ನಿರ್ವಿಷಯವಪ್ಪುದೆ ಹೇಳಾ ಸಿಮ್ಮಲಿಗೆಯ ಚೆನ್ನರಾಮ' – (ಸ.ವ.ಸಂ:೭ ವ.ಸಂ, ೬೨೭)

ಸಕಳೇಶ ಮಾದರಸ ಎಂಬ ಇನ್ನೊಬ್ಬ ವಚನಕಾರ. ಪೂಜೆಯಲ್ಲಿ ಸಕಲ ಸೌಖ್ಯವನ್ನು ಕಾಣುವುದು ಅವನ ವಿಶೇಷ. ಸಮಾಜದಲ್ಲಿ ದುಷ್ಟರನ್ನು ತಿದ್ದುವುದು ಬಹಳ ಕಷ್ಟದ ಕೆಲಸ ಎಂಬುದನ್ನು ಅರಿತ ಮಾದರಸನು,

'ಮೆಕ್ಕೆ ಮನಿಕೆ ಮೊದಲಾಗಿ ಅವು

ಪಕ್ವಕ್ಕೆ ಬಂದಡೆ ವಿಷ ಬಿಡುವುದೆ?

ಸೋರೆ ವಾರುಧಿ ಫಣಿ ಅವು

ಹರೆಯ ಹಿರಿದಾದಡೆ ಮನದ ವಿಷ ಬಿಡದು

ಸಕಲೇಶ್ವರದೇವಾ ನಿಮ್ಮ ನಿಜವನರಿಯದ ಮನುಜಂಗೆ

ನರೆ ಹಿರಿದಾದಡೇನು? ಮನದ ಅವಗುಣ ಬಿಡದು'– (ಸ.ವ.ಸಂ:೯ ವ.ಸಂ,೪೬೫)

ಎನ್ನುತ್ತಾನೆ. ಮೆಕ್ಕೆ ಪಕ್ವವಾಗಿದ್ದರೂ ತನ್ನ ಮೂಲ ಕಹಿಗುಣವನ್ನು ಬಿಡಲಾರದು. ಹಾಗೆಯೇ ದುಷ್ಟರು ದೊಡ್ಡವರಾದರೂ ಅವರ ಕೆಟ್ಟ ಗುಣಗಳು ಬಿಡವು. ಈ ಲೋಕದ ಪ್ರತಿಯೊಬ್ಬರನ್ನು ವಚನಕಾರರು ಚೆನ್ನಾಗಿ ನಿರೀಕ್ಷಿಸಿದ್ದಾರೆ. ಯಾವ ಕಾಯಕದಲ್ಲಿಯೂ ತೊಡಗದೆ ಸೋಮಾರಿಯಾಗಿ ಏನನ್ನು ಗಳಿಸಲಾರದೆ ನಿಸ್ಸಾರವಾದ ಸಂಸಾರದಲ್ಲಿ ತೊಳಲಾಡುವವರು ಸಮಾಜಕ್ಕೆ ಭಾರವಾದವರು. ಅಂಥವರನ್ನು ಕಂಡು ಅಂಜಿಕೆಯೇ ಬರುತ್ತದೆ ಎನ್ನುತ್ತಾನೆ ಸಕಳೇಶ ಮಾದರಸ.

'ಕಾಯಕಕ್ಕಾರದೇ ಮೈ ಸೋಂಬತನದಿಂದ

ಬೇರೆ ಕೂಳ ಗಳಿಸಲಾರದೆ ಹಸಿದಿಪ್ಪರಯ್ಯಾ

ಉಡಲು ಸೀರೆಯ ಗಳಿಸಲಾರದೆ

ಕಚ್ಚುಟವ ಕಟ್ಟಿಕೊಂಡಿಪ್ಪರಯ್ಯ

ಮೀಯಲೆಣ್ಣೆಯ ಗಳಿಸಲಾರದೆ

ಮಂಡೆ ಬೋಳಾಗಿಪ್ಪರಯ್ಯಾ

ದಿಟದಿಂದ ಬಿಡಿಸದೆ ನಿಸ್ಸಂಸಾರವ

ಸಟೆಯನವಧರಿಸಿಕೊಂಡಿಪ್ಪವರಿಗೆ

ಆನಂಜುವೆ ಸಕಳೇಶ್ವರದೇವಾ' – (ಸ.ವ.ಸಂ:೯ ವ.ಸಂ, ೪೧೧)

ನಿರುದ್ಯೋಗಿ ಆದವನ ಚಿತ್ರಣ ಈ ವಚನದಲ್ಲಿ ಬಹಳ ಚೆನ್ನಾಗಿ ಮೂಡಿ ಬಂದಿದೆ. ಉದ್ಯೋಗವಿಲ್ಲದವನಿಗೆ ಊಟಸಿಗುವುದಿಲ್ಲ, ಉಡಲು ಬಟ್ಟೆಇಲ್ಲದಿರುವುದರಿಂದ ಲಂಗೋಟಿಯನ್ನು ಕಟ್ಟಿಕೊಂಡಿರುತ್ತಾನೆ. ತಲೆಗೆ ಹಚ್ಚಲು ಎಣ್ಣೆ ಇರುವುದಿಲ್ಲವಾದ್ದರಿಂದ ತಲೆಬೋಳಿಸಿ ಕೊಂಡಿರುತ್ತಾನೆ.

ಕೊಂಡಗುಳಿ ಕೇಶಿರಾಜ, ಕೆಂಭಾವಿ ಭೋಗಣ್ಣ ಇವರು ಅರಸೊತ್ತಿಗೆಯನ್ನು ಧಿಃಕ್ಕರಿಸಿದ್ದು, ಇಷ್ಟಲಿಂಗ ಪೂಜಿಸಿದ್ದು, ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ್ದು, ಜನರ ನಡೆ ನುಡಿಗಳ ಶುದ್ಧಿಗೆ ಪ್ರಯತ್ನಿಸಿದ್ದು ಬಹಳ ಗಮನಾರ್ಹ ಸಂಗತಿಗಳು. ಆದಯ್ಯ ಎಂಬ ವಚನಕಾರ ಇಂದಿನ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ (ಮೊದಲು ಪುಲಿಗೆರೆ) ವೀರಶೈವ ವೈಶಿಷ್ಟ್ಯವನ್ನು ಎತ್ತಿ ತೋರಿ ಜೈನರನ್ನು ಸೋಲಿಸಿ ಜೈನ ಧರ್ಮಿಯಳಾದ ಪದ್ಮಾವತಿಯನ್ನು ವೀರಶೈವಳನ್ನಾಗಿಸಿ ಅಂತರ್‌ಜಾತಿ ವಿವಾಹವನ್ನು ತಾನೇ ಮಾಡಿಕೊಂಡು ತನ್ನ ಸಮಕಾಲೀನ ಸಮಾಜದ ಪರಿವರ್ತನೆಗೆ ಕಾರಣನಾದ ಶಿವಶರಣ.

ಬಸವಪೂರ್ವ ಯುಗದ ವಚನಕಾರರ ವಚನಗಳನ್ನು ಪರಿಶೀಲಿಸಿದರೆ, ಬಸವಣ್ಣನ ಕಾಲದ ಸಾಮಾಜಿಕ ಪರಿಸ್ಥಿತಿಯೇ ಅವರ ಕಾಲದಲ್ಲೂ ಇತ್ತು. ಅದಕ್ಕೆ ಬಿಡಿಬಿಡಿಯಾಗಿ ತೀವ್ರವಾಗಿ ಸ್ಪಂದಿಸಿದರು. ಇವರ ವಚನಗಳನ್ನು ಗಮನಿಸಿದರೆ, ವೀರಶೈವ ತತ್ವಸಿದ್ಧಾಂತಗಳ ನೆಲೆಗಟ್ಟಿನ ಮೇಲೆ ಒಂದು ಸಾಮಾಜಿಕ ಉತ್ಕ್ರಾಂತಿಯ ಕಿಡಿ ಹುಟ್ಟಿಕೊಳ್ಳುತ್ತಲಿತ್ತೆಂದು ಭಾಸವಾಗುತ್ತದೆ. ಜಾತಿ ವೈಷಮ್ಯ, ಮೇಲು ಕೀಳು, ಅಸ್ಪೃಶ್ಯತೆ, ಕಡೆಗಣಿಸಲ್ಪಟ್ಟ ಸ್ತ್ರೀ ಶೋಷಣೆಗೆ ಒಳಗಾಗುತ್ತಿದ್ದ ದೀನ ದಲಿತರು ಇವೆಲ್ಲ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಎದ್ದುಕಾಣುತ್ತಿದ್ದವು, ಆಳುವ ವರ್ಗ, ಬ್ರಾಹ್ಮಣ ವರ್ಗ, ಬಡ ದೀನ ದಲಿತ ಹಾಗೂ ಸ್ತ್ರೀ ಸಮಾಜ ಇನ್ನೊಂದೆಡೆಯಾಗಿ ಈ ಎರಡರ ನಡುವೆ ಬಹುದೊಡ್ಡ ಕಂದರ ನಿರ್ಮಾಣವಾಗಿತ್ತು. ವೈದಿಕ ಜೈನ ಧರ್ಮಗಳ ಪ್ರಾಬಲ್ಯ ಕಡಿಮೆಯಾಗಿ ಶಿವಧರ್ಮ ದಕ್ಷಿಣ ಭಾರತದಲ್ಲಿ ಅದರಲ್ಲೂ ತಮಿಳುನಾಡಿನಲ್ಲಿ ಹೆಚ್ಚು ಪ್ರಬಲವಾಗಿತ್ತು. ಕರ್ನಾಟಕದಲ್ಲಿ ಕಾಳಾಮುಖ, ಲಕುಲೀಶ, ಪಾಶುಪತ, ಶೈವ ಧರ್ಮಗಳು ಪ್ರಚಲಿತದಲ್ಲಿದ್ದವು. ದೇವಾಲಯ, ಪುರೋಹಿತಶಾಹಿ ವೈದಿಕ ರೀತಿಯ ಮಂತ್ರ ತಂತ್ರ ಆಚರಣೆ, ಯೋಗಸಿದ್ಧಿ, ದೈಹಿಕ ವಿಚಿತ್ರ ಆಚರಣೆಗಳಿಂದ ಸಮಾಜದಲ್ಲಿ ಜನಸಾಮಾನ್ಯರು ಶಿವಾಲಯ, ಶೈವಧರ್ಮಾಚರಣೆಗಳಿಂದ, ಭಯದಿಂದ ದೂರ

ಉಳಿದು ಮಾರಿ, ಮಸಣಿ, ದುರುಗವ್ವ, ದ್ಯಾಮವ್ವ, ಭೈರವ ಮುಂತಾದ ಕ್ಷುದ್ರದೇವತೆಗಳನ್ನು ಆರಾಧಿಸುತ್ತಾ ವಾಮಾಚರಣೆಗಳಲ್ಲಿ ತೊಡಗಿದ್ದರು. ಇಂತಹ ಸಂದರ್ಭದಲ್ಲಿ ಶಂಕರ ದಾಸೀಮಯ್ಯ, ಜೇಡರ ದಾಸೀಮಯ್ಯ, ಕೆಂಭಾವಿ ಭೋಗಣ್ಣ, ಕೊಂಡಗುಳಿ ಕೇಶಿರಾಜ, ಆದಯ್ಯ ಮುಂತಾದ ವಚನಕಾರರು ಅಸ್ತವ್ಯಸ್ತ ಸಾಮಾಜಿಕ ಧಾರ್ಮಿಕ ಸ್ಥಿತಿಯನ್ನು ಕಂಡು ವೀರಶೈವದ ಇಷ್ಟಲಿಂಗೋಪಾಸನಾ ಮಾರ್ಗ ಅಂದರೆ ಅನುಭಾವ ಮಾರ್ಗವನ್ನು ತಾವು ಆಚರಿಸುತ್ತ, ತಮ್ಮ ಕಾಲದ ಸಾಮಾನ್ಯರನ್ನು ಆ ಮಾರ್ಗದಲ್ಲಿ ನಡೆವಂತೆ ಪ್ರೇರೇಪಿಸಿದರು. ತಮ್ಮ ಕಾಲದ ಲೋಕಾನುಭವವನ್ನು ಅವರು ತಮ್ಮ ವಚನಗಳಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾರೆಂಬುದನ್ನು ಹಿಂದೆ ಉಲ್ಲೆಖಿಸಿದ ಅನೇಕ ವಚನಗಳಲ್ಲಿ ನಾವು ನೋಡಿದೆವು. ಬಸವ ಪೂರ್ವಕಾಲೀನ ವಚನಕಾರರಲ್ಲಿ ಅನುಭವದ ಸ್ವರೂಪ ವ್ಯಕ್ತಿಗತವಾಗಿತ್ತು. ಅವರ ಉಗ್ರಭಕ್ತಿ, ಲಿಂಗನಿಷ್ಠೆ. ಕಾಯಕದಾಸೋಹ ಆಚರಣೆಗಳು ಸಾಮಾನ್ಯರನ್ನು ಬಹಳ ತೀವ್ರವಾಗಿ ಆಕರ್ಷಿಸಿದವು. ಅವರು ಅನ್ಯಧರ್ಮೀಯರನ್ನು ಕೆಚ್ಚಿನಿಂದ ಎದುರಿಸಬೇಕಾಗಿತ್ತು. ಅವರ ವಚನಗಳು ಹೆಚ್ಚು ಸಂಖ್ಯೆಯಲ್ಲಿ ದೊರೆತಿಲ್ಲವಾದ್ದರಿಂದ ಅವರ ಲೋಕಾನುಭವ ಸ್ವರೂಪವನ್ನು ನಿಖರವಾಗಿ ಗುರುತಿಸುವುದು ಅಸಾಧ್ಯವಾಗಿದೆ.

ಬಸವಣ್ಣನಿಗಿಂತ ಹಿಂದಿನಕಾಲದಲ್ಲಿದ್ದ ವಚನಕಾರರು ಆರಂಭಿಸಿದ ವಚನಗಳ ಚಳುವಳಿಯ ಚಾರಿತ್ರಿಕ ನೆಲೆಯ ಚುಕ್ಕಾಣಿ ಬಸವಣ್ಣನ ಕೈಗೆ ಬಂದದ್ದು ೧೨ನೆಯ ಶತಮಾನದ ಒಂದು ಜಾಗತಿಕ ದಾಖಲೆಯ ಅದ್ಭುತ ಸಂಗತಿ, ವಚನಗಳು ಆಗಲೆ ಒಂದು ಸಂಕ್ರಮಣ ಅವಸ್ಥೆಯನ್ನು ದಾಟಿ ಬಂದಿದ್ದವು. ವಚನಗಳ ಆಂದೋಲನಕ್ಕೆ ಹೆಸರಾದ ಅನೇಕ ಶಿವಶರಣರ ಪ್ರಯತ್ನದಿಂದ ಚಳುವಳಿ ಬಸವಣ್ಣನ ಅತ್ಯದ್ಭುತ ವ್ಯಕ್ತಿತ್ವದ ಚುಂಬಕ ಶಕ್ತಿಯ ಸ್ಪರ್ಶದಿಂದ ಒಮ್ಮಿಂದೊಮ್ಮೆಲೆ ಕಲ್ಯಾಣದಲ್ಲಿ ಭುಗಿಲೆದ್ದಿತು. ಅಲ್ಲಲ್ಲಿ ಬಿಡಿಬಿಡಿಯಾಗಿ ವೈಯಕ್ತಿಕ ನೆಲೆಯಲ್ಲಿ ಚಳುವಳಿ ನಡೆಸುತ್ತಿದ್ದವರೆಲ್ಲ ಕಲ್ಯಾಣದಲ್ಲಿ ಕೇಂದ್ರೀಕೃತವಾದರು. ಬಸವಣ್ಣನ ನೇತೃತ್ವದಲ್ಲಿ ಶಿವಶರಣಂಗೆ ದಕ್ಕಿದ್ದು ಒಂದು ಅಪೂರ್ವ ಯೋಗಾಯೋಗ. ಕ್ರಾಂತಿಯ ಕನಸು ಕಾಣುತ್ತಿದ್ದ ಬಸವಣ್ಣನಿಗೆ ತನ್ನಂತೆಯೆ ಆಲೋಚನೆ ಮಾಡುತ್ತಿದ್ದ ಹಿರಿಯ ಶರಣರು, ಸಿದ್ಧರಾಮ, ಮಡಿವಾಳಮಾಚಿದೇವನಂಥ ಕಾರ್ಯಶೀಲ ಶರಣರು, ಚನ್ನಬಸವಣ್ಣನಂಥ ಪ್ರತಿಭಾಸಂಪನ್ನ ಶರಣರು ಕಣ್ಸನ್ನೆ ಮಾತ್ರದಿಂದ ಎದ್ದು ನಿಲ್ಲುತ್ತಿದ್ದ ದಲಿತ ಶರಣರು ದೊರೆತಿದ್ದು ಬಸವಣ್ಣನಿಗೆ ತವನಿಧಿ ದೊರೆತಂತಾಗಿತ್ತು. ಇವ ನಮ್ಮವ ಇವ ನಮ್ಮವ ಎನಿಸಿ ಎಲ್ಲರನ್ನೂ ಕಟ್ಟಿಕೊಂಡು ಮೇಲೆದ್ದನು. ರಾಜಶಕ್ತಿ ಬಸವಣ್ಣನಿಗೆ ನೆಪವಾಗಿತ್ತು. ಅವನ ಮುಖ್ಯ ಕಾರ್ಯವೆಲ್ಲ ತಾನು ಕಟ್ಟ ಬಯಸಿದ ಹೊಸ ಸಮಾಜದಡೆಗೆ ಇತ್ತು. ವಿವಿಧ ಜಾತಿ ಮತ ಪಂಥ, ಪ್ರದೇಶ, ಸ್ತರಗಳಿಂದ ಬಂದು ಶಿವಭಕ್ತರಾದವರನ್ನು ಪ್ರಜ್ಞಾವಂತರನ್ನಾಗಿ ಮಾಡಿ ಅವರು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವ ಅತ್ಯಂತ ಜವಾಬ್ದಾರಿಯುತ ಕಾಯಕವನ್ನು ಬಸವಣ್ಣ ಹೊತ್ತುಕೊಂಡಿದ್ದ. ಹಾಗಾಗಿ ಬಸವಣ್ಣನ ಮೊದಲ ಸೂತ್ರವಾದ ಭಕ್ತಿಯ ಹೊನಲು ಪ್ರವಾಹೋಪಾದಿಯಲ್ಲಿ ಎಲ್ಲ ವಚನಕಾರರು ನಿರ್ಮಿಸಿಕೊಂಡು ಕಲ್ಯಾಣದ ತುಂಬ ಸುಸತೊಡಗಿತು. ಅಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ

ಭಕ್ತರು ದಿನವೂ ಬಸವಣ್ಣನ ಅನುಭವ ಮಂಟಪದಲ್ಲಿ ಸೇರತೊಡಗಿದರು. ಅಲ್ಲಿ ತಮ್ಮ ತಮ್ಮ ಅನುಭಾವಗಳನ್ನು ಹಂಚಿಕೊಳ್ಳುತ್ತಾ ಸ್ವ ಇಚ್ಛೆಯಿಂದ ಬಸವಣ್ಣನು ಸ್ಥಾಪಿಸಿದ ಲಿಂಗಾಯತ ಧರ್ಮದಲ್ಲಿ ಭಕ್ತರಾಗುವವರ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಲೇ ನಡೆಯಿತು. ಸಾಮೂಹಿಕ ಮತಾಂತರದಂತೆ ತೀವ್ರವಾಗಿ ನಡೆದ ಚಟುವಟಿಕೆಗಳಲ್ಲಿ ಕಪಟ ಶಿವಭಕ್ತರೂ ಸ್ವಾರ್ಥಕ್ಕಾಗಿ ಸೇರಿಕೊಂಡಿರಬೇಕು. ಅದನ್ನು ಕೆಲವು ವಚನಕಾರರು ಗುರುತಿಸಿ ಅಂಥ ಕಪಟ ಭಕ್ತರನ್ನು ಬಯಲಿಗೆಳೆದಿದ್ದು ಉಂಟು. ಅಂಬಿಗರ ಚೌಡಯ್ಯ ಇದನ್ನು ಕಂಡು–

'ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಕೊರಳಿಗೆ ಕವಡೆಯ ಕಟ್ಟಿ ನಾಯಾಗಿ ಬಗಳುವುದು
ಅದಾವ ವಿಚಾರವಯ್ಯಾ?
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಹುರಿ ಬೆನ್ನ ಸಿಡಿ ಬಾಯಿ ಬೀಗದಲ್ಲಿ ಹೋಗುವುದು
ಅದಾವ ವಿಚಾರವಯ್ಯಾ?
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಬೇವಿನ ಉಡುಗೆಯನುಟ್ಟು ಹಡಲಿಗೆಯ ಹೊತ್ತು
'ಉಧೋ' ಎಂಬುದು ಅದಾವ ವಿಚಾರವಯ್ಯಾ?
ಇಂಥ ಭವಿಮಾರ್ಗದಲ್ಲಿ ಚರಿಸುವ ಶಿವದ್ರೋಹಿಗಳಿಗೆ
ಲಿಂಗಧಾರಣ ಮಾಡುವವನೊಬ್ಬ ಗುರುದ್ರೋಹಿ' – (ಸ.ವ.ಸಂ:೬ ವ.ಸಂ, ೨೧೬)

ಎನ್ನುತ್ತಾನೆ. ಭಕ್ತನಾದ ಬಳಿಕ ತಾನು ಹಿಂದೆ ಮಾಡುತ್ತಿದ್ದ ಪೂಜೆ, ಆಚಾರ ವಿಚಾರಗಳನ್ನು ಬಿಟ್ಟು ಇಷ್ಟಲಿಂಗವೊಂದನ್ನೇ ನಂಬಿ ಶಿವನನ್ನು ಮೊರೆ ಹೋಗಬೇಕು. ಅದನ್ನು ಬಿಟ್ಟು ಮತ್ತೆ ಮಾಡಿದ ತಪ್ಪನ್ನೇ ಮಾಡುತ್ತ ಹೋದರೆ ಅವನನ್ನು ಭಕ್ತನೆಂದು ಹೇಗೆ ಹೇಳುವುದು? ಪರಂಪರಾಗತವಾಗಿ ನಡೆದುಕೊಂಡು ಬಂದ ಆಚರಣೆಗಳನ್ನು, ಮೂಢ ನಂಬಿಕೆಗಳನ್ನು ತೊಡೆದುಹಾಕುವುದು ಬಸವಾದಿ ಶರಣರಿಗೆ ಸುಲಭದ ಮಾತಾಗಿರಲಿಲ್ಲ. ಪರಿವರ್ತನೆ ಹೊಂದಿದರೆ ಹೆಂಡತಿ ಶಿವಭಕ್ತಳಾಗದೆ ತನ್ನ ಪರಂಪರೆಯಲ್ಲೆ ಕೆಟ್ಟ ಆಚಾರಗಳಲ್ಲಿ ತೊಡಗಿದ್ದ ಸನ್ನಿವೇಶಗಳೂ ಆಗ ಇದ್ದವು. ಬಸವಣ್ಣನ ಒಂದು ವಚನ ಅದನ್ನು ಸ್ಪಷ್ಟಪಡಿಸುತ್ತದೆ.

'ಗಂಡ ಶಿವಲಿಂಗ ದೇವರ ಭಕ್ತ
ಹೆಂಡತಿ ಮಾರಿ ಮಸಣಿಯ ಭಕ್ತೆ
ಗಂಡ ಕೊಂಬುದು ಪಾದೋದಕ ಪ್ರಸಾದ

ಹೆಂಡತಿ ಕೊಂಬುದು ಸುರೆ ಮಾಂಸ

ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ

ಹೆಂಡದ ಮಡಿಕೆಯ ಹೊರಗೆ ತೊಳೆದಂತೆ ಕೂಡಲ ಸಂಗಮದೇವಾ'

(ಸ.ವ.ಸಂ:೧ ವ.ಸಂ, ೧೦೪)

ಗಂಡ–ಹೆಂಡತಿಯ ಸಂಸಾರ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. 'ಎತ್ತು ಏರಿಗೆಳೆದರೆ ಕೋಣ ಕೇರಿಗೆಳೆಯಿತು' ಎಂಬಂತೆ ಗಂಡ–ಹೆಂಡತಿಯರು ಒಬ್ಬರೊಬ್ಬರೂ ಒಂದೊಂದು ಧರ್ಮವನಾಚರಿಸಿದಾಗ ಹೇಗೆ? ಗಡಿಗೆಯನ್ನು ಹೊರಗೆ ಅಷ್ಟೇ ತೊಳೆದರೆ ಸಾಕೆ? ಅಂದರೆ ಹೊರಗೆ ಕೆಲಸ ಮಾಡುವ ಗಂಡನೊಬ್ಬನೇ ಶುದ್ದನಾದರೆ ಸಾಕೆ? ಮನೆಯ ಒಳಗಿರುವ ಹೆಂಡತಿ ಅಂದರೆ ಗಡಿಗೆಯ ಒಳಭಾಗವು ಶುದ್ಧವಾಗದೇ ಇದ್ದರೆ ಏನು ಪ್ರಯೋಜನ? ಧರ್ಮಾಚರಣೆಯಲ್ಲಿ ಹೆಣ್ಣುಮಕ್ಕಳೂ ಗಂಡಸರಷ್ಟೇ ಮುಂದುವರೆಯಬೇಕೆಂಬ ಮಾತನ್ನು ಬಸವಣ್ಣ ಮನಂಬುಗುವಂತೆ ವಿವರಿಸಿದ್ದಾನೆ.

'ಕಲ್ಯಾಣದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಲಿಂಗಾಯತ ಶರಣರ ಸಂಘಟನೆ ಬೆಳೆಯಿತು, ದೂರದೂರಿಂದ ಅನೇಕ ಶಿವಭಕ್ತರು, ಶಿವಭಕ್ತರಲ್ಲದವರು ಕಲ್ಯಾಣದಲ್ಲಿ ಬಂದು ಸೇರುತ್ತಿದ್ದರು. ಅವರು ಇಷ್ಟಲಿಂಗಧಾರಿಗಳಾಗಿ ಲಿಂಗಾಯತರಾಗುತ್ತಿದ್ದರು. ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಗೋಷ್ಠಿ ಎಲ್ಲರಿಗೂ ಮುಕ್ತವಾಗಿರುತ್ತಿತ್ತು. ಗೋಷ್ಠಿಯಲ್ಲಿ ಶಿವಶರಣರು ತಮ್ಮ ಲೋಕಾನುಭವ ಶಿವಾನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ಸಂದೇಹಗಳನ್ನು ಪರಿಹರಿಸಿಕೊಳ್ಳುತ್ತಿದ್ದರು. ಗೋಷ್ಠಿಯಲ್ಲಿ ನಡೆದಿರಬಹುದಾದ ಚರ್ಚೆಗಳನ್ನು ವಚನಗಳ ಆಧಾರದಿಂದ ಕಲ್ಪಿಸಿಕೊಂಡು ವಚನಗಳ ಮುಖಾಂತರ ಸಮಾನತೆ ಮತ್ತು ವೈಚಾರಿಕತೆಯ ಚಳುವಳಿಗೆ ಮುಂದಾಗತೊಡಗುತ್ತಿದ್ದರು'.

ವಚನಕಾರರು ಅಸಂಖ್ಯಾತರಾಗಿದ್ದರು, ಅವರ ವಚನಗಳೂ ಅಸಂಖ್ಯಾತವಾಗಿದ್ದವು. ಅವರ ಆಲೋಚನೆಗಳು, ನಡೆನುಡಿಗಳು ಅನುಭಾವದ ಗುರಿಯನ್ನು ಹೊಂದಿ ಸಾಗಿದ್ದವು. ಅವರ ಲೋಕಾನುಭವ, ಶಿವಾನುಭವಕ್ಕೆ ಪೂರಕವಾಗಿದ್ದಿತು ಶಿವಾನುಭವವನ್ನು ಸಾಧಿಸಲು ಇಹಲೋಕದಲ್ಲಿ ಅವರ ವೈಯಕ್ತಿಕ ಹಾಗೂ ಸಾಮಾಜಿಕ ನಡವಳಿಕೆಯಲ್ಲಿ ಚಾರಿತ್ರ್ಯಶುದ್ಧಿ, ಸಕಲ ಜೀವಾತ್ಮರಿಗೆ ಲೇಸ ಬಯಸುವ ಹಾಗೂ ಲೇಸ ಬದುಕುವಂತಹ ಆಚರಣೆಗಳನ್ನು ನಡೆಸುವ ರೀತಿ ಇವು ಅವಶ್ಯಕ ಎಂಬುದನ್ನು ಅವರು ಅರಿತುಕೊಂಡು ಅದನ್ನೇ ನುಡಿದರು. ಅದನ್ನೇ ನಡೆಯಲ್ಲಿ ತಂದರು. ಲೋಕದಲ್ಲಿ ಹುಟ್ಟಿದ ಬಳಿಕ ಅವರು ಏನೇನು ಅನುಭಸಿದರು, ಹೇಗೆ ನಡೆದುಕೊಂಡರು, ಹೇಗೆ ನಡೆದುಕೊಳ್ಳಲು ಹೇಳಿದರು ಎಂಬ ವಿಚಾರಗಳು ವಚನ ಚಳುವಳಿಯನ್ನು ಬಲಪಡಿಸತೊಡಗಿದವು.

ವಚನ ಚಳುವಳಿ ಬಲಗೊಳಿಸುವ ಸಿದ್ಧತೆ

ಹಿಂದೂ ಸಮಾಜ ಜಾತಿ ಆಧಾರದ ಮೇಲೆ ನಿಂತಿದೆ. ಅದನ್ನು ಸಾಂಪ್ರದಾಯಕವಾಗಿ ಚಾತುರ್‌ವರ್ಣಗಳಲ್ಲಿ ವರ್ಗೀಕರಿಸಲಾಗಿದೆ. ಹಟನ್, ಗುರ್ಯೆ, ಅಂಬೇಡ್ಕರ್, ಲೋಹಿಯಾ

ಮುಂತಾದ ವಿದ್ವಾಂಸರು ಮತ್ತು ಚಿಂತಕರು 'ವರ್ಣ' ಏನೆಂದು ವ್ಯಾಖ್ಯಾನಿಸಲು ವಿಧವಿಧವಾಗಿ ಪ್ರಯತ್ನಿಸಿದ್ದಾರೆ. ಅನೇಕ ಸಲ ಈ ಎರಡು ಶಬ್ದಗಳು–ಜಾತಿ ಮತ್ತು ವರ್ಣ ಅಥವಾ ಜಾತಿ ಮತ್ತು ವರ್ಗ–ಅದಲು ಬದಲಾಗಿ ಪ್ರಯೋಗವಾಗುತ್ತಿವೆ. ಮಹಾತ್ಮ ಗಾಂಧೀಜಿಅವರೂ ಸೇರಿದಂತೆ ಕೆಲವರು ಹಿಂದೂವಾದಿಗಳು, ಚಾತುರ್ವರ್ಣ ನಮ್ಮ ಆದರ್ಶ ವ್ಯವಸ್ಥೆ ಎಂದು ಹೇಳಿದರೂ ಅಂಥ ಒಂದು ವ್ಯವಸ್ಥೆ ಎಂದಾದರೂ ಅಸ್ತಿತ್ವದಲ್ಲಿ ಇತ್ತೆ ಹಾಗೂ ಕಾರ್ಯ ನಿರ್ವಹಿಸುತ್ತೇ? ಎನ್ನುವುದು ಅನುಮಾನಾಸ್ಪದ ವಿಷಯವಾಗಿದೆ. ವರ್ಣ ಮತ್ತು ಜಾತಿಯನ್ನು ಈ ರೀತಿ ವಿವರಿಸಬಹುದು ವರ್ಣ ಎನ್ನುವುದು ಸಿದ್ಧಾಂತ, ಜಾತಿ ಅದರ ಆಚರಣೆ.

'ವರ್ಣ' ಪದವನ್ನು ಸಾಮಾನ್ಯವಾಗಿ 'ಬಣ್ಣ' ಎಂದು ಅರ್ಥೈಸಲಾಗಿದೆ ಆದರೆ ಈ ಅರ್ಥ ಸರಿ ಹೊಂದುವುದಿಲ್ಲವೆನಿಸುವುದು, ಏಕೆಂದರೆ ಆರ್ಯರು ಬಿಳಿ, ಕಪ್ಪು, ಕಂದು ಬಣ್ಣದ ಜನರಿದ್ದರು. ಶ್ರೀರಾಮ, ಶ್ರೀಕೃಷ್ಣ, ದ್ರೌಪದಿ ಮುಂತಾದವರೆಲ್ಲ ಕಪ್ಪು ಬಣ್ಣದವರೆಂದು ವರ್ಣಿತವಾಗಿದ್ದಾರೆ. ಆದ್ದರಿಂದ 'ವರ್ಣ' ಶಬ್ದಕ್ಕೆ ಸಂಪೂರ್ಣ ಭಿನ್ನ ಅರ್ಥ ಇರಬೇಕೆನ್ನಿಸುತ್ತದೆ. ಇಡೀ ಸಂಸ್ಕೃತ ಸಾಹಿತ್ಯ ಮತ್ತು ಇಂಡೋ–ಇರೇನಿಯಾ ಭಾಷೆಗಳನ್ನು ಕೊಡವಿ ನೋಡಿದ ಡಾ. ಅಂಬೇಡ್ಕರ್ ಹೇಳುತ್ತಾರೆ, ಅದೃಷ್ಟವಶಾತ್ ವರ್ಣ ಶಬ್ದ 'ಜೆಂಡ್ ಅವೆಸ್ತ'ದಲ್ಲಿ ಬರುತ್ತದೆ. ಅದು ವರಣ ಅಥವಾ 'ವರೇಣ' ಎಂಬ ರೂಪದಲ್ಲಿ ಕಾಣಿಸುವುದು. ಅದು ನಿರ್ದಿಷ್ಟವಾಗಿ 'ನಂಬಿಕೆ, ಧಾರ್ಮಿಕ ತತ್ವ, ಸಿದ್ಧಾಂತ ಎನ್ನುವ ಅರ್ಥದಲ್ಲಿ ಪ್ರಯೋಗವಾಗಿದೆ, ಒಂದು ನಿರ್ದಿಷ್ಟ ನಂಬಿಕೆಗೆ ಅಂಟಿಕೊಂಡ ಒಂದು ವರ್ಗ' ಎಂಬ ಮೂಲಾರ್ಥವನ್ನು 'ವರ್ಣ' ಪಡೆದಿತ್ತು ಹಾಗೂ ಅದಕ್ಕೂ ಬಣ್ಣ ಎಂಬ ಅರ್ಥಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಎನ್ನುವ ಅಂಶದಲ್ಲಿ ಯಾವ ಅನುಮಾನವನ್ನೂ 'ಜೆಂಡ ಅವೆಸ್ತ'ದ ಆಧಾರ ಉಳಿಸುವುದಿಲ್ಲ ಆದ್ದರಿಂದ 'ವರ್ಣ' ಎಂದರೆ 'ದ್ವಿಜರು' ಇತರರಿಗಿಂತ ಶ್ರೇಷ್ಠರು ಎಂಬ ಸಿದ್ಧಾಂತದಲ್ಲಿ ಇಟ್ಟಿರುವ ನಂಬಿಕೆಯಾಗಿದೆ. ಇದು ಅಸಮರ್ಥನೀಯ, ಏಕೆಂದರೆ ಇದು ಪ್ರಜಾಪ್ರಭುತ್ವದ ಎಲ್ಲಾ ಮಾನದಂಡಗಳು ಮತ್ತು ತತ್ವಗಳಿಗೂ ಮಾನವ ಮೌಲ್ಯಗಳಿಗೂ ಸಾರ್ವತ್ರಿಕ ಆದರ್ಶಗಳಿಗೂ ವಿರುದ್ಧವಾಗಿದೆ. ಅಲ್ಲದೆ ತಾವು ಮೇಲು, ಇತರರು ಕೀಳು ಎಂದು ಸಹಮಾನವರನ್ನು ಅವಮಾನಿಸುವ ಅಮಾನುಷತೆ ಇದರಲ್ಲಿ ಇದೆ.

'ಋಗ್ವೇದದ ಹತ್ತನೆಯ ಮಂಡಲದ ೮೫ನೆಯ ಸ್ತೋತ್ರವಾದ 'ಪುರುಷಸೂಕ್ತ'ದಲ್ಲಿ ವರ್ಣವ್ಯವಸ್ಥೆಯ ಪ್ರಥಮ ಉಲ್ಲೇಖ ಬಂದಿದೆ ಎನ್ನುವುದು ಸರ್ವವಿದಿತ. ಅದರಲ್ಲಿ ವಿರಾಟ್ ಪುರುಷನ ಮುಖದಿಂದ ಬ್ರಾಹ್ಮಣನೂ, ತೋಳುಗಳಿಂದ ಕ್ಷತ್ರಿಯನೂ, ತೊಡೆಗಳಿಂದ ವೈಶ್ಯನೂ, ಪಾದಗಳಿಂದ ಶೂದ್ರನೂ ಉದಿಸಿದ್ದಾರೆಂದು ಪ್ರತಿಪಾದಿಸಲಾಗಿದೆ'. ಪರಮ ಪುರುಷೋತ್ತಮನಾದ ದೇವರೆ ಚಾತುರ್ವರ್ಣವನ್ನು ಸಂಸ್ಥಾಪಿಸಿದನೆಂದು ಭಗವದ್ಗೀತೆ ಘೋಷಿಸುತ್ತದೆ. ಇದೇ ವಾದವನ್ನು ಭಾರತದ ಇತಿಹಾಸದ ಉದ್ದಕ್ಕೂ ಎತ್ತಿಹಿಡಿದು ಬಲಪಡಿಸಿರುವರು. ವರ್ಣಆಧರಿತ ಸಾಮಾಜಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಕಾರಣಕ್ಕಾಗಿಯೇ ನೂರಾರು ಧರ್ಮಶಾಸ್ತ್ರಗಳು ರಚಿತವಾದವು. ಆದರೆ ಅವುಗಳಲ್ಲಿ ಧರ್ಮ ಅಥವಾ

ಸಹನಾಭೂತಿ ಎಂಬುದು ಶೂದ್ರರ ಬಗ್ಗೆ ಇಲ್ಲ. ಅವುಗಳ ಎಲ್ಲಾ ಉದ್ದೇಶ ಶೂದ್ರರನ್ನು ಕ್ರೂರವಾಗಿ ಕಂಡು ಅವರನ್ನು ನಿರಂತರ ಗುಲಾಮಗಿರಿಯಲ್ಲಿ ಇಡುವುದೇ ಆಗಿದೆ. ಇದರಿಂದ ಅವರಿಗೆ ಲಭಿಸಿದ್ದೇನೆಂದರೆ ಹೀನ ಬಡತನ ಮತ್ತು ಅಜ್ಞಾನ. ದ್ವಿಜರಿಗೆ ಸೇವೆ ಮಾಡುವುದಕ್ಕೋಸ್ಕರವೇ ಸ್ವಯಂಭುವಾದ ಬ್ರಹ್ಮ ಶೂದ್ರರನ್ನು ಸೃಷ್ಟಿಸಿದನೆಂದು ಮನಸ್ಮೃತಿ ಸಾರುವುದು. ಒಂದು ಪಕ್ಷ ಹಾಗೆ ಮಾಡಲು ಅವರು ನಿರಾಕರಿಸಿದರೆ ಅವರನ್ನು ಬಂಧಿಸಿ ಕೈಕೋಳ ಹಾಕಿ ಬ್ರಾಹ್ಮಣರ ಸೇವೆ ಮಾಡಲು ದಂಡಿಸಬೇಕೆಂದು ಅದು ತಾಕೀತು ಮಾಡುತ್ತದೆ. ಮಹಾಸೃಷ್ಟಿಕರ್ತ ಇಷ್ಟು ನಿರ್ದಯನೂ ಅಮಾನುಷನೂ ಆಗುವುದು ಎಷ್ಟು ಶೋಚನೀಯ! ತನ್ನ ಕೆಲವು ಮಕ್ಕಳಿಗೆ ಯೋಗ್ಯ ಸ್ಥಾನವನ್ನು ಕೊಟ್ಟು ಇನ್ನುಳಿದ ಎಲ್ಲಾ ಮಕ್ಕಳು ಜೀತಗಾರರಾಗಿ ದುಡಿಯಬೇಕೆಂದು ಬಯಸುವ ಅವನು ಎಂಥ ತಂದೆ! ಶಂಕರ, ರಾಮಾನುಜ ಮತ್ತು ಮಧ್ವರೆಲ್ಲ ಇದನ್ನೇ ವಿಧಿಸುತ್ತಾರೆ, ಆದ್ದರಿಂದಲೇ ಅವರು ಮಹಾ ಆಚಾರ್ಯರು. ನುಚ್ಚುನೂರು ಮಾಡುವ ಚಾತುರ್ವರ್ಣದ ಭಾರದಡಿಯಲ್ಲಿ ದುಡಿಯುವ ಜನ ನರಳುತ್ತಿದ್ದರು.

ಇಂಥ ಹೀನ ರೂಢಿಯ ವಿರುದ್ಧ ಎಲ್ಲರಿಗೂ ಎಲ್ಲ ಹಂತದಲ್ಲೂ ಸಮಾನತೆಯನ್ನು ತರುವ ತತ್ವವನ್ನು ಕಂಡುಕೊಂಡ ಮಹಾಜ್ಞಾನಿ ಬುದ್ಧ ತನ್ನ ಚಳುವಳಿಯನ್ನು ಪ್ರಾರಂಭಿಸಿದನು. ಭಾರತದ ಜನಸಾಮಾನ್ಯ ಸಮುದಾಯ ದಬ್ಬಾಳಿಕೆಯಿಂದ ಪಾರಾಗಿ ಬಿಡುಗಡೆಗೊಳ್ಳುವ ಹೊಸ ಭರವಸೆಯನ್ನು ಬುದ್ಧ ಬಿತ್ತಿದ, ಬೌದ್ಧ ಚಳುವಳಿಗೆ ಜಾತಿಪದ್ಧತಿಯನ್ನು ಸಮಾಜದಲ್ಲಿ ತಗೆಯಲು ಸಂಪೂರ್ಣವಾಗಿ ಸಾಧ್ಯವಾಗದೆ ಹೋದರೂ ಅದರ ಬಿಗಿಯನ್ನು ಬಹುವಾಗಿ ಸಡಿಲಗೊಳಿಸಿ ತನ್ನ ಸಂಘ ವ್ಯವಸ್ಥೆಯಲ್ಲಿ ಅದನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಿತ್ತು. ಹಿಂದೂ ಸಮಾಜದ ಎಲ್ಲಾ ಪಂಗಡಗಳಿಂದಲೂ ಬಂದ ಜನರು ಬುದ್ಧ ಸಂಘವನ್ನು ಸೇರಿ ಭಿಕ್ಷುಗಳಾಗಿದ್ದರು. ಸಂಪ್ರದಾಯ ಶರಣರು ಕನಿಷ್ಠತಮರಲ್ಲಿ ಕನಿಷ್ಠತಮನೆಂದು ಪರಿಗಣಿಸಿದ್ದ ಸುನೀತ ಎಂಬ ಜಲಗಾರನಿಗೂ ಬೌದ್ಧ ಸಂಘದಲ್ಲಿ ಸರ್ವಸಮಾನವಾದ ಪೂಜ್ಯ ಸ್ಥಾನವಿತ್ತು.

ಮಾನವಾಲೋಚನೆಯ ಇತಿಹಾಸದಲ್ಲಿ ಮೊಟ್ಟಮೊದಲಿಗೆ ಮಾನವ ಜನಾಂಗವೆಲ್ಲ ಒಂದು ಎಂದು ತನ್ನ ಶಿಷ್ಯರಿಗೆ ತಿಳಿವು ತುಂಬಿದ ಮಹಾಗುರು ಬುದ್ಧದೇವ. ಅವನು ಭಿಕ್ಷುಗಳಿಗೆ ಹೀಗೆ ಹೇಳಿದನು, 'ನೋಡಿ, ಸಹೋದರರೆ ನೀವೆಲ್ಲ ಬೇರೆ ಬೇರೆ ಊರುಗಳಿಂದ ಬಂದಿದ್ದೀರಿ, ಭಿನ್ನ ಭಿನ್ನ ಜಾತಿಗಳಿಗೆ ಸೇರಿರುವಿರಿ, ಈಗ ನೀವೆಲ್ಲ ಒಂದು. ನಾನಾ ಕಡೆಗಳಿಂದ ನದಿಗಳು ಬಂದು ಸಮುದ್ರ ಸೇರುವವು. ಅವು ತಮ್ಮ ಹೆಸರು ಆಕಾರ ರೂಪಗಳನ್ನು ಕಳೆದುಕೊಂಡು ಸಮುದ್ರವಾಗುತ್ತವೆ. ನೀವೆಲ್ಲ ಸಂಘದಲ್ಲಿ ಹಾಗೆ' ಪ್ರತ್ಯೇಕತೆಯಲ್ಲಿ ಮಡಿವಂತಿಕೆಯಿಲ್ಲ. ಬೆರೆತು ಬಾಳುವುದೇ ಪವಿತ್ರ ಜೀವನ.

'ಬ್ರಾಹ್ಮಣ ಧರ್ಮ ಮತ್ತು ಬುದ್ಧಧರ್ಮದ ನಡುವಣ ಸಂಘರ್ಷವೆ ಭಾರತದ ಇತಿಹಾಸ ಬ್ರಾಹ್ಮಣಧರ್ಮ ಎಂದರೆ ಎಲ್ಲಾ ಸಂಕೋಲೆ, ಬುದ್ಧ ಧರ್ಮ ಎಂದರೆ ಸರ್ವ ಸ್ವಾತಂತ್ರ್ಯ. ಭಾರತದ

ಚರಿತ್ರೆಯ ಎಲ್ಲಾ ಕಾಲಗಳಲ್ಲಿಯೂ ಪ್ರಧಾನವಾಗಿ ಜೀವಂತವಾಗಿರುವ ಎರಡು ವಿಚಾರಧಾರೆಗಳಿವೆ. ಒಂದು ಜಾತಿ ಉಳಿಯಬೇಕೆನ್ನುವುದು, ಇನ್ನೊಂದು ಜಾತಿ ಅಳಿಯಬೇಕೆನ್ನುವುದು. ಇವೆರಡನ್ನು ಬಿಟ್ಟರೆ ಭಾರತ ಬೇರಾವುದರ ಬಗ್ಗೆಯೂ ತೀವ್ರವಾಗಿ ಆಲೋಚಿಸದಂತೆ ತೋರುವುದಿಲ್ಲ. ಭಾರತದ ಅತ್ಯುತ್ತಮ ಮನಸ್ಸುಗಳು ಜಾತಿಯ ಬಗ್ಗೆ ತಮ್ಮ ಅಪಾರ ಮತ್ತು ಅಮೂಲ್ಯ ಶಕ್ತಿಯನ್ನು ವ್ಯಯ ಮಾಡಿವೆ. ಇದನ್ನೆ ಅವರು ಬೇರೆ ಕ್ಷೇತ್ರಗಳಿಗೆ ವಿನಿಯೋಗಿಸಿದ್ದರೆ ಉನ್ನತ ಕೊಡುಗೆಯನ್ನು ನೀಡಬಹುದಿತ್ತು. ಜಾತಿ ನಿರ್ಮೂಲನೆಯ ಉದಾತ್ತ ಭಾವನೆಯನ್ನು ಬಸವಣ್ಣ ತಮ್ಮ ವಚನದಲ್ಲಿ ಅಭಿವ್ಯಕ್ತಿಸುತ್ತಾರೆ.

'ಇವನಾರವ ಇವನಾರವ ಎಂದೆನಿಸದಿರಯ್ಯ,
ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ,
ಕೂಡಲಸಂಗನ ಮನೆಯ ಮಗನೆಂದೆನಿಸಯ್ಯ'. – (ಸ.ವ.ಸಂ:೧ ವ.ಸಂ. ೬೨)

ಹಿಂದೂ ಸಾಮಾಜಿಕ ವ್ಯವಸ್ಥೆಯೊಳಗೆ ಬದುಕುವ ಜನರ ಕಸುಬುಗಳಿಗೆ ಅನುಸಾರವಾಗಿ ಜಾತಿಗಳ ಹೆಸರು ಬಂದಿವೆ ಎನ್ನುವುದು ಸಾಮಾನ್ಯ ಸಂಗತಿ ನೆಸ್‌ಫೀಲ್ಡನಿಂದ ಹಿಡಿದು ಅಂಬೇಡ್ಕರ್‌ವರೆಗಿನ ಸಮಾಜಶಾಸ್ತ್ರಜ್ಞರು ಜಾತಿಯನ್ನು ವ್ಯಾಖ್ಯಾನಿಸಲು ಶ್ರಮಿಸಿದ್ದಾರೆ. ಕಸುಬುಗಳು ತಮಗೆ ತಾವೇ ಮೇಲೂ ಅಲ್ಲ, ಕೀಳೂ ಅಲ್ಲ. ಅವು ಯಾವುದೇ ಸಮಾಜದ ನಡೆಗೆ ಅತ್ಯಾವಶ್ಯಕ. ಆದರೆ ಹಿಂದೂ ಧರ್ಮದಲ್ಲಿ ಕೆಲವು ವೃತ್ತಿಗಳು ಅಧಮ ಇನ್ನು ಕೆಲವು ಉತ್ತಮ ಎಂಬ ಭಾವನೆ ಬಂದುಬಿಟ್ಟಿದೆ. ದುರದೃಷ್ಟವಶಾತ್ ಅತ್ಯಂತ ಉಪಯುಕ್ತ ಕೆಲಸಗಳು ಅವಮಾನಕರ ಸ್ವರೂಪವನ್ನು ಪಡೆದುಕೊಂಡು ಬೈಗುಳಗಳೇ ಜಾತಿಗಲಾಗಿ ಬಿಟ್ಟಂತೆ ತೋರುತ್ತದೆ. ಯಾವುದೇ ಕೆಳ ಜಾತಿಯ ಮತ್ತು ವ್ಯಕ್ತಿಯ ಜಾತಿಯ ಹೆಸರನ್ನು ಬಹಿರಂಗವಾಗಿ ಹೇಳಿದರೆ ಅವನು(ಳು) ಸಂತೋಷ ಪಡುವುದಿಲ್ಲ. ಆತ(ಕೆ) ನಾಚಿಕೆಪಟ್ಟು ಅವಮಾನಿತರಾಗುತ್ತಾರೆ. ಜಾತಿ ವಿನಾಶಕ್ಕೆ ತಾವೆಲ್ಲರೂ ಸಂಘಟಿತರಾಗಬೇಕೆಂದು ಅವಮಾನಿತ ಜನರು ಅರಿತುಕೊಳ್ಳದಿರುವುದು ವಿಷಾದಕರ, ನಾನಾ ಕಾರಣಗಳಿಗಾಗಿ ಜಾತಿಗಳು ಇರಬೇಕೆಂದು ಬಯಸುವವರೆ ಹೆಚ್ಚಾಗಿದ್ದಾರೆ!

ಆರ್ಥಿಕ ಅಥವಾ ಸಾಮಾಜಿಕ ಅಂತಸ್ತಿಗೆ ಅನುಸಾರವಾಗಿ ವಿಭಜಿತರಾಗಿರುವ ಸಮಾಜದಲ್ಲಿ ವಾಸಿಸುವ ಜನರ ಗುಂಪನ್ನು ವರ್ಗವೆಂದು ವಿವರಿಸಬಹುದು. 'ಹಿಂದು ಸಮಾಜದಲ್ಲಿ ಜಾತಿಗಳನ್ನು ಗುರುತಿಸಲಾಗಿದೆ, ವರ್ಗಗಳನ್ನಲ್ಲ. ಏಕೆಂದರೆ ಪ್ರತಿಯೊಂದು ಜಾತಿಯಲ್ಲಿಯೂ ಶ್ರೀಮಂತರು ಮತ್ತು ಬಡವರು ಇದ್ದಾರೆ. ನಗರೀಕರಣ. ಆಧುನೀಕರಣ ಮತ್ತು ವ್ಯವಸ್ಥೆಗಳ ಪ್ರಜಾಪ್ರಭುತ್ವೀಕರಣಗಳಿಂದಾಗಿ ಜಾತಿ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತಿರುವಂತೆ ಕಾಣುತ್ತಿರುವಾಗಲೇ ಆಂತರ್ಯದಲ್ಲಿ ತನ್ನ ಗಟ್ಟಿತನವನ್ನು ಹೆಚ್ಚಿಸಿಕೊಳುತ್ತಿದೆ, ಡಾ, ಲೋಹಿಯಾ ತಮ್ಮ ಉಜ್ವಲ ಕೃತಿ 'ಇತಿಹಾಸ ಚಕ್ರ' ದಲ್ಲಿ ಸರಿಯಾಗಿ ಗುರುತಿಸಿದ್ದಾರೆ, ವರ್ಗ ಚಲನಶೀಲವಾದ ಜಾತಿ, ಜಾತಿ ಚಲನರಹಿತವಾದ ವರ್ಗ ಹಾಗಾಗಿ ಯಾರು ಯಾರು ಈ ಪರಿವರ್ತನಶೀಲ ಪ್ರಕ್ರಿಯೆಗಳ ಪ್ರಭಾವಗಳಿಗೆ ಸಿಲುಕಿದ್ದಾರೆಯೋ

ಅವರೆಲ್ಲ ತಮ್ಮ ಪಾರಂಪರಿಕ ಉದ್ಯೋಗಗಳನ್ನು ಕಳೆದುಕೊಂಡಿದ್ದಾರೆ, ಅಥವಾ ಬಿಟ್ಟಿದ್ದಾರೆ, ಆದಗ್ಯೂ ಅವರ ಜಾತಿಯ ಅಂಕಿತ ಅವರಿಗೆ ಅಂಟಿಕೊಂಡಿದೆ, ಆದ್ದರಿಂದ ಜಾತಿ ಎಂಬ ಭಾವನೆ ಶಾಸ್ತ್ರಗಳು, ಸಂಪ್ರದಾಯಗಳು, ನಿಧಿನಿಷೇಧಗಳಿಂದಲೂ, ಅದರ ತೆಕ್ಕೆಯೊಳಗೇ ನಡೆಯುವ ಮದುವೆ ಮುಂಜಿಗಳಿಂದಲೂ ಪರಿಪೋಷಿತವಾಗುತ್ತಿದೆ'. ಇಲ್ಲಿ ಹುಟ್ಟೇ ವ್ಯಕ್ತಿಯ ಜಾತಿಯನ್ನು ನಿರ್ಧರಿಸುತ್ತದೆ. ಬೇರಾವುದೂ ಅಲ್ಲ, ಅದು ಆತ(ಕೆ) ಸತ್ತ ಮೇಲೂ ಅವನ(ಳ)ನ್ನು ಬಿಡುವುದಿಲ್ಲ.

ಮೈ ಬಣ್ಣ, ತಲೆಗೂದಲಿನ ರಚನೆ, ಎತ್ತರ, ತಲೆ ಬುರುಡೆಯ ಅಳತೆ ಇತ್ಯಾದಿಗಳ ಆದಾರದ ಮೇಲೆ ಮಾನವ ಶಾಸ್ತ್ರಜ್ಞರು ಮನುಕುಲವನ್ನು ಕಕೇಶೀಯ, ನೀಗ್ರೋ ಮತ್ತು ಮಂಗೋಲಿಯಾ ಜನಾಂಗಗಳೆಂದು ಸ್ಥೂಲವಾಗಿ ವಿಂಗಡಿಸಿದ್ದಾರೆ. ಈ ವರ್ಗೀಕರಣ ಹಿಂದು ಜಾತಿಪದ್ಧತಿಗೆ ಹೊಂದುವುದಿಲ್ಲ, ಏಕೆಂದರೆ ಎಲ್ಲ ಜಾತಿಗಳಲ್ಲಿಯೂ ಕುಳ್ಳಗಿನ, ಎತ್ತರವಾದ, ಮಟ್ಟಸವಾದ, ಕರಿಯ, ಬಿಳಿಯ, ಕಂದು ವರ್ಣದ ಜನರಿದ್ದಾರೆ. ಆದ್ದರಿಂದ ಹಿಂದೂಜಾತಿ ವ್ಯವಸ್ಥೆ ಕೃತಕವಾದುದು, ಅದು ಅವೈಜ್ಞಾನಿಕ, ಅವೈಚಾರಿಕ ಮತ್ತು ಅಮಾನುಷ ಪದ್ಧತಿಯಾಗಿದೆ.

ಇದರಿಂದಾಗಿಯೇ ಎಲ್ಲ ವಚನಕಾರರು ಜಾತಿ ಸಮಸ್ಯೆಯನ್ನು ಭಕ್ತಿಗಿಂತ ಹೆಚ್ಚಾಗಿ ಮಾನವತಾವಾದಿ ನೆಲೆಯಿಂದ ಸಮೀಕ್ಷಿಸುತ್ತಿದ್ದಾರೆಂದು ಭಾವಿಸಬಹುದು. ಏಕೆಂದರೆ ಭಕ್ತಿ ಎನ್ನುವುದು, ಒಪ್ಪಿತ ಅರ್ಥದಲ್ಲಿ ದೇವರಿಗೆ ಸಂಪೂರ್ಣ ಶರಣಾರ್ಥಿ ಆಗಿದೆ. ಅವನೇ ವಿಶ್ವದ ಸೃಷ್ಟಿಕರ್ತ ಮತ್ತು ಇಲ್ಲಿರುವುದೆಲ್ಲಾ ನಿರ್ಮಾಣವಾಗಿದೆ. ಹಾಗಾಗಿ ಭಗವಂತನ ಸೃಷ್ಟಿಯಲ್ಲಿ ಭಕ್ತ ಏನೂ ತಪ್ಪನ್ನು ಕಾಣಲಾರ, ಕಾಣುವುದಿಲ್ಲ, ಕಾಣಬಾರದು, ಭಕ್ತಿಯೋಗದ ಬಗ್ಗೆ ಸ್ವಾಮಿ ವಿವೇಕಾನಂದರ ಉದ್ಬೋಧಕ ಉಪನ್ಯಾಸಗಳನ್ನೂ, ಭಕ್ತಿಯೋಗವೆಂದು ಹೆಸರಾಗಿರುವ ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯವನ್ನು ನಾರದ ಮತ್ತು ಶಾಂಡಿಲ್ಯರ ಭಕ್ತಿಸೂತ್ರಗಳನ್ನೂ, ನಾನು ಓದಿದ್ದೇನೆ. ಅವುಗಳಲ್ಲಿ ಜಾತಿಯನ್ನು ಕುರಿತು ಅಲ್ಲೊಂದು ಮಾತು ಬರಬಹುದು, ಭಕ್ತನಿಗೆ ಜಾತಿಯಿಲ್ಲ ಎಂದೂ ಅವು ಹೇಳಬಹುದು, ಆದರೆ ಯಾವ ಭಕ್ತಿ ಚಳುವಳಿಯೂ, ನನಗೆ ತಿಳಿದಂತೆ, ಶಿವಶರಣರನ್ನು ಬಿಟ್ಟರೆ, ಜಾತಿಯ ಮೂಲೋತ್ಪಾಟನೆಗೆ ಹೊರಟದ್ದಿಲ್ಲ. ಆದ್ದರಿಂದ ಇಲ್ಲಿ ಭಕ್ತಿ ಸಾಂಪ್ರದಾಯಿಕ ಅರ್ಥದಲ್ಲಿ ಬಳಕೆಯಾಗಿಲ್ಲ ಎಂದು ತಿಳಿಯಬೇಕಾಗಿದೆ. ಬಸವಣ್ಣನ 'ಭಕ್ತಿ ಕಂಪಿತ' ಎನ್ನುವುದನ್ನು 'ಮಾನವ ಕಂಪಿತ' ಎಂದು ತಿಳಿದುಕೊಂಡರೆ ಭಕ್ತಿ ಮಾತಿಗೆ ಅಂಟಿಕೊಂಡಿರುವ ಅನರ್ಥ ಪರಂಪರೆ ಕಳಚಿ ಬೀಳುತ್ತದೆ.

ಭಕ್ತಿ ಪ್ರಮುಖವಾಗಿ ಮತ್ತು ಪ್ರಧಾನವಾಗಿ ಸ್ವಾಮಿ - ಸೇವಕ ಸಂಭಂದ ಆಗಿರುತ್ತದೆ. ದೇವರು ಧಣಿ, ಭಕ್ತ ಭೃತ್ಯ, ಭಕ್ತಿ ಎಂದರೆ ಗುಲಾಮಗಿರಿಯ ವೈಭವೀಕರಣ, ಆದ್ದರಿಂದ ಭಕ್ತಿ ಚಳುವಳಿ ಭಕ್ತಿಯೆಂಬ ಭವ್ಯ ಹೆಸರಿನಲ್ಲಿ ಜನಸಾಮಾನ್ಯರನ್ನು ಗುಲಾಮರನ್ನಾಗಿ ಮಾಡುವ ಮತ್ತು ಇಡುವ ಕುತಂತ್ರವಾಗಿದೆ. ಸಾಧಾರಣವಾಗಿ ಭಕ್ತರು ತಮ್ಮ ಸಹಮಾನವರ ಬಗ್ಗೆಯಾಗಲೀ ಚಿಂತಿಸುವುದಿಲ್ಲ. ಭಕ್ತಿ ಎಂಬುದು ದೇವರ ಮೇಲೆ ಅಮಲೇರಿದ ಜನರ ಸೋಂಬೇರಿತನವಾಗಿದೆ, ಸರಿ, ದೊಡ್ಡ ಭಕ್ತನೆಂದರೆ ದೊಡ್ಡ ದಡ್ಡ ಅಂತ. ಕಾರಣ ಭಕ್ತರು ತಮ್ಮ ಬುದ್ಧಿಗೆ ಸದಾ ರಜಾ ಕೊಡುತ್ತಾರೆ. ಆದರೆ

೧೨ ನೇ ಶತಮಾನದ ವಚನಕಾರರು ಈ ಬಗೆಯಿಂದ ದೂರವಾಗಿದ್ದರು. ಅವರಲ್ಲಿ ಪ್ರತಿಯೊಬ್ಬರು ತಮ್ಮ ಉದ್ಯೋಗವನ್ನು ನಿಷ್ಠೆಯಿಂದಲೂ ಘನತೆಯಿಂದಲೂ ಮಾಡಿದ್ದಾರೆ, ಇದನ್ನು ಅವರು 'ಕಾಯಕ' ದುಡಿಮೆಯಿಂದ ಜೀವನ ಮತ್ತು ಸಮಾಜದ ಪೋಷಣೆ ಎಂದು ಕರೆದರು. ಅವರ ದೃಷ್ಟಿಯಿಂದ "ಕಾಯಕವೇ ಕೈಲಾಸ, ಕಾಯಕದಿಂದಲೇ ಮೋಕ್ಷ ಇದು ಶರಣರೇ ರೂಪಿಸಿಕೊಂಡ ಸಿದ್ಧಾಂತವಾಗಿದೆ. ಕಾಯಕ ಸತ್ಯಶುದ್ಧವಾಗಿರಬೇಕು. ಸುಳ್ಳು, ಮೋಸ, ವಂಚನೆ, ಅನೈತಿಕ ವ್ಯವಹಾರಗಳಿಂದ ಗಳಿಸಕೂಡದು. ಕಾಯಕದಿಂದ ಗಳಿಸಿದ ಕಾರೆ ಸೊಪ್ಪಾದರೂ ಪವಿತ್ರ. ಕಾಯಕ ತತ್ವ ಶರಣರಲ್ಲಿ ಸ್ವಾಭಿಮಾನ ಆತ್ಮಗೌರವ ಹೆಚ್ಚಿಸಿತು"೩.

ಜಾತಿ ಹೇಗೆ ಮನುಷ್ಯನ ಬೇರ್ಪಡಿಸುತ್ತದೆ ಹಾಗೂ ಅದರಿಂದಾಗಿಯೇ ಅವನಿಗೆ ಭೇದ ಬಗೆಯಲಾಗುತ್ತದೆ ಎಂಬುದು ಬಸವಣ್ಣನವರಿಗೆ ಬಹುಬೇಗ ತಿಳಿಯಿತು, ಸ್ಪೃಶ್ಯರ ಮತ್ತು ಅಸ್ಪೃಶ್ಯರ ನಡುವಿನ ಹೇವರಿಕೆಯನ್ನು ತೆಗೆದು ಹಾಕುವುದಕ್ಕಾಗಿ, ಹಂದಿ ನಾಯಿಗಳಿಗಿಂತಲೂ ಕಡೆಯಾಗಿ ಕಾಣುತ್ತಿದ್ದ ಜನರ ಜೊತೆ ತಮ್ಮನ್ನು ತಾವು ಒಂದಾಗಿಸತೊಡಗಿದರು. ಅಷ್ಟೇಅಲ್ಲದೇ, ತಾನು ಮಾದಾರ ಚನ್ನಯ್ಯನ ಮಗ ಎಂದು ಹೇಳುವವರೆಗೂ ಅವರು ಹೋದರು. ವಿವಾಹದಿಂದ ವ್ಯಕ್ತಿಗೆ ಕುಲತ್ವ ಪ್ರಾಪ್ತವಾಗುತ್ತದೆ. ಕುಲಜತನದಿಂದ ಸ್ಥಾನಮಾನ ಗೌರವಗಳು ಉದ್ಭವವಾಗುತ್ತವೆ. ಆದ್ದರಿಂದ ಅವೆರಡಕ್ಕೂ ಬಸವಣ್ಣ ತಾನು ಅಂತ್ಯಜರಿಗಿಂತಲೂ ಅಂತ್ಯಜ. ಕುಲಜನಲ್ಲ ಜಾರಜ ಎಂದು ಹೇಳುವಲ್ಲಿ ನಿರ್ಜಾತೀಯನಾಗುವ ಪ್ರಕ್ರಿಯೆಯಲ್ಲಿ ಅವರು ತಮ್ಮ ಮಾನವತನವನ್ನು ಕಂಡುಕೊಂಡರು, ಮಾನವೀಯತೆಯನ್ನು ಸ್ಥಾಪಿಸಿದರು. ತನ್ಮೂಲಕ ಅವಮಾನಿತ ಶೋಷಿತ ಸಮುದಾಯಗಳಲ್ಲಿ ಹಿಂದೆಂದೂ ಇಲ್ಲದಿದ್ದ ಆತ್ಮವಿಶ್ವಾಸ ಮತ್ತು ಸ್ವಾಭಿಮಾನಗಳನ್ನು ತುಂಬಿ ಅವರನ್ನು ಆಧ್ಯಾತ್ಮಶಕ್ತಿಯ ವಿದ್ಯುತ್ ವಲಯಗಳನ್ನಾಗಿ ರೂಪಿಸಿದರು.

'ಚನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರೂ ಹೊಲದಲಿ ಬೆರಣಿಗೆ ಹೋಗಿ ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ;' – (ಸ.ವ.ಸಂ:೧ ವ.ಸಂ. ೩೪೬)

ಸಂಪ್ರದಾಯ ನಿಷ್ಠೇ ಸಮಾಜದ ದೃಷ್ಟಿಯಲ್ಲಿ ಮಾದಾರ ಚನ್ನಯ್ಯ ಮತ್ತು ಕಕ್ಕಯ್ಯ ಅತ್ಯಂತ ಕೆಳಜಾತಿಯವರು. ಇಂಥವರ ಜೀತಕ್ಕಿರುವ ಜನರು ಇನ್ನೆಷ್ಟು ಹೀನ ಜಾತಿಯವರಾಗಿರಬಹುದು! ಎಂದು ಪರಿಭಾವಿಸಿದಷ್ಟೂ ಬಸವಣ್ಣನವರ ವ್ಯಕ್ತಿತ್ವ ಪರಮ ಸುಂದರವಾಗಿ ಕಾಣುತ್ತದೆ. ಜೀತದಾಳುಗಳ ಹಾದರಕ್ಕೆ ಹುಟ್ಟಿದ ಮಗ ನಾನು ಎಂದು ಹೇಳಿಕೊಳ್ಳುವ ಬಸವಣ್ಣನವರ ಧೈರ್ಯ ಮತ್ತು ಸಾಮರ್ಥ್ಯ ಅದ್ಭುತವಾದುದು. ಇತಿಹಾಸದಲ್ಲಿ ಸರಿಸಾಟಿಯಿಲ್ಲದುದು ಹೊಲೆ ಮಾದಿಗರ ನೋವು

ಮತ್ತು ಅವಮಾನವನ್ನು ಅವರು ಎಷ್ಟರ ಮಟ್ಟಿಗೆ ಆಲಂಗಿಸಿಕೊಂಡರು ಎಂದು ಇದು ತೋರಿಸುತ್ತದೆ. ಬಸವಣ್ಣನವರು ತಮ್ಮ ಅನೇಕ ವಚನಗಳಲ್ಲಿ ನಾನು ಮಾದರ ಚೆನ್ನಯ್ಯನ ಮಗನೆಂದು ಪದೇ ಪದೇ ಹೇಳುತ್ತಾರೆ. ವಚನ ಚಳುವಳಿ ಸಮಾನತೆಗಾಗಿ ಸಾಮಾಜಿಕ ಹೋರಾಟ ಮಾಡುತ್ತಿದ್ದ ಬಸವಣ್ಣನವರ ಬೆಳವಣಿಗೆಯ ಪ್ರಧಾನ ಭಾಗವನ್ನು, ತಮ್ಮನ್ನೇ ತಾವು ನಿರ್ಜಾತೀಕರಣಕ್ಕೆ ಒಡ್ಡಿಕೊಂಡಿದ್ದ ಪ್ರಕ್ರಿಯೆ ಉಳಿದ ಎಲ್ಲ ವಚನಕಾರರ ಮೇಲೆ ಮತ್ತೊಷ್ಟು ಮನಸ್ಸನ್ನು ಸದೃಢಗೊಳಿಸಿತು.

ವಚನಕಾರರು ಸಮಾಜೋಧಾರ್ಮಿಕ ಬಂಡಾಯಗಾರರು. ಮಾನವ ಐಕ್ಯತೆಗೆ ಮತ್ತು ದೇಶದ ಅಖಂಡತೆಗೆ ಅಡ್ಡ ಬರುತೆಂದು ಜಾತಿಯನ್ನು ಅವರೆಲ್ಲರೂ ಖಂಡಿಸಿ ತಿರಸ್ಕರಿಸಿದ್ದಾರೆ.

'ಸಾಂಖ್ಯ ಸ್ವಪಚ, ಅಗಸ್ತ್ಯ ಕಬ್ಬಲ,
ದುರ್ವಾಸ ಮಚ್ಚಿಗ, ದಧೀಚಿ ಕೀಲಿಗ,
ಕಶ್ಯಪ ಕಮ್ಮಾರ, ರೋಮಜ ಕಂಚುಗಾರ,
ಕೌಂಡಿಲ್ಯ ನಾವಿದನೆಂಬುದನರಿದು
ಮತ್ತೆ ಕುಲವುಂಟೆಂದು ಛಲಕ್ಕೆ ಹೋರಲೇತಕ್ಕೆ?
ಇಂತೀ ಸಪ್ತರ್ಷಿಯರುಗಳೆಲ್ಲರೂ
ಸತ್ಯದಿಂದ ಮುಕ್ತರಾದುದನರಿಯದೆ
ಅಸತ್ಯದಲ್ಲಿ ನಡೆದು, ವಿಪ್ರರು ತಾವು ಘನವೆಂದು
ಹೋರುವ ಹೊತ್ತುಹೋಕರ ಮಾತೇತಕ್ಕೆ?' – ಮಾದಾರ ಚೆನ್ನಯ್ಯ.

(ವ.ಶಾ.ಸಾ.ವ.೧೬೩೭)

ಜಾತಿ ಒಂದು ಮಾನಸಿಕ ರೋಗವಾಗಿದೆ ಅದನ್ನು ನಿರ್ನಾಮ ಮಾಡಲು ಅದನ್ನು ಪವಿತ್ರೀಕರಿಸುವ ವೇದಶಾಸ್ತ್ರಗಳನ್ನು ಮೊದಲು ನಿರ್ನಾಮ ಮಾಡಬೇಕಾಗಿದೆ. 'ಆದ್ದರಿಂದ ಬಸವಣ್ಣವರು ಹೇಳುತ್ತಾರೆ

'ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯ್ಯುವೆ,
ನೋಡಯ್ಯ ಮಹಾದಾನಿ ಕೂಡಲಸಂಗಮದೇವ
ಮಾದರ ಚೆನ್ನಯ್ಯನ ಮನೆಯ ಮಗ ನಾನು' – (ಸ.ವ.ಸಂ:೧ ವ.ಸಂ, ೭೧೭)

ಮನುಷ್ಯನ ಒಗ್ಗಟ್ಟಿಗೆ ತಂಟೆ ಒಡ್ಡುವ ಎಲ್ಲವನ್ನೂ ತುಂಡರಿಸಬೇಕೆನ್ನುವ ಸಾತ್ವಿಕ ಕ್ರೋಧ ಮತ್ತು ಕ್ಷಾತ್ರ ತೇಜಸ್ಸು ಈ ವಚನದಲ್ಲಿ ನೆಲೆಯಾಗಿದೆ. ಬಸವಣ್ಣನವರ ಈ ವಚನ ಅಂಬೇಡ್ಕರ ಅವರ ಮಾತನ್ನು ನೆನಪಿಗೆ ತರುತ್ತದೆ. ಅವರು ತಮ್ಮ ಅತ್ಯಂತ ಕ್ರಾಂತಿಕಾರಕವಾದ ಕೃತಿ 'ಜಾತಿ

ವಿನಾಶ'ದಲ್ಲಿ ಹೇಳುತ್ತಾರೆ. 'ಜಾತಿ ಪದ್ಧತಿಯನ್ನು ನೀವು ಭಗ್ನಪಡಿಸಬೇಕಾದರೆ ನೀವು ವೇದಗಳು ಮತ್ತು ಶಾಸ್ತ್ರಗಳಿಗೆ ಡೈನಾಮೇಟು ಹಾಕಬೇಕು, ಏಕೆಂದರೆ ಅವು ವಿವೇಕವನ್ನು ನಿರಾಕರಿಸುತ್ತವೆ. ವೇದ ಶಾಸ್ತ್ರಗಳನ್ನು ಧ್ವಂಸ ಮಾಡಬೇಕು. ಏಕೆಂದರೆ ಅವುಗಳು ನೈತಿಕತೆಯನ್ನು ಒಪ್ಪುವುದಿಲ್ಲ. ನೀವು ಶೃತಿಗಳು ಮತ್ತು ಸ್ಮೃತಿಗಳ ಧರ್ಮವನ್ನು ನಾಶಪಡಿಸಬೇಕು'. ಇದೇ ಅಲ್ಲಮ, ಅಕ್ಕಮಹಾದೇವಿ, ಸಿದ್ಧರಾಮ, ಮತ್ತೆಲ್ಲ ವಚನಕಾರರ ಪರಿಗಣಿತವಾದ ಅಭಿಪ್ರಾಯವಾಗಿದೆ. ಬಸವ ಮತ್ತು ಅಂಬೇಡ್ಕರ್ ನಡುವಣ ಸಾಮ್ಯಗಳು ಗಮನಾರ್ಹ, ವಾಸ್ತವವಾಗಿ ಅಂಬೇಡ್ಕರ ಬಸವಣ್ಣನವರ ಮತ್ತು ಎಲ್ಲ ವಚನಕಾರರ ಭಾಷೆಯನ್ನೇ ಆಡುತ್ತಾರೆ. ಬಾಬಾ ಸಾಹೇಬರಿಗೆ ಮೊದಲೇ ಬಸವಣ್ಣನವರ ಪರಿಚಯವಾಗಿದ್ದರೆ ಅವರು ಬಹುಶಃ ವಚನಕಾರರ ಧರ್ಮವನ್ನೇ ಅಪ್ಪಿಕೊಳ್ಳುತ್ತಿದ್ದರೆಂಬುದು ನನ್ನ ಭಾವನೆ'.

ವಚನಕಾರರು ಮಹಾಮೇದಾವಿಗಳಾದುದರಿಂದಲೂ, ಆಧ್ಯಾತ್ಮಿಕಾನುಭವದ ಶಿಖರಗಳನ್ನು ಮುಟ್ಟಿದ್ದರಿಂದಲೂ ಅವರು ಶಾಸ್ತ್ರಾಚಾರಗಳ ಕರ್ಮಕಾಂಡವನ್ನು, ಅದನ್ನು ಬೆಂಬಲಿಸುವ ಸರ್ವವನ್ನೂ ಲಘುವಾಗಿ ನೋಡಿ ತಿರಸ್ಕರಿಸಬಲ್ಲವರಾಗಿದ್ದರು. ಅವರು ಸಂಪೂರ್ಣ ಸ್ವಾನುಭಾವಿಗಳಾಗಿದ್ದರು. ಎಲ್ಲೆಲ್ಲಿಯೂ ಚೈತನ್ಯವನ್ನು ಕಾಣುತ್ತಿದ್ದರು. ಆದ್ದರಿಂದಲೇ ಅವರು ಯಾವ ತಾರತಮ್ಯವನ್ನೂ ಸಹಿಸುತ್ತಿರಲಿಲ್ಲ. ಯಾರು ಯಾರಿಗೂ ಕಡಿಮೆಯಿಲ್ಲ., ಯಾರು ಯಾರಿಗೂ ಹೆಚ್ಚಲ್ಲ ಎಂಬ ಸರ್ವ ಮಾನವ ಸಮಾನತಾ ಸಿದ್ಧಾಂತವನ್ನು ಸ್ವಾನುಭವ ಮಾಡಿಕೊಂಡು ತೋರಿಸಿದವರು ವಚನಕಾರರು. ವೇದ ಶಾಸ್ತ್ರಗಳ ಹೆಸರಿನಲ್ಲಿ ಪುರೋಹಿತಶಾಹಿ ಹೆಣೆದಿದ್ದ ಬಲೆಯನ್ನು ಅವರು ಚಿಂದಿ ಮಾಡಿದರು. ಸರ್ವಗ್ರಾಹಿ ವಿಶ್ಲೇಷಣೆಯಲ್ಲಿ ವಚನ ಚಳುವಳಿಯನ್ನು 'ಸಮಗ್ರ ಕ್ರಾಂತಿ' ಎನ್ನಬಹುದು.

ಸಮಗ್ರವಾಗಿ ವಚನಗಳನ್ನು ಅಧ್ಯಯನ ಮಾಡಹೊರಟವನಿಗೆ ವಚನಕಾರರ ಭಕ್ತಿಯಾಗಲೀ, ಜೀವನ ರೀತಿಯಾಗಲೀ; ವಚನಗಳ ಕಾವ್ಯ ಸೌಂದರ್ಯವಾಗಲೀ ಅಧ್ಯಾತ್ಮಿಕ ಅರ್ಥ ಪ್ರಾಚುರ್ಯವಾಗಲೀ ಆ ಕಾಲದ ಜೀವನ ರೀತಿಯಾಗಲೀ ಮತಪ್ರಸಾರವಾಗಲೀ ಹೆಚ್ಚು ಆಕರ್ಷಣೀಯವಾಗಿ ಕಾಣದೆ, ಸಮಾಜದ ಎಲ್ಲ ಸ್ತರಗಳ ಮನುಷ್ಯರನ್ನು ಒಳಗೊಂಡು ಚಳುವಳಿಯ ಎಲ್ಲ ಅಂಶಗಳಲ್ಲಿಯೂ ತೊಡಗಿಸಿಕೊಂಡು ಈಗಲೂ ಆಧುನಿಕ ಎಂಬಂತೆ ಕಾಣುವ ರೀತಿಯ ಅನನ್ಯವೆನಿಸುತ್ತದೆ. ಅಂತಿಮವಾಗಿ ಬಸವಣ್ಣನ ಸುತ್ತಮುತ್ತು ಅವನನ್ನು ಕೇಂದ್ರವಾಗಿರಿಸಿಕೊಂಡು ಬೆಳೆದ ಚಳುವಳಿಯು ಸೋತಂತೆ ತೋರುತ್ತದೆ ನಿಜ. ಕ್ರಾಂತಿ ಕಾಲದಲ್ಲಿ ಸಂಘಟನೆಯು ಛಿದ್ರವಾಗಿ ಮುರಿದು ಬಿತ್ತೆಂಬುದೂ ನಿಜ. ಮುಂದೆ ವೀರಶೈವವು ಇತರ ಎಲ್ಲ ಮತಗಳಂತೆಯೇ ಜಡ್ಡುಗಟ್ಟಿ, ಜಾತಿ ಪದ್ಧತಿಯೂ ಒಳಗೊಂಡಂತೆ ಹಲವು ನಗೆಯಲ್ಲಿ ಹಿಮ್ಮುಖವಾಗಿ ನಡೆಯಿತೆಂಬುದೂ ನಿಜ. ಆದರೆ ಈ ಚಳುವಳಿಯಲ್ಲಿ ಅತ್ಯಂತ ಸಾಮಾನ್ಯನೂ ತನ್ನನ್ನು ತಾನು ತೊಡಗಿಸಿಕೊಳ್ಳುವ ರೀತಿಯಲ್ಲಿ ಆ ಕಾಲದಲ್ಲಿ ನಿರ್ಮಾಣವಾಗಿದ್ದ ಪರಿಸರವು ಮಾತ್ರ ನಮ್ಮನ್ನು ಮೂಕವಿಸ್ಮಿರಾಗುವಂತೆ ಮಾಡುತ್ತದೆ. ಅಲ್ಲಿಯವರೆಗೆ ದೀನರಾಗಿ ಜೀವಿಸುತ್ತಿದ್ದವರು ತಮ್ಮ ಕೀಳರಿಮೆಯನ್ನು ಹೊಡೆದೋಡಿಸಿ ಆತ್ಮವಿಶ್ವಾಸವನ್ನು ರೂಢಿಸಿಕೊಂಡ

ರೀತಿ ಅನ್ಯಾದೃಶ. ಹಲವು ಹತ್ತು ವಿಧಗಳಲ್ಲಿ, ಈವರೆಗೂ ತಮಗೆ ನಿಷಿದ್ಧವೆಂದು ಪರಿಗನಿತವಾದ ಕ್ಷೇತ್ರಗಳಲ್ಲಿ ಕೂಡ, ಸಮಾಜದ ಕೆಳಸ್ತರದ ಜನಸಮುದಾಯವು ಕ್ರಿಯಾಶೀಲವಾದುದು ಎಲ್ಲ ಕಾಲದ ಸಂಘಟನೆಗಳಿಗೆ ಆದರ್ಶವೆನಿಸುವಂತಿದೆ.

ಈ ದೃಷ್ಟಿಯಿಂದ ವಚನ ಚಳುವಳಿಯು ನಮ್ಮ ದೇಶದ ಮೊತ್ತ ಮೊದಲನೆಯ ಜನತಾ ಚಳುವಳಿಯೆಂದೇ ನನಗೆ ಕಾಣಿಸುತ್ತದೆ. ಇತರ ಮತಗಳ ಪ್ರಸಾರ ಕಾಲದಲ್ಲಿಯಾಗಲೀ ಸಂಘಟನೆಗಳ ಕಾಲದಲ್ಲಿಯಾಗಲೀ ಜನಸಾಮಾನ್ಯರ ಬಗೆಗೆ ಕಾಣುವ ಮನೋಭಾವವೆಂದರೆ ಕನಿಕರದ್ದು, ತಾವು ಮೇಲೆ ನಿಂತು ದೀನರನ್ನು ಉದ್ಧಾರ ಮಾಡುತ್ತೇವೆನ್ನುವ ಭಾವನೆಯದು. ಆದರೆ ವಚನ ಚಳುವಳಿಯಲ್ಲಿ ಈ ಬಗೆಯ ಉಪಕಾರಭಾವವು ಸಂಘಟಕರನ್ನು ಪೀಡಿಸಿದಂತೆ ಕಾಣುವುದಿಲ್ಲ. ಸಮಾನತೆಯೆಂಬುದು ಅಲ್ಲಿ ಸ್ವೀಕೃತವಾದ ಜೀವನ ರೀತಿ. ಹಾಗೆಂದಾಕ್ಷಣ ಈ ಚಳುವಳಿಯು ಅತ್ಯಂತ ಪರಿಪೂರ್ಣವಾದ ರೀತಿಯಲ್ಲಿ, ಆದರ್ಶವೆಂಬಂತಹ ಬಗೆಯಲ್ಲಿ ನಡೆಯಿತೆಂದು ಹೇಳಲಾಗುವುದಿಲ್ಲ. ಯಾವ ಚಳುವಳಿಯೂ ಈ ರೀತಿ ಇರಲು ಸಾಧ್ಯವೇ ಇಲ್ಲ. ಹಲವು ಮನೋಭಾವದ, ಹಲವು ಹಿನ್ನಲೆಗಳ ಹಲವು ಸ್ತರಗಳ ಜನರು ಒಂದೆಡೆ ಸೇರಿ ಚಳುವಳಿಯನ್ನು ನಡೆಸಲು ಅವರೆಲ್ಲರನ್ನೂ ಬಂಧಿಸುವುದು ಏಕೋದ್ದೇಶವೆಂಬುದು ನಿಜವಾದರೂ; ಅದರಲ್ಲಿ ಪಾಲುಗೊಳ್ಳುವ ವ್ಯಕ್ತಿಗಳೆಲ್ಲ ಒಂದೇ ಬಗೆಯ ನಿಸ್ಪೃಹತೆಯನ್ನು ಹೊಂದಿದವರೆಂದಾಗಲೀ ಎಲ್ಲರೂ ಏಕಪ್ರಕಾರದ ಪ್ರಾಮಾಣಿಕತೆಯನ್ನು ಹೊಂದಿದವರಾಗಲೀ ಹೇಳಲಾಗುವುದಿಲ್ಲ. ಚಳುವಳಿಯಲ್ಲಿ ಸಕ್ರಿಯವಾಗಿ ಸೇರಿದ್ದರೂ ಅದರ ಒಟ್ಟು ಆಶಯವನ್ನು ಅರ್ಥ ಮಾಡಿಕೊಳ್ಳದವರಿರಬಹುದು; ಅದರ ಆಶಯವನ್ನು ತಪ್ಪಾಗಿ ಗ್ರಹಿಸಿರುವವರಿರಬಹುದು; ಸರಿಯಾಗಿ ಗ್ರಹಿಸಿಯೂ ವೈಯಕ್ತಿಕ ಹಿತಾಸಕ್ತಿಗಳಿಗೆ ಬಳಸಿಕೊಂಡವರಿರಬಹುದು; ಹೊಸ ಪರಿಸರದಲ್ಲಿ ತಾವು ಇತರರಿಗಿಂತ ಮೇಲೆಂದು ತೋರಿಸಿಕೊಳ್ಳಲು ಕಾತರರಾದವರಿರಬಹುದು. ಆದರೆ ಇವೆಲ್ಲ ವಿಶಾಲ ವ್ಯಾಪ್ತಿಯ ಚಳುವಳಿಯಲ್ಲಿ ಅತ್ಯಂತ ಸಹಜವಾದ ಅಂಶಗಳು. ಈ ಬಗೆಯ ಅಂಶಗಳು ಮುಂದೆ ವಿಶ್ಲೇಷಿಸುವ ರೀತಿಯಲ್ಲಿ ಗೋಚರಿಸುತ್ತದೆ.

ಇನ್ನೊಂದು ಬಗೆಯಿಂದ ನೋಡಿದರೆ ವಚನ ಚಳುವಳಿಯು ಪ್ರಾಯಶಃ ಭಾರತದ ಮೊತ್ತಮೊದಲನೆಯ ದ್ರಾವಿಡ ಚಳುವಳಿಯೆಂದೂ ತೋರುತ್ತದೆ. ಹಾಗೆಂದಾಕ್ಷಣ ವಚನಕಾರರಿಗೆ ತಾವು ದ್ರಾವಿಡರೆಂಬ ಭಾವನೆಯಿದ್ದಿತೆಂದು ನಾನು ಹೇಳುತ್ತಿಲ್ಲ; ಅಥವಾ ತಾವು ಜೀವಿಸುತ್ತಿದ್ದುದು ಅನ್ಯಪರಿಸರದಲ್ಲಿ, ಅದರ ವಿರುದ್ಧ ಬಂಡಾಯ ಮಾಡುತ್ತಿದ್ದೇವೆಂಬ ಪ್ರಜ್ಞೆ ಅವರಲ್ಲಿದ್ದಿತೆಂದೂ ನಾನು ವಾದಿಸುತ್ತಿಲ್ಲ. ಆದರೆ ವೈದಿಕ ಮತದ ಹಿಂಸಾತ್ಮಕವಾದ ಯಜ್ಞಯಾಗಾದಿಗಳನ್ನು ಧಿಕ್ಕರಿಸುವುದರಲ್ಲಿ; ಸಂಸ್ಕೃತ ಪ್ರಾಧಾನ್ಯತೆಯನ್ನು ವಿರೋಧಿಸುವುದರ ಮೂಲಕ ವ್ಯಕ್ತಪಡಿಸಿದ ಮತಶಾಹೀ ಪುರೋಹಿತಶಾಹಿಗಳ ಧಿಕ್ಕಾರದಲ್ಲಿ; ಸ್ತ್ರೀ–ಪುರುಷ ಸಮಾನತೆಯನ್ನು ಎತ್ತಿಹಿಡಿಯುವುದರ ಮೂಲಕ, ಜಾತಿ ವರ್ಣಗಳನ್ನು ತಿರಸ್ಕರಿಸುವುದರ ಮೂಲಕ ಒಂದು ಬಗೆಯಲ್ಲಿ ಮೂಲೆಗೊತ್ತರಿಸಿದ ಕರ್ಮ ಸಿದ್ಧಾಂತದಲ್ಲಿ; ಅಚ್ಚ ದ್ರಾವಿಡ ದೈವವಾದ ಶಿವಪಾರಮ್ಯವನ್ನು (ವೇದಗಳ ಸಹಾಯದಿಂದಲೇ!)

ಸಾರುವ ರೀತಿಯಲ್ಲಿ ಆರ್ಯಸಮಾಜದ ಒಪ್ಪಿತ ಆದರ್ಶಗಳನ್ನು ವಚನ ಚಳುವಳಿ ಮೆಟ್ಟಿಕ್ಕಲು ಪ್ರಯತ್ನಿಸಿತು.

ವಚನ ಚಳುವಳಿಯು ಮುಖ್ಯವಾಗಿ ಮತಧಾರ್ಮಿಕ ಚಳುವಳಿಯೆಂಬುದನ್ನು ನಾವು ಒಪ್ಪಬೇಕಾಗುತ್ತದೆ. ಸಾಮಾಜಿಕ, ಆರ್ಥಿಕ ಮುಂತಾದ ಸುಧಾರಕ ಪರಿಕಲ್ಪನೆಗಳೇನಿದ್ದರೂ ಮತಕ್ಕೆ ಅನುಷಂಗಿಕವಾಗಿ ಬರುವಂತಹುದೇ ಹೊರತು, ಮತದ ವಲಯದಿಂದ ಹೊರಗೆ ಅವುಗಳಿಗೆ ಸ್ವತಂತ್ರ ಅಸ್ತಿತ್ವವೇ ಇಲ್ಲ. ಇದು ವಚನ ಚಳುವಳಿಗೆ ಮಾತ್ರ ಸೀಮಿತವಾದ ಅಂಶವೇನಲ್ಲ. ಭಾರತದ ಎಲ್ಲ ಚಳುವಳಿಗೂ, ಇಪ್ಪತ್ತನೆಯ ಶತಮಾನದವರೆಗೆ, ಮತಧಾರ್ಮಿಕ ಚೌಕಟ್ಟಿನಲ್ಲೇ ನಡೆದಂತಹವು.

ವಚನಕಾರರು ಪ್ರತಿಪಾದಿಸುತ್ತಿದ್ದ ಮತವು ಹೊಸದೇನಲ್ಲ. ವೀರಶೈವ ಅಥವಾ ಲಿಂಗಾಯತ ಮತವನ್ನು ಬಸವಣ್ಣನೇ ಸ್ಥಾಪಿಸಿದನೆಂಬ ಭಾವನೆ ಹಿಂದೆ ಅನೇಕರಲ್ಲಿತ್ತು; ಆದರೆ, ಈಗ ಅದಕ್ಕೆ ಮಾನ್ಯತೆಯಿಲ್ಲದಾಗಿದೆ. ವಚನಕಾರರಿಗಿಂತಲೂ ಹಿಂದೆ ವೀರಶೈವವಿತ್ತು; ಆದರೆ ಎಷ್ಟು ಹಿಂದೆ ಇತ್ತು, ಅದರ ಉಗಮ ಹೇಗೆ, ಸ್ವರೂಪವೆಂತಹುದು ಎಂಬ ಪ್ರಶ್ನೆಗಳು ಇನ್ನೂ ಜಟಿಲವಾಗಿಯೇ ಇದೆ. ವೀರಶೈವ ಬಸವಣ್ಣನಿಗಿಂತಲೂ ಪ್ರಾಚೀನವಾಗಿರುವುದರ ಜೊತೆಗೆ, ಅದರ ಇತರ ಹಲವಾರು ಶೈವ ಪಂಥಗಳ ಜೊತೆಗೆ ಕೆಲವು ಸಮಾನಾಂಶಗಳನ್ನು ಪಡೆದಿತ್ತು. ಚನ್ನಬಸವಣ್ಣನು ಒಂದೆಡೆ ಹೀಗೆ ಹೇಳುತ್ತಾನೆ. 'ಪ್ರಾಣದ ಮೇಲೆ ಲಿಂಗ ಪ್ರತಿಷ್ಠೆಯ, ಅವರಿಂದ ಮೀರಿದ ಸ್ವಲ್ಪವಿಟ್ಟು ವೀರಮಾಹೇಶ್ವರತ್ವವ ಪಡೆದು, ಮರಳಿ ತನ್ನ ಪೂರ್ವ ಕುಲವೆಂದು ಬೆರೆಸಿದಡೆ, ಒಡೆದ ಮಡಕೆಯ ಓಡಿನಂತಹುದು' ಬಸವಣ್ಣ ಕೂಡ ಇಂತಹುದೇ ಮಾತನ್ನಾಡುತ್ತಾನೆ. 'ಹುಟ್ಟುವಲ್ಲಿ ಭವಿ, ಮರಳಿ ಭಕ್ತನ ಮಾಡಿ, ಪೂರ್ವಾಶ್ರಯದ ಕಳೆದು ಹೊಂದುವಲ್ಲಿ ಹೋಹರ ಮುಟ್ಟಲಾಗದು.' ಈ ಮಾತುಗಳಿಂದ ವ್ಯಕ್ತವಾಗುವ ಅಂಶವೆಂದರೆ ವಚನಕಾರರ ಕಾಲಕ್ಕಾಗಲೀ ವೀರಶೈವಕ್ಕೆ ಬೇರೆ ಮತಗಳಿಂದ ಬಂದಿದ್ದವರು ವಾಪಸ್ಸು ಹೋಗುತ್ತಿದ್ದ ಹಲವು ನಿದರ್ಶನಗಳಿದ್ದುವೆಂಬುದು.

ವೀರಶೈವವು ಕಾಳಾಮುಖದಂತಹ ಶೈವ ಪಂಥಗಳ ವಿಕಸಿತ, ಪರಿಷ್ಕೃತರೂಪ ಎನ್ನುವುದನ್ನಾಗಲೇ ಹಲವಾರು ವಿದ್ವಾಂಸರು ಗುರುತಿಸಿದ್ದಾರೆ.

೧)ಬ್ರಾಹ್ಮಣ ವಿರೋಧ ೨) ಶಿವನ ಬಗ್ಗೆ ನೈಷ್ಠಿಕ ಭಕ್ತಿ ೩) ರಾಜತ್ವಕ್ಕೆ ವಿಶೇಷ ಗೌರವವನ್ನು ಸಲ್ಲಿಸಿದ ಮನೋಭಾವ ೪) ಭಕ್ತರಲ್ಲಿ ಅಸಮಾನತೆಯ ಭೇದಭಾವದ ವಿರೋಧ ೫) ಮಾಂಸಾಹಾರ ಸಸ್ಯಾಹಾರಗಳ ಕಟ್ಟುನಿಟ್ಟುಗಳು ಇಲ್ಲದಿರುವಿಕೆ ೬) ಸ್ಥಾವರಲಿಂಗ ಇಷ್ಟಲಿಂಗ (ಅದಕ್ಕ ಆ ಹೆಸರಿತ್ತೋ ಇಲ್ಲವೋ, ಆದರೆ ಕೊಂಡೊಯ್ಯಬಹುದಾದ ಲಿಂಗರೂಪ) ಇವೆರಡೂ ರೂಪದ ಲಿಂಗಪೂಜೆ ೭) ವೃತ್ತಿನಿರತರು ಒಡೆಯರಿಗೆ ಜೋಳವಾಳಿಗಳಾಗಿ ಕರ್ತವ್ಯ ನಿರ್ವಹಿಸಿದರೂ ಶಿವನಿಗೆ ನಿಷ್ಠೆಯ ವೇಳಿವಾಳಿತನ ೮) ಶಿವಭಕ್ತನಿಗೆ ಪ್ರಾಮುಖ್ಯ. ವಚನಕಾರರು ಈ ಮತದ ಹಲವಾರು ಅಂಶಗಳನ್ನು ಸುದಾರಣೆಗೊಳಿಸಿ ಒಂದು ಸ್ಪಷ್ಟವಾದ ಸ್ವರೂಪವನ್ನು ನೀಡಿದರೆಂಬುದನ್ನು ನಾವು ಮರೆಯಬಾರದು.

ವೀರಶೈವವು, ಕೊನೆಯ ಪಕ್ಷ ವಚನಕಾರರ ಕಾಲದಲ್ಲಿ, ಪ್ರತಿಭಟನೆಯ ರೂಪದಲ್ಲಿ ಹೊಮ್ಮಿತೆಂದು ತೋರುತ್ತದೆ. ಬೌದ್ಧ ಹಾಗೂ ಜೈನಮತಗಳು ವೇದ ಪ್ರಾಮಾಣ್ಯವನ್ನೂ ಪ್ರಾಣಿಹಿಂಸೆಯನ್ನೂ ತಿರಸ್ಕರಿಸಿ ಹೊಸ ಮತಗಳನ್ನು ರೂಪಿಸಿಕೊಂಡ ಹಾಗೆ ವೀರಶೈವವೂ ಪ್ರತಿಭಟನೆಯ ಕಾರಣದಿಂದಲೇ ಮೂಡಿಬಂದಿತು. ಆದರೆ ಆ ಪ್ರತಿಭಟನೆಯು ಯಾವುದರ ವಿರುದ್ಧ ಎಂದು ನಿಖರವಾಗಿ ಬೊಟ್ಟು ಮಾಡಿ ತೋರಿಸಲು ಸಾಧ್ಯ? ವೈದಿಕ ಧರ್ಮದ ಯಜ್ಞಪ್ರಾಮುಖ್ಯ, ಪ್ರಾಣಿಹಿಂಸೆ, ಅನೇಕ ದೈವೋಪಾಸನೆ ಇಂತಹವುಗಳನ್ನು ವಿರೋಧಿಸಿದ್ದರ ಜೊತೆಗೆ, ಬೌದ್ಧ ಜೈನ ಮತಗಳನ್ನೂ ವಚನಕಾರರು ಲೇವಡಿ ಮಾಡುತ್ತಾರೆ. ಅಲ್ಲದೆ ತಮ್ಮ ಕಾಲದಲ್ಲಿ ವ್ಯಾಪಕವಾಗಿ ಆವರಿಸಿದ್ದ ಹಲವಾರು ಶೈವ-ಶಾಕ್ತಪಂಥಗಳ ವಾಮಾಚಾರವನ್ನು ಹೋಲುವ ಅಸಹ್ಯಕರ ಆಚರಣೆಗಳ ಬಗ್ಗೆಯೂ ವಚನಕಾರರಿಗೆ ಅಸಹನೆಯಿದೆ. ಆದ್ದರಿಂದ ವಚನಕಾರರ ಉದ್ದೇಶವು ಸಾಮಾನ್ಯರನ್ನೂ ಒಳಗೊಳ್ಳಬಲ್ಲ, ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಬಲ್ಲ, ಆಚರಣೆಗಳ ವಿಫುಲತೆಯಿಂದ ಜಟಿಲತೆಯಿಂದ ಗೋಜಲುಗೊಳ್ಳದ ಸರಳ ಮತವನ್ನು ರೂಪಿಸುವುದಾಗಿತ್ತೆಂದು ಹೇಳಬಹುದು.

ಶಿವನು ಮೂಲತಃ ದ್ರಾವಿಡದೈವ, ಮುಂದೆ ಶಿವನು ವೇದಗಳ ರುದ್ರನೊಡನೆ ಅಭಿನ್ನನಾದ. ಆಗಿನಿಂದ ಶೈವವು ಕಳಂಕಗೊಂಡಿತು. ಆದರೆ ಶಿವ ಪಾರಮ್ಯವನ್ನು ವಚನಕಾರರು ವೇದಪ್ರಮಾಣಗಳಿಂದಲೇ ಸಾಧಿಸಲು ಹೊರಟಿದ್ದು ನೋಡಿದರೆ, ಅವರ ಉದ್ದೇಶ ಈ ಕಲಂಕ ನಿವಾರಣೆ ಎಂದು ಒಪ್ಪಲು ಕಷ್ಟ. ವಚನಕಾರರಿಗೆ ಸಾತ್ವಿಕಾಚರಣೆಗಳ ಮತಪ್ರಸಾರ ಗುರಿಯಾಗಿದ್ದಿತು. ಅವರ ಚಳುವಳಿಗೆ ಅವರಿಗೆ ಅರಿವಿಲ್ಲದಂತೆಯೇ ಒಂದು ದ್ರಾವಿಡತನದ ಬಣ್ಣವುಂಟಾದದ್ದು ಮಾತ್ರ ನಿಜ.

ಸಾಮಾನ್ಯನಿಗೆ ಅರ್ಥವಾಗುವ ಉದ್ದೇಶ-ಘೋಷಣೆಗಳಿಂದ ಮಾತ್ರ. ಒಂದು ಸಿದ್ಧಾಂತವು ಜನಪ್ರಿಯವಾಗಬಲ್ಲದು. ಹಾಗಾಗಿ ವಚನಕಾರರು ವೈಚಾರಿಕ ವಿವರಣೆಗಳಿಂದಲೋ ಟೀಕೆ-ಭಾಷ್ಯಗಳ ಭಾರದಿಂದಲೋ ಮತ ಪ್ರಸಾರಕಾರ್ಯವನ್ನು ಬುದ್ಧಿವಂತ ವರ್ಗಕ್ಕೆ ಮಾತ್ರ ಸೀಮಿತಗೊಳಿಸಲು ಇಚ್ಛಿಸಲಿಲ್ಲ. ವಚನಗಳಲ್ಲಿ ಅತ್ಯಂತ ಕೆಳವರ್ಗದವನಿಗೂ ಅರ್ಥವಾಗುವ ಘೋಷಣಾರೂಪದ ಮಾತುಗಳಿರುವುದನ್ನು ನಾವು ಕಾಣಬಹುದು. ಸಾಮೂಹಿಕ ಮನಸ್ಸಿನ ಅರ್ಥಮಾಡಿಕೊಂಡಿದ್ದ ವಚನಕಾರರು ತಮ್ಮ ಪ್ರಭಾವವನ್ನು ಇಂತಹ ಮಾತುಗಳಿಂದ ಸಾಧಿಸಿದರು.

ಸಾಧಾರಣ ವ್ಯಕ್ತಿಯೊಬ್ಬನಿಗೆ ಜೀವನವನ್ನು ಬಿಟ್ಟು, ತಿರಸ್ಕರಿಸಿ, ಕಾಣದ ಮೋಕ್ಷದ ಬಗ್ಗೆ ಒಲುಮೆಯುಂಟಾಗುವುದು ಕಷ್ಟ. ಮೋಕ್ಷದ ಕಲ್ಪನೆ ಅಮೂರ್ತವಾದದ್ದರ ಜೊತೆಗೆ, ಸಾಮಾನ್ಯನಿಗೆ ಅರ್ಥವಾಗದ್ದರ ಜೊತೆಗೆ, ಇಲ್ಲಿನ ಜೀವನದ ಸಂತೋಷವನ್ನು ಬಿಡಲು ಅವನಿಗೆ ಸಾಧ್ಯವಾಗದು. ಮತಧಾರ್ಮಿಕ ನಾಯಕರು ದೀರ್ಘವಾಗಿ ಸೂಕ್ಷ್ಮವಾಗಿ ಈ ಜೀವನದ ನಶ್ವರತೆಯ ಬಗ್ಗೆಯಾಗಲೀ, ಮಿಥ್ಯತ್ವದ ಬಗ್ಗೆಯಾಗಲೀ, ಕ್ಷುಲ್ಲತೆಯ ಬಗ್ಗೆಯಾಗಲೀ ವಿಶ್ಲೇಷಣೆಯನ್ನು ನೀಡಬಹುದು; ಆದರೆ ಸಂತೋಷವನ್ನು ನೇರವಾಗಿ ಈ ಜೀವನದಿಂದ ಅನುಭವಿಸುತ್ತಿರುವವನ ತಲೆಗೆ ಇವೆಲ್ಲ ಹೋಗುವುದಿಲ್ಲ.

ಪರಲೋಕದ ಬಗ್ಗೆ ಅವನಲ್ಲಿ ಭಕ್ತಿ-ಗೌರವಗಳನ್ನು ಉಂಟು ಮಾಡುವುದು ಸಾಧ್ಯ ಮತ್ತು ಸುಲಭ. ಅದಕ್ಕೆ ಕಾರಣ ಅವನ ಮೌಢ್ಯ ಹಾಗೂ ಸುಲಭ ನಂಬಿಕೆ. ಆದರೆ ಅವನಲ್ಲಿರುವ ಸಹಜ ದೈವಿಕ ಸತ್ವವು ಜೀವನವನ್ನು ತಿರಸ್ಕರಿಸಲಾರದು. ಆದ್ದರಿಂದ ಜನಗಳು ತಾವು ಯಾವ ಮತದವರೆಂದು ಹೇಳಿಕೊಂಡರೂ ಸಾಮಾನ್ಯ ನೆಲೆಯಲ್ಲಿ ಅವರ ಜೀವನದ ರೀತಿ ಒಂದೇ ಆಗಿರುವುದನ್ನು ಕಾಣಬಹುದು. ಮೋಕ್ಷ-ದೇವರು ದೂರದವರಾಗುತ್ತಾರೆ. ಭಯಪಡಬೇಕಾದ ವಸ್ತುಗಳಾಗುತ್ತವೆ; ಆದ್ದರಿಂದ ದೂರವಿರಿಸಿಬಿಡುತ್ತಾರೆ. ಅವರನ್ನು ಆಕರ್ಷಿಸುವುದು ದೇವರಲ್ಲಿನ ಮಾನವ ದೌರ್ಬಲ್ಯಗಳು, ವಿರಕ್ತರ ಅನುರುಕ್ತಿ ಇತ್ಯಾದಿಗಳೇ!

ಇದನ್ನು ವಚನಕಾರರು ತಿಳಿದಿದ್ದರು, ಆದ್ದರಿಂದ ಅವರು ಸಾಮಾನ್ಯರಲ್ಲಿ ಸೈದ್ಧಾಂತಿಕ ಪರಿಕಲ್ಪನೆಗಳ ಬಗ್ಗೆ ಭಯವುಂಟಾಗುವಂತೆ ನಡೆದುಕೊಳ್ಳಲಿಲ್ಲ. ಜ್ಞಾನಿಗೆ ಮಾತ್ರ ಮೋಕ್ಷವೆಂದು ಹೇಳಲಿಲ್ಲ. ತಾವೇ ಆ ಜ್ಞಾನದ ಕೆಲಸವನ್ನು ಅಷ್ಟಾಗಿ ಮಾಡಲಿಲ್ಲ. ವಚನಕಾರರು ಜೀವನ ವಿರಕ್ತಿಯ ಬದಲು ಜೀವನಾನುರುಕ್ತಿಯನ್ನು ತೋರಿದರು. ಇದು ವಚನ ಚಳುವಳಿಯು ಹೆಚ್ಚು ಜನರನ್ನು ಆಕರ್ಷಿಸಲು ಕಾರಣವಾಯಿತು. ಅದಕ್ಕೆ ಅವರಿಗೆ ಆಗಿದ್ದ ಸಾಮಾಜಿಕ ಪರಿಸ್ಥಿತಿಯೂ ಅನುಕೂಲಕರವಾಗಿತ್ತು. ಜೈನ ಮತದಂತಹ ಮತಗಳು ಮೋಕ್ಷವೆಂದರೆ ಒಂದು ಬಗೆಯಲ್ಲಿ ಸಾಮನ್ಯರ ಭಯಕ್ಕೇ ಪೋಷಕವಾಗಿದ್ದವು. ಕೇವಲ ವಿರಕ್ತಿ ಮಾತ್ರವಲ್ಲ, ಘೋರವೂ ಕ್ರೌರ್ಯಭರಿತವೂ ಆದ ಆಚರಣೆಗಳಿಂದ ಮಾತ್ರ ಮೋಕ್ಷವೆಂದು ಅವು ಸಾರುತ್ತಿದ್ದವು. ಸಾಮಾನ್ಯನಿಗೆ ಇದರಿಂದ ಮೋಕ್ಷವು ಬಯಸಬೇಕಾದ ಸ್ಥಿತಿಯಾಗಿರದೆ ದೂರವಿರಿಸಬೇಕಾದುದೇ ಆಗಿ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ.

ಹೆಂಡತಿ ಮಕ್ಕಳನ್ನು ಮಾಯೆಯೆಂಬುದು ದೊಡ್ಡವರು ಹೇಳಬಹುದು. ಆದರೆ ಅದನ್ನು ನಂಬುವುದು ಹೇಗೇ? ಜೀವನದ ನೋವುಗಳನ್ನು ಸಹಿಸಲು ಶಕ್ತಿಕೊಡುವ ಇವರನ್ನು ಭಾವಿಸುವುದು ಹೇಗೆ? ಎಂದರೆ ಅನುಭವಕ್ಕೂ ಉಪದೇಶಕ್ಕೂ ಸಾಮಾನ್ಯನಿಗೆ ಅಂತರ ಕಾಣಿಸುತ್ತದೆ. ಆದರೆ ತಾನು ಬುದ್ಧಿವಂತನಲ್ಲದ್ದರಿಂದ ಅಂತಹವರು ಹೇಳುವುದು ನಿಜವಿರಬಹುದು. ಆದರೆ ತನಗೆ ಮಾತ್ರ ಅದು ಬೇಡವೆಂಬ ನಿಲವನ್ನು ಅವನು ತಾಳುತ್ತಾನೆ. ಈ ಕಾರಣದಿಂದ ವಚನಕಾರರು ಹೇಲಿದ 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ', 'ಸತಿಪತಿಯರು ಪ್ರತಿದೃಷ್ಟಿಯಾಗಿ ಮಾಡಬಲ್ಲಡೆ ಅದೇ ಮಾಟ, ಕೂಡಲಸಂಗಮದೇವರ ಕೂಡುವ ಕೂಟ' ಮುಂತಾದ ಹೇಳಿಕೆಗಳು ಸಾಮಾನ್ಯನಲ್ಲಿ ಗೊಂದಲವನ್ನುಂಟು ಮಾಡಲಿಲ್ಲ. ಗಂಡ-ಹೆಂಡತಿಯರು ಸಂತೋಷಕರ ಪರಿಸರ ನಿರ್ಮಾಣಕಾರರೆಂಬ ಹೇಳಿಕೆಯುಲ್ಲಿ ತಮ್ಮ ಅನುಭವವೇ ಹುದುಗಿರುವುದನ್ನು ಕಂಡು ಸಾವಮಾನ್ಯರಿಗೆ ಆಶುಭಾವನೆಯುಂಟಾಗಿರಬೇಕು. ಸಂತೋಷಕರಳಾದ ಹೆಂಡತಿಯೊಡನೆ ಸಮರಸವಾಗಿ ನಿರ್ಮಲಾಂತಃಕರಣದಿಂದ ಬದುಕು ಎಂದು ಹೆಳಿದಾಗ ಅವರಿಗೆ ಅರ್ಥವಾಗುವ ತಿಳುವಳಿಕೆಯಾಯಿತು.

ಮನುಷ್ಯನಿಗೆ ಜೀವನದಲ್ಲಿ ಸುಭದ್ರತೆಯೇ ಯಾವಾಗಲೂ ಬಯಸುವ ಸ್ಥಿತಿಯಾಗಿರುವಂತೆಯೇ ಸಾಧಿಸಲು ಕಷ್ಟಕರವಾದ ಭಾವನೆ. ಭೌತಿಕ ನೆಲೆಯಲ್ಲಿ ಹೇಳುವುದಾದರೆ ಸ್ವರಕ್ಷಣೆ ಎಲ್ಲ ಜೀವಿಗಳ

ಮೊದಲ ಕಾಳಜಿ., ಪ್ರಾಣಿಗಳಲ್ಲಿ ಹೇಗೋಮಾನವರಲ್ಲಿಯೂ ತಾನು ಬದುಕಬೇಕು, ಸಾವನ್ನು ಆದಷ್ಟು ದೂರ ನೂಕಬೇಕು, ಇರುವವರೆಗೆ ಅಪಾಯಗಳಿಂದ ದೂರವಾಗಿ ಸಮೃದ್ಧಿಯಿಂದ ಕೂಡಿರಬೇಕು ಇತ್ಯಾದಿ ಭಾವನೆಗಳು ಉದಿಸುತ್ತವೆ. ಕೇವಲ ವಾಸನೆಗಳ ಮಟ್ಟದಲ್ಲಿ ಪ್ರಾಣಿಗಳಲ್ಲಿ ನಡೆಯುವ ಜೀವನರೀತಿ ಮಾನವರಲ್ಲಿ ಸ್ವಲ್ಪ ಮಟ್ಟಿಗೆ ಬುದ್ದಿ ಪೂರ್ವಕವಾಗಿ ನಡೆಯುತ್ತದೆ. ಹೀಗಾಗಿ ಬದುಕಿರುವವರೆಗೂ ತಾನು ಸಮೃದ್ಧಿಯನ್ನು ಪಡೆದಿರಬೇಕು, ಎಂದರೆ ಎಲ್ಲ ಕಾಲದಲ್ಲಿಯೂ ತನ್ನ ದೈಹಿಕ ಆಸೆಗಳ–ಅನಿವಾರ್ಯಗಳ ತೃಪ್ತಿಬೇಕೆಂದು ಅವನು ಬಯಸುತ್ತಾನೆ. ಇದಕ್ಕೆ ಮಾನವ ಕಂಡುಕೊಂಡ ಉಪಾಯವೇ ಆಸ್ತಿಯ ಕಲ್ಪನೆ. ಆಸ್ತಿ ಎಂಬುದು ಮಾನವನು ತನ್ನ ಸುಭದ್ರತೆಗಾಗಿ ಮಾಡಿಕೊಂಡ ಪ್ರತಿಸೃಷ್ಟಿ. ಆದರೆ ಆಸ್ತಿಯ ಕಲ್ಪನೆ ಅತಿ ಜಾಣರಿಂದ ಸಾಮಾಜಿಕವಾಗಿ ಮಾರಕವಾಗಬಹುದಾದದ್ದು. ಮನುಷ್ಯ ಈ ಆಸ್ತಿಯ ಕಾರಣದಿಂದ ಇತರರ ಜೇಬಿಗೆ ಕೈಹಾಕಲು ಯೋಚಿಸುತ್ತಾನೆ. ಇತರರಿಂದ ಜಾಣತನದಿಂದ ಲಪಟಾಯಿಸುತ್ತಾನೆ. ಎಂದರೆ ಜಾನತನದಿಂದ ಅವನು ಸಹಜೀವಿಗಳನ್ನು ಶೋಷಿಸುತ್ತಾನೆ. ಹೀಗಾಗಿ ಸುಭದ್ರತೆಯ ಭಾವನೆಯಿೀಯುವ ಆಸ್ತಿ ಮಾರಕವಾದ ಹಾಗೆ ನೋಡಿಕೊಂಡರೆ ಸಾಕೆಂದು ವಚನಕಾರರು ದೈಹಿಕ ಇಚ್ಛೆಗಳ ಪೂರೈಕೆಯನ್ನು ಸಹಜವಾದ ಮಟ್ಟದವರೆಗೆ ಮಾನ್ಯ ಮಾಡಿದರು. ಇದರಿಂದ ಕಾಡಿನ ನಿಸ್ಸಂತೋಷಕರ ಬದುಕಿನಿಂದಲೇ ಸದ್ಗತಿಯೆಂದು ಸಾರಿದ ಇತರ ಮತಗಳ ಉಪದೇಶಕ್ಕಿಂತ ವಚನಕಾರರ ಮಾತು ಅವರಿಗೆ ಹೆಚ್ಚು ಆತ್ಮೀಯವಾಗಿ ಕಾಣಿಸಿತು.

ವಚನಕಾರರ ಚಳುವಳಿಗೆ ಭಕ್ತಿ ಚಳುವಳಿ ಎಂದು ನಾವು ಕಲ್ಪಿಸಬಾರದು. ಏಕೆಂದರೆ ವಚನಕಾರರು ದೇವಸ್ಥಾನಗಳನ್ನು ಧಿಕ್ಕರಿಸಿದರು. ಪೌರೋಹಿತ್ಯವನ್ನು ಪುಡಿಪುಡಿ ಮಾಡಿದರು. ಜಾತಿ ವ್ಯವಸ್ಥೆಗೆ ಅಪಾಯ ತಟ್ಟಿದಾಗ, ಹೊಸ ಧರ್ಮಗಳು ಮತಾಂತರಕ್ಕೆ ಪ್ರಲೋಭೆಗಳನ್ನು ಒಡ್ಡಿದಾಗ, ಅದನ್ನು ತಡೆಗಟ್ಟಲು ಭಾರತದ ಎಲ್ಲ ಕಡೆ ಅಥವಾ ಕೆಲವು ಭಾಗಗಳಲ್ಲಿ ಭಕ್ತಿ ಚಳುವಳಿಗಳನ್ನು ಹುಟ್ಟುಹಾಕಲಾಯಿತು. ಭಕ್ತಿ ಅದಕ್ಕೆ ಪರಿಹಾರೋಪಾಯವಾಗಿ ಬಂತು. ಭಕ್ತಿ ಚಳುವಳಿಯ ನಾಯಕರುಗಳೆಲ್ಲ ಸಾಮಾನ್ಯವಾಗಿ ಬ್ರಾಹ್ಮಣರಾಗಿದ್ದರು. ಬೇರೆಯವರಿಗಿಂತ ಬ್ರಾಹ್ಮಣ ಮೇಲು ಎಂಬ ಸಾಮಾಜಿಕ ವ್ಯವಸ್ಥೆಯನ್ನು ಎತ್ತಿ ಹಿಡಿಯುವುದೇ ಅವರ ಆಸೆ ಮತ್ತು ಉದ್ದೇಶವಾಗಿತ್ತು. ಆದರೆ ವಚನಕಾರರ ಸಮಾಜ ಬದಲಾವಣೆಯಲ್ಲಿ ಆಳವಾಗಿ ತೊಡಗಿಕೊಂಡಿದ್ದರು. ಅವರು ದೇವೋನ್ಮಾದದ ಜನರಾಗಿರಲಿಲ್ಲ.

"ಭಕ್ತಿಯೆಂಬುದ ಮಾಡಬಾರದು;

ಕರಗಸದಂತೆ ಹೋಗುತ್ತ ಕೊಯ್ವುದು ಬರುತ್ತ ಕೊಯ್ವುದು' –(ಸ.ವ.ಸಂ:೧ ವ.ಸಂ, ೨೧೨)

ಈ ವಚನದಲ್ಲಿ ಬಸವಣ್ಣನವರು ಖಡ್ಗವಾದರೆ ಒಮ್ಮುಖವಾಗಿ ಘಾಸಿ ಮಾಡಬಲ್ಲದು. ಕರಗಸವಾದರೆ ಹೋಗುತ್ತ ಬರುತ್ತ ಕೊಯ್ವುದು ಎಂದು ಹೇಳಿ ಹೆಚ್ಚು ಪರಿಣಾಮವನ್ನುಂಟು ಮಾಡಿದ್ದಾರೆ"೪.

ವಚನ ಚಳುವಳಿ ಸಾಮಾಜಿಕ ಸಮಾನೀಕರಣಕ್ಕಾಗಿ ನಡೆದ ಪ್ರಭೋದಮಯ ಪ್ರತಿಭಟನೆ, ಆಧ್ಯಾತ್ಮೀಕರಣ, ಅದರ ನಿಜವಾದ ಅರ್ಥದಲ್ಲಿ ಸಾಮಾಜೀಕರಣವಾಗಿದೆ. ಆದುದರಿಂದಲೇ ವಚನಕಾರರು ನೈಜಧರ್ಮವನ್ನು, ಅಂದರೆ ಮಾನವನ ಅಖಂಡತೆಯನ್ನು ನಂಬಿ ಬದುಕಿದ ಧರ್ಮವನ್ನು ಅನುಸರಿಸಿದರು, ಸಾಂಸ್ಥೀಕರಣಗೊಂಡ ಮತವನ್ನಲ್ಲ. ತಮ್ಮ ಸ್ವಂತ ಆಧ್ಯಾತ್ಮಿಕ ಅನುಭವ ಮತ್ತು ಹೊಸ ಚಿಂತನೆಯ ಬೆಳ್ಳಂಬೆಳಕಿನಲ್ಲಿ ಅವರು ಧರ್ಮವನ್ನು ವ್ಯಾಖ್ಯಾನ ಮಾಡಿದರು.

ಆಧ್ಯಾತ್ಮಿಕತೆಯೆಂದರೆ ಸಾಮಾನ್ಯನಿಗಲ್ಲ, ಅದರ ಅಭಿವ್ಯಕ್ತಿ ಸಾಮಾನ್ಯ ಭಾಷೆಯಿಂದ ಸಾಧ್ಯವಿಲ್ಲ ಎಂಬ ಸಾಂಪ್ರದಾಯಿಕ ನಂಬಿಕೆಯಿಲ್ಲದ್ದರಿಂದ ಕನ್ನಡಕ್ಕೆ ವಚನಕಾರರ ಕಾಲದಲ್ಲಿ ಯಜಮಾನ್ಯ ಲಭಿಸುವಂತಾಯಿತು. ನಾವಾಗಲೇ ಸೂಚಿಸಿರುವಂತೆ ಬೇರೆ ಕಡೆಗಳಿಂದ ಬಂದವರು ಕೂಡ ಪ್ರಾಯಶಃ ಕನ್ನಡ ಕಲಿತು ಕನ್ನಡದಲ್ಲಿ ವಚನಗಳನ್ನು ಬರೆದರು. ಎಲ್ಲರ ಬಾಯಲ್ಲೂ ಕನ್ನಡ; ಎಲ್ಲೆಲ್ಲೂ ಕನ್ನಡ – ಎಂಬ ಪರಿಸ್ಥಿತಿ ಆಗ ಉಂಟಾಗಿರಬೇಕು. ಈ ರೀತಿಯು ಈಗಿನ ನಮಗೆ ಮಾರ್ಗದರ್ಶಕವಾಗಿದೆಯೆಂಬುದರಲ್ಲಿ ಅನುಮಾನವಿಲ್ಲ. ಕನ್ನಡಕ್ಕೆ ಯೋಗ್ಯಸ್ಥಾನವನ್ನು ಕೊಡುವುದೆಂದರೆ ಆ ಭಾಷೆಯನ್ನು ಮಾತ್ರ ಬಲ್ಲವನ ಬಗ್ಗೆ ಕಕ್ಕುಲತೆ ಮತ್ತು ಕನ್ನಡ ಭಾಷೆಯ ಸಾಮರ್ಥ್ಯದ ಬಗ್ಗೆ ನಂಬಿಕೆ ಇವುಗಳನ್ನು ಇರಿಸಿಕೊಂಡು ಕಾರ್ಯ ಶೀಲರಾಗುವುದು.

"ಸಮಾನತೆ –ನೈತಿಕತೆ ಮೂಲವಾದ ಮಾನವೀಯ ಸಮಾಜದ ತಮ್ಮ ಕ್ರಾಂತಿಕಾರಕ ಆಶಯಗಳಿಗೆ, ಸತ್ಯಶುದ್ಧ ಜೀವನಿಷ್ಠೆಗೆ ಪೂರಕವಾದ ಸರಳ ಸಹಜ ಸಶಕ್ತ ಅಭಿವ್ಯಕ್ತಿಯ ಮಾರ್ಗವಾಗಿ 'ವಚನ'ವನ್ನು ಶರಣರು ಹದಗೊಳಿಸಿಕೊಂಡರು. ಜನಸಮುದಾಯದ ಅಂತರಂಗವನ್ನು ದೀಪ್ತಗೊಳಿಸಬಲ್ಲ ಸಾರ್ಥಕ ಪ್ರಾಮಾಣಿಕ ಅಭಿವ್ಯಕ್ತಿಯ ಕಾಳಜಿಯೇ 'ವಚನ'ದ ಶಿಲ್ಪವನ್ನು ರೂಪಿಸಿತು. ಸ್ವಾನುಭವದ ಸೂಕ್ಷ್ಮ ಲಯಗಳನ್ನು ಅನುಭಾವದ ಸಂಕೀರ್ಣ ಭಾವಸ್ತರಗಳನ್ನು ಅನ್ಯಹೃದಯವೇದ್ಯವಾಗಿಸುವ ಪರಿಣಾಮಕಾರಿ ಸಂವಹನದ ಬಗೆಗಿನ ಶರಣರ ಗಂಭೀರ ಕಾಳಜಿಯನ್ನು 'ವಚನ'ದ ವಿನೂತನ ಸತ್ವ ಸಿದ್ಧಿಸಿದೆ. ಚಂಪು, ರಗಳೆ, ಷಟ್ಪದಿ ಇತ್ಯಾದಿ ಶಿಷ್ಟ ಸಾಹಿತ್ಯದ ಸಿದ್ಧ ಮಾದರಿಗಳನ್ನು, ಯತಿ ಗಣ ತಾಳಬದ್ಧ ಮಾರ್ಗವನ್ನು ನಿರಾಕರಿಸಿ ಆಡಮಾತಿನ ಸಹಜ ಲಯಗಾರಿಕೆಯನ್ನು ಮೈಗೂಡಿಸಿಕೊಂಡ 'ವಚನ'ದ ಮುಕ್ತ ಬಂಧದಲ್ಲಿ ಮೂರ್ತಾಮೂರ್ತ ಪ್ರಪಂಚದ ಭಾವಸೂಕ್ಷ್ಮತೆಗಳನ್ನು ಶಾಬ್ದಿಕರೂಪಗಳಲ್ಲಿ ಸೆರೆಹಿಡಿದುದು ವಚನ ಚಳುವಳಿಯ ಅಪೂರ್ವ ಆವಿಷ್ಕಾರ"೫. ವಚನ ಚಳುವಳಿ ಮಾಡಿದ ಮತ್ತೊಂದು ಪವಾಡವೆಂದರೆ ಸಮಾಜದ ಎಲ್ಲ ಸ್ತರಗಳ ಜನರಿಗೆ ಮಾತು ಕಲಿಸಿದ್ದು. ವಚನಗಳನ್ನು ಬರೆದವರ ಹೆಸರುಗಳನ್ನು ಪರಿಶೀಲಿಸುತ್ತಾ ಹೋದರೆ ರಾಜ್ಯಬೊಕ್ಕಸದ ಅಧಿಕಾರಿಯಾದ ಬಸವಣ್ಣನಿಂದ ಹಿಡಿದು, ಕಾಡಿನಲ್ಲಿ ಕಟ್ಟಿಗೆ ತಂದು ಮಾರಿ ಜೀವಿಸುತ್ತಿದ್ದ ಮೋಳಿಗೆ ಮಾರಯ್ಯನವರಿಗೆ : ಸಂಸ್ಕೃತ ಅಭ್ಯಾಸ ಮಾಡಿ ಪಂಡಿತರಾಗಿದ್ದ, ಯಥೇಚ್ಛವಾಗಿ ವಚನಗಳಲ್ಲಿ ಸಂಸ್ಕೃತೋಕ್ತಿಗಳನ್ನು ಉಲ್ಲೇಖಿಸುವ ಉರಿಲಿಂಗಪೆದ್ದಿಯಿಂದ ಹಿಡಿದು ಪ್ರಾಯಶಃ ಕನ್ನಡವನ್ನು ಮಾತ್ರ ಚೆನ್ನಾಗಿ ತಿಳಿದಿದ್ದ ಹೆಂಡದ ಮಾರಯ್ಯನವರೆಗೆ; ಕಾವ್ಯಮಯವಾಗಿ ಅನುಭವಗಳನ್ನು ಕೇಳಿಕೊಳ್ಳಬಲ್ಲ ಮಹಾದೇವಿಯಕ್ಕನಿಂದ

ಹಿಡಿದು ಈಗ ಒಂದೇ ವಚನವು ಉಪಲಬ್ಧವಿರುವ ಸೂಳೆ ಸಂಕವ್ವೆಯವರೆಗೆ; ಅತ್ಯಂತ ಸೂಕ್ಷ್ಮವಾದ ವಿಡಂಬನೆಯ ಮಾತುಗಳಿಂದ ಸಮಾಜವನ್ನು ಚುಚ್ಚುವ ಅಲ್ಲಮನಿಂದ ಹಿಡಿದು ತೀರ ವಾಚ್ಯವೆಂಬ ರೀತಿಯಲ್ಲಿಯೇ ಕೆಡುಕೆನ್ನಿಸಿದ್ದರ ಬಗ್ಗೆ ಸಿಡಿದೇಳುವ ಅಂಬಿಗರ ಚೌಡಯ್ಯನವರಿಗೆ ವಚನಕಾರರ ವೈವಿಧ್ಯವನ್ನೆಲ್ಲ ವಚನಕಾರರ ಸಮುದಾಯದಲ್ಲಿ ಅಡಕವಾಗಿ ಕಾಣಬಹುದು. ಅಂದರೆ ಸಮಾಜವೇ ತನ್ನ ಅನೇಕ ಧ್ವನಿಗಳಿಂದ ಏಕಕಂಠವಾಗಿ ಸೊಲ್ಲೆರಿಸಿದ್ದು ಈ ಕಾಲದಲ್ಲಿಯೇ. ವೈವಿಧ್ಯದ ರೀತಿಯಿಂದ ಹೇಗೋ ಸಂಖ್ಯೆಯ ದೃಷ್ಟಿಯಿಂದಲೂ ಹಾಗೇ. ಲೇಖಕರ ಸಂಖ್ಯೆ ಈ ಕಾಲದಲ್ಲಿ ಅಭೂತಪೂರ್ವವಾದ ರೀತಿಯಲ್ಲಿ ಬೆಳೆದದ್ದನ್ನು ಕಾಣುತ್ತೇವೆ. ಇದುವರೆಗೆ ಹೆಣ್ಣುಮಕ್ಕಳು ಕನ್ನಡದಲ್ಲಿ ಬರಹಗಳನ್ನು ಬರೆದದ್ದೇ ಇಲ್ಲ; ಕಂತಿಯ ಕಲ್ಪನೆ ಇತ್ತೀಚಿನದು, ಐತಿಹಾಸಿಕವಲ್ಲ. ಆದರೆ ಈ ಚಳುವಳಿಯ ಕಾಲದಲ್ಲಿ ಇದ್ದಕ್ಕಿದ್ದಂತೆ ಬರಹಗಾರ್ತಿಯರು ಮೂಡಿದುದಷ್ಟೇ ಅಲ್ಲ. ಅವರ ಸಾಧನೆ ಅಪೂರ್ವವಾದದ್ದು. ಮಹಾದೇವಿಯಕ್ಕನ ವಚನಗಳ ಕಾವ್ಯಸೌಂದರ್ಯ ಎಲ್ಲ ಮಾನದಂಡದಿಂದಲೂ ಶ್ರೇಷ್ಠವಾದದ್ದೆಂಬ ಬಗ್ಗೆ ಈಗಾಗಲೇ ಅಸಂಖ್ಯಾತ ಲೇಖನಗಳು ಬಂದಿವೆ. ಮುಕ್ತಾಯಕ್ಕ ತನ್ನ ವಚನಗಳಲ್ಲಿ ವಿವರಿಸುವ ಸೂಕ್ಷ್ಮ ವಿಚಾರಗಳು ಅವಳ ತಿಳಿವನ್ನು ಸೂಚಿಸುತ್ತದೆ. ಬರಹಗಾರರ ಸಮೂಹವೇ ಈ ಕಾಲದಲ್ಲಿ ಕ್ರಿಯಾಶೀಲವಾಗಿತ್ತು.

ಇಷ್ಟೊಂದು ಜನ, ಇಷ್ಟೊಂದು ವಿಧವಾಗಿ ಬರೆದದ್ದು ಹೇಳಿದ್ದು ಸಹಜವಾಗಿಯೇ ವಿಫುಲ ಸಾಹಿತ್ಯರಾಶಿಯಾಯಿತು. ಸಿದ್ಧರಾಮ ಒಂದೆಡೆ 'ಅಲ್ಲಮನ ವಚನ ಎರಡೆಂಬತ್ತು ಕೋಟಿ, ಅಪ್ಪಯ್ಯಗಳ ವಚನ ನಾಲ್ಕು ಲಕ್ಷದ ಮೂವತ್ತಾರು ಸಾಸಿರ. ಅಕ್ಕ ನಾಗಮ್ಮನ ವಚನ ಮೂರು ಲಕ್ಷದ ತೊಂಬತ್ತಾರು ಸಾಸಿರ. ಮಡಿವಾಳಯ್ಯನ ವಚನ ಮೂರುಕೋಟಿ ಮುನ್ನೂರು. ಹಡಪದಯ್ಯಗಳ ವಚನ ಹನ್ನೊಂದು ಸಾಸಿರ. ಮರುಳಸಿದ್ಧನ ವಚನ ಅರವತ್ತೆಂಟು ಸಾಸಿರ' ಎನ್ನುತ್ತಾರೆ. ಅಲ್ಲಮನೇ ಒಂದೆಡೆ 'ಎರಡೆಂಬತ್ತು ಕೋಟಿ ವಚನಗಳ ಹಾಡಿ ಹಾಡಿ ಹಲವು ಹಂಬಲಿಸಿತ್ತೆನ್ನ ಮನವು' ಎಂದು ಮೇಲೆ ಹೇಳಿದ ಸಿದ್ಧರಾಮನ ಮಾತನ್ನು ಸಮರ್ಥಿಸುತ್ತಾನೆ. ಇಲ್ಲಿ ಸಂಖ್ಯೆಯ ವೈಪಲ್ಯದ ಬಗ್ಗೆ ಸುಳಿವನ್ನು ಕಾಣಬಹುದು. ಅಪಾರವಾದ ಸಂಖ್ಯೆಯಲ್ಲಿ ವಚನ ರಚನೆಗೊಂಡಿದ್ದಿರಬೇಕು. ಆದರೆ ಈ ವಚನಗಳಲ್ಲಿ ಹೇಳಿದ ಸಂಖ್ಯೆಗಳು ನಾವು ಈಗ ಕರೆಯುವ 'ವಚನ'ಗಳ ಸಂಖ್ಯೆಯನ್ನು ನಿಖರವಾಗಿ ಸೂಚಿಸುತ್ತದೆಯೆಂದು ಹೇಳುವುದು ಕಷ್ಟ. ಈ ಸಂಖ್ಯೆಗಳ ಬಗೆ ಎರಡು ಸಂಭವಗಳಿವೆ : ಒಂದು, ಈ ಸಂಖ್ಯೆಗಳು ಹೆಳುವ ವಚನಗಳು ಇನ್ನೇನನ್ನೋ ಸೂಚಿಸಬಹುದು; ಎರಡು, ಈ ವಚನಗಳ ಪ್ರಕ್ಷಿಪ್ತವಿರಬಹುದು, ಅಥವಾ ಅತ್ಯುಕ್ತಿಯಾಗಿರಬಹುದು. ಏಕೆಂದರೆ ಈ ಸಂಖ್ಯೆಗಳನ್ನು ನಂಬುವುದು ಕಷ್ಟ. ಅಲ್ಲದೆ, ವಚನಕಾರರಲ್ಲಿ ಹಲವರು ತಾವು ರಚಿಸಿರುವ ವಚನ ಸಂಖ್ಯೆಗಳನ್ನು ತಾವೇ ಉಲ್ಲೇಖಿಸುವ ಹಲವು ವಚನಗಳು ದೊರೆಯುತ್ತವೆ. ಮೇಲೆ ಉದಾಹರಿಸಿರುವ ಅಲ್ಲಮನ ವಚನವನ್ನು ನೋಡಬಹುದು. ಹಾಗೆಯೇ ಸಿದ್ಧರಾಮನು ತಾನು ರಚಿಸಿರುವ ವಚನಗಳ ಸಂಖ್ಯೆಯನ್ನು ಅರವತ್ತೆಂಟು ಸಾವಿರವೆಂದು ಹೇಳುತ್ತಾನೆ. ಇವು ನಿಜವಾದ ಸಂಖ್ಯೆಗಳಾದರೆ ಆಯಾ ವಚನಕಾರರು

ತಮ್ಮ ಜೀವಮಾನದ ಕೊನೆಯಲ್ಲಿ ಈ ಸಂಖ್ಯೆಗಳು ಸೂಚಿಸುವ ವಚನಗಳನ್ನು ಹೇಳಿರಬೇಕು. ಇಲ್ಲವೇ ಇನ್ನು ಮುಂದೆ ತಾವು ವಚನಗಳನ್ನು ಬರೆಯಲು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿಯಲ್ಲಿ ರಚಿಸಿರಬೇಕು. ಈ ಎರಡೂ ಅಸಂಭವನೀಯವೆಂದೇ ಕಾಣುತ್ತದೆ. ಒಂದು ಉದಾಹರಣೆಯನ್ನು ನೋಡಬಹುದು. ಮೇಲೆ ಉದ್ಧರಿಸಿರುವ ಸಿದ್ಧರಾಮನ ವಚನದಲ್ಲಿ 'ಎಮ್ಮಯ್ಯಗಳ ವಚನ ವಚನಕ್ಕೊಂದು ನೀಲಮ್ಮನ ವಚನ ಲಕ್ಷದ ಹನ್ನೊಂದು ಸಾಸಿರ' ಎಂದಿದೆ. ಈ ಸಂಖ್ಯೆ ನಿರ್ದಿಷ್ಟವಾಗಿದ್ದರೆ ನೀಲಮ್ಮ ಅನಂತರ ವಚನಗಳನ್ನು ಬರೆದಿರಬಾರದು. ಆದರೆ ಬಸವಣ್ಣನು ಕೂಡಲಸಂಗಮದಲ್ಲಿದ್ದು ಐಕ್ಯಕ್ಕೆ ಕೊಂಚ ಕಾಲ ಮುಂಚೆ ನೀಲಮ್ಮನಿಗೆ ಹಡದಪ್ಪಣ್ಣನ ಮೂಲಕ ಹೇಳಿಕಳಿಸಿದಾಗ, ಕೊಟ್ಟ ಉತ್ತರರೂಪದ ವಚನ ನಮಗೆ ದೊರಕುತ್ತದೆ. ಹೀಗಾಗಿ ಕೊನೆಗಾಲದವರೆಗೂ ಸಾಧ್ಯವಾದಾಗಲೆಲ್ಲ ವಚನಕಾರರು ವಚನಗಳನ್ನು ಬರೆದಿರಬೇಕು. ಇನ್ನೂ ಸಂಶೋಧನೆ ನಡೆಸಿದ ನಂತರವೇ ಈ ಸಂಖ್ಯೆಗಳು ಖಚಿತವಾಗಿ ಏನನ್ನು ಸೂಚಿಸುತ್ತವೆಂದು ಹೇಳಬಹುದು. ಒಟ್ಟಾರೆ ಈ ಸಂಖ್ಯೆಗಳು ಆ ಕಾಲದಲ್ಲಿ ರಚಿತವಾದ ವಚನಗಳ ಅಪಾರತೆಯನ್ನು ಸೂಚಿಸುತ್ತವೆ. ಅಲ್ಲದೆ ಈಗ ದೊರೆಯುವ ಸಂಖ್ಯೆಯೂ ಸಾಕಷ್ಟು ದೊಡ್ಡ ಪ್ರಮಾಣದ್ದೇ; ಅಳಿದು ಹೋಗಿರಬಹುದಾದದ್ದೂ ಇದ್ದರೆ ಆಗ ಇನ್ನೂ ಬಹುಸಂಖ್ಯೆಯ ವಚನಗಳು ರಚಿತವಾದದ್ದರಲ್ಲಿ ಅನುಮಾನವಿಲ್ಲ.

ವಚನಗಳನ್ನು ಅನುಭವ ಮಂಟಪದಲ್ಲಿ ಚರ್ಚೆಯ ಕಾಲದಲ್ಲಿ ಶರಣರು ಹೇಳುತ್ತಿದ್ದರು; ಅದನ್ನು ಬರೆದುಕೊಳ್ಳುವ ವ್ಯವಸ್ಥೆಯಿತ್ತು; ಭಂಡಾರಿ ಶಾಂತರಸನು ಅದರ ಮೇಲ್ವಿಚಾರಕ ಇತ್ಯಾದಿ ಅಭಿಪ್ರಾಯಗಳನ್ನು ಕೆಲವರು ಅಲ್ಲಲ್ಲಿ ವ್ಯಕ್ತಪಡಿಸಿದ್ದಾರೆ. ಆದರೆ ಭಂಡಾರಿ ಶಾಂತರಸನು ಬೊಕ್ಕಸದಲ್ಲಿ ಕೆಲಸಕ್ಕಿದ್ದುದರಿಂದ ಆ ಹೆಸರು ಬಂದಿರಬೇಕು, ಹೇಗೋ ಆತನ ವಿಶೇಷಣ ವಚನ ಭಂಡಾರಿಯೆಂದು ಆಗಿಬಿಟ್ಟಿದೆ. ಅಲ್ಲದೆ, ಆಧ್ಯಾತ್ಮಿಕ ಚರ್ಚೆಗೆ ಸಂಬಂಧಿಸಿದಲ್ಲದ– ಉದಾಹರಣೆಗೆ ಆತ್ಮ ನಿರೀಕ್ಷಣೆ, ಸಮಾಜವಿಡಂಬಣೆ ಇವುಗಳಿಗೆ ಸಂಬಂಧಿಸಿದ – ವಚನಗಳು ಹೇಗೆ ಉಳಿದುಬಂದವು? ಅಲ್ಲದೆ ಅನುಭವಮಂಟಪವೆಂಬುದು ಅನೇಕರು ಈಗ ಕಲ್ಪಿಸಿಕೊಂಡಿರುವಂತೆ ಅತ್ಯಂತ ವ್ಯವಸ್ಥಿತ ಸಂಸ್ಥೆಯಾಗಿದ್ದಿರಬಹುದಾದ ಸಂಭವವೂ ತುಂಬ ಕಡಿಮೆ. ಆದ್ದರಿಂದ ವಚನಕಾರರಿಗೆ ತಾವು ಸಾಹಿತ್ಯವನ್ನು ಸೃಷ್ಟಿಮಾಡುತ್ತಿದ್ದೇವೆ. ಮುಂದೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸ್ಥಾನವಿರುತ್ತದೆ ಇತ್ಯಾದಿ ಕಲ್ಪನೆಗಳು ಇತರ ಸಾಂಪ್ರದಾಯಿಕ ಕವಿಗಳಿಗಿದ್ದಂತೆ ಇರದಿದ್ದರೂ, ತಾವು ಅಂದುಕೊಂಡದ್ದನ್ನು ಹೇಳಬೇಕು, ಹೇಳಿದ್ದನ್ನು ಉಳಿಸಬೇಕು ಎಂಬ ಆಲೋಚನೆಯಿದ್ದುದರಲ್ಲಿ ಸಂದೇಹವಿಲ್ಲ. ವಚನಗಳನ್ನು ಹಾಡುತ್ತಿದ್ದ ಸಂಪ್ರದಾಯವಿದ್ದ ಉಲ್ಲೆಖಗಳು ರಾಘವಾಂಕನ 'ಸಿದ್ಧರಾಮ ಚಾರಿತ್ರ'ದಲ್ಲಿ, 'ಅನು ಒಲಿದಂತೆ ಹಾಡುವೆ' ಇತ್ಯಾದಿ ಅನೇಕ ವಚನಕಾರರ ಮಾತುಗಳಲ್ಲಿ ಬರುತ್ತವೆ. ಆದ್ದರಿಂದ ಆಶುಕವಿಗಳಾಗಿ ಹಾಡುವ ಬದಲು ಬರೆಯುವ ಮೂಲಕ ಅಭಿವ್ಯಕ್ತಿಮಾಡಿ ನಂತರ ಹಾಡುವ ಸಂಪ್ರದಾಯ ಬಂದಿರಬಹುದು. ಸ್ತೋತ್ರರೂಪದ, ಆತ್ಮನಿರೀಕ್ಷಣರೂಪದ ವಚನಗಳಾದರೆ ಶಿವನ ಮುಂದೆ ಹಾಡಬಹುದು; ಆದರೆ ಕೋಪ ಜಿಗುಪ್ಸೆ ಉಪದೇಶಗಳಂತಹ ಭಾವನೆಯಿರುವ ವಚನಗಳನ್ನು

ಸುಮ್ಮನೆ ಬರೆದಿಟ್ಟಿರಬೇಕು. ವಚನಕಾರರು ಉಪಯೋಗಿಸುವ ಅಂಕಿತ ಅಥವಾ ಮುದ್ರಿಕೆಗಳು ತಾವು ಬರೆದ ವಚನಗಳ ಗುರುತಿಗಾಗಿ ಇರುವಂಥವು. ಎಂದರೆ ಈ ಚಳುವಳಿಯ ಕಾಲದಲ್ಲಿನ ಬರವಣಿಗೆ ಒಂದು ಬಗೆಯಲ್ಲಿ ಆಧುನಿಕ ಕಾಲದ 'ನವೋದಯ'ವೆಂದು ಗುರುತಿಸುವ ಕಾಲದಲ್ಲಿ ನಡೆದಂತಹ ಬರವಣಿಗೆಯ ರೀತಿಯದು.

ಈ ರಚನೆಯು ಎಷ್ಟು ವ್ಯಾಪಕವಾಗಿತ್ತೆಂದರೆ, ಶಿವಭಕ್ತನಾದವನು ವಚನಗಳನ್ನು ಬರೆಯಬೇಕು ಎಂಬ ಭಾವನೆ ಹಲವರಲ್ಲಿತ್ತು. 'ಲಿಂಗವಂತರು ತಾವಾದ ಬಳಿಕ ಅನುಭವದ ವಚನಗಳ ಹಾಡಿ ಸುಕದುಃಖಗಳಿಗೆ ಭೇಧ್ಯವಾಗಿರಬೇಕು' ಎಂದು ಸಿದ್ಧರಾಮನು ಹೇಳುವಲ್ಲಿ ಈ ಮನೋಭಾವವನ್ನು ಕಾಣುತ್ತೇವೆ. ಆದ್ದರಿಂದ ವಚನಗಳ ರಚನೆಗೆ ಬಹುಸಂಖ್ಯೆಯಲ್ಲಿ ಜನರು ಕೈಹಾಕಿದರು. ಹೀಗೆ ಜನಸಾಮಾನ್ಯರಿಗೆ ತಾವೂ ಅನ್ನಿಸಿದ್ದನ್ನು ಹೇಳಿಕೊಳ್ಳಬೇಕೆಂಬ ಹಂಬಲವುಂಟಾಯಿತು. ಈ ಹಿಂದೆ ಕಾವ್ಯರಚನೆ ಮಾಡುತ್ತಿದ್ದವರು ಕೆಲವು ವರ್ಗಕ್ಕೆ ಮಾತ್ರ ಸೇರಿದವರು, ಬಹುತೇಕ ಉಭಯಕವಿಗಳು : ಸಂಸ್ಕೃತ–ಕನ್ನಡಗಳಲ್ಲಿ ಉದ್ದಾಮ ಪಂಡಿತರು, ತಾವು ಕವಿಗಳೆಂಬ ಪ್ರಜ್ಞೆಯುಳ್ಳವರು. ವಚನಕಾಲದ ಈ ಬರಹಗಾರರಿಗೆ ತಮ್ಮ ಬರಹ ಕಾವ್ಯವೆಂಬ ಭ್ರಮೆಯಿರಲಿಲ್ಲ. ಅವರಲ್ಲಿ ಬಹಳ ಮಂದಿ ಸಮಾಜದ ತೀರ ಕೆಳವರ್ಗಗಳಿಂದ ಬಂದವರು. ಅನೇಕರಿಗೆ ಗೊತ್ತಿದ್ದನ್ನು ಕೇವಲ ಕನ್ನಡ. ಆದ್ದರಿಂದ ಕನ್ನಡ ಸಾಹಿತ್ಯ ಸಾಮಾನ್ಯರ ಗುಡಿಸಲುಗಳಿಂದ ಹೊರಹೊಮ್ಮಿತು. ಸಾಮಾನ್ಯ ಜನರ ಚಿಂದಿಬಟ್ಟೆಯು ಹಿಂದಿರುವ ಹೃದಯಗಳನ್ನು ಹೊಕ್ಕಿತು. ತಾವೂ ಏನಾದರೂ ಹೇಳಬೇಕೆಂಬ ತುಡಿತ, ಅನ್ನಿಸಿದ್ದನ್ನು ಹೆಳುವ ಆತ್ಮಸ್ಥೈರ್ಯಗಳು ಸಾಮಾನ್ಯರಲ್ಲಿ ಉಂಟಾದದ್ದು ವಚನ ಚಳುವಳಿಯು ಜನಸಾಮಾನ್ಯರಲ್ಲಿ ಉಂಟು ಮಾಡಿದ ಎಚ್ಚರ, ಮೂಡಿಸಿದ ಪ್ರಜ್ಞೆ, ನೀಡಿದ ಆತ್ಮವಿಶ್ವಾಸಗಳಿಂದಾದ ಪರಿಣಾಮ.

ಹೀಗೆಂದಾಕ್ಷಣ ಚಳುವಳಿಯ ಕಾಲದಲ್ಲಿ ರಚಿತವಾದದ್ದೆಲ್ಲ ಗಟ್ಟಿ ಚಿನ್ನವೆಂದು ನಾವು ಕುರುಡಾಗಿ ಹೇಳಬಾರದು. ಅತ್ಯುತ್ಕೃಷ್ಟ ಬರಹಗಳ ಹಾಗೆಯೇ ಅತ್ಯಂತ ಸಾಮಾನ್ಯ ರಚನೆಗಳೂ ಅಲ್ಲಿವೆ. ತುಂಬ ಕಾವ್ಯಮಯವಾದ ಬರಹದಂತೆಯೇ ವಾಚ್ಯ ಬೈಗುಳಗಳವರೆಗೆ ಈ ಬರಹಗಳ ಗುಣ ವೈವಿಧ್ಯವಿದೆ. ಈ ಬಗ್ಗೆ ನಮಗೆ ಅಸಮಾಧಾನ ಬೇಕಿಲ್ಲ. ಏಕೆಂದರೆ ಯಾವುದೇ ಕಾಲದಲ್ಲಿ ಬರುವ ಬರಹಗಳಲ್ಲಿ ಅಮೂಲ್ಯವಾದದ್ದು ತುಂಬ ಕಡಿಮೆ. ಆದರೆ ಆ ಕಾಲದಲ್ಲಿ ವಚನ ರಚನೆಯೆಂಬುದು ಒಂದು ಬಗೆಯಲ್ಲಿ ಫ್ಯಾಷನ್ ಎಂಬ ಮಟ್ಟಿಗೆ ಹರಡಿಕೊಂಡಿತ್ತು.

ವಚನಗಳನ್ನು ಬರೆಯುವುದಲ್ಲದೆ ಹಿರಿಯರ ವಚನಗಳನ್ನು ಕಲಿತು, ಅವುಗಳಿಗೆ ವ್ಯಾಖ್ಯಾನ ಮಾಡುವುದು ವ್ಯಾಪಕವಾಗಿಯೇ ಬೆಳೆದಿತ್ತೆಂದು ತೋರುತ್ತದೆ. ಚಳುವಳಿಯ ಒಂದು ಅಂಗವಾದ ಈ ವ್ಯಾಖ್ಯಾನ ಕಾರ್ಯವನ್ನೇ ತಮ್ಮ ಜೀವನೋಪಾಯವಾಗಿ ಮಾಡಿಕೊಂಡಿದ್ದವರೂ ಉಂಟು. ತಾವೇ ಶ್ರೇಷ್ಠರೆಂದು ಜನಗಳಿಗೆ ಮಂಕುಬೂದಿಯೆರಚಿ ಡಾಂಭಿಕತನದಿಂದ ಜೀವಿಸುತ್ತಿದ್ದವರೂ ಹಲವರಿದ್ದರು. ಹೆಳುತ್ತಿದ್ದದು ದೊಡ್ಡ ದೊಡ್ಡ ಆದರ್ಶಗಳು, ಆದರೆ ಮಾಡುತ್ತಿದ್ದುದು ಅನಾಚಾರ –

ಇಂತಹ ನಿದರ್ಶನಗಳನ್ನು ಕಂಡು ಸ್ವತಃ ಕೆಲವು ವಚನಕಾರರು ಖಂಡಿಸಿದ್ದಾರೆ. 'ನಡೆನುಡಿ ಶುದ್ಧವುಳ್ಳವರು ಪುರಾತನರ ವಚನವ ಓದಿದಡೆ, ಅನುಭಾವವ ಮಾಡಿದಡೆ ಮೆಚ್ಚುವರಲ್ಲದೆ; ನಡೆನುಡಿ ಶುದ್ಧವಿಲ್ಲದವರು ಪುರಾತನರ ಅನುಭಾವವ ಮಾಡಿದಡೆ ಮೆಚ್ಚುವರೆ' ಎಂಬ ಮೋಳಿಗೆ ಮಹಾದೇವಿಯ ವಚನದಂತಹ ಮಾತುಗಳು ಈ ಡಾಂಭಿಕತನವನ್ನು ವಿಡಂಬಿಸುತ್ತವೆ. ಭೌಗೋಳಿಕವಾಗಿಯೂ ಸಾಂಖ್ಯಿಕವಾಗಿಯೂ ವಿಶಾಲ ಭೂಮಿಕೆಯಲ್ಲಿ ನಡೆಯುತ್ತಿದ್ದ ವಚನ ಚಳುವಳಿಯಲ್ಲಿ ಈ ಬಗೆಯ ಕುಟಿಲತೆಗಳೂ ಕಾಣುತ್ತಿದ್ದಿರಬಹುದು ನಮಗೆ ಮುಖ್ಯವಾದದ್ದು ಈಗ ಅದಲ್ಲ. ಅತ್ಯಂತ ಸಾಮಾನ್ಯರ ಹೃದಯ ಮಿಡಿತವೂ ಬರಹವಾಗಿ ಮೂಡಿಬರಲು, ಶೂದ್ರ ಸಮಾನಳಾಗಿದ್ದ ಹೆಂಗಸೂ ತನ್ನ ಅನ್ನಿಸಿಕೆಯನ್ನು ಸ್ವತಂತ್ರವಾಗಿ ಹೇಳಿಕೊಳ್ಳಲು ಅನುಕೂಲಕರವಾದ ವಾತಾವರಣವನ್ನು ವಚನ ಚಳುವಳಿಯು ಸೃಷ್ಟಿ ಮಾಡಿತ್ತೆಂಬುದೇ ನಮಗೆ ಪ್ರಸ್ತುತವಾದ ಅಂಶ. ವಚನ ರಚನೆಯೊಡನೆ, ಅವುಗಳನ್ನು ವ್ಯಾಖ್ಯಾನಿಸುವುದು, ಅರ್ಥೈಸುವುದು ಮುಂತಾದ ಕಾರ್ಯಗಳೂ ನಡೆದಿದ್ದವು. ಒಟ್ಟಾರೆ ಜ್ಞಾನಪ್ರಸಾರ ಕಾರ್ಯವು ಜನಸಾಮಾನ್ಯರ ನೆಲೆಯಲ್ಲಿಯೂ ಆಗುತ್ತಿತ್ತು. ಎಂಬುದು ಚಳುವಳಿಯ ಒಂದು ದೊಡ್ಡ ಸಾಧನೆ.

ಒಟ್ಟಾರೆ ವಚನ ಚಳುವಳಿಯು ಜನಪರವಾದುದಾಗಿತ್ತು. ಅದಕ್ಕೆ ಅನೇಕ ಮಿತಿಗಳಿದ್ದವು. ಅವುಗಳಲ್ಲಿ ಅತ್ಯಂತ ಮುಖ್ಯವಾದುದೆಂದರೆ ಈ ವಚನ ಚಳುವಳಿಯೂ ಲೌಕಿಕ ಚಳುವಳಿಯಾಗಿರದೆ, ಧಾರ್ಮಿಕ–ಮತೀಯ ಸ್ವರೂಪದ್ದಾಗಿತ್ತು. ಆ ಕಾಲದಲ್ಲಿನ ದೇವರು–ದಿಂಡರು, ಮತ–ಧರ್ಮಗಳ ಹೆಸರಿನಲ್ಲಿ ನಡೆಯುತ್ತಿದ್ದ ಬೀಭತ್ಸಕರ ಆಚರಣೆಗಳೋ, ಮತದಲ್ಲಿನ ಪರಿಮಿತಿಗಳೋ, ಹುಟ್ಟು–ಜಾತಿಗಳ ಕಾರಣದಿಂದ ತೋರುತ್ತಿದ್ದ ವ್ಯತ್ಯಾಸಗಳೋ ಅಥವಾ ಜನಾಂಗಿಕವೆನಿಸಿದ ಕಾರಣಗಳೋ ಈ ಚಳುವಳಿಗೆ ಪ್ರೇರಣೆಗಳನ್ನೊದಗಿಸಿರಬೇಕು. ಅದು ಮೊದಮೊದಲು ಹೊಗೆಯಾಡುತ್ತಿದ್ದು ಬರುಬರುತ್ತ ಜನರ ವಿಶ್ವಾಸವನ್ನು ಗಳಿಸುತ್ತ ಕೊನೆಗೆ ಜ್ವಾಲೆಯಾಗಿ ಪರಿಣಮಿಸಿತು. ಮೂಲತಃ ಮತಧಾರ್ಮಿಕವಾದರೂ ಅದಕ್ಕೆ ಹಿಂದಿನ ಮತಗಳ ಅರಿಷ್ಟಗಳು ಉಂಟಾಗ ಬಾರದೆಂಬ ಕಾರಣದಿಂದಲೋ ಏನೋ ಸಾಮಾಜಿಕ ಸಮಾನತೆಗಳನ್ನು ತಮ್ಮ ಹೊಸಮತದ ಮಿತಿಯಲ್ಲಿ ಅಳವಡಿಸಿಕೊಂಡರು. ಜೈನ ಮತವೂ ಇಂತಹುದೇ ಆದರ್ಶವನ್ನು ಪಡೆದಿತ್ತು 'ಪೊಲೆಯಂ ಶ್ರಾವಕನಾದೊಡೆ ಪಲರೊಳವಂ ಮಾನ್ಯನಪ್ಪೊನ್' ಎಂದು ಬ್ರಹ್ಮಶಿವನೆಂಬ ಹನ್ನೆರಡನೆಯ ಶತಮಾನದ ಜೈನಕವಿಯು ಹೇಳುತ್ತಾನೆ. ಆದರೆ ಈ ಆದರ್ಶವು ಎಷ್ಟರಮಟ್ಟಿಗೆ ಮುಂದೆ ಉಳಿದುಬಂದಿತೆಂಬುದು ಈಗ ಎಲ್ಲರಿಗೂ ಗೊತ್ತಿರುವ ವಿಚಾರ. ಬಸವನ ಕಾಲದಲ್ಲಿಯೇ ಈ ಸಮಾನತೆಯೂ ಜನಗಳನ್ನು ಕೆರಳಿಸಿತು. ಪುರಾಣಗಳ ಪ್ರಕಾರ ಉಚ್ಚ–ನೀಚ ಕುಲಗಳ ಗಂಡು–ಹೆಣ್ಣುಗಳಲ್ಲಿ, ವೈವಾಹಿಕ ಸಂಬಂಧವುಂಟಾಗಲು ಪ್ರೋತ್ಸಾಹ ನೀಡಿದ್ದರಿಂದ ರಕ್ತಪಾತವುಂಟಾಗಿ ವೀರಶೈವ ಸಂಘಟನೆಯು ಮುರಿದುಬಿತ್ತು, ಮುಂದಂತೂ ಚಳುವಳಿ ಮಾಯವಾಗಿ ವೀರಶೈವ ಎಲ್ಲ ಬೇರೆ ಭಾರತೀಯ ಮತಗಳಂತೆ ಆಗಿಬಿಟ್ಟಿತು.

ಚಳುವಳಿಯ ಕಾಲದಲ್ಲಿಯೂ ಹೊಸಮತಕ್ಕೆ ಬಂದವರು ಕೂಡ ತಮ್ಮ ಹಳೆಯ ಜಾತಿಗಳ ವಾಸನೆ ಬಿಡದೆ ಹೆಣಗಾಡಿದ್ದನ್ನು ಕಂಡಿದ್ದೇವೆ. ಆದರೆ ಈ ಚಳುವಳಿಯ ಕಾಲದಲ್ಲಿ ಜನತೆಯ ಅತ್ಯಂತ ಕೆಳವರ್ಗದ ಕಣ್ಣಲ್ಲಿ ಕಾಣಿಸಿಕೊಂಡ ಹೊಳಪು ಎಂಥ ಕಾಲಕ್ಕೂ ಮಾರ್ಗದರ್ಶನವಾಗಬಲ್ಲಂತಹುದು. ನಿಧಾನವಾಗಿ ಜನಗಳಲ್ಲಿ ಧೈರ್ಯೋತ್ಸಾಹಗಳನ್ನು ತುಂಬಿದ ಚಳುವಳಿಯ ನಾಯಕರ ಮುಂದಾಲೋಚನೆ ಸಾಮೂಹಿಕ ಮನಸ್ಸಿನ ಅರಿವು ಇವುಗಳು ಅಸಮಾನ್ಯ. ಅಲ್ಲದೆ ಆ ಕಾಲದ ನಾಯಕರಲ್ಲಿಯೂ ವಿವಿಧ ಮನೋಭಾವದ ಜನಗಳು ಮುಂದಾಳುಗಳಾದರು. ಅತ್ಯಂತ ಪ್ರಮುಖ ವಚನಕಾರರು ಕೂಡ ವಿಭಿನ್ನ ಸಾಮಾಜಿಕ ವರ್ಗ–ಮನೋಭಾವಗಳವರು. ಅವರುಗಳ ಮಧ್ಯೆ ಭಿನ್ನಾಭಿಪ್ರಾಯಗಳು ಇದ್ದಿರಬಹುದು. ಆದರೆ ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಅವರು ದೊಡ್ಡದು ಮಾಡಿಕೊಂಡು ಚಳುವಳಿಯ ವಿನಾಶಕ್ಕೆ ಒಳಗಿನಿಂದಲೇ ಕಾರಣವನ್ನು ತಂದುಕೊಳ್ಳಲಿಲ್ಲ ಪ್ರಾಯಶಃ ಬಸವಣ್ಣನಂತಹ ನಾಯಕರ ಅವಿರತ ಉತ್ಸಾಹ, ಅತ್ಯಾಧುನಿಕ ಮನಸ್ಸು ಆ ಕಾಲದ ಸಾಂಪ್ರದಾಯಿಕ ಜನಗಳಿಗೆ ಆಘಾತವಿತ್ತು. ಚಳುವಳಿ ಮುರಿದುಬೀಳಲು ಕಾರಣವಾಯಿತೆಂಬುವುದು ಒಂದು ರೀತಿಯ ಸಮಾಧಾನಕರ ವಿಷಯವಾಗಿದೆ. ಏಕೆಂದರೆ ಎಷ್ಟೋ ಚಳುವಳಿಯನ್ನು ಸಾಯುವುದು ನಾಯಕರ ಆಂತರಿಕ ಭಿನ್ನಾಭಿಪ್ರಾಯ ಗುಮ್ಮನಗುಸಕುಗಳ ಪಿತೂರಿಯಿಂದ, ಆದರೆ ವಚನ ಚಳುವಳಿ ವಿಫಲವಾದದ್ದು ಇಡೀ ಚಳುವಳಿಯ ಹಿಂಬಾಲಕರು ಹೊರಗಿನ ಹಾಗೂ ಒಳಗಿನ ಸಾಂಪ್ರದಾಯ ಶರಣರನ್ನು ಎದುರಿಸಬೇಕಾಗಿದ್ದ ಕಾರಣದಿಂದ.

ಇಂತಹ ಸಂಘಟನೆಯು ಸಫಲವಾಗಬೇಕಾದರೆ ಸಾಮಾನ್ಯರು ಹೆಚ್ಚಿನ ಹಿಂಬಾಲಕರಾಗಿರಬೇಕು. ತಮ್ಮ ನಾಯಕರನ್ನು ನಂಬಿ ಹಿಂಬಾಲಿಸುವ ಜನ ಸಮುದಾಯ ಅವಶ್ಯಕ. ಬಸವಣ್ಣ ಅಂತಹ ಜನಸಾಮಾನ್ಯರ ಅತೀವ ವಿಶ್ವಾಸಕ್ಕೆ ಒಳಗಾದ ನಾಯಕನಾಗಿದ್ದಂತೆ ಕಂಡುಬರುತ್ತದೆ. ಬಸವಣ್ಣನ ವೈಯಕ್ತಿಕ ಆಕರ್ಷಣೆ ಹಾಗೂ ಅವನು ತನ್ನ ಗುರಿಯಲ್ಲಿಟ್ಟಿದ್ದ ನಿಸ್ಪೃಹತೆ ಇವುಗಳು ಜನರಲ್ಲಿ ಅವನ ಬಗೆಗಿನ ಎಲ್ಲಿಲ್ಲದ ಆಕರ್ಷಣೆ ಕಾರಣವಾಗಿರಬೇಕು. ಪುರಾಣಗಳಲ್ಲಿ ಬಸವನ ಅನೇಕ ಪವಾಡಗಳು ಕಂಡುಬರುತ್ತವೆ ವಾಸ್ತವವಾಗಿ ಅವನಿಗೆ ಕಾಲದೃಷ್ಟಿಯಿಂದ ತುಂಬ ಹತ್ತಿರವಾದ ಕಾವ್ಯಗಳಲ್ಲಿ ಕಾಣಬರುವ ಪವಾಡಗಳು ಐತಿಹಾಸಿಕ ಸಂಗತಿಗಳ ಪ್ರತಿಮಾತ್ಮಕ ಅಭಿವ್ಯಕ್ತಿಗಳೆನಿಸುತ್ತವೆ. ಬಸವಣ್ಣನನ್ನು ಮೋಸಗೊಳಿಸುವ ಉದ್ದೇಶದಿಂದ ಅವನನ್ನು ಬಂದಿವಿಡಿಯುವ ಉದ್ದೇಶದಿಂದ, ಬಂದವರು ಕೊನೆಗೆ ಅವನ ಅಯಸ್ಕಾಂತಸದೃಶ ವ್ಯಕ್ತಿತ್ವಕ್ಕೆ ಮಾರುಹೋಗಿ ಅವನ ಹಿಂಬಾಲಕರಾಗಿರಬಹುದಾದ ಸಂಗತಿಯು ದೇಹದ ಮೇಲೆ ಧರಿಸಿದ್ದ ಆ ಕಪಟಿಗಳ ಬದನೆಕಾಯನ್ನು ಲಿಂಗಗಳನ್ನಾಗಿ ಬಸವಣ್ಣನು ಪರಿವರ್ತಿಸಿದನೆಂಬ ಕಥೆಯಾಗಿರಬೇಕು. ಹಾಗೆಯೇ, ಎಲ್ಲ ಮನುಷ್ಯರೂ ಮೂಲತಃ ಸಮಾನರು, ದೇಹ ರಚನೆಯಲ್ಲಾಗಲೀ ರಾಗ ಭಾವಗಳ ದೃಷ್ಟಿಯಿಂದಾಗಲೀ ಭಿನ್ನರಲ್ಲ ಎಂದು ತೋರಿಸಿರಬಹುದಾದ ಬಸವಣ್ಣನ ಒಂದು ಕೃತ್ಯವೇ ಸಂಬೋಳಿ ನಾಗದೇವನ ಕಾಲುಬೆರಳನ್ನು ಸೀಳಿ ಹಾಲು ಸುರಿಯುವ ಹಾಗೆ ಮಾಡಿದ ಪವಾಡವಾಗಿ ಬಂದಿರಬೇಕು. ಅರಮನೆಯ ಹಣವನ್ನು ತಮ್ಮ ಜನಕ್ಕೆ ದಾನವಿತ್ತು

ದುರುಪಯೋಗಪಡಿಸಿಕೊಳ್ಳುತ್ತಿದ್ದಾನೆಂದು ಆರೋಪ ಬಂದಾಗ ಬಸವನು ತನ್ನ ಋಜುತ್ವವನ್ನು ತೋರ್ಪಡಿಸಿಕೊಟ್ಟ ಪ್ರಸಂಗ ಕಾಲಕ್ರಮೇಣ ಬಿಜ್ಜಳನ ಭಂಡಾರದಲ್ಲಿರಬೇಕಾದ ಹಣದ ಇಮ್ಮಡಿ ಮುಮ್ಮಡಿ ನೂರ್ಮಡಿ ಹಣವನ್ನು ಉಂಟು ಮಾಡಿದನೆಂಬ ಕತೆಯಾಗಿ ಬೆಳೆದಿರಬೇಕು. ಇಷ್ಟೆಲ್ಲಾ ಹೇಳುವ ಉದ್ದೇಶ ವೆಂದರೆ ಬಸವಣ್ಣನ ವ್ಯಕ್ತಿತ್ವ ಅನೇಕ ಆಕರ್ಷಕ ಅಂಶಗಳ ಒಟ್ಟಂದವಾಗಿದ್ದಿರಬೇಕು ಎಂಬುದು. ಅವನು ಸಮ್ಮೋಹಕ ಭೃತ್ಯಾಚಾರಿ, ಅತ್ಯಂತ ಸಮಾನತಾವಾದಿ, ಪ್ರಮಾಣಿಕ ಅಧಿಕಾರಿ, ಇನ್ನೂ ಇಂಥ ಗುಣಗಳ ಪಟ್ಟಿಮಾಡಬಹುದು, ಆದರೆ ಇದು ಅನವಶ್ಯಕ. ಒಟ್ಟಾರೆ ಅವನದು ವಿವಿಧ ಮನೋಭಾವಗಳ ಜನಗಳನ್ನು ತನ್ನೆಡೆಗೆ ಸೆಳೆದುಕೊಳ್ಳಬಲ್ಲ ವ್ಯಕ್ತಿತ್ವ. ಅವನನ್ನು ಈ ಕಾರಣದಿಂದಲೇ ಹಿಂಬಾಲಕರೆಲ್ಲ ಪೂರ್ತಿ ನಂಬಿದರು. ಮಿಕ್ಕ ನಾಯಕರು ಅವನ ಉದ್ದೇಶ-ಗಮ್ಯಗಳು ಅಸಲಿಯಾದವೆಂದು ನಂಬಿದ್ದರಿಂದ ಅವನೊಡನೆ ತಾವುಪಡೆದಿರಬಹುದಾದ ಭಿನ್ನಾಭಿಪ್ರಾಯಗಳನ್ನು ದೊಡ್ಡದು ಮಾಡಲಿಲ್ಲ.

ಬಸವಣ್ಣನು ಅತ್ಯಂತ ಚತುರನಾದ ಸಂಘಟಕಾರ, ತಾನು ತನ್ನ ಸ್ವಂತ ಬುದ್ಧಿಯಿಂದ ಸಂಪಾದಿಸಿದ ಉನ್ನತ ಹುದ್ದೆಯನ್ನು ತನ್ನ ಆದರ್ಶವನ್ನು ನನಸಾಗಿಸಲು ನಡೆಸುತ್ತಿದ್ದ ಚಳುವಳಿಯ ಉಪಯೋಗಕ್ಕಾಗಿ ಉಳಿಸಿಕೊಂಡ. ತನ್ನ ಪ್ರಭಾವ ಬೀರಲು ತನ್ನ ಲೌಕಿಕ ಹುದ್ದೆಯೂ ಕಾರಣವೆಂದು ಅವನು ಪ್ರಾಯಶಃ ನಂಬಿದ್ದ, ಹುದ್ದೆಗಾಗಿ ಅವನು ನಂಬಿರಲಿಲ್ಲ. ತಾನು ತನ್ನ ಹುದ್ದೆಯನ್ನು ಬದುಕಲು ಮಾಡುವ ಕೈಕೂಲಿಯ ಸಮಾನವೆಂದು ನಂಬಿರುವುದಾಗಿ ಅವನೇ ತನ್ನ ವಚನವೊಂದರಲ್ಲಿ ಹೇಳಿ ಕೊಳ್ಳುತ್ತಾನೆ. ಅದನ್ನು ನಂಬಬಹುದು. ಬಿಜ್ಜಳನ ಜೊತೆಗೆ ಅನೇಕ ಬಾರಿ ಘರ್ಷಣೆಯುಂಟಾದರೂ ಅವನು ತನ್ನ ಹುದ್ದೆಯನ್ನೇಕೆ ಬಿಡಲಿಲ್ಲ? ಅದು ಯಾರಪ್ಪನ ಗಂಟೂ ಅಲ್ಲ; ತನ್ನ ಸ್ವಂತ ಬುದ್ಧಿಶಕ್ತಿಯಿಂದ ಪಡೆದದ್ದು ಒಂದು ಕಾರಣವಾದರೆ, ಅದರಿಂದ ಜನರನ್ನು ಭೇಟಿಯಾಗಲು ಅವರ ಮೇಲೆ ಪ್ರಭಾವ ಬೀರಲು ಸಾಧ್ಯ ಎಂಬ ಆತನ ವಿವೇಚನೆ ಇನ್ನೊಂದು ಕಾರಣ.

ಬಸವಣ್ಣನು ವೀರಶೈವಕ್ಕೆ ಬಂದ ಎಲ್ಲರನ್ನೂ ಸಮಾನರಾಗಿ ಕಾಣಬೇಕೆಂಬ ಆದರ್ಶವುಳ್ಳವನು. ಅವನ ಗುರಿ ತನ್ನ ಸಮಾಜದ ಪರಿಧಿಯಲ್ಲಿ ಜೇನು ಹುಟ್ಟಿನಂತಹ ಬಿಗಿಯಾದ ಸಂಘಟನೆಯನ್ನು ಸಾಧಿಸುವುದು. ಆದರೆ ಅಂಥ ಸಂಘಟನೆ ಪರಿಣಾಮಕಾರಿಯಾಗಬೇಕಾದರೆ ಚಳುವಳಿ ಹಿರಿದಾಗಬೇಕು. ಹೀಗಾಗಿ ಅವನು ಜನರನ್ನು ಆದಷ್ಟೂ ತನ್ನ ಚಳುವಳಿಗೆ ಸೆಳೆಯಲು ಪ್ರಯತ್ನಿಸುತ್ತಿದ್ದ. ಅವನು ವಾಸ್ತವವಾದಿಯಾಗಿದ್ದರಿಂದ ಜನರನ್ನು ತನ್ನ ತೆಕ್ಕೆಯಲ್ಲಿ ತಂದುಕೊಳ್ಳುವುದು ಮುಖ್ಯ ಆಮೇಲೆ ಅವರನ್ನು ಆದರ್ಶದತ್ತ ನಡೆಯುವಂತೆ ಪ್ರಚೋದಿಸಬಹುದೆಂದು ತಿಳಿದವನು. ಹೀಗಾಗಿ ಜನ ಸಾಮಾನ್ಯರನ್ನು ಅವನು 'ಎಲವೋ ಎಲವೋ ಪಾಪಕರ್ಮವ ಮಾಡಿದವನೇ, ಎಲವೋ ಎಲವೋ ಬಹ್ಮಹತ್ಯವ ಮಾಡಿದವನೇ ಒಮ್ಮೆ ಶರಣೆನ್ನೆಲವೋ, ಒಮ್ಮೆ ಶರಣೆಂದರೆ ಪಾಪಕರ್ಮ ಓಡುವುವು. ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನಪರ್ವತದಂಗಳೈದವು, ಒರ್ವಂಗೆ ಶರಣೆನ್ನು ನಮ್ಮ ಕೂಡಲಸಂಗಮದೇವಂಗೆ!' ಎಂಬಂತಹ ಅವನ ವಚನಗಳಲ್ಲಿ ಈ ರೀತಿ ಪಾಪಿಯನ್ನು, ಅವನಿಗೂ ಭವಿಷ್ಯವಿದೆಯಂಬ ಭರವಸೆ

ಹುಟ್ಟಿಸಿ, ತನ್ನೆಡೆಗೆ ಬರುವಂತೆ ಮಾಡಿ ಕೊಂಡ ನಾಯಕ. ಎಷ್ಟೋ ಸಲ ಬಸವಣ್ಣ ತನ್ನ ಭಿನ್ನಾಭಿಪ್ರಾಯಗಳನ್ನು ಚಳುವಳಿಯ ಹಿತದೃಷ್ಟಿಯಿಂದ ಮರೆಯುತ್ತಿದ್ದ. ಕಿನ್ನರ ಬೊಮ್ಮಯ್ಯನ ಉಳ್ಳಿಯ ಪ್ರಸಂಗವನ್ನು ನೋಡಬಹುದು. ವೈಯಕ್ತಿಕವಾಗಿ ತನಗೆ ಸರಿಹೋಗದಿದ್ದರೂ, ಕಿನ್ನರ ಬೊಮ್ಮಯ್ಯನಂಥ ಭಕ್ತನನ್ನು ಅಸಮಾಧಾನಗೊಳಿಸಲು ಇಷ್ಟವಿಲ್ಲದೆ ಉಳ್ಳಿಯ ಮೆರವಣಿಗೆಯನ್ನೇ ಅವನು ಏರ್ಪಡಿಸಿದ. ಅಂದರೆ ಅವನು ಆದರ್ಶವಾದಿ. ತನ್ನ ಆದರ್ಶದ ಎಲ್ಲ ವಿವರಗಳಲ್ಲೂ ತದ್ರೂಪಿಯಾದ ಆದರ್ಶವನ್ನು ಮಿಕ್ಕೆಲ್ಲರೂ ಹೊಂದಿರುವುದು ಅಸಾಧ್ಯ ಎಂಬುದನ್ನವರು ತಿಳಿದಿದ್ದ. ವಿವರಗಳಲ್ಲಿನ ವ್ಯತ್ಯಾಸ ಆದರ್ಶದ ವ್ಯತ್ಯಾಸವೇನಲ್ಲ ಎಂಬ ಅರಿವು ಅವನಿಗಿತ್ತು. ಅಲ್ಲದೆ ಎಲ್ಲರೂ ಪರಿಪೂರ್ಣರಾಗಿರಲು ಸಾಧ್ಯವಿಲ್ಲ ಆದ್ದರಿಂದ ಅಲ್ಪ ಸ್ವಲ್ಪ ಅರೆಕೊಲೆಗಳನ್ನು ಗಮನಿಸದೆ ಜನರೊಡನೆ ಬೆರೆಯುತ್ತಿದ್ದ ಇಂತಹವನು ಈ ಚಳುವಳಿಯ ಕೇಂದ್ರವಾದದ್ದರಲ್ಲಿ ಆಶ್ಚರ್ಯವಿಲ್ಲ. ಆದರೆ ತನ್ನ ಯಶಸ್ಸಿನಿಂದ ಸ್ಫೂರ್ತಿಗೊಂಡ ಬಸವಣ್ಣ ಎಂಟನೂರು ವರ್ಷಗಳಷ್ಟು ದೂರದ ಮುಂದಾಲೋಚನೆ ಮಾಡಿದ ಕಾರಣದಿಂದ ಚಳುವಳಿ ಮುರಿಯಿತು. ಹಾಗೆ ವಚನ ಚಳುವಳಿ ಕೊನೆಗೊಂಡಿದ್ದು ನಿಜವಾದ ದುರಂತ.

೨.೩ ಜಾನಪದ ಮತ್ತು ವಚನಕಾರರು

ಕನ್ನಡ ಸಂಸ್ಕೃತಿಯ ಪ್ರಧಾನ ಗುಣಗಳನ್ನು ನಾವು ಜನಪದ ಸಾಹಿತ್ಯ ಹಾಗೂ ಶರಣರ ವಚನ ಸಾಹಿತ್ಯದಲ್ಲಿ ಕಾಣುತ್ತೇವೆ. ಇವೆರಡೂ ಕನ್ನಡ ನೆಲದಲ್ಲಿ ಹುಟ್ಟಿ ಬೆಳೆದು ತನ್ನದೆಯಾದ ಪರಂಪರೆ ಮತ್ತು ಚರಿತ್ರೆಯನ್ನು ಹೊಂದಿವೆ. ಆದರೆ, ವಿಪರ್ಯಾಸವೆಂದರೆ ವಚನ ಸಾಹಿತ್ಯದ ಚರಿತ್ರೆಯನ್ನು ನಿಶ್ಚಿತವಾಗಿ ಹೇಳುವಂತೆ, ಜನಪದ ಸಾಹಿತ್ಯದ ಪ್ರಾಚೀನ ಚರಿತ್ರೆಯನ್ನು ಹೇಳಲಿಕ್ಕಾಗುವುದಿಲ್ಲ.

ಜನಪದ ಸಾಹಿತ್ಯ ಮಾನವನ ಜನಾಂಗದಷ್ಟೇ ಪ್ರಾಚೀನವಾಗಿದೆ. ಕಾಡಿನಲ್ಲಿ ಅಲೆಮಾರಿಯಾಗಿದ್ದ ಮಾನವ ಒಂದೆಡೆ ನೆಲೆನಿಂತು ಊರುಗಳನ್ನು ಕಟ್ಟಿಕೊಂಡು ಜೀವನ್ನಾರಂಭಿಸಿದಾಗ, ತನ್ನ ಸಮುದಾಯದೊಂದಿಗೆ ರೋಚಕವಾಗಿ ಅನುಭವಗಳನ್ನು ಹಂಚಿಕೊಳ್ಳಲಾರಂಭಿಸಿದ ಸಂಗತಿಯೇ ಜನಪದ ಸಾಹಿತ್ಯದ ಉಗಮವಾಯಿತೆಂತಲೂ ಹೇಳಬಹುದು. ಇಲ್ಲಿ ಅನುಭವಗಳು ವ್ಯಕ್ತಿಗತವಾಗಿ ಅಭಿವ್ಯಕ್ತಿಗೊಂಡಿದ್ದರೂ ಅವು ಸಮಷ್ಟಿಯ ಮುದ್ರೆ ಪಡೆದವು. ಹೀಗಾಗಿ ಜನಪದದಲ್ಲಿ ವ್ಯಷ್ಟಿಗಿಂತ ಸಮಷ್ಟಿಯೇ ಪ್ರಧಾನವೂ, ಪ್ರಮುಖವೂ ಆಯಿತು.

ಹನ್ನೆರಡನೆಯ ಶತಮಾನದ ಕರ್ನಾಟಕದ ಚರಿತ್ರೆಯಲ್ಲಿ ಇಂಥದೊಂದು ಸಾಮುದಾಯಿಕ–ಹೋರಾಟ ಮತ್ತು ಆ ಹೋರಾಟದ ಅನುಭವ, ವಿಚಾರಗಳ ಅಭಿವ್ಯಕ್ತಿ ಅಂದಿನ ಶಿವಶರಣರಿಂದ ನಡೆಯಿತು. ವ್ಯತ್ಯಾಸವಿಷ್ಟೆ ರಚನೆಗಳಲ್ಲಿ ಜನಪದ ಕವಿಗಳ ಹೆಸರು ದಾಖಲಾಗಿರುವುದಿಲ್ಲ. ಆದರೆ ವಚನಗಳಲ್ಲಿ ವಚನಕಾರನ ಅಂಕಿತ ಮುದ್ರೆ ಇರುತ್ತದೆ. ಜನಪದ ಹಾಡು, ಕಥೆ ಯಾರದ್ದೆಂದು ಹೇಳಲು ಸಾಧ್ಯವಾಗುವುದಿಲ್ಲ. ವಚನ ಇಂಥವರದ್ದೇ ರಚನೆ ಎಂದು ಹೇಳಲು ಬರುವುದು, ಆದರೆ

ಶರಣರ ಆಶಯ ಅಭಿವ್ಯಕ್ತಿಯೂ ಜನಸಾಮಾನ್ಯರ ಬದುಕನ್ನು ಕುರಿತದ್ದಾಗಿರುತ್ತದೆ. ಜನಪದರಂತೆ ಶರಣರೂ ಸಾಮುದಾಯಿಕ ನೆಲೆಯಲ್ಲಿ ತಮ್ಮ ವಚನಗಳನ್ನು ಬರೆದರು. ಸಮಕಾಲೀನ ಸಾಮಾಜಿಕ ವ್ಯವಸ್ಥೆಯಲ್ಲಿ ಒಟ್ಟಿಗೆ ಕೂಡಿಕೊಂಡು ಸಾಹಿತ್ಯ ರಚನೆ ಮಾಡಿದ್ದು ಜಗತ್ತಿನ ಬೇರೆಡೆ ಎಲ್ಲೂ ಕಾಣ ಸಿಗುವುದಿಲ್ಲ. ಹಾಗಾಗಿ ವಚನ ಸಾಹಿತ್ಯವೊಂದು ಅಪರೂಪದ ಸಾಹಿತ್ಯ ಸೃಷ್ಟಿಯೆಂತಲೇ ಹೇಳಬೇಕು.

ಜನಪದ ಸಾಹಿತ್ಯ ಜನಪದರ ತವನಿಧಿ, ಜೀವನಾನುಭವದ ರಸಘಟ್ಟ, ಬದುಕಿನ ನೋವು–ನಲಿವುಗಳನ್ನು ದುಡಿಮೆಯ ಜೊತೆ ಜೊತೆಯಲ್ಲಿ ಒಬ್ಬರಿಂದೊಬ್ಬರಿಗೆ ಹಂಚಿಕೊಳ್ಳುವರು. ಹಾಗಾಗಿ ಜನಪದ ಸಾಹಿತ್ಯ ಜನಪದರ ಬದುಕಿನ ಜೀವಸೆಲೆಯೇ ಆಗಿದೆ ಎಂದು ಹೇಳಬೇಕು. ಈ ಕಾರಣಕ್ಕಾಗಿಯೇ 'ಜನವಾಣಿ ಬೇರು ಕವಿವಾಣಿ ಹೂವು' ಎಂಬ ಮಾತು ಹುಟ್ಟಿತೆಂದು ಹೇಳಬಹುದು. ಜನಪದ ಸಾಹಿತ್ಯ ಶ್ರಮ ಸಂಸ್ಕೃತಿಯ ಪ್ರತೀಕವಾದರೆ, ಶಿಷ್ಟಸಾಹಿತ್ಯ ಪಾಂಡಿತ್ಯದ, ಉಳ್ಳವರ ಪ್ರತೀಕವಾಗಿದೆ. ಒಂದು ಜನಾಶ್ರಯದಲ್ಲಿ ಹುಟ್ಟಿ ಬೆಳೆದರೆ, ಮತ್ತೊಂದು ರಾಜಾಶ್ರಯದಲ್ಲಿ ಹುಟ್ಟಿ ಬೆಳೆಯಿತು. ಒಂದು ಲಿಪಿ ಸೌಕರ್ಯ ಹೊಂದಿ ಚರಿತ್ರೆಯಲ್ಲಿ ದಾಖಲಾದರೆ, ಮತ್ತೊಂದು ಜನಪದರ ನಾಲಿಗೆ ಮೇಲೆ ಜೀವಂತವಾಗಿ ಉಳಿದು ಚರಿತ್ರೆಯ ದಾಖಲೆಯಿಂದ ವಂಚಿತವಾಗಬೇಕಾಯಿತು. ಹೀಗಾಗಿ ಜನಪದ ಸಾಹಿತ್ಯಕ್ಕೆ ಸುದೀರ್ಘ ಪ್ರಾಚೀನ ಪರಂಪರೆಯಿದ್ದರೂ ಚರಿತ್ರೆಯಿಲ್ಲದಾಯಿತು.

ಜಾನಪದ

ಜಾನಪದವು ಅನೇಕ ಜೀವನ ವಿಧಾನಗಳ ಕೇಂದ್ರವಾಗಿದೆ. ಇಲ್ಲಿ ಹಳ್ಳಿ ಜಾನಪದವಿರುವಂತೆ ನಗರ ಜಾನಪದವಿದೆ, ಮೌಖಿಕ ಜಾನಪದವಿರುವಂತೆ ಅಕ್ಷರ ಜಾನಪದವಿದೆ, ಇಂತಹ ಹಲವು ವೈವಿಧ್ಯಮಯ ಜಾನಪದಗಳ ಜತೆಗೆ ಬುಡಕಟ್ಟು ಜಾನಪದಗಳೂ ಸೇರಿಕೊಂಡಿವೆ. ಹೀಗಾಗಿ ಜಾನಪದವನ್ನು ಸರಳೀಕರಿಸುವುದು, ಅಥವಾ ಅದಕ್ಕೊಂದು ಚೌಕಟ್ಟು ಹಾಕುವುದು ಸಾಧ್ಯವಿಲ್ಲ. ಆಯಾ ಕಾಲಘಟ್ಟದ ಎಲ್ಲ ಸವಾಲುಗಳನ್ನು ಎದುರಿಸುತ್ತ ಪಾರಂಪರಿಕ ಚೌಕಟ್ಟುಗಳನ್ನು ಮುರಿಯುತ್ತ, ಜಾನಪದವು ಜೀವವಾಹಿನಿಯಾಗಿ ನಿರಂತರ ಹರಿಯುತ್ತಲೇ ಬಂದಿದೆ.

ಜಾನಪದ ಸಾಹಿತ್ಯ ಅಂದರೆ ಏನು? ಎಂಬುದನ್ನು ಸೂತ್ರ ರೂಪದಲ್ಲಿ ಹೇಳುವುದು ತುಂಬಾ ಕಷ್ಟದಾಯಕವಾದುದು. ಏಕೆಂದರೆ ಅದರ ವ್ಯಾಪ್ತಿ ಅನಿರ್ದಿಷ್ಟವಾದುದು. ಇದು 'ಹಿಡಿದರೆ ಹಿಡಿತುಂಬ, ಬಿಟ್ಟರೆ ಜಗತುಂಬ' ಎನ್ನುವಂತಹ ಸಾಹಿತ್ಯ. ಇದಕ್ಕೆ 'ಜಾನಪದ ಸಾಹಿತ್ಯ'ವೆಂಬ ಹೆಸರೇ ಸಮರ್ಪಕವಾಗಿದೆ. 'ಜಾನಪದ ಸಾಹಿತ್ಯ'ವೆನ್ನುವುದು 'ಜಾನಪದ ವಿಜ್ಞಾನದ'ದ ಒಂದು ಭಾಗ ಮಾತ್ರ. Folk Literature ಎನ್ನುವ ಇಂಗ್ಲೀಷ್ ಶಬ್ದವನ್ನು ಕನ್ನಡದಲ್ಲಿ ಜಾನಪದ ಸಾಹಿತ್ಯ ಎಂದು ೧೯೩೧ ರಲ್ಲಿ ಮೊಟ್ಟಮೊದಲಿಗೆ ಪ್ರಯೋಗಿಸಿದವರು ಬಿ.ಎಮ್. ಶ್ರೀಕಂಠಯ್ಯ ಹಾಗೂ ಡಾ॥ ಬೇಂದ್ರೆಯವರೆಂದು 'ಗರತಿಯ ಹಾಡು' ಎಂಬ ಪುಸ್ತಕದ ಮುನ್ನುಡಿಯಿಂದ ತಿಳಿದು ಬರುತ್ತದೆ.

ಇವತ್ತಿನವರೆಗೆ ಅಪಾರವಾದ ಪ್ರೌಢ ಸಾಹಿತ್ಯವು ಬೆಳೆದು ಬಂದರೂ ಈ ಜಾನಪದ ಸಾಹಿತ್ಯ ಅಲಿಖಿತವಾಗಿಯೂ ಉಳಿದು ಬಂದಿರುವುದು ಹೇಗೆ ಎಂಬುದು ವಿಷಾದನೀಯ ಸಂಗತಿ ಎಂದು

ನಮಗೆ ಅನ್ನಿಸಬಹುದು. ಆದರೆ ಇದು ಅಷ್ಟೊಂದು ಆಶ್ಚರ್ಯದ ಸಂಗತಿ ಏನಲ್ಲ. ಈ ಸಾಹಿತ್ಯ ಈ ರೀತಿಯಲ್ಲಿ ಜೀವಂತವಾಗಿ ಉಳಿದು ಬರಬೇಕಾದರೆ ಇದರ ಲಯವೇ ಕಾರಣವೆಂದು ಹೇಳಬಹುದು. ಈ ಮಾದಕವಾದ ಲಯದ ಗುಂಗು ಮಲಗಿದವರನ್ನು ಹೊಡೆದು ಎಬ್ಬಿಸಿದರೆ, ಅತ್ತು ರಂಪ, ಮಾಡುವ ಮಗುವನ್ನು ತಟ್ಟಿ ಮಲಗಿಸುತ್ತದೆ. ಈ ಲಯ ಹಾವಿನ ಹೆಡೆಯಂತೆ ತೂಗುತ್ತದೆ. ನಮ್ಮ ಹಳ್ಳಿಗರು ತಾವು ಕೆಲಸಗಳನ್ನು ಮಾಡುತ್ತ ಹಾಡಲು ಅನುಕೂಲವಾಗುವಂತೆ ಮಾಡಿಕೊಂಡ ಈ ಲಯವು ಇಂದು ಎಂಥವರ ಮನಸ್ಸನ್ನೂ ಕೂಡ ಹಿಡಿದು ನಿಲ್ಲಿಸುತ್ತದೆ ಎಂದು ಹೇಳಬಹುದು. ಒಂದು ಸಲ ಕೇಳಿದರೆ ಸಾಕು ಮನಸ್ಸಿನಲ್ಲಿ ಅಚ್ಚಳಿಯದೇ ನಿಲ್ಲುತ್ತದೆ. ಪುಂಗಿಯ ನಾದಕ್ಕೆ ಹಾವು ತಲೆದೂಗುವಂತೆ ನಾವೆಲ್ಲರೂ ಈ ಲಯಕ್ಕೆ ಮುಗ್ಧರಾಗಿ ತಲೆದೂಗುತ್ತೇವೆ. ಬಿಡಿ ಬಿಡಿ ಪದ್ಯಗಳಾಗಿರುವ ಈ ಪದ್ಯಗಳು ಹೆಚ್ಚಾಗಿ ತ್ರಿಪದಿಯಲ್ಲಿರುತ್ತವೆ.

ನಮ್ಮ ಕನ್ನಡ ಸಾಹಿತ್ಯದ ಅತ್ಯಂತ ಪುರಾತನ ಶಾಸನ (ಕಪ್ಪೆ ಅರೆಭಟ್ಟನನ್ನು ಕುರಿತಿರುವ)ವನ್ನು ತಗೆದುಕೊಂಡರೆ ಅಲ್ಲಿ ಕಂಡುಬರುವ ತ್ರಿಪದಿಗಳಿಂದ ಇಂದಿಗೂ ಜಾನಪದ ಗೀತೆಗಳ ಜಾಹ್ನವಿಯಂತಿರುವ ಈ ಧಾಟಿಗಿರುವ ಮನ್ನಣೆಯ ಅರಿವಾಗುವದು. ಆ ಪದ್ಯಗಳು ಜಾನಪದ ಪದ್ಯಗಳಲ್ಲ ಎಂಬುದು ನಿಜ. ಆದರೆ ಅದರಲ್ಲಿರುವ ಲಯ ಮಾತ್ರ ಅಪ್ಪಟ ದೇಶೀಯ ಜಾನಪದೀಯ ಲಯವಾಗಿದೆ ಎಂದು ನಿರ್ಧಾರವಾಗಿ ಹೇಳಬಹುದು. ಶಾಸನಗಳಲ್ಲಿ ಕಂಡುಬರುವ ತ್ರಿಪದಿಗಳೆಲ್ಲವೂ ಅಂಶಗಣ ಘಟಿತವಾಗಿರುವುದೂ ಜನಪದ ಸಾಹಿತ್ಯದಲ್ಲಿ ಇಂದಿಗೂ ಈ ಲಕ್ಷಣ ಹಾಗೆಯೇ ಉಳಿದು ಬಂದಿರುವುದೂ ಈ ಛಂದೋವಿಧಾನದ ಪ್ರಾಚೀನತೆಯನ್ನು ಸಮರ್ಥಿಸುವದು. ಇನ್ನು ಕನ್ನಡ ಶಾಸನಗಳಲ್ಲಿ ವಿಶಿಷ್ಟವಾದ ವೀರಗಲ್ಲುಗಳನ್ನು ನೋಡಿದರೆ, ಅಲ್ಲಿಯ ವೀರನ ಕಲಿತನ-ಕಾದಾಟಗಳ ವರ್ಣನೆಯನ್ನು ನೋಡಿದರೆ, ಅದರಲ್ಲಿ ಜನಪದ ಭಾವನೆಯೂ ಜಾನಪದ ಲಯವೂ ವ್ಯಕ್ತವಾಗುವುದು.

ಪ್ರೌಢ ಸಾಹಿತ್ಯದ ಆಕರ್ಷಣೆಗೆ ಬೆರಗಾದ ಮಹಾನುಭಾವರು ಜಾನಪದ ಸಾಹಿತ್ಯದಿಂದ ದೂರ ಸರಿಯಬಹುದು ಆದರೆ, ಈ ದೇಶೀ ಲಯದಿಂದ ದೂರವಾಗುವದು ಅಸಾಧ್ಯವೆಂದು ಕಾಣುತ್ತದೆ. 'ಮಳಿ ಬಿಟ್ಟರೂ ಮರದ ಹನಿ ಬಿಡದು' ಎನ್ನುವಂತಾಗಿದೆ.

ನಮ್ಮ ಪುರಾತನ ಕವಿಗಳು ಬರೆದ ಎಷ್ಟು ಪದ್ಯಗಳು ಇಲ್ಲಿಯವರೆಗೆ ಉಳಿದು ಬಂದಿರುವವೊ, ಇದನ್ನು ಯಾರೂ ಅರಿಯರು. ಅವರು ಬರೆದ ಎಷ್ಟೋ ಪದ್ಯಗಳು ಹೇಳ ಹೆಸರಿಲ್ಲದೆ ಮಾಯವಾಗಿರಬಹುದಾಗಿದೆ. ಇನ್ನು ಕೆಲವು ಪದ್ಯಗಳು ಕಾಲ ಕಾಲಕ್ಕೆ ಪರಿವರ್ತನ ಹೊಂದಿ ಹೋಗಿವೆಯಾದರೂ ಮುಂದೆ ಬಂದ ಕವಿಗಳು ಈ ಲಯವನ್ನೇ ಹಿಡಿದು ಹೊಸ ಪದ್ಯಗಳನ್ನು, ಸಾಹಿತ್ಯವನ್ನು ನಿರ್ಮಿಸುತ್ತಾ ಬಂದಿದ್ದಾರೆ.

ಈ ದೇಶೀಲಯದಲ್ಲಿ ಸ್ಥಿತಿಸ್ಥಾಪಕತ್ವ ಗುಣವಿದೆ. ಈ ಲಯವನ್ನು ನಮಗೆ ಅನುಕೂಲವಾಗುವಂತೆ ಹಿಗ್ಗಿಸಿಯೋ-ಕುಗ್ಗಿಸಿಯೋ, ಎಳೆದೋ-ಜಗ್ಗಿಯೋ, ಹಾಡಬಹುದು. ಯಾವ ರೀತಿಯಿಂದ ಜಗ್ಗಾಡಿದರೂ

ಈ ಲಯದ ಮಾರ್ದವತೆ ಕೆಡದೆ, ಹೆಚ್ಚಾಗುತ್ತದೆ. ಕೇಳಿದವರ ತಲೆಯಲ್ಲಿ ಮನಸ್ಸಿನಲ್ಲಿ ಸುಳಿದಿರುಗಿ ಅವರು ಹಗಲು ರಾತ್ರಿ ಆ ಲಯವನ್ನೇ ಗಮನಿಸುವಂತೆ ಮಾಡುತ್ತದೆ.

ತ್ರಿಪದಿಯೇ ಈ ಸಾಹಿತ್ಯದ ಮೂಲ ಮಟ್ಟೆಂದು ಹೇಳಬಹುದು.

ಉಲ್ಲೇಖಗಳು

೧. 'ಕವಿರಾಜ ಮಾರ್ಗ'ದಲ್ಲಿ – ಕವಿರಾಜ ಮಾರ್ಗಕಾರನು ಇದನ್ನು ಉಲ್ಲೇಖಿಸಿದ್ದಾನೆ.

೨. 'ನಾಗವರ್ಮನು' 'ಛಂದೋಂಬುಧಿ'ಯಲ್ಲಿ ಇದನ್ನು ದೇಶ್ಯ ಜಾತಿಯಲ್ಲಿ ಅಳವಡಿಸಿದ್ದಾನೆ.

೩. 'ನೇಮಿಚಂದ್ರ'ನು ವನಕೆವಾಡನ್ನು ಉದಾಹರಿಸುವಾಗ ತ್ರಿಪದಿಯನ್ನು ಬಳಸಿದ್ದಾನೆ.

೪. 'ಸೋಮೇಶ್ವರ'ನು– ಮಾನಸೋಲ್ಲಾಸದಲ್ಲಿ ತ್ರಿಪದಿಯನ್ನು ಒರಳಲ್ಲಿ ಧಾನ್ಯ ಕುಟ್ಟುವಾಗಲೂ ಶೃಂಗಾರ ಮಿಶ್ರಲಂಬಗಳನ್ನು ವರ್ಣಿಸುವಾಗಲೂ ಯುದ್ಧದಲ್ಲಿ ಸೋತವರನ್ನು ಹಂಗಿಸುವಾಗಲೂ ಪ್ರಯೋಗಿಸುವರೆಂದು ಹೇಳಿದ್ದಾನೆ. ಆದುದರಿಂದ ತ್ರಿಪದಿಯೇ ಜಾನಪದ ಸಾಹಿತ್ಯದ ಗಾಯತ್ರಿ.

ಪಂಪ–ಹರಿಹರರಂತಹ ಮಹಾಕವಿಗಳು ಹಾಗೂ ವಚನಕಾರರು–ದಾಸರು ಮುಂತಾದವರು ಈ ದೇಶೀಭಾಷೆಯ ಜನಪದ ಸಾಹಿತ್ಯದ ಸುಳಿಯಿಂದ ದೂರವಿರಲು ಸಾಧ್ಯವಾಗಿಲ್ಲ.

ಐತಿಹಾಸಿಕ ಅಂಶಗಳು

'ರಾಷ್ಟ್ರೀಯ ಜೀವನದ ದಾಖಲೆ ಇತಿಹಾಸವಾದರೆ ಜನಪದ ಸಾಹಿತ್ಯವು ಪ್ರಾಗೈತಿಹಾಸಿಕ ಪರಂಪರೆಯಾಗಿದೆ'– ಎಂದು ಜೇಮ್ಸ್ ಹೆಸ್ಟಿಂಗ್ಸ ಅವರು ಹೇಳುತ್ತಾರೆ.

ಆದರೆ ಭಾರತದ ದೃಷ್ಟಿಯಿಂದ ಈ ಮಾತನ್ನು ವಿಚಾರಿಸಿದರೆ ಎರಡನೆಯ ಮಾತೇನೋ ಸರಿ ಅಂದರೆ ಜನಪದ ಸಾಹಿತ್ಯ ಪರಂಪರೆಯಿಂದ ಸಾಗಿ ಬಂದಿದೆ. ಆದರೆ ಇತಿಹಾಸ ಬರೆಯುವ ಅಥವಾ ಜೀವನದ ದಾಖಲೆಯನ್ನು ಬರೆದಿಡುವ ಸಂಪ್ರದಾಯ ಭಾರತೀಯನಾದ ಯಾವನಲ್ಲಿಯೂ ಮೂಡಿ ಬರಲಿಲ್ಲ. ಈ ದೇಶವನ್ನಾಳಿದ ಯಾವ ಮಹಾರಾಜನೂ ಕೂಡ ಈ ಕಾರ್ಯ ಮಾಡಲಿಲ್ಲ. ಎಲ್ಲೋ ಒಬ್ಬರು ಈ ಕಾರ್ಯಕ್ಕೆ ಕೈ ಹಾಕಿದರೂ ಅತ್ಯಲ್ಪ ಕಾರ್ಯ ಮಾಡಿದರಲ್ಲದೇ ಇತಿಹಾಸವೆನ್ನುವ ಪೂರ್ಣ ಅರ್ಥದಲ್ಲಿ ಮಾಡಲಿಲ್ಲ.

ಇತಿಹಾಸ ಎಂದರೆ 'ಹೀಗೆ ಇತ್ತು.' ಅಂದರೆ ಅಂದಂದಿನ ಜೀವನ ರಾಜನ ಆಳಿಕೆ ರಾಜಕೀಯ ಏರು–ಪೇರು ಧಾರ್ಮಿಕ ಕಾರ್ಯಕಲಾಪಗಳು, ಕಲೆ ಕೈಗಾರಿಕೆಗಳು ಇತ್ಯಾದಿ ಎಲ್ಲದರುಗಳ ಚರಿತ್ರೆಯನ್ನು ಹೇಳುವುದು.

ಇಂಥ ಪ್ರಜ್ಞೆ ಭಾರತೀಯರಲ್ಲಿ ಬೆಳೆದು ಬಂದುದು ಬ್ರಿಟೀಷರ ಪ್ರಭಾವದಿಂದ. ಹೀಗಾಗಿ ಪಂಡಿತಮಾನ್ಯರಿಗೇ ಬಾರದ ಇತಿಹಾಸ ಬರೆದಿಡುವ ಕಲ್ಪನೆ, ಜನಸಾಮಾನ್ಯನಿಗೆ ಅದೆಂತು ಬಂದೀತು?

ಮೇಲಾಗಿ ಪಂಡಿತಮಾನ್ಯರೆ ಮಾಡದ ಈ ಕಾರ್ಯ ತನ್ನಂಥ ಸಾಮಾನ್ಯನಿಂದಾದೀತೆ? ಎಂದು ಅಂಜಿರಲೂಬಹುದು. ಮೇಲಿಂದ ಮೇಲೆ ಮಹಾಪೂರಗಳಂತೆ ಉಕ್ಕಿ ಬಂದ ರಾಜಕೀಯ ಕ್ರಾಂತಿಗಳು ಜನಸಾಮಾನ್ಯನ ಮನಸ್ಸಿನ ಮೇಲಾಗಲೀ ಅಥವಾ ಬದುಕಿನ ಮೇಲಾಗಲೀ ಯಾವ ವಿಶೇಷ ಪರಿಣಾಮವನ್ನೂ ಬೀರಿರಲಿಕ್ಕಿಲ್ಲ. ಅವರ ಪ್ರಶಾಂತ ಬದುಕನ್ನು ಕದಡಿರಲಿಕ್ಕಿಲ್ಲ.

ಆದರೆ ಹೆಸರಾಂತ ರಾಜಾಧಿರಾಜರಿಗೆ ದಿವ್ಯ ನಿರ್ಲಕ್ಷ್ಯವನ್ನು ತೋರಿದ ಶ್ರೀ ಸಮಾನ್ಯ ಕೆಲವು ಹಿರಿಯ ಮಾಂಡಲೀಕರನ್ನೋ ವೀರರಾದ ಪಾಳೆಯಗಾರರನ್ನೋ ನೆನೆದಿದ್ದಾನೆ. ಅವರ ವೀರ ಕಥೆಗಳನ್ನು ಹಾಡಿ ಕೊಂಡಾಡಿದ್ದಾನೆ. ಕ್ಷಾತ್ರ ತೇಜವನ್ನು ಬೆದಕಿ ತನ್ನ ಜನರನ್ನು ಹುರುದುಂಬಿಸಲು ಈ ರೀತಿಯ ಹಾಡುಗಳನ್ನು ರಚಿಸಿರಲೂಬಹುದು.

ಈ ನಾಡನ್ನು ಆಳಿದ ಚೋಳರು, ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ದೊರೆಗಳು ಮುಂತಾದ ರಾಜ ಮನೆತನಗಳಿಗೆ ಸಂಬಂಧಪಟ್ಟಂತೆ ದೊರೆಯುವ ಜನಪದ ಸಾಹಿತ್ಯ ತುಂಬ ವಿರಳ. ಈ ನಾಡಿಗಾಗಿ ಅಮೂಲ್ಯವಾದ ಸಾಹಿತ್ಯದ ಕೊಡುಗೆಯನ್ನು ಕೊಟ್ಟಿರುವ ಕಲ್ಯಾಣ ರಾಜ್ಯದ ಚಾಲುಕ್ಯರ ನಂತರದ, ಕಲಚೂರಿ ಸಾಮ್ರಾಜ್ಯದ ೨ನೇ ಬಿಜ್ಜಳನ ಆಳ್ವಿಕೆಯಲ್ಲಿ, ಕಾಯಕ ಜೀವಿಗಳಾಗಿ ಜೀವಿಸಿದ ಎಲ್ಲ ವಚನಕಾರರ ಇರುವಿಕೆಯನ್ನು ಜಾನಪದದಲ್ಲಿ ಕಾಣುತ್ತೇವೆ. ಉದಾಹರಣೆಗೆ ;

'ಒಂದೊಂದು ನುಡಿಯಾಗ ನೂರೊಂದು ಕಿಡಿತುಂಬಿ ಚಂದಾದ ನಡೆ ನುಡಿ ಕಲಿಸ್ಯಾರ–ಶರಣರು ಎಂದೆಂದಿಗೂ ಮರೆತು ಇರಲಾರೆ. ಶಾಂತೀಗೆ ತವರೂರು ಕ್ರಾಂತಿಗೆ ಕಣವಾಯ್ತು ರಾತರಿ ಒಂದರಾಗ ಬಯಲಾಯ್ತು–ಕಲ್ಯಾಣ ಜಾತರಿ ನೋಡ ಶರಣರ.' ಹೀಗೆ ಜಾನಪದದಲ್ಲಿ ವಚನಕಾರರನ್ನು ಹಲವಾರು ವಿಚಾರದಲ್ಲಿ ಕಾಣುತ್ತೇವೆ.

ವಚನಕಾರರು

ಹನ್ನೆರಡನೆಯ ಶತಮಾನದಂದು ಕರ್ನಾಟಕದ ಕಲ್ಯಾಣ ಕೇಂದ್ರದಲ್ಲಿ ಸಂಭವಿಸಿದ ಸಾಮಾಜಿಕ ಧಾರ್ಮಿಕ ಸ್ವರೂಪದ ಶರಣಧರ್ಮ ಎನ್ನುವುದು ಅಂದಿನ ಸಮಾಜದ ವಿವಿಧ ಸ್ತರಗಳ ಜನಶಕ್ತಿಯನ್ನು ಮೊಟ್ಟಮೊದಲ ಬಾರಿಗೆ ಸಂಘಟಿಸಿ ಒಂದು ವೈಚಾರಿಕ ಸ್ಫೋಟವನ್ನು ತಂದ ಅಪೂರ್ವವಾದ ಐತಿಹಾಸಿಕ ಘಟನೆಯಾಗಿದೆ. ಅಂದು ಬಸವಾದಿ ಶರಣರು ಯಾವ ಒಂದು ಕ್ರಾಂತಿಯನ್ನು ಕರ್ನಾಟಕದ ಚೌಕಟ್ಟಿನಲ್ಲಿ ಮಾಡಿದರೋ ಅದು ಇಂದಿಗೂ ಅನೇಕಾಂಶಗಳಲ್ಲಿ ನಮಗೆ ಪ್ರಸ್ತುತವಾಗಿದೆ ಅನ್ನುವುದೇ ಈ ಮಹಾಪ್ರಯೋಗದ ಮೌಲಿಕತೆಗೆ ಸಾಕ್ಷಿಯಾಗಿದೆ. ಅದನ್ನು ಮಾಡಿದವರು ನಮ್ಮ ನಿಮ್ಮಂತೆ ಬಾಳಿ ಬದುಕಿದ ಮನುಷ್ಯರೇ ಹೊರತು ಕೈಲಾಸದಿಂದ ಇಳಿದು ಬಂದ ದೇವಾನುದೇವತೆಗಳಲ್ಲ. ಅಂದಿನ ಈ ಮನುಷ್ಯರು ತಮ್ಮ ಸಮಕಾಲೀನರಾದ ಮನುಷ್ಯರಿಗಾಗಿ, ಮನುಷ್ಯರ ಜತೆಗೆ ತಮ್ಮನ್ನು ಸಂಗಡಿಸಿಕೊಂಡು ತೀವ್ರವಾಗಿ ಸ್ಪಂದಿಸಿದ್ದರಿಂದ, ಇರುವ ಹಾಗೂ ಸ್ಥಗಿತಗೊಂಡ ವ್ಯವಸ್ಥೆಯನ್ನು

ಬದಲಾಯಿಸಿ ಎಲ್ಲರೂ ಸಮಾನವಾಗಿ ವೈಚಾರಿಕವಾಗಿ ಬದುಕುವುದು ಹೇಗೆ, ಮನುಷ್ಯನನ್ನು ಅವನಿರುವ ಯಥಾಸ್ಥಿತಿಯಿಂದ ಪಾರುಮಾಡಿ ಅವನನ್ನು ನಿಜವಾದ ಹಾಗೂ ಸ್ವತಂತ್ರವಾದ ಮನುಷ್ಯನನ್ನಾಗಿ ಮಾಡುವುದು ಹೇಗೆ – ಎಂಬ ಕಾಳಜಿಗಳಿಂದ, ರೂಪುಗೊಂಡದ್ದು ಶರಣಧರ್ಮ.

ಹನ್ನೆರಡನೆಯ ಶತಮಾನದ ಆ ಕಾಲದಿಂದ ನಾವು ಈಗ ಬಹುದೂರ ಬಂದಿದ್ದೇವೆ. ಅಥವಾ 'ಮುಂದುವರೆದಿದ್ದೇವೆ'. ಹೀಗೆ 'ಮುಂದುವರಿದ' ಈ ಕಾಲದವರಾದ ನಮಗೆ ಎಂಟನೂರು ವರ್ಷಗಳ ಹಿಂದಿನ ಕಾಲದ ಶರಣರ ವಿಚಾರಗಳು ಎಷ್ಟು ಪ್ರಸ್ತುತ ಎಂದು ಕೇಳಿಕೊಳ್ಳುವುದು ಸಹಜವಾದರೂ, ಸರಿಯಾಗಿ ವಿಚಾರ ಮಾಡಿದಲ್ಲಿ, ನಾವು ನಿಜವಾಗಿಯೂ ಆ ಕಾಲಕ್ಕಿಂತ 'ಆಂತರಂಗಿಕವಾಗಿ' ಅಷ್ಟೇನೂ ಮುಂದುವರೆದಿದ್ದೇವೆ ಎಂದು ಹೇಳಿಕೊಳ್ಳುವ ಧೈರ್ಯ ನಮಗಿಲ್ಲ. ಮೇಲೆ ನಾಗರಿಕರಾಗೇನೋ ಮುಂದುವರೆದಂತೆ ತೋರಿದರೂ, ಒಳಗಿನ ಮನುಷ್ಯ ಅಷ್ಟೇನೂ ಬದಲಾಗಿದ್ದಾನೆ ಎಂದು ಹೇಳಲು ಬಾರದು.

ನಿಜ, ನಾವೀಗ ಇಪ್ಪತ್ತನೆಯ ಶತಮಾನದ ವಿಜ್ಞಾನಯುಗದಿಂದ ಇಪ್ಪತ್ತೊಂದನೆ ಶತಮಾನಕ್ಕೆ ಕಾಲಿಡುವ ಮಹತ್ವದ ಕಾಲಘಟ್ಟದಲ್ಲಿ ನಿಂತಿದ್ದೇವೆ. ಇಪ್ಪತನೆಯ ಶತಮಾನ ಈ ಜಗತ್ತಿನ ಬದುಕಿನಲ್ಲಿ ಮಹತ್ವದ ಪಲ್ಲಟಗಳನ್ನು ತಂದಿದೆ. ಅನೂಹ್ಯವಾದ ವೈಜ್ಞಾನಿಕ ಸಾಹಸಗಳಿಂದಾಗಿ ಮನುಷ್ಯನ 'ನಾಗರಿಕತೆ'ಯಲ್ಲಿ ವಿಶೇಷವಾದ ಪ್ರಗತಿಯಾಗಿದೆ. ಆದರೆ ವಿಜ್ಞಾನದ ಸವಲತ್ತುಗಳನ್ನು ನಮ್ಮ ಸುಖ ಸೌಕರ್ಯಗಳಿಗಾಗಿ ಪಡೆದುಕೊಳ್ಳುವುದರಲ್ಲಿ ನಾವು ತಾಳಿದ ಆಸಕ್ತಿಯನ್ನು ವೈಜ್ಞಾನಿಕ ಮನೋಧರ್ಮವನ್ನು ಬೆಳಸಿಕೊಳ್ಳುವ ವಿಚಾರದಲ್ಲಿ ನಾವು ತೋರಲಿಲ್ಲ. ಹೀಗಾಗಿ ಸಾಂಪ್ರದಾಯಿಕವಾದ ಅನೇಕ ವೈಚಾರಿಕ ಸಂಗತಿಗಳು ಇಂದಿಗೂ ನಮ್ಮ ಬದುಕನ್ನು ಗುತ್ತಿಗೆ ಹಿಡಿದುಕೊಂಡಿವೆ. ಮತ್ತೊಂದೆಡೆ ಈ ಶತಮಾನದಲ್ಲಿ ಭಾರತದ ಜನಶಕ್ತಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಸಂಘಟಿತಗೊಂಡು ತನ್ನ ಸಂವಿಧಾನದಲ್ಲಿ ಸಮಾನತೆ, ಸಹೋದರತೆ, ಸಾಮಾಜಿಕ ನ್ಯಾಯ, ಜಾತ್ಯಾತೀತತೆ ಇತ್ಯಾದಿಗಳನ್ನು ಬದುಕಿನ ಮೌಲ್ಯಗಳೆಂದು ಘೋಷಿಸಿಕೊಂಡರು. ಸಮಕಾಲೀನ 'ರಾಜಕಾರಣ' ಈ ಎಲ್ಲವನ್ನೂ ಹೇಗೆ ಅಪಮೌಲ್ಯೀಕರಣಗೊಳಿಸುತ್ತ ವಿಜೃಂಭಿಸುತ್ತಿದೆ ಅನ್ನುವುದನ್ನು ನೋಡಿದರೆ ಗಾಬರಿಯಾಗುತ್ತದೆ. ದೇಶದ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಪರಿಸರ ನಾಶದ ತಲ್ಲಣಗಳು, ಧಾರ್ಮಿಕ ಮೂಲಭೂತವಾದಿಗಳ ಅಬ್ಬರಗಳು, ಭಿನ್ನಾಭಿಪ್ರಾಯಗಳನ್ನು ಗೌರವಿಸದೇ ತನ್ನದೇ ಸರಿ ಎಂದು ವಾದಿಸುವ ಅಸಹನೆ, ಕೆಳವರ್ಗದವರ ಮೇಲೆ ಮೇಲ್‌ವರ್ಗದವರಿಂದ ನಿರಂತರವೂ ನಡೆಯುತ್ತಿರುವ ಹಲ್ಲೆ ಹಾಗೂ ಶೋಷಣೆಗಳು ಇತ್ಯಾದಿಗಳನ್ನು ನೋಡಿದರೆ, ಸಮಾನತೆ ಸಹೋದರತೆ ಸಹಿಷ್ಣುತೆ ಸಾಮಾಜಿಕ ನ್ಯಾಯ ಇಂಥ ಮಾತುಗಳಿಗೆ ಏನಾದರೂ ಅರ್ಥ ಉಂಟೆ ಎಂದು ಅನ್ನಿಸುತ್ತದೆ. ಇಂಥ ಪರಿಸ್ಥಿತಿಯಲ್ಲಿ ನಾವು ಹೊರಳಿ ನೋಡಿದರೆ ಎಂಟುನೂರು ವರ್ಷಗಳ ಹಿಂದೆ ವಚನಕಾರರು ಕರ್ನಾಟಕ ಕೇಂದ್ರದಲ್ಲಿ ನಡೆಯಿಂದ ಸಾಧಿಸಿದ ವೈಚಾರಿಕ ಕ್ರಾಂತಿ ಎಷ್ಟು ಮಹತ್ವದ್ದು ಹಾಗೂ ಎಷ್ಟು ಪ್ರಸ್ತುತವಾದದ್ದು ಎಂದು ಅನ್ನಿಸದೆ ಇರದು.

ಆದರೆ ಗಮನಿಸಬೇಕಾದ ಅಂಶವೊಂದಿದೆ: ಯಾವ ಧರ್ಮದ ಎಲ್ಲ ಅಂಶಗಳೂ ಎಲ್ಲ ಕಾಲಕ್ಕೂ ಪ್ರಸ್ತುತವಾಗುತ್ತವೆ ಎಂದು ಹೇಳಲು ಬರುವುದಿಲ್ಲ, ಮತ್ತೆ ಮತ್ತೆ ಸ್ಥಗಿತಗೊಳ್ಳುವುದೇ ಎಲ್ಲ ಧರ್ಮಗಳ ಲಕ್ಷಣವಾಗುವುದರಿಂದ ಮತ್ತೆ ಮತ್ತೆ ಅದನ್ನು 'ಜಂಗಮ' ಅಥವಾ ಚಲನಶೀಲಗೊಳಿಸುವಪ್ರಯತ್ನಗಳು ನಡೆಯಬೇಕು. ವಚನಕಾರ ಧರ್ಮದ ಎಷ್ಟೋ ಅಂಶಗಳು ಇಂದಿನ ಬದುಕಿಗೆ ಅಪ್ರಸ್ತುತವಾಗಿವೆ; ಎಷ್ಟೋ ಸಂಗತಿಗಳು ಅಪವ್ಯಾಖ್ಯಾನಗೊಂಡಿವೆ. ಆದರೂ ಶರಣ ಧರ್ಮದ ಮಹತ್ವದ ವಿಚಾರಗಳು ಈ ಹೊತ್ತಿಗೆ ಮಾತ್ರವಲ್ಲ, ಎಲ್ಲ ಕಾಲಕ್ಕೂ ಪ್ರಸ್ತುತವಾಗಬಲ್ಲ ಮಹತ್ವವನ್ನು ಪಡೆದುಕೊಂಡಿವೆ ಅನ್ನುವುದು ಹರ್ಷದಾಯಕವಾದ ವಿಚಾರವಾಗಿದೆ.

ಧರ್ಮ ಹಾಗೂ ದೇವರ ಕಲ್ಪನೆಗಳು ಮುಖ್ಯವಾಗಿ ಮನುಷ್ಯನ ಸಾಮಾಜಿಕ ಮತ್ತು ಆಧ್ಯಾತ್ಮಿಕ ಅಗತ್ಯಗಳು. ಆದ ಕಾರಣ ಮನುಷ್ಯ ಒಬ್ಬ ವ್ಯಕ್ತಿಯಾಗಿ, ಕುಟುಂಬದ ಜೀವಿಯಾಗಿ ಸಮಾಜ ಒಂದರ ಸದಸ್ಯನಾಗಿ ಬದುಕಬೇಕಾದರೆ ಯಾವ ಯಾವ ಲೌಕಿಕ, ನೈತಿಕ ಮತ್ತು ಆಧ್ಯಾತ್ಮಿಕ ವಿಚಾರಗಳೂ ನಂಬಿಕೆಗಳೂ ನಿಲುವುಗಳೂ ಅಗತ್ಯವೋ ಅವನ್ನೆಲ್ಲ ರೂಪಿಸುವ ಒಂದು ಶಕ್ತಿಯೇ ಧರ್ಮ. ಅಂದರೆ ಮೊದಲು ಅದು ಒಳ್ಳೆಯ ಸಾಮಾಜಿಕ ಮನುಷ್ಯನನ್ನು ನಿರ್ಮಾಣ ಮಾಡಬೇಕು. ಯಾಕೆಂದರೆ 'Religion is man making'. ಹಾಗಾದಾಗ ಅದು ಎಲ್ಲ ವರ್ಗಗಳ ಶ್ರೇಯಸ್ಸನ್ನು ಸಾಧಿಸುವಂತಾಗುತ್ತದೆ. ಇದೂ ಒಂದು ಧರ್ಮಕ್ಕೆ ಇರುವ ಸಾಮಾಜಿಕ ಜವಾಬ್ದಾರಿ. ಎಲ್ಲರ ಶ್ರೇಯಸ್ಸನ್ನು ಸಾಧಿಸಬೇಕಾದರೆ ಒಂದು ಸಮಾಜದ ಎಲ್ಲರನ್ನೂ ತನ್ನವರೆಂದೂ ಸಮಾನರೆಂದೂ ಪರಿಗಣಿಸುವ ಉದಾರತೆ ಬೇಕು ಮತ್ತು ಸಾಮಾಜಿಕ ತಾರತಮ್ಯಗಳ ಹಿಂದಿರುವ ಕಾರಣಗಳನ್ನು ಪ್ರಶ್ನಿಸುವ ಪ್ರತಿಭಟಿಸುವ ವೈಚಾರಿಕತೆ ಬೇಕು. ಈ ಮೂರು ಏಕಕಾಲಕ್ಕೆ ಕಾನಿಸಿಕೊಂಡದ್ದು ಕರ್ನಾಟಕದ ಪ್ರಮುಖ ಧರ್ಮವಾದ, ಪ್ರೀತಿಸುವ, ವರ್ಣಭೇದ, ವರ್ಗಭೇದ, ಲಿಂಗಭೇದಗಳನ್ನು ನಿರಾಕರಿಸುವ, ವೈಚಾರಿಕ ಎಚ್ಚರದಲ್ಲಿ ತನ್ನ ಅಂತರಂಗ ಬಹಿರಂಗಗಳನ್ನು ಒರೆಗಲ್ಲಿಗೆ ಹಚ್ಚಿ ನೋಡುವ ಮತ್ತು ಆ ಪರಾತ್ಪರದ ಶರಣಾಗುವುದರಲ್ಲಿಯೇ ಸಾರ್ಥಕತೆಯಿದೆ ಎಂದು ನಂಬುವ ನವಮಾನವ ನಿರ್ಮಿತಿಯ ಪರಿಣಾಮವೆ ವಚನಕಾರಧರ್ಮ.

ಪ್ರಸ್ತುತ ದಿನಗಳ ಅನೇಕ ಮಹತ್ವದ ಚಳುವಳಿಗಳಲ್ಲಿ 'ಜಾತಿವಿನಾಶ ಚಳುವಳಿ'ಯೂ ಒಂದು. ಗಾಂಧಿ, ಅಂಬೇಡ್ಕರ್, ಲೋಹಿಯಾ ಇತ್ಯಾದಿ ಮಹಾನ್ ವ್ಯಕ್ತಿಗಳ ವಿಚಾರಧಾರೆಯಿಂದ ಸ್ಫೂರ್ತಿಗೊಂಡ ಅನೇಕ ಸಂಘಟನೆಗಳೂ ಹಾಗೂ ಬುದ್ಧಿಜೀವಿ ತಂಡಗಳೂ ಜಾತಿ-ವಿನಾಶ ಆಂದೋಲನವನ್ನು ಹಮ್ಮಿಕೊಂಡಿವೆ. ಹಾಗೂ ಈ ಜಾತಿ ವಿನಾಶಕ್ಕೆ ಅಂತರ ಜಾತಿಯ ವಿವಾಹಗಳು ಬಹುಮುಖ್ಯವಾದ ಸಾಧನೆಗಳೆಂದು ಅವುಗಳನ್ನು ಪ್ರೋತ್ಸಾಹಿಸುತ್ತವೆ. ಆದರೆ ಹನ್ನೆರಡನೆಯ ಶತಮಾನದಷ್ಟು ಹಿಂದೆ ಬಸವಾದಿ ಶರಣರು ಈ ದಿಕ್ಕಿನಲ್ಲಿ ನಡೆಯಿಸದ ಪ್ರಯತ್ನಗಳೂ, ಅವರ ವಿಚಾರಗಳೂ ಹಾಗೂ ಪ್ರಯೋಗಗಳೂ ಎಷ್ಟು ಮಹತ್ವದವುಗಳೆಂಬುದನ್ನು ನಮ್ಮ ಇಂದಿನ ಸುಧಾರಕರೂ ಚಳುವಳಿಗಾರರೂ ಗಮನಿಸುವುದು ಅಗತ್ಯವಾಗಿದೆ.

ವಚನಕಾರರು ಮುಖ್ಯವಾಗಿ ವಿರೋಧಿಸಿದ್ದು ಹಿಂದೂ ಧರ್ಮದ ಶ್ರೇಣೀಕರಣ ಸಾಮಾಜಿಕ ವ್ಯವಸ್ಥೆಯನ್ನು. ಮೇಲೆ ಮಾತ್ರ 'ಸರ್ವೇಜನಾ ಸುಖಿನೋ ಭವಂತು', 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಹುಸಿ ಘೋಷಣೆಗಳಿಂದ ಜಗತ್ತನ್ನು ಮೋಸಗೊಳಿಸುತ್ತ, ಒಳಗೆ ಮಾತ್ರ ಚಾತುರ್ವರ್ಣ ಪದ್ಧತಿಯನ್ನು ಬಲವಾಗಿ ಸಮರ್ಥಿಸುತ್ತಾ ಹಾಗೂ ಉಳಿಸಿಕೊಳ್ಳುತ್ತಾ ಬಂದ ಹಿಂದೂ ಧರ್ಮದ ತಂತ್ರವನ್ನು ವಚನಕಾರರು ಅತ್ಯಂತ ತೀವ್ರವಾಗಿ ಪ್ರತಿಭಟಿಸಿದರು. ಹಿಂದೂ ಧರ್ಮಕ್ಕೆ ಕಾಲದಿಂದ ಕಾಲಕ್ಕೆ ಭಾಷ್ಯಗಳ ಮೇಲೆ ಭಾಷ್ಯವನ್ನು ಬರೆದ ಆಚಾರ್ಯರಾದರೂ ಈ ಶ್ರೇಣೀಕರಣ ವ್ಯವಸ್ಥೆಯನ್ನು, ಬುದ್ಧನ ಹೊರತು, ಪ್ರಶ್ನಿಸಲೇ ಇಲ್ಲ. ಯಾರ್ಯಾರು ಯಾವ್ಯಾವುದು ಎಲ್ಲೆಲ್ಲಿ ಇರಬೇಕೋ ಅದು ಅಲ್ಲಲ್ಲೇ ಇರುವುದೇ ಧರ್ಮ ಎಂದು ವ್ಯಾಖ್ಯಾನ ಬರೆಯುವುದರಲ್ಲಿಯೇ ಈ ಮಹಾ ಆಚಾರ್ಯರುಗಳ 'ವೈಚಾರಿಕತೆ'ಯು ಪರ್ಯಾವಸನಗೊಂಡಿತು. ಯಾಕೆಂದರೆ ಮನುಷ್ಯರೆಲ್ಲ ಮೂಲತಃ ಸಮಾನರು ಅನ್ನುವುದನ್ನು ಒಪ್ಪುವ ಒಂದು ಉದಾರತೆಯೆ ಅವರಲ್ಲಿರಲಿಲ್ಲ. ಹೀಗೆ ಯಾವ ಧಾರ್ಮಿಕ ನಿಲುವು ಕೆಲವರ ಹಿತಾಸಕ್ತಿಗಳನ್ನು ಮಾತ್ರ ಕಾಯುತ್ತ ಇನ್ನುಳಿದ ಸ್ತರಗಳವರನ್ನು ಶೋಷಣೆಗೆ ಗುರಿಪಡಿಸುತ್ತ ಅವಮಾನವೀಯವಾಗಿದೆಯೋ ಅದನ್ನು ಸ್ಫೋಟಿಸಿ 'ವರ್ಣಸಂಕರ' ಮೂಲಕ ಈ ಶ್ರೇಣೀಕರಣ ವ್ಯವಸ್ಥೆಯನ್ನು ಮುರಿಯುವ ಮೊದಲ ಕಾರ್ಯ ನಡೆದದ್ದು ವಚನಕಾರರಿಂದ. ಈ ಬಗೆಯ ಸ್ಫೋಟಕ್ಕೆ ವಚನಕಾರರು ಬಳಸಿಕೊಂಡದ್ದು ಅಂದಿನ ವರ್ಣವ್ಯವಸ್ಥೆಯ ನಾಲ್ಕನೆ (ಶೂದ್ರ) ಹಾಗೂ ಐದನೆ (ಅಂತ್ಯಜ) ಜನಶಕ್ತಿಯನ್ನು; ಅಂದರೆ ಅಂದಿನ ಬಹುಸಂಖ್ಯಾತ ಕಸುಬುದಾರರನ್ನು, ಕೃಷಿಕಾರರನ್ನು, ನಿರ್ಲಕ್ಷಿತರನ್ನು, ಶೋಷಿತರನ್ನು ಮತ್ತು ಮಹಿಳೆಯರನ್ನು ಸಿದ್ಧರಾಮ, ಅಲ್ಲಮಪ್ರಭು, ಚೆನ್ನಬಸವ, ಅಕ್ಕಮಹಾದೇವಿ ಹೀಗೆ ಇನ್ನೂ ಕೆಲವರನ್ನು ಹೊರತುಪಡಿಸಿದರೆ ಇನ್ನುಳಿದವರೆಲ್ಲ ಕೆಳವರ್ಗದವರೆ, ಅದರಲ್ಲೂ ಬಹುತೇಕ ಅನಕ್ಷರಸ್ಥರೆ. ಇಂಥ ಒಂದು ಸಮುದಾಯವನ್ನು ನವಸಮಾಜ ನಿರ್ಮಾಣದ ವೈಚಾರಿಕ ಹಾಗೂ ಸರ್ವಸಮಾನತೆಯ ಕ್ರಾಂತಿಗೆ ಸಜ್ಜುಗೊಳಿಸದ ಕ್ರಮವಂತೂ ಚಾರಿತ್ರಿಕವಾಗಿ ಅಪೂರ್ವವಾದ ಸಂಗತಿಯಾಗಿದೆ. ಅದಕ್ಕಾಗಿ ಬಸವಣ್ಣನವರು ಕನ್ನಡವನ್ನು ಅಂದಿನ ಧರ್ಮದ ಭಾಷೆಯನ್ನಾಗಿ, ವಿಚಾರದ ಭಾಷೆಯನ್ನಾಗಿ, ಸಂವಹನದ ಭಾಷೆಯನ್ನಾಗಿ ರೂಢಿಸಿದ್ದರಿಂದ ಕನ್ನಡ ಭಾಷೆಗೆ ದೊರೆತ ಸೃಜನಶೀಲತೆ ಹಾಗೂ ತತ್ಪರಿಣಾಮವಾದ 'ವಚನ' ಎಂಬ ಅಭಿವ್ಯಕ್ತಿ ಪ್ರಕಾರದ ಆವಿಷ್ಕಾರಗಳು-ಕನ್ನಡ ಸಾಹಿತ್ಯಕ್ಕೆ ಮಾತ್ರವಲ್ಲ, ಜಾಗತಿಕ ಸಾಹಿತ್ಯಕ್ಕೆ ಅಪೂರ್ವವಾದ ಕೊಡುಗೆಗಳಾಗಿವೆ. ಕನ್ನಡನಾಡಿನಲ್ಲಿ ಕನ್ನಡದ ಸ್ಥಾನಮಾನಗಳಿಗೆ ಹಾಗೂ ಕನ್ನಡ ಮಾಧ್ಯಮಕ್ಕೆ ಹೋರಾಡುವ ದುಃಸ್ಥಿತಿಯಲ್ಲಿರುವ ನಮಗೆ ಕನ್ನಡ ಮಾಧ್ಯಮವು ಪರಿಣಾಮಕಾರಿಯಾಗಿ ಜಾರಿಗೆ ಬಂದಿದ್ದರೆ ಅದು ಹನ್ನೆರಡನೆಯ ಶತಮಾನದಲ್ಲಿಯೆ ಎಂಬ ಸಂಗತಿ ದಂಗುಬಡಿಸುತ್ತದೆ.

ಈ ಒಂದು ಸಂಘಟನೆಯಿಂದ ವಚನಕಾರರ ಧರ್ಮ ಪರಂಪರಾಗತವಾದ ವರ್ಣವ್ಯವಸ್ಥೆಯನ್ನು ಮುರಿದು 'ವರ್ಣಸಂಕರ'ದ ಮೂಲಕ ಹೊಸ ಧಾರ್ಮಿಕ ನೆಲೆಯೊಂದನ್ನು ನಿರ್ಮಾಣ ಮಾಡಿತು. 'ಕುಲವನರಸುವರೆ ಶರಣರಲ್ಲಿ ವರ್ಣಸಂಕರವಾದ ಬಳಿಕ' ಎಂದು ಬಸವಣ್ಣನವರು ಕೇಳುವ ಪ್ರಶ್ನೆ

ಈ ನೆಲೆಯದು. ಹಿಂದೂ ಧರ್ಮದ ಪ್ರಕಾರ 'ವರ್ಣಸಂಕರ' ಒಂದು ಮಹಾ ಅನಾಹುತ. ವರ್ಣಸಂಕರದಿಂದ ಧರ್ಮಗ್ಲಾನಿ. ಆದರೆ ಬಸವಣ್ಣನವರಿಗೆ ಅದು ಜಾತಿಯ ಶ್ರೇಣೀಕರಣವನ್ನು ಮುರಿದು ಸಮಾನತೆಯನ್ನು ನೆಲೆಗೊಳಿಸುವ ಸಾಧನ. ಅವರೇ ನಿಂತು ಮಾಡಿಸಿದ 'ಅಂತರ್ಜಾತೀಯ ವಿವಾಹ' ಈ ವರ್ಣಸಂಕರ ಪ್ರಯತ್ನದಲ್ಲಿ ಒಂದು ದಿಟ್ಟ ಹೆಜ್ಜೆ.

ದೇವಸ್ಥಾನಗಳನ್ನು ನಿರಾಕರಿಸಿ, ದೇವರ ಕಲ್ಪನೆಯನ್ನು ಮನುಷ್ಯನ ಶರೀರಕ್ಕೆ ಸ್ಥಳಾಂತರಗೊಳಿಸಿ, ದೇಹವನ್ನೇ ದೇವಾಲಯವನ್ನಾಗಿ ಮಾಡಿ, ಪುರೋಹಿತಶಾಹಿ ಕಲ್ಪಿಸಿದ ಸ್ವರ್ಗ ನರಕಾದಿ ಶೋಷಕ ತಂತ್ರಗಳನ್ನು ಖಂಡಿಸಿ ಇಹದ ಬದುಕಿನ ಮೇಲಿನ ಪ್ರೀತಿಯನ್ನು ರೂಢಿಸಿದ, ಅನೇಕ ಅವೈಚಾರಿಕವಾದ ಆಚರಣೆಗಳನ್ನೂ ಮೂಢನಂಬಿಕೆಗಳನ್ನೂ ತಿರಸ್ಕರಿಸಿದ, ವೃತ್ತಿಯ ತಾರತಮ್ಯಗಳ ಮೇಲಿನಿಂದ ಮನುಷ್ಯನ ಸಾಮಾಜಿಕ ಅಂತಸ್ತನ್ನು ಪರಿಗಣಿಸದೆ ಕಾಯಕವೆಲ್ಲವೂ ಪೂಜ್ಯವೆಂದು, 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲರೂ ಒಂದೇ ಎಂಬೆ' ಎಂಬ ನಿಲುವನ್ನು ಪ್ರತಿಪಾದಿಸುತ್ತ ಶ್ರೀ ಸಾಮಾನ್ಯರಲ್ಲಿ ವೈಚಾರಿಕತೆಯನ್ನು ಪ್ರತಿಭಟನೆಯ ಕೆಚ್ಚನ್ನೂ, ಆತ್ಮಗೌರವವನ್ನೂ ಪ್ರಚೋದಿಸಿದ ವಚನಕಾರರ ವಿಚಾರಗಳು ಸಮಕಾಲೀನರಾದ ನಾವೇ ಅಪ್ರಸ್ತುತರಾಗಿ ಬಟ್ಟಿದ್ದೇವೋ ಎನ್ನಿಸುವಂಥ ಸ್ಥಿತಿಯಲ್ಲಿದ್ದೇವೆ.

"ಪ್ರಮುಖ ವಚನಕಾರರಾದ ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ– ಇವರುಗಳು ಬದುಕಿದ ಬದುಕನ್ನುತಮ್ಮ ಸಾಹಿತ್ಯದ ವಸ್ತುವಾಗಿ ಮಾಡಿಕೊಂಡರು ಶಿಷ್ಟಕವಿಗಳು ಆ ಹಿನ್ನಲೆಯಲ್ಲಿ ವಸ್ತುವನ್ನು ನಿರ್ವಹಿಸಿ ಉತ್ತಮ ಕೃತಿಗಳನ್ನು ರಚಿಸಿದವರೆಂದರೆ ಹರಿಹರ, ಚಾಮರಸ, ಭೀಮಕವಿ, ವಿರೂಪಾಕ್ಷ ಪಂಡಿತ ಮೊದಲಾದವರು. ವಚನಕಾರರ ಸಾಂಸ್ಕೃತಿಕ ಆಂದೋಲನ, ಜನಪದರ ಬದುಕಿನ ಮೇಲೆ ಬೀರಿದ ಪ್ರಭಾವ, ಉಂಟುಮಾಡಿದ ಪರಿಣಾಮ ಅನನ್ಯವಾದುದು. ಈ ಚಳುವಳಿ ಜನಮನದಲ್ಲಿ ವ್ಯಾಪಿಸಿದಷ್ಟು ಕರ್ನಾಟಕದ ಇನ್ನಾವ ಆಂದೋಲನವೂ ವ್ಯಾಪಿಸಲಿಲ್ಲ ಎಂಬುದು ಗಮನಾರ್ಹ ಸಂಗತಿ. ಹೀಗಾಗಿ ಶಿವಶರಣರು ಉಂಟುಮಾಡಿದ ಜನಜಾಗೃತಿ ಮುಕ್ತಮನಸ್ಸಿನ ಜನಪದರ ಮೇಲೆ ಪ್ರಭಾವವನ್ನು ಬೀರಿ ಅವರ ತ್ರಿಪದಿಗಳಲ್ಲಿ ವಚನಕಾರರ ಬದುಕು ಪ್ರತಿಬಿಂಬವಾಗಲು ಸಾಧ್ಯವಾಯಿತು.

ಜನಪದರು ಹೇಳುವಂತೆ–

ಶರಣರ ನೆನೆದಾರ ಸರಗೀಯ ಇಟ್ಟಾಂಗ
ಅರಳಮಲ್ಲಿಗೆ ಮುಡಿದ್ಧಂಗ ಕಲ್ಯಾಣ
ಶರಣ ನೆನೆಯೊ ನನ ಮನವೆ.

ಶರಣರನ್ನು ಮನದಲ್ಲಿ ಸ್ಮರಿಸುವುದೇ ಅರಳಿದ ಮಲ್ಲಿಗೆ ಹೂವನ್ನು ಮುಡಿದರೆ ಎಷ್ಟೊಂದು ಸೊಗಸಾಗಿ ಸುಂದರವಾಗಿ ಇರುತ್ತದೋ ಹಾಗೆ ಯಾವಾಗಲೂ ನನ್ನ ಮನಸ್ಸು ಶರಣರನ್ನು ಸ್ಮರಿಸಲಿ ಎಂದಿದ್ದಾರೆ.

ವಚನಕಾರರು ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಬಳಿದ ಕೆಲವು ಪರಿಕಲ್ಪನೆಗಳು ಇಂದಿನ ಗ್ರಾಮೀಣ ಬದುಕಿನಲ್ಲಿ ಅತ್ಯಂತ ಪ್ರಚಲಿತವಾಗಿರುವುದನ್ನು ಕಾಣುತ್ತೇವೆ. ಕಾಯಕ, ದಾಸೋಹ ಇವು ಅಂದಿನ ಜನಪದರ ಬದುಕಿನಲ್ಲಿ ಆಚರಿಸಲ್ಪಟ್ಟು ಇಂದಿಗೂ ಉಳಿದುಕೊಂಡು ಬರುತ್ತಿರುವುದನ್ನು ಗಮನಿಸಬಹುದಾಗಿದೆ.

ಉತ್ತರ ಕರ್ನಾಟಕದ ಜನಪದ ಸಾಹಿತ್ಯದಲ್ಲಿ ಕಂಡುಬರುವ ಹಂತಿಯ ಹಾಡುಗಳು ಶಿವಶರಣರ ಜೀವನವನ್ನು ಧನಾತ್ಮಕ ನೆಲೆಯಲ್ಲಿ ವಿವರಿಸುವುದನ್ನು ಕಂಡಾಗ ಅಚ್ಚರಿಯಾಗುತ್ತದೆ. ಇಂದಿನ ಗ್ರಾಮೀಣರ ಬದುಕಿನಲ್ಲಿಯೂ ಶಿವಶರಣರ ನಾಮಧೇಯಗಳು

ಅಜ್ಞಾತವಾಗಿ ಉಳಿದುಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ. ಜನಪದರು ತಾವು ಬೆಳೆದ ಬೆಳೆಗಳನ್ನು ತಂದು ಒಂದು ಕಡೆ ಸೇರಿಸಿ ಧಾನ್ಯಗಳನ್ನು ವಿಭಜಿಸುವ ಸಂದರ್ಭದಲ್ಲಿ ರೈತ ಕಣವನ್ನು ಮಾಡುತ್ತಾನೆ. ಕಣವನ್ನು ಮಾಡಿ ಕಣದ ಮಧ್ಯಭಾಗದಲ್ಲಿ ಮೇಟಿಯನ್ನು ನೆಡುತ್ತಾನೆ. ಈ ಹಿನ್ನಲೆಯಲ್ಲಿ ಸಾಂಕೇತಿಕವಾಗಿ ಜನಪದ ಅಥವಾ ರೈತ ಅವುಗಳನ್ನು ಪೂಜಿಸುತ್ತಿರುವುದನ್ನು ಕಾಣಬಹುದು.

ಕಣವೆ ಮಂಟಪವಾತೊ ಗುಣವಂತ ಬಸವೇಶ

ಹೊಣೆಗಾರ ರೈತ ದಂಡೇಶ ಕಣಮೇಟಿ

ಗಣೆಗುರುವು ಕಣಕೆ ಪ್ರಭುಲಿಂಗೊ

ಈ ಮೇಲಿನ ತ್ರಿಪದಿಯಲ್ಲಿ ಸುಗ್ಗಿಯ ಕಣವೇ ಅನುಭವ ಮಂಟಪದ ಹಾಗೆ. ಕಣದ ಮಧ್ಯದಲ್ಲಿನ ಮೇಟಿ ಚನ್ನಬಸವಣ್ಣನ ಹೆಸರಿನ ಅಪ್ರತ್ಯಕ್ಷ ರೂಪ. ಹೊಣೆಗಾರನಾದ ರೈತನೆಂದರೆ ಬಸವಣ್ಣ. ಅಂದರೆ ಅನುಭವಮಂಟಪದ ಸಕಲ ಜವಾಬ್ದಾರಿಗಳನ್ನು ಹೊತ್ತಿದ್ದವನು ಬಸವಣ್ಣ. ಗುರುಸ್ಥಾನದಲ್ಲಿದ್ದು ವಚನಕಾರ ಎಲ್ಲ ಚಟುವಟಿಕೆಗಳಿಗೂ ಮಾರ್ಗದರ್ಶನ ಮಾಡುತ್ತಿದ್ದವನು ಪ್ರಭುದೇವ. ಪ್ರಭುದೇವನನ್ನು ರೈತ ಬೂದಪ್ಪ ಎಂದು ಇಂದು ಸುಗ್ಗಿಯ ಕಣದಲ್ಲಿ ಪೂಜಿಸುವುದನ್ನು ಕಾಣುತ್ತೇವೆ. ನಮ್ಮ ಜನಪದರು ಅಥವಾ ರೈತ ಸಮುದಾಯಕ್ಕೆ ನಾನು ಶಿವಶರಣರನ್ನು ಪೂಜಿಸುತ್ತಿದ್ದೇನೆ ಎಂಬ ಪರಿಭಾವನೆ ಇಲ್ಲದಿದ್ದರೂ ಅಪ್ರತ್ಯಕ್ಷವಾಗಿ ರೈತನ ಬದುಕಿನಲ್ಲಿ ಇಂದಿಗೂ ಮನೆಮಾಡಿಕೊಂಡಿರುವುದನ್ನು ಕಾಣಬಹುದು."೬

ಕೊನೆ ಟಿಪ್ಪಣಿಗಳು

೧. ಓ. ಎಲ್ ನಾಗಭೂಷಣಸ್ವಾಮಿ. (ಸಂ) ೨೦೧೪, 'ವಚನ ಸಾವಿರ' ಪು. ೭. ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ, ಅರಮನೆ ರಸ್ತೆ, ಬೆಂಗಳೂರು.

೨. ಬಿ. ಎಸ್. ಮಂಜುನಾಥಸ್ವಾಮಿ. ೨೦೧೨, 'ವಚನ ಚಳುವಳಿ ಆಂತರಿಕ ವೈರುಧ್ಯಗಳು' ಪು. ೨೨. ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಶಿವರಾಂಪೇಟೆ, ಮೈಸೂರು.

೩. ಮಹೇಶ ತಿಪ್ಪಶೆಟ್ಟಿ, 'ಪರಂಪರೆ : ಪರಿವರ್ತನೆ' ೨೦೦೬, ಪು. ೨೩. ದಾಳಿಂಬ ಪ್ರಕಾಶನ ಹುನಗುಂದ, ಬಾಗಲಕೋಟ.

೪. ಎಸ್. ಉಮಾಪತಿ. 'ಶರಣರ ವಿಚಾರಕ್ರಾಂತಿ' ಪು. ೧೨, ೨೦೦೮, ಸರಸ್ವತೀ ಆಫ್‌ಸೆಟ್ ಮುದ್ರಣಾಲಯ ಶಿವಾಜಿ ಬೀದಿ, ಧಾರವಾಡ.

೫. ವೀರಣ್ಣ ರಾಜೂರು(ಸಂ) 'ಶಿವಶರಣೆಯರ ವಚನಗಳ ವಿಭಿನ್ನ ನೆಲೆಗಳು' ಪು. ೫೭, ೨೦೦೩, ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್ ಗದಗ.

೬ ಬಸವರಾಜ ಪೋಲಿಸಪಾಟೀಲ (ಸಂ). ೨೦೧೮, 'ಶರಣ ಜಾನಪದ' ಪು. ೪೩, ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರುಗಿ.

ಅಧ್ಯಾಯ : ಮೂರು

ವಚನಕಾರರ ವಚನಗಳಲ್ಲಿ ಸಮಾನತೆಯ ಸಂವೇದನೆಗಳು ಮತ್ತು ವೈಚಾರಿಕತೆಯ ವ್ಯಾಪಕತೆ

ಅಧ್ಯಾಯ : ಮೂರು

ವಚನಕಾರರ ವಚನಗಳಲ್ಲಿ ಸಮಾನತೆಯ ಸಂವೇದನೆಗಳು ಮತ್ತು ವೈಚಾರಿಕತೆಯ ವ್ಯಾಪಕತೆ

ಜಗತ್ತಿನಲ್ಲಿ ಹಲವಾರು ಧರ್ಮಗಳಿವೆ. ಸಾವಿರಾರು ಜಾತಿಗಳಿವೆ. ಸೀಮಿತ ಚೌಕಟ್ಟಿನೊಳಗೆ ಮತಗಳು, ಮತದಷ್ಟೇ ಸಮಾನವಾದುದು ಪಂಥ, ಮತ ಮತ್ತು ಪಂಥ ಒಂದೇ ಅರ್ಥವನ್ನು ಕೊಡುವ ಶಬ್ದಗಳು. ಅದರಂತೆ ಒಂದು ಚಿಂತನೆ ಅಥವಾ ಭೋಧನೆ ವಿಧಾನ, ಮತ ಮತ್ತು ಪಂಥಕ್ಕಿಂತ ವಿಶಾಲವಾದುದು? ಪಥ. ಪಥಕ್ಕೆ ಮಾರ್ಗವೆಂದು ಕರೆಯಲಾಗುತ್ತದೆ. ಪಥವನ್ನು ವಿಶಾಲ ದೃಷ್ಟಿಕೋನದಿಂದ ನೋಡುವುದಾದರೆ ಅನೇಕರು ಆ ಹಾದಿಯಲ್ಲಿ ನಡೆಯಬಹುದಾಗಿದೆ. ಹೇಗೆಂದರೆ, ಒಂದು ರಸ್ತೆಯಲ್ಲಿ ಒಂದೇ ಜಾತಿಯವರು ನಡೆಯುವುದಿಲ್ಲ. ಸರ್ವ ಜನಾಂಗದವರು ನಡೆಯುತ್ತಾರೆ, ಕ್ರಮಿಸುತ್ತಾರೆ. ಕ್ರಮಿಸುತ್ತಾ ತಮ್ಮ ಗಮ್ಯ ಸ್ಥಳ (Destination) ತಲುಪುತ್ತಾರೆ. ಅದನ್ನು ರಾಜಮಾರ್ಗ(ಪಥ)ವೆಂತಲು ಕರೆಯಬಹುದು. ಒಂದು ಊರಿಗೆ ಹೋಗಲು ಒಂದು ರಸ್ತೆ, ಊರೊಳಗೆ ಅನೇಕ ಕೇರಿಗಳು, ಪ್ರತಿಯೊಂದು ಕೇರಿಯಲ್ಲೂ ಒಂದೊಂದು ಬ್ರಾಹ್ಮಣರ ಕೇರಿ, ವೈಶ್ಯರ ಕೇರಿ, ಕ್ಷತ್ರಿಯರ ಕೇರಿ ಅದರಂತೆ ಶೂದ್ರರ ಕೇರಿ. ಶೂದ್ರರ ಕೇರಿಗೆ ಹೋಗುವ ರಸ್ತೆಯಲ್ಲಿ ಉಳಿದವರು ನಡೆಯದಿರಬಹುದು. ಶೂದ್ರರು ಉಳಿದವರ ಕೇರಿಯಲ್ಲಿ ನಡೆಯಲು ನಿರ್ಬಂಧವನ್ನು ಹೇರಲಾಗಿತ್ತು. ನಿರ್ಬಂಧರಹಿತವಾದುದು 'ಪಥ' ಎನಿಸಿಕೊಳ್ಳುತ್ತದೆ, ನಿರ್ಬಂಧಸಹಿತವಾದುದು 'ಜಾತಿ–ಮತ'ವೆನಿಸುತ್ತದೆ.

೧೨ ನೇ ಶತಮಾನಕ್ಕಿಂತ ಮೊದಲು ಅಸ್ಪೃಶ್ಯನೊಬ್ಬ ರಾಜಮಾರ್ಗದಲ್ಲಿ ನಡೆಯುತ್ತಿರಲಿಲ್ಲ. ಅವನು ಅಕಸ್ಮಾತ್ ಆ ಮಾರ್ಗದಲ್ಲಿ ಹೋಗುವುದಿದ್ದರೆ 'ಸಂಬೋಳಿ, ಸಂಬೋಳಿ' ಎನ್ನುತ್ತ ಹೋಗಬೇಕಾಗಿತ್ತು. ಸಂಬೋಳಿ ಎಂದರೆ ನಾನು ಬರುತ್ತಿದ್ದೇನೆ ನೀವು ದೂರ ಹೋಗಿರಿ ಎಂದು ಕೂಗಿ ಹೇಳಬೇಕಾಗಿತ್ತು. ಶೂದ್ರರ ಮುಖವನ್ನು ಉಳಿದ ಜಾತಿಯವರು ನೋಡುವಂತಿರಲಿಲ್ಲ. ಸಂಬೋಳಿ ಶಬ್ದವನ್ನು ಕೇಳಿದಾಕ್ಷಣವೇ ಅವರು ತಮ್ಮ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿಕೊಳ್ಳುತ್ತಿದ್ದರು. ನಡೆವ ಹಾದಿಯಲ್ಲಿ ಅಸ್ಪೃಶ್ಯನ ಹೆಜ್ಜೆಗಳು ಮೂಡುವಂತಿರಲಿಲ್ಲ. ಅದಕ್ಕಾಗಿ ಅವನು ತನ್ನ ಸೊಂಟದಲ್ಲಿ ಮುಳ್ಳು ಕಂಟಿಯನ್ನು ಕಟ್ಟಿಕೊಂಡು ನಡೆಯಬೇಕಾಗಿತ್ತು. ಇನ್ನು ಕೆಮ್ಮು–ದಮ್ಮು ಬಂದರೆ, ರಾಜಬೀದಿಯಲ್ಲಿ ಉಗುಳುವಂತೆ ಇರಲಿಲ್ಲ. ಅವನು ತನ್ನ ಕೊರಳಲ್ಲಿ ಮಡಿಕೆಯೊಂದನ್ನು ಕಟ್ಟಿಕೊಂಡು, ಅದರೊಳಗೆ ಉಗುಳಬೇಕಾಗುತ್ತಿತ್ತು. ಇಂಥ ಕಠೋರ ಯಾತನೆ ಮತ್ತು ಶೋಷಣೆ!

ಇದನ್ನೆಲ್ಲ ಗಂಭೀರವಾಗಿ ಗಮನಿಸಿದವರು, ಅಧ್ಯಯನ ಮಾಡಿದವರು ಸಮ ಸಮಾಜ ಕಟ್ಟಲು ಮುಂದಾದವರೆಂದರೆ ೧೨ ನೇ ಶತಮಾನದ ಎಲ್ಲ ವಚನಕಾರರು. ಎಲ್ಲರನ್ನು ಕರೆದುಕೊಂಡು ಹೋಗಲು ಒಂದು ಮಾರ್ಗ ಬೇಕಾಗಿತ್ತು. ಸರ್ವ ಜನಾಂಗದ ಅದರಲ್ಲೂ ನಿರ್ಲಕ್ಷಿತ ಜನಾಂಗಗಳನ್ನೆಲ್ಲ 'ಶಿವಪಥ'ದಲ್ಲಿ ಸೇರಿಸುವ ಪ್ರಯತ್ನ ನಡೆಯಿತು. ಶಿವನು ಪ್ರಕೃತಿಯ ಪ್ರತೀಕ, ಬಸವಾದಿ ಶರಣರ ಶಿವನು ಬಯಲುರೂಪಿ ಶಿವ. ಬಯಲು ಇಲ್ಲದಿದ್ದರೆ ಯಾವ ಲೋಕಗಳಿಗೂ ಅಸ್ತಿತ್ವ ಇಲ್ಲವೇ ಇಲ್ಲ. ಆಕಾರದಲ್ಲಿ ನಿರಾಕಾರ ಇದೆ ಎಂಬುದನ್ನು ವಚನಕಾರರು ಕಂಡುಕೊಳ್ಳುತ್ತಾರೆ. ಶಿವಪಥದಲ್ಲಿ ನಡೆಯುವವರದು ನಂತರ 'ಶರಣಪಥ' ಎನಿಸಿಕೊಳ್ಳುತ್ತದೆ. ಶರಣ ಪಥಕ್ಕೆ ಅಗಮ್ಯ ಅಗೋಚರ ಅಪ್ರತಿಮ ಶಿವನೇ ಆರಾಧ್ಯದೈವ. ಶಿವತ್ವವನ್ನು ಆರಾಧಿಸುತ್ತಾ ತಮ್ಮೊಳಗೆ ಶಿವನನ್ನು ಕಾಣುತ್ತ ತಾವೇ ಶಿವನಾಗುವ ಮಾರ್ಗವನ್ನು ಶರಣರು(ವಚನಕಾರರು) ಅನುಸರಿಸುತ್ತಾರೆ. ದ್ವೈತಭಾವದಲ್ಲಿ ಶಿವಬೇರೆ, ಜೀವ ಬೇರೆ, ದ್ವೈತವೆಂದರೆ ಎರಡು. ದ್ವೈತ ಮತ್ತು ಅದ್ವೈತದ ನಡುವಿನ ಸಂಘರ್ಷ ಬೇಡವೆಂದು ವಚನಕಾರರು 'ಶೂನ್ಯಸಿದ್ಧಾಂತ'ವನ್ನು ಪ್ರತಿಪಾದಿಸುತ್ತಾರೆ. ದ್ವೈತ, ಅದ್ವೈತ, ಶಿವಾದ್ವೈತದ ಸಾಧನೆಯು ಸೀಮಿತ. ಶೂನ್ಯದ ಸಾಧನೆಗೆ ಮಿತಿಗಳಿಲ್ಲ. ವಚನಕಾರರ ಶಿವನು ಶೂನ್ಯ 'ಬಯಲಬ್ರಹ್ಮ' ಸಾಧನೆಯ ಮೂಲಕ ತನ್ನನ್ನು 'ವಿಶ್ವರೂಪ'ಗೊಳಿಸುತ್ತ ಹೋದಾಗ ಶರಣ ಜಗವಾಗಬಲ್ಲ.

ವಚನಕಾರರು ಜನ ಸಾಮಾನ್ಯರೊಡನೆ ಬೆರೆತರು, ಉಸಿರಾಡಿದರು. ಅವರ ಆಚಾರ ವಿಚಾರಗಳಲ್ಲಿನ ಸೊಗಸನ್ನು ಕಂಡರು, ಮೆಚ್ಚಿದರು, ಅವರ ಮೌಢ್ಯವನ್ನು, ಕೊಳಕನ್ನು ತೊಳೆದರು. ಇಡೀ ಮನುಕುಲವನ್ನು 'ಏಕ'ವಾಗಿ ಕಂಡರು ಏಕದೇವತೋಪಾಸನೆ, ಭೇದರಹಿತವಾದ ಅಖಂಡವಾದ ಶರಣ–ಸಮಾಜ ಅವರು ಕಂಡ ಕನಸು.

"ಹಿಂದೂ ಸಮಾಜದಲ್ಲಿ ಅಥವಾ ಪ್ರಾಚೀನ ಆರ್ಯರ ಸಮಾಜದಲ್ಲಿ, ವರ್ಗ ಭೇದವಾಗಲೀ ವರ್ಣಭೇದವಾಗಲೀ ಇರದಿದ್ದರೂ, ಕಾಲಕ್ರಮೇಣ ಆರ್ಥಿಕ ಹಾಗೂ ಬೇರೆ ಬೇರೆ ರೀತಿಯ ಕಾರ್ಯಗಳಿಗೆ ವಿಶೇಷವಾದ ಪರಿಣಿತಿಯ ಅವಶ್ಯಕತೆಯಿಂದ ವರ್ಗ–ವರ್ಣ ಭೇದಗಳು ಹುಟ್ಟಿಕೊಂಡವು. ಈ ರೀತಿಯ ಸಾಮಾಜಿಕ ವಿಭಜನೆಯನ್ನು ಅತ್ಯಂತ ಪ್ರಾಚೀನವಾದ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ:

'ಬ್ರಹ್ಮವಾ ಇದಮಗ್ರ ಆಸೀತ್ ಏಕಮೇವ; ತದೇಕಂ ಸನ್
ನ ವ್ಯಭವತ್...ತದೇದದ್ ಬ್ರಹ್ಮಕ್ಷತ್ರಂ ವಟ್ ಶೂದ್ರಃ'

(ಬೃ.ಉ.೧೧, ೪, ೧೧–೧೫)

ಆದಿ ಸಮಾಜವು ಅವಿಭಕ್ತವಾಗಿ (ಶಂಕರ ಭಾಷೆಯ ಪ್ರಕಾರ ಎಲ್ಲರೂ ಬ್ರಾಹ್ಮಣರೇ ಆಗಿ) ಒಂದೇ ಆಗಿತ್ತು. ಆದರೆ ಒಂದೇ ಆಗಿದ್ದುದರಿಂದ ಅದು ಅಭಿವೃದ್ಧಿ ಹೊಂದಲಿಲ್ಲ... ಆದ್ದರಿಂದ ಕ್ಷತ್ರಿಯ ಎಂಬ ಒಂದು ಶ್ರೇಯಸ್ಕರವಾದ ಜನವಿಭಾಗದ ಸೃಷ್ಟಿಯಾಯಿತು... ಹೀಗೆ ಬ್ರಾಹ್ಮಣ,

ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು"[೧]. ವೈದಿಕ ಸಂಸ್ಕೃತಿ ಪ್ರಧಾನವಾಗಿ ವರ್ಣಾಶ್ರಮ ವ್ಯವಸ್ಥೆಯ ಮೂಲಕ ಸಮಾಜವನ್ನು ಪುಡಿಗಟ್ಟಿತು. ನಾಲ್ಕು ವರ್ಣಗಳು ಸಾಲದೆಂಬಂತೆ ಶೂದ್ರಾತಿಶೂದ್ರ ಅಥವಾ ಅಸ್ಪೃಶ್ಯರೆಂಬ ಐದನೆಯ ವರ್ಗವನ್ನು ಸೃಷ್ಟಿಸಿ ಸಮಾಜದ ಸ್ವಾಸ್ಥ್ಯವನ್ನೇ ಕದಡಿ ಕಂಗೆಡಿಸಿತ್ತು.

'ಶರಣರ ಸಮಾಜೋಧಾರ್ಮಿಕ ಚಳುವಳಿ, ಮೊದಲು ಪೆಟ್ಟುಕೊಟ್ಟಿದ್ದು ಈ ವರ್ಣವ್ಯವಸ್ಥೆಗೆ, ವರ್ಣವ್ಯವಸ್ಥೆ ಎಂಬುದು ಹುಟ್ಟಿನಿಂದ ಜಾತಿಯನ್ನು ನಿರ್ಧರಿಸುವ ಅವೈಜ್ಞಾನಿ, ಅವಮಾನೀಯ ಕ್ರೌರ್ಯ. ಅದು ಎಷ್ಟೇ ಪ್ರಾಚೀವಿರಬಹುದಾದರೂ ಆ ಕಾರಣಕ್ಕೆ ಅದು ಉಪಾದೇಯವಾಗಬೇಕಾದ್ದಿಲ್ಲ. ಆದರೆ ಇಂದಿಗೂ ಪ್ರವಚನ-ಪ್ರವೀಣ ಲಾಂಛನಧಾರಿಗಳು ತಮ್ಮ ಶೃತಿ ಸ್ಮೃತಿ ಶಾಸ್ತ್ರ ಪುರಾಣಗಳ ಅಪಾರ ಪಾಂಡಿತ್ಯದಿಂದ ಯುಕ್ತಿಯುಕ್ತವಾಗಿ ಅದನ್ನು ಸಮರ್ಥಿಸುತ್ತಲೇ ಮುಂದುವರೆದಿದ್ದಾರೆ. ಆ ಆಧಾರಗಳು ಪವಿತ್ರವೂ ಅಲ್ಲ, ಪ್ರಶ್ನಾತೀತವೂ, ವಿಮರ್ಶಾತೀತವೂ ಅಲ್ಲ.'

ನೂರಾರು ವರ್ಷಗಳಿಂದ ಜಿಡ್ಡುಬಿದ್ದಿದ್ದ, ಕೊಳೆತುನಾರುತ್ತಿದ್ದ, ಅನ್ಯಾಯ ಅಸಮಾನತೆಗಳ ಆಗರವಾಗಿದ್ದ ವರ್ಣಾಶ್ರಮವನ್ನು ಸಡಿಲಿಸಿ ಸಮಾಜದಲ್ಲಿ ಜೀವನೋತ್ಸಾಹ ಮೂಡಿಸುವುದು ಸುಲಭದ ಮಾತಾಗಿರಲಿಲ್ಲ. ಪಟ್ಟಭದ್ರಹಿತಾಸಕ್ತಿಗಳ ಕುತಂತ್ರ, ವ್ಯವಸ್ಥಿತ ವಿರೋಧ ಬೃಹತ್ ಪ್ರಮಾಣದಲ್ಲಿಯೇ ಎದುರಾಯಿತು. ಆಚಾರಕ್ಕೆ ಸದೃಢವಾದ ವಿಚಾರದ, ಚಿಂತನದ, ಸಂಕಲ್ಪ ಶಕ್ತಿಯ ಬುನಾದಿ ಇದ್ದುದರಿಂದ, ಯೌವ್ವನದಲ್ಲೇ ಕರ್ಮಲತೆಯಂತಿದ್ದ ಜನಿವಾರವನ್ನು ಕಿತ್ತೆಸೆದು, ತನ್ನ ತಾತ್ವಿಕ ನಿಲುವಿಗೆ ಬದ್ಧನಾಗಿದ್ದು, ಸಾಂಪ್ರದಾಯಕ ಸಮಾಜದ ತೀವ್ರ ಪ್ರತಿಭಟನೆಯನ್ನು ಲೆಕ್ಕಿಸದೆ, ಹಿಂಡನಗಲಿದ ಗಜದಂತೆ ಕ್ರಮಿಸಿದ ಬಸವಣ್ಣನವರಿಗೆ ಸಮಾಜದ ಸಹಚಿಂತಕರಿಂದಲೂ ಅಪಾರ ಪ್ರೋತ್ಸಾಹ, ನೆರವು ದೊರೆಯಿತು. ಜಾತಿಭೇಧವನ್ನು ನಿರಾಕರಿಸುವ ನಿಂದಿಸುವ, ಖಂಡಿಸುವ, ಅದಕ್ಕೆ ಪರ್ಯಾಯವಾಗಿ ಜಾತಿರಹಿತ ವಿನೂತನ ಸಮಾಜವನ್ನು ರೂಪಿಸುವ ಮಹದಾಶೆ ಮುಖ್ಯವಾಗಿ ಎಲ್ಲ ವಚನಕಾರರ ಗುರಿಯಾಗಿತ್ತು ಆದ್ದರಿಂದ ಸಹಜವಾಗಿ ವಚನಾಂದೋಲನದ ಕೇಂದ್ರ ಶಕ್ತಿ ಬಸವಣ್ಣವರು ಆದಿಯಾಗಿ ಎಲ್ಲ ವಚನಕಾರರು ಆಗಿದ್ದರು.

ವೈದಿಕ ಸಂಸ್ಕೃತಿಯು ಎಲ್ಲ ಆದಿಮಾನವ ಜನಾಂಗಗಳ ತಲ್ಲಣ, ಭಯ, ಕುತೂಹಲಗಳನ್ನು ಪ್ರಾಕೃತಿಕ ವಿದ್ಯಮಾನಗಳ ಬಗೆಗೆ ಹೊಂದಿದ್ದು, ಅದಕ್ಕೆ ಅನುಗುಣವಾಗಿ ಅನೇಕ ದೇವರುಗಳನ್ನು ಕಲ್ಪಿಸಿಕೊಂಡು, ತಾವು ದಾಟಲಾರದ, ಸಹಿಸಲಾರದ ಸಂಕಷ್ಟಗಳಿಗೆ ಒಂದು ಭಾವನಾತ್ಮಕ ತೃಪ್ತಿಯನ್ನು ಪಡೆದುಕೊಂಡಿತು. ಅನೇಕ ದೇವತಾವಾದ, ಪೂಜಾವಿಧಿ, ಕೊಟ್ಟು ತಗೆದುಕೊಳ್ಳುವ ವಾಣಿಜ್ಯ ಬುದ್ಧಿ, ಅನುಗ್ರಹಕ್ಕಾಗಿ ಹಾತೊರೆಯುವ ಅಸಹಾಯತೆ ಅವರ ಪೂಜಾವಿಧಾನಗಳಲ್ಲಿ, ಯಾಗ ಯಜ್ಞಗಳಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತವೆ.

ಮಾನವರಲ್ಲಿ ವಿಭೇದ

'ಪುರುಷಸೂಕ್ತದಲ್ಲಿ ವಿರಾಟ್‌ಪುರುಷನ ವರ್ಣನೆ ಬರುತ್ತದೆ, ಅತೀತವಾದುದನ್ನು, ಅನೂಹ್ಯವಾದುದನ್ನು, ಒಂದು ಸಾಕಾರದ ಚೌಕಟ್ಟಿನಲ್ಲಿ ಕಲ್ಪಿಸುವ ಪ್ರಯತ್ನದಲ್ಲಿ, ಇಲ್ಲಿನ ಋಷಿಯ ವಾಕ್ಶಕ್ತಿ ಭವ್ಯವಾಗಿದೆ, ಅದೆಲ್ಲಾ ಸರಿಯೇ

ಬ್ರಾಹ್ಮಣೋಸ್ಯ ಮುಖಮಾಸೀದ್ ! ಬಾಹೂ ರಾಜನ್ಯಃ ಕೃತಃ !

ಊರು ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ! (ವೈ.ಶಿ.ವಿ.ಪು.ಸೂ)

(ಆ ವಿರಾಟಪುರುಷನ ಮುಖದಿಂದ ಬ್ರಾಹ್ಮಣರೂ, ತೋಳುಗಳಿಂದ ಕ್ಷತ್ರಿಯರೂ, ತೊಡೆಗಳಿಂದ ವೈಶ್ಯರೂ, ಎರಡು ಕಾಲುಗಳಿಂದ ಶೂದ್ರರೂ ಜನಿಸಿದರು)

ಇದು ಸಾಂಕೇತಿಕ ಎಂದರೂ ಸ್ಪಷ್ಟವಾಗಿ ವರ್ಣತಾರತಮ್ಯದ ಘೋಷಣೆಯಾಗಿದೆ. ಮಾನವ ಸಮಾಜದಲ್ಲಿ ಭೇದವನ್ನುಂಟು ಮಾಡುವ ಕೃತಕ ವಿಭಜನೆಯಾಗಿದೆ.' ಆದರೆ, ಆಚರಣೆಯಲ್ಲಿ ಹುಟ್ಟಿನಿಂದ ನಿರ್ಧಾರಿತವಾಗುವ ವರ್ಣಾಶ್ರಮ ವ್ಯವಸ್ಥೆಯಲ್ಲಿ ಕೆಳವರ್ಗದ ಶೋಷಣೆ, ಕೆಳವರ್ಗಕ್ಕೆ ಅನೇಕ ಸವಲತ್ತುಗಳ ನಿರಾಕರಣೆ (ಕೊನೆಗೆ ಅಕ್ಷರ ವಿದ್ಯೆಯೂ ಸೇರಿದಂತೆ) ವ್ಯವಸ್ಥಿತ ರೀತಿಯಲ್ಲಿ ದಂಡಶಕ್ತಿಯನ್ನು ಓಲೈಸಿಕೊಂಡು ನಡೆದಿದೆ ಎನ್ನುವುದು ಐತಿಹಾಸಿಕ ಸತ್ಯ.

ಲಿಂಗ ತಾರತಮ್ಯ : ಇನ್ನು ವೇದಕಾಲದಲ್ಲಿ ಇಂದ್ರಾದಿಪುರುಷ ದೈವಗಳದೇ ಅಧಿಕಾರ, ವೈಭವ, ಮೆರವಣಿಗೆ, ಆದರೆ ಉಷಸ್ ಎಂಬ ಸ್ತ್ರೀ ಪ್ರಧಾನದೇವತೆ ಯಾಗಿದ್ದಾಳೆ. ಋಗ್ವೇದದಲ್ಲಿ ಇವಳ ಸ್ತುತಿಗಳಿಗಾಗಿ ಇಪ್ಪತ್ತಕ್ಕೂ ಮಿಕ್ಕ ಸೂಕ್ತಗಳ ಬಳಕೆಯಾಗಿವೆ. ಇವಳು ಶುಭದಾಯಿನಿ. ಇವಳು ಭಕ್ತರಿಗೆ ವರದೆ, ಪ್ರಸನ್ನೆ, ಇವಳನ್ನು ಸೂರ್ಯನ ಮಡಿದಿಯಂದೂ, ಕೆಲವು ಸೂಕ್ತಗಳಲ್ಲಿ ಸೂರ್ಯನ ತಾಯಿಯಂದು ವರ್ಣಿಸಲಾಗಿದೆ. ಋಗ್ವೇದದಲ್ಲಿಯೇ ಉಷೆಯನ್ನು ಕೆಲವು ಸೂಕ್ತಗಳಲ್ಲಿ ಅಗ್ನಿಯ ಮಡದಿ ಎನ್ನಲಾಗಿದೆ. ಒಟ್ಟಿನಲ್ಲಿ ಉಷೆಯ ಸಂಬಂಧಗಳಲ್ಲಿ ಗೊಂದಲವಿದೆ. ಋಷಿಯ ಮನೋಲಹರಿಗೆ ತಕ್ಕಂತೆ ಅವಳ ಸಂಬಂಧಗಳು ವ್ಯತ್ಯಾಸವಾಗಿವೆ. ಪುರುಷಪ್ರಧಾನವಾದ ಸಮಾಜದಲ್ಲಿ, ಪುರುಷಪ್ರಧಾನವಾದ ದೈವಗಣಗಳ ನಡುವೆ ಇವಳು ಸ್ತ್ರೀ ಸಮೂಹದ ಪ್ರತಿನಿಧಿಯಾಗಿ ಕಾಣುತ್ತಾಳೆ– ಇದು ಅಷ್ಟರಮಟ್ಟಿಗೆ ಸ್ತ್ರೀಪರ ಧೋರಣೆ ಎನ್ನಬಹುದೇ?

ವಧುವಿನ ಸ್ಥಾನಮಾನ–

ಋಗ್ವೇದದಲ್ಲಿ ವಧುವಿನ ಸ್ಥಾನಮಾನದ ಬಗ್ಗೆ ಕೆಲವು ಅಮ್ಯೂಲ ಮಾಹಿತಿಗಳು ದೊರೆಯುತ್ತವೆ.

ಪುರುಷ ಪಕ್ಷಪಾತ :

೧. 'ಈ ವಧು ಸುಮಂಗಲಿ, ಸೌಭಾಗ್ಯ ಉಂಟಾಗಲಿ ಎಂದು ಹರಸಿ'.

೨. 'ನಾನು ಗೃಹಸ್ಥನಾಗಿ ಬಾಳಲಿ' ಎಂದು ಭಗ, ಆರ್ಯಮನ್ ಮೊದಲಾದ ದೇವತೆಗಳು ಇವಳನ್ನು ನನಗೆ ಕೊಟ್ಟಿರುತ್ತಾರೆ.

೩. ವಧುವನ್ನು ಕುರಿತು, ನಿನ್ನ ಪತಿಯನ್ನು ಕೋಪದ ಕಣ್ಣಿನಿಂದ ದೃಷ್ಟಿಸಬೇಡ, ಪತಿಗೆ ಅನುಕೂಲೆಯಾಗಿರು, ಸದ್ಭಾವವಿರಲಿ, ಓಜಸ್ವಿನಿಯಾಗಿರು, ಗಂಡುಮಕ್ಕಳ ತಾಯಿಯಾಗು, ಹತ್ತು ಮಕ್ಕಳನ್ನು ಹೆತ್ತು ಗಂಡನನ್ನು ಹನ್ನೊಂದನೆಯ ಮಗುವಾಗಿ ಭಾವಿಸು' ಎಂದು

ಕೇಳಿಕೊಳ್ಳುತ್ತಾನೆ. 'ಗಂಡು ಮಕ್ಕಳ ತಾಯಿಯಾಗು' ಎಂಬಲ್ಲಿ ಸೂಕ್ಷ್ಮವಾದ ಲಿಂಗತಾರತಮ್ಯದ ವಾಸನೆ ಇದೆ. ಕುಲಪುತ್ರ ವಂಶವನ್ನು ಬೆಳೆಸುತ್ತಾನೆ. 'ಪುತ್' ಎಂಬ ನರಕದಿಂದ ಜನ್ಮದಾತರನ್ನು ತಪ್ಪಿಸುತ್ತಾನೆ ಇತ್ಯಾದಿ ವೈದಿಕ ನಂಬಿಕೆಗಳು ಇದರ ಬೆಂಬದಿಯಲ್ಲಿರುವಂತಿದೆ.

'ಗಂಡನನ್ನು ಹನ್ನೊಂದನೆಯ ಮಗುವಾಗಿ ಭಾವಿಸು' ಎಂಬುದನ್ನು ಬಹುರೀತಿಯಲ್ಲಿ ಅರ್ಥೈಸಬಹುದು. ಹೆಣ್ಣು ಪತ್ನಿಯಾದರೂ ಮೂಲತಃ ಸ್ವಭಾವತಃ ಮಾತೆ, ತಾಯಿ ಎಂಬ ಪರಿಗ್ರಹಿಕೆ ಇಲ್ಲಿರುವಂತಿದೆ. ಇಲ್ಲವೇ, ಅವಳ ಪಾಲಿಗೆ ಗೃಹಿಣಿಯಾಗಿ ಗಂಟುಬಿದ್ದ ನೂರೊಂದು ಹೊಣೆಗಾರಿಕೆಯ ಜೊತೆಗೆ ಮತ್ತೂ ಒಂದು ಹೊಣೆ. (ಇದನ್ನು ಕರುಣೆ ಎನ್ನಬೇಕೆ? ಕ್ರೌರ್ಯ ಎನ್ನಬೇಕೆ)

ದಾಂಪತ್ಯದ ಹಿರಿಮೆ :

ಋಗ್ವೇದದಲ್ಲಿ ಪರೋಕ್ಷವಾಗಿ; ದ್ಯಾವಾ-ಪೃಥಿವಿ'ಯರ ವರ್ಣನೆಯ ಮೂಲಕ ದಾಂಪತ್ಯದ ಹಿರಿಮೆಯನ್ನು ಸಾರಲಾಗಿದೆ. ವಿಶ್ವದ ಸಕಲ ಭೂತಗಳಿಗೆ ಇವರೇ ಆಧಾರ. ರಥದ ಎರಡು ಚಕ್ರಗಳಂತೆ ಇವರು. ದೇವತೆಗಳೆಲ್ಲಾ ಇವರೇ ಪುತ್ರರೇ. ಎಲ್ಲರೂ ಇವರನ್ನು ಸ್ತುತಿಸಿ ಇವರ ಅನುಗ್ರಹವನ್ನು ಬಯಸುತ್ತಾರೆ.

ಹೆಣ್ಣಿನ ಮಹತಿ :

ಋಗ್ವೇದದಲ್ಲಿ ಗೃಹಿಣಿಯನ್ನು ಅಗ್ನಿಗೆ ಹೋಲಿಸಲಾಗಿದೆ. ಅಗ್ನಿಯಂತೆ ಗೃಹಕ್ಕೆ ಅಲಂಕಾರವನ್ನುಂಟು ಮಾಡುತ್ತಾಳೆ ಎಂಬ ಪ್ರಶಂಸೆ ಇದೆ.

'ವೇದತ್ರಯೀ' ಎಂದು ಪ್ರಶಂಸಿಸಲಾದ ವೇದಸಾಹಿತ್ಯದ ಅಂತ್ಯಭಾಗವಾಗಿ ಉಪನಿಷತ್ ದರ್ಶನಗಳು ಮೂಡಿ ಬಂದವು. ಅವನ್ನು ವೇದಾಂತವೆಂದು ಕರೆಯಲಾಗಿದೆ. ವೇದವು ಕರ್ಮಭಾಗವಾದರೆ ಉಪನಿಷತ್ತುಗಳು ಜ್ಞಾನಭಾಗವೆಂದು ಸಾಮಾನ್ಯವಾಗಿ ಗ್ರಹಿಕೆ, ತತ್ವಜಿಜ್ಞಾಸೆ, ಮುಕ್ತವಿಚಾರಧಾರೆ, ವೈಚಾರಿಕ ಮನೋಧರ್ಮ ಉಪನಿಷತ್ತುಗಳ ಲಕ್ಷಣ. ಉತ್ತಮಾಂಶಗಳು, ಶಾಶ್ವತ ಮೌಲ್ಯಗಳು ಉಪನಿಷತ್ತುಗಳಲ್ಲಿ ಹರಳುಗೊಂಡಿವೆ. ತೆಗೆಯಾಗಿ ತೂಗಿವೆ, ಕೆನೆಯಾಗಿ ಹೆಪ್ಪುಗಟ್ಟಿದೆ. ಮತೀಯಾಚರಣೆಗಳ ದೊರೆಯನ್ನು ಕಳೆದುಕೊಂಡು ಶುದ್ಧ ವೈಚಾರಿಕ ಪ್ರಮೇಯಗಳಾಗಿ, ಧ್ಯಾನಸ್ತ ಸ್ಥಿತಿಯ 'ದರ್ಶನ'ಗಳಾಗಿ ಮೂಡಿವೆ. ಉಪನಿಷತ್ತಿನ ಋಷಿಗೆ ವರ್ಗ, ವರ್ಣ, ಗುಂಪು ಪ್ರಧಾನವೆನಿಸುವುದಿಲ್ಲ. ಇಡೀ ಮನುಕುಲವನ್ನು ಉದ್ದೇಶಿಸುವ ಅವನ ವಾಣಿ ಹೆಚ್ಚು ಮಾನವೀಯವಾಗಿ, ಜೀವಪರ ಕಾಳಜಿಗಳಿಂದ ತುಂಬಿದೆ.

೧. ಈಶಾವಾಸ್ಯ ಉಪನಿಷತ್ತಿನ 'ಈಶಾವಾಸ್ಯಮಿದಂ ಸರ್ವಂ' ಎಲ್ಲದರಲ್ಲೂ ಭಗವಂತನ ಅಸ್ತಿತ್ವವನ್ನು ಗುರುತಿಸಿ, ಸರ್ವಸಮಾನತೆಯ ತತ್ವಕ್ಕೆ ಬದ್ರಬುನಾದಿಯನ್ನು ಹಾಕಿದೆ.

೨. 'ಮಾಗೃಧಃ ಕದ್ಯಸ್ವಿದ್ಧನಂ' (ಯಾರೊಬ್ಬರ ಸ್ವತ್ತಿಗೂ ಆಸೆಪಡದಿರಿ) ಎಂಬ ಆದೇಶ. ಸಮಾಜದ ಸ್ವಾಸ್ಥ್ಯಕ್ಕೆ ಕಾರಣವಾಗಬಹುದಾದ ಉಪಾದೇಯವ್ರತ. 'ಕುರ್ವನ್ನೇವೇಹ ಕರ್ಮಾಣಿ ಜೀವಿಶೇತ್ ಶತಂಸಮಾಃ '(ದುಡಿಯುತ್ತಲೆ ನೂರು ವರ್ಷಗಳವರೆಗೂ ಬದುಕುವ ಆಶೆಬೇಕು)

ಇಲ್ಲಿ 'ಕಾಯಕ'ದ ಮೇಲಿರುವ ಒತ್ತು ಮತ್ತು ಇಹಲೋಕದಲ್ಲಿ ನೂರು ವರ್ಷಗಳು ಬದುಕುವ ಆಶೆ, ಮನುಕುಲ ಸರ್ವಕಾಲಕ್ಕೂ ಒಪ್ಪಿ ಸ್ವೀಕರಿಸಬಹುದಾದ ಸೂಚನೆಗಳಾಗಿವೆ.

ಕೇನೋಪನಿಷತ್ತಿನ ಶಾಂತಿ ಮಂತ್ರವಂತೂ ಬಹುಜನಸಮ್ಮತವಾದ, ಪ್ರಾಜ್ಞರೂ, ಉದಾರಶೀಲರೂ ಎಲ್ಲ ಕಾಲಕ್ಕೂ ಒಪ್ಪಿಕೊಳ್ಳಬಹುದಾದ ಶಾಶ್ವತ ಮೌಲ್ಯಗಳಿಂದ ಪ್ರಕಾಶಿತವಾಗಿದೆ. 'ಓಂ ಸಹನಾವವತು, ಸಹನೌಭುನಕ್ತು ಸಹವೀರ್ಯಂ ಕರವಾವಹೈ ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ ಓಂ ಶಾಂತಿಃ ಶಾಂತಿಃ ಶಾಂತಿಃ' (ನಾವಿಬ್ಬರೂ ಕೂಡಿ ಬಾಳೋಣ, ಒಟ್ಟಿಗೆ ಉಣ್ಣೋಣ, ಕೂಡಿ ನಮ್ಮ ಬಲವನ್ನು ಹೆಚ್ಚಿಸಿಕೊಳ್ಳೋಣ, ನಮ್ಮಲ್ಲಿ ಪರಸ್ಪರ ಹಗೆ ಸಲ್ಲ, ನಮಗೆ ಆಧ್ಯಾತ್ಮಿಕ ಶಾಂತಿ ಲಭಿಸಲಿ, ಮೂರು ಲೋಕಗಳಲ್ಲಿಯೂ (ಸ್ವರ್ಗ, ಮರ್ತ್ಯ, ಪಾತಾಳ) ಶಾಂತಿ ಲಭಿಸಲಿ.)

ಯಾವ ಧರ್ಮಸಂಹಿತೆ ಇದಕ್ಕಿಂತಲೂ ಉದಾತ್ತವಾದ, ಸಾರ್ವಕಾಲಿಕ, ಸಾರ್ವದೇಶಿಕ, ಸಾರ್ವಜನಾಂಗಿಕವಾದ, ಮತೀಯ ಪಂಥದಿಂದ ಅಲಿಪ್ತವಾದ ಸಂದೇಶಗಳನ್ನು ಕೊಡಲು ಸಾಧ್ಯ?

ಕಠೋಪನಿಷತ್ತು ಜೀವಾತ್ಮ-ಪರಮಾತ್ಮರಲ್ಲಿ ಅಭೇದವನ್ನು ಕಾಣುತ್ತದೆ, ಅದ್ವೈತ ಇದರ ಸಂದೇಶ. ಓಂಕಾರದ ಸಂಕೇತವನ್ನು ಸೃಷ್ಟಿಸಿ, ಮನಸ್ಸು ಧ್ಯಾನಾವಸ್ಥೆಯಲ್ಲಿ ತನ್ಮಯಗೊಳ್ಳಲು, ಲೀನವಾಗಲು ಒಂದು ಕೇಂದ್ರಬಿಂದು ಅಗತ್ಯವೆಂದು ಪ್ರತಿಪಾದಿಸುತ್ತದೆ. ಅದ್ವೈತದ ಸಂದೇಶ ಏರುಧ್ವನಿಯಲ್ಲಿ ಘೋಷಿತವಾದಲ್ಲೆಲ್ಲಾ ಎಲ್ಲ ರೀತಿಯ ಭಿನ್ನತೆ, ಭೇದ, ಅಸಮಾನತೆಗಳನ್ನು ಹೊಸಕಿಹಾಕುತ್ತದೆ. ಕೊನೆಯಪಕ್ಷ ತಾತ್ವಿಕವಾಗಿ ಸರ್ವ ಸಮಾನತೆಯ ಭಾವ, ಮಾನವ ಸಮಾಜದಲ್ಲಿ ಹರಡಲು ಪ್ರೇರಣೆ ದೊರೆಯುತ್ತದೆ.

ಮುಂಡಕೋಪನಿಷತ್ತು ಸಹ 'ಬ್ರಹ್ಮನನ್ನು ಅರಿಯುವುದು, ಬ್ರಹ್ಮವೆತ್ತನಾಗುವುದು' ಎಂದು ಅದ್ವೈತ ತತ್ವಕ್ಕೆ ಮುಗಿಬೀಳುತ್ತದೆ.

ತೈತ್ತಿರೀಯೋಪನಿಷತ್ತು, ಇಹಲೋಕದ ಬದುಕನ್ನು ಒಪ್ಪಿಕೊಂಡು, ಬರಿ ಭ್ರಮಾಲೋಕದಲ್ಲಿ ತೇಲದೆ, ಪರಲೋಕದ ಚಿಂತೆಯನ್ನೇ ಬಂಡವಾಳ ಮಾಡಿಕೊಳ್ಳದೆ, ಮಾನವೀಯ ಅಂಶಗಳನ್ನು ದಾಖಲಿಸುತ್ತದೆ.

'ವಿಪರೀತಕ್ಕೆ ತಲುಪಿದ ಪರಲೋಕನಿಷ್ಠೆಯ ಆಧ್ಯಾತ್ಮವಾದಕ್ಕೆ ವಿರುದ್ಧವಾದ ಇಹಲೋಕಕ್ಕೆ ಗಂಟುಬೀಳುವ ವ್ಯಕ್ತಿವಾದವನ್ನು ಈ ಉಪನಿಷತ್ತು ಬೋಧಿಸುತ್ತದೆ.

೧. 'ಸತ್ಯಂ ವದ, ಧರ್ಮಂ ಚರ' ಎಂಬ ಪ್ರಸಿದ್ಧ ಜನಪ್ರಿಯ ಉಲ್ಲೇಖ ಈ ಉಪನಿಷತ್ತಿನದು. ವಿಚಾರವಾದಿಗಳು, ಮತಾತೀತ ನಿಷ್ಠೆಯುಳ್ಳವರು. ಅತಿಯಾಗಿ ಮೆಚ್ಚಿಕೊಳ್ಳುವ ವಾಕ್ಯ ಇದು. (ಸತ್ಯವನ್ನೇ ನುಡಿ, ಧರ್ಮವನ್ನೇ ಆಚರಿಸು) ಈ ಉಪನಿಷತ್ತು ಸರ್ವಕಾಲ, ಸರ್ವದೇಶ, ಸರ್ವಜನಪದ ಸಮಾನವಾದ ನೀತಿಸಂಹಿತೆಯನ್ನು ಲೋಕದ ಮುಂದಿಟ್ಟಿದೆ.

೨. ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ, ಅತಿಥಿದೇವೋಭವ.

೩. 'ಆನಂದೋ ಬ್ರಹ್ಮೇತಿ ವ್ಯಜನಾತ್ (ಆನಂದವೇ ಬ್ರಹ್ಮವೆಂಬ ತಿಳಿವು)

೪. ಅನ್ನಂ ನ ನಿಂದ್ಯಾತ್, ಅನ್ನಂ ನ ಪರಿಚಕ್ಷೀತ್, ಅನ್ನಂ ಬಹುಕುರ್ವೀತ (ಅನ್ನವನ್ನು ನಿಂದಿಸಬಾರದು, ಅನ್ನವನ್ನು ಹೀಗಳೆಯಬಾರದು, ಅನ್ನ ವೃದ್ಧಿಯಾಗುವಂತೆ ನೋಡಿಕೊಳ್ಳಬೇಕು.

'ಇದೇ ಕಾಲಖಂಡದಲ್ಲಿ ತಲೆಎತ್ತಿದ ಲೋಕಾಯತನ (ಚಾರ್ವಾಕ ಮತ) ಮತವು ವೈದಿಕರ ನಂಬಿಕೆಗಳಿಗೆ ಗದಾಪ್ರಹಾರ ಮಾಡಿತು.

೧. 'ನ ಏವ ವರ್ಣಾಶ್ರಮಾಧೀನಂ ಕ್ರಿಯಾಶ್ಚ ಫಲದಾಯಿಕಾ' ಇದು ಚಾರ್ವಾಕರ ನಿಸ್ಸಂದಿಗ್ಧ ತೀರ್ಮಾನ. ವರ್ಣಗಳಿಗೆ, ಆಶ್ರಮಗಳಿಗೆ ವಿಶಿಷ್ಟವಾದ ಕ್ರಿಯಾಕರ್ಮಗಳು ಯಾವವೂ ಫಲ ಕೊಡುವುದಿಲ್ಲ. 'ಅಂದರೆ ಚಾರ್ವಾಕರು ಕೇವಲ ಮನುಷ್ಯನನ್ನು ಮನುಷ್ಯನೆಂದು ಗುರುತಿಸಿದರು.'

೨. ಚಾರ್ವಾಕರು ತಮ್ಮ ನಿಶ್ಚಿತವಾದ ತರ್ಕದಿಂದ, ವಾದದಿಂದ, ವೈದಿಕರ ಕರ್ಮಕಾಂಡದ ಆಚರಣೆಗಳನ್ನು ನುಚ್ಚುನೂರು ಮಾಡಿದರು ವರ್ಣಾಶ್ರಮ ವ್ಯವಸ್ಥೆಯನ್ನು ಧಿಕ್ಕರಿಸಿದರು. ಮೂರು ವೇದಗಳನ್ನು ರಚಿಸಿದವರನ್ನು 'ಭಂಡರು, ಧೂರ್ತರು, ನಿಶಾಚರ'ರೆಂದು ಕರೆದರು.

೩. ಯಾಗದಲ್ಲಿ ಕೊಲ್ಲಲ್ಪಟ್ಟ ಪಶೂವು ಸ್ವರ್ಗಕ್ಕೆ ಹೋಗುವುದಾದರೆ ಯಜಮಾನನು ತನ್ನ ತಂದೆಯನ್ನು ಏಕೆ ಕೊಲ್ಲಬಾರದು? ಎಂಬ ಇಕ್ಕಟ್ಟಿನ ಪ್ರಶ್ನೆಯನ್ನು ಮುಂದಿಟ್ಟರು.

೪. ಚಾರ್ವಾಕರು ವರ್ಣವ್ಯವಸ್ಥೆಯನ್ನು ಮಾತ್ರವಲ್ಲ, ಸ್ತ್ರೀಯರ ಮೇಲಿನ ವಿಧಿನಿಷೇಧಗಳನ್ನು ಸಹ ಧಿಕ್ಕರಿಸಿದರು.

೫. ಚಾರ್ವಾಕರು ಉದ್ದೇಶಪೂರ್ವಕವಾಗಿ ವರ್ಣಗಳಲ್ಲಿ ಮೊದಲೆರಡನ್ನು ಅವಜ್ಞೆಮಾಡಿ ದೈಹಿಕ ಶ್ರಮದ ವೃತ್ತಿಗಳನ್ನು ಪುರಸ್ಕರಿಸಿದರು.

೬. ವಾರ್ವಾಕರು ವರ್ಣವ್ಯವಸ್ಥೆಯನ್ನು ಟೀಕಿಸಿದರು, ಸ್ತ್ರೀಯರ ಮೇಲಿನ ಬಂಧನಗಳನ್ನು ಖಚಿತವಾಗಿ ಧಿಕ್ಕರಿಸಿದರು.'

ಈ ಎಲ್ಲ ಪ್ರಸಂಗಗಳನ್ನು ಇಲ್ಲಿ ಸ್ಮರಿಸುವುದು, ಮಾನವ ಸಮಾಜದಲ್ಲಿ ಅಸ್ಖಲಿತವಾಗಿ ಅಂಟಿಕೊಂಡಿರುವ ಅಸಮಾನತೆಯನ್ನು ಪುಡಿಗಟ್ಟುವ, ಸಮಾನತೆಯನ್ನು ಅಳವಡಿಸುವ ಅನೇಕ ಪ್ರಯತ್ನಗಳು ನಿರಂತರನಡೆದಿವೆ– ಎಂಬುದನ್ನು ಗುರುತಿಸಲು ಮಾತ್ರ.

'ವಚನಕಾರರಿಗೆ ಸರ್ವಸಮಾನ ಗೌರವವುಳ್ಳ ಮಾನವೀಯ ಮೌಲ್ಯಾಧಾರಿತ ಸಮಾಜ ನಿರ್ಮಾಣದ ಸ್ಫೂರ್ತಿ, ಪ್ರೇರಣೆ ಅವರಿಗಿಂತ ಹಿಂದಿನ ಕೆಲವು ಪ್ರಯತ್ನಗಳಲ್ಲಿ ಕಂಡಿದೆ. ಆ ಎಳೆಗಳನ್ನು ಗುರುತಿಸಿ, ಅದಕ್ಕೆ ತಾತ್ತ್ವಿಕ ನೆಲೆಗಟ್ಟನ್ನು ಸಮೆದು, ವೀರವ್ರತವೆಂಬಂತೆ ಅದನ್ನು ನಿಜಮಾಡುವ, ಅದಕ್ಕೊಂದು ಚಳುವಳಿಯ ರೂಪ ಕೊಡುವ ಸಾಹಸ ಮಾತ್ರ ವಚನಕಾರರದೇ ಆಗಿದೆ.'

ಒಟ್ಟಾರೆ ವಚನಕಾರರು ಸರ್ವಸಮಾನತೆಗಾಗಿ ರಚಿಸಲ್ಪಟ್ಟ ವಚನಸಾಹಿತ್ಯ ಒಂದು ಹಾಲ್ಗಡಲು. ಅದರಲ್ಲಿ ಮುತ್ತು, ಅಮೂಲ್ಯ ರತ್ನಗಳು, ಅಂತರಾಳದಲ್ಲಿ ಹವಳದ ಬಳ್ಳಿಗಳೂ, ತಳದಲ್ಲಿ ಪರ್ವತಶ್ರೇಣಿಯೂ

ಇರುವ ಸಾಧ್ಯತೆ ಇದೆ. ಜಲಚರಗಳಂತೂ ಸರಿಯೇ ಸರಿ. ಅಭ್ಯಾಸಿಗಳಿಗೆ ಬೇಕಾದದ್ದು ಅಲ್ಲಿ ದೊರೆಯಬಹುದು, ಅವರಿಗೂ ದಕ್ಕದ್ದು, ಮಿಕ್ಕು ಮೀರಿ ಅಲ್ಲಿರಬಹುದು. ಪ್ರಧಾನವಾಗಿ ಅಸಮಾನತೆಯನ್ನು, ಅನ್ಯಕ್ಯತೆಯನ್ನು ತಲಸ್ಪರ್ಶಿಯಾಗಿ ವಿರೋಧಿಸಿ, ಸಮಾಜವನ್ನು ಇಡಿಯಾಗಿ ಆತ್ಮೀಯವಾಗಿ ಆಲಂಗಿಸುವ, ಎಲ್ಲವನ್ನು ಎಲ್ಲರಿಗೂ ತೆರವಾಗಿಸುವ ಜನಪದ ಕಾಳಜಿಯ ಪರಿಣಾಮವೇ ಈ ಚಳುವಳಿ. ಆದ್ದರಿಂದ ನೇರವಾಗಿ ದಿಟ್ಟವಾಗಿ ಅದು ವರ್ಣವ್ಯವಸ್ಥೆಯನ್ನು ವಿರೋಧಿಸಿತು. ತಾವು ಕಟ್ಟಲಿದ್ದ ವಿನೂತನ ಸಮಾಜದಲ್ಲಿ ಮಾನವರೆಲ್ಲ ಒಂದೆಂಬ ಧ್ಯೇಯ ತಳಪಾಯವಾಯಿತು. ವರ್ಣಸಂಕರದ ಬಗ್ಗೆ ವೈದಿಕ ಧರ್ಮಕ್ಕಿದ್ದ ಭಯವನ್ನು ಅದೊಂದು ಮಹಾಪಾತಕವೆಂಬ ಗ್ರಹಿಕೆಯನ್ನು ಬುಡಮೇಲು ಮಾಡಿ, ವರ್ಣಸಂಕರವು ಗುಣಾತ್ಮಕವಾದುದು, ಅಪೇಕ್ಷಣೀಯವಾದುದು, ಮಾನವೀಯವಾದುದು ಎಂಬುದನ್ನು ಬೋಧಿಸಿ, ಆಚರಿಸಿ ತೋರಿಸಿತು. ಹೊಸ ಸಮಾಜಕ್ಕೆ ಒಂದು ವಿನೂತ 'ಅಸ್ಮಿತೆ'ಯನ್ನು ತಂದುಕೊಡಲು, ಕೆಲವು ಸ್ಪಷ್ಟ ವಿಧಿವಿಧಾನಗಳನ್ನು ಅಳವಡಿಸಬೇಕಾಗಿತ್ತು.

"ವಚನಕಾರರು ಆಧ್ಯಾತ್ಮ ಮತ್ತು ಭೌತಿಕತೆಯ ಸಮನ್ವಯತೆಯನ್ನು ಬದುಕಿನಲ್ಲಿ ಕಾಣಲು ಬಯಸಿದರು. ಇವರು 'ಜೀವನ'ವನ್ನು ಕುರಿತು ಜೀವನವನ್ನು ಇಲ್ಲವಾಗಿಸುವುದೇ 'ಜೀವನ'ವೆಂದು ಅರ್ಥೈಸಿದರು. ಇಲ್ಲಿ 'ಜೀವ' ಇಲ್ಲವಾಗಿಸುವುದೆಂದರೆ ಜೀವತ್ವದಿಂದ 'ಶಿವತ್ವ'ದ ಹಂತಕ್ಕೆ ಮುಟ್ಟುವುದು ಎಂದು ಅರ್ಥ. ಈ ಹಂತ ತಲುಪಲು ಸಾಕಷ್ಟು ಸಾಧನೆಯಾಗಬೇಕು ಎಂದು ಶರಣರು ಬಯಸಿದ್ದರು"[೨]. ಸರ್ವಸಮಾನತೆಯ ಬಾಹ್ಯ ಲಾಂಚನವಾಗಿ, ವಿಭೂತಿಧಾರಣೆ, ಇಷ್ಟಲಿಂಗಧಾರಣೆ ಒದಗಿ ಬಂದರೆ ಸಾಧನಾಪಥಗಾಮಿಗೆ ಒಂದು ಶಿಷ್ಟಾಚಾರ ಸಂಹಿತಯೇ ಇದೆ. ಗುರು ಲಿಂಗ ಜಂಗಮವನ್ನು ಗೌರವಿಸಿ ಪೂಜಿಸುವುದು, ಷಟ್ಸ್ಥಲ ಸಿದ್ಧಾಂತವನ್ನು ಮನವರಿಕೆ ಮಾಡಿಕೊಂಡು ಜೀವ ಅಥವಾ ಅಂಗ ಕ್ರಮವಾಗಿ ಭಕ್ತಸ್ಥಲದಿಂದ ಐಕ್ಯಸ್ಥಲದವರೆಗೆ ಕ್ರಮಾನುಗತವಾಗಿ ಮುಂದುವರಿಯುವುದು– ಇವು ಎಷ್ಟೇ ಮಹತ್ವದ್ದಾದರೂ ಒಂದು ಮತೀಯ ಆವರಣದಾಚೆಗೆ ಅವುಗಳು ಅಪ್ರಸ್ತುತವಾಗಬಹುದು, ಅರ್ಥ ಕಳೆದುಕೊಳ್ಳಬಹುದು. ಆದರೆ ಸಮಾನತೆಯನ್ನು ಸಾಧಿಸುವ ಸಾಧನಗಳೆಂದರೆ, ಅವು ಒಂದು ಕಾಲನ್ನು ಮತೀಯ ಪರಿಧಿಯಲ್ಲಿಟ್ಟಿದ್ದರೂ ಅದರಾಚೆಗೂ ತುಡಿಯುವ ಅದರ ಬಾಹುಗಳು ಮಾನವತೆಯನ್ನು ಆಲಂಗಿಸಲು ಸದಾ ಹಾತೊರೆಯುತ್ತಿರುತ್ತವೆ.

ಉದಾಹರಣೆ ಇಷ್ಟಲಿಂಗದ ಪರಿಕಲ್ಪನೆ, ಇದು ಕೇವಲ ಔಪಚಾರಿಕವಾದ ಲಾಂಛನ ಮಾತ್ರವಲ್ಲ, ಮತೀಯ ಪರಿಧಿಗೆ ಮಾತ್ರ ಸೀಮಿತವಾದ ಪರಿಕಲ್ಪನೆಯೂ ಅಲ್ಲ. ಈಗಾಗಲೇ ಈ ಬರಹದಲ್ಲಿ ಗಮನಿಸಿರುವಂತೆ ಇಷ್ಟಲಿಂಗಧಾರಣೆಯ ಮೂಲಕ ಜೀವಿಗೆ ಹೊಸ ನಂಬಿಕೆ, ಆತ್ಮವಿಶ್ವಾಸ, ಒಂದು ಬದ್ಧತೆ, ಎಲ್ಲಕ್ಕಿಂತ ಮುಖ್ಯವಾಗಿ 'ಪದೋನ್ನತಿ' ಸಿದ್ಧಿಸುತ್ತದೆ. ಜೀವಿಗೆ ಪೂರ್ವಾಶ್ರಮದಲ್ಲಿದ್ದಿರಬಹುದಾದ ಕೀಳರಿಮೆ, ಅವಮಾನ, ಅವಕಾಶ ನಿರಾಕರಣೆ, ಒಂದು ನಿರ್ದಿಷ್ಟ ಸ್ಥಾನಬದ್ಧತೆ, ಚಲನಹೀನತೆ– ಇಲ್ಲಿ ದಿಢೀರೆಂದು ಬದಲಾಗುತ್ತದೆ. ಶತಶತಮಾನಗಳಿಂದ ಮುದುಡಿಹೋಗಿದ್ದ ಮನಸ್ಸಿಗೆ ಬಿಡುಗಡೆ– ಅದರ ಫಲವಾಗಿ ಚಿಂತನ, ಮಂಥನ, ಚರ್ಚೆ, ಆತ್ಮಾವಲೋಕನ, ಸೃಜನಶೀಲತೆಗಳಿಗೆ ದಾರಿ ತೆರೆಯುತ್ತದೆ.

ಜೀವ ಅಥವಾ ಅಂಗಕ್ಕೆ ಲಿಂಗಸಮಾನತೆ ಸಿದ್ಧಿಸಿ, ಒಂದು ಮೂಕಸುಪ್ತ, ಬಂಧಿತ, ಶೋಷಿತ ಸ್ತ್ರೀ ಸಮಾಜ ಪುರುಷನೊಡನೆ ಸಮಾನವಾಗಿ ಗುರುತಿಸಿಕೊಳ್ಳುತ್ತದೆ. ಯುಗಮಾನಗಳಿಂದ ಸುಪ್ತವಾಗಿದ್ದ ಮಾನಸದಲ್ಲಿ ತರಂಗಗಳೆದ್ದು ನಲಿದಾಡುತ್ತವೆ. ಅದರ ಪರಿಣಾಮವಾಗಿ ನೂರಾರು ವಚನಕಾರ್ತಿಯರು ಚಿಂತಿಸುತ್ತಾರೆ, ತರ್ಕಿಸುತ್ತಾರೆ, ಪ್ರತಿಕ್ರಿಯಿಸುತ್ತಾರೆ., ಬಾಳುತ್ತಾರೆ, ಬದುಕುತ್ತಾರೆ, ವಚನ ರಚನೆ ಮಾಡುತ್ತಾರೆ. ಇದು ಸಮಾನ್ಯವಾದ ಮಾತಲ್ಲ. ಅಷ್ಟೇ ಅಲ್ಲ, ಇಷ್ಟಲಿಂಗ ಪರಿಕಲ್ಪನೆಯನ್ನು ಕುರಿತು ಆಮೂಲಾಗ್ರ ವಿಚಿಕಿತ್ಸಕ ಬುದ್ಧಿಯಿಂದ ವಿಮರ್ಶಿಸುತ್ತಾರೆ.

ಇಷ್ಟಲಿಂಗಕ್ಕೂ ಪ್ರಾಣಲಿಂಗಕ್ಕೂ ಇರುವ ಬೇಧವನ್ನು ಕುರಿತು ವಿಚಾರ ಮಾಡುತ್ತಾರೆ. ಅಂಗದ ಮೇಲಿನ ಲಿಂಗ ನಷ್ಟವಾದರೆ ಏನು ಪ್ರಾಯಶ್ಚಿತ ಎಂಬ ಚರ್ಚೆಯಲ್ಲಿ ಬಾಗಿಗಳಾಗುತ್ತಾರೆ. ಹೀಗೆ ಅವಜ್ಞೆಗೆ ಪಾತ್ರವಾಗಿದ್ದ, ಜಡವಾಗಿದ್ದ ಒಂದು ವರ್ಗ ಪ್ರಬುದ್ಧವಾಗಿಬಿಡುವುದು ಪವಾಡ ಸದೃಶವಾದ ಪರಿವರ್ತನೆ ಅಲ್ಲವೆ?

'ಗುರು ಲಿಂಗ ಜಂಗಮ'ವೆಂಬ ತ್ರಿವಿಧದಲ್ಲಿ ಬೇಧವಿಲ್ಲ, ಸಮಾನ ಎಂಬ ಅರಿವು. ಅದ್ವೈತದಲ್ಲಿ ನಂಬಿಕೆ, ಅದರ ಪರಿಣಾಮವಾಗಿ ಏಕದೇವತಾವಾದ. ಅದಕ್ಕೆ ಅಸದೃಶವಾದ ನೂರೆಂಟು ಅಳಿದೈವಗಳ ನಿರಾಕರಣೆ. ಇಡೀ ಮನುಕುಲಕ್ಕೆ ಒಬ್ಬ ದೇವ ಎಂದು ಒಪ್ಪಿಕೊಂಡಾಗ ಮಾನವರೆಲ್ಲ ಸಮ, ಸಮಾನ ಎಂಬ ಮುಂದಿನ ನೆಲೆಗೆ ತಲುಪುವುದು ಸುಲಭ. ನುಡಿಯಲ್ಲಿ, ನಡೆಯಲ್ಲಿ, ಆದರ್ಶದಲ್ಲಿ ಕನಸಿನಲ್ಲಿ, ದಾಂಪತ್ಯದಲ್ಲಿ, ಧಾರ್ಮಿಕ ವಿಧಿಯಲ್ಲಿ – ಹೀಗೆ ಎಲ್ಲದರಲ್ಲೂ 'ಸಮಾನತೆ'ಯನ್ನು ಕಾಣುವುದು, ಕಂಡು ಅದನ್ನು ಮೌಲ್ಯವೆಂದು ಪರಿಗಣಿಸಿ, ಸಾಧಿಸುವುದು ವಚನ ಸಾಹಿತ್ಯದ ಮತ್ತು ವಚನಕಾರರ ಅಘೋಷಿತ ಉದ್ದೇಶಗಳಲ್ಲಿ ಒಂದು. ಈ ಉದ್ದೇಶ ಎಲ್ಲ ವಚನಕಾರರಿಗೂ ಸಮ, ಸಮಾನ, ಮಾನ.

ವಚನಕಾರರ ದೃಷ್ಟಿಯಲ್ಲಿ ವೈಚಾರಿಕತೆಯ ವ್ಯಾಪಕತೆ :

"ವೈಚಾರಿಕತೆ ಎಂದರೆ ವಿಚಾರಶೀಲತೆ, ಚಿಂತನಶೀಲತೆ. ಮನುಷ್ಯನ ಬದುಕಿನಲ್ಲಿ ವಿಚಾರದಿಂದಲೇ ಬದಲಾವಣೆ, ವಿಚಾರದಿಂದಲೇ ಬೆಳಕು. ಜೀವನಕ್ಕೆ ಒಂದು ಅರ್ಥವಿದ್ದರೆ ಅದು ಮಾನವನವಿಚಾರಶೀಲತೆಯ ಪರಿನಾಮದಿಂದ ಮಾತ್ರ, ಅದಕ್ಕಾಗಿ 'ಅರಿವೆ ಗುರು' ಎಂದು ಶರಣ ಹಾವಿನಾಳ ಕಲ್ಲಯ್ಯನವರು ಹೇಳಿದರೆ. 'ವಿವೇಚನೆಯೇ ಶಿಕ್ಷಕ' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ.

ವೈಚಾರಿಕತೆಯ ಮುಖ್ಯ ಲಕ್ಷಣಗಳು :

೧. ಪ್ರಶ್ನೆ ಮಾಡುವ ಮನೋಭಾವ : ಯಾವುದನ್ನೂ ಪ್ರಶ್ನಿಸದೆ ಒಪ್ಪಿಕೊಳ್ಳಬಾರದು. ಎಷ್ಟೇ ದೊಡ್ಡವರಾಗಲಿ, ವಿದ್ವಾಂಸರಾಗಿರಲಿ ಅವರು ಹೇಳಿದ್ದೆಲ್ಲಾ ಸತ್ಯವಾಗಿರಬೇಕಾಗಿಲ್ಲ ಅವರ ಹೇಳಿಕೆಗಳು ತಾರ್ಕಿಕವಾಗಿದ್ದರೆ ಮಾತ್ರ ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಪ್ರಶ್ನಿಸಬೇಕು.

ಹಾಗೆಂದು ವಾದ ಮಾಡುವುದಲ್ಲ. ಹಾಗೆಯೇ ಎಷ್ಟೇ ಪುರಾತನ ಪ್ರಸಿದ್ಧ ಧರ್ಮ ಗ್ರಂಥಗಳು ಏನೇ ಹೇಳಿರಲಿ, ಅವು ಎಲ್ಲ ಕಾಲಕ್ಕೂ ಸತ್ಯ ಎಂದು ಯಾಂತ್ರಿಕವಾಗಿ ನಂಬಬಾರದು.

೨. ಪರೀಕ್ಷಿಸಸುವುದು : ಎಲ್ಲವನ್ನೂ ಪರೀಕ್ಷಿಸಿ, ವಿಶ್ಲೇಷಿಸಿ ತಾಳೆ ನೋಡುವುದರ ಮೂಲಕ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಬೇಕು. ಪರೀಕ್ಷಿಸದೆ ಯಾವುದನ್ನೂ ಒಪ್ಪಬಾರದು.

ತೆರೆದ ಮನಸ್ಸು : ಹೊಸ ಮಾಹಿತಿ, ಅನುಭವಗಳ ಆಧಾರದ ಮೇಲೆ ನಮ್ಮ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳಬೇಕು. ಎಲ್ಲ ಕಾಲಕ್ಕೂ ನಮ್ಮ ಅಭಿಪ್ರಾಯಗಳೇ ನಿತ್ಯ ಸತ್ಯ ಎನ್ನುವ ಮೊಂಡುವಾದಿಗಳು, ಹಟವಾದಿಗಳು ಆಗಬಾರದು"೩. ಮನುಷ್ಯನಿಗೆ ನಂಬಿಕೆ ಇರಬೇಕು, ಆದರೆ ಮೂಢನಂಬಿಕೆ ಇರಬಾರದು ತಿಳುವಳಿಕೆಯನ್ನಿಟ್ಟುಕೊಂಡು ನಂಬುವ ನಂಬಿಕೆ ಸಹಜವಾದ ನಂಬಿಕೆ. ಮೌಢ್ಯತೆಯಿಂದ ನಂಬುವ ನಂಬಿಕೆ ಮೂಢನಂಬಿಕೆ. ಮೂಢನಂಬಿಕೆಗೆ ಅಜ್ಞಾನ, ಮಾನಸಿಕ ತೊಂದರೆ ಇತ್ಯಾದಿ ಕಾರಣಗಳಿರುತ್ತವೆ. ಯಾವುದೇ ಒಬ್ಬ ವ್ಯಕ್ತಿಯನ್ನು ನಂಬುವುದರಿಂದ ನಂಬಿಕೆದ್ರೋಹವಾಗಬಹುದು. ಆದರೆ ಇದರಿಂದ ಚೇತರಿಸಿಕೊಳ್ಳಬಹುದು. ತಪ್ಪು ನಂಬಿಕೆಯಿಂದ ಹೀಗಾಯಿತೆಂದು ತಿಳಿದುಕೊಳ್ಳಬಹುದು. ಆದರೆ ಅಜ್ಞಾನದಿಂದ ಅನಕ್ಷರತೆಯಿಂದ, 'ಮೌಢ್ಯದಿಂದ ನಂಬುವ ನಂಬಿಕೆ ಮೂಢನಂಬಿಕೆಯಾಗಿ, ಮುಂದೆ ಅದೊಂದು ಪರಂಪರೆಯಾಗಿ ಬೆಳೆದು ನಿಲ್ಲುವುದರಿಂದ ಇಡೀ ಸಮಾಜವ್ಯವಸ್ಥೆಯನ್ನೇ ಹಾಳುಮಾಡುತ್ತದೆ.' ಆದ್ದರಿಂದ ಮೂಢನಂಬಿಕೆ ಹೆಚ್ಚು ಅಪಾಯಕಾರಿಯಾಗಿ ಕಾಣುತ್ತದೆ. ವ್ಯಕ್ತಿ ಮತ್ತು ಸಮುದಾಯದ ಆರೋಗ್ಯಕರ ಬೆಳವಣಿಗೆಗೆ ಅಡ್ಡಲಾಗುವ ಮೂಢನಂಬಿಕೆ ಸಮಾಜದ ಹಿಂದುಳಿವಿಕೆಗೂ ಕಾರಣವಾಗುತ್ತದೆ.

'ನಾಡಿನ ಸಾಂಸ್ಕೃತಿಕ-ಸಾಹಿತ್ಯ ಕ್ಷೇತ್ರವನ್ನು ಗಮನಿಸಿದಾಗ ಮೂಢನಂಬಿಕೆಯ ವಿರುದ್ಧ ಮೊಟ್ಟಮೊದಲು ಧ್ವನಿಯೆತ್ತಿದವರು ಹನ್ನೆರಡನೇ ಶತಮಾನದ ವಚನಕಾರರೆಂಬುದು ಸ್ಪಷ್ಟವಾಗುತ್ತದೆ. ವಚನಸಾಹಿತ್ಯವು ಏಕಕಾಲಕ್ಕೆ ಧಾರ್ಮಿಕ-ಸಾಮಾಜಿಕ ಎರಡೂ ಕ್ಷೇತ್ರಗಳಲ್ಲಿ ಆಂದೋಲನವನ್ನು ಪ್ರಾರಂಭಿಸಿದ್ದರಿಂದ ಮೂಢನಂಬಿಕೆಯ ವಿಷಯ ವಚನಕಾರರಿಗೆ ಮುಖ್ಯವಾಯಿತು.'

ವೈಚಾರಿಕತೆಯಿರುವಲ್ಲಿ ಮೂಢನಂಬಿಕೆ ಇರಲಾರದು. ಆದರೆ ಅನಕ್ಷರಸ್ಥರೇ ಹೆಚ್ಚಾಗಿರುವಂತಹ ಈ ದೇಶದಲ್ಲಿ ವೈಚಾರಿಕತೆ ಬೆಳೆಯುವುದು ತುಂಬಾ ನಿಧಾನ. ಮೂಢನಂಬಿಕೆಗೆ ಸಿಗುವ ಪ್ರಚಾರ ವೈಚಾರಿಕತೆಗೆ ಸಿಗುವುದಿಲ್ಲ. ಸಮಾಜ ವ್ಯವಸ್ಥೆಯ ಅಸಮಾನತೆಗೆ ಶೋಷಣೆ ಕಾರಣವಾಗಿರುವಂತೆ, ನಮ್ಮ ಮೌಢ್ಯತೆಯು ಕಾರಣವಾಗಿದೆ. ಅಂತೆಯೇ ಶರಣರು ಪುರೋಹಿತಶಾಹಿಯ ಶೋಷಣೆಯನ್ನು ಬಯಲು ಮಾಡುತ್ತಲೇ ಜನಸುಮುದಾಯದಲ್ಲಿರುವ ಮೂಢನಂಬಿಕೆಗಳನ್ನೂ ಅವರ ವಚನಗಲಲ್ಲಿ ಅಡಕವಾಗಿರುವ ಈ ಬಗೆಗಿನ ಸತ್ಯಗಳನ್ನಿಲ್ಲಿ ಗಮನಿಸಬಹುದಾಗಿದೆ.

'ಹಾವಾಡಿಗನು ಮೂಕೊರತಿಯು, ತನ್ನ ಕೈಯಲ್ಲಿ ಹಾವು,

ಮಗನ ಮದುವೆಗೆ ಶಕುನವ ನೋಡ ಹೋದಾಗ

ಇದಿರಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು

ಶಕುನ ಹೊಲ್ಲೆಂಬ ಚದುರನ ನೋಡಾ,

ತನ್ನ ಸತಿ ಮೂಕೊರತಿಯ, ತನ್ನ ಕೈಯಲ್ಲಿ ಹಾವು,

ತಾನು ಮೂಕೊರೆಯ.

ತನ್ನ ಭಿನ್ನವನಿಯದೆ ಅನ್ಯರನೆಂಬ

ಕುನ್ನಿಯನೇನೆಂಬೆ ಕೂಡಲಸಂಗಮದೇವಾ?'

(ಬ.ವ.ಸಂ. ೧, ಪು. ೨೯,ವ. ೧೦೫)

ಮನುಷ್ಯನ ಮನಸ್ಸು ಹೇಗೆ ಮೌಢ್ಯದಿಂದ ಕೂಡಿರುತ್ತದೆಂದು ತಿಳಿದುಕೊಳ್ಳಲು ಈ ವಚನವೊಂದು ಸಾಕು. ತಾನು ಹಾವಾಡಿಗ ತನ್ನ ಹೆಂಡತಿ ಮೂಕೊರತಿ, ತಮ್ಮ ಹಾಗೆ ಇರುವವರು ಅದೇ ವೃತ್ತಿ ಮಾಡುವವರು ಎದುರಿಗೆ ಬಂದಾಗ ಶಕುನದ ಮಾತನಾಡುವ ಮನುಜರನ್ನು ಬಸವಣ್ಣ, ಕುನ್ನಿಗಳು ಎಂದು ಕರೆದಿದ್ದಾನೆ. ತನ್ನ ವೃತ್ತಿಯ ಬಗೆಗೆ ತಾನೇ ಗೌರವ ಹೊಂದಿರದ ವ್ಯಕ್ತಿ, ತನ್ನ ಬಗೆಗೆ ತಾನೇ ನಂಬಿಕೆ ಇಲ್ಲದ ವ್ಯಕ್ತಿ ಹೇಗೆ ಮೌಢ್ಯತೆಯ ಹೊಂಡದಲ್ಲಿ ಬೀಳುತ್ತಾನೆಂಬುದಕ್ಕೆ ಈ ವಚನವೇ ಸಾಕ್ಷಿಯಾಗಿದೆ. ಶಕುನ–ಜ್ಯೋತಿಷ್ಯವನ್ನು ನಂಬದ ಶರಣರು ಕಾಯಕ–ನಿಷ್ಠೆ–ಪ್ರಾಮಾಣಿಕತೆಗೆ ಬೆಲೆಕೊಟ್ಟರು. ಶುಭ–ಅಶುಭ, ರಾಹುಕಾಲ–ಗುಳಿಕಕಾಲಗಳನ್ನು ನಿರಾಕರಿಸಿದರು. 'ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ' ಎಂದು ಹೇಳಿದರು.

ಸಮಾಜ ವ್ಯವಸ್ಥೆಯಲ್ಲಿ ಅದರಲ್ಲೂ ಗ್ರಾಮೀಣ ಬದುಕಿನಲ್ಲಿ ಒಬ್ಬರನ್ನು ನೋಡಿ ಮತ್ತೊಬ್ಬರು ಈ ಮೂಢನಂಬಿಕೆಗಳ ಆಚರಣೆಗೆ ಬಲಿಯಾಗುತ್ತಾರೆ.

ಬಚ್ಚಲನೀರ, ಬೀದಿಯ ನೀರ ಹೊಯ್ದು

ಬೊಬ್ಬಿಟ್ಟೆಲ್ಲರ ಕರೆವರಯ್ಯಾ

(ಬ. ವ. ಸಂ. ೧, ಪು. ೧೪೬, ವ. ೫೮೫)

ಎಂಬ ವಚನದಲ್ಲಿ ಬಸವಣ್ಣ ಕಿಚ್ಚಿಗೆ ಹವಿಯನಿಕ್ಕುವ ಪೂಜೆ, ಯಜ್ಞ–ಯಾಗಾದಿಗಳ ಪೂಜೆ ನಿರರ್ಥಕವೆಂದು ತಿಳಿಸಿದ್ದಾನೆ. ಒಂದು ವೇಳೆ ಕಿಚ್ಚು ದೈವವೇ ಆಗಿದ್ದರೆ, ಮನೆಗೆ ಹತ್ತಿಕೊಂಡೇಕೆ ಸುಡುತ್ತದೆ? ಎಂದು ಪ್ರಶ್ನಿಸಿದ್ದಾನೆ. ಹೀಗೆ ಬೆಂಕಿ ಹತ್ತಿಕೊಂಡಾಗ ಬಚ್ಚಲನೀರ ಬೀದಿಯ ದೂಳ ಹೊಯ್ದು ಬೊಬ್ಬಿಡುವುದು ಏಕೆ? ಎಂದು ಕೇಳಿದ್ದಾನೆ.

'ಭಕ್ತಿಯೆಂಬುದು ಅಂತರಂಗದ ಧ್ಯಾನವೇ ಹೊರತು, ಬಹಿರಂಗದ ಪ್ರಚಾರವಲ್ಲವೆಂದು ಸ್ಪಷ್ಟಪಡಿಸಿದ ಬಸವಣ್ಣನು, ಧರ್ಮ ದೇವರುಗಳ ಹೆಸರಿನಲ್ಲಿ, ಜಾತ್ರೆ–ಉತ್ಸವಗಳ ಸಂದರ್ಭಗಳಲ್ಲಿ

ನಡೆಯುವ ಮೌಢ್ಯದ ಆಚರಣೆಗಳನ್ನು ನೇರವಾಗಿ ಖಂಡಿಸಿದ್ದಾನೆ.' ಇಂತಹ ಮೌಢ್ಯತೆ ಮನುಷ್ಯನಲ್ಲಿ ಮನೆಮಾಡಿರುವುದರಿಂದಲೇ ಒಳ್ಳೆಯ ವ್ಯಕ್ತಿತ್ವ ಬೆಳೆಯಲಾರದೆಂಬ ಸತ್ಯವನ್ನು ಶರಣರು ತಮ್ಮ ವಚನಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಬಸವಣ್ಣನು ಇತರ ಧರ್ಮಗಳಲ್ಲಿರುವ ಮೂಢ ಆಚರಣೆಗಳನ್ನು ಕಂಡು ಟೀಕಿಸಿರುವಂತೆ, ಶೈವ–ವೀರಶೈವರಲ್ಲಿರುವ ಮೌಢ್ಯತೆಯನ್ನು ವಿರೋಧಿಸಿದ್ದಾನೆ. 'ಭಕ್ತಿಯೆಂಬುದು ಅಂತರಂಗದ ಭಾವ, ಅದು ಬಹಿರಂಗದ ಪ್ರದರ್ಶನವಲ್ಲ. ಭಕ್ತಿಯ ಹೆಸರಿನಲ್ಲಿ, ಮುಕ್ತಿಯ ಕಾರಣಕ್ಕಾಗಿ ಜನತೆ ಶತಶತಮಾನಗಳಿಂದ ಅನೇಕ ವ್ರತ–ನೇಮಗಳನ್ನು ಆಚರಿಸುತ್ತಾ ಬಂದಿದೆ. ಇಂತಹ ವ್ರತ ನೇಮಗಳು ಅರ್ಥ ಇಲ್ಲದವುಗಳೆಂದು ಶರಣರು ಹೇಳಿದ್ದಾರೆ.' ಅಲ್ಲಮಪ್ರಭುವಿನ ಈ ಒಂದು ವಚನ ಇಲ್ಲಿ ಗಮನಾರ್ಹವಾಗಿದೆ.

'ಹಾಲನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ.

ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ.' (ವ.ಶಾ.ಸಾ.ವ.೧೫೪೮)

ಅಕ್ಕಮ್ಮನೆಂಬ ವಚನಕಾರ್ತಿ ಈ ವಚನದಲ್ಲಿ ಮೌಢ್ಯಾಚರಣೆಗಳನ್ನು ಕಂಡು ವಿಡಂಬಿಸಿದ್ದಾಳೆ. ಕೆಲವರು ಧರ್ಮದ ಹೆಸರಿನಲ್ಲಿ ಬತ್ತಲೆ ತಿರುಗುತ್ತಾರೆ, ಮತ್ತೆ ಕೆಲವರು ತಲೆ ಬೋಳಿಸಿಕೊಳ್ಳುತ್ತಾರೆ, ಇಂತಹವರನ್ನೆಲ್ಲ ಕತ್ತೆಯ ಮಕ್ಕಳು, ಮುಂಡೆಯ ಮಕ್ಕಳು ಎಂದು ಅಕ್ಕಮ್ಮ ತನ್ನ ಕ್ರೋಧ ವ್ಯಕ್ತಪಡಿಸುತ್ತಾಳೆ. ಇದು ಸಾತ್ವಿಕವಾದ ಕ್ರೋಧವಾಗಿದೆ. ಸಮುದಾಯದಲ್ಲಿ ಜಾಗೃತಿಯನ್ನುಂಟುಮಾಡುವ ಕಳಕಳಿ ಈ ವಚನದಲ್ಲಿ ಎದ್ದು ಕಾಣುತ್ತದೆ. ಚಾತುರ್ವರ್ಣ ಪದ್ಧತಿ, ಊರ ಹೊರಗಿರುವವರನ್ನು ಹೊಲೆಯರು, ಶ್ವಪಚರೆಂದು ಕರೆದರೆ, ಅಕ್ಕಮ್ಮ ಹೇಳುವ 'ಹೊಲೆಯ' ಪದದ ಅರ್ಥ ಭಿನ್ನವಾಗಿದೆ. ದೇವರ ಹೆಸರಿನಲ್ಲಿ ಜಡೆ ಬಿಟ್ಟು, ಅದು ಗಟ್ಟಿಗೊಂಡಾಗ ದೇವತೆ ತಮ್ಮ ಮೈಮೇಲೆ ಬಂದಿದ್ದಾಳೆಂದು ಹೇಳುತ್ತ, ಸಮಾಜದಲ್ಲಿ ಮತ್ತಷ್ಟು ಮೌಢ್ಯತೆಯನ್ನು ಹರಡುವವರಿಗೆ ಹೊಲೆಯರೆಂದು ಕರೆದಿದ್ದಾಳೆ. 'ಅರಿವೇ ಮುಖ್ಯ ಆಚಾರವೇ ಪ್ರಾಣ' ಎಂಬ ಅಕ್ಕಮ್ಮನ ನುಡಿಯಲ್ಲಿ ಮಹತ್ವದ ಅರ್ಥವಡಗಿದೆ. ವಚನಕಾರ್ತಿಯೊಬ್ಬಳು ಇಷ್ಟು ದಿಟ್ಟತನದಿಂದ ಮೌಢ್ಯಾಚರಣೆಗಳನ್ನು ಖಂಡಿಸಿರುವುದು ಸ್ವಾಗತಾರ್ಹವಾಗಿದೆ.

ಕೆಲವರು ಧರ್ಮ–ದೇವರುಗಳ ಹೆಸರಿನಲ್ಲಿ, ಭಕ್ತಿಯ ಹೆಸರಿನಲ್ಲಿ ಹಲವಾರು ವೇಷ ಧರಿಸುತ್ತಾರೆ, ಅನೇಕ ಕಠಿಣ ವ್ರತಗಳನ್ನು ಮಾಡುತ್ತಾರೆ, ದೇಹದಂಡನೆ ಮಾಡುತ್ತಾರೆ. ಅಂತಹ ಢಾಂಬಿಕತೆ, ಕಪಟತನಗಳನ್ನು ಸಹಿಸದ ಅಕ್ಕಮ್ಮ ವೇಷಧಾರಿಗಳನ್ನು ಕಟುವಾಗಿ ಟೀಕಿಸಿದ್ದಾಳೆ. ವೇಷವೆಲ್ಲಿರದು? ಸೂಳೆಯಲ್ಲಿ, ಡೊಂಬನಲ್ಲಿ, ಭೈರೂಪನಲ್ಲಿರದೆ? ಎಂದು ಪ್ರಶ್ನಿಸುತ್ತಾ ವೇಷವ ತೋರಿ ಒಡಲ ಹೊರೆವವರನ್ನು ದಾಸಿ ವೇಶಿಯ ಮಕ್ಕಳೆಂದು ಟೀಕಿಸಿದ್ದಾಳೆ.

ಶರಣರಾಗಲಿ, ಶರಣೆಯರಾಗಲಿ ಅನ್ಯಧರ್ಮದ ಮೌಢ್ಯಾಚರಣೆಗಳನ್ನು ಕಂಡು ವಚನಕಾರ್ತಿಯೊಬ್ಬಳು ದಿಟ್ಟತನದಿಂದ ಮಾತನಾಡಿರುವುದು ಗಮನಾರ್ಹವಾಗಿದೆ.

'ಕಲ್ಲುದೇವರ ಪೂಜೆಯ ಮಾಡಿ,

ಕಲಿಯುಗದ ಕತ್ತೆಗಳಾಗಿ ಹುಟ್ಟಿದರು,

ಮಣ್ಣದೇವರ ಪೂಜೆಮಾಡಿ ಮಾನಹೀನರಾದರು

ಮರಣದೇವರೆಂದು ಪೂಜಿಸಿ ಮಣ್ಣಕೂಡಿದರು'

(ಸಂ. ವ. ಸಂ. ಪು. ೩೪. ವ. ೯೯)

ಅಂಬಿಗರ ಚೌಡಯ್ಯ ಕೆಳವರ್ಗದಿಂದ ಬಂದ ವಚನಕಾರ, ತಾನು ಹುಟ್ಟಿ ಬೆಳೆದುಬಂದ ಸಮಾಜದಲ್ಲಿ ಕಂಡುಂಡ ಸತ್ಯಗಳನ್ನೇ ಆತ ತನ್ನ ವಚನಗಳಲ್ಲಿ ಬಿಂಬಿಸಿದ್ದಾನೆ. ದೇವರನ್ನು ಪೂಜಿಸಲು ಕೇಳುವ ಶರಣರು ಅದಕ್ಕೊಂದು ಸಿಧ್ಧಾಂತವನ್ನು ನಿರ್ಮಿಸಿದ್ದಾರೆ. ಕಲ್ಲು-ಮಣ್ಣು ದೇವರೆಂದು ಪೂಜಿಸಿ, ಮರ-ಗಿಡಗಳನ್ನು ದೇವರೆಂದು ಸುತ್ತಿ ವ್ಯರ್ಥಕಾಲ ಕಳೆಯುವುದಕ್ಕಿಂತ ನಿಜಭಕ್ತಿ ಹೊಂದಬೇಕೆಂದು ಹೇಳುತ್ತಾರೆ. ಇಂತಹ ನಿಜಭಕ್ತಿ ಹೊಂದಲು ಅರಿವು ನಿಷ್ಠೆ ಮುಖ್ಯವೇ ಹೊರತು ಸಿಕ್ಕ-ಸಿಕ್ಕ ವಸ್ತುಗಳನ್ನು ದೇವರೆಂದು ಪೂಜಿಸುವದಲ್ಲ ವೆಂದು ಸ್ಪಷ್ಟಪಡಿಸಿದ್ದಾರೆ. ಕಲ್ಲುದೇವರ ಪೂಜೆ ಮಾಡುವವರನ್ನು ಕಲಿಯುಗದ ಕತ್ತೆಗಳೆಂದು, ಮಣ್ಣದೇವರ ಪೂಜಿಸುವವರನ್ನು ಮಾನಹೀನರೆಂದು ಚೌಡಯ್ಯ ಜರಿದು ನುಡಿದಿದ್ದಾನೆ. ಕೆಲವರು ನಿರ್ಮಿಸಿದ ಇಂತಹ ಕೆಟ್ಟ ಆಚರಣೆಗಳಿಂದ ಸಾಮಾನ್ಯ ಜನ ಅದನ್ನೆ ಸತ್ಯವೆಂದು ತಿಳಿಯುತ್ತಾರೆ. ಹೀಗೆ ಮೌಢ್ಯತೆಯಿಂದ ಕೂಡಿದ ವ್ಯರ್ಥ ಆಚರಣೆಗಳೇ ಮುಂದೆ ಧರ್ಮದ ಭಾಗವಾಗಿಬಿಡುತ್ತವೆ. ಇದನ್ನರಿತೇ ಶರಣರು ಮೂಢನಂಬಿಕೆಗಳನ್ನು ಕುರಿತು ಕಟುವಾಗಿ ಟೀಕಿಸಿದ್ದಾರೆ. 'ಮನುಷ್ಯನ ವ್ಯಕ್ತಿತ್ವವನ್ನೇ ತಪ್ಪಾಗಿ ರೂಪಿಸುವ ಇಂತಹ ಮೌಢ್ಯಾಚರಣೆಗಳು ಹೆಚ್ಚು ಅಪಾಯಕಾರಿಯಾಗಿವೆ, ಕಂಡಾಗ ವಿಸ್ಮಯವಾಗುತ್ತದೆ. ಧರ್ಮ-ದೇವರುಗಳ ಬಗೆಗೆ ಅನೇಕ ತಪ್ಪು ಕಲ್ಪನೆಗಳನ್ನು ಸಾಮಾನ್ಯ ಜನತೆಯ ಮನಸ್ಸಿನಲ್ಲಿ ಬಿತ್ತಲಾಗಿದೆ. ಅನೇಕ ವೇಷಧಾರಿಗಳು, ಕಪಟಿಗಳು ತಮ್ಮ ಸ್ವಾರ್ತಕ್ಕಾಗಿ ವ್ಯವಸ್ಥಿತವಾಗಿ ಮೌಢ್ಯತೆಯನ್ನು ಬೆಳೆಸುತ್ತಾ ಬಂದಿದ್ದಾರೆ.' ಅನೇಕ ಅಮಾಯಕರು ಇಪ್ಪತ್ತೊಂದನೇ ಶತಮಾನದ ಈ ವೈಜ್ಞಾನಿಕ ಯುಗದಲ್ಲಿಯೂ ಮೌಢ್ಯಾಚರಣೆಗಳನ್ನು ಆಚರಿಸುತ್ತಿದ್ದಾರೆ. ಮಂತ್ರ-ಮಾಟ-ಬಾನಾಮತಿಯ ಹೆಸರಿನಲ್ಲಿ ಹಳ್ಳಿಗಳಲ್ಲಿ ನಿತ್ಯ ಶೋಷಣೆ ನಡೆದಿದೆ. 'ಇಂದಿನ ವೈಜ್ಞಾನಿಕ ಜಗತ್ತಿನಲ್ಲಿಯೇ ಇಷ್ಟೊಂದು ಮೂಢನಂಬಿಕೆಗಳು ಮನೆ ಮಾಡಿಕೊಂಡಿರುವಾಗ, ಹನ್ನೆರಡನೇ ಶತಮಾನದ ಮಧ್ಯಕಾಲೀನ ಸಂದರ್ಭದಲ್ಲಿ ಸ್ಥಿತಿ ಹೇಗಿರಬೇಡ? ಶರಣರು ಮೊಟ್ಟಮೊದಲು ಇಂತಹ ಅವೈಜ್ಞಾನಿಕ ನಂಬಿಕೆಗಳನ್ನು ಅಲ್ಲಗಳೆದರು. ಧರ್ಮ ದೇವರುಗಳ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ತಪ್ಪಿಸಿದರು.' ಅವರ ಈ ವಿಚಾರಗಳನ್ನು ಮನನ ಮಾಡಿ ಆಚರಣೆಗೆ ತಂದಾಗ ಜನತೆಯ ವ್ಯಕ್ತಿತ್ವ ವಿಕಾಸವಾಗಲು ಸಾಧ್ಯವಿದೆ.

೩.೧. ಕಸುಬುಗಳ ಜಾತ್ಯಾತೀತ ನೆಲೆಗಳು

"ಜಾತಿಯ ಹಿಂಸೆ ಮತ್ತು ಮಾನಸಿಕ ಅಪಮಾನದ ತುಡಿತ ಇವು ಮೇಲುವರ್ಗದ ವಚನಕಾರರಲ್ಲಿ ಕಾಣುವುದು ಅಪರೂಪ. ಅದಕ್ಕೆ ಬೊಮ್ಮಯ್ಯನು ಪುರೋಹಿತ ಶಾಹಿಯನ್ನೇ ವಿರೋಧಿಸುತ್ತಾನೆ. ಇಂತಹ ಸಂದರ್ಭದಲ್ಲಿ ಪುರೋಹಿತರು ತಮ್ಮ ಸ್ವಾರ್ಥಕ್ಕಾಗಿ ಅರಸನನ್ನೇ ತಮ್ಮತ್ತ ಒಲಿಸಿಕೊಳ್ಳುತ್ತಾರೆ.

ಬೊಮ್ಮಯ್ಯ ಆ ಬ್ರಾಹ್ಮಣತ್ವವನ್ನು ಮುಕ್ತಗೊಳಿಸುತ್ತಾನೆ. ಕೊನೆಗೆ ಅರಸನು ಕ್ಷಮೆ ಯಾಚಿಸುತ್ತಾನೆ”[೪]. ವಚನಕಾರರು ಇಂತಹ ಜಾತ್ಯಾತೀತ ಸಮಾಜ ನಿರ್ಮಾಣಕ್ಕೆ ತಮ್ಮ ಕಸುಬುಗಳ ಮೂಲಕ ಸಮಾನತೆಯ ಕೊಂಡಿಯನ್ನು ಬೆಸೆಯುತ್ತಾರೆ. ಕಸುಬು ಅನ್ನುವ ಪದಕ್ಕೆ ವೃತ್ತಿ, ಕೆಲಸ ಹೀಗೆ ಹಲವಾರು ಪರ್ಯಾಯ ಪದಗಳಿವೆ. ಆದರೆ ವಚನಕಾರರು ಈ ಕಸುಬು ಅನ್ನುವ ಪದಕ್ಕೆ 'ಕಾಯಕ' ಎಂದು ಕರೆದಿದ್ದಾರೆ. ಜನಸಾಮಾನ್ಯರ ಮಧ್ಯೆ ಹೆಚ್ಚು ಚಲಾವಣೆಗೆ ಬಾರದೆ ನಿಘಂಟುಗಳಲ್ಲಿ ಮರೆಯಾಗಿ ಉಳಿದಿದ್ದ ಕಾಯಕ ಪದವು ೧೨ ನೇ ಶತಮಾನದ ವಚನಕಾರರ ಪ್ರಾಮಾಣಿಕ ಪ್ರಯತ್ನದಿಂದಾಗಿ ವಿಶೇಷ ಅರ್ಥಗೌರವವನ್ನು ಪಡೆದುಕೊಂಡಿತು. ಮೂಲತಃ ಸಂಸ್ಕೃತಪದವಾದ 'ಕಾಯಕ'ದಲ್ಲಿರುವ 'ಕಾಯ'ಕ್ಕೆ ದೇಹ, ಶರೀರ ಎಂಬರ್ಥವಲ್ಲದೆ ಬೇರೆ ಅರ್ಥವೂ ಇದೆ. 'ಕಾಯ'ವೆಂದರೆ ದೇವರಿಗೆ ಸಂಬಂಧಿಸಿದ, ದೇವರಿಗೆ ಸಮರ್ಪಿತವಾದ ಎಂಬ ಅರ್ಥವಿರುವದನ್ನು ಮೋನಿಯರ್-ವಿಲಿಯಮ್ಸ್ ಸಂಸ್ಕೃತ ನಿಘಂಟು ತಿಳಿಸುತ್ತದೆ. ವಚನಕಾರರು ಅರಿತೋ ಅರಿಯದೆಯೋ ಈ ಅರ್ಥವನ್ನು ಸ್ವೀಕರಿಸಿ 'ಕಾಯ'ದ ಅರ್ಥವನ್ನು 'ಕಾಯಕ'ಕ್ಕೆ ವಿಸ್ತರಿಸಿದ್ದಾರೆ. ಅವರ ಪ್ರಯತ್ನದಿಂದಾಗಿ ಕಾಯಕ ಪದವು ತನ್ನ ಮೂಲದ ಸಂಸ್ಕೃತ ವಾಸನೆಯನ್ನು ಕಳೆದುಕೊಂಡು ಅಚ್ಚಕನ್ನಡ ಪಾರಿಭಾಷಿಕ ಪದವಾಗಿ ರೂಢಿಗೆ ಬಂದಿತು. ನಿಘಂಟಿನ ಪದವು ಜನಸಾಮಾನ್ಯರ ನಡುವೆ ಬಂದು ಪಾರಿಭಾಷಿಕ ಪದವಾದುದರಿಂದ ಹಿಂದೆ ವಚನಕಾರರ ಆಂದೋಲನದ ಧ್ಯೇಯ ಧೋರಣೆಗಳ ಧ್ವನಿಯಿದೆ. ಶರಣರ(ವಚನಕಾರರ) ಚಳುವಳಿಯಲ್ಲಿ ಭಾಗಿಗಳಾಗಿದ್ದವರಲ್ಲಿ ಬಹಳಷ್ಟು ಜನ ಶ್ರಮಜೀವಿಗಳು. ತಮ್ಮ ಶ್ರಮವನ್ನು ಕೀಳಾಗಿ ಕಾಣುತ್ತಿದ್ದ ಮೇಲು ವರ್ಗದ ಅರಾಮ್ ತತ್ವದ ಬುದ್ಧಿಜೀವಿಗಳ ಹುನ್ನಾರವನ್ನು ಅವರು ಬಯಲಿಗೆಳೆದರು.

ವಚನಕಾರರು ಪ್ರತಿಪಾದಿಸಿದ ಕಾಯಕ ತತ್ವ 'ತಾನು ವಾಸ್ತವವಾಗಿ ಕಷ್ಟಪಡದೆ ಪರಾವಲಂಬಿಯಾಗುವುದನ್ನು ಅಥವಾ ಇತರ ಶ್ರಮವನ್ನು ತನ್ನ ಸುಖಕ್ಕೆ ತಿರುಗಿಸಿಕೊಳ್ಳುವ ಜಾಣತನವನ್ನು ಒಪ್ಪುವುದಿಲ್ಲ'. ವಚನಕಾರರು ಇಹ ಜೀವನವನ್ನು ಪ್ರಧಾನವಾಗಿ ಕಂಡು ಅದರ ನೆಮ್ಮದಿಗೆ ದುಡಿತವನ್ನು ಅನಿವಾರ್ಯವೆಂದು ಘೋಷಿಸಿ ದುಡಿತವನ್ನು 'ಕಾಯಕ'ಎಂಬ ಪರಿಭಾಷೆಯಲ್ಲಿ ಹೊಸದಾಗಿ ವ್ಯಾಖ್ಯಾನಿಸಿದರು. “ಲಿಂಗ ಹಿಡಿದ ಕೈ ಬೇಡಿ ಬದುಕಬಾರದು ದುಡಿದು ಬದುಕಬೇಕೆಂದು ಹೇಳಿದ ಬಸವಣ್ಣ ಕಾಯಕ ಸಿದ್ಧಾಂತ ರೂಪಿಸಿದನು. ಕರ್ಮವು ಜಡತ್ವದ ಪ್ರತೀಕ ಕಾಯಕವು ಚೈತನ್ಯದ ಪ್ರತೀಕ, ಕಾಯಕವು ಕೈಲಾಸಕ್ಕೆ ಸಮವೆಂದು ಹೇಳಿದನು. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದನ್ನು ಮಾತ್ರ ಸ್ವೀಕರಿಸಬೇಕು. ಸತತ ದುಡಿಮೆಯಿಂದ ಆರ್ಥಿಕ ಭದ್ರತೆ ದೊರೆತು ಸದೃಢ ಸುಖೀ ಸಮಾಜ ನಿರ್ಮಾಣವಾಗುವುದೆಂಬುವುದನ್ನು ತೋರಿಸಿದವ ಬಸವಣ್ಣ. ಕಾಯಕದಲ್ಲಿ ಮೇಲು ಕೀಳುಗಳಿಲ್ಲ ಒಬ್ಬ ಪಾದರಕ್ಷೆ ಮಾಡುವವನ ಕಾಯಕವೂ ಒಬ್ಬ ಮಂತ್ರಿಯ ಕಾಯಕಕ್ಕೆ ಸಮನಾದುದೆಂದು ಬಸವಣ್ಣ ಹೇಳಿದನು. ಕಾಯಕದಿಂದ ಬಂದುದನ್ನು ದಾಸೋಹದಲ್ಲಿ ವಿನಿಯೋಗಿಸಿ ಸಾರ್ಥಕತೆ ಪಡೆಯಬೇಕೆಂದು ಹೇಳಿ ದಾಸೋಹ ಸಿದ್ಧಾಂತ ರೂಪಿಸಿದನು.

‘ಬಾಳತ್ವಕ್ಕೆಂದು ಮಧುವ ತಂದು ಕೊಡನ ತುಂಬಿದ ಜೇನು ಹುಳದಂತೆ

ತಾನುಂಬುದು ಜಗವುಂಬುದು ನೋಡಯ್ಯ’

ಕಾಯಕಜೀವಿ ಜೇನುಹುಳುಗಳ ಉದಾಹರಣೆ ನೀಡಿ ಭಕ್ತನಾದವನು ಕಾಯಕ ಮಾಡಿ ಬಂದ ಹಣದಲ್ಲಿ ದಾಸೋಹ ಮಾಡಬೇಕೆಂದು ಹೇಳಿದ್ದಾನೆ. ದಾನವು ಕರ್ಮವಾದದ ಉತ್ಪತ್ತಿಯಾಗಿದ್ದು ಅದು ಕೊಡುವವನನ್ನು ಅಹಂಕಾರಿಯಾಗಿಯೂ ತಗೆದುಕೊಳ್ಳುವವನನ್ನು ದಾಸ್ಯತ್ವಕ್ಕೂ ದೂಡುತ್ತದೆಂದು ತಿಳಿಸಿ ದಾನಕ್ಕೆ ಬದಲು ದಾಸೋಹ ಸಿದ್ಧಾಂತ ತಂದನು. ತಾನು ಸ್ವತಃ ದುಡಿದು ಗಳಿಸಿದುದು ಮಾತ್ರ ದಾಸೋಹಕ್ಕೆ ಯೋಗ್ಯವೆಂದನು. ದಾಸೋಹ ಮಾಡುವವನಲ್ಲಿ ಕಿಂಕರ ಭಾವವಿರುತ್ತದೆ”೫.

ದೈಹಿಕ ದುಡಿಮೆ ಕೀಳಾದುದು, ಶ್ರಮ ಜೀವಿಗಳೆಲ್ಲ ಶೂದ್ರರು, ಬೆವರು ಸುರಿಸಿದ ಅಕ್ಷರಸ್ಥರು ಶ್ರೇಷ್ಠರು ಎಂಬ ನಂಬಿಕೆಯನ್ನು ವೈದಿಕ ಪರಂಪರೆ ವ್ಯವಸ್ಥಿತವಾಗಿ ಬೆಳಸಿಕೊಂಡು ಬಂದಿತ್ತು. ವಚನಕಾರರು ಈ ನಂಬಿಕೆಯನ್ನು ಛಿದ್ರಗೊಳಿಸಿದರು. ದೈಹಿಕ ದುಡಿಮೆ ಕೀಳಲ್ಲ. ಬದುಕಬೇಕೆನ್ನುವ ಪ್ರತಿಯೊಬ್ಬ ಜೀವಿ ದುಡಿಯಲೇಬೇಕು. ದಡಿಮೆಯಲ್ಲಿ ಮೇಲು ಕೀಳೆಂಬ ವ್ಯತ್ಯಾಸವಿಲ್ಲ ದುಡಿಯುವವರೆಲ್ಲರು ಸಮಾನರು ಎಂಬ ವಿಚಾರವನ್ನು ಅವರು ಕಾರ್ಯರೂಪಕ್ಕೆ ತಂದರು. ‘ದುಡಿಮೆಗೆ ಗೌರವ ಪ್ರಾಪ್ತವಾಗುವುದರೊಂದಿಗೆ ದುಡಿಯುವ ವರ್ಗಕ್ಕೆಲ್ಲ ಗೌರವ ಲಭಿಸಿತು. ದುಡಿಯುವ ವರ್ಗ ಈ ಮೊದಲಿನ ಕೀಳರಿಮೆಯನ್ನು ಕಿತ್ತೊಗೆದು ತಲೆಯೆತ್ತಿ ನಿಂತಿತು. ದುಡಿಮೆ ಉದ್ಯೋಗಗಳಿಗೆ ಆಗ ವಿಶೇಷ ಅರ್ಥ ಪ್ರಾಪ್ತವಾಯಿತಲ್ಲದೆ ಅವು ಕಾಯಕದ ಕಕ್ಷೆಯಲ್ಲಿ ಬಂದವು. ಕಾಯಕ ಎಂಬುದು ಒಂದು ನೆಲೆಯಲ್ಲಿ ವೃತ್ತಿಯೇ ಆದರೂ ವಚನಕಾರರ ಪ್ರಕಾರ ಕೇವಲ ವೃತ್ತಿಯಲ್ಲ. ಅದು ತಾನೊಬ್ಬ ‘ಸಾಧಕ’ ಎಂಬ ಭಾವದಿಂದ ಕೈಕೊಳ್ಳುವ ವೃತ್ತಿ. ವೃತ್ತಿ ಮೂಲತಃ ಸಮಾಜದಲ್ಲಿ ಅವರವರ ವರ್ಣ-ವರ್ಗಗಳನ್ನು ನಿರ್ಣಯಿಸುವ ಮಾನದಂಡವಾಗಿತ್ತು. ಆದರೆ ಕಾಯಕ ಮಾತ್ರ ಅದರಲ್ಲಿ ತೊಡಗಿದ ಎಲ್ಲರನ್ನೂ ‘ಸಾಧಕ’ರೆಂಬ ಸಮಾನತಾ ನೆಲೆಯಲ್ಲಿ ನಿಲ್ಲಿಸುವ ಒಂದು ವಿಧಾನ.’ ಮಾಡುವ ಕೆಲಸವೆಲ್ಲವೂ ಆನುಭಾವಿಕ ಸಾಧನೆಯಾದ ಮೇಲೆ ಕಾಯಕದಿಂದ ಕಾಯಕಕ್ಕೆ ತರ-ತಮ ಭಾವನೆ ಅಂಟಿಕೊಳ್ಳುವುದಿಲ್ಲ ಹೀಗೆ ಕಾಯಕವು ಪಾರಮಾರ್ಥಿಕ ಸಾಧನೆಯೊಂದಿಗೆ ಸಮಾಜದ ಶೀಲ ಸಂವರ್ಧನೆಗೆ ಒಂದು ಉಪಕರಣವಾಯಿತು. ಶ್ರಮ ಗೌರವವನ್ನು ಪ್ರತಿಪಾದಿಸುವ ಸಿದ್ಧಾಂತವೆನಿಸಿತು. ಸ್ವಹಿತಕ್ಕಾಗಿ ಮಾಡುವ ವೃತ್ತಿ ಉದ್ಯೋಗವೆನಿಸಿದರೆ ದಾಸೋಹಂಭಾವದಿಂದ ಮಾಡುವುದು ಕಾಯಕವೆನಿಸಿತು. ಕಾಯಕವೆಂದರೆ ಕೇವಲ ಶ್ರಮವೂ ಅಲ್ಲ, ಧಾರ್ಮಿಕ ಕರ್ಮವೂ ಅಲ್ಲ. ಪರಹಿತಕ್ಕಾಗಿ ಮಾಡುವ ಶಿವ-ಕೇಂದ್ರೀಯ ಕ್ರಿಯೆ ಎಂಬ ಗಹನವಾದ ಸ್ಪಷ್ಟವಾದ ವ್ಯಾಖ್ಯೆ ಚಲಾವಣೆಗೆ ಬಂದಿತು. ವಚನಕಾರರು, ಈ ಹೊಸ ಕಾಯಕ ಸಿದ್ಧಾಂತವನ್ನು ಎತ್ತರದ ಧ್ವನಿಯಲ್ಲಿ ಹೇಳಿದ್ದು ಯಾರಿಗಾಗಿ ದೇಹಶ್ರಮವನ್ನು ಹೀಗಳೆದು ಬೌದ್ಧಿಕ ಚಟುವಟಿಕೆಗಳನ್ನು ವೈಭವೀಕರಿಸುತ್ತ ಮೇಲರಿಮೆಯ ಮತ್ತಿನಲ್ಲಿ ತೇಲಾಡುತ್ತಿದ್ದ ಬುದ್ಧಿಜೀವಿಗಳಿಗೆ ಎಂಬುದನ್ನು ಗಮನದಲ್ಲಿಟ್ಟು ಕೊಳ್ಳಬೇಕು.

ಪರಂಪರಾಗತ ಸಾಮಾಜಿಕ ವ್ಯವಸ್ಥೆ ದುಡಿಯುವ ವರ್ಗಕ್ಕೆ ಧಾರ್ಮಿಕ ಆಚರಣೆ ಮೋಕ್ಷ ಸಾಧನೆಗಳನ್ನು ನಿರಾಕರಿಸಿತ್ತು. ಅಕ್ಷರಸ್ಥರಾದ ನಾವು ಮೇಲುವರ್ಗದವರು ಮಾತ್ರ ಧಾರ್ಮಿಕ ಜೀವನ ನಡೆಸಲು ಅರ್ಹರು ಎಂಬ ನಂಬಿಗೆಯನ್ನು ಕಾಯಕ ತತ್ತ್ವ ಅಲ್ಲಾಡಿಸಿತು, ಧಾರ್ಮಿಕ ಜೀವನ ಮೈಗಳ್ಳರ ವೃತ್ತಿಯಲ್ಲ. ಅದು ಎಲ್ಲರಿಗೂ ಸಾಧ್ಯ. ಅದನ್ನು ಕಾಯಕದ ಮೂಲಕ ರೂಢಿಸಿಕೊಳ್ಳಬೇಕೆಂದು ಸಾರಿಸಾರಿ ಹೇಳಿದರು. ಆಗ ದುಡಿಮೆ ಮತ್ತು ಧಾರ್ಮಿಕ ಜೀವನಗಳ ಮಧ್ಯದ ಅಂತರ ಕುಸಿಯಿತು. ಕಾಯಕ ಮುಕ್ತಿ ಸಾಧನೆಗೆ ಒಂದು ಮಾರ್ಗವೆಂದು ವಚನಕಾರರು ನಿರ್ಧರಿಸಿದರು. ಕಾಯಕವನ್ನು ಪೂಜೆ ಮತ್ತು ಧಾರ್ಮಿಕ ಪ್ರವೃತ್ತಿಯೆಂದು ಭಾವಿಸಿದ ಮೇಲೆ ದುಡಿಯುವ ವರ್ಗಕ್ಕೆ ತನ್ನಷ್ಟಕ್ಕೆ ತಾನೆ ಮೇಲ್ ಚಲನೆ ಸಾಧ್ಯವಾಯಿತು. ಇಲ್ಲಿಯವರೆಗೆ ತಮ್ಮ ದುಡಿಮೆ ರಹಿತ ಧಾರ್ಮಿಕ ಜೀವನದಿಂದ ಮೇಲರಿಮೆಯ ಹಮ್ಮಿನಿಂದ, ಮೇಲುಜಾತಿ ಕೆಳಜಾತಿ ಎಂಬ ವ್ಯತ್ಯಾಸವಿಲ್ಲವೆಂದು ವಚನಕಾರರ ನಿಲುವು ಸಮಾಜದಲ್ಲಿ ಸಮಾನತೆಯನ್ನು ಸ್ಥಾಪಿಸಿತು. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಇಂಥ ಸಮಾನತೆಯ ಕಲ್ಪನೆ ಮತ್ತು ರೂಢಿ ತೀರಾ ಅಪರೂಪವಾದ ಪ್ರವೇಶವೆನಿಸಿತು. ದುಡಿಯುವ ವರ್ಗ ಕಾಯಕದ ಮೂಲಕ ಸಾಮಾಜಿಕ ಧಾರ್ಮಿಕ ಸಮಾನತೆಯನ್ನು ಜಾರಿಗೆ ತಂದುದು ಸಣ್ಣ ಸಂಗತಿಯಲ್ಲ.

ಧಾರ್ಮಿಕ ಜೀವನ ತಮಗಷ್ಟೇ ಮೀಸಲೆಂದು ನಂಬಿದ್ದ ಮೇಲುವರ್ಗದವರನ್ನು ವಚನಕಾರರ ಧೋರಣೆ ತಳಮಳಕ್ಕೀಡು ಮಾಡಿತು. ಕಾಯಕಕ್ಕೆ ಏನೆಲ್ಲ ಅರ್ಥಗಳನ್ನು ನೀಡಿ ಅದನ್ನು ಪ್ರಚಾರಪಡಿಸುತ್ತಿದ್ದ ವಚನಕಾರರ ನಡುವಳಿಕೆಯನ್ನು ಸಂಶಯದಿಂದ ನೋಡಿದ ಮೇಲುವರ್ಗದವರನ್ನು ಆಗಾಗ ಎದುರಿಸಬೇಕಾಯಿತು. ತಮ್ಮ ಕಾಯಕದ ಪೂಜ್ಯತೆಯನ್ನು ಸಮರ್ಥಿಸಿಕೊಳ್ಳಬೇಕಾಯಿತು. ಆಗ ವಚನಕಾರರು 'ಆವ ಸ್ವಕಾಯದಿಂದಾದುದು ಆಗಲಿ ಭಾವಶುದ್ಧವಾಗಿ ಮಾಡುವ ಜಂಗಮ ಪೂಜೆ ಆವಾವ ಕಾಯಕದಲ್ಲಿ ಬಂದರೂ ಭಾವ ಶುದ್ಧವಾಗಿ ಗುರುಲಿಂಗ ಜಂಗಮಕ್ಕೆ ಮಾಡುವುದೇ 'ಶಿವಪೂಜೆ' ಎಂದು ಕಾಯಕದ ಅರ್ಥವನ್ನು ವಿವರಿಸಿ ಹೇಳಿದರು. ಕಾಯಕವನ್ನು ಜಂಗಮಪೂಜೆಗೆ ಶಿವಪೂಜೆಗೆ ಸಮಾನವೆಂದು ಭಾವಿಸಿ ಅದರಂತೆ ನಡೆದದ್ದು ತುಂಬಾ ಗಮನಾರ್ಹವಾದುದು.'

ಕಾಯಕದಂತೆ 'ಭಕ್ತ' ಎಂಬುದು ಕೂಡ ವಚನಕಾರರು ಟಂಕಿಸಿದ ಒಂದು ವಿಶಿಷ್ಟ ಪಾರಿಭಾಷಿಕ ಪದ. ಭಕ್ತನೆಂದರೆ ದೇವರಲ್ಲಿ ನಂಬಿಕೆಯಿಟ್ಟು ದೇವರ ಪೂಜೆ ಆರಾಧನೆಗಳನ್ನು ನಡೆಸುವ ವ್ಯಕ್ತಿ ಎಂಬ ಸಾಂಪ್ರದಾಯಿಕ ಅರ್ಥಕ್ಕೆ ವಿಶೇಷ ಅರ್ಥ ಸೇರಿಸಿದರು. ಭಕ್ತನೆಂದರೆ ಸಾಮಾಜಿಕ ಜವಾಬ್ದಾರಿಯುಳ್ಳ ಶೀಲಚಾರಿತ್ರ್ಯಗಳನ್ನು ಅಳವಡಿಸಿಕೊಂಡಿರುವ ಸಜ್ಜನ ನಾಗರಿಕ ಎಂಬುದು ವಚನಕಾರರು ರೂಪಿಸಿದ ಅರ್ಥ. ಶರಣ ಸಮಾಜದ ಆಧಾರ ಸ್ವರೂಪನಾಗಿರುವ ಭಕ್ತನಿಗೆ ಅವರು ಕೆಲವು ಸಾಮಾಜಿಕ ಮತ್ತು ಧಾರ್ಮಿಕ ಕಟ್ಟಳೆಗಳನ್ನು ನಿರ್ಧರಿಸಿದ್ದರು. ಅಂಥವುಗಳಲ್ಲಿ ಕಾಯಕವೂ ಒಂದು. ಭಕ್ತನಾದವನು ಕಾಯಕ ಮಾಡಲೇಬೇಕು. ಕಾಯಕ ರಹಿತನು ಭಕ್ತನಲ್ಲ, ಅವನೊಬ್ಬ ಸಮಾಜಬಾಹಿರ ವ್ಯಕ್ತಿ ಎಂಬುದು ವಚನಕಾರರ ಅಭಿಪ್ರಾಯವಾಗಿತ್ತು. ಆದ್ದರಿಂದ 'ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ' ಎಂದು ಘೋಷಿತಲಾಗಿದೆ.

ಭಕ್ತನು ತೃಪ್ತಜೀವಿಯಾಗಿ ಸದಾನಂದದಲ್ಲಿರುವ ಸ್ಥಿತಿ ಒದಗಿ ಬರಲು ಕಾಯಕ ಅನಿವಾರ್ಯವೆನಿಸಿದೆ. ಭಕ್ತರಿಗೆ ಕಾಯಕ ಅತ್ಯಂತ ಪವಿತ್ರವೆನಿಸಿತ್ತು. ದೈವೀಸ್ವರೂಪಿಯಾದ ಕಾಯಕವು ಭಕ್ತನ ಜೀವನದ ಅವಿಭಾಜ್ಯ ಅಂಗ. ಅದಿಲ್ಲದೆ ಭಕ್ತನಿಗೆ ಅಸ್ತಿತ್ವವೇ ಇಲ್ಲವೆಂದು ವಚನಕಾರರು ಭಾವಿಸಿದ್ದರು. 'ಕಾಯಕ ತಪ್ಪಿದಡೆ ಸೈರಿಸಬಾರದು' ಎಂಬುದು ಅವರ ಸಿದ್ಧಾಂತವಾಗಿತ್ತು. ಕಾಯಕವನ್ನು ಒಂದು ವ್ರತವೆಂದು ಭಾವಿಸಿ ನಿಷ್ಠೆಯಿಂದ ಪಾಲಿಸಿದರು.

ವಚನಕಾರರು ಕಾಯಕಕ್ಕೆ ಎಷ್ಟೊಂದು ಪೂಜ್ಯಸ್ಥಾನ ನೀಡಿದರೆಂದರೆ ಅದು ದೈವೀಕೃಪೆಯ ಫಲವೆಂದು ನಂಬಿದ್ದರು. ತಮತಮಗೆ ಒದಗಿಬಂದ ಕಾಯಕ ದೇವರು ದಯಪಾಲಿಸಿದ್ದು ಎಂಬುದನ್ನು 'ನೀವು ಕೊಟ್ಟ ಕಾಯಕದ ಕೃತ್ಯ ಇನ್ನೆಷ್ಟು ದಿನ ಹೇಳಾ?' ಮುಂತಾದ ಮಾತುಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ವೃತ್ತಿಯಲ್ಲಿ ಮೇಲು-ಕೀಳು ಎಂಬುದಿಲ್ಲ. ವೃತ್ತಿ ಕಾಯಕವೆನಿಸಿದಾಗ ಅದಕ್ಕೆ ಪೂಜ್ಯತೆ ಲಭಿಸುತ್ತದೆ. ಅದು ದೈವೀಕೃಪೆಯ ಫಲ ಮಾತ್ರವಲ್ಲ, ಅದರಲ್ಲಿ ಸ್ವತಃ ದೇವರೇ ಇದ್ದಾನೆಂದು ನಂಬುವ ಹಂತಕ್ಕೆ ವಚನಕಾರರು ತಲುಪಿದ್ದರು.

ಶಿವನು ಕಾಯಕದಲ್ಲಿ ಅಂತರ್ಗತನಾಗಿದ್ದಾನೆಂದು ನಂಬುವ ವಚನಕಾರರು ಅದೇ ಹಂತದಲ್ಲಿ ಶಿವನಿಗೂ ಕಾಯಕಕ್ಕೂ ಭಿನ್ನತೆಯನ್ನು ಗುರುತಿಸುತ್ತಾರೆ. ಕಾಯಕದ ಫಲ ಮಾತ್ರ ಭಕ್ತನಿಗೆ ಒದಗುವಂಥದ್ದು. ಕಾಯಕದಲ್ಲಿರುವ ಶಿವನಾಗಲೀ, ಶಿವನ ಕೃಪೆಯಾಗಲಿ ಭಕ್ತನಿಗೆ ಅಪೇಕ್ಷಣೀಯವಲ್ಲ. ಶಿವನನ್ನು ಬೇಡಿ ಪಡೆಯುವುದನ್ನು ಭಕ್ತ ವಿರೋಧಿಸುತ್ತಾನೆ. ಮಾನಸಿಕವಾಗಿ ಶಿವನ ಸನ್ನಿಧಿಯಲ್ಲಿದ್ದರು ಅವನನ್ನು ಅವನ ಕೃಪೆಯನ್ನು ಸ್ವಾರ್ಥಕ್ಕೆ ಬಳಸಿಕೊಳ್ಳಲಾರದ ಭಕ್ತನ ನಿಲುವು ವಿಶಿಷ್ಟವಾದುದು. ಸಂಸಾರವಿರುವುದು ಅನುಭವಿಸಲಿಕ್ಕೆ. ಅದನ್ನು ಎದುರಿಸಬೇಕು ಹೆದರಿ ಪಲಾಯನ ಮಾಡಬಾರದು. ಸಂಸಾರದ ನಿರ್ವಹಣೆ ಕಾಯಕದಿಂದ. ದೇವರನ್ನು ಏನೂ ಕೇಳಬಾರದು ಎಂಬುದು ವಚನಕಾರರ ನಿಲುವು.

ವಚನಕಾರರ ಸಾಮಾಜಿಕ ಪ್ರಜ್ಞೆ ಅಪೂರ್ವವಾದದು. ಬದುಕಿಗಾಗಿ ಕಾಯಕ ಅನಿವಾರ್ಯ. ಆದರೆ ಆ ಕಾಯಕಕ್ಕೆ ಕೆಲವು ನಿರ್ದಿಷ್ಟ ಗಡಿರೇಖೆಗಳನ್ನು ವಿಧಿಸಿದರು. ಕಾಯಕದಿಂದ ಆದಾಯ ಬರುತ್ತದೆ. ಆದಾಯಕ್ಕಾಗಿ ಕಾಯಕ ಮಾಡುವುದನ್ನು ವಚನಕಾರರು ಒಪ್ಪಲಿಲ್ಲ. ಆದಾಯದ ನಿರಾಕರಣೆಯೂ ಇಲ್ಲ. ಆದರೆ ಅದರ ವಿನಿಯೋಗದ ಬಗ್ಗೆ ಅವರಿಗೆ ಸ್ಪಷ್ಟ ಅರಿವಿದೆ. ಕಾಯಕವಿಲ್ಲದೆ ಬದುಕಲಾಗದು. ಸಕಲ ಸಂಪತ್ತು ಶಿವನಕೃಪೆ. ಅವನ ಕೃಪೆಯಿಂದ ಲಭ್ಯವಾದ ಕಾಯಕ ಮತ್ತು ಕಾಯಕ ನೀಡುವ ಆದಾಯವನ್ನು ಅವನಿಗೇ ಸಲ್ಲಿಸಬೇಕು. ಸಮಾಜರೂಪಿ ಶಿವನಿಗೆ ಅರ್ಪಿಸಿ ಕೃತಾರ್ಥರಾಗಬೇಕೆಂದು ಅವರು ಭಾವಿಸಿದ್ದರು.

ಕೆಳವರ್ಗದ ಜನತೆಗೆ ತಮ್ಮ ವೃತ್ತಿಯ ಬಗ್ಗೆ ವಿಪರೀತಿ ಅಭಿಮಾನ, ತಮ್ಮ ವೃತ್ತಿ ದೇವರಿಗಿಂತಲೂ ಒಂದಿಷ್ಟು ಹೆಚ್ಚು ಎಂದು ನಂಬಿದ್ದ ಅವರು ದೇವರಲ್ಲಿ ಕೇಳುವುದಾದರೂ ಏನನ್ನು? 'ಮತ್ತೊಬ್ಬರ ಅಪ್ಪ ಅಣ್ಣ ಎಂದು ಚಿತ್ತವ ಕಲಕುವುದು ಕಷ್ಟ ಈ ಹೊತ್ತ ದೇಹಕ್ಕೆ ನಗೆಯ ಚಿತ್ತದ ಕಾಯಕ

ಇದನೊಪ್ಪುಗೊ ಆತುರ ವೈರಿ ಮಾರೇಶ್ವರಾ' ವಚನಕಾರರಿಗೆ ದುಡಿದು ಬದುಕುವ ಛಲ. ಜೀವಿಸಲು ಇನ್ನೊಬ್ಬರನ್ನು ಯಾಚಿಸುವುದು ಸರಿಯಲ್ಲ. ಯಾವುದಾದರೊಂದು ವೃತ್ತಿ ಮಾಡಿಯೇ ಜೀವಿಸಬೇಕು. ವೃತ್ತಿಯಲ್ಲಿ ಮೇಲು ಕೀಳಿಲ್ಲ. ತಾನು ಕೈಕೊಳ್ಳುವ ವೃತ್ತಿಯನ್ನು ದೇವರು ಕೂಡ ಒಪ್ಪಿಕೊಳ್ಳಲೇಬೇಕೆಂದು ವಚನಕಾರ ಕೇಳಿಕೊಳ್ಳುತ್ತಾನೆ. ದೇವರೊಂದಿಗೆ ಎಷ್ಟೇ ವಿಶ್ವಾಸವಿದ್ದರೂ ಅವನ ಭಕ್ತಿಯನ್ನು ವ್ಯವಹಾರೀಕರಣಗೊಳಿಸುವುದನ್ನು ವಚನಕಾರರು ಒಪ್ಪಲಿಲ್ಲ. ಭಕ್ತಿ ಭಕ್ತಿಗಾಗಿ ಮಾತ್ರ, ಅದು ಭಗವಂತನಲ್ಲಿ ಇರಿಸುವ ನಿಷ್ಕಾಮ ಪ್ರೀತಿ. ಅರ್ಚನೆ ಪೂಜೆಗಳು ಆ ಪ್ರೀತಿಯನ್ನು ಅಭಿವ್ಯಕ್ತಿಗೊಳಿಸುವ ಸಾಧನಗಳು ಮಾತ್ರ. ಸುಖೀ ಜೀವನಕ್ಕೆ ದುಡಿತ ಮುಖ್ಯ ಕಾರಣವಲ್ಲದೆ ದೇವರ ಕೃಪೆಯಲ್ಲವೆಂದು ಅವರು ನಂಬಿದ್ದರು.

'ಅರ್ಚಿಸಿ ಪೂಜಿಸಿ ನಿಮ್ಮ ವರವ ಬೇಡಿದೆನಾದಡೆ ಬಾರದ ಭವಂಗಳಲ್ಲಿ ಎನ್ನ ಬರಿಸು ಸಕಳೇಶ್ವರದೇವಾ' ಎಂಬುದು ಸಕಳೇಶ ಮಾದರಸನ ಪ್ರತಿಜ್ಞೆ, ದೇವರಲ್ಲಿ ವರ ಬೇಡುವುದು ಕೀಳು ಪ್ರವೃತ್ತಿಯೆಂದು ಭಾವಿಸಿ ದುಡಿದು ಬದುಕುವುದನ್ನು ರೂಢಿಸಿಕೊಂಡಿದ್ದರು. ದುಡಿಮೆಯನ್ನು ಸರ್ವಸ್ವವೆಂದು ಭಾವಿಸಿದ್ದ ಕೆಳವರ್ಗದ ಜನ ತಮ್ಮಷ್ಟಕ್ಕೆ ತಾವೇ ನೀತಿಸಂಹಿತೆಯನ್ನು ರೂಪಿಸಿಕೊಂಡಿದ್ದರು. ಉಪಜೀವನಕ್ಕಾಗಿ ದ್ರವ್ಯ(ಹಣ)ಬೇಕು. ಅದಕ್ಕಾಗಿ ದುಡಿಮೆ, ಆದರೆ ಆ ದುಡಿಮೆ ಎಷ್ಟು ಹಣ ತರಬೇಕು? ದುಡಿಮೆಗೆ ತಕ್ಕಷ್ಟನ್ನು ಮಾತ್ರ ಅದು ದೊರಕಿಸಬೇಕು. ದುಡಿಮೆ ಹಣಗಳಿಸುವ ದುರಾಸೆಯ ಉಪಕರಣವಲ್ಲ. ನಿರ್ದಿಷ್ಟವಾದ ಸಂಪಾದನೆಯನ್ನು ಮಾತ್ರ ವಚನಕಾರರು ಒಪ್ಪಿಕೊಂಡಿದ್ದಾರೆ. ದುಡಿಮೆಗೆ ಪ್ರತಿಫಲ ಬೇಕೇಬೇಕು. ಅದು ಒಂದು ಮಿತಿಯಲ್ಲಿರಬೇಕು. ಉದಾರ ಭಾವದಿಂದ ಪುಕ್ಕಟೆಯಾಗಿ ದುಡಿಯುವುದನ್ನು ಅವರು ಒಪ್ಪುವುದಿಲ್ಲ. ಈ ವಿಚಾರವನ್ನು ಪ್ರತಿಪಾದಿಸುವ ಹೇಳಿಕೆಗಳು ಹೀಗಿವೆ. 'ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯಾ'

> **'ಹಾಗದ ಕಾಯಕವ ಮಾಡಿಕೊಂಡು**
>
> **ಹಣವಡ್ಡುವ ತಾ ಎಂಬಲ್ಲಿ ಸತ್ಯ ಕಾಯಕವುಂಟೆ?'** (ಸ.ವ.ಸಂ:೬, ವ.ಸಂ, ೧೯೫೫)

ನೇಮದ ಕೂಲಿ ಎಂದರೆ ದುಡಿಮೆಗೆ ತಕ್ಕ ನ್ಯಾಯಮತ ಕೂಲಿ. ಅದನ್ನು ಬಿಡಬಾರದು. ಅದಕ್ಕಿಂತ ಹೆಚ್ಚು ಕೂಲಿ ಅಪೇಕ್ಷಿಸುವುದು ದುರಾಸೆಯಾಗುತ್ತದೆ. ಆಗ ದುಡಿಮೆ ಅರ್ಥ ಕಳೆದುಕೊಳ್ಳುತ್ತದೆ. ಹಾಗೇ, ಸ್ವಲ್ಪ ಕೆಲಸ ಮಾಡಿ(ಹಾಗದ ಕೂಲಿಗೆ ಸಮನಾದ ಕೆಲಸ) ಹೆಚ್ಚಿನ ಸಂಭಾವನೆ, ಕೂಲಿ (ಹಣ–ಹಾಗಕ್ಕಿಂತ ಹೆಚ್ಚಿನದು) ಅಪೇಕ್ಷಿಸುವುದು ಕಾಯಕ ಧರ್ಮವಲ್ಲವೆಂದು ನಂಬಿದ್ದರು.

ಕಾಯಕ(ಕಸುಬು)ಗಳಲ್ಲಿ ಸಮಾನತೆ :– ಕಾಯಕ ಸಿದ್ಧಾಂತವು ವೃತ್ತಿಗಳಲ್ಲಿ ಸಮಾನತೆಯನ್ನು ಮತ್ತು ವೃತ್ತಿ ಗೌರವ, ಶ್ರಮ ಗೌರವವನ್ನು ಪ್ರತಿಪಾದಿಸಿತು. ವೈದಿಕ ಪರಂಪರೆ ವ್ಯವಸ್ಥಿತವಾಗಿ ಬೆಳೆಸಿದ್ದ ಜಾತಿ ಮತ್ತು ವೃತ್ತಿಗಳ ಸಂಬಂಧವು ತಿರಸ್ಕರಿಸಲ್ಪಟ್ಟಿತು. ಜಾತಿಗಳು ಆಯಾ ಜಾತಿಯ ಜನಸಮೂಹ ಕೈಕೊಂಡಿದ್ದ ವೃತ್ತಿಗಳ ಮೂಲಕ ಗುರುತಿಸಲ್ಪಡುತ್ತಿತ್ತು. ವೃತ್ತಿಗಳಲ್ಲಿ ಮೇಲು–ಕೀಳು ಎಂಬ ಭಾವನೆ

ಸ್ಥಿರಗೊಂಡಿತ್ತು. ವೃತ್ತಿಗಳೆಲ್ಲ ಸಮಾನವೆಂದು ಸಾರಿದ ವಚನಕಾರರು ವೃತ್ತಿಗೆ ಅಂಟಿಕೊಂಡಿದ್ದ ಜಾತಿಗಳನ್ನು ಸಮಾನವೆಂದು ಭಾವಿಸಿದ್ದರಿಂದ ಸಮಾಜಿಕ ಸಾಮರಸ್ಯ ಉಂಟಾಯಿತು ಮೂಲತಃ ವೃತ್ತಿ ಒಬ್ಬ ಕೈಕೊಳ್ಳುವ ವ್ಯಯಕ್ತಿಕ ಜೀವನೋಪಾಯವಾಗಿತ್ತು. ಕೀಳು ವೃತ್ತಿಗಳೊಂದಿಗೆ ಕೀಳು ಜಾತಿಗಳು ಬೆಳೆದವು. ಈ ಜಾತಿ ವ್ಯವಸ್ಥೆ ಭಾರತೀಯ ಸಮಾಜಕ್ಕೆ ದೊಡ್ಡ ಪಿಡುಗಾಗಿ ಅಂಟಿಕೊಂಡಿತು. ವಚನಕಾರರು ವೃತ್ತಿ ಮತ್ತು ಜಾತಿಗಳೆರಡನ್ನೂ ಗೌರವ ಪ್ರಾಪ್ತವಾದ ಮೇಲೆ ವೃತ್ತಿಯೊಂದಿಗೆ ಜಾತಿಗಳಿಗೆ ತನ್ನಷ್ಟಕ್ಕೆ ತಾನೆ ಗೌರವ ಒದಗಿಬಂದಿತು. ಜೀವನೋಪಾಯಕ್ಕಾಗಿ ಕೈಕೊಳ್ಳುವ ವೃತ್ತಿ ಅನುವಂಶಿಕವಾಗಬೇಕಿಲ್ಲ. ಅದು ವೈಯಕ್ತಿಕ ಅಭಿರುಚಿ ಮತ್ತು ಸಾಮರ್ಥ್ಯಗಳನ್ನಾಧರಿಸಿ ನಿಗದಿಯಾಗುವಂಥದು. ಬಸವಣ್ಣನವರ

"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,

ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ

ಕರ್ಣದಲಿ ಜನಿಸಿದವರುಂಟೆ ಜಗದೊಳಗೆ?

ಇದು ಕಾರಣ, ಕೂಡಲಸಂಗಮದೇವಾ

ಲಿಂಗಸ್ಥಲವನರಿದವನೆ ಕುಲಜನು!"[೬]

ಕಾಸಿ ಕಮ್ಮಾರನಾಗುವುದೂ ವೇದವನೋದಿ ಹಾರುವನಾಗುವುದೂ ಸಮಾನಾರ್ಥಕವಾದಂಥವು. ಜಾತಿಶ್ರೇಣಿಯನ್ನು ಧೂಳೀಪಟ ಮಾಡಿದ ವಚನಕಾರರು ತಮಗರಿವಿಲ್ಲದಂತೆ ಪರಂಪರಾಗತ ಸಾಮಾಜಿಕ ವಿಷಮತೆಯನ್ನು ನಿವಾರಿಸಿದರು. ನಿಜವಾದ ಅರ್ಥದಲ್ಲಿ ಸಾಮಾಜಿಕ ಸಮಾನತೆಯನ್ನು ರೂಢಿಸಿಕೊಂಡರು. ಇದಕ್ಕಾಗಿ ಬಸವಣ್ಣನವರು ಬಹಳಷ್ಟು ಪ್ರಯತ್ನಿಸಿದರು. 'ವೃತ್ತಿ ನಮ್ಮನ್ನು ಹುಟ್ಟಿನಲ್ಲಿ ಆರಿಸಿಕೊಳ್ಳುವುದಿಲ್ಲ. ನಾವೇ ವೃತ್ತಿಯನ್ನು ಹುಡುಕಿಕೊಳ್ಳುತ್ತೇವೆ. ಆದುದರಿಂದ ಹುಟ್ಟಿಗೂ ವೃತ್ತಿಗೂ ಯಾವುದೇ ಸಂಬಂಧವಿಲ್ಲವೆಂದು ಉಗ್ಗಡಿಸಿದ ಬಸವಣ್ಣನವರ ವೃತ್ತಿ ಮತ್ತು ಜಾತಿಗಳ ನಡುವೆ ಬ್ರಾಹ್ಮಣರು ಕಟ್ಟಿದ ಸಂಬಂಧವನ್ನು ಕಡೆಗಣಿಸಿದನು. ತಮ್ಮ ಪ್ರಭುತ್ವ ಶ್ರೇಯ ಮತ್ತು ಪಾವಿತ್ರ್ಯವನ್ನು ಕಾಯ್ದುಕೊಂಡು ಹೋಗುವುದಕ್ಕೆ ದ್ವಿಜರು ಹುಟ್ಟಿಸಿದ ಧಾರ್ಮಿಕ ತಂತ್ರಗಳು ಅವು ಎಂದು ತೋರಿಸಿದರು. 'ಕಾಯಕ ತತ್ವದ ಅನುಷ್ಠಾನದಿಂದಾಗಿ ವೃತ್ತಿ ಸಮಾನತೆ ಜಾರಿಗೆ ಬಂದಿತು. ಅದರೊಂದಿಗೆ ಜಾತಿ ಸಮಾನತೆಯೂ ರೂಢಿಗೆ ಬಂದು ಅಪೂರ್ವ ಬದಲಾವಣೆಯನ್ನು ತಂದಿತು. 'ಆವಾವ ಕಾಯಕದಲ್ಲಿ ಬಂದರೂ ಭಾವ ಶುದ್ಧವಾಗಿ ಗುರುಲಿಂಗ ಜಂಗಮಕ್ಕೆ ಮಾಡುವುದೇ ಶಿವಪೂಜೆ' ಆವ ಕಾಯಕವ ಮಾಡಿದಡೆಯೂ ಒಂದೆ ಕಾಯಕವಯ್ಯಾ' ಎಂದು ತಮ್ಮ ಕಾಯಕಗಳ ಸಮಾನತೆಯನ್ನು ಸಾರಿ ಹೇಳಿದರು. ವಚನಕಾರರಿಗೆ ಕಾಯಕದ ಅಂತಸ್ತು ಮುಖ್ಯವಾಗಿರಲಿಲ್ಲ. ಅದರ ಘನ ಉದ್ದೇಶ ಪ್ರಧಾನವಾಗಿತ್ತು. ಆ ಉದ್ದೇಶವಾದರೂ ಎಂಥದು? 'ನೀವು ಕೊಟ್ಟ ಕಾಯಕ ತನುವಿಂಗೆ ಕ್ರಿಯೆ, ಆತ್ಮಂಗರಿವು ಅರಿವಿಂಗೆ ಮಹಾ ಬೆಳಗು.' ಕಾಯಕ ದೇಹಕ್ಕೆ ಸಂಬಂಧಿಸಿದ್ದಾದರೂ ಅದು ಹಂತಹಂತವಾಗಿ ಆತ್ಮಜ್ಞಾನವನ್ನು ಮಹಾ ಬೆಳಗಿನ ಸ್ವರೂಪವನ್ನು ದೊರಕಿಸಿಕೊಡುವ

ಸಾಧನವೆಂದು ವಚನಕಾರರು ನಂಬಿದ್ದರು ಬೊಕ್ಕಸದ ಚಿಕ್ಕಣ್ಣ ಈ ನಂಬಿಗೆಯನ್ನು ಇನ್ನಷ್ಟು ಸ್ಪಷ್ಟವಾಗಿ ಹೀಗೆ ತಿಳಿಸಿದ್ದಾನೆ. 'ಗಾಂಧರ್ವಕ್ಕೆ ರಾಗದ ಹೆಸರಿಟ್ಟಂತೆ ಸ್ವರವೊಂದು ಸಂಚಾರದ ಪರಿ ಬಣ್ಣ ಬೇರಾದಂತೆ ಗೋವರ್ಣ ಹಲವು ಕ್ಷೀರ ಏಕವಾದಂತೆ ಕಾಯಕ ಹಲವಾದಲ್ಲಿ ಮಾಡುವ ಮಾಟ ಶರಣರೊಳಗಾಟ ಲಿಂಗವ ಕೊಡುವ ಕೂಟ ಏಕವಾಗಿರಬೇಕು ಬಸವಣ್ಣಪ್ರಿಯ ನಾಗೇಶ್ವರ ಲಿಂಗವನರಿವುದಕ್ಕೆ' ಕಾಯಕ ಸಮಾನತೆ ಜಾತಿ ಸಮಾನತೆಯನ್ನು ರೂಢಿಗೆ ತಂದ ಅಂದಿನ ಸಂದರ್ಭ ಪರಂಪರೆಯನ್ನು ಅಲುಗಾಡಿಸಿತು. ಕೆಲವು ಜಾತಿಗಳನ್ನು ಮತ್ತು ವೃತ್ತಿಗಳನ್ನು ಕೀಳೆಂದು ನಿರ್ಧರಿಸಿದ್ದ ಸಮಾಜದಲ್ಲಿ ಈ ಹೊಸ ಬದಲಾವಣೆ ನುಂಗಲಾರದ ತುತ್ತಾಯಿತು. ಪರಂಪರೆಯನ್ನು ಬಿಡಲಾರರು ಹೊಸದನ್ನು ಒಪ್ಪಿಕೊಳ್ಳಲಾರರು.

ಕಾಯಕ ಸಮಾನತೆ ಘೋಷಣೆಯಾದ ಮಾತ್ರಕ್ಕೆ ಅದು ಸಾಮೂಹಿಕವಾಗಿ ಸ್ವೀಕೃತವಾಗಲು ಒಂದಿಷ್ಟು ಆತಂಕಗಳು ಬಂದೊದಗಿರಬೇಕು. ಇಲ್ಲಿಯವರೆಗೆ ತಾವು ತಮ್ಮ ವೃತ್ತಿ ಕೀಳಾದುದೆಂದು ನಂಬಿಕೊಂಡು ಬಂದಿದ್ದ ಶೂದ್ರ ಸಮುದಾಯದ ಜನವರ್ಗಕ್ಕೆ ಈ ಸಮಾನತೆಯ ಘೋಷಣೆ ಗೊಂದಲವನ್ನುಂಟುಮಾಡಿರಬೇಕು. ಕೀಳರಿಮೆಯಲ್ಲಿ ನರಳುತ್ತಿದ್ದ ಅವರು ಮೈಚಳಿ ಬಿಟ್ಟು ಮೇಲು ವರ್ಗದವರೊಡನೆ ಬೆರೆಯಲು ಹಿಂದೇಟುಹಾಕುತ್ತಿರಬೇಕು. ಮೇಲು ತುದಿಯಲ್ಲಿದ್ದ ಬಸವಣ್ಣ ಇದನ್ನು ಗಮನಿಸಿದ್ದಾನೆ. ಸ್ವತಃ ಅವನೊಂದಿಗೆ ಬೆರೆಯಲು ಹಿಂಜರಿಯುತ್ತಿದ್ದವರನ್ನು ಪ್ರೀತಿಯಿಂದ ಒತ್ತಾಯದಿಂದ ಮುಂದೆ ಎಳೆದುಕೊಳ್ಳಲು ಪ್ರಯತ್ನಿಸಿದನು.

'ದೇವ ಸಹಿತ ಭಕ್ತ ಮನೆಗೆ ಬಂದೆಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ ನಿಮ್ಮ ಪ್ರಥಮರಾಣೆ
ತಲೆದಂಡ ತಲೆದಂಡ ಕೂಡಲ ಸಂಗಮದೇವಾ
ಭಕ್ತರಲ್ಲಿ ಕುಲವನರಿಸದಡೆ ನಿಮ್ಮ ರಾಣಿವಾಸದಾಣೆ' (ವ.ಶಾ.ಸಾ.ವ.೧೬೧೭)

ಬಸವಣ್ಣವರ ಇಂಥ ಪ್ರತಿಜ್ಞೆ ಕೆಳವರ್ಗದವರ ಕೀಳರಿಮೆಯನ್ನು ನಿವಾರಿಸಲು ನೆರವಾಯಿತು. ಕಾಯಕ ಸಮಾನತೆಯ ಬಗ್ಗೆ ಭರವಸೆ ಮೂಡಿಸಿತು. ಕೆಳಗಿನವರನ್ನು ಮಾನಸಿಕವಾಗಿ ಮೇಲೆತ್ತಲು ಬಸವಣ್ಣ ನಿರಂತರವಾಗಿ ಪ್ರಯತ್ನಿಸಿದನು. ಮೇಲು ಜಾತಿ ಅಂತಸ್ತು ಅಧಿಕಾರದಲ್ಲಿದ್ದ ಬಸವಣ್ಣನು ಅವನ್ನೆಲ್ಲ ಮಾನಸಿಕವಾಗಿ ಧಿಕ್ಕರಿಸಿ ಕೆಳವರ್ಗದವರೊಡನೆ ಸಮಸಮವಾಗಿ ಬೆರೆಯಲು ಹಂಬಲಿಸಿದನು. ಅವರನ್ನು ತನ್ನ ರಕ್ತಸಂಬಂಧಿಗಳೆಂದು ಭಾವಿಸಿ ಹತ್ತಿರಕ್ಕೆ ಕರೆದುಕೊಂಡನು. ಇಲ್ಲಿಯವರೆಗೆ ಕೀಳೆಂದು ಕರೆಯಲ್ಪಡುತ್ತಿದ್ದ ವೃತ್ತಿಗಳನ್ನು ಗೌರವದಿಂದ ಹಾಡಿ ಹೊಗಳಿದನು.

'ಎಮ್ಮ ತಾಯಿ ನಿಂಬವ್ವೆ ನೀರನೆರೆದುಂಬಳು
ಎಮ್ಮಯ್ಯ ಚಿನ್ನಯ್ಯ ಕಾಯಕಂಪಣವ ಹೊರುವ
ಎಮಗಾರು ಇಲ್ಲವೆಂಬಿರಿ

ಎಮ್ಮೆತ್ತು ಕಂಬಳಿಯಲ್ಲಿ ಬಾಗಿಸುವ ಮಾಡುವರು

ಕೂಡಲ ಸಂಗನ ಶರಣರ ಅನುಭಾವ

ಮಡಿವಾಳನ ಕಾಯಕದಂತೆ -(ಸ.ವ.ಸಂ.೧ ವ.ಸಂ. ೬೫೨)

ಈ ಮಾತುಗಳು ಬಸವಣ್ಣನ ಉದಾರತನ ಹೃದಯ ವೈಶಾಲ್ಯತೆಗಳನ್ನು ತಿಳಿಸುವುದರ ಜೊತೆಗೆ ಕಾಯಕಕ್ಕೆ ಅವನ ಅತ್ಯುನ್ನತ ಗೌರವದ ಸ್ಥಾನವನ್ನು ಸ್ಪಷ್ಟಪಡಿಸುತ್ತದೆ.

ಕಸುಬು(ಕಾಯಕ) ಸಿದ್ಧಾಂತ ಸಾಮಾಜಿಕ ಸಮಾನತೆಯನ್ನು ರೂಪಿಸಿದ ಮೇಲೆ ಅದು ಉಂಟುಮಾಡಿದ ಪರಿಣಾಮಗಳು ಗಮನಾರ್ಹವಾಗಿವೆ. ಅಪೇಕ್ಷಿತ ಪ್ರಾಯೋಗಿಕ ಪ್ರಯೋಜನಗಳು ಅದರಿಂದ ಒದಗಿಬಂದವು. ಬಹುಸಂಖ್ಯಾತ ಕೆಳವರ್ಗದ ಜನಸಮುದಾಯದ ಕ್ರಿಯಾಶಕ್ತಿ ಜಾಗೃತಗೊಂಡಿತು. ತಮ್ಮ ವೃತ್ತಿಗಳಿಗೆ ಗೌರವ ಪ್ರಾಪ್ತವಾದೊಡನೆ ಅವರಲ್ಲಿ ಹೊಸ ಹುರುಪು ಮೂಡಿತು ವೃತ್ತಿ ಶ್ರದ್ಧೆ ಸಂವರ್ಧಿಸಿತು. ದುಡಿಮೆ ಸಾಮಾಜಿಕ ಮೌಲ್ಯವೆನಿಸಿದಾಗ ಮೈಗಳ್ಳರ ಸಂಖ್ಯೆ ಕಡಿಮೆಯಾಯಿತು. ದುಡಿಯುವ ಪ್ರವೃತ್ತಿ ಸಾರ್ವತ್ರಿಕವಾಗಿ ಬೆಳೆಯಿತು. ಇದರಿಂದಾಗಿ ಸಹಜವಾಗಿಯೇ ನಾಡಿನಲ್ಲಿ ಉತ್ಪಾದನೆ ಹೆಚ್ಚಾಯಿತು ಉತ್ಪಾದನೆ ಹೆಚ್ಚಾದ ಮೇಲೆ ಅದನ್ನು ವಿತರಿಸುವ ವ್ಯಾಪಾರ ಉದ್ದಿಮೆಗಳು ಬೆಳೆದವು. ಆರ್ಥಿಕ ಸಮೃದ್ಧಿ ತಾನೇ ತಾನಾಗಿ ನೆಲೆಯೂರಿತು. ಒಂದು ರಾಜ್ಯದ ಸುಭದ್ರತೆಗೆ ಸಂತೃಪ್ತ ಜೀವನಕ್ಕೆ ಸುಗಮ ಆಡಳಿತಕ್ಕೆ ಕಾರಣವಾದ ಆರ್ಥಿಕ ಸ್ಥಿತಿ ಸುಧಾರಿಸಿದ ಮೇಲೆ ಆ ರಾಜ್ಯದ ಮುಖ್ಯಸ್ಥನಿಗೆ ಖುಷಿ ಅನಿಸುವುದು ಸಹಜವಲ್ಲವೆ? ಆಗ ಬಿಜ್ಜಳ ನೆಮ್ಮದಿಯ ಉಸಿರು ಬಿಟ್ಟ. ಅವನು ಬಸವಣ್ಣನನ್ನು ಸಹಿಸಿಕೊಳ್ಳಲಿಕ್ಕೆ ಮುಖ್ಯ ಕಾರಣ ಇದೇ. ಬಸವಣ್ಣ ಕ್ರಾಂತಿ ಏನಾದರೂ ಮಾಡಿಕೊಂಡಿರಲಿ ಅದರಿಂದಾಗಿ ತನ್ನ ರಾಜ್ಯದ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆ. ಅಷ್ಟೇ ಸಾಕು ಎಂದು ಭಾವಿಸಿದ್ದ ಬಿಜ್ಜಳನು ಆರಂಭದ ಹಂತದಲ್ಲಿ ಬಸವ ಚಳುವಳಿಯನ್ನು ವಿರೋಧಿಸಲಿಲ್ಲ. ಬಸವಣ್ಣನನ್ನು ನಿಯಂತ್ರಿಸುವುದೆಂದರೆ ತನ್ನ ರಾಜ್ಯದ ಆರ್ಥಿಕ ಪ್ರಗತಿಯನ್ನೇ ನಿಯಂತ್ರಿಸಿದಂತೆ ಎಂಬುದು ಅವನಿಗೆ ಅರ್ಥವಾಗಿತ್ತು. ಹೀಗಾಗಿ ಕಾಯಕ ಸಿದ್ಧಾಂತ ಒಟ್ಟಾರೆ ಬಸವ ಚಳುವಳಿಯ ಅಂತಃಶಕ್ತಿಯಾಯಿತು. 'ಬಸವಣ್ಣನವರ ಸಾಮಾಜಿಕ ಮತ್ತು ಆರ್ಥಿಕ ಸಿದ್ಧಾಂತಕ್ಕೆ ಕಾಯಕ ಅಡಿಗಲ್ಲಾಯಿತು. ಅದು ಸಿದ್ಧಾಂತವಾಗಿ ಮಾತ್ರ ಉಳಿಯದೆ ಸಾವಿರಾರು ಜನರ ಆಚರಣೆಯ ಆಂದೋಲನವಾಯಿತು. ಮನೆ ಮನಗಳನ್ನು ಮುಟ್ಟಿ ವಚನ ಚಳುವಳಿಯ ಕೇಂದ್ರಶಕ್ತಿಯಾಯಿತು. ವಚನಕಾರರ ಸಾಮಾಜಿಕ ತತ್ವಕ್ಕೆ ಪೂರ್ಣ ಜೀವನದ ದಾರ್ಶನಿಕತೆಯನ್ನು ಇದು ತಂದುಕೊಟ್ಟಿತು. ಜೀವನ ನಿರ್ವಹಣೆಗಾಗಿ ಹುಟ್ಟಿಕೊಂಡ ವೃತ್ತಿ ತನ್ನ ಕೀಳರಿಮೆಯನ್ನು ಕಳೆದುಕೊಂಡು ಪ್ರತಿಷ್ಠೆ ಗೌರವಗಳನ್ನು ಪಡೆದುಕೊಂಡು ಸಾಮಾಜಿಕ ಮೌಲ್ಯವೆನಿಸಿ ಒಂದು ಕ್ರಾಂತಿಯ ಕೇಂದ್ರಶಕ್ತಿಯಾಗಿ ಮಾರ್ಪಾಡಾದುದು ಒಂದು ಪವಾಡವೇ ಸರಿ ಇದನ್ನು ಆಗುಗೊಳಿಸಿದವರು ವಚನಕಾರರು.

ಕೆಳವರ್ಗದ ಶರಣರು ತಮ್ಮ ತಮ್ಮ ವೃತ್ತಿಗಳಿಂದ, ವೃತ್ತಿಯನ್ನು ಸೂಚಿಸುವ ಜಾತಿಗಳಿಂದ ಗುರುತಿಸಲ್ಪಟ್ಟಿದ್ದಾರೆ. ಈ ವರ್ಗದವರ ಪಟ್ಟಿನೋಡಿದರೆ ವೃತ್ತಿ-ಜಾತಿಗಳ ವೈವಿಧ್ಯತೆ ವಿದಿತವಾಗುತ್ತದೆ.

೧. **ವೃತ್ತಿ ಸೂಚನೆ** :- ಆಣಿಕಾರ ಚಂದಯ್ಯ (ಮುತ್ತು ಪರೀಕ್ಷಕ, ವ್ಯಾಪಾರಿ), ಉಗ್ಗಡಿಸುವ ಬಿಬ್ಬಿದೇವ (ಬಸವನ ಮನೆ ಬಾಗಿಲು ಕಾಯುವವ, ಅಲ್ಲಿಗೆ ಬರುವ ಶರಣರ ಬಿರುದು ಕಾಯಕಗಳನ್ನು ಉಗ್ಗಡಿಸಿ ಪರಿಚಯಿಸುತ್ತಿದ್ದ), ಎಚ್ಚರಿಕೆ ಮುಕ್ತಿನಾಥ, ಒಕ್ಕಲಿಗ ಮುದ್ದಣ್ಣ, ಕನ್ನಡಿ ಕಾಯಕದ ಅಮ್ಮಿದೇವಯ್ಯ, ಕೀಲಾರದ ಭೀಮಣ್ಣ(ಗೋವಳಿಗ), ಕಲಿಕೇತ ಬೊಮ್ಮಯ್ಯ(ಹಗಲು ವೇಷಗಾರ) ಕಾಮವಟ್ಟದ ಭೀಮಣ್ಣ(ಕಾಮಾಟಿ=ಕೆಲಸದ ಆಳು), ಕಿನ್ನರಿ ಬೊಮ್ಮಯ್ಯ, ಕೂಗಿನ ಮಾರಿತಂದೆ, (ಕೂಗಿ ಎಚ್ಚರಿಸುವ ಕಾಯಕ), ಕೊಟ್ಟಣದ ಸೋಮಮ್ಮ ಗಾಣದ(ಗಾಳದ) ಕಣ್ಣಪ್ಪ(ಬೆಸ್ತ), ಢಕ್ಕೆಯ ಬೊಮ್ಮಣ್ಣ(ಮರದಲ್ಲಿ ಮಾರಿಯನ್ನಿಟ್ಟುಕೊಂಡು ಢಕ್ಕೆ ಬಾರಿಸುತ್ತ ತಿರುಗುವವ), ತಳವಾರ ಕಾಮಿದೇವ, ತುರುಗಾಹಿ ರಾಮಣ್ಣ, ನಗೆಯ ಮಾರಿತಂದೆ(ಹಾಸ್ಯಗಾರ), ಗಾಣಿಗರ ಕಣ್ಣಪ್ಪ, ಹಡಪದ ಅಪ್ಪಣ್ಣ, ಪಾಕದ ಭೀಮಣ್ಣ, ಬಳ್ಳೇಶ ಮಲ್ಲಯ್ಯ, ಬೊಕ್ಕಸದ ಚಿಕ್ಕಣ್ಣ, ಬಹುರೂಪಿ ಚೌಡಯ್ಯ, ಮಲಹರ ಕಾಯಕದ ಚಿಕ್ಕದೇವಯ್ಯ(ಕಂಚುಗಾರ) ರಾಯಸದ ಮಂಚಣ್ಣ(ಪತ್ರಲೇಖಕ), ವೈದ್ಯ ಸಂಗಣ್ಣ, ಸುಂಕದ ಬಂಕಣ್ಣ, ಸೂಜಿ ಕಾಯಕದ ರಾಮಿತಂದೆ, ಹೊಡೆಹುಲ್ಲ ಬಂಕಣ್ಣ, ನೂಲಿಯ ಚಂದಯ್ಯ, ಕದಿರ ರಮ್ಮವ್ವೆ

೨. **ಜಾತಿ + ವೃತ್ತಿ ಸೂಚನೆ** :- ಮಡಿವಾಳ ಮಾಚಯ್ಯ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಮಾದಾರ ಧೂಳಯ್ಯ, ಮೇದಾರ ಕೇತಯ್ಯ, ಕುಂಬಾರ ಗುಂಡಯ್ಯ, ಇನ್ನು ಕೆಲವು ಕೆಳವರ್ಗದ ವಚನಕಾರರು ನೇರವಾಗಿ ತಮ್ಮ ಹೆಸರುಗಳಿಂದ ಮಾತ್ರ ಕರೆಯಲ್ಪಟ್ಟಿದ್ದಾರೆ. ಉದಾ- ಆಮುಗಿದೇವ(ನೇಕಾರ), ಕಂಬದ ಮಾರಿತಂದೆ(ಬೆಸ್ತ), ಕೇತಲದೇವಿ(ಕುಂಬಾರ ಗುಂಡಯ್ಯನ ಪತ್ನಿ), ಗೊಗ್ಗವ್ವೆ(ಧೋಪದ ಕಾಯಕ), ಘಟ್ಟಿವಾಳಯ್ಯ(ನರ್ತಕ), ನಾಚಯ್ಯ(ಎಣ್ಣೆ ಮಾರಾಟಗಾರ), ಬಾಹೂರ ಬೊಮ್ಮಣ್ಣ(ತೋಟಗಾರಿಕೆ), ಸತ್ಯಕ್ಕ(ಮನೆ ಕಸಗುಡಿಸುವ ಕಾಯಕ), ವಿಶೇಷವೆಂದರೆ ಮೇಲು ವರ್ಗದ ವಚನಕಾರರು ಜಾತಿ ಅಥವಾ ವೃತ್ತಿಯಿಂದ ಕರೆಯಲ್ಪಟ್ಟಿಲ್ಲ. ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ, ಅಲ್ಲಮಪ್ರಭು, ನೀಲಮ್ಮ, ಅಕ್ಕಮಹಾದೇವಿ ಮೊದಲಾದವರು ತಮ್ಮ ಹೆಸರುಗಳಿಂದ ಮಾತ್ರ ಪರಿಚಿತರಾಗಿದ್ದಾರೆ. ಅಲ್ಲಮ ಕೆಳವರ್ಗದಿಂದ ಬಂದಿದ್ದರೂ ಬಸವಕ್ರಾಂತಿಯ ವೇಳೆಗೆ ಅವನು ಒಬ್ಬ ಸಿದ್ದಪುರುಷಯೋಗಿಯಾಗಿ ಪರಿಚಯಗೊಂಡಿದ್ದನೆಂಬುದು ಗಮನಾರ್ಹವಾಗಿದೆ. ವಚನ ರಚನೆಗೆ ಮುಖ್ಯ ಪ್ರೇರಣೆ ಅನುಭಾವ. ಆ ಅನುಭಾವ ಅಭಿವ್ಯಕ್ತಿ ವೈವಿಧ್ಯಮಯವಾಗಿ ನಡೆಯಿತು. ತಮ್ಮ ಸಾಧಕ ಜೀವನದ ಅನುಭವಗಳನ್ನು ಈ ಕೆಳವರ್ಗದ ಜನ ನಿರಾಯಾಸವಾಗಿನಿರೂಪಿಸಿದರು. ಆಗ ಅವರ ನೆರವಿಗೆ ಬಂದುದು ಅವರ ವೃತ್ತಿಯ ತಾಂತ್ರಿಕ ಸಮೃದ್ಧತೆ. ತಮ್ಮ ತಮ್ಮ ವೃತ್ತಿಗಳನ್ನು 'ಕಾಯಕ'ದ ಮಟ್ಟಕ್ಕೇರಿಸಿದ ವಚನಕಾರರು ಅವುಗಳ ಘನತೆಯನ್ನು ಪುನಃ ಪುನಃ ಸಾರಿ ಹೇಳಿದರು ತಮ್ಮ ಅನುಭಾವದ ಅಭಿವ್ಯಕ್ತಿಗೆ ವೃತ್ತಿಗಳನ್ನು ಪ್ರತಿಮೆ ರೂಪಕಗಳನ್ನಾಗಿ ಬಳಸಿಕೊಂಡರು. ಹೀಗಾಗಿ ವಚನ ಸಾಹಿತ್ಯಕ್ಕೆ ವೈವಿಧ್ಯತೆ ಹೊಸತನ ತಾನೇ ತಾನಾಗಿ ಪ್ರಾಪ್ತವಾಯಿತು.

೩.೨ ಅಲ್ಲಮನ ವಚನಗಳು

ಶೂನ್ಯಸಿಂಹಾಸನಾಧ್ಯಕ್ಷನಾದ ಜ್ಞಾನಸೂರ್ಯ ಅಲ್ಲಮಪ್ರಭು ತನ್ನ ಪ್ರಖರವಾದ ಅನುಭವ ಸತ್ತ್ವದಿಂದ ಎಲ್ಲ ಶರಣರಿಗೂ ಮಾರ್ಗದರ್ಶನ ಮಾಡಿದರು. ಬಸವಣ್ಣನವರ ಸಾಮಾಜಿಕ ಸುಧಾರಣೆಗೆ ಪರೋಕ್ಷಬೆಂಬಲ ಕೊಟ್ಟರೂ ಅವನ ವಚನಗಲಲ್ಲಿ ವರ್ಣಸಂಕರ ತತ್ತ್ವದ ಬಗ್ಗೆ ವಿಶೇಶ ಉಲ್ಲೇಖ ದೊರೆಯುವುದಿಲ್ಲ. ಆದರೆ ಪರೋಕ್ಷವಾಗಿ, ಪರ್ಯಾಯವಾಗಿ, ಆತ ಸನಾತನ ಜಾತಿ ಪದ್ಧತಿಯನ್ನು ಬಸವಣ್ಣನವರಂತೆಯೇ ಖಂಡಿಸುತ್ತಿದ್ದನೆಂಬುದಕ್ಕೆ ಸಾಕಷ್ಟು ಪುರಾವೆ ದೊರೆಯುತ್ತದೆ.

'ಜಾತಿ ಜಂಗಮ ಒಂದು ಕೋಟಾನುಕೋಟಿ

ನೀತಿ ಜಂಗಮ ಒಂದು ಕೋಟಾನುಕೋಟಿ

ಸಿದ್ಧ ಜಂಗಮ ಒಂದು ಕೋಟಾನುಕೋಟಿ

ಜ್ಞಾನ ಜಂಗಮ ತ್ರೈಲೋಕ ದುರ್ಲಭ ಗುಹೇಶ್ವರಾ' (ಸ.ವ.ಸಂ:೨ ವ.ಸಂ, ೧೨೦೩)

ಈ ವಚನವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಜಾತಿಯ ಬಲದಿಂದ ಜಂಗಮರಾದವರನ್ನು ಆತ ಟೀಕಿಸುತ್ತಿದ್ದಾನೆ. ಅವರು ಕಾಸಿಗೊಂದು ಕೊಸರಿಗೊಂದು ಆದರೆ ಜಂಗಮತ್ವಕ್ಕೆ ಜ್ಞಾನ ಆಧಾರವಾಗಬೇಕು. ಅಲ್ಲಿ ಜಾತಿ ಲೆಕ್ಕಕ್ಕಿಲ್ಲ. ಸಮಾಜದ ಯಾವ ವ್ಯಕ್ತಿಯೂ ಅರ್ಹತೆಯಿಂದ ಜ್ಞಾನಜಂಗಮನಾಗಬಹುದು ಎಂಬುದು ಈ ವಚನದ ಮಥಿತಾರ್ಥ. ಅಲ್ಲಮನು ಜಾತಿವ್ಯವಸ್ಥೆಯನ್ನು ತನ್ನ ವಚನದಲ್ಲಿ ಈ ರೀತಿ ವಿಡಂಬಿಸುತ್ತಾನೆ.

'ಕುಲಮದ ಛಲಮದ ವಿದ್ಯಾಮದದವರ ತೋರದಿರಾ

ಅವರ ಆರೂಢ ಪದವಿಯನೆನಗೆ ತೋರದಿರಾ

ಅವರ ಗುರುವ ಗಂಭೀರತನವನೆನಗೆ ತೋರದಿರಾ

ಶಮದಮೆಯಳಿದು ದಶಮುಖನಿಂದು

ಲಿಂಗದಲ್ಲಿ ಲೀಯವಾದವರನಲ್ಲದೆ

ಎನಗೆ ತೋರದಿರಾ ಗುಹೇಶ್ವರಾ' (ಸ.ವ.ಸಂ:೨ ವ.ಸಂ, ೪೬೪)

'ಕುಲಮದ' ಎಂಬ ಶಬ್ದವನ್ನು ಗಮನಿಸಬೇಕು. ಪುರಾಣೇತಿಹಾಸಗಳಲ್ಲಿ ಕುಲಮದಿಂದ ಆದ ಅನೇಕ ಹಾವಳಿಗಳು ದಾಖಲಾಗಿವೆ. ಏಕಲವ್ಯ, ಕರ್ಣ, ಶಂಬೂಕರ ವೃತ್ತಾಂತ ಯಾರಿಗೆ ಗೊತ್ತಿಲ್ಲ? ಇತಿಹಾಸದಲ್ಲೂ ಸಾವಿರಾರು ದಾಖಲಾದ ಲಕ್ಷೋಪಲಕ್ಷ ದಾಖಲಾಗದ ಅನ್ಯಾಯಪರಂಪರೆಗಳೇ ಜರುಗಿ ಹೋಗಿವೆ.

ಶರಣರಿಗೆ ಕುಲವಿಲ್ಲ, ಅಹಂಕಾರವಿಲ್ಲ, ಜ್ಞಾನದ ಗರ್ವವಿಲ್ಲ, ಪದವಿಯ ಮೋಹವಿಲ್ಲ. ಏಕೆಂದರೆ ಅವರು ಅಂತರಿಂದ್ರಿಯ ಬಾಹ್ಯೇಂದ್ರಿಯಗಳನ್ನು ನಿಯಂತ್ರಿಸಿ, ಹತ್ತು ದಿಕ್ಕಿಗೆ ಹರಿಯುವ ಮನಸ್ಸನ್ನು ನಿಗ್ರಹಿಸಿ ಲಿಂಗದಲ್ಲಿ ಐಕ್ಯರಾದವರು.

‘ಹೊನ್ನು ತೂಗಿದ ತ್ರಾಸುಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ?

ಮುನ್ನ ಹೋದ ಹಿರಿಯರು ಲಿಂಗದ ಸುದ್ದಿಯನರಿಯರು’ (ವ.ಶಾ.ಸಾ.ವ. ೨೫೦೬)

ಈ ವಚನ ಭಾಗದಲ್ಲಿ, ಚಿನ್ನವನ್ನು ತೂಗುವ ಬಟ್ಟು ಮತ್ತು ಚಿನ್ನದಗಟ್ಟಿ ಸಮನಾಗಲಾರದು. ಪ್ರಾಚೀನರಲ್ಲಿ ಕೆಲವರಲ್ಲಿ ಭೇದ ದೃಷ್ಟಿ ಇದ್ದುದರಿಂದ ಕನ್ನಕತ್ತರಿಯಂತೆ ಸವೆದು ಹೋದರು. ಅಭಿನ್ನ ದೃಷ್ಟಿಯ ಸ್ವಲದೂರಾನ್ವಯ ಎನಿಸಬಹುದಾದರೂ ಭೇದದೃಷ್ಟಿ ಎಂದಾಗ ಜಾತಿವಿಭೇದ ಎಂದು ಅರ್ಥೈಸಬಹುದೆಂದು ತೋರುತ್ತದೆ.

‘ಭೂತಳದ ಮತಿವಂತರು ಆತುಮನ ಸ್ಥಲವಿಡಲು

ಮಾತು ಮಾಣಿಕವ ನುಂಗಿ ಜಾತಿ ಧರ್ಮವನುಡುಗಿ

ವ್ರತದ ಭ್ರಮೆಗಳ ಸುಟ್ಟು ಚಿತ್ತ ಭಸ್ಮವ ಧರಿಸಿ

ಅಣಿಮಾದಿ ಗುಣಗಳ ಗತಿಯ ಪಥವ ಮೀರಿ

ಭ್ರಾಂತಳಿದು ಜ್ಯೋತಿ ಬೆಳಗುತ್ತಿದೆ ಗುಹೇಶ್ವರಾ’ (ಸ.ವ.ಸಂ:೨ ವ.ಸಂ, ೫೮೪)

ವಚನಕಾರರ ಸಮಾಜ ವರ್ಣಾಶ್ರಮ ವ್ಯವಸ್ಥೆಯನ್ನು ಸ್ಫೋಟಿಸಿತು, ತನ್ನ ವೈಚಾರಿಕ, ಅನುಭಾವಿಕ ಶಕ್ತಿಯ ಮೂಲಕ. ಅವರ ವಚನವೇದ ಆತ್ಮವಸ್ತುವನ್ನು ನಂಬಿ, ನೂರೆಂಟು ಅರ್ಥವಿಹೀನ ಆಚಾರಗಳನ್ನು ಸುಟ್ಟು, ಅಣಿಮಾದಿಸಿದ್ಧಿಗಳನ್ನು ಧಿಕ್ಕರಿಸಿ, ಶಿವಯೋಗವನ್ನು ಸಾಧಿಸಿತು. ಆಗ ಪರಮಪರಂಜ್ಯೋತಿಯೊಂದು ಆದ್ಯಂತವಾಗಿ ಸರ್ವತ್ರತೊಳಗಿ ಬೆಳಗುತ್ತಿದೆ.

ಸ್ವತಃ ಅಬ್ರಾಹ್ಮಣ ನೆಲೆಯಿಂದ ಬಂದ ಅಲ್ಲಮನಿಗೆ ಜಾತಿವ್ಯವಸ್ಥೆಯ ಅಸಮಾನತೆಯ ಕಾವು ತಟ್ಟಿದೆ, ನೋವು ಊರಿದೆ. ಸಿದ್ಧರಾಮನೇ ಮೊದಲಾದ ಶೂದ್ರ ಶರಣರು ಏರಿದ ಎತ್ತರ, ಬಸವಾದಿ ಪ್ರಮಥರ ಗಣದಲ್ಲಿದ್ದ ಹತ್ತಾರು ‘ಕೆಳವರ್ಗ’ದವರ ಸಾಧನೆಯನ್ನು ಅಲ್ಲಮನು ಪ್ರತ್ಯಕ್ಷ ಕಂಡವನಾಗಿದ್ದಾನೆ.

ಕೇವಲ ಬಾಹ್ಯ ಪೂಜಾಕ್ರಮವನ್ನು ಪೂಜೆಯೆಂದು ತಿಳಿದವರನ್ನು ಅಲ್ಲಮಪ್ರಭುಗಳು ಈ ರೀತಿ ತಿಳಿಸುತ್ತಾರೆ,

‘ಅಗ್ಘವಣಿ ಪತ್ರೆ ಪುಷ್ಪ ಧೂಪ ದೀಪ ನಿವಾಳಿಯಲ್ಲಿ

ಪೂಜಿಸಿ ಪೂಜಿಸಿ ಬಳಲುತ್ತೈದಾರೆ.

ಏನೆಂದರಿಯರು ಎಂತೆಂದರಿಯರು.

ಜನ ಮರುಳೋ, ಜಾತ್ರೆ ಮರುಳೊ ಎಂಬಂತೆ,

ಎಲ್ಲರೂ ಪೂಜಿಸಿ, ಏನನೂ ಕಾಣದೆ,

ಲಯವಾಗಿ ಹೋದರು ಗುಹೇಶ್ವರಾ’. (ವ.ಶಾ.ಸಾ.ವ. ೯೪೧)

ಮನಸ್ಸಿನೊಳಗಣ ಪೂಜಾಕ್ರಮದ ಅರಿವೇ ಇಲ್ಲ. ಕೇವಲ ಶುದ್ಧೋದಕ, ಬಿಲ್ವಪತ್ರೆ, ಪುಷ್ಪ, ದೀಪ, ಧೂಪದ ಮೂಲಕ ಶಿವನನ್ನು ಮೆಚ್ಚಿಸಲು ನೋಡುತ್ತಿದ್ದಾರೆ. ಇಂಥ ಹೊರಗಣ್ಣಿಗೆ ಕಾಣುವ ವೈಭವದ ಪೂಜೆ ಅಂತರಂಗದ ಸತ್ಯವನ್ನು ತೋರಿತು ಹೇಗೆ? ಈ ಅಂತರಂಗದ ಪೂಜೆ ಅರ್ಥಪೂರ್ಣವಾಗಿ ನಡೆಯಬೇಕಾದರೆ ಮೊದಲು ಬೇಕಾದದ್ದು ತನ್ನತನದ ನಿಜವಾದ ತಿಳುವಳಿಕೆ. ಇದೇ ರೀತಿ ಶೂನ್ಯಸಂಪಾದನೆಯಲ್ಲಿ ಸಿದ್ದರಾಮಯ್ಯದೇವರ ಪ್ರಸಂಗ ಬರುತ್ತದೆ. ಅಲ್ಲಮಪ್ರಭುದೇವರು ಮುಕ್ತಾಯಕ್ಕನಿಗೆ ನಿರವಯದ ತತ್ವಬೋಧನ ಕಾಣಿಸಿ, ಅಲ್ಲಿಂದ ಸೊನ್ನಲಿಗಿಗೆ ಬರುತ್ತಾರೆ. ಅಲ್ಲಿ, ಆ ಊರಿನಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶಿವಾಲಯಗಳ ನಿರ್ಮಾಣ ಮಾಡುವುದರಲ್ಲಿ ಮಗ್ನರಾಗಿರುವುದನ್ನೂ, ಇದರ ಸಮಸ್ತ ಉಸ್ತವಾರಿಯನ್ನು ವಹಿಸಿದ್ದ ಸಿದ್ಧರಾಮರನ್ನು ಕಂಡು, ಈ ಜ್ಞಾನಮಾರ್ಗಯೋಗಿ ಕರ್ಮಯೋಗದಲ್ಲಿ ತಲ್ಲೀನರಾದವರನ್ನು ತೀಕ್ಷ್ಣವಾಗಿ ವಿಡಂಬಣೆ ಮಾಡುತ್ತಾನೆ ಅಲ್ಲಮ,

'ಕಲ್ಲು ಮನೆಯ ಮಾಡಿ, ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲಮೇಲೆ ಕೆಡೆದಡೆ ದೇವರೆತ್ತ ಹೋದರೋ?
ಲಿಂಗ ಪ್ರತಿಷ್ಠೆಯ ಮಾಡಿದವರಿಗೆ ನಾಯಕ ನರಕ ಗುಹೇಶ್ವರಾ' (ವ.ಶಾ.ಸಾ.ವ. ೧೪೩೮)

ಎಂದು ಸಿದ್ಧರಾಮನಲ್ಲಿ ಅನೂಹ್ಯ ಭಯ, ತಲ್ಲಣ ಹುಟ್ಟಿಸುತ್ತಾನೆ. ಈತ ಸೊನ್ನಲಿಗೆಯನ್ನು ಅಭಿನವ ಶ್ರೀಶೈಲ ಮಾಡಹೊರಟವನು. ಕ್ರೀಯಾ ಶಕ್ತಿಯನ್ನೇ ನಂಬಿದವರು ಅಲ್ಲಮ ಪ್ರಭುದೇವರು,

'ಅನ್ನವನಿಕ್ಕಿ ನನ್ನಿಯ ನುಡಿದು, ಅರವಟ್ಟಿಗೆಯನಿಕ್ಕಿ ಕೆರೆಯ ಕಟ್ಟಿಸಿದಡೆ
ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ
ಶಿವನ ನಿಜವು ಸಾಧ್ಯವಾಗದು.
ಗುಹೇಶ್ವರನನರಿದ ಶರಣಂಗೆ ಆವ ಫಲವೂ ಇಲ್ಲ'. (ವ.ಶಾ.ಸಾ.ವ. ೧೬೮೨)

ಎಂದು ಸಿದ್ಧರಾಮನನ್ನು ಒಡ್ಡ, ಅರೆಮರುಳ ಎಂದು ತೀಕ್ಷ್ಣವಾಗಿ ಜರಿಯುತ್ತಾ ಮೊದಲು ಮನುಷ್ಯ, 'ತನುವೆಂಬ ಏರಿಗೆ ಮನವೆಂಬ ಕಟ್ಟೆ, ಆಚಾರವೆಂಬ ಸೋಪಾನ ನಿರ್ಮಿಸಿ' ಅದರೊಳಗೆ 'ಪರಮಾನಂದವೆಂಬ ಜಲ' ತುಂಬಬೇಕು ಎನ್ನುತ್ತಾನೆ. ಮತ್ತೆ ನೀರು ತುಂಬುವ ಮೊದಲು ನೀರು ತುಂಬುವ ಪಾತ್ರೆಯ ಒಳಭಾಗವನ್ನು ಅಂದರೆ ದೇಹದ ಒಳಗೆ ಇರುವ ಮನಸ್ಸನ್ನು ಸ್ವಚ್ಛಗೊಳಿಸಬೇಕು ಎಂದು ತಿಳುವಳಿಕೆ ನೀಡುತ್ತಾನೆ ಅಲ್ಲಮ ಪ್ರಭು.

೩.೩ ಬಸವಣ್ಣನ ವಚನಗಳು

ಬಸವಣ್ಣನವರ ವಚನಗಳಲ್ಲಿ ಒಂದು ಮುಖ್ಯ ಎಳೆ ಈ ವರ್ಣ ಸಂಕರಕ್ಕೆ ಸಂಬಂಧಿಸಿದ್ದೇ ಆಗಿದೆ. ನೂರಾರು ವಚನಗಳಲ್ಲಿ ಮತ್ತೆ ಮತ್ತೆ ಪುನರುಕ್ತವಾಗುವ ಆಲೋಚನೆ, ವಿವರಣೆ ಇದಕ್ಕೆ ಸಂಬಂಧಿಸಿದುದೇ ಆಗಿದೆ. ಮತ್ತೆ ಮತ್ತೆ ಒತ್ತಿ ಹೇಳಲು, ಅವಧಾರಣೆಯೊಡನೆ ಜಾತಿವಿಭೇದವನ್ನು ಪುಡಿಗಟ್ಟಲು ಬಸವಣ್ಣನವರು ಬೇಸರಿಸುವುದಿಲ್ಲ.

'ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ' ಎಂದಿರುವ ಬಸವಣ್ಣನವರು ಮರ್ಣಾತೀತವಾದ ಸರ್ವಸಮಾನತೆಯ ಹೊಸ ಸಮಾಜದವರನ್ನು 'ಎಮ್ಮವರು' ಎಂದು ಅಭಿಮಾನದಿಂದ ಕರೆದಿದ್ದಾರೆ.

'ಕದ್ದ ಕಳ್ಳನ ಬಿಟ್ಟ ಮಂಡೆಯ ಹಿಡಿದು ನೀರೊಳಗದ್ದುವಂತೆ

ಮುಳುಗಲಾರೆನು, ಹಿಂಡಲಾರೆನು,

ಹಿಂಗಿದೆನಯ್ಯ ಎನ್ನ ಹಾರುವ ಕುಲವನು' (ಸ.ವ.ಸಂ:೧ ವ.ಸಂ, ೧೧೩೦)

ಹಾರುವರು ಧರ್ಮದ ನೆಪದಲ್ಲಿ ಪಾಲಿಸುತ್ತಿದ್ದ ಭೇದನೀತಿಗೆ ಹುಡುಕುನೀರು ಶಿಕ್ಷೆಯೇ (ಸುಡುನೀರಿನಲ್ಲಿ ಅದ್ದುವುದು) ಗತಿ, ಶಿವನ ಕೃಪೆಯಿಂದ ತಾನು ಆ ಶಿಕ್ಷೆಯಿಂದ ಪಾರಾದೆ ಎಂಬ ಬಿಡುಗಡೆಯ ಭಾವ ಇಲ್ಲಿ ವ್ಯಕ್ತವಾಗಿದೆ.

'ತಾಳಮರದ ಕೆಳಗೆ ಒಂದು ಹಾಲಹರವಿಯಿದ್ದರೆ

ಆದ ಹಾಲಹರವಿಯಯೆನ್ನರು, ಸುರೆಯ ಹರವಿಯೆಂಬರು

ಈ ಭಾವನಿಂದೆಯ ಮಾಣಿಸಾ ಕೂಡಲಸಂಗಮದೇವ.' (ಸ.ವ.ಸಂ:೧ ವ.ಸಂ, ೯೦)

ತನ್ನ ಪೂರ್ವ ಜಾತಿಯ ಸಂಬಂಧ ಸಲ್ಲ, ಜಾತಿಶ್ರೇಷ್ಠತೆಯ ಭ್ರಮೆಯಿಂದಾಗಿ, ತನ್ನ ಪೂರ್ವಾಶ್ರಮದ ಸಂಬಂಧದಿಂದ, ತಾನು ಹಾಲಹರವಿಯಾಗಿದ್ದರೂ ಹೆಂಡದ ಭಾಂಡವೆಂಬ ಅಪನಂಬಿಕೆ ತೊಲಗದು ಎಂಬ ಪೇಚಾಟ ಅವರದು.

ವಿಪ್ರರು, 'ಭೂಸುರರು' ಎಂಬ ಅಭಿಮಾನದಿಂದ ಅಹಂಕಾರದಿಂದ ಮೆರೆಯುತ್ತಿದ್ದ ಪರಂಪರೆಯಲ್ಲಿ ಬಂದ ಬಸವಣ್ಣನವರು ಮಾತ್ರ ಅನನ್ಯರು, ವಿಶಿಷ್ಟರು. ಅವರಿಗೆ ತಮ್ಮ ಪೂರ್ವಕುಲ 'ಕಷ್ಟದಕುಲ' ವೆಂದೆನಿಸಿದೆ. ತಾನು ಆಕಸ್ಮಿಕವಾಗಿ ಹುಟ್ಟಿರಬಹುದಾದ 'ಜಾತಿ' ಸಂಪರ್ಕದಿಂದ ಅಭಿಮಾನವಿಲ್ಲ. 'ಎನಗಿದು ವಿಧಿಯೆ'? ಎಂದು ನೊಂದುಕೊಳ್ಳುತ್ತಾರೆ. ಸಿರಿಯಾಳ, ಮಾಚಯ್ಯ, ಕಕ್ಕಯ್ಯ, ಚೆನ್ನಯ್ಯ, ಶ್ವಪಚಯ ಮೊದಲಾದವರು ತಾವು ಹಿಡಿದ ವೃತ್ತಿಯಿಂದಾಗಿ 'ಕೀಳು' ಆಗುವುದಾದರೆ ನಾನೂ 'ಕೀಳೇ'.

ಅಷ್ಟೇ ಅಲ್ಲ, ತಾನು ಆ ಭಕ್ತರ ದಾಸ-ದಾಸಿಯರ ಮಗ ಎನ್ನುವುದರ ಮೂಲಕ 'ಕುಲವಾದ'ವನ್ನು ಪುಡಿಗಟ್ಟುತ್ತಾರೆ, ನುಚ್ಚುನೂರು ಮಾಡುತ್ತಾರೆ. ಇದು ಇತರ ಶರಣರಿಗೂ ಪಾಠವಾಗಬೇಕು, ಆದರ್ಶವಾಗಬೇಕು. ಅಖಂಡ ಮಾನವ ಕುಲ ಒಂದು. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದನ್ನು ಸಾರುವುದೇ ಉದ್ದೇಶ. ಇನ್ನು ಹತ್ತಾರು ವಚನಗಳಲ್ಲಿ ಇದೆ ಅಭಿಪ್ರಾಯ, ಇದೇ ಧಾಟಿಯಲ್ಲಿ, ಇದೇ ರೂಪಕಗಳನ್ನು ಬಳಸಿ ಪುನರುಕ್ತವಾಗುತ್ತದೆ. ಪುನರಪಿ, ಪುನರಪಿ, ವಿವಿಧ ಸಂದರ್ಭಗಳಲ್ಲಿ, ವಿವಿಧ ಸಮುದಾಯಗಳನ್ನು ಉದ್ದೇಶಿಸಿ ಪುನರುಕ್ತಿಯ ದೋಷವನ್ನು ಲಕ್ಷಿಸದೆ, ಬಸವಣ್ಣನವರು 'ಕುಲಮದ ನಿರಸನ' ಮಾಡಿದ್ದಾರೆ.

‘ವೇದವನೋದಿ ವಿಪ್ರರು

ಹೊಸಲಲ್ಲಿ ಹೋದ ಕೇಡ ನೋಡಿರೇ

ಭರ್ಗೋ ದೇವಸ್ಯ ಧೀಮಹಿ ಎಂಬುದು,

ಒಬ್ಬರಿಗಾಗಿಯು ವಿಚಾರವಿಲ್ಲ ನೋಡಿರೇ’ (ಸ.ವ.ಸಂ:೧ ವ.ಸಂ, ೫೮೬)

ಯಜನ ಯಾಜನ ಬ್ರಾಹ್ಮಣನ ಷಟ್ಕರ್ಮಗಳಲ್ಲಿ ಎರಡು ಯಜ್ಞ ಮಾಡುವುದು, ಮಾಡಿಸುವುದು. ಯಜ್ಞವಿಧಿ ಎಷ್ಟೇ ಪ್ರಾಚೀನವಿದ್ದರೂ, ವೈದಿಕ ಧರ್ಮದ ಪ್ರಧಾನ ಕರ್ಮವಾಗಿದ್ದರೂ ಅದು ಅವೈಜ್ಞಾನಿಕ. ಮೌಢ್ಯಮೂಲ. ಸಂಪತ್ತಿನ ಅಪವ್ಯಯ, ಕುರಿ ಕೋಣ ಕುದುರೆ ಮೊದಲಾದ ಜೀವಹಾನಿ. ಆದ್ದರಿಂದ ‘ಎಲೆ ಹೋತೆ ಅಳು ಕಂಡಾ, ವೇದವನೋದಿದವರ ಮುಂದೆ’ ಎಂದು ಸೂಚ್ಯವಾಗಿ ಪ್ರತಿಕ್ರಿಯಿಸಿದ್ದಾರೆ. ಸನಾತನವಾದುದೆಂದು ಅತಾರ್ಕಿಕವೂ ಹಿಂಸಾ ಮೂಲವೂ ‘ಸಕಲ ಪದಾರ್ಥದ’ ಅಪವ್ಯಯವೂ ಆದ ಆ ಕರ್ಮಕಾಂಡಕ್ಕೆ ಹೊಸ ಸಮಾಜದ ಸಹಮತವಿಲ್ಲ, ಕಡುವಿರೋಧವಿದೆ, ಪ್ರತಿಭಟನೆ ಇದೆ.

‘ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ

ಮಂಡೋದರಿ ಕಪ್ಪೆಯ ಮಗಳು ಕುಲವನರಸದಿರಿಂಭೋ

ಕುಲದಿಂಮುನ್ನೇನಾದಿರಿಂ ಭೋ’ (ವ.ಶಾ.ಸಾ.ವ. ೧೬೩೭)

ಹೀಗೆ ಈ ಪಟ್ಟಿ ಬೆಳೆಯುತ್ತದೆ. ಯಾರು ಪ್ರಸಿದ್ಧ ಋಷಿಗಳೋ, ಗೋತ್ರಪುರುಷರೋ ಅವರೆಲ್ಲ ವರ್ಣಸಂಕರದಿಂದ ಜನಿಸಿದವರೇ ಆಗಿದ್ದಾರೆ. ಅವರು ಪರಂಪರೆಯಲ್ಲಿ ವಿಶೇಷ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ಆದ್ದರಿಂದ ‘ಶ್ವಪಚೋಪಿಯನಾದರೇನು? ಶಿವಭಕ್ತನೆ ಕುಲಜಂ ಭೋ’ –ಎಂದು ಘಂಟಾಘೋಷವಾಗಿ ಸಾರಲಾಗಿದೆ.

ಇನ್ನು ನೂರೆಂಟು ಕಾಯಕ ಮಾಡುವವರನ್ನು ಗೌರವಿಸುವ ಬದಲು ಕೀಳು, ಶೂದ್ರ ಎಂದು ತಿರಸ್ಕರಿಸಲಾಗಿದೆ. ವೈದಿಕ ಸಂಸ್ಕೃತಿಯಲ್ಲಿ,

‘ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ

ಇದು ಕಾರಣ ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ

ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ

ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ’ (ವ.ಶಾ.ಸಾ.ವ. ೧೫೮೭)

ಮಾಡುವ ವೃತ್ತಿ ಅಥವಾ ಕಾಯಕವನ್ನು ಆಧರಿಸಿ ಹೀನಗೈವುದು, ತುಚ್ಛೀಕರಿಸುವುದು ಯಾವ ಧರ್ಮ? ಎಲ್ಲರೂ ಈ ಲೋಕಕ್ಕೆ ಇಳಿದು ಬರುವುದು ಒಂದೇ ದ್ವಾರದಿಂದ ತಾಯಿಯ ಗರ್ಭದಿಂದ, ಗರ್ಭಕೋಶದಿಂದ, ‘ಯಾರೂ ಕರ್ಣದಲ್ಲಿ ಜನಿಸಿಲ್ಲ’ ಎಂದು ಅತ್ಯಂತ ವ್ಯಂಗ್ಯವಾಗಿ,

'ಹುಟ್ಟಿನಿಂದ ಮೇಲಾದವರು' ಎಂದು ಮರೆಯುತ್ತಿರುವ ವೈದಿಕರಿಗೆ ಚುಚ್ಚಿದ್ದಾರೆ. 'ಕುಲಜ' ಎಂದು ಕರೆಯಲೇಬೇಕಾದರೆ 'ಲಿಂಗಸ್ಥಲವನರಿದವನೇ ಕುಲಜ' ಎಂದು ಪರಿಗಣಿಸಿ.

'ಕೊಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ

ಕುಲವೇನೋ ಆವಂದಿರ ಕುಲವೇನೋ

ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ

ಕೂಡಲಸಂಗನ ಶರಣರೇ ಕುಲಜರು!' (ವ.ಶಾ.ಸಾ.ವ. ೧೬೬೦)

ಪ್ರಾಣಿಹಿಂಸೆ, ಮಾಂಸಭಕ್ಷಣೆ ಮಾಡುವವನು ಕುಲಜನಲ್ಲ, ಸಕಲ ಜೀವಾತ್ಮರ ಲೇಸನ್ನು ಬಯಸುವವನು ಕುಲಜ. ಶಿವಭಕ್ತರಾದ ಮೇಲೆ ಅವರ ಕರ್ಮ, ಕ್ರಿಯೆಗಳು ಬದಲಾದವು. ಕ್ರೂರಕರ್ಮಗಳು ಕಳಚಿಬಿದ್ದವು. ಅವರ ಕುಲವು ಸಹ ಕಳಚಿಬಿತ್ತು. 'ಜಾತಿವಿಡಿದು ಸೂತಕವನರಸುವರೆ, ಜ್ಯೋತಿವಿಡಿದು ಕತ್ತಲೆಯನರಸುವರೆ' ಶಿವಭಕ್ತನಾದ ಮೇಲೆ ಜಾತಿಸೂತಕವನ್ನು ಹುಡುಕುವುದೇ ಮೌಢ್ಯ, ಜ್ಯೋತಿ ಹಿಡಿದ ಮೇಲೆ ಕತ್ತಲೆ ಮಂಗಮಾಯ.

'ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಭಕ್ತಿಯ ಹೆಸರಿನಲ್ಲಿ ಲೋಕದ ಜನ ನಡೆಸುವ ವಿವಿಧ ಅಂಧ ಆಚರಣೆಗಳನ್ನು ಕಂಡು ಪರಿಹಾಸ್ಯ ಮಾಡಿದುದುಂಟು. ಅಜ್ಞಾನದಿಂದ ಅಂದಿನ ಜನ ಕಲ್ಲು, ಮಣ್ಣು ದೇವರೆಂದೂ, ನೀರು, ಗಿಡಗಳು ದೇವರೆಂದೂ ಪೂಜಿಸುತ್ತಿದ್ದುದು ಶರಣರಿಗೆ ನಗೆ ತರಿಸಿತು. ಅಷ್ಟೇ ಅಲ್ಲ ಅಂಥವು ವ್ಯರ್ಥ ಆಚರಣೆಗಳೇ ವಿನಾ ಮನುಷ್ಯನನ್ನು ದೈವತ್ವಕ್ಕೇರಿಸುವ ಸಾಧನಗಳಲ್ಲ ಎಂದು ಬಗೆಬಗೆಯಾಗಿ ಲೋಕದ ಜನತೆಗೆ ತಮ್ಮ ವಚನಗಳ ಮೂಲಕ ತಿಳಿಹೇಳಿದುದುಂಟು. ಎಷ್ಟು ತಿಳಿಹೇಳಿದರೂ ಕೆಲವು ಜನ ಮೌಢ್ಯದಿಂದ ಪ್ರೇರಣೆಗೊಂಡು ವ್ಯರ್ಥ ಆಚರಣೆಗಳಲ್ಲಿ ತೊಡಗಿಕೊಂಡುದುಂಟು. ಅಂಥವರ ಆಚರಣೆಯನ್ನು ಬಸವಣ್ಣನವರು ತಮ್ಮೊಂದು ವಚನದಲ್ಲಿ ಹೀಗೆ ವಿಡಂಬಿಸುತ್ತಾರೆ.

'ನೀರ ಕಂಡಲ್ಲಿ ಮುಳುಗುವರಯ್ಯ

ಮರನ ಕಂಡಲ್ಲಿ ಸುತ್ತುವರಯ್ಯಾ

ಬತ್ತುವ ಜಲವ, ಒಣಗುವ ಮರನ

ಮೆಚ್ಚಿದವರು ನಿಮ್ಮನೆತ್ತಬಲ್ಲರು? ಕೂಡಲಸಂಗಮದೇವಾ' (ವ.ಶಾ.ಸಾ.ವ. ೧೪೮೦)

ನೀರು ನೋಡಿದೊಡನೆ ಅದರಲ್ಲಿ ಮುಳುಗುಹಾಕಿ ಪವಿತ್ರರಾದೆವೆಂದುಕೊಳ್ಳುವ ಜನಕ್ಕೆ ಬಸವಣ್ಣನವರು ಕೇಳುವ ಪ್ರಶ್ನೆ ಹೀಗಿದೆ. ನೀರು ನಿಮ್ಮ ಶರೀರವನ್ನು ಹಸನು ಮಾಡುತ್ತದಷ್ಟೇ, ಮನಸ್ಸಿಗೆ ಅಂಟಿದ ಮಲಿನತೆಯನ್ನು ಅದು ಕಳೆಯದು ಮತ್ತು ಅದೇನು ಶಾಶ್ವತವಾದಂಥದಲ್ಲ, ಬತ್ತಿಹೋಗುವಂಥದು. ಅದು ಹೇಗೆ ಪವಿತ್ರವಾಗುತ್ತದೆ? ಇದರಂತೆ ಮರ ದೇವರೆಂದು ಸುತ್ತುಹಾಕುವ ಜನರಿಗೆ, ಅದು ಒಣಗಿಹೋಗುತ್ತದೆ. ಅದು ಹೇಗೆ ತಾನೇ ದೇವರಾಗಬಲ್ಲದು? ಜಲ, ಮರ ಇವೆಲ್ಲ ದೇವರಲ್ಲ.

ಇವೇ ದೇವರೆಂದು ತಿಳಿದು ಅರ್ಥಹೀನ ಆಚರಣೆಗಳಲ್ಲಿ ತೊಡಗಿದವರ ಬದುಕಿನ ಪರಿ ಬಸವಣ್ಣನವರಿಗೆ ನಗೆ ತರಿಸಿದೆ. ಅದಕ್ಕೇ ಅವರು ತಮ್ಮೀ ವಚನದಲ್ಲಿ ಜಲ, ಮರ ದೇವರೆಂದು ತಿಳಿದ ಅಜ್ಞಾನಿ ಜನಗಳನ್ನು ಎಂಟನೂರು ವರ್ಷಗಳ ಹಿಂದೆಯೇ ವಿಡಂಬಿಸುವುದರ ಮೂಲಕ ತಿಳಿಸಿ ಹೇಳಿದ್ದಾರೆ. ಆದರೆ ಇಂದಿಗೂ ಹಳ್ಳಿಗಾಡಿನ ಬಹತೇಕ ಜನರು ಹಾಗೆಯೇ ಮಡಿ, ಮೈಲಿಗೆ ಎನ್ನುತ್ತ ನೀರು ಕಂಡಲ್ಲಿ ಮುಳುಗುವುದನ್ನು ಬಿಟ್ಟಿಲ್ಲ, ಮರ ಕಂಡಲ್ಲಿ ಅದು ದೇವರೆಂದು ನಂಬಿ ಸುತ್ತುಹಾಕುವುದನ್ನು ಬಿಟ್ಟಿಲ್ಲ. ಇದು ನಿಜಕ್ಕೂ ವಿಷಾದದ ಸಂಗತಿ. ಹಾಗೆಯೇ "ನಮ್ಮ ಗ್ರಾಮೀಣರು ಕಲ್ಲನಾಗರ ದೇವರೆಂದು ದಿಟದ ನಾಗರ ವಿಷಜಂತುವೆಂದು ಭಾವಿಸಿ ಕಲ್ಲನಾಗರಕ್ಕೆ ಹಾಲೆರೆಯುತ್ತ ದಿಟದ ನಾಗರವನ್ನು ಕೊಲ್ಲುತ್ತ ಬಂದುದನ್ನೂ ಕಾಣುವೆವು. ಹನ್ನೆರಡನೇ ಶತಮಾನದಲ್ಲೂ ಇಂಥ ಆಚರಣೆ ಇತ್ತು. ಇದನ್ನು ಕಂಡು ಬಸವಣ್ಣನವರು

'ಕಲ್ಲನಾಗರ ಕಂಡಡೆ ಹಾಲನೆರೆಯೆಂಬರು
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯ
ಉಂಬ ಜಂಗಮ ಮನೆಗೆ ಬಂದಡೆ ನಡೆ ಎಂಬುರು
ಉಣ್ಣದ ಲಿಂಗಕ್ಕೆ ಬೋನವ ಹಿಡಿವರಯ್ಯ
ಕೂಡಲ ಸಂಗಮದೇವ' (ಸ.ವ.ಸಂ:೧ ವ.ಸಂ, ೧೯೪)

ಲೋಕದ ಜನತೆಯ ಅಜ್ಞಾನ ಬಗೆಬಗೆಯಾದುದು. ಮಹಾಪುರುಷರಾದವರು ಲೋಕದ ಜನರನ್ನು ಸನ್ಮಾರ್ಗದಲ್ಲಿ ಮುನ್ನಡೆಸಲು ವಿಧ ವಿಧದ ರೀತಿಯಲ್ಲಿ ಪ್ರಯತ್ನಿಸಿದ್ದುಂಟು. ಬಸವಣ್ಣನವರು ತಮ್ಮ ವಚನಗಳಲ್ಲಿ ಜನರ ಅಜ್ಞಾನಪ್ರೇರಿತ ಮೌಢ್ಯದಿಂದ ಕೂಡಿದ ಆಚರಣೆಗಳನ್ನು ಕಂಡು ಬಗೆಬಗೆಯಾಗಿ ವಿಡಂಬಿಸುವುದರ ಮೂಲಕ ಸನ್ಮಾರ್ಗದಲ್ಲಿ ಕೊಂಡೊಯ್ಯಲು ಪ್ರಯತ್ನಿಸಿದ್ದಾರೆ.

ಹನ್ನೆರಡನೇ ಶತಮಾನದಲ್ಲಿ ಸಾಮಾನ್ಯ ಜನ ಕಲ್ಲು, ಮಣ್ಣು, ಮಡಕೆ, ಮೊರ, ಒನಕೆ, ಒರಳು, ಗಿಡ, ಹೊಳೆ, ಹಳ್ಳ, ನಾಯಿ ಮುಂತಾದವು ದೇವರೆಂದು ತಿಳಿದು ಅವಕ್ಕೆ ಪೂಜೆ ಸಲ್ಲಿಸುತ್ತಿದ್ದುದರ ಜೊತೆಗೆ ಅವರು ಬಹುದೇವೋಪಾಸನೆಯಲ್ಲೂ ತೊಡಗಿದ್ದುಂಟು. ಶಿವ, ಬ್ರಹ್ಮ, ಜಿನ, ಕಾಳಮ್ಮ, ಮಾರಮ್ಮ, ಬೀರಮ್ಮ, ದುರುಗಮ್ಮ, ಪೋಚಮ್ಮ, ಮಾರಿ, ಮಸಣಿ ಮುಂತಾದ ದೇವಾನುದೇವತೆಗಳನ್ನು ಸೃಷ್ಟಿಸಿಕೊಂಡು ಬಹುದೇವೋಪಾಸನೆಯಲ್ಲಿ ಅವರು ತೊಡಗಿದ್ದರು. ತಮ್ಮ ಇಷ್ಟಾರ್ಥ ಸಿದ್ದಿಗಾಗಿ ಬಗೆಬಗೆಯ ಹರಕೆಗಳನ್ನು ಹೊತ್ತು ಸಲ್ಲಿಸುತ್ತಿದ್ದುದೂ ಉಂಟು. ತಲೆಗೂದಲು ಕೊಡುವುದು, ಕುರಿ, ಕೋಣಗಳನ್ನು ಬಲಿ ಕೊಡುವುದು ನಿರಂತರವಾಗಿ ನಡೆದಿತ್ತು. ಹೀಗೆ ಪ್ರಾಣಿಬಲಿ ಕೊಡುವುದರಿಂದ ದೇವತೆಯು ಸಂಪ್ರೀತಳಾಗುವಳೆಂದು ಅವರು ತಿಳಿದಿದ್ದರು. ಇದೆಲ್ಲವೂ ಒಂದು ಬಗೆ ಅಜ್ಞಾನ. ಕರ್ಮಠರು, ಜಾತ್ಯಂಧರು, ಸ್ವಾರ್ಥಸಾಧಕರು ಹುಟ್ಟುಹಾಕಿದ ಹಿತಮತ್ತುಗಳೆಂದು ಬಸವಣ್ಣನವರು ತಮ್ಮ ವಚನಗಳ ಮೂಲಕ ಲೋಕಕ್ಕೆ ಸಾರಿದರು. ಅದರಲ್ಲೂ ಇಂಥ ಅನಾಚಾರಗಳನ್ನು,

ಅವೈಜ್ಞಾನಿಕವಾದ ಕ್ರಿಯೆಗಳನ್ನು ಬಸವಣ್ಣನವರು ತಮ್ಮ ವಿಡಂಬನಾತ್ಮಕ ವಚನಗಳ ಮೂಲಕ ತಿಳಿಹೇಳಿದುದು ತುಂಬಾ ಪರಿಣಾಮಕಾರಿಯಾದುದಾಗಿದೆ.

'ತನ್ನ ಬಿಟ್ಟು ದೇವರಿಲ್ಲ, ಮಣ್ಣ ಬಿಟ್ಟು ಮಡಕೆಯಿಲ್ಲ' ಎನ್ನುವ ಬಸವಣ್ಣನವರು ಹಾಗೂ ಅವರ ಸಮಕಾಲೀನ ಶರಣರು ಬಹುದೈವೋಪಾಸನೆಯನ್ನು ಖಂಡಿಸುತ್ತ, ಏಕದೈವೋಪಾಸನೆಯನ್ನು ಎತ್ತಿ ಹಿಡಿದರು. 'ಲೋಕದ ಜನತೆಯ ಇಬ್ಬಂದಿತನ, ಸೋಗಲಾಡಿತನ ಹಾಗೂ ಸಮಯಸಾಧಕತನಗಳನ್ನು ನಿರ್ಭಯವಾಗಿ ಬಸವಣ್ಣನವರು ತಮ್ಮ ಕೆಲ ವಚನಗಳಲ್ಲಿ ಹೊರ ಹಾಕಿರುವುದುಂಟು. ಅಂಥ ವಚನವೊಂದನ್ನಿಲ್ಲಿ ನೋಡೋಣ,

'ಭಕ್ತರ ಕಂಡಡೆ ಬೋಳಪ್ಪಿರಯ್ಯಾ
ಸವಣರ ಕಂಡಡೆ ಬತ್ತಲೆಯಪ್ಪಿರಯ್ಯಾ
ಹಾರುವರ ಕಂಡಡೆ ಹರಿನಾಮವೆಂಬಿರಯ್ಯಾ
ಅವರವರ ಕಂಡಡೆ ಅವರವರಂತೆ
ಸೂಳೆಗೆ ಹುಟ್ಟಿದವರ ತೋರದಿರಯ್ಯಾ
ಕೂಡಲಸಂಗಯ್ಯನ ಪೂಜಿಸಿ, ಅನ್ಯದೈವಂಗಳಿಗೆರಗಿ
ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ' (ಸ.ವ.ಸಂ:೧ ವ.ಸಂ, ೧೦೩)

ಇಲ್ಲಿ ಬಹುದೈವಗಳ ಆರಾಧನೆಯಲ್ಲಿ ತೊಡಗಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಡೋಂಗಿ ಭಕ್ತರನ್ನು ಬಸವಣ್ಣನವರು ತುಂಬ ಕಟುವಾಗಿ ವಿಡಂಬಿಸಿದುದನ್ನು ಕಾಣುವೆವು. ಅಂದಿನ ಸಮಾಜದಲ್ಲಿ ಇಂಥ ತೋರಿಕೆಯ ಬಹುದೈವಗಳ ಆರಾಧನೆಯಲ್ಲಿ ತೊಡಗಿದ ಭಕ್ತರಿದ್ದು, ಅಂಥವರ ನಡಾವಳಿ ಬಸವಣ್ಣನವರಿಗೆ ಸಿಟ್ಟು ತರಿಸಿದೆ. ಎರಡು ನಾವೆಗಳಲ್ಲಿ ಒಂದೊಂದು ಕಾಲನ್ನಿಟ್ಟರೆ ನಾವು ನಡು ನೀರಲ್ಲೆ ಬಿದ್ದು ಸಾಯುವೆವು ಇದರಂತೆಯೇ ಬಹುದೈವಗಳನ್ನು ಆರಾಧಿಸುತ್ತ ಹೋಗುವುದು ಸರಿಯಲ್ಲವೆಂದು ಅವರು ವಿಡಂಬಿಸಿದುದುಂಟು. ಮುಂಜಾನೆ ಒಂದು ದೇವರು, ಮಧ್ಯಾಹ್ನ ಮತ್ತೊಂದು ದೇವರು, ಸಂಜೆ ಮಗದೊಂದು ದೇವರನ್ನು ಪೂಜಿಸುವ, ಆ ದೇವರುಗಳಿಗೆ ವಿಧವಿಧದ ಹರಕೆಗಳನ್ನು ಹೊತ್ತು ಸಲ್ಲಿಸುವ ಜನರು ಅಂದೂ ಇದ್ದರು. ಈ ಪೂಜಾ ಪದ್ಧತಿ, ಬಹುದೈವೋಪಾಸನಾ ಪದ್ಧತಿ ಅಂದು ಒಂದು ವಿಧದ ವ್ಯವಹಾರವೇ ಆಗಿದ್ದಂತೆ ತೋರುತ್ತದೆ. ಇಂಥ ವ್ಯವಹಾರದಲ್ಲಿ ಸಿಲುಕಿ ಲೋಕದ ಜನ ಬಳಲುತ್ತಿದ್ದುದನ್ನು ಕಣ್ಣಾರೆ ಕಂಡ ಬಸವಣ್ಣನವರು ತಮ್ಮ ವಚನಗಳಲ್ಲಿ ಇಂಥ ಅನಿಷ್ಟ ಪದ್ಧತಿಯನ್ನು ವಿಡಂಬಿಸಿದರು. ಅವರು ತಮ್ಮ ಮತ್ತೊಂದು ವಚನದಲ್ಲಿ, ಬಹುದೈವಗಳ ಆರಾಧನೆಯಲ್ಲಿ ತೊಡಗಿದ ಲೋಕದ ಜನರ ನಡೆವಳಿಗಳು, 'ಧಾರ್ಮಿಕ ಆಚರಣೆಗಳಿಗೆ ಒಳಗಾಗುವುದನ್ನು ಕಂಡು ಹೇಳಿದುದನ್ನು ಇಲ್ಲಿ ನೋಡಬಹುದು.

'ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದ ಕಂಡೆ
ಜಿನನ ಪೂಜಿಸಿ ಬತ್ತಲೆಯಿಪ್ಪುದ ಕಂಡೆ
ಮೈಲಾರನ ಪೂಜಿಸಿ ನಾಯಾಗಿ ಬಗಳುದ ಕಂಡೆ
ನಮ್ಮ ಕೂಡಲಸಂಗನ ಪೂಜಿಸಿ ದೇವಾ
ಭಕ್ತರೆನಿಸಿಕೊಂಬುದ ಕಂಡೆ' (ಸ.ವ.ಸಂ:೧ ವ.ಸಂ, ೫೬೯)

ವಿಧ ವಿಧ ಧರ್ಮಗಳ ಆಚರಣೆಗಳನ್ನು ಕಂಡು ಬಸವಣ್ಣನವರಿಗೆ ನಗೆ ತರಿಸಿದೆ, ಹಾಸ್ಯ ಬರಿಸಿದೆ. ಇದೆಲ್ಲಕ್ಕೂ ಮಿಗಿಲಾಗಿ ಲೋಕದ ಜನತೆಯಲ್ಲಿರುವ ದೈವ-ದೇವರುಗಳ ಬಗೆಗಿನ ಭ್ರಮೆ, ಅಜ್ಞಾನ, ಅಂಧಶ್ರದ್ಧೆ ಅವರಿಗೆ ಸಿಟ್ಟು ತರಿಸಿದೆ. ಇಂಥ ಅಜ್ಞಾನ ಪ್ರೇರಿತ ಕ್ರೂರ, ಹಿಂಸಾತ್ಮಕ ಆಚರಣೆಗಳಿಂದಾಗಲಿ ಪ್ರಯೋಜನವೂ ಇಲ್ಲವೆಂಬುದನ್ನು ಮೇಲಿನ ವಚನದಲ್ಲಿ ನಾವು ಕಾಣುತ್ತೇವೆ. ಒಟ್ಟಾರೆ ದೇವರು-ಧರ್ಮದ ಬಗೆಗಿನ ಕಲ್ಪನೆ 'ಬಸವಣ್ಣನವರ ದೃಷ್ಟಿಯಲ್ಲಿ ತುಂಬ ವಿನೂತನವಾದುದೂ, ವೈಚಾರಿಕವಾದುದೂ ಆಗಿದೆ. ಬಸವಣ್ಣನವರು ಅಂದಿನ ಸಮಾಜದಲ್ಲಿ ಸಾಮಾನ್ಯಜನ ಹಲವಾರು ದೇವರು-ದೈವಗಳಲ್ಲಿ ನಂಬಿಕೆಯಿಟ್ಟು ಕ್ರೂರ ಧರ್ಮಾಚರಣೆಗಳಲ್ಲಿ ತೊಡಗಿಕೊಂಡುದು ಒಂದು ಬಗೆಯ ಅಜ್ಞಾನವೇ ಆಗಿದೆಯೆಂಬುದನ್ನರಿತರು.' ಅವರ ಇಂಥ ಅಜ್ಞಾನ ಪೂರಿತ ಚಟುವಟಿಕೆಗಳನ್ನು ಬಸವಣ್ಣನವರು ತಮ್ಮ ವಚನಗಳಲ್ಲಿ ವಡಂಬಿಸುವುದರ ಮೂಲಕ ಅವರನ್ನು ಸನ್ಮಾರ್ಗದಲ್ಲಿ ಮುನ್ನಡೆಸುವ ಪ್ರಯತ್ನ ಮಾಡಿದುದು ತುಂಬ ಸ್ವಾಗತಾರ್ಹವಾಗಿದೆ.

೩.೪. ಅಕ್ಕಮಹಾದೇವಿಯ ವಚನಗಳು

ಕನ್ನಡದ ಉಪನಿಷತ್ತುಗಳೆಂದು ಪ್ರಖ್ಯಾತವಾದ, ಕನ್ನಡಕ್ಕೆ ಕೋಡು ಮೂಡಿಸಿದ ವಚನಸಾಹಿತ್ಯ ವೀರಶೈವ ಇತಿಹಾಸದಲ್ಲಿಯೇ ಅದ್ವಿತೀಯ ಸ್ಥಾನ ಪಡೆದುಕೊಂಡಿದೆ. ತಿಳಿಯಾದ ಜನಪರ ಭಾಷೆಯಲ್ಲಿ ಭಾವಗೀತಾತ್ಮಕವಾದ ರೀತಿಯಲ್ಲಿ, ಅನುಪಮವಾದ ವಿಚಾರಗಳನ್ನು ವಚನಕಾರರು ಹೇಳಿದ್ದಾರೆ. ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ರಂಗದಲ್ಲಿ ಸಮಾನತೆಯನ್ನು ಸಾರುವುದೇ ವಚನಕಾರರ ಧ್ಯೇಯವಾಗಿತ್ತು. ಜಾತ್ಯಾತೀತ ಮತ್ತು ಲಿಂಗಾತೀತವಾದ ಮನೋಧರ್ಮದ ಶರಣರು ಸಮಾಜದಲ್ಲಿ ಈ ಕಾರಣಕ್ಕಾಗಿ ತುಳಿಯಲ್ಪಟ್ಟ ಜೀವಿಗಳ ನೋವಿಗೆ ಮಿಡಿದು, ತರತಮ ಭಾವವನ್ನು ಸಮೂಲವಾಗಿ ಕಿತ್ತೆಸೆಯುವ ಪ್ರಯತ್ನ ಮಾಡಿದರು.

ಶ್ರೇಣಿಕೃತ ಮತ್ತು ಲಿಂಗಾಧಾರಿತ ಸಮಾಜದಲ್ಲಿ ಸ್ತ್ರೀಯರಿಗೆ ಯಾವ ಸ್ಥಾನ-ಮಾನಗಳಿಲ್ಲದಿರುವುದು, ಭಾರತೀಯ ಸಂಸ್ಕೃತಿಯ ಒಂದು ಮುಖ. ವಿಶ್ವದಾದ್ಯಂತವೂ ಸ್ತ್ರೀ ಎರಡನೆಯ ದರ್ಜೆಯ ಪ್ರಜೆಯಾಗಿ ಪರಿಗಣಿಸಲ್ಪಟ್ಟಿದ್ದಾಳೆ. ಸಾಮಾಜಿಕವಾಗಿ ಅಸ್ತಿತ್ವವಿಲ್ಲದ ಮಹಿಳೆ ಧಾರ್ಮಿಕ ಸಂಸ್ಕಾರ, ಸೌಲಭ್ಯಗಳಿಂದಲೂ ವಂಚಿತಳಾಗಿದ್ದಾಳೆ. ಇದಕ್ಕೆ ಕಾರಣವೆಂದರೆ ಸ್ತ್ರೀ ಸ್ವಭಾವತಃ ಚಂಚಲೆ, ಯಾವನೋ ಸನ್ಯಾಸಿ ಹೇಳಿದ ಮಾಯೆ, ಇಲ್ಲ ಕವಿ ವರ್ಣಿಸಿದ ಸುಂದರ ಮೋಹಕ ಬೊಂಬೆ,

ಎಲ್ಲದಕ್ಕೂ ಮಿಗಿಲಾಗಿ ಆಕೆ ಅಬಲೆ ಎಂದಾಡಿ ಅವಳನ್ನು ರಸಾತಳಕ್ಕೆ ತುಳಿಯುವ ಕಾರ್ಯ ಅವ್ಯಾಹತವಾಗಿ ನಡೆದಿದೆ. ಈ ವೈಪರೀತ್ಯಗಳನ್ನು ಕಂಡು ಶರಣರು 'ಹೆಣ್ಣು, ಹೊನ್ನು, ಮಣ್ಣು ಮಾಯೆಯಲ್ಲ ಮಾಯೆಂಬುದು ತನ್ನಲ್ಲಿ ತಾನೇ ಇರುವ ವಸ್ತುವಲ್ಲ, ಅದು ನಮ್ಮ ಮನೋದೌರ್ಬಲ್ಯದ ಪ್ರತಿರೂಪ'. ವಸ್ತುವಿನಲ್ಲಿ ದೋಷವನ್ನು ಹುಡುಕಿ ಆರೋಪಿಸಿದ, ಪೂರ್ವಾಗ್ರಹ ಪೀಡಿತರಾದ ಪುರುಷರ ದೃಷ್ಟಿಯಲ್ಲಿಯೇ ದೋಷವಿದೆ ಎಂಬುದನ್ನು ವಚನಕಾರರು ಎತ್ತಿತೋರಿಸಿದ್ದಾರೆ. ಶಿವಶರಣರಲ್ಲಿಯೇ ಶ್ರೇಷ್ಠಳೆನಿಸಿಕೊಂಡ ವೀರ ವೀರಾಗಿಣಿ ಅಕ್ಕಮಹಾದೇವಿ ಶಾಸ್ತ್ರೀಯ ದೃಷ್ಟಿಯಿಂದ ಮನೋವ್ಯಾಪಾರದ ಬಗೆಗೆ ಹೀಗೆ ಹೇಳಿದ್ದಾಳೆ.

> **'ಪುರುಷರಿಗೆ ಸ್ತ್ರೀ ಮಾಯೆಯಾದರೆ, ಸ್ತ್ರೀಗೆ ಪುರುಷ**
> **ಮಾಯೆಯೆ! ಸಾಧಕರು ತಮ್ಮ ಪುರುಷತ್ವ ಸ್ತ್ರೀತ್ವಗಳ**
> **ಎಲ್ಲೆಯನ್ನು ದಾಟನಿಂತ ಕಾರಣ ಮಾಯೆಯ ಕಾಟವಿಲ್ಲ'** (ವ.ಶಾ.ಸಾ.ವ. ೨೦೬)

ಎಂದಿದ್ದಾಳೆ ಪುರುಷನ ಕಡಿವಾಣವಿಲ್ಲ ಕಾಮ ಗರಿಗೆದರಿ ಕುಣಿದರೂ, ತನ್ನ ತೋಳ್ಬಲಗಳಿಂದ ಅದೆಷ್ಟೋ ತರುಣಿಯರ ಬಾಳು ಹಾಳು ಮಾಡಿದ ಪುರುಷರ ಪಟ್ಟಿ ಮಾಡಿದರೆ ಅದೊಂದು ದೊಡ್ಡ ಇತಿಹಾಸವೇ ಆದೀತು. ಅಷ್ಟೇ ಏಕೆ ಜಗತ್ತಿನ ಮಹಾಕಾವ್ಯಗಳು ಮತ್ತು ಐತಿಹಾಸಿಕ ಘಟನೆಗಳು ಹೆಣ್ಣಿಗಾಗಿ ಸತ್ತ ಪುರುಷರ ಚರಿತ್ರಗಳೇ ಆಗಿವೆ. ಅಂತಹ ಮಹಿಳೆಯ ಚರಿತ್ರೆ ಮಾತ್ರ ಒಂದೂ ಲಿಖಿತವಾಗಿಲ್ಲ. ಪುರುಷವರ್ಗ ಮಹಿಳೆಯರನ್ನು ಮಾಯೆಯೆಂದು ಆರೋಪಿಸುವುದು ಶುದ್ಧ ಮೂರ್ಖತನವೆನ್ನಬಹುದು.

ಸ್ತ್ರೀ ಆರ್ಥಿಕ ಸ್ವಾತಂತ್ರ್ಯವಿಲ್ಲದ, ಅಭಿಪ್ರಾಯ ಸ್ವಾತಂತ್ರ್ಯವಿಲ್ಲದ ಮೂಗರಂತೆ ಮಕ್ಕಳನ್ನು ಹೆರುವ ಯಂತ್ರವಾಗಿ ಸವೆಯುತ್ತ ಬಂದಿದ್ದಾಳೆ. ವೇದಕಾಲದಲ್ಲಿ ಸ್ತ್ರೀಯರಿಗೆ ಉತ್ತಮ ಸ್ಥಾನಮಾನಗಳಿದ್ದವು ಎಂದು ತಿಳಿದಾಗ ಸಂತೋಷವಾಗುತ್ತದೆ. ಧಾರ್ಮಿಕ ಕ್ಷೇತ್ರದಲ್ಲಿ ಹೆಸರು ಮಾಡಿದ ಗಾರ್ಗಿ, ಮೈತ್ರೇಯ, ಲೋಪಾಮುದ್ರಾರಂಥವರು ಎಷ್ಟು ಜನ ಇದ್ದರು ಎಂಬುದನ್ನು ಆಲೋಚಿಸಬೇಕಾಗಿದೆ. ಇಂದಿನ ರಾಜಕೀಯ ಕ್ಷೇತ್ರದಲ್ಲಿ ಸ್ತ್ರೀಯರಿಗೆ ಸಮಾನ ಅವಕಾಶಗಳಿಲ್ಲವೆಂಬುದು ಎಲ್ಲರಿಗೂ ವೇದ್ಯವಾದ ವಿಷಯ. ಆದರೂ ಇಂದಿರಾ ಗಾಂಧಿ ಹದಿನೆಂಟು ವರ್ಷ ರಾಜ್ಯವಾಳಿದರು ಎಂದಾಕ್ಷಣ ಎಲ್ಲ ಮಹಿಳೆಯರಿಗೆ ಅವಕಾಶ ದೊರೆತಂತಲ್ಲ, ಅದೇ ರೀತಿ ವೇದಕಾಲದಲ್ಲಿ ಧಾರ್ಮಿಕ ಸ್ವಾತಂತ್ರ್ಯದೊಂದಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಕೂಡ ಪಡೆದುಕೊಂಡು ಕೆಲಮಹಿಳೆಯರು ಅದೇ ಕಾಲದ ಸಾಮಾನ್ಯ ಸ್ತ್ರೀಯರಿಗೆ ಸಮಾಜದಲ್ಲಿ ಕೆಲವು ನಿರ್ಬಂಧಗಳಿದ್ದವು. ಸ್ತ್ರೀ ಗೃಹ ಸಾಮ್ರಾಜ್ಞಿಯಾಗಿದ್ದಳು.

ಆದರೆ ಸಮಾಜ ಸ್ತ್ರೀಯನ್ನು ಎಷ್ಟರ ಮಟ್ಟಿಗೆ ತುಳಿದಿದೆ ಎಂಬುದನ್ನು ಇತಿಹಾಸ ಮರೆಮಾಚಲು ಸಾಧ್ಯವಿಲ್ಲ. ಖಗೋಳಶಾಸ್ತ್ರದ ಬಗ್ಗೆ ಪಾಂಡಿತ್ಯ ಪಡೆದುಕೊಂಡ ವರಾಹ ಮತ್ತು ಅವನ ಮಗ ಮಿಹಿರನಿಗೆ ವಿಕ್ರಮಾದಿತ್ಯ ಖಗೋಳಶಾಸ್ತ್ರದ ಬಗ್ಗೆ ಒಂದು ಪ್ರಶ್ನೆ ಕೇಳಿದಾಗ ಉತ್ತರ ಹೊಳೆಯದ

ವರಾಹ ಅವಧಿ ಪಡೆದು ಮನಗೆ ಬಂದು, ಚಿಂತಾ ಕ್ರಾಂತನಾಗಿ ಕುಳಿತಾಗ ಸೊಸೆ, ಚಿಂತೆಗೆ ಕಾರಣ ಕೇಳುವುದರೊಂದಿಗೆ ಉತ್ತರವನ್ನೂ ಕೂಡ ತಕ್ಷಣ ಹೇಳುತ್ತಾಳೆ. ವರಾಹ ರಾಜನಲ್ಲಿ ಹೋಗಿ ಉತ್ತರ ಹೇಳುತ್ತಾನೆ. ಸಂತೋಷಗೊಂಡ ರಾಜ ಉತ್ತರಿಸಿದ ಬಗೆಯನ್ನು ಕೇಳಿದಾಗ, ಉತ್ತರ ತನ್ನ ಆಸ್ಥಾನದ ನವರತ್ನಗಳಲ್ಲಿ ದಶರತ್ನ ಸ್ಥಾನಕೊಟ್ಟು ಗೌರವಿಸುವುದಾಗಿ ತಿಳಿಸಿ, ಸೊಸೆಯನ್ನು ಕರೆತರಲು ಹೇಳಿದ. ಮಾವ ವರಾಹನಿಗೆ ಸೊಸೆ ಎಷ್ಟೇ ಪಂಡಿತೆಯಾದರೂ ಅವಳು ರಾಜಾಸ್ಥಾನಕ್ಕೆ ಹೋಗುವುದು ಮನೆತನಕ್ಕೆ ಅಗೌರವವೆಂದು ತಿಳಿದು ಕಾರಣವಾದ ಉತ್ತರ ಹೇಳಿದ ನಾಲಿಗೆಯನ್ನೇ ಕತ್ತರಿಸು ಎಂದು ಮಗ ಮಿಹಿರನಿಗೆ ಹೇಳಿದನಂತೆ, ಹಾಗೆ ನಾಲಿಗೆ ಕತ್ತರಿಸಲು ಅವಳು ರಕ್ತಕಾರಿ ಸತ್ತಳಂತೆ. ಇದು ನಮ್ಮ ಸಮಾಜ ಹೆಣ್ಣಿನ ಬೌದ್ಧಿಕತೆಯನ್ನು ಗೌರವಿಸಿದ ರೀತಿ.

ಅದರಂತೆ 'ಸ್ತ್ರೀ' ಮುಟ್ಟಾಗುವುದೇ ಒಂದು ಅಪವಿತ್ರವೆಂದು ಬಗೆದು ವೈದಿಕ ಧರ್ಮಪರಾಯಣರು ತಾವು ಮುಟ್ಟು ಗಟ್ಟಿಯಾಗಿಯೇ ಹುಟ್ಟಿದವರು ಎಂಬುದನ್ನೇ ಮರೆತು ಇಂಥ ಕಟ್ಟುಪಾಡುಗಳನ್ನು ಹೇರಿ, ಖೊಟ್ಟಿ ಸಮಾಜವನ್ನು ನಿರ್ಮಿಸಿದ್ದು ತಿಳಿದು ಪುರುಷರು ನಾಚಬೇಕಾದ ಸಂಗತಿ. ಇಂತಹ ಸಾಮಾಜಿಕ ವೈಪರಿತ್ಯಗಳ ಮಧ್ಯೆ ಉಸಿರು ಗಟ್ಟಿದ ಸ್ತ್ರೀಯರಿಗೆ ಕೊಂಚ ಜೀವ ಬಂದದ್ದು ೧೨ನೆಯ ಶತಮಾನದ ಶಿವಶರಣರ ಕಾಲದಲ್ಲಿ. 'ಮಾಯೆ' ಎಂದು ಮೂದಲಿಕೆಗೆ ಗುರಿಯಾಗಿದ್ದ ಸ್ತ್ರೀ 'ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ' ಎಂದು ಅವಳನ್ನು ದೈವತ್ವಕ್ಕೆ ಏರಿಸಿದ ಕೀರ್ತಿ ವಚನಕಾರರಿಗೆ ಸಲ್ಲಬೇಕು. ಅನುಭವ ಮಂಟಪದಲ್ಲಿ ೬೦ ಜನ ವಚನಕಾರರಿದ್ದಾರೆ, ೩೦ ಜನ ವಚನಕಾರ್ತಿಯರು ಇದ್ದರೆಂಬ ಸಂಗತಿ ಸಮಾನತೆಯನ್ನು ಎತ್ತಿ ತೋರಿಸುತ್ತದೆ.

ವಚನಕಾರ್ತಿಯರಲ್ಲಿ ಅಗ್ರಸ್ಥಾನದಲ್ಲಿರುವ ಅಕ್ಕಮಹಾದೇವಿ ಮೂಲತಃ ತಾತ್ವಿಕ ವಲಯದ ಓರ್ವ ಸಾಧಕಿ. ಅವಳ ತಾತ್ವಿಕ ಜೀವನಕ್ಕೆ ಶರಣ ಸಂಸ್ಕೃತಿಯ ಅವಲಂಬನವಿದೆ. ದೈವವನ್ನೇ ತನ್ನ ಗಂಡನನ್ನಾಗಿ ಸ್ವೀಕರಿಸಿ, ಲೋಕದ ಹಂಗ ತೊರೆದು ದಿಗಂಬರೆಯಾಗಿ ತನ್ನ ಬದುಕನ್ನೇ 'ದಿವ್ಯ'ಕ್ಕೆ ಒಡ್ಡಿಕೊಂಡು ಅಂತರಂಗ ಮತ್ತು ಬಹಿರಂಗ ಹೋರಾಟಗಳೆರಡರಲ್ಲಿಯೂ ನಿರತಳಾಗಿ 'ಶರಣಸತಿ ಲಿಂಗಪತಿ' ಭಾವದ ಮೂರ್ತರೂಪಾಗಿ ಆಧ್ಯಾತ್ಮ ಸಾಧನೆಯಲ್ಲಿ ತೊಡಗಿಕೊಂಡು ಅಕ್ಕಮಹಾದೇವಿಯ ವಚನಗಳು ತನ್ನ ಭಾವನೆಗಳನ್ನು, ತಳಮಳ ತಲ್ಲಣಗಳನ್ನು, ಸಂತಸ ಮತ್ತು ಅಳಲನ್ನು ಅಭಿವ್ಯಕ್ತಿಸಲು ಆ ಕಾಲದಲ್ಲಿ ಎಲ್ಲ ವಚನಕಾರರಿಗೂ ಇದ್ದಂತೆ ಒಂದು ಸಾಧನವಾಗಿದೆ. ಆದರೆ ಅಕ್ಕನದು ಕವಿ ಹೃದಯ; ಅಕ್ಕನ ವ್ಯಕ್ತಿತ್ವಕ್ಕೂ ಕವಿತ್ವಕ್ಕೂ ಅವಿನಾಭಾವ ಸಂಬಂಧವಿದೆ. ಚೆನ್ನನ ಮೇಲಿನ ಪ್ರೀತಿ, ಒಲವು ಅಕ್ಕನ ವ್ಯಕ್ತಿತ್ವದ ಪರಮಗುಣ, ಪ್ರೀತಿ, ಪ್ರೇಮಗಳ ಕಾವ್ಯತ್ವವನ್ನು ಉದ್ದೀಪಿಸುವ ಅಂಶಗಳು. ಅದು ಪರಮಾತ್ಮನ ಮೇಲಿನ ಪ್ರೀತಿ ಇರಬಹುದು. ಸಹಮಾನವರ ಬಗೆಗಿನ ಪ್ರೀತಿಯಿರಬಹುದು. ಈ ಹಿನ್ನಲೆಯಲ್ಲಿಯೇ ಅಕ್ಕನ ವಚನ ಸಾಹಿತ್ಯ, ಸಾಹಿತ್ಯಕ ಗುಣಗಳಿಂದ ದೀಪ್ತಗೊಂಡಿದೆ. ಅನುಭವದ ತಾಜಾತನದ ಆ ಸಾಹಿತ್ಯಕ ಗುಣಗಳನ್ನು ಮತ್ತಷ್ಟೂ ಶೋಭಾಯಮಾನಗೊಳಿಸಿವೆ. ಬಸವಣ್ಣ, ಪ್ರಭುದೇವ, ಅಜಗಣ್ಣ ಆ ಕಾಲದ ಮೇರು ವ್ಯಕ್ತಿತ್ವದ ವಚನಕಾರರು, ಬಸವಣ್ಣ ಭಕ್ತಿಗೆ,

ಪ್ರಭುದೇವ ವೈರಾಗ್ಯಕ್ಕೆ, ಅಜಗಣ್ಣ ಗುಪ್ತಭಕ್ತನಾಗಿ ಆಧ್ಯಾತ್ಮಿಕ ಔನ್ನತ್ಯಕ್ಕೆ ಹೆಸರಾದವರು ವಚನ ಸಾಹಿತ್ಯಕ್ಕೆ ಅನನ್ಯ ಕೊಡುಗೆ ನೀಡಿದ ಬಸವಣ್ಣ, ಅಲ್ಲಮರೊಂದಿಗೆ ಹೋಲಿಸಿ ಚೆನ್ನಬಸವಣ್ಣ ಅಕ್ಕನ ವಚನಗಳ ಔನ್ನತ್ಯವನ್ನು ಎತ್ತಿ ಹಿಡಿದಿರುವುದು ಪ್ರಾಸಂಗಿಕವಲ್ಲ, ವಾಸ್ತವವಾದದ್ದು ಎಂಬುದು ಆಕೆಯ ವಚನಗಳ ಅಧ್ಯಯನದಿಂದ ಖಚಿತವಾಗುತ್ತದೆ.

ಅಕ್ಕಮಹಾದೇವಿಯ ದೃಷ್ಟಿಯಲ್ಲಿ ಸಮಾನತೆಯು ಅನುಭಾವದಿಂದ ಬರುತ್ತದೆ. ಇದಕ್ಕೆ ಅವಳ ವಚನವೇ ನಿದರ್ಶನವಾಗಿದೆ.

'ಭಕ್ತನೆ ಕುಲಜನೆಂದು ಮಾತಿನಂತೆ ಹೋಗದು.
ಭಕ್ತನೆ ಕುಲಜನೆಂದು ನುಡಿಯಲ್ಲಿಯು ಸಲ್ಲದು.
ಭಕ್ತನೆ ಕುಲಜನೆಂಬುದುಪಾತಕವಯ್ಯ,
ಅವಯವವೆ ಮುರ್ತಿಯಾಗಿ
ಸರ್ವಾಂಗಲಿಂಗಕ್ಕೆ ಅನುಭಾವವಿಲ್ಲಾಗಿ
ಎನ್ನ ದೇವ ಚೆನ್ನಮಲ್ಲಿಕಾರ್ಜುನನಲಿ
ಯಥಾ ತಥಾ ಎಂಬ ವಚನವನರಿಯಿರೆ' (ಅ.ವ.ಸಂ. ೧, ಪು. ೪೦. ವ. ೮)

ಅನುಭಾವದ ಅನುಭೂತಿಯಾದರೆ ವ್ಯಕ್ತಿ ಪರಿಶುದ್ಧನಾಗುತ್ತಾನೆ. ಜಾತಿ–ಮತ ಭೇದವಿಲ್ಲದ ಭಕ್ತನಾಗುತ್ತಾನೆ, ಕುಲಜನಾಗುತ್ತಾನೆ. ಅವನ ಸರ್ವಾಂಗವೆಲ್ಲ ಅನುಭಾವದಿಂದ ಲಿಂಗಮಯವಾಗುತ್ತದೆ. ಅದನ್ನು ನಾವು ಆದಷ್ಟು ಬೇಗ ಅರಿಯಬೇಕು. ಚೆನ್ನಮಲ್ಲಿಕಾರ್ಜುನನಲ್ಲಿ ಬೆರೆತು ಬೇರಿಲ್ಲದಂತಾಗುವುದೇ ಅನುಭಾವ. ಚೆನ್ನಮಲ್ಲಿಕಾರ್ಜುನ ಬೇರೆ ತಾನು ಬೇರೆ ಎಂಬ ಭಾವ ಅಲ್ಲಿ ಬರಬಾರದು. ಹಾಲಿನಲ್ಲಿ ಸಕ್ಕರೆ ಬೆರೆತಂತೆ ಪರಮಾತ್ಮನಲ್ಲಿ ಬೆರೆತು ಏಕಮಯವಾಗುವುದೇ ಅನುಭಾವದ ಪರಮಗಂತವ್ಯವಾಗಿದೆ.

'ಮರಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳು ಸುಡಲಾಯಿತ್ತು.
ಆತ್ಮ ಆತ್ಮ ಮಥನಿಸಿ ಅನುಭಾವ ಹುಟ್ಟಿ
ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು.
ಇಂತಪ್ಪ ಅನುಭಾವರ ಅನುಭಾವವ ತೋರಿ
ಎನ್ನ ಒಡಲನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ' – (ಅ.ವ.ಸಂ.೧. ಪು.೯. ವ.೬.)

ಅಕ್ಕನ ವಚನಗಳಲ್ಲಿ ಮತ್ತೆ ಮತ್ತೆ ಅನುಭಾವದ ವಿಷಯ ಪ್ರಸ್ತಾಪವಾಗುತ್ತದೆ. ನಾವೆಲ್ಲ ಕಾಡುಗಳನ್ನು ನೋಡಿದ್ದೇವೆ, ಕಾಡಿನಲ್ಲಿ ಒಮ್ಮೊಮ್ಮೆ ಆಕಸ್ಮಿಕವಾಗಿ ಕಾಳ್ಗಿಚ್ಚು ಹಬ್ಬುತ್ತದೆ. ಗಾಳಿಯಲ್ಲಿ ಮರಗಳು ಪರಸ್ಪರ ಘರ್ಷಣೆಗೊಂಡು ಬೆಂಕಿ ಉತ್ಪತ್ತಿಯಾಗಿ ಇಡೀ ಕಾಡನ್ನೆಲ್ಲ ವ್ಯಾಪಿಸುತ್ತದೆ. ಬೆಂಕಿ

ಎಲ್ಲಿರುತ್ತದೆ ಎನ್ನುವುದು ಕಣ್ಣಿಗೆ ಕಾಣುವುದಿಲ್ಲ. ಆದರೆ ಭಯಂಕರ ಗಾಳಿ ಬಿಟ್ಟಾಗ ಗಿಡಮರಗಳು ಘರ್ಷಣೆಗೊಳಗಾದಾಗ ತನ್ನಿಂದ ತಾನೇ ಅನುಭಾವವೆಂಬ ದಿವ್ಯರತ್ನ ಉತ್ಪತ್ತಿಯಾಗುತ್ತದೆ. ಅನುಭಾವಿಗಳ ಸಂಗದಿಂದ ಹುಟ್ಟಿದ ಅನುಭಾವವು ನಮ್ಮಲ್ಲಿದ್ದ ಭೌತಿಕ ಆಸೆ-ಆಕಾಂಕ್ಷೆಗಳನ್ನು ನಿಯಂತ್ರಿಸುತ್ತದೆ. ಪರಮಸತ್ಯದ ಮಾರ್ಗವನ್ನು ತೋರಿಸುತ್ತದೆ. ಅಷ್ಟೇ ಅಲ್ಲ ತನುವಿಗಂಟಿಕೊಂಡು ಅನೇಕ ದುರ್ಗುಣಗಳನ್ನು ಹೋಗಲಾಡಿಸುತ್ತದೆ. ಇಂಥ ಅನುಭಾವಿಗಳ ಅನುಭಾವದ ಸಂಗದಲ್ಲಿರಿಸಿ ನಿನ್ನ ಒಡಲಿನಲ್ಲಿ ಸೇರುವ ಕೃಪೆ ತೋರು ಎಂದು ಚೆನ್ನಮಲ್ಲಿಕಾರ್ಜುನನಲ್ಲಿ ಅನನ್ಯಗತಿಕಳಾಗಿ ಅಕ್ಕಮಹಾದೇವಿ ಪ್ರಾರ್ಥಿಸುತ್ತಾಳೆ.

'ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ತನು ಶುದ್ಧವಾಯಿತ್ತು.
ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ಮನ ಶುದ್ಧವಾಯಿತ್ತು.
ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ಪ್ರಾಣ ಶುದ್ಧವಾಯಿತ್ತು.
ಅಯ್ಯಾ, ನಿಮ್ಮ ಅನುಭಾವಿಗಳು
ಎನ್ನ ಒರೆದೊರೆದು ಆಗುಮಾಡಿದ ಕಾರಣ
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮಗಾನು ತೊಡಿಗೆಯಾದೆನು.' -(ಅ.ವ.ಸಂ.೧. ಪು.೧೪. ವ.೮.)

ಅನುಭಾವಿಗಳ ಸಂಗದಿಂದ ಏನು ಫಲ ಎಂಬುದನ್ನು ಮೇಲಿನ ವಚನದಲ್ಲಿ ಅರುಹಿದ್ದಾಳೆ. ಅನುಭಾವಿಗಳ ಸಂಗದಿಂದ ನನ್ನ ದೇಹ ಶುದ್ಧವಾಯಿತು, ಮನಸ್ಸು ಶುದ್ಧವಾಯಿತು, ಪ್ರಾಣ ಶುದ್ಧವಾಯಿತು. ಅಷ್ಟೇ ಅಲ್ಲ ಅನುಭಾವಿಗಳ ಅನುಭಾವದ ಪರಿಣಾಮವಾಗಿ ಚೆನ್ನಮಲ್ಲಿಕಾರ್ಜುನದೇವ ನಿನಗೆ ನಾನು ತೊಡಿಗೆಯಾದೆನು ಎನ್ನುತ್ತಾಳೆ. ಅವಳು ಅನುಭಾವವನ್ನು ವಿಶ್ಲೇಷಿಸುವ, ವ್ಯಾಖ್ಯಾನಿಸುವ ರೀತಿ ಭಾರತೀಯ ದಾರ್ಶನಿಕರಲ್ಲಿಯೇ ವಿನೂತನವಾದುದು. ಮಹಾದೇವಿಯಕ್ಕ ಗಹನವಾದ ತತ್ವಗಳನ್ನು ಸೂಕ್ಷ್ಮವಾದ ಆಧ್ಯಾತ್ಮಿಕ ವಿಷಯಗಳನ್ನು ಸಮಾನತೆಯಿಂದ ಬದುಕುವ ಮಾನವೀಯ ಮೌಲ್ಯವನ್ನು ಸರಳವಾಗಿ ತಿಳಿ ಹೇಳುವಂತೆ ನಮಗೆ ಮತ್ತಾರು ತಿಳಿ ಹೇಳಿರುವುದಿಲ್ಲ. ಜಗತ್ತಿನ ಧಾರ್ಮಿಕ ಪಠ್ಯಗಳನ್ನು ತಿರುವಿಹಾಕಿ. ಅಲ್ಲೆಲ್ಲೂ ಮಹಿಳೆಯರು ಬರೆದ ಮಾತುಗಳಿಲ್ಲ. ಅವೆಲ್ಲ ಪುರುಷವರ್ಗದಿಂದ ಸೃಷ್ಟಿಯಾದ ಸಾಹಿತ್ಯ. ಮಹಿಳೆಗೆ ಯಾವ ಧರ್ಮದಲ್ಲೂ ಅಂಥ ಬಹುದೊಡ್ಡ ಸ್ಥಾನಮಾನ ಕೊಟ್ಟಿಲ್ಲ. ಆದರೆ ಅಕ್ಕನ ವಚನಗಳು ಲಿಂಗಾಯತ ಧರ್ಮೀಯರಿಗೆ ನಿತ್ಯಪರಿಪಾಲಿಸುವ ಸೂತ್ರಗಳಂತಿವೆ. ಒಬ್ಬ ಸಮಾನ್ಯ ಮಹಿಳೆ ಕೂಡ ಹೀಗೆ ಬದುಕಬೇಕೆಂಬುದನ್ನು ಅಕ್ಕ ತುಂಬ ಸುಂದರವಾಗಿ ತನ್ನ ವಚನಗಳಲ್ಲಿ ನಿರೂಪಿಸಿದ್ದಾಳೆ.

ಇಡೀ ವಚನ ಸಾಹಿತ್ಯದಲ್ಲಿ ನೈತಿಕ ನಿಷ್ಠೆ ಪ್ರಾಮಾಣಿಕತೆಗಳು ಸಾಧಕನ ಪ್ರಮುಖ ಲಕ್ಷಣಗಳಾಗಿ ವ್ಯಾಖ್ಯಾನಗೊಂಡಿದ್ದು ತೀವ್ರ ಬಗೆಯ ವಿಮರ್ಶಾತ್ಮಕ ರೀತಿಯಲ್ಲಿ ಅಭಿವ್ಯಕ್ತಿ ಪಡೆದಿವೆ. ಅರಮನೆಯ ಸಿರಿಯನ್ನು ತ್ಯಜಿಸಿ ವಿರಕ್ತಿಯ ಭಕ್ತಿಯನ್ನು ಸಾಧಿಸಿದ ಅಕ್ಕನ ಕೆಳಗಿನ ವಚನ ಮಾದರಿಯಾಗಿದೆ. 'ಚಿನ್ನದ ಸಂಕಲೆಯಾದರೇನು ಬಂಧನವಲ್ಲವೆ? ಮುತ್ತಿನ ಬಲೆಯಾದಡೇನು ತೊಡರಲ್ಲವೆ? ನಚ್ಚುಮಚ್ಚಿನ ಭಕ್ತಿಯಲ್ಲಿ ಸಿಕ್ಕಿಕೊಂಡಿರ್ದರೆ ಭವ ಹಿಂಗೂದೆ ಚೆನ್ನಮಲ್ಲಿಕಾರ್ಜುನಾ' ಅಕ್ಕನ ವೈಚಾರಿಕ ಜ್ಞಾನವನ್ನು ನಿರೂಪಿಸುವ ಈ ವಚನದಲ್ಲಿ ಶರಣನಲ್ಲಿ ಇರಬೇಕಾದ ತೀವ್ರ ನಿಸ್ಪೃಹತೆಯ ಗುಣವನ್ನು ವಿಮರ್ಶಿಸಲಾಗಿದೆ.ನಚ್ಚು ಮೆಚ್ಚಿನ ಭಕ್ತಿಯನ್ನು ಮೀರಿದ ಅನನ್ಯತೆಯ ಅನುಭಾವದ ಸಾಧನೆಗೆ ಮಾರ್ಗ ನಿರೂಪಿಸಿದ ಅಕ್ಕ ಭವದ ಬಿಡುಗಡೆಯನ್ನು ಪಡೆಯುವ ಮಾರ್ಗವನ್ನೂ ಸೂಚಿಸಿದ್ದಾಳೆ.

ಹನ್ನೆರಡನೆಯ ಶತಮಾನದಲ್ಲಿ ಪ್ರಚಲಿತವಿದ್ದ ವೈದಿಕ ಧರ್ಮದ ಯಜ್ಞಯಾಗಾದಿಗಳ ಆಚರಣೆಗಳಲ್ಲಿನ ಪ್ರಾಣಿಬಲಿಯಂತಹ ಮಾನವ ಧರ್ಮ ವಿರೋಧಿ ಅಂಶಗಳನ್ನು ಖಂಡಿಸಿ ಸರಳವಾದ ಕಾಯಕ ದಾಸೋಹ ಪದ್ಧತಿಗಳನ್ನು ವಚನಕಾರರು ಆಚರಣೆಗೆ ತಂದುದು ಮನುಕುಲಕ್ಕೆ ದೊಡ್ಡ ಉಪಕಾರವೆಂದೇ ಹೇಳಬೇಕು. 'ವೇದವನೋದಿದವರ ಮುಂದೆ ಆಳು ಕಂಡಾ ಎಲೆ ಹೋತೆ' ಎಂದು ಹೋತದಂತಹ ಸಾಧುಪ್ರಾಣಿಯ ವಧೆ ಮಾಡುವ ವೈದಿಕ ಪ್ರಾಣಿಬಲಿ ಪದ್ಧತಿಯನ್ನು ಖಂಡಿಸಿ 'ದಯವೇ ಧರ್ಮದ ಮೂಲ ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ' ಎಂದು ಮಾನವ ಅನುಕಂಪದ ಮನೋಧರ್ಮಕ್ಕೆ ಪುಷ್ಟಿ ನೀಡಲಾಯಿತು. 'ಕಲ್ಲನಾಗರ ಕಂಡರೆ ಹಾಲನೆರೆ ಎಂಬರು, ದಿಟದ ನಾಗರ ಕಂಡರೆ ಕೊಲ್ಲು ಕೊಲ್ಲೆಂಬರು' ಎನ್ನುವ ಅತ್ಯಂತ ಮಾನವೀಯ ಅನುಕಂಪವನ್ನು ತೋರಿ ಇಂದಿನ ಪರಿಸರಪ್ರೇಮಿಗಳ ಪರಿಸರ ಸಂರಕ್ಷಣಾ ಕಾಳಜಿಯನ್ನು ಕುರಿತಂತೆ ಅಂದಿನ ಕಾಲಕ್ಕೇ ಬಸವಣ್ಣನವರು ಚಿಂತನೆ ನಡೆಸಿದ್ದರು. ಜೀವಹಿಂಸೆಯನ್ನು ಕುರಿತಂತೆ ಅಕ್ಕನ ವಚನ ಕೆಳಗಿನಂತಿದೆ.

'ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ
ಹಲವು ಪ್ರಾಣಿಯ ಕೊಂದು ನಲಿನಲಿದಾಡುವ,
ತನ್ನ ಮನೆಯಲೊಂದು ಶಿಶು ಸತ್ತಡೆ
ಅದಕ್ಕೆ ಮರಗುವಂತೆ ಅವಕೇಕೆ ಮರುಗ?
ಅಂದೆಂತೆಂದಡೆ
ಸ್ವಾತ್ಮಾನಮಿತರಂ ಚೇತಿ ಭಿನ್ನತಾ ನೈವ ದೃಶ್ಯತಾಂ ।
ಸರ್ವಂ ಚಿಜ್ಜ್ಯೋತಿರೇವೇತಿ ಯಃ ಪಶ್ಯತಿ ಸ ಪಶ್ಯತಿ ॥
ಎಂಬುದಾಗಿ
ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ,

ಇದು ಕಾರಣ, ಚೆನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು

ಜೀವಹಿಂಸೆ ಮಾಡುವ ಮಾದಿಗರನೇನೆಂಬೆನಯ್ಯಾ?' (ವ.ಶಾ.ಸಾ.ವ. ೪೯೪)

ಭಕ್ತನಾದವನು ಜೀವಹಿಂಸೆ ಮಾಡುವುದಾದರೆ ಅವನು ಮಾದಿಗನಿಗಿಂತ ಕೆಳಮಟ್ಟದವನಾಗುತ್ತಾನೆ, ಅಂತಹವನ್ನು ಭಕ್ತನೆಂದು ಪರಿಗಣಿಸಲಾಗುವುದಿಲ್ಲ. ಮಗುವಿನಲ್ಲಿಯೂ, ಮೀನಿನಲ್ಲಿಯೂ ಇರುವ ಜೀವಚೈತನ್ಯ ಒಂದೇ ಆಗಿರುವಾಗ ಅವುಗಳನ್ನು ಭೇದಭಾವದಿಂದ ನೋಡುವುದು ಸರಿಯಲ್ಲವೆಂಬ ನ್ಯಾಯನಿರ್ದುಷ್ಟತೆಯನ್ನು ಅಕ್ಕನ ಚಿಂತನೆಯಲ್ಲಿ ಕಾಣುತ್ತೇವೆ. ವಿಶ್ವದಲ್ಲಿ ಮೊದಲ ಬಾರಿಗೆ ಜೀವಜಂತುಗಳನ್ನು ಕುರಿತು ಅನುಕಂಪದ ಭಾವನೆ ಹಾಗೂ ಅಹಿಂಸಾವಾದವನ್ನು ಮತ್ತು ಸಮಾನತೆಯ, ವೈಚಾರಿಕತೆಯ ಪ್ರಜ್ಞೆಯನ್ನು ವಚನಕಾರರ ಸಮಾಜದಲ್ಲಿ ಅನುಸರಿಸಿದ್ದು ಮಾನವ ಧರ್ಮದ ನೈತಿಕತೆಯ ಪೋಷಕವಾಗಿ ಬಂದಿದೆ.

೩.೫. ಸಿದ್ಧರಾಮನ ವಚನಗಳು

ಕರ್ಮಯೋಗಿ ಸಿದ್ಧರಾಮ ಸ್ಪಷ್ಟವಾದ ಮಾತುಗಳಲ್ಲಿಯೇ ವರ್ಣಾಶ್ರಮ ವ್ಯವಸ್ಥೆಯನ್ನು ವಿರೋಧಿಸಿದ್ದಾನೆ. ಮಾನವತಾವಾದವನ್ನು ಪುರಸ್ಕರಿಸಿದ್ದಾನೆ. 'ಆವ ಯೋನಿಜನಾದಡೇನು? ನೀನೊಲಿದವನೆ ಕುಲಜನಯ್ಯಾ' 'ಕುಲ' ಎನ್ನುವ ಸ್ತರವನ್ನು ಇಟ್ಟುಕೊಳ್ಳುವುದಾದರೆ, ಯಾರು ಕುಲಜ? ಶಿವನಿಗೆ ಪ್ರಿಯನಾದವನೇ ಕುಲಜ. ಜಾತಿವ್ಯವಸ್ಥೆಯಲ್ಲಿ ಮೇಲಿರುವವನಲ್ಲ. ಹುಟ್ಟಿನಿಂದ ಕುಲ ಸ್ಥಾಪಿತವಾಗದು. 'ಜಾತಿ ವಿಜಾತಿಯು ನೀರ್ಗುಡಿಯ ಹೋದರೆ ಸುಡು ಹೋಗೆಂದು ನೂಕಿತ್ತೆ ಆ ಜಲವು ಆ ಜಲದಂತಾಗಬೇಡವೆ ಹಿರಿಯರಾದವರು' ಈ ವಚನದಲ್ಲಿ ವಿವೇಚನೆಯೊಂದಗೆ ನೋವೂ ಸೇರಿಕೊಂಡಿದೆ. 'ಶ್ರೇಷ್ಠಜಾತಿ' ಹೀನಜಾತಿಯವರಿಬ್ಬರು ನೀರು ಕುಡಿಯಲು ಕೆರೆ, ತಟಾಕಗಳಿಗೆ ಹೋದರೆ, ಆ ಜಲಾಶಯವು ಅವರಲ್ಲಿ ಭೇದಮಾಡಿತ್ತೆ? ನಮ್ಮ ಹಿರಿಯರು ಆ ಜಲದಂತೆ ಸಮಾನತೆಯ ಪ್ರತಿನಿಧಿಗಳಾಗಬಾರದೆ? ಇಲ್ಲದಿದ್ದರೆ ಅವರನ್ನು ಹಿರಿಯರೆನ್ನುವುದು ಹೇಗೆ? ಎಂಬ ನೋವಿದೆ. 'ಮುನ್ನ ಮಾಡಿದ್ದೇ ಮಾಡಿದ್ದು ಹೋಮವನಿನ್ನು ಮಾಡಿದಡೆ ತಲೆದಂಡ ಕಪಿಲಸಿದ್ಧ ಮಲ್ಲಿಕಾರ್ಜುನಾ!' ಹೋಮ ಹವನ ಯಜ್ಞಯಾಗಾದಿಗಳು ವೈದಿಕ ವಿಧಿಗಳು. ಹಿಂಸಾಮೂಲ ಹಾಗೂ ಅರ್ಥಹೀನ, ಅದನ್ನು ಶರಣಮತಕ್ಕೆ ಸೇರುವ ಮುನ್ನ ಮಾಡಿದ್ದಕ್ಕಾಗಿಪಶ್ಚಾತ್ತಾಪವಿದೆ, ಮತ್ತೆ ಹೋಮ ಮಾಡುವ ಪ್ರಸಂಗ ಬಂದರೆ ತಲೆದಂಡ ಕೊಟ್ಟೇನು, ಮತ್ತೆ ಆ ಪ್ರಮಾದ ಮಾಡಲಾರೆ ಎಂದು ಘೋಷಿಸಿದ್ದಾನೆ ಸಿದ್ಧರಾಮ, 'ಹೋಮ' ವರ್ಣಾಶ್ರಮ ಧರ್ಮದ ಅವಶೇಷ, ಬಿಗಿದ ಪಾಶ. 'ಕುಲವೆಂದು ಹೋರಾಡುವ ಅಣ್ಣಗಳಿರಾ ಕೇಳಿರೋ ಕುಲವೇ ಡೋಹರನ ಕುಲವೇ ಮಾದಾರನ ಕುಲವೆ ದೂರ್ವಾಸನ ಕುಲವೇ ವ್ಯಾಸನ, ಕಲವೇ ವಾಲ್ಮೀಕನ, ಕುಲವೇ ಕೌಂಡಿಲ್ಯನ? ಕುಲವನೋಳ್ಪಡೆ ಹುರುಳಿಲ್ಲ.' ಇಲ್ಲಿ ಉಕ್ತವಾಗಿರುವ ಎಲ್ಲ ಮಹನೀಯರು 'ಉತ್ತಮ' ಕುಲದವರಲ್ಲ, ಅವರ ಸಾಧನೆ ಸಿದ್ಧಿ ಅದ್ಭುತ! ಇದೇ ದೃಷ್ಟಾಂತವನ್ನು ಬಸವಾದಿಗಳು ಕೊಟ್ಟಿರುವುದನ್ನು ಇಲ್ಲಿ ಸ್ಮರಿಸಬಹುದು. ಆ ಬಗ್ಗೆ ಸಿದ್ಧರಾಮನದು ಸಹಮತ. ಆದ್ದರಿಂದ ಕುಲವನ್ನು ಗಣನೆಗೆ ತಗೆದುಕೊಳ್ಳಬಾರದು. ಕುಲದಾಚೆಗೆ

ಮಾನವೀಯತೆ ಇದೆ, ಕುಲದಾಚೆಗೆ ಗರಿಮೆ ಇದೆ ಎಂಬುದು ಇಲ್ಲಿನ ವಿವಕ್ಷಿತಾರ್ಥ. 'ಚತುರ್ವರ್ಣಿಯಾದಡೇನು ಚತುರ್ವರ್ಣಾತೀತನೇ ವೀರಶೈವ ನೋಡಾ' ಲುಪ್ತ ಪಂಥದ ವರ್ಣಾಶ್ರಮ ವ್ಯವಸ್ಥೆಯ ಪ್ರಕಾರ ನಾವು ಯಾವುದೋ ಒಂದು ವರ್ಗಕ್ಕೆ ಸೇರಿಹೋಗುತ್ತೇವೆ. ಆದರೆ ವೀರಶೈವನಾಗಿ ಮರುಹುಟ್ಟು ಪಡೆದವನು 'ಚತುರ್‌ವರ್ಣಾತೀತ' ಅವನಿಗೆ ಈ ಕೃತಕ ವ್ಯವಸ್ಥೆ ಬೇಕಿಲ್ಲ. ಅವನು ಅದನ್ನು ಉಲ್ಲಂಘಿಸುವ ಛಲವುಳ್ಳವನು, ಬಲವುಳ್ಳವನು. 'ಶರಣರ ನಡೆ ಅಂತಿಂತನಬೇಡ ಶರಣ ಮಾದಾರ ಚೆನ್ನಯ್ಯನ ನಡೆ ಯಾವ ಆಗಮದಲ್ಲಿ ಹೇಳಿತ್ತು? ಶರಣ ಡೋಹರ ಕಕ್ಕಯ್ಯನ ನಡೆ ಯಾವ ವೇದದಲ್ಲಿ ಹೇಳಿತ್ತು?' ವೇದಾಗಮಗಳು ವರ್ಣಾಶ್ರಮವನ್ನು ಪುರಸ್ಕರಿಸಿವೆ. ವರ್ಣಾಶ್ರಮಾತೀತರಾದ ಚೆನ್ನಯ್ಯ, ಕಕ್ಕಯ್ಯರು ನಡೆನುಡಿ ಸಾಧನೆಗಳಿಂದ ಅದ್ಭುತವಾದರು, ಘನವಾದರು. ವರ್ಣವ್ಯವಸ್ಥೆ ಅವರಿಗೆ ಅಕ್ಷರಜ್ಞಾನವನ್ನು, ಆತ್ಮಜ್ಞಾನವನ್ನು ನಿರಾಕರಿಸಿತ್ತು ಎಂಬುದು ಇಲ್ಲಿ ಸ್ಮರಣೀಯ.

'ಕುಲದಲ್ಲಿ ಶೂದ್ರನಾದಡೇನು

ಮನದಲ್ಲಿ ಮಹಾದೇವ ನೆಲೆಗೊಂಡವನೆ ವೀರಶೈವ ನೋಡಾ' (ವ.ಶಾ.ಸಾ.ವ. ೧೬೦೩)

'ಶೂದ್ರ' ಎಂಬುದು ಪೂರ್ವಾಶ್ರಮದ ನೆಲೆ. ಅದು ವಿಭೇದ ಮೂಲದ್ದು, ಅಸಮಾನತೆಯನ್ನು ಆಧರಿಸಿದ್ದು, ಆದರೆ ಮನವೇ ಶಿವನ ನೆಲೆಯಾದವನು 'ವೀರಶೈವ' ಈ ವೀರಶೈವದಲ್ಲಿ ಭಿನ್ನದೃಷ್ಟಿಯಿಲ್ಲ, ಒಳಭೇದವಿಲ್ಲ, ಇದು ಹುಟ್ಟಿನಿಂದ, ಗೋತ್ರದಿಂದ ಸಿದ್ಧವಾಗುವುದಿಲ್ಲ.

'ಗುಣದಿಂದ ಹಾರುವನಲ್ಲದೆ ಅಗಣಿತ ವಿದ್ಯಾಭ್ಯಾಸದಿಂದ ಹಾರುವನಲ್ಲ ಹಾರಬೇಕು ಮಲತ್ರಯಂಗಳ ಹಾರಬೇಕು ಸೃಷ್ಟಿ ಸ್ಥಿತಿ ಲಯವ ಹಾರಬೇಕು ಸರ್ಪಹಾರ ಕಪಿಲಸಿದ್ಧಮಲ್ಲಿಕಾರ್ಜುನನ ಆ ಹಾರದಲ್ಲಿ' 'ಹಾರುವ' ಎಂಬ ಶಬ್ದವನ್ನು ಶ್ಲೇಷಾರ್ಥದಲ್ಲಿ ಬಳಸಲಾಗಿದೆ 'ಹಾರುವ' ಎಂದರೆ 'ವರ್ಣೋತ್ತಮ' ಎಂದರ್ಥವಲ್ಲ. ಮಲತ್ರಯಗಳನ್ನು, ಸೃಷ್ಟಿಸ್ಥಿತಿಲಯಗಳನ್ನು ಉತ್ತರಿಸಬಲ್ಲ ವಿದ್ಯಾಶ್ರೀಮಂತನನ್ನು 'ಹಾರುವ' ಎನ್ನಬೇಕು ಎಂದು ಚಮತ್ಕಾರಪೂರ್ಣವಾಗಿ ಸಿದ್ಧರಾಮನು ನಿರೂಪಿಸಿದ್ದಾನೆ.

ಹನ್ನೆರಡನೆಯ ಶತಮಾನದಲ್ಲಿ ಮೊತ್ತಮೊದಲನೆಯದಾಗಿ ವಚನಕಾರರು ಸಾಂಪ್ರದಾಯಕ ಜಡಪರಂಪರೆ ಸ್ತ್ರೀಕುಲಕ್ಕೆ ಆರೋಪಿಸಿದ್ದ ಅನೇಕ ಕೊರತೆಗಳನ್ನು ದೌರ್ಬಲ್ಯಗಳನ್ನು ಕಿತ್ತೆಸದರು. ಸ್ತ್ರೀಕುಲಕ್ಕೆ ಅನ್ವಯಿಸಬಹುದಾದ 'ಹುಸಿ ಪುರಾಣ'ಗಳನ್ನು ಇಲ್ಲಗೈದರು. ಸಾಮಾಜಿಕ, ಧಾರ್ಮಿಕ ವಲಯಗಳಲ್ಲಿ ಪುರುಷಸಮಾನವಾದ ಸ್ಥಾನಮಾನ, 'ಅಸ್ಮಿತೆಗಳನ್ನು ತಂದುಕೊಟ್ಟು ಅವಳು ಎಲ್ಲೆಲ್ಲು ಸಲ್ಲುವಂತೆ ಮಾಡಿದರು. 'ಶರಣಸತಿ–ಲಿಂಗಪತಿ ಎಂಬ ಪರಿಕಲ್ಪನೆಯಲ್ಲಿ ಸಮಸ್ತ ಭಕ್ತ ಸಮೂಹ ಅಥವಾ ಜೀವಸಮೂಹ 'ಶರಣಸತಿ'ಯಾಗುವುದರ ಮೂಲಕ, ಗಂಡಿಗಿಲ್ಲದ ಘನತೆ ಸ್ತ್ರೀಕುಲಕ್ಕೆ ಬಂದಂತೆ ಆಯಿತು. ಗಂಡು ಲಿಂಗಪತಿಯನ್ನು ಹೊಂದಲು 'ಶರಣಸತಿ'ಯಾಗಿಯೇ ಭಾವಾರೋಪ

ಮಾಡಿಕೊಂಡು ಸಮರ್ಪಿಸಿಕೊಳ್ಳಬೇಕು. ಇದು ಸ್ತ್ರೀಕುಲಕ್ಕೆ ಸಂದ ಪರೋಕ್ಷ ಮನ್ನಣೆ. ಇದನ್ನೆ ಕಾಯಕಯೋಗಿ ಸಿದ್ಧರಾಮನಂತು ಸ್ತ್ರೀಶಕ್ತಿಯ ಸರ್ವವ್ಯಾಪಕ ಗುಣವನ್ನು ಸರ್ವಶಕ್ತತೆಯನ್ನು ಯುಕ್ತಿಯುಕ್ತವಾಗಿ ನಿರೂಪಿಸಿದ್ದಾನೆ.

'ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು
ತಾ ಮಾಡಿದ ಹೆಣ್ಣುನಾರಾಯಣನ ಎದೆಯನೇರಿತ್ತು
ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ' ಎಂದಿದ್ದಾನೆ,(ವ.ಶಾ.ಸಾ.ವ. ೬೬೨)

ಈ ಸಾಂಕೇತಿಕ ಅಭಿವ್ಯಕ್ತಿಯನ್ನು ಬೆದಕಿದರೆ ಅಲ್ಲಿ ಧ್ವನಿತರಂಗವೇ ಅಡಗಿದೆ. ಬೌದ್ಧಿಕಶಕ್ತಿಯಾಗಿ, ಜೀವಜಲವಾಗಿ, ಸೃಷ್ಟಿಶಕ್ತಿಯಾಗಿ, ವಿದ್ಯಾಬಲವಾಗಿ, ಆರ್ಥಿಕ ಬಲವಾಗಿ, ಮಿಗಿಲಾಗಿ ತ್ರಿಮೂರ್ತಿಗಳನ್ನು ಕುಣಿಸುವ ಚೈತನ್ಯವಾಗಿ ವ್ಯಾಪಿದ್ದಾಳೆ. ಆದ್ದರಿಂದ ಮೂಢರು ಆರೋಪಿಸುವಂತೆ ಅವಳು ಬರಿ ಹೆಣ್ಣಲ್ಲ, ರಾಕ್ಷಸಿಯಲ್ಲ, 'ಸಾಕ್ಷಾತ್ ಕಪಿಲಸಿದ್ಧ ಮಾಲ್ಲಿಕಾರ್ಜುನನೇ ಆಗಿದ್ದಾಳೆ'. ಇದಕ್ಕಿಂತಲೂ ಶಕ್ತಿಪೂರ್ಣವಾಗಿ ಪ್ರತಿಮಾವಿಧಾನದಲ್ಲಿ ಸ್ತ್ರೀಶಕ್ತಿಯ ವಿಶ್ವರೂಡವನ್ನು ಕಾಣಿಸುವುದು ಬೇರೆ ಯಾರಿಗೂ ಸಾಧ್ಯವಾಗಿಲ್ಲವೆಂದೇ ಹೇಳಬೇಕು. ವಚನಕಾರರು ಸ್ವರ್ಗ ಮರ್ತ್ಯ ಪಾತಾಳ ಎಂಬ ಲೋಕಗಳು ಇಲ್ಲ, ಇವೆಲ್ಲವೂ ಮರ್ತ್ಯಲೋಕದಲ್ಲಿಯೇ ಇವೆಯೆಂದು ನುಡಿದಿರುವರು. ಲೋಕದ ಜನತೆ ಸ್ವರ್ಗ, ಕೈಲಾಸ, ನರಕ ಎಂಬ ಲೋಕಗಳನ್ನು ಸೃಷ್ಟಿಸಿಕೊಂಡಿದ್ದಾರಷ್ಟೇ ಅಲ್ಲ, ಒಳ್ಳೆಯ ಕಾರ್ಯ ಮಾಡಿದರೆ ಸ್ವರ್ಗಕ್ಕೆ ಹೋಗುತ್ತಾರೆ, ಕೆಟ್ಟ ಕೆಲಸ ಮಾಡಿದರೆ ನರಕಕ್ಕೆ ಹೋಗುತ್ತಾರೆ ಎಂದು ಭಾವಿಸಿದದು ಶುದ್ಧ ತಪ್ಪೆಂದು ವಚನಕಾರರು ಸಾರಿದವರು. ಸಿದ್ಧರಾಮನಂತೂ ಸ್ವರ್ಗ, ಕೈಲಾಸವೆಂಬುವು ಇಲ್ಲ, ಇವುಗಳನ್ನು ಕೆಲವರು ಕಲ್ಪಿಸಿಕೊಂಡು ಬಡಿದಾಡುತ್ತಿದ್ದಾರೆಂದು ತನ್ನೊಂದು ವಚನದಲ್ಲಿ ಈ ರೀತಿ ವ್ಯಕ್ತಪಡಿಸಿದ್ದಾನೆ.

'ಕೈಲಾಸವೆಂದು ಬಡಿದಾಡುವ ಅಣ್ಣಗಳಿರಾ, ಕೇಳಿರಯ್ಯಾ
ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳು ಬೆಟ್ಟ,
ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು.
ಅಲ್ಲಿರ್ದ ಚಂದ್ರಶೇಖರನು ಬಹು ಎಡ್ಡ
ಇದರಾಡಂಬರವೇಕಯ್ಯಾ?
ಎಮ್ಮ ಪುರಾತರಿಗೆ ಸದಾಚಾರದಿಂದ ವರ್ತಿಸಿ
ಲಿಂಗಾಂಗ ಸಾಮರಸ್ಯವ ತಿಳಿದು,

ನಿಮ್ಮ ಪಾದಪದ್ಮದೊಳು ಬಯಲಾದ ಪದವೆ ಕೈಲಾಸವಯ್ಯಾ

ಕಪಿಲಸಿದ್ಧ ಮಲ್ಲಿಕಾರ್ಜುನಾ' (ವ.ಶಾ.ಸಾ.ವ. ೧೯೫೫)

ದೇವರನ್ನು ಕಲ್ಪಿಸಿದವನು ಮಾನವನೇ ಆಗಿದ್ದಾನೆ. ವಿವಿಧ ರೂಪಗಳಲ್ಲಿ ಆತನನ್ನು ಸೃಷ್ಟಿಸಿಕೊಂಡು ಲೋಕದ ಜನ ಪೂಜಿಸುತ್ತಿದ್ದುದುಂಟು, ಆತ ಕೈಲಾಸದಲ್ಲಿದ್ದಾನೆಂದು ಭ್ರಮಿಸಿದುದು ಸಿದ್ಧರಾಮನಿಗೆ ನಗೆ ತರಿಸಿದೆ. ಶರಣರು ಶಿವನನ್ನು ಸಾಕಾರರೂಪದಲ್ಲಿ ಕಾಣಲು ಇಚ್ಛಿಸರು. ಕೈಲಾಸವೆಂಬುದು ಇಲ್ಲವೇ ಇಲ್ಲ. ಕೈಲಾಸ ಪರ್ವತ ಎಂಬುದೊಂದು ಕಲ್ಪಿತ ಕತೆ. ಅದೆಲ್ಲಿಯೂ ಇಲ್ಲ. ಮರ್ತ್ಯಲೋಕವೊಂದೇ ಸತ್ಯ, ಉಳಿದುದೆಲ್ಲ ಮಿಥ್ಯೆ. ಸತ್ಯ ನುಡಿದರೆ ಇಲ್ಲೇ ಸ್ವರ್ಗ ಸಿಗುತ್ತದೆ, ಅಸತ್ಯ ನುಡಿದರೆ ಇಲ್ಲೇ ನರಕ ಪ್ರಾಪ್ತವಾಗುತ್ತದೆ ಎಂಬುದು ಶರಣ ಸಿದ್ಧರಾಮನ ನಿಲವು ವಾಸ್ತವವೂ ಆಗಿದೆ, ವೈಜ್ಞಾನಿಕವಾದುದೂ ಆಗಿದೆ.

ದೇವರು-ಧರ್ಮದ ಬಗೆಗೆ ವಚನಕಾರರು ವ್ಯಕ್ತಪಡಿಸಿದ ವಿಚಾರಗಳು ವಿನೂತವಾದುವು, ಪ್ರಗತಿಪರವಾದುವೂ ಆಗಿವೆಯೆಂಬುದು ವಿದಿತವಾಗುವುದು. ಇದರಂತೆಯೇ ಲೋಕದ ಜನ ದೇವರನ್ನು ಸಂಪ್ರೀತಗೊಳಿಸಲು ಬಗೆಬಗೆಯಾದ ರೀತಿಯಲ್ಲಿ ಪೂಜೆ-ಪುನಸ್ಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದುಂಟು. ಕೆಲವರು ಕುರಿ, ಕೋಳಿ, ಕೋಣಗಳನ್ನು ಬಲಿಕೊಟ್ಟರೆ, ಇನ್ನೂ ಕೆಲವರು ತಮ್ಮ ತಲೆಯಲ್ಲಿನ ಕೂದಲನ್ನು ಕತ್ತರಿಸಿ ಕೊಡುವುದುಂಟು. ಮತ್ತೆ ಕೆಲವರು ದೇವರ ಪ್ರೀತಿ ವಿಶ್ವಾಸಗಳಿಸಲು ಉಪವಾಸ ವ್ರತ-ಪೂಜೆಗಳನ್ನು ನೆರವೇರಿಸುವರು. ವಚನಕಾರರು ದೇವನ ಒಲುಮೆಗೆ ಇವಾವೂ ಬೇಡ ಎನ್ನುವರು. ಲೋಕದ ಮಾನವರು ವಿಧವಿಧದ ಪೂಜೆಗಳಲ್ಲಿ ತೊಡಗಿಕೊಂಡುದನ್ನು ವಚನಕಾರರು ತಮ್ಮ ವಚನಗಳಲ್ಲಿ ನಿರ್ದಾಕ್ಷಿಣ್ಯವಾಗಿ ತಿಳಿಸಿದ್ದಾರೆ. ಅನೇಕ ಜನರು ಅಜ್ಞಾನದಿಂದ ಪ್ರೇರಿತವಾದ ನೇಮಗಳಲ್ಲಿಯೇ ಮುಳುಗಿ ಪರಮಾತ್ಮನನ್ನು ಅರಿಯದ ತಿಳಿಗೇಡಿಗಳನ್ನು ಕಂಡು ಸಿದ್ಧರಾಮ ತನ್ನ ವಚನದಲ್ಲಿ ಅಂಥವರನ್ನು ವಿಡಂಬನೆಗೆ ಒಳಗುಮಾಡಿದುದನ್ನು ಇಲ್ಲಿ ನೋಡಬಹುದು.

'ಪತ್ರೆಯ ನೇಮದವರು ಒಂದು ಕೋಟಿ

ಲಿಂಗಾರ್ಚನೆಯ ನೇಮದವರು ಒಂದು ಕೋಟಿ

ಜಂಗಮ ತೃಪ್ತಿಯವರು ಒಂದು ಕೋಟಿ

ತನ್ನ ತಾ ತಿಳಿಯುವ ನೇಮದವರು ಒಬ್ಬರೂ ಇಲ್ಲವಯ್ಯಾ

ಪಕಿಲಸಿದ್ಧ ಮಲ್ಲಿಕಾರ್ಜುನ' (ವ.ಶಾ.ಸಾ.ವ. ೨೨೬೩)

ತನ್ನನ್ನು ತಾನು ಅರಿತು ನೇಮ, ಪೂಜೆ ಮಾಡಬೇಕೇ ವಿನಾ ಇನ್ನೊಬ್ಬರು ಹೇಳುತ್ತಾರೆಂದು ಮಾಡಬಾರದು. ಒಬ್ಬರನ್ನು ನೋಡಿ ಒಬ್ಬರು ಪತ್ರೆ, ಬಿಲ್ವಾರ್ಚನೆ, ಜಂಗಮಾರ್ಚನೆ ನೇಮ ಹಿಡಿಯುತ್ತ ಬರುವವರ ನಿರರ್ಥಕತೆಯನ್ನಿಲ್ಲಿ ಮಂಡಿಸಿದ್ದು ಗಮನೀಯವಾಗಿದೆ. ಅನೇಕ ಉಪಚಾರದ ಭಕ್ತಿಯನ್ನು ಖಂಡಿಸುವ ಸಿದ್ಧರಾಮನ ವಚನ ಕೆಳಗಿನಂತಿದೆ.

'ಮಜ್ಜನಕ್ಕೆರೆಯಹೇಳಿದರೆ ನಾನೇನ ಮಜ್ಜನಕ್ಕೆರೆವೆನು?

ಒಳಗೊಂದು ಪ್ರಾಣಲಿಂಗವ ಕಂಡೆನಯ್ಯಾ!

ಹೊರಗಣ ಹೂವ ಕೊಯ್ದು ಹೊರಗೆ ಪೂಜಿಸುವರು,

ಉಪಚಾರದ ನೇಮವ ನಾನೊಲ್ಲೆನಯ್ಯ,

ಸ್ವಾನುಭಾವದನುವನರಿಯದವರು ಏತರ ಸುಖಿ

ಕಪಿಲಸಿದ್ಧ ಮಲ್ಲಿಕಾರ್ಜುನನಂತವರನೊಲ್ಲನಯ್ಯ' (ವ.ಶಾ.ಸಾ.ವ. ೨೦೨೦)

ಸ್ವತಃ ಅನುಭವಿಸಿ ಮಾಡುವ ಭಕ್ತಿ ಮನಸ್ಸಿಗೆ ಅನಂತ ಸುಖವನ್ನು ನೀಡುವುದನ್ನು ಅರಿಯದೆ ಕೇವಲ ಉಪಚಾರಕ್ಕಾಗಿ ಮಾಡುವ ನೇಮಗಳು ಅನಗತ್ಯವೆಂದು ನಿರ್ದಿಷ್ಟವಾಗಿ ಹೇಳಲಾಗಿದ್ದು ಅಜ್ಞಾನದಿಂದ ಅಂತಹ ನೇಮಗಳಲ್ಲಿ ಸಿಲುಕಿ ತೊಂದರೆಗೊಳಗಾದವರಿಗೆ ಇದು ಬಿಡುಗಡೆಯ ಮಾರ್ಗವಾಗಿದೆ. ಸಮತೆಯ ಗಾರುಡಿಗನೆನಿಸಿದ ಸಿದ್ಧರಾಮನು ತನ್ನ ವಚನದಲ್ಲಿ,

'ಆರೇನೆಂದರೂ ಓರಂತಿಪ್ಪುದೇ ಸಮತೆ,

ಆರು ಜರಿದರೂ ಮನದ ಕಾಳಿಕೆಯ ಕಳೆದರೆಂಬುದೇ ಸಮತೆ,

ಆರು ಸ್ತೋತ್ರ ಮಾಡಿದರೂ ಅವರೆನ್ನ ಜನ್ಮದ ಹಗೆಗಳೆಂಬುದೇ ಸಮತೆ,

ಇಂತಿದು ಗುರುಕಾರುಣ್ಯ ಮನ ವಚನ ಕಾಯದಲ್ಲಿ ಅಹಿತವಿಲ್ಲದೆ,

ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ, ನಿಮ್ಮವರ ನೀವೆಂಬುದೇ ಸಮತೆ'. (ವ.ಶಾ.ಸಾ.ವ. ೫೧೨)

ಈ ರೀತಿ ಮನಸ್ಸಿನ ಸಮತೆಯನ್ನು ಕಾಯ್ದುಕೊಳ್ಳುವ ಬಗ್ಗೆ ಅಮೂಲ್ಯವಾದ ಸೂಚನೆಗಳನ್ನು ಕೊಡಲಾಗಿದೆ. ಅಂತಹ ಸಮತೆಯನ್ನು ಸಾಧಿಸಿಕೊಂಡ ಸಿದ್ಧರಾಮನ ನಿಲವು ಇತರರಿಗೆ ಮಾದರಿಯಾಗಿದೆ.

ಅಂತರಂಗದ ಪೂಜಾವಿಧಾನಕ್ಕೆ ಸಿದ್ಧರಾಮ ಹೆಚ್ಚಿನ ಒಲವು ತೋರಿರುವುದು ಅವನ ಭಾವನಾಪ್ರಧಾನವಾದ ಭಕ್ತಿಸಾಧನೆಯ ವಿಧಾನವಾಗಿದೆ. ಹೊರಗಿನ ಸಾಧನಗಳಿಂದ ಪೂಜಿಸುವದಕ್ಕಿಂತ ಮಾನಸಿಕವಾದ ಅನುಸಂಧಾನ ಹೆಚ್ಚು ಪ್ರಾಮಾಣಿಕವೆಂಬಂತೆ ತಮ್ಮ ಅಂತರಂಗವನ್ನೇ ನಿವೇದಿಸಿಕೊಳ್ಳುವ ರೀತಿ ಭಾವನಾತೀವ್ರತೆಯನ್ನು ಮಾತ್ರವಲ್ಲದೆ ಅರ್ಥಪೂರ್ಣವಾದ ರೀತಿಯಲ್ಲಿ ತಮ್ಮನ್ನು ತಾವು ಅರ್ಪಿಸಿಕೊಳ್ಳುವ ವಚನಕಾರರ ವಿಶಿಷ್ಟ ಮಾರ್ಗ. ಹೊರಗಿನ ಸಾಧನಗಳು ಲಭ್ಯವಿಲ್ಲದಂತಹ ಪರಿಸ್ಥಿತಿಗಳಲ್ಲಿಯೂ ಕೂಡ ತಮ್ಮ ಭಕ್ತಿಸಾಧನೆಗೆ ಕೊರತೆಯಾಗದಂತೆ ಮಾನಸಿಕ ವಿಧಾನವನ್ನು ಅನುಸರಿಸುವ ನೀತಿಯನ್ನು ಇಲ್ಲಿ ಭೋದಿಸಲಾಗಿದೆ. ಹೊರಗಿನ ಪೂಜಾ ಸಾಮಾಗ್ರಿಗಳು ಸಿಕ್ಕಿಲ್ಲವೆಂದು ಪರಿತಪಿಸುವುದಾಗಲೀ ಬೇರೆಯವರಿಗೆ ತೊಂದರೆ ಕೊಡುವುದಾಗಲೀ ಪೂಜೆಯನ್ನು ನಿಲ್ಲಿಸುವುದಾಗಲೀ ಸರಿಯಲ್ಲವೆಂಬುದನ್ನು ದೃಢಪಡಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಎಸ್. ಬಾಲಚಂದ್ರರಾವ್. 'ಸಂಪ್ರದಾಯ ವಿಜ್ಞಾನ ಮತ್ತು ಸಮಾಜ' ಪು. ೪೩, ೨೦೦೫, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಕ್ರೆಸೆಂಟ್ ರಸ್ತೆ, ಬೆಂಗಳೂರು.

೨. ನೀಲಾವರ ಸುರೇಂದ್ರ ಅಡಿಗ 'ಅನುಭವ ಮಂಟಪ' ಪು. ೪೯, ೨೦೦೭, ಬಸವತತ್ವ ಪ್ರಚಾರ ಹಾಗೂ ಸಂಶೋಧನಾ ಕೇಂದ್ರ ಪ್ರಕಾಶನ, ಬೆಂಗಳೂರು.

೩. ಬಸವರಾಜ. ಈ. ಕಡ್ಡಿ. 'ವಚನಗಳ ವೈಚಾರಿಕ ಸ್ಪರ್ಶ' ಪು. ೬, ೨೦೧೩, ಗೆಳೆಯರ ಬಳಗ, ತುಂಗಳ ತಾ॥ ಜಮಖಂಡಿ.

೪. ಮಹೇಂದ್ರ. ಜಿ. ಹರಿಹರ. 'ದಲಿತ ವಚನಕಾರರು : ವೈಚಾರಿಕ ಪ್ರಜ್ಞೆ' ಪು. ೪, ೨೦೧೫, ಪ್ರಸಾರಾಂಗ ಕರ್ನಾಟಕ ವಿಶ್ವಿದ್ಯಾಲಯ, ಧಾರವಾಡ.

೫. ಆರ್. ಎಸ್. ಚಾಪಗಾವಿ. 'ಕಲ್ಯಾಣದ ಕ್ರಾಂತಿಕಾರರು' ಪು. ೪, ೨೦೧೧, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು.

೬. ಸಿದ್ಧಯ್ಯ ಪುರಾಣಿಕ 'ಶರಣ ಚರಿತಾಮೃತ' ಪು. ೯೯, ೧೯೯೨, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

ಅಧ್ಯಾಯ : ನಾಲ್ಕು

ತಳಸಮುದಾಯಗಳ ವಚನಕಾರರ ವಚನಗಳಲ್ಲಿ ವೈಚಾರಿಕತೆ ಮತ್ತು ಸಮಾನತೆಯಲ್ಲಿ ಸಾತ್ವಿಕತೆಯ ತತ್ವಗಳು

ಶರಣರ ವಚಗಳು

೪.೧. ಅಂಬಿಗರ ಚೌಡಯ್ಯ

೪.೨. ಗಣೇಶ ಮಸಣಯ್ಯ

೪.೩. ಜೇಡರ ದಾಸಿಮಯ್ಯ

೪.೪. ಮಡಿವಾಳ ಮಾಚಯ್ಯ

೪.೫. ಮಾದರ ಧೂಳಯ್ಯ

೪.೬. ಡೋಹರ ಕಕ್ಕಯ್ಯ

೪.೭. ಉರಿಲಿಂಗಿ ಪೆದ್ದಿ

ಶರಣೆಯರ ವಚನಗಳು

೪.೮. ಆಯ್ದಕ್ಕಿ ಲಕ್ಕಮ್ಮ

೪.೯. ಸೂಳೆ ಸಂಕವ್ವ

೪.೧೦. ಕಾಳವ್ವೆ

೪.೧೧. ಗುಡ್ಡವ್ವೆ

ಅಧ್ಯಾಯ : ನಾಲ್ಕು

ತಳಸಮುದಾಯಗಳ ವಚನಕಾರರ ವಚನಗಳಲ್ಲಿ ವೈಚಾರಿಕತೆ ಮತ್ತು ಸಮಾನತೆಯಲ್ಲಿ ಸಾತ್ವಿಕತೆಯ ತತ್ವಗಳು

ಒಬ್ಬ ವ್ಯಕ್ತಿಯ ಮಹತ್ವವನ್ನು ಅರಿಯಬೇಕಾದರೆ ಆತನು ಬದುಕಿ ಬಾಳಿದ ಸಮಾಜದ ರೀತಿನೀತಿಗಳು, ಧಾರ್ಮಿಕ ಚೌಕಟ್ಟು ಮತ್ತು ರಾಜಕೀಯ ನೀತಿ ಇವುಗಳನ್ನು ಅವಶ್ಯವಾಗಿ ಗಮನಿಸಬೇಕಾಗುತ್ತದೆ. ಅಂದಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಚೌಕಟ್ಟುಗಳನ್ನು ಮತ್ತು ಮಿತಿಗಳನ್ನು ಮೀರಬೇಕಾಗುತ್ತದೆ, ಮನುಕುಲದ ಕಲ್ಯಾಣಕ್ಕಾಗಿ ಎಟುಕಲಾರದ ವಾತಾವರಣವನ್ನು ಹೋಗಲಾಡಿಸಲು ಪುರೋಹಿತಶಾಹಿಯನ್ನು ವಿರೋಧಿಸಿ ಮಾಡಿದ ಹೋರಾಟ ಮಹತ್ವವಾಗಿದೆ. ಹೀಗಾಗಿ ಅದರ ಮಹತ್ವ ನಮಗೆ ಅರ್ಥವಾಗಬೇಕಾದರೆ ನಾವು ಯಾವ ವ್ಯಕ್ತಿಯ ಜೀವನ ಚರಿತ್ರೆಯನ್ನು ಬರೆಯಬೇಕೆನ್ನುತ್ತೇವೆಯೊ ಆ ವ್ಯಕ್ತಿಯ ಕಾಲಮಾನದ ಎಲ್ಲ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಚಾಲುಕ್ಯರು ಮೊದಲು ಬಾದಾಮಿಯಲ್ಲಿ ಆಳ್ವಿಕೆ ನಡೆಸಿದ ನಂತರದ ಕಾಲದಲ್ಲಿ ತಮ್ಮ ಘನತೆ ಗೌರವದ ಅಸ್ತಿತ್ವವನ್ನು ಕಳೆದುಕೊಂಡರೂ ಮತ್ತೆ ಆಂಧ್ರದ ವೆಂಗಿಯಲ್ಲಾಗಲಿ ಅಥವಾ ಕರ್ನಾಟಕದ ಕಲ್ಯಾಣದಲ್ಲಾಗಲಿ ತಮ್ಮ ಅಸ್ತಿತ್ವ ಉಳಿಸಿಕೊಂಡಿದ್ದರಿಂದ ಕಲ್ಯಾಣ ಚಾಲುಕ್ಯರಿಗೆ ವಿಶೇಷ ಮಹತ್ವವಿರುವುದನ್ನು ಕಾಣುತ್ತೇವೆ.

ಆರನೇ ವಿಕ್ರಮಾದಿತ್ಯನು ಕಲ್ಯಾಣ ಚಾಲುಕ್ಯವಂಶದಲ್ಲೆಲ್ಲಾ ಅತ್ಯಂತ ದಕ್ಷನಾದವನು, 'ತ್ರಿಭುವನಮಲ್ಲ' ಎಂಬ ಬಿರುದು ಈತನಿಗಿತ್ತು, ತಾನು ರಾಜನಾದ ಕೂಡಲೆ ಒಂದು ಹೊಸ ಶಕೆಯನ್ನು ಈತ ಪ್ರಾರಂಭಿಸಿದ. ಅದು ವಿಕ್ರಮ ಶಕೆ ಎಂದು ಪ್ರಸಿದ್ಧವಾಯಿತು. ಇವನ ಆಳ್ವಿಕೆಯ ಕಾಲ ಸುಮಾರು ಕ್ರಿ.ಶ. ೧೧೮. ಈತನ ಮಗ ಪೆರ್ಮಾಡಿರಾಯನ ಕಾಲಕ್ಕೆ ಚಾಲುಕ್ಯ ಮತ್ತು ಕಲಚೂರಿ ಮನೆತನಗಳ ಸಂಬಂಧ ಇನ್ನಷ್ಟು ನಿಕಟವಾಯಿತು. ಆರನೆಯ ವಿಕ್ರಮಾದಿತ್ಯನ ಮಗಳನ್ನು ಈತನು ಮದುವೆಯಾದುದರಿಂದ ಕರ್ನಾಟಕದ ರಾಜಕೀಯದಲ್ಲಿ ಕಲಚೂರಿಗಳ ಸ್ಥಾನ ಭದ್ರವಾಯಿತು. ಈತನ ಸಮಕಾಲೀನ ಅರಸನಾದ ಮೂರನೆಯ ಸೋಮೇಶ್ವರನು ಹಿರಿಯನಿದ್ದಂತೆಯೂ ನಿಕಟ ಸಂಬಂಧ ಬೆಳೆಯಲು ಅನುಕೂಲವಾಯಿತು. ಮುಂದೆ ಆರನೆ ವಿಕ್ರಮಾದಿತ್ಯನ ಕಾಲಾವಧಿಯಲ್ಲಿ

ಕೊಂಡಗುಳಿ ಕೇಶಿರಾಜ ಮೊದಲಾದ ಶಿವಶರಣರು ಚಳುವಳಿ ಅಥವಾ ಆಂದೋಲನ ಅಂದರೆ ಒಂದು ಪರಿಸ್ಥಿತಿಯ ಬದಲಾವಣೆಯನ್ನು ತರುವ ಸ್ಥಿತಿ ನಿರ್ಮಾಣವಾಗಲು ಕಾರಣೀಭೂತರಾದರು. ಅದಕ್ಕಿಂತ ಮುಖ್ಯವಾಗಿ ಈಗಿನ ಮಹಾರಾಷ್ಟ್ರ ಸೊಲ್ಲಾಪೂರ ಜಿಲ್ಲೆಯ ಮಂಗಳವೇಢೆ ಪ್ರಾಂತದಲ್ಲಿ ಆಳುತ್ತಿದ್ದ ಕಲಚೂರಿಗಳು ಸಾಮಂತರಾಗಿದ್ದರು. ಕಲ್ಯಾಣ ಚಾಲುಕ್ಯರಲ್ಲೆಲ್ಲ ತುಂಬಾ ದುರದೃಷ್ಟ ಅರಸ ಎಂದರೆ ಮೂರನೆ ತೈಲಪ, ಏಕೆಂದರೆ ಅತ್ಯಂತ ದುರ್ಬಲ ದೊರೆ ಎನಿಸಿದ ಮೂರನೆ ತೈಲಪನನ್ನು ಸದೆಬಡಿದು ತಾನೆ ಚಕ್ರವರ್ತಿಯೆಂದು ಘೋಷಿಸಿಕೊಂಡ. ಕಲಚೂರಿಗಳ ಆಡಳಿತದಲ್ಲಿ ಶೈವ ಮತದ ಪ್ರಸಾರ ತೀವ್ರಗೊಂಡದ್ದನ್ನು ಕಾಣಬಹುದಾಗಿದೆ. ಹೀಗಾಗಿ ಸಮಾಜೋಧಾರ್ಮಿಕ ಆಂದೋಲನವೇ ಇವರ ಪ್ರಮುಖ ಗುರಿಯಾಗಿತ್ತು.

ಈ ಅಂದೋಲನವು ಅಸ್ತಿತ್ವವನ್ನು ನಿರಾಕರಿಸುವ ಹಾಗೂ ವಿರೋಧಿಸುವ ನೆಲೆಯಿಂದಲೇ ಹೊರಟಿರುವುದು ಕಂಡು ಬರುತ್ತದೆ. ಈ ಅಂದೋಲನವು ಉಳಿದ ಭಕ್ತಿ ಚಳುವಳಿಗಳ ಹಾಗೆ ಬ್ರಾಹ್ಮಣೇತರ ಹಾಗೂ ಬ್ರಾಹ್ಮಣವಿರೋಧಿ ಚಳುವಳಿಗಳಾಗಿವೆ. ಹೀಗಾಗಿ ಧಾರ್ಮಿಕ ಮತ್ತು ಸಾಮಾಜಿಕ ಚೈತನ್ಯವನ್ನು ಮೂಡಿಸಿದೆ. ಭಕ್ತರು ಹಾಗೂ ಪುರೋಹಿತಶಾಹಿ ನಡುವೆ ನಡೆಯುವ ಸಂಘರ್ಷವು ಸಂಘರ್ಷವಾಗಿ ಉಳಿಯದೆ ತಳಸಮುದಾಯದ ಜನರು ತಮ್ಮ ಜೀವನವಿಧಾನದಿಂದ ಮಾರ್ಗಾಂತರಗೊಂಡು ಶಿವಭಕ್ತರೆಂಬ ಚೌಕಟ್ಟಿನಲ್ಲಿ ಜಡಮೌಲ್ಯಗಳಿಗೆ ಚಾಲನೆ ಕೊಡುವಂತವರಾಗುತ್ತಾರೆ. ಕೇಶಿರಾಜನು ಪೆರ್ಮಾಡಿರಾಯ ಅರಸನಿಗೆ ನಮಸ್ಕರಿಸದೇ ಕೈಯಲ್ಲಿದ್ದ ಗುರುಮುದ್ರಿಕೆಗೆ ನಮಸ್ಕರಿಸುತ್ತಿದ್ದ. ಇತರರಿಂದ ಇದನ್ನು ಕೇಳಿದ ಅರಸ ಆತನ ಕೈಯಲ್ಲಿದ್ದ ಉಂಗುರವನ್ನು ತಗೆದುಕೊಂಡಾಗ ಅರಸನಿಗೆ ನಮಸ್ಕರಿಸಲು ನಿರಾಕರಿಸಿ, ನಿಂತಲೇ ಮಂತ್ರಿ ಪದವಿಯನ್ನು ತ್ಯಜಿಸಿದುದನ್ನು ನೋಡಿದರೆ ರಾಜತ್ವವನ್ನು ವಿರೋಧಿಸಿ ಜನಸಾಮಾನ್ಯರ ಪರವಾಗಿ ಇದ್ದು ಶೈವತ್ವಕ್ಕೆ ಮನ್ನಣೆ ಕೊಟ್ಟಿದ್ದು ಕಂಡು ಬರುತ್ತದೆ. ಶಿವಪುರದ ತೆಲಗು ಬೊಮ್ಮಯ್ಯನನ್ನು ಕಂಡಂತೆ ಹರಿಹರನು ಕೇಶಿರಾಜ ದಣ್ಣಾಯಕರ ರಗಳೆಯಲ್ಲಿ ಸೂಚಿಸಿರುವನು. ಈತನು ಪೆರ್ಮಾಡಿರಾಯನ ಕಾಲಾವಧಿಯಲ್ಲಿ ಬರುವ ಬೊಮ್ಮಯ್ಯ, ಈತ ಜಾತಿಯಿಂದ ಬೇಡರವ.

ಜಾತಿಯ ಹಿಂಸೆ ಮತ್ತು ಮಾನಸಿಕ ಅಪಮಾನದ ತುಳಿತ ಇವು ಮೇಲುವರ್ಗದ ವಚನಕಾರರಲ್ಲಿ ಕಾಣುವುದು ಅಪರೂಪ. ಅದಕ್ಕೆ ಬೊಮ್ಮಯ್ಯನು ಪುರೋಹಿತ ಶಾಹಿಯನ್ನೆ ವಿರೋಧಿಸುತ್ತಾನೆ. ಇಂತಹ ಸಂದರ್ಭದಲ್ಲಿ ಪುರೋಹಿತರು ತಮ್ಮ ಸ್ವಾರ್ಥಕ್ಕಾಗಿ ಅರಸನನ್ನೆ ತಮ್ಮತ್ತ ಒಲಿಸಿಕೊಳ್ಳುತ್ತಾರೆ. ಬೊಮ್ಮಯ್ಯ ಆ ಬ್ರಾಹ್ಮಣತ್ವವನ್ನು ಮುಕ್ತಗೊಳಿಸುತ್ತಾ ಕೊನೆಗೆ ಅರಸನು ಕ್ಷಮೆ ಯಾಚಿಸುತ್ತಾನೆ.

ಹೀಗೆ ಇಡೀ ಪ್ರಭುತ್ವವದ ವ್ಯವಸ್ಥೆಯನ್ನು ಬದಲಾಯಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತರಹೊಟ್ಟಿದ್ದುದರ ಕುರುಹುಗಳು ಬಸವ ಪೂರ್ವ ಕಾಲದಲ್ಲಿ ದಲಿತ ವಚನಕಾರರಲ್ಲಿ ನಡೆದಿದೆ. ಅದರಲ್ಲಿ ಶರಣಬಾಹೂರ ಬೊಮ್ಮಯ್ಯ ತ್ರಿಪುರಾಂತಕೇಶ್ವರನ ದರ್ಶನಕ್ಕೆಂದು ಕಲ್ಯಾಣಕ್ಕೆ ಬರುತ್ತಿದ್ದ ಆ ಸಂದರ್ಭದಲ್ಲಿ ಅರಸನ ಆನೆಯನ್ನು ಕೈ ಎತ್ತಿ ತಡೆಹಿಡಿದ. ರಾಜನ ಆನೆಯ ಗಂಭೀರ

ಪರಿಸ್ಥಿತಿಯನ್ನು ಬದಲಾಯಿಸಲು ಯಾವುದೇ ಬೆಂಬಲವಿಲ್ಲದೆ ಏಕ ವ್ಯಕ್ತಿಯಾಗಿ ಹೋರಾಡಿದ. ಕೊನೆಗೆ ಅರಸ ಪೆರ್ಮಾಡಿರಾಯನ ಕಾಲಿಗೆರಗಿ ಕ್ಷಮೆ ಯಾಚಿಸುತ್ತಾನೆ. ಅಂದರೆ ಭಕ್ತಿಯ ನೆಪದಲ್ಲಿಯೇ ಆ ಪರಿಸ್ಥಿತಿಯನ್ನು ಹೋಗಲಾಡಿಸಿದರು. ಇಂತಹ ವ್ಯವಸ್ಥೆಗೆ ಆ ಕಾಲದಲ್ಲಿ ರಾಜನ ವಿರುದ್ಧ ಮಾತನಾಡುವುದೇ ದುಸ್ತರವಾಗಿತ್ತು. ಜೇಡರ ದಾಸಿಮಯ್ಯನ ಹಿರಿಯ ಸಮಕಾಲೀನನಾದ ಶರಣ ಕೆಂಬಾವಿ ಭೋಗಣ್ಣನ ಮನೆಗೆ ಶಿವನು ಹೊಲೆಯ ವೇಷಧರಿಸಿ ಬಂದಿದ್ದ ಈ ಶರಣ ಹೊಲೆಯನನ್ನು ಆದರದಿಂದ ಸತ್ಕರಿಸಿ ಪಾದೋದಕವನ್ನು ಸ್ವೀಕರಿಸುತ್ತಾನೆ. ಆಗ ಆ ಊರಿನ ಬ್ರಾಹಣರು ಅರಸ ಚಂದಿಮರಸನಿಗೆ ದೂರು ಕೊಡುತ್ತಾರೆ.

ವರ್ಣಭೇದ, ಜಾತಿಭೇದದ ತಳಹದಿಯ ಮೇಲೆ ಅಷ್ಟು ಅಸ್ಪೃಶ್ಯತೆಯನ್ನು ಹಾಗೂ ಮೇಲು ಕೀಳುಗಳನ್ನು ಆಧರಿಸಿ ವ್ಯಕ್ತಿ ವ್ಯಕ್ತಿಗೆ ಅಸಮಾನತೆಯನ್ನು, ಅನ್ಯಾಯವನ್ನು ಕೃತಕವಾಗಿ ಕಲ್ಪಿಸಿರುವ ಹಿಂದೂ ಸಮಾಜದ ಹೃದಯವು ಕಂಪಿಸುತ್ತಿರುವುದು ಸಹಜ. ಅಂತಹ ಸಮಾಜದಲ್ಲಿ ನ್ಯಾಯ ನೆಲೆಸಿದೆ ಎನ್ನಲು ಬರುವುದಿಲ್ಲ. ಧರ್ಮ ನ್ಯಾಯ ನೀತಿಗಳ ಮಾತುಗಳು ಗಾಳಿ ಗೋಪುರಗಳೇ ಹೊರತು ಈ ಸಮಾಜದ ತಳಹದಿಗಳಾಗಿ ಉಳಿದಿಲ್ಲ ಎಂಬುದು ಎಲ್ಲರಿಗೂ ಮನವರಿಕೆಯಾದ ಕಹಿ ಸತ್ಯ. ಈ ಸತ್ಯವನ್ನು ಹೇಳುವ ವ್ಯಕ್ತಿಯನ್ನು ಸಮಾಜಘಾತುಕನೆಂದು ಕರೆಯುವವರೂ ಇದ್ದಾರೆ. ಇದು ಹಿಂದೂ ಸಮಾಜದ ಒಂದು ಆಶ್ಚರ್ಯಕರವಾದ ನೀತಿ. ರಾಷ್ಟ್ರದ ಒಗ್ಗಟ್ಟನ್ನು, ವ್ಯಕ್ತಿಗೌರವವನ್ನು ಸ್ಥಾಪಿಸಲು ಈ ನೀತಿಯ ಪರಿವರ್ತನೆ ಆಗುವುದು ಅನಿವಾರ್ಯ.

'ಭಗವಾನ ಬುದ್ಧನು ತೋರಿಸಿಕೊಟ್ಟ ಅನುಕಂಪ ಮತ್ತು ಮಾನವಕುಲದ ಭ್ರಾತೃತ್ವಸಂದೇಶವನ್ನು ಹೊತ್ತು, ಈತನ ಅನುಯಾಯಿಗಳು ಅನೇಕ ದೇಶಗಳ ಎಲ್ಲೆಯನ್ನು ಮೀರಿ, ಸಹಸ್ರಾರು ಮೈಲಿಗಳನ್ನು ಕ್ರಮಿಸಿ ಅಲ್ಲಿನ ಜನತೆಯ ಮನಸ್ಸನ್ನು ಗೆದ್ದು ತಮ್ಮದನ್ನಾಗಿ ಮಾಡಿಕೊಳ್ಳಲು ಈ ನಾಡು ಕಾರಣವಾಯಿತು. ಅಶೋಕ ಚಕ್ರವರ್ತಿಯು ತನ್ನ ಪುತ್ರ ಹಾಗೂ ಪುತ್ರಿಯನ್ನು ಕಳುಹಿಸಿದ್ದುದು ಈ ನಾಡಿನಿಂದಲೇ' ಆದರೆ ಭಾರತೀಯರಿಗೆ ಬುದ್ಧನು ಕೊಟ್ಟ ಅನುಕಂಪ, ಭಾತೃತ್ವ ಸಂದೇಶ ಇಂದು ಈ ನಾಡಿನ ಸ್ವತ್ತಾಗದೆ, ಪರದೇಶಗಳಲ್ಲಿ ನೆಲೆಸಿವೆ. ಇದು ಅಂಧಶ್ರದ್ಧೆಯ ಧರ್ಮಧುರಂದರರು ಮಾಡಿದ ಕುತಂತ್ರ, ಈ ಮಾತುಗಳು ಕೆಲವರಿಗೆ ಕಹಿಯಾಗಿ ಕಾಣಬಹುದು, ಆದರೆ ಸತ್ಯಾಂಶವನ್ನು ಪ್ರಾಮಾಣಿಕನಾದವನು ಬಚ್ಚಿಡಲು ಸಾಧ್ಯವಿಲ್ಲ.

ತಳಸಮುದಾಯದವರು ಯಾರು ಅಂದರೆ ದಲಿತರು ಸಮಾಜದ ದಮನಕ್ಕೆ ಒಳಗಾದವರು. ಧಾರ್ಮಿಕವಾಗಿ, ಸಮಾಜಿಕವಾಗಿ ಹಾಗೂ ಆರ್ಥಿಕವಾಗಿ ತುಳಿಯಲ್ಪಟ್ಟು ಕೀಳು ಮಟ್ಟದಲ್ಲಿರುವವರು. ಅವರನ್ನು ಚಂಡಾಲರು, ಶ್ವಪಚರು ಇತ್ಯಾದಿ ಹೆಸರುಗಳಿಂದ ಗುರುತಿಸುತ್ತಾರೆ. "ಈ ನೆಲೆಯಲ್ಲಿ ವಚನ ಚಳುವಳಿಗೆ ಶಕ್ತಿ ತುಂಬಿದವರು ತಳವರ್ಗದ ಶರಣರು. ಯಾರನ್ನು ಇಂದು ದಲಿತ ಶರಣರು ಎಂದು ಕರೆಯುತ್ತೇವೆ ಅವರು. ಕಾಯಕ ಸತ್ಯನಿಷ್ಠೆಯನ್ನೆ ಬದುಕು ಎಂದು ಭಾವಿಸಿದ್ದಲ್ಲದೆ ಅದನ್ನೇ ನಂಬಿ ಬದುಕಿದವರು. ಕಾಯಕ ನೆಲೆಯಿಂದ ಬಂದ ಅವರೆಲ್ಲರೂ ಬಸವಣ್ಣನಿಗೆ ವಚನ ಕೊಟ್ಟವರು.

ಮಾತಿಗೆ ಬದ್ಧರಾದವರು., ಮಾತಿಗೆ ತಪ್ಪದೆ ನುಡಿದಂತೆ ನಡೆದವರು. ಜೀವ ಕಾರುಣ್ಯದ ಆ ಮಹಾಮಹಿಮರಲ್ಲಿ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಮಾದಾರ ದೊಡ್ಡಯ್ಯ, ತುರಗಾಹಿ ರಾಮಣ್ಣ, ಉರಿಲಿಂಗ ಪೆದ್ದಿ, ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಈ ಮುಂತಾದವರ ಜ್ಞಾನ, ವಿವೇಕ, ತ್ಯಾಗಗಳನ್ನು ಎಷ್ಟು ಸ್ಮರಿಸಿದರೂ ಸಾಲದು. ಮತ್ತೆ ಮತ್ತೆ ನೆನಪಿಸುವ ವ್ಯಕ್ತಿತ್ವ ಅವರದು"೧.

ವ್ಯಕ್ತಿಯ ಹುಟ್ಟುವಿಕೆಯನ್ನು ಆಧರಿಸಿದ ಇಂದಿನ ಜಾತಿ ವ್ಯವಸ್ಥೆಯು ರಾಮಾಯಣ–ಮಹಾಭಾರತ ಕಾಲದಲ್ಲಿ ಇರಲಿಲ್ಲ. ಅಂದಿನ ಚಂಡಾಲನೊಬ್ಬನು ತಪಸ್ಸನ್ನಾಚರಿಯೋ, ಜ್ಞಾನಸಂಪಾದನೆಯಿಂದಲೋ ಅಥವಾ ಯಜ್ಞಯಾಗಾದಿಗಳನ್ನು ಮಾಡಿಯೋ ಬ್ರಾಹ್ಮಣನಾಗಬಹುದಾಗಿತ್ತು. ಇಲ್ಲವೆ ತನ್ನ ಶಕ್ತಿ, ಸಮರ್ಥ್ಯದಿಂದ ರಾಜ್ಯ ಸಂಪಾದಿಸಿ ಕ್ಷತ್ರಿಯನಾಗಿ ಮೆರೆಯ ಬಹುದಿತ್ತು. ಹಾಗೆಯೇ ಒಬ್ಬ ಬ್ರಾಹ್ಮಣ ಅಥವಾ ಕ್ಷತ್ರಿಯನು ಕೆಲವಾರು ನಡವಳಿಕೆಗಳಿಂದ ಚಂಡಾಲನಾಗಿ ಪರಿವರ್ತನೆಗೊಳ್ಳುವವನಾಗಿದ್ದನು. ಒಮ್ಮೆ ಚಂಡಾಲನಾದವನು ಜೀವನಪರ್ಯಂತ ಚಂಡಾಲನಾಗಿಯೇ ಬಾಳಬೇಕಾದ ಪ್ರಮೇಯವಿರಲಿಲ್ಲ. ತನ್ನ ನಡತೆ ಮತ್ತು ಗುಣಗಳನ್ನು ಉತ್ತಮಪಡಿಸಿಕೊಂಡು ಬ್ರಾಹ್ಮಣನಾಗಿರುವುದು ಅನೇಕ ಸಂದರ್ಭಗಳಲ್ಲಿ ಕಂಡುಬರುತ್ತದೆ. ಊಟ–ಉಪಚಾರಗಳು ಮತ್ತು ವೈವಾಹಿಕ ಸಂಬಂಧಗಳಲ್ಲಿಯೂ ಯಾರೊಬ್ಬರಿಗೂ ನಿಷೇಧ ಇರುವುದು ಕಾಣುವುದಿಲ್ಲ. ಉದಾಹರಣೆಗೆ ಕಾಡುಜನರ ಗುಂಪಿನವಳಾದ ಶಬರಿಯ ಕೈಯಿಂದ ಕ್ಷತ್ರಿಯನಾದ ಶ್ರೀರಾಮ ಆಹಾರ ಸ್ವೀಕರಿಸಿದನು. ವೈವಾಹಿಕ ಸಂಬಂಧವನ್ನು ನೋಡುವುದಾದರೆ ಕ್ಷತ್ರಿಯನಾದ ಯಯೂತಿ ಬ್ರಾಹ್ಮಣ ಕನ್ಯೆ ದೇವಯಾನಿಯನ್ನು, ಬ್ರಾಹ್ಮಣರಾದ ವಸಿಷ್ಠರು ಮತಂಗ ಕನ್ಯೆ ಅರುಂಧತಿಯನ್ನು ಮತ್ತು ಕ್ಷತ್ರಿಯ ಚಕ್ರವರ್ತಿ ಶಂತನು ಬೆಸ್ತರವಳಾದ ಮತ್ಸ್ಯಗಂಧಿನಿಯನ್ನು ಮದುವೆಯಾದುದು ಅಂತರ್‌ವರ್ಣೀಯ ವಿವಾಹಕ್ಕೆ ಸಾಕ್ಷಿ. ಆಗ ಇವು ಸರ್ವಸಾಮಾನ್ಯವೆಂಬುದಕ್ಕೆ ಸಾಕ್ಷಿಗಳು. ಭೀಮಸೇನ ಹಿಡಂಬಿಯನ್ನು ಲಗ್ನವಾದುದು ಮತ್ತು ರಾವಣನು ಸೀತಾಸ್ವಯಂವರದಲ್ಲಿ ಭಾಗವಹಿಸಿರುವ ಸನ್ನಿವೇಶಗಳಿಂದ ಆರ್ಯ ಅನಾರ್ಯರಲ್ಲಿಯೂ ಸಹ ರಕ್ತಸಂಬಂಧ ಮಾಡಬಹುದಾದ ಅವಕಾಶಗಳು ಆಗಿನ ಕಾಲದಲ್ಲಿ ಜಾರಿಯಲ್ಲಿದ್ದವೆಂದು ತಿಳಿದುಬರುತ್ತದೆ. ವ್ರಾತ್ಯಸ್ತೋಮನೆಂಬ ಯಾಗವನ್ನು ಆಚರಿಸಿ ಅನಾರ್ಯರನ್ನು ಆರ್ಯರನ್ನಾಗಿ ಬದಲಾಯಿಸಲು ಸಾಧ್ಯವೆಂಬುದಕ್ಕೆ ವೇದಗಳಲ್ಲಿ ಆಧಾರವಿದೆ. ಈ ಪದ್ಧತಿ ೧೨ ನೇ ಶತಮಾನದವರೆಗೂ ರೂಢಿಯಲ್ಲಿದ್ದಿತು.

ಮುಂದೆ ೧೨ನೇ ಶತಮಾನದಲ್ಲಿ ದಲಿತೋದ್ಧಾರಕ್ಕಾಗಿ ಮಾಡಿದ ಪ್ರಯತ್ನವನ್ನು ನೋಡಿದರೆ ಆಗಿನ ಕಾಲದ ಯಾವ ಸಮಾಜ ಸುಧಾರಕನೂ ಆಶ್ಚರ್ಯಪಡುವಂತಾಗುತ್ತದೆ. ವರ್ಣಭೇದ ಜಾತಿ ಕಟ್ಟಳೆಗಳು ಕ್ರೂರ ಆಚರಣೆಯಲ್ಲಿದ್ದ ಆ ಕಾಲದಲ್ಲಿ ಅಂದರೆ ದಲಿತರು ಸವರ್ಣೀಯರು ಬೀದಿಗಳಲ್ಲಿ ಓಡಾಡುವುದು, ಅವರ ಸಂಪರ್ಕ ಬೆಳೆಸುವುದು ಮತ್ತು ಅವರಿಗೆ ಕಾಣಿಸಿಕೊಳ್ಳುವುದು ಕೂಡ ಅಪವಿತ್ರವೆಂದು ತಿಳಿದಿದ್ದ ಜನರೇ ಅಧಿಕವಾಗಿದ್ದ ಆ ಕಾಲದಲ್ಲಿ ಬಸವಣ್ಣನವರು ಅಸ್ಪೃಶ್ಯತೆಯ

ವಿರುದ್ಧ ಸಿಡಿದೆದ್ದು, ಅದರ ನಿರ್ಮೂಲಕ್ಕೆ ಪ್ರಥಮ ಹೆಜ್ಜೆಯಾಗಿ ಸಹಭೋಜನ ಮತ್ತು ಅಂತರ್ಜಾತೀಯ ವಿವಾಹಗಳಿಗೆ ಪ್ರೋತ್ಸಾಹ ಕೊಟ್ಟಿರುವುದು ಶ್ಲಾಘನೀಯವಾದುದು. ಹಿಂದೂ ಧರ್ಮಗ್ರಂಥಗಳಲ್ಲಿ ಅಂದರೆ ವೇದೋಪನಿಷತ್ತುಗಳಲ್ಲಿ ಅಸ್ಪೃಶ್ಯ ಎಂಬ ಜಾತಿ ಇದ್ದಿತೆಂದು ಎಲ್ಲಿಯೂ ಕಾಣದಿರುವಾಗ ಅದನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿ, ಸಮಾಜದ ಒಂದು ದೊಡ್ಡ ಜನಾಂಗವನ್ನೇ ಹೀನಾಯ ಸ್ಥಿತಿಯಲ್ಲಿಟ್ಟಿರುವುದು ಅಕ್ಷಮ್ಯ ಅಪರಾಧವೆಂದು ಬಸವಣ್ಣನವರು ಮನಗಂಡರು. ಕೆಳಸ್ತರದ ಜನರನ್ನು ಅಸ್ಪೃಶ್ಯರೆಂದು ಇನ್ನೂ ಮುಂದುವರಿಸುವುದು ಮಹಾ ಪಾಪಕಾರ್ಯವೆಂದು ತಿಳಿದು ಬಸವಣ್ಣನವರು ಅವರನ್ನು ವೀರಶೈವ ಧರ್ಮದಲ್ಲಿ ಸೇರಿಸಿಕೊಂಡು ಸರ್ವರಿಗೂ ಲೇಸನ್ನೇ ಬಯಸಿದರು. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಪರಮಶ್ರೇಷ್ಠ ಅಭಿಪ್ರಾಯವೆಂದರೆ ಸಮಾಜವನ್ನು ಜಾತಿಯ ಪಿಡುಗಿನಿಂದ ಪಾರು ಮಾಡಬೇಕೆಂಬ ಉತ್ಕಟ ಆಕಾಂಕ್ಷೆಯೇ ಆಗಿದೆ. ಉದಾಹರಣೆಯಾಗಿ,

'ಕೊಲುವವನೇ ಮಾದಿಗ ಹೊಲಸು ತಿಂಬುವವನೇ ಹೊಲೆಯ

ಕುಲವೇನೇ ಆವಂದಿರ ಕುಲವೇನೋ?

ಸಕಲ ಜೀವಾತ್ಮರಿಗೆ ಲೇಸನೇ ಬಯಸುವ

ನಮ್ಮ ಕೂಡಲಸಂಗನ ಶರಣರೇ ಕುಲಜರು' (ವ.ಶಾ.ಸಾ.ವ. ೧೬೬೦)

ಯಾರು ಪ್ರಾಣಿಗಳನ್ನು ಕೊಲ್ಲುತ್ತಾರೆಯೋ ಯಾರು ಮಧ್ಯ ಮಾಂಸಗಳನ್ನು ತಿನ್ನುತ್ತಾರೆಯೋ ಅವರು ಹೀನಕುಲದವರು, ಹಾಗಾದರೆ ಇಂದಿನ ಸಮಾಜದಲ್ಲಿ ಯಾರು ಕೀಳು, ಯಾರು ಮೇಲು ಎಂದು ಕಂಡುಹಿಡಿಯುವುದಕ್ಕೆ ಸಾಧ್ಯವೇ? ನೂರಕ್ಕೆ ನೂರು ಜನ ಈಗ ಆಹಾರ ಮತ್ತು ಆಚಾರಗಳಿಂದ ಉತ್ತಮರೆಂದು ಹೇಳಿಕೊಳ್ಳಲು ಅರ್ಹರೇ? ಎಂದು ವಿಚಾರ ಮಾಡಬೇಕಾಗುತ್ತದೆ.

'ದೂಷಕನೊಬ್ಬ ದೇಶವ ಕೊಟ್ಟರೆ,

ಆಸೆ ಮಾಡಿಯವನ ಹೊರೆಯಲಿರಬೇಡ,

ಮಾದಾರ ಶಿವಭಕ್ತನಾದರೆ

ಆತನ ಹೊರೆಯಲ್ಲಿ ಭೃತ್ಯನಾಗಿರ್ಪುದು ಕರಲೇಸಯ್ಯ,

ತೊತ್ತಾಗಿರ್ಪುದು ಕರಲೆಸಯ್ಯಾ,

ಕಾಡಸೊಪ್ಪ ತಂದು ಓಡಿನಲ್ಲಿ ಹುರಿದಿಟ್ಟು

ಕೂಡಿಕೊಂಡಿಪ್ಪುದು ನಮ್ಮ ಕೂಡಲಸಂಗನ ಶರಣರ.' (ವ.ಶಾ.ಸಾ.ವ. ೭೦೧)

ಮಾದರ ಜಾತಿಯವನು ಜ್ಞಾನಿಯಾಗಿ, ಶಿವಭಕ್ತನಾಗಿದ್ದರೆ ಅವನ ಮನೆಯಲ್ಲಿ ಸೇವಕನಾಗಿರುವುದು ಒಳ್ಳೆಯದೆಂದು, ಕೆಟ್ಟವರು ದೇಶವನ್ನೇ ಕೊಟ್ಟರೂ ಅದನ್ನು ಸ್ವೀಕರಿಸುವುದು ಮತ್ತು ಕೆಟ್ಟ ಜನರ ಸಂಗಡ ವಾಸಮಾಡುವುದು ಪಾಪಕರವೆಂದು ಈ ವಚನದಿಂದ ತಿಳಿಯಬಹುದಾಗಿದೆ.

ಈ ಎಲ್ಲ ವಚನಗಳಲ್ಲಿ ಮುಖ್ಯವಾಗಿ ಬಸವಣ್ಣನವರು ಶ್ವಪಚರೆಂದು ಕರೆಯಲ್ಪಡುವ ಜನರ ಮೇಲೆ ಇಟ್ಟಿದ್ದ ದಯೆ, ವಿಶ್ವಾಸ, ಅವರನ್ನು ಸಮಾಜದ ಇತರರಂತೆ ಮಾಡಬೇಕೆಂಬ ಅಭಿಲಾಷೆಯನ್ನೇ ಕಾಣಬಹುದು. ಬಸವಣ್ಣನವರು ಸರ್ವರನ್ನು ಸಮಭಾವನೆಯಿಂದ ಕಂಡು ಅವರವರ ಗುಣ-ಕರ್ಮಗಳಿಂದ ಜನರಿಗೆ ಗೌರವ ಕೊಡಬೇಕೆ ವಿನ ಹುಟ್ಟಿನಿಂದಲ್ಲ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ಸರ್ವರಿಗೂ ಸಮಾನವಾಗಿ ಲಿಂಗಧಾರಣೆ ಮಾಡಿಸಿ, ಅನುಭವ ಮಂಟಪದಲ್ಲಿ ಸದಸ್ಯರನ್ನಾಗಿಸಿಕೊಂಡು, ಎಲ್ಲ ಸದಾವಕಾಶವನ್ನು ಕಲ್ಪಿಸಿ ಸಾಮಾನ್ಯ ಶ್ವಪಚನೂ ಶರಣಶ್ರೇಷ್ಠ ಅಥವಾ ಮಹಾಜ್ಞಾನಿಯಾದ ವಚನಕಾರನಾಗುವಂತಹ ಯೋಗ್ಯತೆಯನ್ನು ಗಳಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ. ಎಲ್ಲರಿಗೂ ಶಿವಾನುಭವವನ್ನು ತಂದುಕೊಟ್ಟು, ನಡೆನುಡಿಗಳಲ್ಲಿ ಉಳಿದವರಿಗೆ ಮಾರ್ಗದರ್ಶನ ಮಾಡಿದ್ದಾರೆ ಈ ತಮ್ಮ ಮಹೋನ್ನತ ಕಾರ್ಯದಿಂದ ಬಸವಣ್ಣನವರು ಲೋಕಪೂಜ್ಯರಾದರು. ತಾವೊಬ್ಬರು ಅಸ್ಪೃಶ್ಯರಿಗೆ ಅನುಕಂಪ ತೋರಿ, ತಮ್ಮ ಸಹವಾಸಿಗಳು ವಿರುದ್ಧವಾಗಿ ನಡೆದರೂ, ಕಂಡೂ ಕಾಣದಂತೆ ಇರುವ ಕೆಲವು ನಾಗರಿಕ ಸುಧಾರಕರಂತೆ ನಡೆದುಕೊಳ್ಳಲಿಲ್ಲ. ಬಸವಣ್ಣನವರು ತಮ್ಮ ಎಲ್ಲ ಶರಣರಲ್ಲಿಯೂ ಸಮಾನತೆಯ ಭಾವನೆಯನ್ನು ನೆಲೆಗೊಳಿಸಿದವರೆಂಬುದನ್ನು ಇತರ ಶರಣರ ವಿಚಾರದಾರೆಯಿಂದ ತಿಳಿಯಬಹುದಾಗಿದೆ.

ಒಟ್ಟಾರೆ ಬಸವಣ್ಣನವರು ಮತ್ತು ಇತರ ಶರಣರು ದಲಿತರನ್ನು ತಮ್ಮಲ್ಲಿ ಸೇರಿಸಿಕೊಂಡು ಜ್ಞಾನಮಾರ್ಗ, ಭಕ್ತಿಮಾರ್ಗಗಳನ್ನು ಅವರಿಗೆ ತಿಳಿಸಿ ಗೌರವ ಕೊಟ್ಟಿದ್ದಾರೆ. ಆ ಕಾಲದಲ್ಲಿ ಬಸವಣ್ಣನವರು ಮೂಡಿಸಿದ ಹರಳಯ್ಯ ಮಧುವರಸರ ಸಂಬಂಧದಿಂದ ಕಲ್ಯಾಣನಗರವೇ ನಾಶವಾಯಿತಾದರೂ ಲೋಕಕಲ್ಯಾಣಕ್ಕೆ ಮಾರ್ಗದರ್ಶನವಾಯಿತು. ಒಳ್ಳೆಯ ಕಾರ್ಯಕ್ಕೂ ವಿರೋಧಿಗಳು ಇರುವುದು ಸ್ವಾಭಾವಿಕ, ಆದರೆ ಧೈರ್ಯದಿಂದ ಕಾರ್ಯ ಪ್ರಾರಂಭಿಸಿ ಹಿಡಿದ ಅಸ್ಪೃಶ್ಯೋದ್ಧಾರ ಮತ್ತು ಜಾತಿ ನಿರ್ಮೂಲನವೆಂಬ ಮಹಾಕಾರ್ಯಕ್ಕೆ ತಮ್ಮ ಜೀವನವನ್ನೇ ಬಲಿದಾನ ಮಾಡಿದ ವಚನಕಾರರಲ್ಲಿ ತಳಸಮುದಾಯಗಳ ವೈಚಾರಿಕತೆಯ ಲೋಕಾನುಸಂಧಾನ, ಸಮಾನತೆಯ ಮತ್ತು ಲೋಕಾನುಭವವನ್ನು ಈ ಕೆಳಕಂಡಂತೆ ನೋಡಬಹುದು.

ಶರಣರ ವಚನಗಳು

೪.೧. ಅಂಬಿಗರ ಚೌಡಯ್ಯ:

'ಕಾಯಕದಲ್ಲಿ ನಿರತನಾದಡೆ
ಗುರುದರ್ಶನ ವಾದಡೂಮರೆಯಬೇಕು
ಲಿಂಗ ಪೂಜೆಯಾದಡು ಮರೆಯಬೇಕು
ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು' (ವ.ಶಾ.ಸಾ.ವ. ೧೭೧೫)

ಶರಣ ಆಯ್ದಕ್ಕಿ ಮಾರಯ್ಯನ ಈ ವಚನದಂತೆ ಗುರುಲಿಂಗ ಜಂಗಮಕ್ಕಿಂತಲೂ ಕಾಯಕವು ಶ್ರೇಷ್ಠವಾದುದೆಂದು ಹೇಳಿ ಶರಣರು ಕಾಯಕದ ಮಹತ್ವವನ್ನು ತಿಳಿಸಿದ್ದಾರೆ. ಬಸವಯುಗದ ಶರಣರೆಲ್ಲ ಕಾಯಕ ಜೀವಿಗಳಾಗಿದ್ದು ಕಾಯಕದ ಕಲಿಗಳಾಗಿದ್ದರು. ಜೀವನೋಪಾಯಕ್ಕೆ ಒಂದಿಲ್ಲೊಂದು ಕಾಯಕ ಮಾಡಿಕೊಂಡು ಆಧ್ಯಾತ್ಮ ಸಾಧನೆ ಮಾಡುತ್ತ ಸಮಾಜಕ್ಕೆ ದಾರಿದೀಪವಾಗಿದ್ದರು. ಅಂಥ ಕಾಯಕಯೋಗಿ ಶರಣರಲ್ಲಿ ಅಂಬಿಗರ ಚೌಡಯ್ಯನ ಹೆಸರು ಬಸವಾದಿ ವಚನಕಾರರ ಸಾಲಿನಲ್ಲಿ ಶಾಶ್ವತವಾಗಿ ಉಳಿದಿದೆ.

ಬಸವಣ್ಣನವರ ಸಮಕಾಲೀನವಾದ ಅಂಬಿಗರ ಚೌಡಯ್ಯನು ಕಲ್ಯಾಣದ ತ್ರಿಪುರಾಂತಕ ಕೆರೆಯಲ್ಲಿ ದೋಣಿ ನಡೆಸುವ ಕಾಯಕ ಕೈಗೊಂಡಿದ್ದನು. ಅವನು ತನ್ನ ಆಧ್ಯಾತ್ಮವೆಂಬ ದೋಣಿಯನೇರಿದ ಭಕ್ತರನ್ನೆಲ್ಲ ಸಂಸಾರವೆಂಬ ಸಾಗರ ದಾಟಿಸಿ ಮೋಕ್ಷದ ಬಾಗಿಲಿಗೆ ಕೊಂಡೊಯ್ಯುವ ಮಾಂತ್ರಿಕನಾಗಿದ್ದನು. ಅವನ ಚರಿತ್ರೆಯ ವಿವರಗಳು ಇದುವರೆಗೆ ದೊರೆತಿರುವುದಿಲ್ಲ. ಅವನೊಬ್ಬ ಶ್ರೇಷ್ಠ ವಚನಕಾರನಾಗಿದ್ದನು. ಅವನು ಬರೆದ ೨೭೭ ವಚನಗಳು ದೊರಕಿವೆ. ತನ್ನ ಹೆಸರನ್ನೇ ವಚನಾಂಕಿತವಾಗಿ ಬಳಸಿಕೊಂಡು ವಚನ ಬರೆದು ದಿಟ್ಟತನದ ಎದೆಗಾರಿಕೆಯನ್ನು ತೋರಿಸಿದ್ದಾನೆ. ಇವನ ವಚನಗಳಿಂದ ಇವನ ವ್ಯಕ್ತಿತ್ವವನ್ನು ತಿಳಿಯಬಹುದು. ಗುರುರಾಜ ಚಾರಿತ್ರ್ಯ, ಭೈರವೇಶ್ವರ ಕಾವ್ಯಗಳಲ್ಲಿ ಇವನ ಹೆಸರು ಬಂದಿದೆ.

"ಅಂಬಿಗರ ಚೌಡಯ್ಯ ಇಡೀ ಮಾನವ ಕುಲವನ್ನು ಒಂದು ವಿಶ್ವಕುಟುಂಬವಾಗಿ ಕಂಡವನು. ಜಂಗಮಪ್ರೇಮಿಯಾದ ಇವನು ಜಗದಭರಿತವಾದ ಚೈತನ್ಯವೇ ಜಂಗಮವೆಂದು ನಂಬಿ ಶ್ರದ್ಧೆಯಿಂದ ಅದನ್ನು ಆಚರಣೆಗೆ ತಂದನು, ಎಲ್ಲಲ್ಲಿಯೂ ಆ ಜಂಗಮಜ್ಯೋತಿಯನ್ನು ಕಂಡವನು. ಹೀಗಾಗಿ ಅವನು ಎಲ್ಲರನ್ನೂ ಪ್ರೀತಿಸುತ್ತಾನೆ, ಎಲ್ಲರೂ ಆತ್ಮಸಖಿಗಳೂ ಸಮಾಜಮುಖಿಗಳೂ ಆಗಿ ವಿಶ್ವದಲ್ಲಿ ಶಾಂತಿ ಸಾಮರಸ್ಯ ಸ್ಥಾಪಿಸಲೆಂದು ಹಂಬಲಿಸುತ್ತಾನೆ. ಇದಕ್ಕೆ ವಿರುದ್ಧವಾದ ನಡುವಳಿಕೆ ಯಾರಲ್ಲಾದರೂ ಕಂಡರೆ ಅವರನ್ನು ಬೈದು ತಿದ್ದುತ್ತಾನೆ- ಮನೆಯ ಯಜಮಾನ ಮನೆಮಂದಿಯೆಲ್ಲ ಒಳ್ಳೆವರಾಗಿ ಸುಖವಾಗಿ ಬದುಕಲೆಂದು ಹಂಬಲಿಸಿ ಯಾರಾದರೂ ತಪ್ಪು ದಾರಿ ಹಿಡಿದರೆ ಅವರನ್ನು ಬೈದು ತಿದ್ದುವಂತೆ. ಹೀಗಾಗಿ ಚೌಡಯ್ಯನಲ್ಲಿ ಮೊದಲನೆಯದಾಗಿ ನಾವು ಒಬ್ಬ ಬಹುದೊಡ್ಡ ದಾರ್ಶನಿಕನನ್ನು ಕಾಣುತ್ತೇವೆ, ನಂತರ ತನ್ನ ಸುತ್ತಣ ಬದುಕು ಹಸನಾಗಬೇಕೆನ್ನುವ ಜೀವ ತುಡಿತವನ್ನು ಕಾಣುತ್ತೇವೆ. ಈ ಆತ್ಮಶಖಿತ್ವ ಮತ್ತು ಸಮಾಜಮುಖಿತ್ವ, ಈ ಜೀವನ್ಮುಕ್ತಿತ್ವ ಮತ್ತು ವಿಶ್ವಭ್ರಾತೃತ್ವ ಜತೆ ಜತೆಗೆ ಚೌಡಯ್ಯನಲ್ಲಿ ಮೇಳೈಸಿದುದು ಅನನ್ಯ" ೨.

ಚೌಡಯ್ಯನ ಲೋಕಾನುಭವ ಅಮೋಘವಾಗಿತ್ತು. ಸಾಗರದಷ್ಟು ಆಳ ಆಕಾಶದಷ್ಟು ಎತ್ತರವಾಗಿತ್ತು. ಅವನು ಅಂತಿಂಥ ಅಂಬಿಗನಾಗಿರಲಿಲ್ಲ ಒಡಲಿಲ್ಲದ ಅಂಬಿಗ, ಕಡೆಗಾಣಿಸುವ ಅಂಬಿಗ, ಕಾಸಿನ ಆಸೆ ತೊರೆದ ಅಂಬಿಗ, ಆತ್ಮವಿಶ್ವಾಸದ ಆಧ್ಯಾತ್ಮ ಸಂಪನ್ನನಾದ ಅಂಬಿಗನೆಂದು ಕವಿಗಳು ಅವನ ವರ್ಣನೆ ಮಾಡಿದ್ದಾರೆ.

ಅಂಬಿಗರ ಚೌಡಯ್ಯನ ವಚನಗಳಲ್ಲಿ ವೈಚಾರಿಕತೆ ಮತ್ತು ಸಮಾನತೆ, ಲೋಕನೀತಿ, ಸಾಮಾಜಿಕ ಕಳಕಳಿ, ನೈಜತೆ, ನಿಷ್ಠುರತೆ ಬಂಡಾಯ ಪ್ರವೃತ್ತಿ ಎದ್ದು ಕಾಣುತ್ತವೆ. ಅಂಬಿಗರ ಚೌಡಯ್ಯನದು ನೇರ ನಡೆ, ನೇರ ನುಡಿ. ಡಾಂಭಿಕತೆ ಆತನಿಗೆ ಸೇರದು. ವೇಷ ಡಂಭಕರನ್ನು ಕಂಡಾಗ ಆತ ಕಿಡಿಕಿಡಿಯಾಗುತ್ತಾನೆ, ಮಾತು ಕತ್ತಿಯಂತಾಗುತ್ತದೆ. ಆ ಕತ್ತಿ ಕಟುಕನ ಕೈಯಲ್ಲಿಯ ಕತ್ತಿಯಲ್ಲ. ಶಸ್ತ್ರಚಿಕಿತ್ಸೆಗೆ ಸಿದ್ಧವಾದಂತಹ ವೈದ್ಯನ ಕೈಯಲ್ಲಿಯ ಕತ್ತಿ. ನಯನುಡಿ, ಬಿನ್ನಹಗಳಿಗೆ ಬಾಗದ ಬಂಡೆ ಮನಸ್ಸುಗಳಿಗೆ ಅಂಬಿಗರ ಚೌಡಯ್ಯನ ಒರಟು ಮಾತೇ ಮದ್ದು. ನಡೆ–ನುಡಿಯಲ್ಲಿ ತಪ್ಪಿದವರು ಕಂಡರೆ ಸಾಕು ಅವರನ್ನು 'ಪಡಿಹಾರಿ, ಉತ್ತಣ್ಣನ ಎಡ ಪಾದುಕೆ ತೆಗೆದುಕೊಂಡು ಲಟಲಟನೆ ಹೊಡೆ' ಎನ್ನುತ್ತಾನೆ. 'ಬಾಯ ಮೇಲೆ ಅರ್ಧಮಣದ ಪಾದರಕ್ಷೆಯ ತೆಗೆದುಕೊಂಡು ಮಾಸಿ ಕಡಿಮೆಯಿಲ್ಲದೆ, ತೂಗಿ ತೂಗಿ ಟೊಕ ಟೊಕನೆ ಹೊಡೆ' ಎನ್ನುತ್ತಾನೆ.

ಲಿಂಗಧಾರಿಗಳಾದ ಮೇಲೆ ಜಾತಿ–ಕುಲವನ್ನೆಣಿಸಬಾರದು ಎಂಬುದು ಶರಣ ಸಿದ್ಧಾಂತದ ಒಂದು ಬಹುಮುಖ್ಯ ತತ್ತ್ವ. ಈ ಸಿದ್ಧಾಂತವನ್ನೊಪ್ಪಿಕೊಂಡವರೇ ಅದಕ್ಕೆ ವಿರೋಧವಾಗಿ ನಡೆದರೆ? ದಾರಿ ತೋರಿಸುವ ಗುರುಗಳೇ ದಾರಿ ತಪ್ಪಿ ನಡೆದರೆ ಚೌಡಯ್ಯ ಕೆರಳುತ್ತಾನೆ. ಕುಲಹೀನ ಶಿಷ್ಯನೊಬ್ಬನಿಗೆ ಅನುಗ್ರಹ ಮಾಡಿದ ಮೇಲೆ ಆತನ ಜೊತೆಗೆ ಸಹಭೋಜನ ಮಾಡಬೇಕಾದುದು ಗುರುವಿನ ಧರ್ಮ. ಅದನ್ನುಳಿದು ಆತನ ಮನೆಯಲ್ಲಿ ಪ್ರಸಾದ ಸ್ವೀಕರಿಸಿದರೆ ತನ್ನ ಜಂಗಮತನಕ್ಕೆ ಚ್ಯುತಿ ಬರುತ್ತದೆ ಎಂದು ನಂಬುವ ಗುರುವನ್ನು ತೀಕ್ಷ್ಣ ಮಾತುಗಳಲ್ಲಿ ತರಾಟೆಗೆ ತೆಗೆದುಕೊಳ್ಳುವ ಅಂಬಿಗರ ಚೌಡಯ್ಯನ ಈ ವಚನ

> **'ಕುಲಹೀನ ಶಿಷ್ಯಂಗೆ ಅನುಗ್ರಹ ಮಾಡಿ**
> **ತಿರುಗಿ ಅವನ ಮನೆಯಲ್ಲಿ ಉಣಬಾರದೆಂದು,**
> **ಅಕ್ಕಿ ಕಣಕವ ಕೊಂಡು ಹೋಗುವ ಗುರುವಿನ ಕಂಡರೆ,**
> **ಕೆಡವಿ ಹಾಕಿ, ಮೂಗನೆ ಕೊಯ್ದು,**
> **ಇಟ್ಟಂಗಿಯ ಕಲ್ಲಿಲೆ ತಿಕ್ಕಿ, ಸಾಸುವೆಯ ಹಿಟ್ಟನೆ ತಳಿದು,**
> **ಮೇಲೆ ಲಿಂಬಿಯ ಹುಳಿಯನೆ ಹಿಂಡಿ,**
> **ಪಡುವ ಗಾಳಿಗೆ ಹಿಡಿಯೆಂದಾತ ನಮ್ಮ ಅಂಬಿಗರ ಚೌಡಯ್ಯ'.** (ವ.ಶಾ.ಸಾ.ವ. ೧೬೪)

ಚೌಡಯ್ಯ ವಿಧಿಸೆಂದು ಹೇಳುವ ಶಿಕ್ಷೆಯನ್ನು ಕೇಳಿಯೇ ಗುರು ಹೆದರಿ ಸರಿಯಾಗಿ ನಡೆಯಬೇಕು, ಹಸಿವಾದವನು ಹಣ್ಣು ಹಣ್ಣು ಎಂದಾಕ್ಷಣ ಹಣ್ಣು ತಿಂದಂತಾಗದು, ಕತ್ತಲೆಯಲ್ಲಿ ಕುಳಿತು ದೀಪ, ದೀಪ ಎಂದರೆ ಕತ್ತಲೆ ದೂರಾಗುವುದಿಲ್ಲ. ಅಂತೆಯೇ ಮಾಡುವ ಪಾಪಗಳೆಲ್ಲ ಮಾಡಿ ಅನಂತರ ಶಿವ, ಶಿವ ಎಂದರೆ ಪಾಪ ದೂರಾಗದು. ದೋಣಿ ನಡೆಸುವ ಕಾಯಕದ

ಅಂಬಿಗರ ಚೌಡಯ್ಯ ವ್ಯಕ್ತಪಡಿಸುವ ಈ ವಿಚಾರ ಈಗಿನ ಯಾವ ವಿಚಾರವಾದಿಗಳಿಗೂ ಕಡಿಮೆಯಾದುದೇನಲ್ಲ.

ಅಂಬಿಗರ ಚೌಡಯ್ಯನ ಎಲ್ಲ ವಚನಗಳು ಈ ರೀತಿ ಉಗ್ರ ಭಾಷೆಯಲ್ಲಿಯೇ ಇವೆಯಂತಲ್ಲ, ನಡೆಯೊಂದು ಪರಿ, ನುಡಿಯೊಂದು ಪರಿಯಾಗಿರುವ ವೇಷಧಾರಿ ಮೋಸಗಾರನು, ಕಂಡಾಗ ಉರಿದೇಳುವ ಚೌಡಯ್ಯ ಅವರನ್ನು ಕಟು ನುಡಿಗಳಲ್ಲಿ ಖಂಡಿಸುತ್ತಾನಾದರೂ, ಬರೀ ಪೂಜೆಯಲ್ಲಿಯೇ ಮೈಮರೆತು ಅದರಲ್ಲಿಯೇ ಸಂಭ್ರಮಿಸುವ ವ್ಯಕ್ತಿಗಳನ್ನು ಕಂಡು ಸಂತಾಪ ಪಡುತ್ತಾನೆ. ಅಲ್ಲಿ ಆತನ ಮಾತು ವ್ಯಂಗಕ್ಕೆ ತಿರುಗುತ್ತದೆ. ಅವರ ಬಗ್ಗೆ ಸಿಟ್ಟಿಲ್ಲ , ಸಾತ್ವಿಕ ಸಂತಾಪವಿದೆ. ಅಂಥದೊಂದು ವಚನ ಇಂತಿದೆ.

'ಅಯ್ಯ! ಪಾಷಾಣಕ್ಕೆ ಗಿರಿ ಸವೆದವು, ಪತ್ರೆಗೆ ತರು ಸವೆದವು,
ಸಪ್ತ ಸಾಗರಂಗಳು ಮಜ್ಜನಕ್ಕೆ ಸವೆದವು, ಅಗ್ನಿ ಧೂಪಕ್ಕೆ ಸವೆಯಿತ್ತು.
ವಾಯು ಕಂಪಿತಕ್ಕೆ ಸವೆಯಿತ್ತು.
ಉಘೆ! ಚಾಂಗು ಭಲಾ! ಎಂಬ ಶಬ್ಧಕ್ಕೆ ಸವೆಯಿತ್ತು, ಎನಗಿನ್ನೆಂತು!
ಉಮೇಶನ ಶರಣರು ಮಹಾಮನೆಯಲ್ಲಿ ಶಿವಲಿಂಗಾರ್ಚನೆಗೆ
ಕುಳ್ಳಿರ್ದಡೆ, ನಾನವರ ಪಾದರಕ್ಷೆಯ
ಕಾಯ್ದುಕೊಂಡಿದ್ದೆನಂಬಿಗರ ಚೌಡಯ್ಯ'. (ಸ.ವ.ಸಂ:೬ ವ.ಸಂ, ೩೫)

ಬರೀ ಲಿಂಗಪೂಜೆಯಲ್ಲಿಯೇ ಕಾಲ ಕಳೆವವರನ್ನು ನಯವಾಗಿ ವಿಡಂಬಿಸುವಂತಿದೆ ಈ ವಚನ. ಪೂಜೆಗಾಗಿ ದೇವರನ್ನು ನಿರ್ಮಿಸಲು ಬೆಟ್ಟದೊಳಗಿನ ಕಲ್ಲುಗಳೆಲ್ಲಾ ಸವೆದವಂತೆ! ಆ ದೇವರಿಗೆ ಪತ್ರೆ ಏರಿಸಲೋಸುಗ ತಂದ ಪತ್ರೆಗಳಿಂದಾಗಿ ಗಿಡಗಳು, ಮಜ್ಜನಕ್ಕೆರೆವ ನೀರಿಗಾಗಿ ಸಪ್ತಸಾಗರಗಳು ಸವೆದವಂತೆ! ಹಾಕಿದ ಧೂಪದಿಂದಾಗಿ ಅಗ್ನಿಯು, ಧೂಪದ ಕಂಪಿನಿಂದಾಗಿ ವಾಯುವು, ದೇವರ ಹೊಗಳಿಕೆಯಿಂದಾಗಿ ಶಬ್ದವೂ ಸವೆದವಂತೆ! ಅಬ್ಬ ಅವರು ಮಾಡುವ ಪೂಜೆ ಎಂಥದ್ದಿರಬಹುದು? ಪೂಜೆಯ ನೆಪದಲ್ಲಿ ಪ್ರಕೃತಿಯನ್ನು ನಾಶ ಪಡಿಸುವುದನ್ನು ಚೌಡಯ್ಯ ೧೨ ನೇ ಶತಮಾನದಲ್ಲಿಯೇ ವಿರೋಧಿಸುತ್ತಾನೆ ಎಂಬುದು ಗಮನಾರ್ಹ. ಪರಿಸರದ ಬಗೆಗಿನ ಆತನ ಕಾಳಜಿ ಮನನೀಯ. ಸವೆ ಎನ್ನುವ ಶಬ್ದಕ್ಕೆ ಅಣಿಗೊಳಿಸು ಎನ್ನುವ ಅರ್ಥವೂ ಇದೆ. ಆ ಅರ್ಥದಲ್ಲಿ ಪರಿಭಾವಿಸಿದಾಗ ಆ ದೇವರ ಮಹಾಪೂಜೆಗೆ ಗಿಡಗಳಲ್ಲಿರುವ ಪತ್ರೆಗಳು ಅಣಿಯಾಗಿವೆ. ಅದೇ ರೀತಿ ಪ್ರಕೃತಿಯಲ್ಲಿರುವ ಅಗ್ನಿ, ವಾಯು, ಹಕ್ಕಿ-ಪಕ್ಕಿಗಳಿಂಚರವೆಲ್ಲಾ ಆ ಮಹಾದೇವನ ಪೂಜೆಗೆ ಅಣಿಯಾಗಿ ನಿಂತಿರುವಾಗ ನಾವು ಮಾಡುವ- ಪೂಜೆ ಬರೀ ಅನಖವಾಗುತ್ತದೆಯಲ್ಲವೆ? ಪ್ರಕೃತಿಯಲ್ಲಿ ನಿತ್ಯ ನಡೆವ ಈ ಮಹಾಪೂಜೆಯ ಭಾವಚಿತ್ರ ಅಂಬಿಗರ ಚೌಡಯ್ಯನ ಮಹೋನ್ನತ ಕಲ್ಪನೆಯ ಶ್ರೇಷ್ಠ ಉದಾಹರಣೆಯಾಗಿದೆ.

ವಚನದ ಕೊನೆಯ ಸಾಲಂತೂ ತನ್ನಲ್ಲಡಗಿಸಿಕೊಂಡಿರುವ ತೀವ್ರ ವ್ಯಂಗ್ಯದಿಂದ ವಚನಕ್ಕೊಂದು ನಾಟಕೀಯ ತಿರುವನ್ನೊದಗಿಸಿದೆ. ಮಹಾಮನೆಯಲ್ಲಿ ಪೂಜೆಗೆ ತೊಡಗಿದ್ದರೆ ಅಂಬಿಗರ ಚೌಡಯ್ಯ ಮಾತ್ರ ಆ ಪೂಜೆಗೆ ಕುಳಿತವರ ಪಾದರಕ್ಷೆಯನ್ನು ಕಾಯ್ದುಕೊಂಡಿದ್ದನಂತೆ. ಏಕೆ, ಇದೇಕೆ ಈತ ಹಾಗೆ ಮಾಡುತ್ತಿದ್ದಾನೆ? ಈತನಿಗೆ ಪೂಜೆ ಮಾಡುವುದು ಬೇಕಿಲ್ಲವೆ? ಇಲ್ಲ, ಆತನಿಗೆ ಪಾದರಕ್ಷೆಯನ್ನು ಕಾಯುವ ಕಾಯಕವೇ ಪೂಜೆ. ಪಾದರಕ್ಷೆಯನ್ನು ಕಾಯುವವರೊಬ್ಬರಿದ್ದಾರೆ ಎಂದ ಮೇಲೆ ಒಳಗೆ ಪೂಜೆಗೆ ಕುಳಿತವರೂ ನಿಶ್ಚಿಂತೆಯಿಂದ ಪೂಜೆ ಮಾಡಬಹುದು. ಇಲ್ಲವಾದರೆ ಪೂಜೆ ಮಾಡುವವರ ಮನಸ್ಸು ಮಾಡುವ ಪೂಜೆಯಲ್ಲಿ ನೆಲೆಗೊಳ್ಳದೆ ಪಾದರಕ್ಷೆಯ ಚಿಂತೆಯಲ್ಲಿಯೇ ಸವೆಯುವುದಿಲ್ಲವೆ? ಪ್ರಕೃತಿಯ ಮಹೋನ್ನತ ಪೂಜೆ ಹಾಗೂ ಮಾನವನ ಪೂಜೆಯ ನಾಟಕವನ್ನು ಅದೇ ಶಬ್ದಗಳಲ್ಲಿ ಹೊಳೆಯಿಸುವ ವಚನಕಾರನ ಪರಿ ಅನನ್ಯ.

ಪೂಜೆಯೆಂಬುದು ವ್ಯಕ್ತಿಗತವಾದುದು. ಅದು ಬಹಿರಂಗದ ಪ್ರದರ್ಶನವಾಗಕೂಡದು. ಹೂವಿನಿಂದ ಪೂಜಿಸಿದ ಪುಣ್ಯ ಹೂವಿಗೆ, ನೀರನ್ನೆರದ ಪುಣ್ಯ ನೀರಿಗೆ, ಪೂಜೆಯನ್ನು ನೋಡಿದವರ ಪುಣ್ಯ ನೋಡಿದವರಿಗೆ, ಪೂಜೆ ಮಾಡಿದವನಿಗೇನುಳಿಯಿತು? ಪೂಜೆ ಮಾಡಲು ಮನಸ್ಸು ಮುಖ್ಯ, ಪೂಜಾ ಸಾಮಗ್ರಿಗಳಲ್ಲ. ಮನವಿಟ್ಟು ಮಾಡಿದ ಪೂಜೆಯ ಫಲ ಮಾತ್ರ ಮಾಡಿದವನಿಗೆ ಸಲ್ಲುತ್ತದೆ ಎನ್ನುತ್ತಾನೆ ಅಂಬಿಗರ ಚೌಡಯ್ಯ. ಚೌಡಯ್ಯನ ವಚನಗಳಲ್ಲಿ ತತ್ತ್ವಸಿದ್ಧಾಂತಕ್ಕಿಂತ ನೈತಿಕ ಹಾಗೂ ಸಾಮಾಜಿಕ ವಿಚಾರಗಳಿಗೆ ಪ್ರಾಧಾನ್ಯತೆ ಸಿಕ್ಕಿದೆ 'ಕೇಳಿರಯ್ಯ, ಮಾನವರೆ, ಗಂಡ-ಹೆಂಡಿರ ಮನಸ್ಸು ಬೇರಾದರೆ ಗಂಜಳದೊಳಗೆ ಹಂದಿ ಹೊರಲಾಡಿ ಒಂದರ ಮೇಲೆ ಒಂದು ಬಂದು ಮೂಸಿದ ಹಾಗೆ ಛೀ, ಛೀ, ಇದು ಭಕ್ತಿಯಲ್ಲಣ್ಣ' ಎಂದು ಹೇಳುವಲ್ಲಿ ದಾಂಪತ್ಯ ಸಾಮರಸ್ಯವನ್ನು 'ಪರಧನ-ಪರಸತಿ-ಪರನಿಂದೆಗಳಿಂದ ಮುಂದೆ ನರಕವು' ಎನ್ನುವಲ್ಲಿ ನೈತಿಕತೆಯನ್ನು, 'ಕುರಿ-ಕೋಳಿ, ಕಿರು ಮೀನು ತಿಂಬುವರ ಉರೊಳಗೆ ಇರು ಎಂಬರು. ಅಮೃತಾನ್ನವ ಕರೆವ ಗೋವ ತಿಂಬುವ, ಊರಿಂದ ಹೊರಗಿರು ಎಂಬಲ್ಲು' ಎನ್ನುವಲ್ಲಿ ಸಾಮಾಜಿಕ ಕಾಳಜಿಯನ್ನು ಕಾಣಬಹುದು. ಮನುಷ್ಯ ಮನಮೆಚ್ಚುವಂತೆ ನಡೆಯಬೇಕಲ್ಲದೆ ಜನ ಮೆಚ್ಚುವಂತೆ ನಡೆಯಬಾರದು. ಆನ ಹೇಗಿದ್ದರೂ ಒಂದು ಹೆಸರಿಡುತ್ತಾರೆ ಎನ್ನುವುದನ್ನು ಚೌಡಯ್ಯ ಈ ಕೆಳಗಿನ ವಚನದಲ್ಲಿ ಬಹಳ ಸುಂದರವಾಗಿ ಹೇಳಿದ್ದಾನೆ.

'ಉಂಡರೆ ಭೂತನೆಂಬರು, ಉಣದಿದ್ದರೆ ಚಕೋರನೆಂಬರು,
ಭೋಗಿಸಿದರೆ ಕಾಮಿಯೆಂಬರು
ಭೋಗಿಸದಿದ್ದರೆ ಮುನ್ನ ಮಾಡಿದ ಕರ್ಮಿ ಎಂಬರು,
ಊರೊಳಗಿದ್ದರೆ ಸಂಸಾರಿ ಎಂಬರು,
ಅಡವಿಯೊಳಗಿದ್ದರೆ ಮೃಗಜಾತಿ ಎಂಬರು
ನಿದ್ರೆಗೈದರೆ ಜಡದೇಹಿ ಎಂಬರು, ಎದ್ದಿದ್ದರೆ ಚಕೋರನೆಂಬರು.

ಇಂತಿ ಜನಮೆಚ್ಚಿನಡೆದವರ ಎಡದ ಪಾದ ಕಿರಿ ಕಿರುಗುಣಿಯಲ್ಲಿ

ಮನೆ ಮಾಡು, ಮನೆ ಮಾಡು ಎಂದಾತ

ನಮ್ಮ ಅಂಬಿಗರ ಚೌಡಯ್ಯ!' (ವ.ಶಾ.ಸಾ.ವ. ೧೩೬೪)

ಈ ಕಾರಣಕ್ಕಾಗಿ ನಾವು ಜನರನ್ನು ಮೆಚ್ಚಿಸುವುದಕ್ಕಾಗಿ ಬದುಕಬೇಕಾದ ಅಗತ್ಯವಿಲ್ಲ. ನಮ್ಮ ಮನಸ್ಸು ನಮಗೆ ದಾರಿದೀಪವಾಗಬೇಕು. ನಮ್ಮ ಬುದ್ಧಿಶಕ್ತಿ ನಮಗೆ ತೋರುಬೆರಳಾಗಿರಬೇಕು. ೧೨ನೆಯ ಶತಮಾನದಲ್ಲಾಗಿ ಹೋದ ಅಂಬಿಗರ ಚೌಡಯ್ಯ ತನ್ನವಿಚಾರಗಳಿಂದಾಗಿ ಇಂದಿಗೂ ಪ್ರಸ್ತುತವಾಗಿದ್ದಾನೆ. ಆತ ಮೂಢನಂಬಿಕೆಗಳನ್ನೂ ಅಲ್ಲಗಳೆಯುತ್ತಾನೆ, 'ಡಾಂಭಿಕತೆಯನ್ನು ನಿರಾರಿಸುತ್ತಾನೆ, ವೇಷಧಾರಿಗಳನ್ನು ಟೀಕಿಸುತ್ತಾನೆ, ಜಾತೀಯತೆಯನ್ನು ನಿರಾಕರಿಸುತ್ತಾನೆ. ಬಡವ-ಬಲ್ಲಿದ, ಮೇಲು-ಕೀಳು ಎಂದು ಭೇದ ಮಾಡುವುದನ್ನು ಕಂಡಿಸುತ್ತಾನೆ. ದಾಂಪತ್ಯ ಸಾಮರಸ್ಯವನ್ನು ಎತ್ತಿ ಹಿಡಿಯುತ್ತಾನೆ. ಪರಿಸರ ಪ್ರೀತಿಯನ್ನು ಹೇಳುತ್ತಾನೆ. ಮಾನವೀಯ ಅನುಕಂಪೆಯನ್ನು ಪ್ರೋತ್ಸಾಹಿಸುತ್ತಾನೆ. ಇಂದಿಗೂ ಈ ಎಲ್ಲ ಅಂಶಗಳು ಅಗತ್ಯವಾಗಿರುವುದರಿಂದ ಅಂಬಿಗರ ಚೌಡಯ್ಯ ನಮ್ಮನ್ನುದ್ದೇಶಿಸಿಯೇ ಈ ವಚನಗಳನ್ನು ಹೇಳಿದ್ದಾನೇನೋ ಎನ್ನಿಸುತ್ತದೆ. ವಚನಗಳು ನಮ್ಮೆದುರಿಗಿವೆ ಅರಿತು ಪಾಲಿಸಬೇಕಾದುದಷ್ಟೆ ನಮ್ಮ ಕೆಲಸವಾಗಿದೆ.

ಅಂಬಿಗರ ಚೌಡಯ್ಯನ ದೃಷ್ಟಿಯಲ್ಲಿ ಜಾತಿವಾದವನ್ನು ಕುರಿತು ಬಹಳ ಮಾರ್ಮಿಕವಾಗಿ ಹೇಳಿದ್ದಾನೆ. ಕಬೀರ ಹೇಳುತ್ತಾನೆ 'ಜಾತಿ ನ ಪುಛೋ ಸಾಧುಕಿ ಪೂಛಲಿಯೋ ಜ್ಞಾನ' ಎಂದು ಹಿಂದಿ ಭಾಷೆ ಹೇಳಿದ್ದರೆ, ಚೌಡಯ್ಯ 'ಮಾನವ ಜಾತಿ ಏಕ ಹೈ, ಉಸಮೇ ಜಾತಿ ದೈ ಹೀ ನಹಿ' ಎಂದು ಹೇಳುತ್ತಿದ್ದನೆಂದು ತೋರುತ್ತದೆ. ಶತ ಶತಮಾನಗಳಿಂದ ಈ ಜಾತಿಯೆಂಬ ಭೂತದ ತೋಳತೆಕ್ಕೆಯಲ್ಲಿ ಸಿಕ್ಕು ನೊಂದು ನರಳಿದ ಎಲ್ಲ ಮನುಷ್ಯರ ಸಾಮೂಹಿಕ ಧ್ವನಿಯಿದು! ಎಲ್ಲಿದೆ ಜಾತಿ? ಎಲ್ಲಿದೆ ಕುಲ? ಎಲ್ಲರೂ ಯೋನಿಯಿಂದಲೇ ಹೊರಬಿದ್ದವರು. ಯಾರೇನು ಆಕಾಶದಿಂದ ಉದುರಿಲ್ಲ, ಎಲ್ಲರಲ್ಲಿಯೂ ಎಲವು ತೊಗಲು ನರಮಾಂಸ ಮೇಲೆ ಚರ್ಮದೊದ್ದಿಕೆ ಸಮಾನವಾಗಿದೆ. ಎಲ್ಲರ ದೇಹಗಳೂ ಹೊಲೆ ಶುಕ್ಲದಿಂದ ರೂಪುಗೊಂಡಿವೆ. ಎಲ್ಲರೂ ಹಾಟ-ಕೂಟಗಳಿಂದ ನಾಟಬಂದವರೇ! ಇದು ಜಾತಿವಾದಿಗಳಿಗೆ ಚೌಡಯ್ಯನ ವಜ್ರಾಘಾತರೂಪೀ ತಾತ್ವಿಕ ಉತ್ತರ.

ಇಲ್ಲಿಗೇ ಮುಗಿಯಲಿಲ್ಲ ಜಾತಿವಾದಿಗಳಿಗೆ ಚೌಡಯ್ಯನ ಏಟು. 'ಇಲಿಯ ತಿಂಬುವ ಬೆಕ್ಕು ದೇವರಿಗಿಟ್ಟ ಎಡೆಯನ್ನು ನಂಜುತ್ತದೆ ಅದನ್ನು ನೀವು ತಿನ್ನುತ್ತೀರಿ, ಕಾಕನ ಎಂಜಲು ಬೆರೆತ ಹಣ್ಣು-ಕಾಯಿ ತಿನ್ನುತ್ತೀರಿ, ಅಸಮಖ್ಯ ಹುಳಗಳೆಂಜಲಾದ ಎಂಣೆಕಾಳುಗಳನ್ನು ಗಾಣಕ್ಕೆ ಹಾಕಿ ಎಂಣೆ ತೆಗೆದು ಬುದ್ದಲಿಕ್ಕೆ ತುಂಬಿ ತಿನ್ನುವಿರಿ, ನೀರು ಅಸಂಖ್ಯ ಜಲಚರಗಳೆಂಜಲು, ಅದನ್ನು ಕುಡಿಯುತ್ತೀರಿ ಮತ್ತು ಹಾಲು ಕರುವಿನ ಎಂಜಲು, ಮೊಸರು ಗೊಲ್ಲತಿಯ ಎಂಜಲು, ಅಕ್ಕಿ, ಗೋಧಿ, ಬೇಳೆ, ಬೆಲ್ಲ, ಸಕ್ಕರೆ ನೊಣದ ಎಂಜಲು, ಉಪ್ಪು ಉಪ್ಪಾರನ ಎಂಜಲು, ಸಕಲ ಪದಾರ್ಥಂಗಳು ಅನಂತ ಹುಳುಗಳ ಎಂಜಲು ಇವೆಲ್ಲವನ್ನು ತಿನ್ನುತ್ತೀರಿ ಇದರಿಂದ ನಿಮ್ಮ ಕುಲಾಚಾರ ಕೆಟ್ಟು ಹೋಗಲಿಲ್ಲವೆ?

ಅಲ್ಲದೆ ಕುಲಾಚಾರದ ಹೆಚ್ಚೆನ್ನು ಹಂಕಾರದಿಂದ ಹೇಳಿಕೊಳ್ಳುವ ಹಳ್ಳಿಯ ರೈತಕುಟುಂಬದ ಲಿಂಗಾಯತ ಗೌಡರನ್ನು ಕುರಿತು 'ಸತ್ತ ಪಶುವಿನ ತೊಗಲಿನಿಂದ ಮಿಣಿ-ಜತಿಗಿ ಮಾಡಿ ಹೊಲ-ಮನೆಗೆ ಹೊತ್ತೊಯುವಾಗ ಉತ್ತರಿ ಮಳೆ ಸುತ್ತಿ-ಸುತ್ತಿ ಹೊಡೆದರೆ ಮೇಲಿದ್ದ ಮಿಣಿ-ಝುತ್ತಿಗೆಗಳನ್ನು ನೆನೆದು ಅವುಗಳಿಂದ ನೀರು ಧಾರಾಕಾರವಾಗಿ ಬಾಯಿಗಿಳಿಯುತ್ತದೆ, ಆಗ ಕೆಡಲಿಲ್ಲವೇ ನಿಮ್ಮ ಕುಲಾಚಾರ? 'ಮುಟ್ಟಿ ಮಟ್ಟಿ' ಎಂದು ಹಾರುವ ಹಾರವನ ಕಂಡ ಚೌಡಯ್ಯ, 'ನೀವು ನೋಡಿದರೆ ಮುಟ್ಟಿನಿಂದಲೇ ಹುಟ್ಟಿರುವಿರಿ, ತಾಯಿಯ ಮುಟ್ಟು ಆದ ಮೂರು ದಿನದಿಂದಲೆ ಬಂದಿರುವಿರಿ ಮತ್ತೆ ಮುಟ್ಟನ್ನೇಕೆ ಜರೆಯುವಿರಿ? ಎಂದು ಪ್ರಶ್ನಿಸಿ, ಮುಟ್ಟು ಎಂಬುದು ಮಾಣಿಕದ ಲಿಂಗ, ಮುಟ್ಟು ಎಂಬುದು ಬಂಗಾರದ ಲಿಂಗ, ಸಜೀವ ಪ್ರಾಣಿಗಳು ಮುಟ್ಟಿನಿಂದಲೇ ಜನಿಸಿದರು. ಎಂದು ಮುಟ್ಟಿಗೆ ಅವರಂಟಿಸಿದ ಕೊಳೆಯನ್ನು ತೊಳೆದು ಮುಟ್ಟೇ ಬಂಗಾರ, ಎಲ್ಲರನ್ನು ಬಾಚಿ (ಮುಟ್ಟಿ) ತಬ್ಬಿಕೊಂಡು ಪ್ರೀತಿ ತೋರಿಸಿರಿ, ಸಕಲ ಜೀವಾತ್ಮರಲ್ಲಿ ಆ ಲಿಂಗವೇ ಅಡಗಿಹುದು ಎಂದು ಅರುವಿನ ಚಾಟಿ ಏಟುಕೊಟ್ಟು ತಿಳಿಹೇಳುವನು.

ನಾವು ಹೆಚ್ಚಿನಕುಲದವರೆಂದು ಬೀಗುವ ಶೀಲವಂತರನ್ನು ಕುರಿತು ಚೌಡಯ್ಯ ನೀವೇ ಸೃಷ್ಟಿಸಿದ ಕುಲ ಹದಿನೆಂಟು ಜಾತಿಗಳು ನಿಮ್ಮ ದೇಹದಲ್ಲಿಯೇ ಅಡಗಿವೆಯೆಂದು ಬಹು ಮಾರ್ಮಿಕವಾಗಿ ಈ ಕೆಳಗಿನಂತೆ ತಿರುಗೇಟು ಕೊಡುತ್ತಾನೆ. '........ಕಣ್ಣೇ ಕಂಚುಗಾರ, ಕರ್ಣವೇ ಬಣಜಿಗ, ಮೂಗೇ ಈಳಿಗ ಕೊರಳೇ ಕುಂಬಾರ, ತುಟಿಯೇ ಹೆಂಡಗಾರ, ಹಲ್ಲೇ ಕಲ್ಲುಕುಟಿಗ, ತಲೆಯೇ ಮೋಪುಗಾರ, ಬೆನ್ನೇ ಜೇಡ, ಅಂಗೈಯೇ ಅಕ್ಕಸಾಲಿಗ ಮುಂಗೈಯೇ ಬಡಿಗ, ಕರವೇ ಕೊಮಟಿಗ ಕಣಕಾಲೇ ಕಾಳಿಂಗ, ಕುಂಡಿಯೇ ಕುಡುವಕ್ಕಲಿಗ, ಒಳದೊಡೆಯೇ ಸಮಗಾರ, ಹೊದೊಡೆಯೇ ಮಚ್ಚಿಗ ಮೇಗಾಡಿ ಹೊಲೆಯ, ಬುದ್ಧಿಯೇ ಬೈಲಗಂಬಾರ ಇಂತಪ್ಪ ಕುಲ ಹದಿನೆಂಟು ಜಾತಿ ಎಲು ಮಾಂಸವನು ತುಂಬಿಟ್ಟುಕೊಂಡು ನನ್ನ ಕುಲ ಹೆಚ್ಚು, ನಿನ್ನ ಕುಲ ಕಡಿಮೆ ಎಂದು ನಮ್ಮ ಪಡಿದಾರಿ ಉತ್ತಣ್ಣನ ವಾಮಪಾದುಕೆಯಿಂದ ಪಡಪಡನೆ ಹೊಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು' ಈ ಮೇಲಿನ ಮಾತು ನಿಜವಲ್ಲವೇ? ಅಲ್ಲದೆ, ನಾವು ಬೆಳಿಗ್ಗೆ ಎದ್ದು ಪೃಷ್ಠವನ್ನು ತೊಳೆವಾಗ ನಾವೇ ಶೂದ್ರರು, ಆಪತ್ಕಾಲದಲ್ಲಿ ನಮ್ಮ ರಕ್ಷಣೆಗೆ ನಾವೇ ಮುಂದಾದಾಗ ನಾವು ಕ್ಷತ್ರಿಯರು, ಶಾಲೆಯಲ್ಲಿ ಓದಿ-ಬೋಧಿಸುವಾಗ ನಾವೇ ಬ್ರಾಹ್ಮಣರು, ನಮ್ಮ ತೋಟದಲ್ಲಿ ಕೆಲಸ ಮಾಡುವಾಗ ನಾವೇ ವೈಶ್ಯರು, ಅಲ್ಲವೇ?

ಜಾತಿ ದೇವನಿರ್ಮಿತವಲ್ಲ, ಅದು ದುರುಳನಾದ ಮನುಜ ನಿರ್ಮಿತವೆನ್ನುವ ಚೌಡಯ್ಯ, ಆ ಜಾತಿಯನ್ನು ಸೃಷ್ಟಿಸಿದ ಶಾಸ್ತ್ರಂಗಳನ್ನು ನಿಂದಿಸುತ್ತಾ ಕಷ್ಟನ ಮನೆಯಲ್ಲಿ ಸೃಷ್ಟಿಗೀಶನುಂಬಾಗ ಎತ್ತ ಹೋದವು ನಿಮ್ಮ ಶಾಸ್ತ್ರಂಗಳು? ....ಮುಕ್ಕುಳಿಸಿದುದಕವ ತಂದೆರೆದಡೆ ಎತ್ತಲಿದ್ದವು ನಿಮ್ಮ ವೇದಂಗಳು? ಎಂದು ಕೇಳಿ ಮಡಿವಂತರ ಬಾಯಿ ಮುಚ್ಚಿಸುತ್ತಾನೆ. ಊರಹೊರಗಿರುವ ಅತೀಪರೋಪಕಾರಿಗಳಾದ, ನೀವು ಹೊಲೆಯರೆಂದು ತಿಳಿದುಕೊಂಡ ಜನರು ಊರನ್ನು

ಸ್ವಚ್ಛವಾಗಿಡುತ್ತಾರೆ, ಸತ್ತ ದನಗಳ ತೊಗಲು ತೆಗೆದು ಸಂಸ್ಕಾರಗೊಳಿಸಿ ಮಿಣಿ, ಜತಿಗಿ, ಬಾರುಕೋಲು, ಚಮ್ಮಾವುಗೆ, ಮೃದಂಗ, ಡೋಲು, ನಗಾರಿ, ಸಿದ್ಧಲಿಕೆ, ಬುದ್ಧಲಿಕೆ ಇತ್ಯಾದಿ ನಿತ್ಯೋಪಯೋಗಿಯಾದ ಸಕಲರಿಗೂ ಬೇಕಾದ ವಸ್ತುಗಳನ್ನು ತಯಾರಿಸಿ ಸಮಾಜದ ಏಳ್ಗೆಗೆ ಕಾರಣರಾಗಿದ್ದಾರೆಂದು ಶ್ಲಾಘಿಸಿ ಸಮಾಜದ ಸ್ವಾಸ್ಥ್ಯಕ್ಕೆ ಬೇಕಾದ ಸೂತ್ರಗಳನ್ನು ನಮಗೆ ದಯಪಾಲಿಸುತ್ತಾನೆ. ಚೌಡಯ್ಯ ಪ್ರಪಂಚದ ಶ್ರೇಷ್ಠ ಜಾತಿ ನಿರಸನವಾದಿಯಾಗಿ ಹೊರಹೊಮ್ಮುತ್ತಾನೆ. ಇವರು ಹಾಕಿಕೊಟ್ಟ ಪಥದಲಿ ನಾವು ನಡೆದರೆ ಮಾನವ ಜಾತಿಯ ಏಳ್ಗೆಯುಂಟು ಇಲ್ಲದಿರೆ ಧ್ವಂಸಗೊಳ್ಳುವುದು ಮಾನವ ಕುಲ ಈ ಜಾತಿ-ಧರ್ಮಗಳ ಕಲಹದಿಂದ! ಇದು ನಿಶ್ಚಿತ!

೪.೨. ಗಜೇಶ ಮಸಣಯ್ಯ :

ತಳಸಮುದಾಯದಿಂದ ಬಂದು ತನ್ನ ಜ್ಞಾನದ ನಿಧಿಯಿಂದ ಸಮಾನತೆ ಮತ್ತು ವೈಚಾರಿಕತೆಯನ್ನು ಒಳಗೊಂಡಿರುವಂತಹ, ಅನೇಕ ವಚನಗಳನ್ನು ರಚಿಸಿದವರಲ್ಲಿ ಗಜೇಶ ಮಸಣಯ್ಯನೂ ಒಬ್ಬ. ಮಸಣಯ್ಯನ ಸ್ಥಳ ವಿವೇಚನೆ ಕುರಿತು ಹಲವಾರು ಜಿಜ್ಞಾಸೆಗಳಿದ್ದರೂ ಸದ್ಯಕ್ಕೆ ಮಹರಾಷ್ಟ್ರದ ಅಕ್ಕಲಕೋಟ ತಾಲೂಕಿನ ಕರಜಿಗೆ ಎಂಬುದು ನಿರ್ಣಯವಾಗಿದೆ. ಕಾಲ ಸು. ೧೧೬೦ ಇವನು ಕರಜಿಗೆಯ ಗಜೇಶ್ವರನ ಭಕ್ತ. ಆತನೇ ಈತನ ವಚನಾಂಕಿತದ ಇಷ್ಟದೈವ. ಜಂಗಮ ದಾಸೋಹಿ, ಸುತ್ತಲಿನ ಪರಿಸರವನ್ನು ಲೆಕ್ಕಿಸದೆ, ತನ್ಮಯನಾಗಿ ಲಿಂಗ ಪೂಜೆ ನೆರವೇರಿಸುವ ನಿಯಮ ಮಸಣಯ್ಯನದು. ಗುರುದರ್ಶನ ಪಡೆಯಲು ಎಂದು ತೊರೆಯ ತುಂಬು ಪ್ರವಾಹವನ್ನು ಗಮನಿಸದೆ ನದಿಗೆ ಧುಮುಕಿದಾಗ ಶಿವಕೃಪೆಯಿಂದಾಗಿ ನದಿ ಇಬ್ಭಾಗವಾಗಿ ದಾರಿ ಮಾಡಿಕೊಟ್ಟಿತೆಂದು ಬಸವ ಪುರಾಣವು ಪ್ರಸ್ತಾಪಿಸುತ್ತದೆ. ಶಿವನ ಆಜ್ಞೆಯಂತೆ ಕಲ್ಯಾಣಕ್ಕೆ ಆಗಮಿಸಿ ಬಿಜ್ಜಳನಲ್ಲಿ ಮಾವುತ ವೃತ್ತಿ ಕೈಗೊಂಡು ಶಿವಶರಣರ ಸಂಪರ್ಕಕ್ಕೆ ಬಂದುವಚನಕಾರನಾದನು. ಮಸಣಯ್ಯನ ಪತ್ನಿಯ ಹೆಸರು ತಿಳಿದುಬಂದಿಲ್ಲ. ಆದರೆ ಗಜೇಶ ಮಸಣಯ್ಯನ ಪತ್ನಿ ಎಂಬುದು ಹಸ್ತಪ್ರತಿಗಳಲ್ಲಿ ವಚನಗಳ ಹಣೆಯ ಮೇಲಿನ ಬರಹದಿಂದ ತಿಳಿದುಬರುತ್ತದೆ. 'ಮಸಣಯ್ಯ ಪ್ರಿಯ ಗಜೇಶ್ವರ' ಎಂಬ ಈಕೆಯ ವಚನಾಂಕಿತ ಇದನ್ನು ಖಚಿತಪಡಿಸುತ್ತದೆ. ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಮುನವಳ್ಳಿಯಲ್ಲಿ ದಂಪತಿಗಳು ಬಯಲಾದರೆಂದು ಹೇಳಲಾಗುತ್ತದೆ. ಮುನವಳ್ಳಿಯಲ್ಲಿ ಮಸಣಯ್ಯನ ದೇವಾಲಯವಿದ್ದು, ಅಲ್ಲಿ ಪ್ರತಿ ವರ್ಷ ಜಾತ್ರೆ ನಡೆಯುತ್ತದೆ.

'ಮಹಾಲಿಂಗ ಗಜೇಶ್ವರ' ಅಂಕಿತದ ಮಸಣಯ್ಯನ ೭೧ ವಚನಗಳು ದೊರೆತಿವೆ. 'ಮಹಾಲಿಂಗ ಗಜೇಶ್ವರನ ಅನುಭಾವ ಸಂಬಂಧಿಗಳ ಬರವುಎನ್ನ ಪ್ರಾಣದ ಬರವು ನೋಡವ್ವಾ!' ಎನ್ನುವ ಮಸಣಯ್ಯನು ಸತಿಪತಿ ಭಾವದ ಶ್ರೇಷ್ಠ ವಚನಕಾರ. 'ಈತನ ವಚನಗಳು ಶಿವಶರಣರ ವಚನಗಳಲ್ಲೇ ಬಹು ಸುಂದರವಾದವುಗಳು. ಮಹಾ ಶಿವಶರಣೆಯಾದ ಮಹಾದೇವಿಯಕ್ಕನ ವಚನಗಳಿಗೆ ಸರಿಸಮವಾಗಿವೆ. ಇವು ಈಕೆಯ ವಚನಗಳಷ್ಟೇ ಸುಂದರವೂ, ಲಲಿತವೂ, ಮಧುರವೂ ಆಗಿರುತ್ತವೆ.' ಎಂದು ಫ.ಗು. ಹಳಕಟ್ಟಿಯವರು ಹೇಳುತ್ತಾರೆ. ಮಸಣಯ್ಯಗಳ ಪುಣ್ಯಸ್ತ್ರೀಯ ವಚನಗಳೂ ಸಿಕ್ಕಿವೆ.

ಶಿವನೆ ಗುರುವಾಗಿ, ಲಿಂಗವಾಗಿ, ಜಂಗಮನಾಗಿ, ಭಕ್ತನಾಗಿರುವನು. ಇಬ್ಬರು ಪರಂಜ್ಯೋತಿಯಲ್ಲಿಯೇ ಅಡಗಿದರಾಗಿ ಗುರುವಿಂಗೆಯೂ, ಶಿಷ್ಯಂಗೆಯೂ, ಲಿಂಗಕ್ಕೆಯೂ ಭೇದವಿಲ್ಲವೆಂದು ಗುರುಲಿಂಗ ಜಂಗಮ ಭಕ್ತ ಸಂಬಂಧವನ್ನು ಮನ ಮುಟ್ಟುವಂತೆ ಬಣ್ಣಿಸುತ್ತಾಳೆ. ಭಕ್ತನಾದವನು ಶಿವಗಣವನ್ನು ಅರಿಯಬೇಕಲ್ಲದೆ ನಿಂದಿಸಬಾರದೆನ್ನುವ ಈಕೆ ಗುರು-ಲಿಂಗ-ಜಂಗಮ ಪ್ರಸಾದದ ಸ್ವರೂಪವಾಗಿರುವ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಮರುಳಶಂಕರ ದೇವರನ್ನು ಸ್ತುತಿಸಿರುವುದುಂಟು.

ಮಸಣಯ್ಯನ ಲಿಂಗಪೂಜಾರತಿ ಪ್ರಸಿದ್ಧವಾದುದು. ಬಿಸಿಲು, ಚಳಿ, ಮಳೆ, ಗಾಳಿ, ಹಸಿವೆ, ನೀರಡಿಕೆ, ನಿದ್ರೆಗಳಾವವೂ ಅವನ ಲಿಂಗಪೂಜೆಗೆ ಅಡ್ಡಬರಲಾರವು. ಇಷ್ಟ-ಪ್ರಾಣ-ಭಾವ ಲಿಂಗಗಳ ಅನುಸಂಧಾನದಿಂದ ಅವುಗಳಾಚೆಯ ನಿಷ್ಕಲಲಿಂಗ, ಶೂನ್ಯಲಿಂಗ, ನಿಶ್ಶೂನ್ಯಲಿಂಗಗಳ ನಿಲುವನ್ನೂ ನಿಲುಕಿಕೊಂಡಿದ್ದ ಮಸಣಯ್ಯ.

ಒಮ್ಮೆ ಗಜೇಶ ಮಸಣಯ್ಯನ ಲಿಂಗಭಕ್ತಿಯ ಪರೀಕ್ಷೆ ನಡೆಯಿತು. ಗುರು ದರ್ಶನಕ್ಕೆಂದು ಗಜೇಶ ಮಸಣಯ್ಯ ಕರಜಿಗೆಯಿಂದ ಹೊರಟು ದಾರಿಯಲ್ಲಿ ಹೊಳೆಯೊಂದರ ಹತ್ತಿರ ಲಿಂಗಪೂಜೆಗೆ ಕುಳಿತ. ಆ ಪ್ರಶಾಂತ ವಾತಾವರಣ, ಸುಂದರ ಸನ್ನಿವೇಶ ಅವನನ್ನು ಆಕರ್ಶಿಸಿದವು. ಆ ತೊರೆ ಬೆಣ್ಣೆ ತೊರೆಯೇ ಆಗಿರಬೇಕೆಂದು ಬಲ್ಲವರು ತರ್ಕಿಸಿದ್ದಾರೆ.

ಶಿವಪೂಜೆಯೊಳಗೆ ಹುಟ್ಟಿದ ಸುದಾಕರನಂತೆ ಮಸಣಯ್ಯ ಮೈಮರೆತು ಕುಳಿತ ಶಿವಪೂಜೆಯಲ್ಲಿ. ಮೋಡಗವಿಯಿತು, ಗುಡುಗು ಗದ್ದರಿಸಿತು, ಮಿಂಚು ಕೋರೈಸಿತು, ಸಿಡಿಲು ಖಡಿಲ್ ಎಂದಿತು. ಮಸಣಯ್ಯನಿಗೆ ಎಚ್ಚರವೇ ಇಲ್ಲ. ಮಳೆ ಸುರಿಯತೊಡಗಿತು ಇನ್ನೂ ಎಚ್ಚರವಿಲ್ಲ. ಹೊಳೆ ತುಂಬಿ ಭೋರ್ಗರೆಯುತ್ತ ಹರಿಯತೊಡಗಿತು. ಆಗಲೂ ಎಚ್ಚರವಿಲ್ಲ. ಹೊಳೆಗೆ ನೆರೆ ಬಂದು ಹೊನಲು ಮಸಣಯ್ಯ ಮೇಲ್ವಾಯ್ದು ಹೋಯಿತು. ಅಷ್ಟಾದರೂ ಎಚ್ಚರಿಲ್ಲ! ಪ್ರಕೃತಿಯೇ ಸೋತು ಶರಣಾಗತವಾಯಿತವನಿಗೆ. ಮಳೆ ನಿಂತಿತು, ಹೊಳೆ ಇಳಿಯಿತು, ಮಸಣಯ್ಯನ ಕೀರ್ತಿ ಮಾತ್ರ ಏರಿತು ದಶ ದಿಶೆಗಳಿಗೆ!

ಬಸವಣ್ಣನವರಿಗೆ ಬಹುಶಃ ಸಮಕಾಲೀನನಾದ ಮಸಣಯ್ಯ ನಿಜದಲ್ಲಿ ಬೆರೆದು ಅಜರಾಮರನಾದ. ಅವನ ಅತ್ಮದ ಓಜಸ್ಸು ಅವನ ಮಾತುಗಳಲ್ಲಿ ನಿಂತು ಇಂದಿಗೂ ನಮ್ಮ ಮನಗಳ ಮಂದಿರಗಳನ್ನು ಬೆಳಗುತ್ತಿವೆ.

"ತನ್ನನ್ನು ತಾನು ಪೂರ್ಣ ಪ್ರಮಾಣದಲ್ಲಿ ಇಷ್ಟದೈವವಾದ ಗಜೇಶನಿಗೆ ಸಮರ್ಪಿಸಿಕೊಂಡಿರುವ ಮಸಣಯ್ಯ ವಚನಗಳಲ್ಲಿ ಸತಿಭಾವದ ಭಾವನೆಯನ್ನು ಅಭಿವ್ಯಕ್ತಿಗೊಳಿಸುತ್ತಲೇ ಪರಮಾತ್ಮನೊಡನೆ ಪತಿ ಸಂಬಂಧವನ್ನು ದೃಢೀಕರಿಸಿದ್ದಾನೆ.

'ಆಗಲಲಿಲ್ಲದ ನಲ್ಲನನಗಲಿ ನೆರೆದೆಹೆನೆಂಬ

ಕಾಮಿನಿಯರ ಭಂಗವ ನೋಡಾ

ಆ ನಮ್ಮ ನಲ್ಲನ ಅನುವಿನೊಳಿರ್ದು

ನೆರೆದೆಹೆನೆಂಬ ಭರವೆನಗವ್ವಾ

ಮಹಾಲಿಂಗ ಗಜೇಶ್ವರದೇವರನಗಲುವಡೆ

ನಾನೇನು ಕಲ್ಲುಮನದವಳೆ ಅವ್ವಾ'

ಈ ಮೇಲಿನ ವಚನದಲ್ಲಿ ನಲ್ಲನನ್ನು ಅಗಲಿದ ನಲ್ಲೆ ಪಡೆಯಬಹುದಾದ ಪರಿತಾಪವನ್ನು ವಿವರಿಸುತ್ತಲೇ ನಲ್ಲನ ಸನಿಹದಲ್ಲಿದ್ದು ಆ ಸಂಗಸುಖವನ್ನು ಅನುಭವಿಸುವ ಕಾತರ, ತುಡಿತ– ಇವೆಲ್ಲವೂ ಸುಂದರವಾಗಿ ಮೂಡಿಬಂದಿದೆ. ತನ್ನ ಪರಮಾತ್ಮ, ಗಂಡನಾದ ಮಹಾಲಿಂಗ ಗಜೇಶ್ವರನಿಂದ ನಾನು ದೂರ ಸರಿಯಲು ಕಲ್ಲು ಮನಸ್ಸಿನವಳಲ್ಲ ಎನ್ನುವಲ್ಲಿ ಸ್ತ್ರೀ ಸಹಜವಾದ ಸಂವೇದನೆ ಕೆಲಸಮಾಡಿದೆ.

'ಅಗಲಿದ ನಲ್ಲನ ಕನಸಿನಲಪ್ಪಿ ಸುಖಿಯಾದಿರವ್ವಾ

ಕಂಡು ಕನಸು ದಿಟವದಡೆ ಅವ ನಮ್ಮ ನಲ್ಲನವ್ವಾ

ಮನಸುಳ್ಳವರು ನೀವು ಪುಣ್ಯಗೀದಿರವ್ವಾ

ಮಹಾಲಿಂಗ ಗಜೇಶ್ವರನಗಲಿದಡೆ ನಿದ್ರೆಯೆಮಗಿಲ್ಲ

ಕನಸಿನಲ್ಲಿ ಬಹುದವ್ವಾ'

ಆಧ್ಯಾತ್ಮಿಕ ವಿರಹಕ್ಕೂ ಕನಸಿಗೂ ನಿಕಟ ಸಂಬಂಧವಿದೆ. ನಲ್ಲೆಯಿಂದ ಅಗಲಿದ ನಲ್ಲ ಕನಸಿನಲ್ಲಿ ಬಂದು ಅಪ್ಪಿದಾಗ ಸಿಗುವ ಪರಮ ಸುಖ ಕಂಡು ಮನಸು ನಿಜ, ನನಸಾದರೆ ಅವನೇ ನಮ್ಮ ನಲ್ಲನಾಗಲು ಅರ್ಹನು. ಹೀಗೆ ಮನಸ್ಸಿನಲ್ಲಿ ನಲ್ಲನನ್ನ ತುಂಬಿಕೊಂಡು ಪುಣ್ಯವನ್ನೇ ಮಾಡಿರುವಿರಿ ಅನುಭಾವದ ವಿರಹ ಸಂವೇದನೆ ಎಂಥದೆಂದರೆ ಒಂದರೆಕ್ಷಣವೂ ನಲ್ಲನನ್ನು ಬಿಟ್ಟಿರಲಾಗದ ಪರಿ. ನಿರಂತರ ಎಚ್ಚರದಿಂದ ಕಾಯುವ ಕಾತರತೆ ಕನಸು ಬೀಳಲು ಸಾಧ್ಯವಿಲ್ಲ ಎಂಬುದನ್ನು ಸಹಜವಾದ ನೆಲೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

'ಆತನ ಬೆರೆಸಿದ ಕೂಟವೇನೆಂದು ಹೇಳುವೆನವ್ವಾ

ಹೇಳಲೂಬಾರದು ಕೇಳಲೂಬಾರದು

ಏನ ಹೇಳುವೆನವ್ವಾ ಶಿಖಿ ಕರ್ಪೂರ ಬೆರೆಸಿದಂತೆ

ಮಹಾಲಿಂಗ ಗಜೇಶ್ವರನ ಕೂಡಿದ ಕೂಟವ ಹೇಳಲು ಬಾರದವ್ವಾ'

ಮನದ ನಲ್ಲನಾದ ಪರಮಾತ್ಮನನ್ನು ಸೇರಿದ ಸನ್ನಿವೇಶದ ಅನುಭವವನ್ನು ಏನೆಂದು ಹೇಳಲಿ? ಅದು ತುಂಬಾ ರಹಸ್ಯವಾದುದು. ಬೆಂಕಿಯೊಂದಿಗೆ ಕರ್ಪೂರ ಬೆರೆತಾಗ ಅದು ಹೇಗೆ ಕರಗಿ ಹೋಗಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದ್ದೋ ಹಾಗೆ ಪರಮಾತ್ಮನೊಂದಿಗೆ ಕೂಡಿದ ಕೂಟ ಎನ್ನುವಲ್ಲಿ ಹೆಣ್ಣು–ಗಂಡಿನ ಸಹಜ ಸಂಬಂಧ ಅತ್ಯಂತ ರಹಸ್ಯವಾದುದು ಎಂಬ ಎಚ್ಚರ ಈ ವಚನದಲ್ಲಿ ಘನೀಭೂತಗೊಂಡಿದೆ"೬

ತತ್ವಕ್ಕೆ ತೊತ್ತಾಗಿ, ಸತ್ಯಕ್ಕೆ ತೊತ್ತಾಗಿ, ನಿತ್ಯಕ್ಕೆ ತೊತ್ತಾಗಿ ಬಾಳಿ ಮುಕ್ತಾದವರ ಮಾಲಿಕೆಯಲ್ಲಿ ಮಸಣಯ್ಯನವರಿಗೊಂದು ಮನ್ನಣೆಯ ಸ್ಥಾನವಿದೆ.

೪.೩. ಜೇಡರ ದಾಸಿಮಯ್ಯ :

'ಭಕ್ತಿಯಿಲ್ಲದ ಬಡವ ನಾನಯ್ಯಾ
ಕಕ್ಕಯ್ಯನ ಮನೆಯಲ್ಲೂ ಬೇಡಿದೆ
ಚನ್ನಯ್ಯನ ಮನೆಯಲ್ಲೂ ಬೇಡಿದೆ
ದಾಸಿಮಯ್ಯನ ಮನೆಯಲ್ಲೂ ಬೇಡಿದೆ
ಎಲ್ಲ ಪುರಾತನರು ನೆರೆದು ಭಕ್ತಿಭಿಕ್ಷೆ ನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು, ಕೂಡಲ ಸಂಗಮದೇವಾ' (ವ.ಶಾ.ಸಾ.ವ. ೧೬೪೪)

ಬಸವಣ್ಣನವರು ಈ ವಚನದಲ್ಲಿ ತಮ್ಮ ಸಮಕಾಲೀನ ಹಿರಿಯ ವಚನಕಾರರನ್ನು ಮನಸಾರೆ ಸುತ್ತಿಸಿದ್ದಾರೆ. ಅವರಲ್ಲಿ ಜೇಡರ ದಾಸಿಮಯ್ಯನು ಒಬ್ಬ ಶ್ರೇಷ್ಠ ಅನುಭಾವಿ ಹಾಗೂ ಹಿರಿಯ ವಚನಕಾರರಾಗಿದ್ದಾನೆ. ದಾಸಿಮಯ್ಯ ದಾಸಯ್ಯ, ದಾಸಿಮಾರ್ಯ, ಜೇಡರದಾಸಿಮಯ್ಯ ಮುಂತಾದ ಹೆಸರುಗಳಿಂದ ಅವನನ್ನು ಕರೆದಿದ್ದಾರೆ. ದಾಸಿಮಯ್ಯನು ಬಸವಣ್ಣನವರ ಮೇಲೆ ವಿಶೇಷ ಪರಿಣಾಮ ಬೀರಿದ ವಚನಕಾರನು.

ಶರಣರ ಹೃದಯದಂತಿದ್ದ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಭಿನ್ನ ಭಿನ್ನ ವಿಚಾರ ವಿನಿಮಯ ನಡೆಯುತ್ತಿದ್ದರು, ಕೆಳವರ್ಗದವರನ್ನು ಆರ್ಥಿಕ ಸಾಮಾಜಿಕ ಶೈಕ್ಷಣಿಕವಾಗಿ ಮೇಲೆತ್ತಲು ಸಮಾಜದ ಒಳಿತಿಗಾಗಿ ಮೂಢಾಚಾರ ಶುಷ್ಕಾಚಾರಗಳನ್ನು ತಡೆಯಲು ಕುಲ ಜಾತಿ ಕಸಬು ಮೊದಲಾದ ಭೇದಭಾವನೆ ಅಳಿಸಲು ಕಾರ್ಯ ತತ್ಪರರಾಗಿದ್ದರು. ಅವರ ವೈಚಾರಿಕ ಪ್ರಜ್ಞೆಯೇ ವಚನಗಳ ಮುಖಾಂತರ ಹೊರಹೊಮ್ಮಿತು, ಅಂಥ ವಚನಗಳನ್ನು ರಚಿಸಿದವರಲ್ಲಿ ಜೇಡರ ದಾಸಿಮಯ್ಯನು ಎತ್ತರದ ಸ್ಥಾನದಲ್ಲಿ ನಿಲ್ಲುತ್ತಾನೆ. ಅವನ ವಿಷಯ ಹಲವಾರು ಕಾವ್ಯಗಳಲ್ಲಿ ಬಂದಿದೆ.

ಸಪ್ತತೀರ್ಥಗಳ ನಿಸರ್ಗ ಸೌಂದರ್ಯದ ನಡುವಿರುವ ಮುದನೂರು ಕಲಬುರ್ಗಿ ಜಿಲ್ಲೆಯ ಒಂದು ಹಳ್ಳಿ ಅದು ದಾಸಿಮಯ್ಯನ ಜನ್ಮಸ್ಥಳವು. ಆ ಊರಲ್ಲಿ ರಾಮನಾಥ ದೇವಾಲಯ ವಿದ್ದು ರಾಮನಾಥನೆ ದಾಸಿಮಯ್ಯನ ಆರಾಧ್ಯದೈವವು, ಅವನ ವಚನಾಂಕಿತ 'ರಾಮನಾಥ' ಎಂದಿದೆ. ಅವನ ತಂದೆಯ ಹೆಸರು ರಾಮಯ್ಯ ತಾಯಿ ಶಂಕರಿ ಅವರ ಮನೆತನದ ಉದ್ಯೋಗ ನೇಕಾರಿಕೆ, ನೇಯ್ಗೆ ಕಾಯಕದಲ್ಲಿದ್ದರೂ ದಾಸಿಮಯ್ಯನಿಗೆ ಆತ್ಮಜ್ಞಾನದ ಹಸಿವು ಬಹಳವಾಗಿತ್ತು, ಅದಕ್ಕಾಗಿ ಶ್ರೀಶೈಲಕ್ಕೆ ಹೋಗುತ್ತಾನೆ. ಪಂಡಿತಾರಾಧ್ಯ ಶಿವಚಾರ್ಯರಿಂದ ಶಿವದೀಕ್ಷೆ ಪಡೆದು ಸಾಧನೆ ಮಾಡಿ ಶಿವಜ್ಞಾನ ಸಂಪನ್ನನಾಗುತ್ತಾನೆ.

ಶಿವಜ್ಞಾನ ಸಂಪನ್ನನಾದ ದಾಸಿಮಯ್ಯನು ಲೋಕ ಕಲ್ಯಾಣದ ಕೈಂಕರ್ಯ ತೊಟ್ಟು ಚಾಲುಕ್ಯ ರಾಜ್ಯದ 'ಪೊಟ್ಟಲ ಕೆರೆ'ಯತ್ತ ಸಾಗುತ್ತಾನೆ, ದಾರಿಯಲ್ಲಿ ಶಿವಾನುಭವ ಗೋಷ್ಠಿಗಳನ್ನು ಮಾಡುತ್ತ ಸಾವಿರಾರು ಜನರಿಗೆ ಶಿವದೀಕ್ಷೆ ನೀಡುತ್ತಾರೆ. ಹಿಂಸಾವೃತ್ತಿಯಲ್ಲಿ ತೊಡಗಿದ್ದ ಬೇಡ ಜನಾಂಗಕ್ಕೆ ಬುದ್ಧಿಹೇಳಿ ಅವರ ಮನ ಪರಿವರ್ತಿಸಿ ದೀಕ್ಷೆ ನೀಡಿ ಸನ್ಮಾರ್ಗಕ್ಕೆ ಹಚ್ಚುತ್ತಾನೆ. ನಂದಿಗ್ರಾಮದಲ್ಲಿ ಎದುರಾದ ವೈದಿಕರೊಡನೆ ವಾದ ವಿವಾದ ಮಾಡಿ ಜಯಿಸುತ್ತಾನೆ. ಗೊಡಗೆರೆಗೆ ಬಂದು ಅಲ್ಲಿ ಅಸಂಖ್ಯಾತ ರೈತ ಜನಕ್ಕೆ ಜ್ಞಾನಬೋಧನೆ ಮಾಡಿ, ಪೊಟ್ಟಲಕೆರೆಗೆ ಬಂದು ಅಲ್ಲಿಯ ಎಲ್ಲ ಜೈನ ಪಂಡಿತರನ್ನು ವಾದದಲ್ಲಿ ಸೋಲಿಸುತ್ತಾನೆ. ಅವರಿಗೆಲ್ಲ ಶಿವದೀಕ್ಷೆ ನೀಡಿ, ಅಲ್ಲಿಯ ರಾಜ ೨ನೇ ಜಯಸಿಂಹ ಮತ್ತು ರಾಣಿ ಸುಗ್ಗಲೆ ಇವನಿಂದ ಶಿವದೀಕ್ಷೆ ಪಡೆಯುತ್ತಾರೆ. ನಂತರ ದಾಸಿಮಯ್ಯನು ತನ್ನ ಊರಾದ ಮುದನೂರಿಗೆ ಬಂದು ನೇಯ್ಗೆ ಕಾಯಕ ಮಾಡಿಕೊಂಡು ಜನರಿಗೆ ಶಿವಾನುಭವದ ಮೂಲಕ ಸಮಾನತೆ ಮತ್ತು ವೈಚಾರಿಕತೆಯನ್ನು ಕುರಿತು ಅನೇಕ ವಚನಗಳನ್ನು ರಚಿಸುವ ಮೂಲಕ ಎಚ್ಚರಿಸುತ್ತಾನೆ.

ಜೇಡರ ದಾಸಿಮಯ್ಯನ ದೃಷ್ಟಿಯಲ್ಲಿ ವೈಚಾರಿಕತೆ ಎಂಬುದು ಕೇವಲ ನೀತಿ ಬೋಧೆಗೆ ಸೀಮಿತವಾಗಿದ್ದಿಲ್ಲ, ಅದನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಆಚರಣೆಗೆ ಕಾರಣೀಭೂತನಾಗಿದ್ದನು. ಯಾವ ವಿಚಾರವಾಗಲಿ ಅನುಭವದಿಂದ ಅದನ್ನು ಪರಾಮರ್ಶಿಸಿ ನೀತಿ ನಿಯಮಗಳೊಂದಿಗೆ ತನ್ನ ಬದುಕಿನುದ್ದಕ್ಕೂ ಅಳವಡಿಸಿಕೊಂಡು ಇತರರಿಗೆ ಮಾದರಿಯಾಗಿದ್ದನು. ತನ್ನ ಜೀವನ ಪಾವನಗೊಳಿಸಿಕೊಳ್ಳುವ ವಿಚಾರದಲ್ಲಿ ಬೇರೆ ಯಾವ ಆಸೆ ಆಮಿಷಗಳಿಗೆ ಒಳಗಾಗುತ್ತಿರಲಿಲ್ಲ, ತಾನಾಯ್ತು ತನ್ನ ಕಾಯಕ-ದಾಸೋಹವಾಯಿತು ಎಂಬ ಮನೋಭಿಲಾಷೆಯಲ್ಲಿಯೇ ಜೀವನ ಸವೆಸುತ್ತಿದನು. ಆಡಂಬರದ ಬದುಕು ಅವನಿಗೆ ಇಷ್ಟವಾಗಲಿಲ್ಲ, ಅದೆಲ್ಲಾ ಕ್ಷಣಿಕ ಸುಖವೇ ಹೊರೆತು ಶಾಶ್ವತವಲ್ಲ ಎಂಬ ಅರಿವು ಅವನಿಗೆ ಚನ್ನಾಗಿ ಗೊತ್ತಿತ್ತು, ಅದಕ್ಕಾಗಿ ಅವನು

'ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ,
ನಿಮ್ಮ ಶರಣರ ಸೂಳ್ನುಡಿಯ ಒಂದರೆ ಘಳಿಗೆ ಇತ್ತಡೆ
ನಿಮ್ಮನಿತ್ತೆ ಕಾಣಾ! ರಾಮನಾಥ' (ಪ.ಶಾ.ಸಾ.ವ. ೧೫೫೧)

ಮುಖ್ಯವಾಗಿ ದಾಸಿಮಯ್ಯನಿಗೆ ಬೇಕಾದುದು ಮುಕ್ತವಾದ ಹಾಗೂ ಸ್ವತಂತ್ರವಾದ ವೈಚಾರಿಕ ಜೀವನ. ಅದಕ್ಕಾಗಿ ಅವನು ಕಾಯಕ-ದಾಸೋಹವನ್ನವಲಂಬಿಸಿದ್ದಾನೆ ಹೊರತು ಮತ್ತೊಬ್ಬರ ಹಂಗಿನ ಬದುಕನ್ನಲ್ಲ. ಸುಖ ಸುಮ್ಮನೆ ದೊರೆತುದುದನ್ನು ಮೌನವಾಗಿ ಅವನು ತಿರಸ್ಕರಿಸಿರುವುದುಂಟು. ಹಾಗಾಗಿ ಯಾರಾದರಾಗಲಿ ಅಥವಾ ಸಕ್ಷಾತ್ ಭಗವಂತನಾಗಲಿ ಯಾವುದೇ ರೂಪದಲ್ಲಿ ಬಂದು ಕರಿ, ಸಿರಿ-ಸಂಪತ್ತು, ರಾಜ್ಯಭಂಡಾರವನ್ನಿತ್ತಡೆ ಅವನಿಗೆ ಅದೆಲ್ಲಾ ಬೇಕಾಗಿರಲಿಲ್ಲ. ಇವುಗಳನ್ನು ಪಡೆದು ತಾನು ಅಹಂಕಾರಕ್ಕೊಳಗಾಗುವುದಾಗಲಿ, ಇತರರ ಅಸಹನೆಯ ಕಣ್ಣಿಗೆ ಗುರಿಯಾಗುವುದಾಗಲಿ

ಅವನಿಗೆ ಬೇಕಾಗಿರಲಿಲ್ಲ. ಕಾಯಕದ ಮೂಲಕ ಸಮಷ್ಟಿ ಪ್ರಜ್ಞೆಯ ವಿಚಾರಪೂರ್ವ ಬದುಕು ಅವನ ಪಾಲಿಗೆ ಸ್ವರ್ಗವಾಗಿತ್ತು. ಹಾಗಾಗಿ ದಾಸಿಮಯ್ಯನಿಗೆ ಶರಣ ಸಮೂಹ ಮತ್ತು ಶರಣರ ನಡೆ-ನುಡಿಯ ಕಡೆಗೆ ಹೆಚ್ಚು ಆಸಕ್ತಿ ತಾಳಿದವನಾಗಿದ್ದನು.

ಜೇಡರ ದಾಸಿಮಯ್ಯನ ವಿಚಾರದಲ್ಲಿ ಅನಾಯಾಸವಾಗಿ ಬಂದ ಸಂಪತ್ತು ಅಥವಾ ಜ್ಞಾನಕ್ಕೆ ಬೆಲೆಯೆಂಬುದಿರುವುದಿಲ್ಲ. ಅವುಗಳನ್ನು ಪಡೆಯುವುದಾಗಿದ್ದರೆ ಸತತ ಪ್ರಯತ್ನ, ಅಧ್ಯಯನ, ಏಕಾಗ್ರತೆ, ನಂಬಿಕೆಗಳು ಮುಖ್ಯ. ವಿಚಾರಶೂನ್ಯನಾದಾಗ ಒಳಿತು ಕೆಡಕುಗಳ ಬಗೆಗೆ ಅರಿವು ಕಡಿಮೆಯಾಗುವುದುಂಟು. ಹಾಗಾಗಿ ಸದಾ ಎಚ್ಚರಿಕೆ ಅಥವಾ ಜಾಗ್ರತೆಯ ಮನಸ್ಸು ಪ್ರತಿಯೊಬ್ಬರಿಗೂ ಅತ್ಯವಶ್ಯಕ.

ಸಮಾಜದಲ್ಲಿ ಕಂಡುಬರುವ ಡಂಬಾಚಾರದ ಭಕ್ತಿಯ ಬೂಟಾಟಿಕೆಗಳನ್ನು ಕಂಡಾಗ ಅನೇಕ ಸಲ ಶರಣರು ತಮ್ಮ ವೈಚಾರಿಕ ಪ್ರಜ್ಞೆಯ ಮೂಲಕ ಟೀಕಿಸಿದ್ದಾರೆ. ದಾರಿ ತಪ್ಪಿದವರನ್ನು ಮತ್ತೆ ಮತ್ತೆ ಎಚ್ಚರಿಸಿ ಸರಿ ದಾರಿಗೆ ತರಲು ಪ್ರಯತ್ನ ಮಾಡಿದ್ದಾರೆ. ದಾನ-ಧರ್ಮ ಮಾಡುವವರಲ್ಲಿ ಅಹಂಕಾರದ ಭಾವನೆ ಸಲ್ಲದು ಅಹಂಕಾರದಿಂದ ದಾನ-ಧರ್ಮ ಮಾಡಿದ್ದೆಲ್ಲವೂ ಭಗವಂತನಿಗೆ ಸಮರ್ಪಿತವಾಗಲಾರದು ಎಂದು ದಾಸಿಮಯ್ಯನ ವಚನವೊಂದು ನಿದರ್ಶನವಾಗಿದೆ.

'ಅರ್ಥವುಂಟೆಂದು ಅಹಂಕರಿಸಿ ಮಾಡುವವನ ಭಕ್ತಿ
ತೊತ್ತಿನ ಕೂಟದ ತೂರ್ಯ ಮೇಳದಂತೆ
ತನು-ಮನ-ಧನದಲ್ಲಿ ವಂಚನೆಯುಳ್ಳ
ಪ್ರಪಂಚಿಯ ಮನೆಯ ಕೂಳು ಶುನಕನ ಬಾಯ ಎಲುವ
ಪ್ರತಿ ಶುನಕ ತಿಂದಂತೆ ರಾಮನಾಥ' (ಸ.ವ.ಸಂ:೭ ವ.ಸಂ, ೭೨೦)

ಅಂದರೆ ಸಂಪತ್ತಿನ ಆಡಂಬರದ ಪ್ರದರ್ಶನಕ್ಕಾಗಿ ಮಾಡುವ ದಾನ-ಧರ್ಮಗಳೆಲ್ಲಾ ದಾಸಿಮಯ್ಯನ ವಿಚಾರ ದೃಷ್ಟಿಯಲ್ಲಿ ಅರ್ಥಹೀನ. ಅದೇ ರೀತಿ ಮತ್ತೊಬ್ಬರನ್ನು ವಂಚಿಸಿ ಅಥವಾ ಮೈಗಳ್ಳರಾಗಿ ಗಳಿಸಿದ ಸಂಪತ್ತು ಸಹ ದಾನಕ್ಕೆ ಯೋಗ್ಯವೆನಿಸುವುದಿಲ್ಲ. ತನು-ಮನ ಬಳಲಿಸಿ, ಮೈಮುರಿದು, ಕಷ್ಟಪಟ್ಟು ನ್ಯಾಯಮಾರ್ಗದಲ್ಲಿ ಗಳಿಸಿದ ಹಣ ಮಾತ್ರ ಶಿವನಿಗೆ ಅರ್ಪಿತವಾಗುತ್ತದೆ. ಡಂಬಾಚಾರದ ವ್ಯಕ್ತಿತ್ವವುಳ್ಳವರಿಂದ ದಾನ ಸ್ವೀಕರಿಸಿದರೆ ಅದು ಒಂದು ನಾಯಿ ತಿಂದು ಬಿಟ್ಟ ಎಂಜಲನ್ನು ಮತ್ತೊಂದು ನಾಯಿಯು ತಿಂದಂತಾಗುತ್ತದೆ ಎಂದು ಜೇಡರ ದಾಸಿಮಯ್ಯನು ತನ್ನ ವೈಚಾರಿಕತೆಯ ಮಾತುಗಳಿಂದ ಸ್ಪಷ್ಟಪಡಿಸಿದ್ದಾನೆ.

ಹುಟ್ಟಿನಿಂದ ನೇಕಾರ ವರ್ಗದವನಾಗಿದ್ದರೂ ಮುಂದೆ ಅವನ ವೀರಶೈವ (ಲಿಂಗಾಯತ)ನಾಗಿ ಸಾಧಕನಾದನು. ಅವನ ವಚನಗಳಲ್ಲಿ 'ಭಕ್ತ'-'ಭವಿ' 'ಶರಣ' 'ಕರಸ್ಥಲ ಜ್ಯೋತಿ' (=ಇಷ್ಟಲಿಂಗ), 'ಗಣಂಗಳು' 'ಗುರು ಲಿಂಗ ಜಂಗಮ' ಇತ್ಯಾದಿ. ಪಾರಿಭಾಷಿಕ ಪದಗಳಿವೆ. 'ಕೀಳು ಡೋಹರ

ಕಕ್ಕಯ್ಯ, ಕೀಳು ಮಾದರ ಚನ್ನಯ್ಯ, ಕೀಳು ಓಹಿಲ ದೇವ, ಕೀಳು ಉದ್ಭಟಯ್ಯ, ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥ'- ಈ ಶಿವಭಕ್ತರಲ್ಲಿ ಡೋಹರ ಕಕ್ಕಯ್ಯ ಮಾದರ ಚನ್ನಯ್ಯ ಇಬ್ಬರೂ ದಾಸಿಮಯ್ಯನ ಸಮಕಾಲೀನ ದಲಿತ ವರ್ಗದವರು, ಉಳಿದವರೂ ಅಷ್ಟೇ ಅವರು 'ಕೀಳು' ಜಾತಿಯವರಾದರೂ, ಹಸುವು ತನ್ನ 'ಕೀಳು'ವಿಗೆ (ತನಗಿಂತ ಕೆಳಗೆ ನಿಂತಿರುವ ಕರುವಿಗೆ ಹಾಲು ಉಣಿಸುವಂತೆ 'ಕೀಳು' ಜಾತಿಯವರಿಗೆ ಶಿವನು ಒಲಿಯುತ್ತಾನೆ ಎಂಬ ಅರ್ಥದ ವಚನ ಗಮನಾರ್ಹ) ನೇಕಾರನಾಗಿ ದಲಿತ ವರ್ಗದವರಿಗಿಂತ ಮೇಲು ಜಾತಿಯವನಾದ್ದರೂ 'ಡೋಹರ ಜಾತಿಯ ಕಕ್ಕಯ್ಯ 'ಮಾದಾರ' ಜಾತಿಯ ಚನ್ನಯ್ಯರನ್ನು ಶ್ರದ್ಧೆಯಿಂದ ಸ್ಮರಿಸಿದ್ದಾನೆ. ಮುದನೂರಿನಲ್ಲಿ ಸ್ಪೃಶ್ಯ- ಅಸ್ಪೃಶ್ಯ ಎಂಬ ಭೇದ ಭಾವವಿದ್ದರೂ ಅದರ ವಿರುದ್ಧ ದಾಸಿಮಯ್ಯ ಸೆಟೆದು ನಿಂತ. ಅವನ ಆ ಪ್ರತಿಭಟನೆಗೆ ಸಾಮಾನ್ಯ ಜನ ಸಕಾರಾತ್ಮಕವಾಗಿಸ್ಪಂದಿಸಿದರು ಅವರು ತನ್ನ ಆರಾಧ್ಯ ದೈವದ ದರ್ಶನಕ್ಕೆ ಹೋದಾಗ ಆ ಕಾಲದಲ್ಲಿ ರಾಮನಾಥನ ದೇವಾಲಯದ ಅರ್ಚಕರು ಬ್ರಾಹ್ಮಣರಾಗಿದ್ದು ಅವರು ಕೆಳವರ್ಗದ ಜೇಡರ ದಾಸಿಮಯ್ಯನಿಗೆ ಪ್ರವೇಶಾವಕಾಶ ನೀಡದೇ ಇದ್ದದ್ದು ಆ ಕತೆಯಿಂದ ಸೂಚಿತವಾಗುತ್ತದೆ. ಬ್ರಾಹ್ಮಣರೇ ಪ್ರಬಲರಾಗಿದ್ದ ಮುದನೂರಿನಲ್ಲಿ ಅವರು ತನ್ನನ್ನ ಕಡೆಗಣಿಸಿದ್ದನ್ನು ಅವನು ಸಹಿಸಿಕೊಳ್ಳುವುದು ಕಷ್ಟವಾಗಲಿಲ್ಲ. ಬ್ರಾಹ್ಮಣರು ಒಳಗೆ ರಾಮನಾಥನನ್ನು ಮುಟ್ಟಿ ಪೂಜಿಸಿದರೂ ಅವರ ಮನಸ್ಸು ಹೊರಗಿನ ಹಣದ ಮೇಲೆ, ದೇವಸ್ಥಾನದ ಹೊರಗಿದ್ದರೂ ದಾಸಿಮಯ್ಯನ ಮನಸ್ಸು ಕೇಂದ್ರೀಕೃತವಾಗಿದ್ದುದು ಒಳಗಿನ ರಾಮನಾಥನ ಮೇಲೆ. ತಾನೇ ಇಂತಹ ಅಪಮಾನವನ್ನು ಅನುಭವಿಸಿದ ಜೇಡರ ದಾಸಿಮಯ್ಯನಿಗೆ ಜಾತಿಭೇದದ ಬಗ್ಗೆ ತೀವ್ರ ವಿರೋಧವಿತ್ತು. 'ಕೀಳು ಡೋಹರ ಕಕ್ಕ, ಕೀಳು ಮಾದರ ಚೆನ್ನ, ಕೀಳಿಂಗಲ್ಲದೆ ಹಯನು ಕರೆಯದೆ' ಎಂಬ ವಚನದಲ್ಲಿ ಕಕ್ಕಯ್ಯ ಚೆನ್ನಯ್ಯರಿಗೆ ಶಿವನು ಒಲಿದದ್ದನ್ನು ಸೂಚಿಸಿದ್ದಾನೆ.

'ಹೊಲೆಯರ ಭಾವಿಯಲೊಂದು ಎಲು ನಟ್ಟಿದ್ದರೆ

ಹೊಲೆಯೆಂಬುದು ಲೋಕವೆಲ್ಲಾ

ಹಲವೆಲುವಿನ ಬಾಯಿ ಒಲವರವ ನುಡಿದರೆ

ಹೊಲೆಯರ ಭಾವಿಯಿಂದ ಕರಕಷ್ಟ ನೋಡಾ ರಾಮನಾಥಾ' (ಸ.ವ.ಸಂ:೭ ವ.ಸಂ, ೮೮೩)

ಸುಳ್ಳು ಹೇಳುವ, ಪಕ್ಷಪಾತದ ಮಾತಾಡುವ ಬಾಯಿಯು ಹೊಲೆಯರ ಬಾವಿಗಿಂತ ಹೀನ ಎನ್ನುತ್ತಾನೆ. ಹೊಲೆಯರ ಬಾವಿಯಲ್ಲಿ ಅಕಸ್ಮಾತ್ ಒಂದು ಎಲುಬು ನಟ್ಟಿರಬಹುದು, ಎಲ್ಲ ಮನುಷ್ಯರ ಬಾಯಿಗಳಲ್ಲೂ ಹಲ್ಲುಗಳೆಂಬ ಹಲವು ಎಲುಬುಗಳಿರುತ್ತವೆ. ಅಂತಹ ಯಾವನಾದರೂ 'ಒಲವರ'ವನ್ನು (ಪಕ್ಷಪಾತ) ನುಡಿದರೆ ಅವನ ಬಾಯಿಯೇ ಹೊಲೆಯರ ಬಾವಿ ಎನ್ನುತ್ತಾನೆ. ಅವನ ಕಾಲದಲ್ಲಿ ಹೊಲೆಯರ ಬಾವಿಗಳ ಮೇಲೆ ಹರಿದು ಅಥವಾ ಒಳಗೆ ಮಧ್ಯದಲ್ಲೋ ಒಂದು ಎಲುಬನ್ನು ನಟ್ಟು ಅದು ಹೊಲೆಯರದ್ದು, ಅನ್ಯರು ಬಳಸಬಾರದು ಎಂದು ಸೂಚಿಸುತ್ತಿದ್ದರು. ಬಹುಶಃ ಆ ಎಲುಬು ಆ ಹೊಲೆಯರ ಬಾವಿಗಿದ್ದ ಒಂದು ಬಗೆಯ ನಾಮಫಲಕ. ಮುದನೂರಿನಂತಹ

'ಅಗ್ರಹಾರ'ಗಳಲ್ಲಂತೂ ಅಂತಹ ಹೊಲೆಯರ ಬಾವಿಯ ಸೂಚಕಗಳು ಇರುವುದು ಅನಿವಾರ್ಯವಾಗಿದ್ದಿತು. ಮುದನೂರಿನ ಸುತ್ತ ಇದ್ದ ಹಲವು ಒರತೆ ಬಾವಿಗಳಲ್ಲಿ ಒಂದರಲ್ಲಾದರೂ ಅಂತಹ ಬಾವಿ ಇದ್ದು. ಅಲ್ಲಿ ಎಲುಬನ್ನು ನಟ್ಟಿದ್ದ ಸಾಧ್ಯತೆ ಇದೆ. ಸ್ಪೃಶ್ಯ-ಅಸ್ಪೃಶ್ಯ ಭಾವನೆಯ ವಿರೋಧಿಯಾಗಿದ್ದ ಜೇಡರ ದಾಸಿಮಯ್ಯನ ಧೋರಣೆ ಅಂದಿನ ಶರಣ ಚಳುವಳಿಯ ಧ್ಯೇಯಕ್ಕೆ ಅನುಗುಣವಾಗಿತ್ತು. ಅವನು ಸುಳ್ಳು ಹೇಳುವುದು, ಅನೈತಿಕ ಸಂಪರ್ಕ ಇತ್ಯಾದಿಗಳನ್ನು ವಿರೋಧಿಸಿದ್ದಾನೆ. ಮೋಸದ ಧನಸಂಪಾದನೆಗೆ ವಿರೋಧಿ ಅವನು.

ಅವನು ಮಾಂಸಾಹಾರ, ಸುರಾಪಾನ, ಭಂಗಿ ಹೊಗೆಸೊಪ್ಪು ಸೇದುವುದು. ವೇಶ್ಯೆಯರ ಸಂಗ ಇವುಗಳಿಗೆ ಸ್ಪಷ್ಟವಾಗಿ ವಿರೋಧಿಯಾಗಿದ್ದ. ವ್ಯಕ್ತಿ ಪತ್ನಿಯನ್ನು ಬಿಟ್ಟು ಅನ್ಯ ಸ್ತ್ರೀಯರ ಜೊತೆ ಸಂಪರ್ಕವನ್ನು ಬೆಳೆಸುವ ಅನೀತಿಯನ್ನು ಖಂಡಿಸಿದ್ದಾನೆ. ಅಂತಹ ದುರ್ಗುಣಗಳಿಂದ ದೂರ ಉಳಿದವನೇ ನಿಜವಾದ ಗುರು, ಜಂಗಮ. ಈಗಾಗಲೇ ಹಿಂದೆ ಸೂಚಿಸಿರುವಂತೆ ಇಡೀ ಕನ್ನಡ ಸಾಹಿತ್ಯದಲ್ಲಿ ಅವನು ಹಸಿವಿನ ಬಗ್ಗೆ ಮೊತ್ತ ಮೊದಲ ದನಿ ಎತ್ತಿ ದೀನ ದಲಿಯತರ ಬಗ್ಗೆ ಅಪಾರ ಕರುಣೆಯನ್ನು ವ್ಯಕ್ತ ಮಾಡಿರುವ ವ್ಯಕ್ತಿ. 'ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ' - ಹಸಿವೇ ಹೆಬ್ಬಾವು, ಅದರ ವಿಷ ಮನುಷ್ಯನ ಇಡೀ ದೇಹವನ್ನು ವ್ಯಾಪಿಸುತ್ತದೆ.

'ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ,

ಒಡುಲುಗೊಂಡವನೆಂದು ನೀನೊಮ್ಮೆ ಜಡಿದು ನುಡಿಯದಿರ.

ನೀನೆನ್ನಂತೆ ಒಡಲುಗೊಂಡು ನೋಡಾ ರಾಮನಾಥಾ' (ಸ.ವ.ಸಂ:೭ ವ.ಸಂ, ೭೫೭)

ಅಸಿದವನು ಸುಳ್ಳನ್ನು ಹೇಳಲೇ ಬೇಕಾಗುತ್ತದೆ-ನಾನು ಆ ಕಾರಣಕ್ಕೆ ಸುಳ್ಳು ಹೇಳಿದೆ ಎಂದು ನೀನು ನನ್ನನ್ನು ಕಂಡಿಸಬೇಡ, ನೀನು ನನ್ನಂತೆ ದೇಹವನ್ನು ಧರಿಸಿ ಬಾ, ಆಗ ಮಾತ್ರ ನಿನಗೆ ಹಸಿವು ಎನ್ನುವುದರ ನಿಜವಾದ ಅರ್ಥ ಆಗುತ್ತದೆಯೆಂದು ಭಗವಂತನಿಗೇ ಜೇಡರ ದಾಸಿಮಯ್ಯ ಸವಾಲು ಹಾಕಿರುವುದು ಅಪೂರ್ವ ಎಂದರೆ ದಾಸಿಮಯ್ಯ ಹಸಿವನ್ನು ಅನುಭವಿಸಿದವನು, ಆದರೆ ಸುಳ್ಳು ಹೇಳಿದವನಲ್ಲ. ಅವನು ಉದಾರವಾಗಿ ಬಡಜನರಿಗೆ ಅನ್ನ ದಾಸೋಹವನ್ನು ನಡಸಿದವನು. ಅವನು ಮಾತನಾಡಿರುವುದು ಸಾಮಾನ್ಯ ಬಡಜನತೆಯ ಪ್ರತಿನಿಧಿಯಾಗಿ ಎಂಬುದು ಸ್ವಯಂವೇದ್ಯ. 'ಸತ್ಯದ ನುಡಿ ತೀರ್ಥ, ಭಕ್ತಿಯ ನಡೆ ತೀರ್ಥ, ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ, ಹರಿವ ನದಿ ಎತ್ತಣ ತೀರ್ಥ ರಾಮನಾಥ' - ನದಿಯ ನೀರಿಗಿಂತ ಬಾಯಿಂದ ಹರಿದು ಬರುವ ಸತ್ಯದ ನುಡಿಯೇ ಹೆಚ್ಚು ಪವಿತ್ರ ಹಾಗೆಯೇ, 'ನುಡಿ'ಯಂತೆಯೇ ಭಕ್ತಿಯ 'ನಡೆ'ಯೇ ತೀರ್ಥ, ಅಷ್ಟೇ ಪವಿತ್ರ ಸಜ್ಜನರೊಡನೆ ನಡೆಸುವ ಸಂಭಾಷಣೆ, ಮಾತುಕತೆ, ಚರ್ಚೆ, ಶರಣರ ವಚನಗಳು 'ನಡೆದು ನುಡಿ'ದ ವಚನಗಳು ಎಂಬ ಮಧ್ಯಕಾಲೀನ ವಚನ ವ್ಯಾಖ್ಯಾನಕಾರನೊಬ್ಬನ ಮಾತು ಇಲ್ಲಿ ನೆನಪಿಗೆ ಬರುತ್ತದೆ. ಶರಣನು ಮೊದಲು ಶ್ರೇಷ್ಠ ಸತ್ಯಮಯ ಭಕ್ತಿಮಯ ತ್ಯಾಗಮಯ ಜೀವನವನ್ನು

‘ನಡೆ’ಯಬೇಕು, ಅಥವಾ ನಡೆಸಬೇಕು. ಆಗ ಅಂತಹ ವ್ಯಕ್ತಿಯ ಬಾಯಿಯಿಂದ ಬರುವ ‘ನುಡಿ’ಗೆ ‘ವಚನ’ಕ್ಕೆ ಹೆಚ್ಚಿನ ಬೆಲೆ ಬರುತ್ತದೆ ಎಂಬುದು ಅಂದಿನ ಶರಣರ ಭಾವನೆಯಾಗಿತ್ತು. ತನ್ನ ಕಾಲದಲ್ಲಿ ಸಮಾನ ಮನಸ್ಕರಾದ ಶರಣರು ಆಗಾಗ್ಗೆ ಒಂದೆಡೆ ಕುಳಿತು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದುದನ್ನು ಇಲ್ಲಿ ದಾಸಿಮಯ್ಯ ಸೂಚಿಸಿದ್ದಾನೆ. ಅಂತಹ ಅನುಭಾವ ಗೋಷ್ಠಿಗಳು ಜನರ ಶ್ರದ್ಧೆಯನ್ನು ಹೆಚ್ಚಿಸಿದ್ದವು, ಮೂಢ ನಂಬಿಕೆಗಳನ್ನು ತೊಲಗಿಸುತ್ತಿದ್ದವು, ಅವರ ಚಿಂತನ ಶಕ್ತಿಯನ್ನು ಹೆಚ್ಚಿಸುತ್ತಿದ್ದವು, ವಚನಗಳ ಮೂಲಕ ತಮ್ಮ ಚಿಂತನೆ ಅನುಭವಗಳನ್ನು ಹಂಚಿಕೊಳ್ಳಲು ಪ್ರೇರೇಪಿಸುತ್ತಿದ್ದವು. ಅಂತಹ ಅನುಭವ ಗೋಷ್ಠಿಗಳಿಂದಾಗಿಯೇ ಅಲ್ಪಾವಧಿಯಲ್ಲಿ ‘ಶರಣ ಚಳುವಳಿಯು’ ವ್ಯಾಪಕವಾಗಿ ಪಸರಿಸಲು ಸಾಧ್ಯವಾದುದು. ಅಂತಹ ಸಾಮೂಹಿಕ ಗೋಷ್ಠಿಗಳನ್ನೇ ಇಲ್ಲಿ ‘ಪ್ರಸಂಗ’ ಎಂದು ಕರೆದಿರುವುದು (ಪ್ರಸಂಗ+ಸೇರಿಕೆ, ಕೂಟ, ಸಭೆ, ಚರ್ಚೆ). ಜೇಡರ ದಾಸಿಮಯ್ಯನ ಒಂದು ವಚನ ಹೀಗಿದೆ,

‘ಹೇಳುತ್ತ ಕೇಳುಗನ ಕೀಳಿನೊಳಗಿರೆ ಲೇಸು

ಹೇಳುತ್ತ ಕೇಳಿದ ಕಡು ಮುರ್ಖನ

ಕೋಣೆಯಲ್ಲಿರಲಾಗದು ರಾಮನಾಥ’ (ಸ.ವ.ಸಂ:೭ ವ.ಸಂ, ೮೮೩)

ಯಾರಾದರೂ ಶ್ರೇಷ್ಠವಾದ ಬೋಧನೆ ಮಾಡುತ್ತಿದ್ದರೆ ಅಥವಾ ಅಂತಹ ಶ್ರೇಷ್ಠ ಮಾತುಗಳನ್ನಾಡಿದರೆ ಅಂಥವನ ಮಾತನ್ನು ಕೇಳುವ ವಿವೇಕಿಯ ಸೇವಕನಾಗಿರುವುದೇ ಉತ್ತಮ. ಒಳ್ಳೆಯ ಮಾತನ್ನು ಕೇಳಿದ ಕಡುಮೂರ್ಖನ ಕೋಣೆಯಲ್ಲಿ ಇರಬಾರದು ಎಂಬ ಮಾತು ಗಮನಾರ್ಹ. ಅವನು ಭಾಗವಹಿಸುತ್ತಿದ್ದ ಪ್ರಸಂಗಗಳಲ್ಲಿ ವಿವೇಕದ ಮಾತನ್ನು ಆಡುವವರಿದ್ದು ಅವಿವೇಕದ ಮಾತನ್ನೂ ಆಡುವವರು ಕೆಲವರು ಇದ್ದರು. ಇದು ಸ್ವಾಭಾವಿಕ ‘ಕೋಣೆ’ ಎಂಬುದು ಜೇಡರ ದಾಸಿಮಯ್ಯ ಭಾಗವಹಿಸುತ್ತಿದ್ದ ‘ಪ್ರಸಂಗ’ಗಳು ನಡೆಯುತ್ತಿದ್ದ ಜಾಗವನ್ನು ಸೂಚಿಸುತ್ತದೆ.

ಪುರುಷ ಮತ್ತು ಸ್ತ್ರೀ ಸಮಾನತೆಯನ್ನು ತೆರೆದ ಮನಸ್ಸಿನಿಂದ ಒಪ್ಪಿಕೊಂಡು ಆಚರಿಸುತ್ತಿದ್ದ ಶ್ರೇಷ್ಠಶರಣ ಅವನು. ಪತ್ನಿಗಾಗಿ ಹುಡುಕಿ ಕೊನೆಗೆ ಅವನು ಅನುರೂಪಳಾದ ಕನ್ನೆಯನ್ನು ಒಪ್ಪಿಕೊಂಡು ಮದುವೆಯಾಗಿ ದುಗ್ಗಳೆಯೊಡನೆ ಸುಖದ ಸಂಸಾರವನ್ನು ನಡೆಸಿದ ಸಂಗತಿಯು ಪ್ರಸ್ತುತ ಕಾಲಕ್ಕೆ ಮಾದರಿಯಾಗಿದೆ. ಅವನ ವಚನಗಳಲ್ಲಿ–

‘ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ

ಸತಿಪತಿಗಳೊಂದಾಗದವನ ಭಕ್ತಿ

ಅಮೃತದೊಳು ವಿಷ ವೆರೆದಂತೆ ಕಾಣಾ ರಾಮನಾಥ’ (ಸ.ವ.ಸಂ:೭ ವ.ಸಂ, ೯೬೧)

ದಾಸಿಮಯ್ಯ ಮುಂದೆ ತನ್ನ ಪತ್ನಿಯಾದ ದುಗ್ಗಳೆಯನ್ನು ಕುರಿತು ಹೇಳುತ್ತಾನೆ.

‘ಬಂದುದನರಿದು ಬಳಸುವಳು

ಬಂದುದ ಪರಿಣಾಮಿಸುವಳು

ಬಂಧು ಬಳಗವ ಮರೆಸುವಳು

ದುಗ್ಗಳೆಯ ತಂದು ಬದುಕಿದೆನು ಕಾಣಾ ರಾಮನಾಥಾ' (ಸ.ವ.ಸಂ:೭ ವ.ಸಂ, ೮೨೧)

ತಾವು ದುಡಿದದ್ದನ್ನು 'ಅರಿದು' ಅವಳುಬಳಸುತ್ತಿದ್ದಳು, ಯಾವುದಕ್ಕೆ ಮಾತ್ರ ಬೇಕೋ ಅದಕ್ಕೆ ಮಾತ್ರ ಖರ್ಚು ಮಾಡುತ್ತಿದ್ದಳು. ದುಂದು ವೆಚ್ಚ ಮಾಡುತ್ತಿರಲಿಲ್ಲ. ಎಷ್ಟು ಆದಾಯವೋ ಅದರಲ್ಲಿ ಅಷ್ಟಕ್ಕೇ ತೃಪ್ತಿ. ಹಣದ ಆಸೆ ಅವಳಿಗೆ ಇರಲಿಲ್ಲ. ಬಂದದ್ದರಲ್ಲೇ ತೃಪ್ತಿ. ಅವಳ ನಡವಳಿಕೆಯಿಂದಾಗಿ ಅವನು ಬಂಧು ಬಳಗದ ಸಹಾಯವನ್ನು ಬಯಸುತ್ತಿರಲಿಲ್ಲ. ಅವನು ಮನೆಯಲ್ಲಿದ್ದಾಗ ಅದೇ ಅವನ ಸರ್ವಪ್ರಪಂಚ ಎಂಬಂತೆ ನಡೆದುಕೊಳ್ಳುತ್ತಿದ್ದಳು. ಅವಳನ್ನು ಆರಿಸಿ ಮದುವೆಯಾದುದು ತನ್ನ ಭಾಗ್ಯ, ತನ್ನ ಮರುಹುಟ್ಟು ಎಂದೇ ಅವನು ಉದ್ಗಾರ ತೆಗೆದಿದ್ದಾನೆ. ಇಡೀ ಕನ್ನಡ ಸಾಹಿತ್ಯದಲ್ಲಿ ಒಬ್ಬ ಗಂಡ ತನ್ನ ಹೆಂಡತಿ ಬಗ್ಗೆ ಇಷ್ಟೊಂದು ಆತ್ಮೀಯವಾಗಿ ಕೃತಜ್ಞತೆಯಿಂದ ಆನಂದ ಬಾಷ್ಪದೊಡನೆ ಸ್ಮರಿಸಿದ ಇನ್ನೊಂದು ಉದಾಹರಣೆ ಇಲ್ಲ. ಸತಿ ಪತಿ ಮಧುರ ಬಾಂಧವ್ಯಕ್ಕೆ ಜೇಡರ ದಾಸಿಮಯ್ಯ –ದುಗ್ಗಳೆಯರಿಗೆ ಸರಿಸಮಾನವಾದ ಇನ್ನೊಂದು ಉದಾಹರಣೆಯೆಂದರೆ ಜೇಡರ ದಾಸಿಮಯ್ಯ–ದುಗ್ಗಳೆಯರೇ.

ದಾಸಿಮಯ್ಯ ಸಮಾಜ ಮುಖಿ ಚಿಂತಕನಾಗಿರುವಂತೆ ಆಧ್ಯಾತ್ಮಿಕ ಸಾಧಕನೂ ಆಗಿದ್ದ, ಅಗೋಚರ ಶಿವನ ಚೈತನ್ಯವೇ ಪ್ರತಿ ವ್ಯಕ್ತಿಯ ಒಳಗಿನ 'ಆತ್ಮ' ಅದು ಗಂಡೂ ಹೌದು, ಹೆಣ್ಣೂ ಹೌದು, ಅಥವಾ ಎರಡೂ ಅಲ್ಲ, 'ಅಂಗ'ವು 'ಲಿಂಗ'ವಾಗುವ ಸ್ಥಿತಿಯೇ ಐಕ್ಯ – ಅದನ್ನು ಅವನು ಲಿಂಗಾಂಗ ಸಾಮರಸ್ಯ' ಎಂದಿದ್ದಾನೆ. ಆ ಐಕ್ಯಸ್ಥಿತಿಯನ್ನು ತಲಪಬೇಕಾದರೆ ಸಾಧಕನಿಗೆ ಒಂದು ಏಣಿ ಬೇಕು. ಅದೇ ಮೂರ್ತ ದೈವದಲ್ಲಿ ಶ್ರದ್ಧೆ, ಆ ದೈವವೇ ಅವನಿಗೆ 'ರಾಮನಾಥ' ದೈವಭಕ್ತನಿಗೆ 'ಇಂದು ನಾಳೆ ಎಂಬ ಚಿತ್ತ ಬೇಡ – ಏಕೆಂದರೆ ಭಕ್ತರ ಬದುಕನ್ನು ನೋಡಿಕೊಳ್ಳುವವನು, ರಕ್ಷಿಸುವವನು ಶಿವ – ಹಾಗೆ 'ತಂದಿಕ್ಕುವ ಶಿವಂಗೆ ಬಡತನವೇ?

'ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ,

ಸುಳಿದು ಬೀಸುವ ವಾಯು ನಿಮ್ಮ ದಾನ,

ನಿಮ್ಮ ದಾನವನುಂಡು ಅನ್ಯರಾ ಹೊಗಳುವ

ಕುನ್ನಿಗಳನೇನೆಂಬ ರಾಮನಾಥಾ' (ಸ.ವ.ಸಂ:೭ ವ.ಸಂ, ೭೩೪)

ಶಿವಭಕ್ತನದು ವಿನಯಗುಣ, ಶಿವನ ಬಗ್ಗೆ ಅವನಿಗೆ ಇರುವ ವಿನಯ ಅಥವಾ ಭಕ್ತಿ ನಿಜಜೀವನದಲ್ಲೂ ಕಾಣಿಸಬೇಕು, ಇನ್ನೊಬ್ಬನನ್ನು ಆತ್ಮೀಯತೆಯಿಂದ ಮಾತನಾಡಿಸುವವನೇ ಭಕ್ತ– 'ಇತ್ತ ಬಾ ಎನ್ನದವನ ಹತ್ತೆ ಹೊದ್ದಲು ಬೇಡ' ತನ್ನ ಹತ್ತಿರಕ್ಕೆ ಕರೆಯದ ಅಹಂಕಾರಿಯ ಹತ್ತಿರ ತಾನು ಹೋಗುವುದಿಲ್ಲ, 'ಇತ್ತ ಬಾ' ಎಂದು ಮಾತನಾಡಿಸುವ ಭಕ್ತರ ಬಾಗಿಲ ಹತ್ತಿರ ಹೋಗುತ್ತೇನೆ ಎನ್ನುತ್ತಾನೆ–'ಇತ್ತ ಬಾ ಎನ್ನದವನ ಹತ್ತೆ ಹೊದ್ದಲು ಬೇಡ, ಇತ್ತ ಬಾ ಎಂಬ ಭಕ್ತನ ಬಾಗಿಲ

ಹತ್ತಿಪ್ಪೆ ಕಾಣಾ ರಾಮನಾಥಾ' "ಒಡಲು ಎಂಬುದು ಒಂದು ಬಂಡಿ, ಅದಕ್ಕೆ ಚಕ್ರಗಳಷ್ಟೇ ಅವುಗಳ ಮಧ್ಯದ ಕೀಲುಗಳೂ ಮುಖ್ಯ- ಇವು ಇರಲೇಬೇಕು. ಕಡೆಗೀಲುಗಳು ಬಂಡಿಯನ್ನು ನಿಯಂತ್ರಿಸುತ್ತವೆ. ಬಂಡಿ ಬೀಳದ ಹಾಗೆ ರಕ್ಷಿಸುತ್ತವೆ. ಕಡುದರ್ಪವೇರಿದ ದೇಹವು ಕಡಗೀಲಿಲ್ಲದ (ಕಡಾಣಿ) ಬಂಡಿಯಂತೆ, ಆ ಬಂಡಿಗೆ ಶರಣರ 'ನುಡಿಗಡಣ'ವೇ, ಎಂದರೆ ಅವರ ಹಿತವಚನಗಳೇ ಕಡಗೀಲುಗಳು. ಶ್ರೇಷ್ಠರ ಮಾತುಗಳು, ಅವರ ನುಡಿ ನಡೆಗಳು ವ್ಯಕ್ತಿಯನ್ನು ಸಂಯಮಿಯಾಗುವಂತೆ ನಿಯಂತ್ರಿಸುತ್ತವೆ, ಅಹಂಕಾರವೆಂಬ ರೋಗಕ್ಕೆ ಶರಣರ ವಚನಗಳೇ ನಿಜವಾದ ಔಷಧ"೪.

'ಕಡಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬದೆ?

ಕಡಗೀಲು ಬಂಡಿಗಾಧಾರ,

ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ

ಮೃಡಶರಣ ನುಡಿಗಡವೆ ಕಡಗೀಲು ಕಾಣಾ ರಾಮನಾಥಾ' (ಸ.ವ.ಸಂ:೭ ವ.ಸಂ, ೭೬೭)

ಈ ಮಾತು ಸಾರ್ವಕಾಲಿಕ ಸತ್ಯ, ಆಧುನಿಕ ಕಾಲದಲ್ಲೂ ಸತ್ವಪಥದಲ್ಲಿ ಸಾಗಲು ಇರುವ ಏಕೈಕ ಮಾರ್ಗದರ್ಶಿ, ಸ್ಪೂರ್ತಿ ನಮಗಿಂತ ಹಿಂದಿನ ಅಥವಾ ನಮ್ಮ ಹಿರಿಯರ ನಡೆ ನುಡಿ, ಉಪನಿಷತ್ತಿನ ಕಾಲದ ಋಷಿಗಳು, ಬುದ್ಧ ಏಸು, ವರ್ಧಮಾನು, ಶಂಕರ, ಪಂಪ, ಬಸವ, ಅಲ್ಲಮ, ಅಕ್ಕಮಹಾದೇವಿ, ಜೇಡರ ದಾಸಿಮಯ್ಯ, ಪುರಂದರ, ರಾಮಕೃಷ್ಣ-ವಿವೇಕಾನಂದ, ಗಾಂಧೀಜಿ, ಅರವಿಂದೊ ಇಂತಹ ಶ್ರೇಷ್ಠರ 'ನುಡಿಗಡಣ' ವೇ ಕಡೆಗೀಲು, ಭಗವಂತ ತನ್ನನ್ನು ಸ್ತೋತ್ರ ಮಾಡುವ ಭಕ್ತನಿಗೆ ಇದ್ದಕಿದ್ದಂತೆ ಕೃಪೆ ತೋರಿಸುವುದಿಲ್ಲ, ಅವನನ್ನು ಮತ್ತೆ ಮತ್ತೆ ಪರೀಕ್ಷಿಸುತ್ತಾನೆ, ಎಂದು ಹೇಳಿದ ದಾಸಿಮಯ್ಯ ೧೨ನೇ ಶತಮಾನದ ಚಳವಳಿ ಎಂದ ವಸಂತದಲ್ಲಿ ಚಿಗುರಿ ನಿಂತ ಮಾಮರನಾಗಿದ್ದಾನೆ.

೪.೪. ಮಡಿವಾಳ ಮಾಚಯ್ಯ :

ಜಗಜ್ಯೋತಿ ಬಸವಣ್ಣನವರು ಜನಿಸಿದ ಬಿಜಾಪುರ ಜಿಲ್ಲೆಯು ಶರಣಭೂಮಿಯೆಂದು ಹೆಸರು ಪಡೆದಿದೆ. ಇದೇ ಜಿಲ್ಲೆಯ ದೇವರ ಹಿಪ್ಪರಗಿಯ ಮಡಿವಾಳ ಮಾಚಿದೇವರ ಜನ್ಮಸ್ಥಳವು. ಕಲ್ಯಾಣಕ್ಕೆ ಬರುವ ಮುನ್ನ ಮಾಚಿದೇವನ ಚರಿತ್ರೆಯ ವಿವರಗಳು ಲಭ್ಯವಾಗಿರುವುದಿಲ್ಲ. ಹಿಪ್ಪರಗಿಯ ಗ್ರಾಮ ದೈವವಾದ ಕಲ್ಲಿನಾಥ ದೇವಾಲಯದಲ್ಲಿ ಶಾಸ್ತ್ರಪಾರಂಗತರಾಗಿದ್ದ ಗುರುಗಳಾದ ಕಲಿದೇವರಿಂದ ಅನುಗ್ರಹಿತನಾಗಿ ಮನೆಯ ಉದ್ಯೋಗವಾದ ಮಡಿವಾಳ ಕಾಯಕವನ್ನು ಮಾಡುತ್ತಿರುತ್ತಾನೆ. ವಿದ್ಯಾಪಾರಂಗತನೂ ವಿಚಾರಶೀಲನೂ ಆದ ಮಾಚಿದೇವನು ಬಸವಣ್ಣನವರ ಹಾಗೂ ಕಲ್ಯಾಣ ಪಟ್ಟಣದ ವೈಭವವನ್ನು ಕೇಳಿ ತಿಳಿದು ಅನುಭಾವಿಗಳ ದರ್ಶನಕ್ಕಾಗಿ ಆಧ್ಯಾತ್ಮ ಸಾಧನೆಗಾಗಿ ಕಲ್ಯಾಣದತ್ತ ಸಾಗುತ್ತಾನೆ. ಯಾವಾಗ ಕಲ್ಯಾಣಕ್ಕೆ ಬಸವಣ್ಣನವರನ್ನು ಕಂಡೇನೋ ಎಂದು ಉತ್ಸಾಹದಿಂದ ಸುರಿಯುವ ಮಳೆಯಲ್ಲಿಯೇ ಪ್ರಯಾಣಿಸುತ್ತಾನೆ. ಕಲ್ಯಾಣ ಮಹಾಪೂರದಿಂದ ಭೋರ್ಗರೆಯುತ್ತಿದ್ದ

ಭೀಮಾನದಿಯ ಪ್ರವಾಹದಲ್ಲಿ ಧುಮುಕಿ ಈಜಿ ಕಲ್ಯಾಣ ತಲುಪುತ್ತಾನೆ. ಇವನ ಅಪ್ರತಿಮ ಸಾಹಸ ಕಂಡು ಕಲ್ಯಾಣದ ಜನರು ಇವನನ್ನು ವೀರಭದ್ರನ ಅವತಾರವೆಂದೇ ಕೊಂಡಾಡುತ್ತಾರೆ.

ಕಲ್ಯಾಣದಲ್ಲಿ ನೆಲಸಿ ಮಾಚಿದೇವನು ಅಲ್ಲಿ ಶರಣರ ಬಟ್ಟೆ ಮಡಿ ಮಾಡುವ ಕಾಯಕ ಕೈಕೊಂಡು ಬಸವಣ್ಣನವರ ಮಹಾಮನೆಯ ಸದಸ್ಯನಾಗಿ ಶರಣರ ಅನುಭಾವ ಗೋಷ್ಠಿಯಲ್ಲಿ ಭಾಗವಹಿಸುತ್ತಾನೆ. ಇಷ್ಟಲಿಂಗ ನಿಷ್ಠನೂ ವೀರ ಮಹೇಶ್ವರನೂ ಆಗಿದ್ದನು. ತಾನು ನಂಬಿದ ನ್ಯಾಯ ಅವನಲ್ಲಿತ್ತು. ಅವನು ಒಂದು ಕೈಯಲ್ಲಿ ಕರವಾಳ (ಖಡ್ಗ) ಇನ್ನೊಂದು ಕೈಯಲ್ಲಿ ಗಂಟೆ ಹಿಡಿದಿರುತ್ತಿದ್ದನು. ಇವನಿಗೆ ವೀರಗಂಟೆ ಮಾಚಿದೇವ ಎಂದು ಎಲ್ಲರೂ ಕರೆಯುತ್ತಿದ್ದರು.

ಮಾಚಯ್ಯನ ನಿಷ್ಠೆ ಶರಣರಲ್ಲೆಲ್ಲಾ ಅತಿ ಪ್ರಸಿದ್ಧವಾದುದು. ತನ್ನ ಕಾಯಕದಲ್ಲಿಯೇ ಮಗ್ನನಾಗಿ ಏಕೈಕ ನಿಷ್ಠೆಯಿಂದ ಸಾಧನೆಯ ಮಾರ್ಗದಲ್ಲಿ ನಡೆದು ಸಿದ್ಧಿಯನ್ನು ಪಡೆದವನು. ಪ್ರಭುದೇವನಿಂದ ಹಿಡಿದು, ಬಸವ, ಚನ್ನಬಸವ ಎಲ್ಲರೂ ಈತನನ್ನು ಸ್ತುತಿಸಿದ್ದಾರೆ.

'ಪಾರಿಕಲ್ಲ ಪುತ್ಥಳಿಯನ್ನಪ್ಪಿಕೊಂಡಂತಾಯಿತ್ತು.
ಅಗ್ನಿಯ ಮುಸುಕು ತೆಗೆದ ಕರ್ಪುರದಂತಾಯಿತ್ತು.
ಕತ್ತಲೆಯೊಳಗೆ ಬೆಳಕು ಹೊಕ್ಕಂತಾಯಿತ್ತು.
ಗುಹೇಶ್ವರನ ಶರಣ ಮಡಿವಾಳ ಮಾಚಿಯ ತಂದೆಯ ಕೃಪೆಯಿಂದ
ಬಸವಣ್ಣಾ, ನಿನ್ನನೂ ಮಡಿವಾಳನನೂ ನೀನೆಂದು ಕಂಡೆನಯ್ಯ'

(ಸ.ವ.ಸಂ:೨ ವ.ಸಂ, ೧೫೨೩)

ಎಂದು ಹೇಳಿ ಬಸವಣ್ಣ ಮತ್ತು ಮಡಿವಾಳ ಒಂದೇ ಎಂದಿದ್ದಾನೆ ಪ್ರಭುದೇವ. ಮತ್ತು ಮಡಿವಾಳನ ಪ್ರಸಾದದಿಂದ ನಿಮ್ಮ ಘನವರಿದು ಬದುಕಿದೆನು ಎನ್ನುತ್ತಾನೆ. 'ಕೂಡಲಸಂಗಮದೇವರ ಸಾಕ್ಷಿಯಾಗಿ ಮಡಿವಾಳಮಾಚಿತಂದೆಗಳ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನು' ಎಂದು ಮುಂತಾಗಿ ಬಸವ ಚನ್ನಬಸವರೂ ಅವನನ್ನು ಸ್ತುತಿಸಿದ್ದಾರೆ. ಅಂತಹ ನಿಲವಿಗೆ ಮಾಚಯ್ಯ ತನ್ನ ನಿಷ್ಠೆಯಿಂದ ಏರಿದ್ದಾನೆ.

ಮಡಿವಾಳ ಮಾಚಯ್ಯ ಬಟ್ಟೆಗಳ ಮೈಲಿಗೆಯನ್ನು ಕಳೆಯುವ ಮಡಿವಾಳನು ಮಾತ್ರವೇ ಆಗಿರಲಿಲ್ಲ. ಮನದ ಮೈಲಿಗೆಯನ್ನು ಕಳೆಯುವ ಮಡಿವಾಳನಾತ. ಸಮತೆಯೆಂಬ ನೀರಿನಲ್ಲಿ ತನುವನ್ನು ಅದ್ದಿ, ಪಂಚೇಂದ್ರಿಯಗಳ ಅವಗುಣಗಳೆಂಬ ಕೊಳೆಯನ್ನು ಜ್ಞಾನಜಲದಲ್ಲಿ ಸೆಳೆದು ಕಳೆಯಬಲ್ಲವನು– ಎಂದು ಬಸವೇಶ್ವರ ಒಂದು ಕಡೆ ಹೇಳಿದ್ದಾನೆ. ಹೀಗೆ ಮಾಚಯ್ಯ ತನ್ನ ಕಾಯಕವನ್ನೇ ಶಿವಾರ್ಪಿತವನ್ನಾಗಿ ಮಾಡಿ ಅಂಗದ ಆಚಾರದಲ್ಲಿ ಸಂಗನ ಬಸವಣ್ಣನನ್ನೂ, ಮನದ ಅರಿವಿನಲ್ಲಿ ಚೆನ್ನಬಸವಣ್ಣನನ್ನೂ, ಭವದ ಕೊನೆಯಲ್ಲಿ ಅಲ್ಲಮ ಪ್ರಭುದೇವರನ್ನೂ' ಕಾಣುತ್ತಾ,

'ತನುವಿನಲ್ಲಿ ಹೊರೆಯಿಲ್ಲದೆ, ಮನದಲ್ಲಿ ವ್ಯಾಕುಲವಿಲ್ಲದೆ, ಭವದಲ್ಲಿ ಬಯಕೆಯಿಲ್ಲದೆ, ತಾನೇ ತಾನಾಗಿ ಶಿವನಲ್ಲಿ ಬೆರಸಿ ಬೇರಾಗದೆ' ಇದ್ದವನು.

'ಶಿವನು ಶರಣ ಸನ್ನಿಹಿತ, ಭಕ್ತಕಾಯ ಮವಕಾಯನು. ದಾಸೋಹ ಪರಿಪೂರ್ಣನು' ಎಂದು ಶಿವನ ಸ್ವರೂಪವನ್ನು ಕಂಡುಕೊಂಡಿದ್ದಾನೆ, ಮಾಚಯ್ಯ. ಜ್ಞಾನವನ್ನು ಪಡೆದರೂ ಕ್ರಿಯೆಯನ್ನು ಬಿಡಬಾರದೆಂದು ಅವನ ಸ್ಪಷ್ಟವಾದ ಅಭಿಪ್ರಾಯ.

'ಅರಿವನರಿದೆನೆಂದು ಕ್ರಿಯೆಯ ಬಿಡಬಾರದು,
ಮಧುರಕ್ಕೆ ಮಧುರ ಒದಗಲಾಗಿ ಸವಿಗೆ ಕೊರತೆಯುಂಟೇ?
ದ್ರವ್ಯಕ್ಕೆ ದ್ರವ್ಯ ಕೂಡಲಾಗಿ ಬಡತನವುಂಟೇ?
ನೀ ಮಾಡುವ ಮಾಟ, ಶಿವಪೂಜೆಯ ನೋಟ ಭವವಿರಬೇಕು,
ಅದು ಕಲಿದೇವನ ದೇವಯ್ಯನ ಕೂಟ ಚಂದ್ರಯ್ಯ'. (ಸ.ವ.ಸಂ:೮ ವ.ಸಂ, ೪೭೭)

ಜ್ಞಾನಕ್ಕೆ ಕ್ರಿಯೆ ಸೇರಿದರೆ ಮಾಧುರ್ಯಕ್ಕೆ ಸೇರಿದಂತೆ, ದ್ರವ್ಯಕ್ಕೆ ದ್ರವ್ಯ ಸೇರಿದಂತೆ, ಅದರ ಫಲವಿನ್ನೂ ಅಧಿಕವಾಗುತ್ತದೆ ಎನ್ನುತ್ತಾನೆ. ಮಡಿವಾಳ ಮಾಚಯ್ಯನ ಮಾರ್ಗ ನೇರವಾದದ್ದು, ಸರಳವಾದದ್ದು. ಅರಿತು ಆಚರಿಸಬಲ್ಲವರಿಗೆ ಸುಲಭವಾದದ್ದು. ತನ್ನ ನಮ್ರ ಕಾಯಕದಲ್ಲಿದ್ದುಕೊಂಡೇ ತಾನೇ ಮುನ್ನಡೆದು ಶರಣನಾದುದರ ರಹಸ್ಯವನ್ನು ಹೀಗೆ ಹೇಳಿದ್ದಾನೆ.

'ನಾವು ಶರಣರೆಂದು ಒಪ್ಪವಿಟ್ಟು ನುಡಿವ ಅಣ್ಣಗಳಿರಾ,
ನೀವು ಶರಣರಾದ ಭೇದವ ಹೇಳಿರಿ, ಅರಿಯದಿರ್ದೊಡೆ ಕೇಳಿರಿ
ತನುವಿನಾಕಾಂಕ್ಷೆಯ ಸುಟ್ಟುರುಹಿ, ಮನದ ಲಜ್ಜೆಯ ಮರೆದು,
ಭವದ ಕ್ರಿಯೆಯ ಹೊಟ್ಟುಮಾಡಿ ತೂರಿ
ಸದ್ಭಕ್ತಿಯೇ ನಿಜನಿಷ್ಠೆಯ ತಿಳಿದು.
ಸತಿಸುತರಿಗೆ ಸದಾಚಾರ ಸನ್ಮಾರ್ಗವ ತೋರಿ,
ನಿರ್ವಂಚಕರಿಂದ ಆಚರಿಸಬಲ್ಲಾತನೇ
ಅಚ್ಚಶರಣ ನೋಡಾ ಕಲಿದೇವರ ದೇವಾ' (ಸ.ವ.ಸಂ:೮ ವ.ಸಂ, ೬೪೩)

ಇದು ಆತನು ನಡೆದ ಮಾರ್ಗ. ಇತರ ಸಂಸಾರಿಗಳಿಗೆ ತೋರಿಸಿದ ಮಾರ್ಗ. 'ಮಾಡನೆಂಬ ನೇಣ ಬೇಡ, ಮಾಡಿಹೆನೆಂಬ ಕೃತ್ಯ ಬೇಡ, ಭವವಳವಟ್ಟಲ್ಲಿ ಭವಶುದ್ಧವಾಯಿತು' ಎಂದು ಒಂದು ಕಡೆ ಹೇಳಿದ್ದಾನೆ. ಓರ್ವ ಕಾಯಕ ಜೀವಿಯಾಗಿ, ವೀರ ಮಾಹೇಶ್ವರನಾಗಿ ಅನಾಚಾರ ಡಂಭಾಚಾರಗಳನ್ನು ನಿರ್ಮೂಲಗೊಳಿಸುತ್ತಾ ಶರಣಧರ್ಮ ಪ್ರಚಾರಗೊಳಿಸುವುದಕ್ಕಾಗಿ ತನ್ನ ಜೀವನ ಮುಡಿಪಾಗಿಸುತ್ತಾನೆ. ಮುಂದೆ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಶರಣರ ರಕ್ಷಣೆಯ ಹೊರೆ ಹೊತ್ತು ಶರಣಪಡೆಯ

ದಂಡನಾಯಕನಾಗಿ ಬಿಜ್ಜಳನ ಸೈನ್ಯದೊಡನೆ ಹೋರಾಡುತ್ತ ಬೆಳಗಾವಿ ಜಿಲ್ಲೆ ಗೊಡಚಿ ಹತ್ತಿರ ನಡೆದ ಕಾಳಗದಲ್ಲಿ ಅಸು ನೀಗುತ್ತಾನೆ. ಮಾಚಿದೇವನ ಸಮಾಧಿಯ ಮೇಲೆಯೇ ಗೊಡಚಿ ವೀರಭದ್ರನ ದೇವಸ್ಥಾನ ನಿರ್ಮಾಣವಾಗಿದೆಯೆಂದು ಹೇಳುತ್ತಾರೆ. ದೇವರ ಹಿಪ್ಪರಗಿಯಲ್ಲಿ ಮಾಚಿದೇವನ ಸಮಾಧಿಗುಡಿ ಹಾಗೂ ಗದ್ದಗಿಮಠ ಇರುತ್ತವೆ. ಬೆಳಗಾವಿ ಜಿಲ್ಲೆಯ ಕಾರಿಮನಿಯಲ್ಲಿಯೂ ಅವನ ಸಮಾಧಿ ಗುಡಿ ಇದೆ. ಕಲ್ಯಾಣದಲ್ಲಿರುವ ಮಾಚಯ್ಯನವರ ಹೊಂಡ ಈಗಲೂ ನೋಡಲು ಸಿಗುತ್ತದೆ.

ಶರಣ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ಗ್ರಂಥಗಳಲ್ಲಿ ಮಾಚಿದೇವನ ಬಗ್ಗೆ ಉಲ್ಲೇಖವಿದೆ. ಈತನು ಶ್ರೇಷ್ಠ ವಚನಕಾರನೂ ಆಗಿದ್ದಾನೆ. 'ಕಲಿದೇವರ ದೇವಾ' ವಚನಾಂಕಿತದ ಇವನ ೩೪೫ ವಚನಗಳು ಸಿಕ್ಕಿವೆ. ಇವನ ವಚನಗಳು ಸರಳ ಶೈಲಿಯಲ್ಲಿದ್ದು ಪ್ರೌಢ ವಿಷಯಗಳಿಂದ ಶೋಭಿಸಿವೆ. ಡಾಂಭಿಕ ಭಕ್ತಿ ಸ್ಥಾವರ ದೈವ ಪೂಜೆಯನ್ನು ಖಂಡಿಸಿದ್ದಾನೆ. ಬಸವ ಅಲ್ಲಮ ಮೊದಲಾಗಿ ಹಲವಾರು ವಚನಕಾರರು ಮತ್ತು ವಚನಕಾರ್ತಿಯರು ತಮ್ಮ ವಚನಗಳಲ್ಲಿ ಮಾಚಿದೇವನನ್ನು ಸ್ಮರಿಸಿದ್ದಾರೆ. ಹಲವಾರು ಜಾನಪದ ಹಾಡುಗಾರರು ವಚನಕಾರನಾದ ಮಡಿವಾಳ ಮಾಚಯ್ಯನನ್ನು ಕುರಿತು ಹಾಡಿ ಹೊಗಳಿದ್ದಾರೆ.

೪.೫. ಮಾದರ ಧೂಳಯ್ಯ :

ವಚನಕಾರರು ಕಾಯಕ ಜೀವಿಗಳು, ಅವರು ಬೇರೆ ಬೇರೆ ವೃತ್ತಿಗಳನ್ನು ಕೈಕೊಂಡವರು. ದುಡಿಮೆಗೆ ಕಾಯಕವೆಂಬ ಪದ ಬಳಸಿ ಕಾಯಕದಲ್ಲಿಯೇ ಪಾರಮಾರ್ಥ ಕಂಡುಕೊಂಡವರು. ತಮ್ಮ ವೃತ್ತಿಯಲ್ಲಿ ಬಳಸಿದ ಉಪಕರಣಗಳನ್ನು ಕೆಲವು ಕಡೆ ಪ್ರತಿಮೆಗಳನ್ನಾಗಿ ಬಳಸಿಕೊಂಡಿದ್ದಾರಲ್ಲದೆ ಆ ವೃತ್ತಿಗಳು ಅವರ ವಿಶೇಷ ಕಾರಣಗಳಾಗಿವೆ. ಉದಾ : ಮಾದರ ಚೆನ್ನಯ್ಯ, ಮಾಡಿವಾಳ ಮಾಚಯ್ಯ, ಡೋಹರ ಕಕ್ಕಯ್ಯ, ಮುಂತಾದವರನ್ನು ಇಲ್ಲಿ ಹೆಸರಿಸಬಹುದು. ಬ್ರಾಹ್ಮಣ ಮೊದಲು ಅಂತ್ಯಜ ಕಡೆಯಾಗಿ ಯಾರೇ ಆಗಲಿ ಕಾಯಕ ಕೈಕೊಳ್ಳಲೇಬೇಕು. ಹೀಗೆ ಕೈಕೊಂಡ ಕಾಯಕದಿಂದ ಬಂದ ಆದಾಯದಲ್ಲಿನ ಉಳಿತಾಯವನ್ನು ದಾಸೋಹಕ್ಕೆ ಸಂದಾಯ ಮಾಡುವ ಶಿಷ್ಟ ಪರಂಪರೆಗೆ ಹುಟ್ಟು ಹಾಕಿದವರು. ಇಂತಹ ವಿದಾಯಕ ಕಾರ್ಯ ಮಾಡುತ್ತ ಬದುಕನ್ನು ಸಾರ್ಥಕ ಮಾಡಿಕೊಂಡ ಶಿವಶರಣರಲ್ಲಿ ಮಾದರ ಧೂಳಯ್ಯನೂ ಒಬ್ಬ.

ಮಾದಾರ ಹೆಸರಿನ ಇಬ್ಬರು ವಚನಕಾರರು ನಮಗೆ ಕಾಣಸಿಗುತ್ತಾರೆ. ಒಬ್ಬ ಮಾದಾರ ಧೂಳಯ್ಯ, ಇನ್ನೊಬ್ಬ ಮಾದಾರ ಚೆನ್ನಯ್ಯ. ಸಮಗ್ರ ವಚನ ಸಂಪುಟ ಮೂರನೆಯ ಸಂಪುಟದಲ್ಲಿ ಮಾದಾರ ಚೆನ್ನಯ್ಯನ ೧೦ ವಚನಗಳು ಮಾದಾರ ಧೂಳಯ್ಯನ ೧೦೬ ವಚನಗಳು ಪ್ರಕಟವಾಗಿವೆ. ಈ ಇಬ್ಬರೂ ವಚನಕಾರರು ತಮ್ಮ ವಚನಗಳಲ್ಲಿ ತಮ್ಮ ಅನುಭವದ ಎತ್ತರವನ್ನು ಮೆರೆದಿದ್ದಾರೆ.

ಮಾದಾರ ಧೂಳಯ್ಯ ಸಾಮಾಜಿಕವಾಗಿ ಕೆಳವರ್ಗದ (ತಳಸಮುದಾಯದ), ಆಧ್ಯಾತ್ಮಿಕವಾಗಿ ಮೇಲ್ವರ್ಗದ ಕಾಯಕಜೀವಿ, ಅನುಭಾವಿ. ಜೀವಾತ್ಮ ಪರಮಾತ್ಮ ಕುರಿತು ಗಾಢವಾಗಿ ಚಿಂತನ

ಮಾಡಿದ ಈತನ ವಚನಗಳನ್ನು ನೋಡಿದರೆ ಇಲ್ಲಿ ಅನುಭವದ ಆಳ, ಜ್ಞಾನದ ಹರವು ಸ್ಪಷ್ಟವಾಗಿ ಗೋಚರವಾಗುತ್ತದೆ.

ತಾನು ಸಂಪಾದನೆ ಮಾಡಿದ್ದನ್ನು ಕೇವಲ ತಾನೇ ಭುಂಜಿಸಬಾರದು. ಅದರಲ್ಲಿಯ ಸ್ವಲ್ಪಭಾಗವಾದರೂ ಜಂಗಮಕ್ಕೆ ದಾಸೋಹವಾಗಬೇಕು. ಜಂಗಮ ಅಂದರೆ ಸಮಾಜ. ವ್ಯಷ್ಟಿ ಸಮಷ್ಟಿಗಾಗಿ ಶ್ರಮಿಸಬೇಕು. ಇನ್ನೊಬ್ಬರಿಗೆ ಇಕ್ಕದ ಭಂಡರನ್ನು ಕೆಲವು ವಚನಕಾರರು ಟೀಕಿಸಿದ್ದೂ ಉಂಟು, ಧೂಳಯ್ಯ ಮಾತ್ರ ಎಲ್ಲಿಯೂ ಕರ್ಣಕಠೋರ ಪದ ಬಳಸಿಲ್ಲ. ವಂಚನೆ ಮಾಡದೆ ಗಳಿಸಿದ ಹಣ ಮಾತ್ರ ದಾಸೋಹಕ್ಕೆ ಸಲ್ಲುತ್ತದೆ. ಪಾಪಿಯ ಹಣ ಸಲ್ಲದು. ಅದು ಪ್ರಾಯಶ್ಚಿತ್ತಕ್ಕೆ ಮಾತ್ರ 'ಪ್ರಪಂಚಳಿದು; ಎಂಬ ಪದ ಬಳಸಿದ್ದು ಔಚಿತ್ಯಪೂರ್ಣವಾಗಿದೆ. ತನ್ನ ಸಂಸಾರಕ್ಕೆ ಬೇಕೆಂಬುದನ್ನು ಬಿಟ್ಟು ಇನ್ನೊಂದು ಮಹಾಪ್ರಪಂಚವಿದೆ. ಅದು ಸಮಾಜ. ಅದಕ್ಕೂ ನಮ್ಮ ಕಾಯಕದ ಫಲ ಸಲ್ಲಬೇಕೆಂಬುದು ಇವನ ಅಭಿಪ್ರಾಯ.

ಮಾದಾರ ಧೂಳಯ್ಯ ಡಾಂಭಿಕರನ್ನು ಟೀಕಿಸುತ್ತಾನೆ. ಆದರೆ ಆತನ ೧೦೬ ವಚನಗಳಲ್ಲಿ ಡಂಬಾಚಾರಿಗಳನ್ನು ಟೀಕಿಸಿದ್ದು ಒಂದೇ ಒಂದು ವಚನದಲ್ಲಿ. 'ಕಾಲಿಗೆ ಕೋಳ, ಕೈಗೆ ಸಂಕಲೆ ಕೊರಳಿಗೆ ಪಾಶ ಪಾಷಂಡಿಗಳಾಗುತ್ತ ಮತ್ತಾ ಅರಿವಿನ ಹೊಲಬೆಲ್ಲ ಅಡಗಿತ್ತು' ಅಂತರಂಗದಲ್ಲಿ ಅರಿವು ಮೂಡದೆ ಕೊಲ ಕೈಗೆ ಸಂಕಲೆಗಳನ್ನು ಹಾಕಿಕೊಂಡು ತಿರುಗುವ ವೇಷಡಂಬಕರನ್ನು ಟೀಕಿಸಿದ್ದಾನೆ.

ಧೂಳಯ್ಯನ ತಾತ್ವಿಕ ವಚನಗಳು ಬಹಳ ಸೊಗಸಾಗಿವೆ. ಸಾಹಿತ್ಯಕ ಅಂಶ ಹಾಗೂ ಖಚಿತವಾದ ತಾತ್ವಿಕ ನಿಲುವು ಇವೆರಡೂ ಅವುಗಳಲ್ಲಿ ಸೇರಿಕೊಂಡಿವೆ. ಇವನು ಪ್ರಬುದ್ಧ ವಚನಕಾರ, ಸುಸಂಸ್ಕೃತ ಜ್ಞಾನಿ, ಅವನು ವಚನಗಳಲ್ಲಿ ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸಿದ್ದು ಅವನ ಜ್ಞಾನದ ಹರವನ್ನು ತೋರಿಸುತ್ತದೆ.

ಒಟ್ಟಿನಲ್ಲಿ ದೂಳಯ್ಯ ತಳಸಮುದಾಯದವನಾದರೂ ಉನ್ನತ ವಿಚಾರವಾದಿ, ಅವನ ವಚನಗಳಲ್ಲಿ ಬರೀ ತಾತ್ವಿಕ ವಿವೇಚನೆಯಷ್ಟೇ ಇಲ್ಲ. ಹಾಗಾಗಿದ್ದರೆ ಅದು ನೀರಸವೆನಿಸುತ್ತಿತ್ತು. ಅಲ್ಲಿಯ ವಚನಗಳಲ್ಲಿ ಸಾಹಿತ್ಯಕ ಅಂಶ ದಟ್ಟವಾಗಿ ತುಂಬಿಕೊಂಡಿದೆ. ಈತ ಸಾಹಿತ್ಯಕ್ಕೆ ಆಧ್ಯಾತ್ಮಕ್ಕೆ ಗಂಧ ಪೂಸಿದ್ದಾನೆ. ಆ ಮೂಲಕ ಸಾಹಿತ್ಯವನ್ನು ತನ್ನ ವಚನಗಳ ಮೂಲಕ ಶ್ರೀಮಂತಗೊಳಿಸಿದ್ದಾನೆ.

ಮಾದಾರ ಧೂಳಯ್ಯನು ಭಗವಂತನ ನಿಲುವನ್ನು ಸ್ಪಷ್ಟಪಡಿಸುತ್ತಾನೆ. ವೇದ-ಶಾಸ್ತ್ರಗಳನ್ನು ಅಧ್ಯಯನ ಮಾಡಿದವರು ಮಾತ್ರ ಭಗವಂತನನ್ನು ಒಲಿಸಿಕೊಳ್ಳಲು ಯೋಗ್ಯರೆಂಬ ಹಸಿ ಸುಳ್ಳೊಂದನ್ನು ಪುರೋಹಿತರು ಬಿತ್ತಿ ಬಿಟ್ಟಿದ್ದರು. ಧೂಳಯ್ಯ ಈ ಮಾತನ್ನು ಅಲ್ಲಗಳೆಯುತ್ತ ನಂಬಿ ಕರೆದರೆ ಆತ ಓಗೊಡುತ್ತಾನೆ. ಜಾತಿ-ಮತ-ಪಂಥ ಭೇದವಿಲ್ಲದೆ ಯಾರು ಬೇಕಾದರೂ ಆತನನ್ನು ಪೂಜಿಸುವ ಹಕ್ಕನ್ನು ಹೊಂದಿದ್ದಾರೆ ಎಂದು ತಿಳಿಸುತ್ತಾನೆ.

'ವೇದಕ್ಕೆ ಉತ್ತರದವನಲ್ಲ, ಶಾಸ್ತ್ರಕ್ಕೆ ಸಂತೆಯವನಲ್ಲ, ಪುಣ್ಯಕ್ಕೆ ಪುಣ್ಯವಂತನಲ್ಲ, ವಚನದ ರಚನೆಗೆ ನಿಲ್ಲ, ವಾಙ್ಮನ ಅಗೋಚರಕ್ಕೆ ಸಲ್ಲ, ಪ್ರಮಾಣು ಅಪ್ರಮಾಣವೆಂಬುದಕ್ಕೆ ನಿಲ್ಲ, ಇಂತೀ ಭೇದ ಅಭೇದ್ಯಂಗಳಲ್ಲಿ ಭೇಧವಿಲ್ಲ, ಕಾಮಧೂಮ ಧೂಳೇಶ್ವರನು' ದೂಳಯ್ಯನು ಅದ್ವೈತ ಸಿದ್ಧಾಂತ, ದೇವನನ್ನು ಅವರು ಮನುಷ್ಯನಿಂದ ದೂರವಿಟ್ಟವರಲ್ಲ. ತನ್ನನ್ನು ಬಿಟ್ಟು ಆತನನ್ನು (ಭಗವಂತನನ್ನು) ಹುಡುಕಿದರೆ ಆತನೆಲ್ಲಿ ಸಿಕ್ಕಾನು? ವೇದಕ್ಕೂ, ವಾಙ್ಮನಕ್ಕೂ, ಪುಣ್ಯಕ್ಕೂ, ವಚನದ ರಚನೆಗೂ ನಿಲುಕಲಾರ. ತನ್ನ ಅಂತರಂಗದ ಅರುವಿನ ಇರುವಿನಲ್ಲಿ ಅವನು ನೆಲೆಗೊಳ್ಳುವಂಥವನು ಎಂದು ಹೇಳುತ್ತಾನೆ. ಧೂಳಯ್ಯ ಮಾದಾರ ಕುಲದವನೊಬ್ಬ ಭಗವಚ್ಚಿಂತನದಲ್ಲಿ ಸಾಧಿಸಿದ ಸಾಧನೆ, ಅವನ ಸಂಸ್ಕಾರಗಳು ವ್ಯಕ್ತಿಯ ಉನ್ನತಿಗೆ ಜಾತಿ ಮುಖ್ಯವಲ್ಲ ಎಂಬುದನ್ನು ತೋರಿಸಿ ಕೊಡುತ್ತದೆ.

೪.೬. ಡೋಹರ ಕಕ್ಕಯ್ಯ :-

'ಸೆಟ್ಟಿ ಎಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ?
ಡೋಹರ ನೆಂಬೆನೆ ಕಕ್ಕಯ್ಯನ?
ಮಾದಾರನೆಂಬೆನೆ ಚೆನ್ನಯ್ಯನ?
ಆನು ಹಾರುವನೆಂದಡೆ, ಕೂಡಸಂಗಯ್ಯ ನಗುವನಯ್ಯಾ'.

(ಸ.ವ.ಸಂ:೧ ವ.ಸಂ, ೩೪೫)

ವಿಶ್ವವಿಭೂತಿ ಮಹಾ ಮಾನವತಾವಾದಿ ಬಸವಣ್ಣನವರು ತಮ್ಮ ವಚನಗಳಲ್ಲಿ ಡೋಹರ ಕಕ್ಕಯ್ಯನನ್ನು ತುಂಬ ಪ್ರಶಂಸಿದ್ದಾರೆ. ಶರಣಗಣದಲ್ಲಿ ಕಕ್ಕಯ್ಯನಿಗೆ ಅತ್ಯುನ್ನತ ಸ್ಥಾನ ನೀಡಿ ಗೌರವಿಸಿದ್ದಾರೆ. 'ಬಸವಣ್ಣನು ಇಷ್ಟಲಿಂಗವನ್ನು ತನಗೆ ಅನುಗ್ರಹಿಸಿದ್ದರಿಂದ ತನ್ನ ಕಷ್ಟಕುಲದಲ್ಲಿ ಹುಟ್ಟಿದ ಕರ್ಮ ಪರಿಹಾರಗೊಂಡಿತು' ಎಂದು ಕಕ್ಕಯ್ಯ ತನ್ನ ವಚನವೊಂದರಲ್ಲಿ ಹೇಳಿಕೊಂಡಿರುವುದರಿಂದ ಇವನು ಅಸ್ಪೃಶ್ಯ ಕುಲಕ್ಕೆ ಸೇರಿದವನೆಂದು ತಿಳಿದು ಬರುತ್ತದೆ. ಬಸವಣ್ಣನವರು ತಮ್ಮ ವಚನಗಳಲ್ಲಿ ಸ್ಮರಿಸಿಕೊಂಡಂತೆ ಕಕ್ಕಯ್ಯನು ಬಸವಣ್ಣನವರ ಹಿರಿಯ ಸಮಕಾಲೀನನಾಗಿದ್ದಾನೆ.

ಗುರುರಾಜ ಚರಿತ್ರೆ ಭೈರವೇಶ್ವರ ಕಾವ್ಯ ಶೂನ್ಯಸಂಪಾದನೆ ಶರಣ ಲೀಲಾಮೃತ ಪ್ರೌಢದೇವರಾಯನ ಕಾವ್ಯ ಮೊದಲಾದ ಗ್ರಂಥಗಳಲ್ಲಿ ಕಕ್ಕಯ್ಯನ ವಿಷಯ ಬಂದಿದೆ.

ಮನುಷ್ಯನೊಬ್ಬನ ವ್ಯಕ್ತಿತ್ವವನ್ನು ಅವನು ಹುಟ್ಟಿದ ಜಾತಿಯೊಂದಿಗೆ ಸಮೀಕರಿಸಿ ನೋಡುವ ದೃಷ್ಟಿಕೋನವೇ ಪ್ರಧಾನವಾಗಿರುವ ಧಾರ್ಮಿಕ ಪರಿಸರದ, ಸಮಾಜಿಕ ಪರಿಸರದ ಹಿನ್ನಲೆಯಲ್ಲಿ ಡೋಹರ ಕಕ್ಕಯ್ಯನು ನಿರ್ವಹಿಸಿದ ಶರಣ ಧರ್ಮವನ್ನು ಅರ್ಥೈಸಿಕೊಳ್ಳುವುದು ಪ್ರಸ್ತುತವೆನಿಸುತ್ತದೆ. ಬಸವಣ್ಣನ ಹಿರಿಯ ಸಮಕಾಲೀನನ ಸಂದಂರ್ಭದಲ್ಲಿಯೇ ಭಾರತೀಯ ಸಾಮಾಜಿಕ ಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಂದಿನವರ ಜೀವನ-ಸಾಧನೆಗಳನ್ನು ಗಮನಿಸಬೇಕಾದುದು ಅಗತ್ಯವಾಗುತ್ತದೆ.

'ಡೋರ' ಎಂದರೆ ದನ 'ದೊಹರೆ' ಎಂದರೆ ತೊಳೆ, ಡೋಹರ=ದನದ ಚರ್ಮವನ್ನು ಹದಮಾಡುವ ಜಾತಿ. ದನದ ಚರ್ಮವನ್ನು ಹದಗೊಳಿಸುವ ಕಾಯಕ ಕರ್ಮಿಗಳ ಮನೆಯಲ್ಲಿ ಹುಟ್ಟಿದವನು, ಡೋಹರ ಕಕ್ಕಯ್ಯ, ಕ್ರಿ.ಶ. ಸುಮಾರು ೧೧೦೦-೧೧೬೮ ರ ಕಾಲಾವಧಿಯಲ್ಲಿದ್ದ ಈತನು ಮಾಳವ ದೇಶದ ಅರಸನಲ್ಲಿ ಸಬಳವನ್ನು(ಈಟಿ) ಹಿಡಿದು ದಮಡಿನಲ್ಲಿ ದುಡಿಯುತ್ತಿದ್ದ ಇವನೊಬ್ಬ ಶಿವಪೂಜಾರಾಧಕ. ಶರಣಧರ್ಮಕ್ಕೆ ಮನಸೋತು ಕನ್ನಡ ನೆಲಕ್ಕೆ ಧಾವಿಸಿದಾತ.

ಹನ್ನೆರಡನೆಯ ಶತಮಾನದಲ್ಲಿ ಜಾತಿಯಾದಾರಿತ ಸಾಮಾಜಿಕ ವ್ಯವಸ್ಥೆಯು ದಲಿತರ ಬದುಕನ್ನು ಅತ್ಯಂತ ದುರ್ಬಲಗೊಳಿಸುತ್ತಿತ್ತು. ವೈದಿಕ ಸಂಸ್ಕೃತಿಯ ಪಾರುಪತ್ಯದಲ್ಲಿ ನಲುಗುತ್ತಲೇ ಶಿವಾರಾಧನೆ ಮಾಡಿ ಹೆಸರುವಾಸಿಯಾದವನು ಡೋಹರ ಕಕ್ಕಯ್ಯ.

'ಎನ್ನ ಕಷ್ಟಕುಲದಲ್ಲಿ ಹುಟ್ಟಿಸಿದೆಯಯ್ಯಾ
ಎಲೆ ಲಿಂಗ ತಂದೆ,
ಕಚ್ಚೆನಯ್ಯಾ, ನಿಮ್ಮ ಮುಟ್ಟಿಯೂ ಮುಟ್ಟದಿಹನೆಂದು
ಎನ್ನ ಕೈ ಮುಟ್ಟದಿರ್ದಡೆ ಮನ ಮನ ಮುಟ್ಟಲಾಗದೆ?' **(ಸ.ವ.ಸಂ:೭ ವ.ಸಂ, ೯೮೬)**

ಎಂದು ಅಭಿನವ ಮಲ್ಲಿಕಾರ್ಜುನನಲ್ಲಿ ಮೊರೆಯಿಡುತ್ತ, ತನ್ನ ಸಾಮರ್ಥ್ಯದಿಂದಲೇ ತನಗಿಂತ ಉಚ್ಚವರ್ಣದವರನ್ನು ತನ್ನತ್ತ ಸೆಳೆಯತೊಡಗಿದ. ಇವನ ಮನೆಯಲ್ಲಿ ಪೂಜನೀಯ ಭಾವದಿಂದ ಪ್ರಸಾದ ಸ್ವೀಕರಿಸಿದ ಕಾರಣವಾಗಿ ವಿಪ್ರಕುಲದಿಂದ ಹೊರ ಹಾಕಲ್ಪಡುವ ಪಂಡಿತಾರಾಧ್ಯನ ಘಟನೆಯು ಕಕ್ಕಯ್ಯನ ಪ್ರಸಾದದ ಮಹಿಮೆಯನ್ನು ಸಾರುತ್ತದೆ. ಈ ಘಟನೆಗೆ ಕಕ್ಕಯ್ಯನ ಶರಣಧರ್ಮ ಪರಿಪಾಲನೆಯೇ ಕಾರಣವಾಗಿ ಗೋಚರಿಸುತ್ತದೆ. ಬಸವಣ್ಣನಂಥ ಭಕ್ತಿ-ಭಂಡಾರಿಯು ಕಕ್ಕಯ್ಯನ ಮನೆಯ ಪ್ರಸಾದಕ್ಕಾಗಿ ಹಲವು ಕಾಲ ಪರಿತಪಿಸಿದ ಘಟನೆಯು ಈ ಮಾತಿಗೆ ಇನ್ನಷ್ಟು ಪುಷ್ಠಿ ನೀಡುತ್ತದೆ. ಚಾತುರ್ವರ್ಣ್ಯ ಪ್ರಧಾನ ಸಾಮಾಜಿಕ ಹಿನ್ನಲೆಯಲ್ಲಿ ದಲಿತ (ಅಸ್ಪೃಶ್ಯ)ನೊಬ್ಬನ ಪ್ರಸಾದಕ್ಕೆ ಲಭಿಸಿದ ಪಾವನತೆಯು ಅವನ ಧರ್ಮಪರಿಪಾಲನೆಯ ನಿಷ್ಠೆಗೆ ದೊರೆತ ಮಾನ್ಯತೆಯಾಗಿ ಪರಿಣಮಿಸುತ್ತದೆ. ಶರಣರು ತಾಳಿದ ಗೌರವಪೂರ್ವ ಭಾವನೆಯು ವಚನ ಚಳುವಳಿಯ ಕಾಲಘಟ್ಟದಲ್ಲಿ ಅತ್ಯಂತ ಅರ್ಥಪೂರ್ಣವೆನಿಸುತ್ತದೆ.

ಕಲ್ಯಾಣನಾಡಿನಲ್ಲಿ ಬಸವ ನೇತೃತ್ವದಲ್ಲಿ ಸಾಮಾಜಿಕ ಆಂದೋಲನದ ಮೂಲಕ ಸಮಾಜದೊಳಗೆ ಹೊಸತನ ತರಬಯಸಿದ ಶರಣರನೇಕರಲ್ಲಿ ಬಾಂಧವ್ಯ ಮೂಡಿ, ಅದು ಅರಮನೆಯೊಳಗೆ ನುಗ್ಗಿ, ನೆಂಟಸ್ತಿಕೆಯನ್ನು ಮಾಡಿತು. ಮಧುವರಸ-ಹರಳಯ್ಯನವರ ನೆಂಟಸ್ತಿಕೆಯ ಸಂಬಂಧವು ಹರಿಯುವ ಪ್ರವಾಹಕ್ಕೆ ಎದುರಾಗಿ ಈಜುವ ಪ್ರಯತ್ನವಾಯಿತು. ಈ ಸಂಘರ್ಷದಲ್ಲಿ ಶರಣರಿಗೂ ಆಳರಸರಿಗೂ ನಡುವೆ ವಿರಸ ಉಲ್ಬಣಿಸಿ, ಶರಣರೆಲ್ಲ ಹಿಂಸೆ ತಾಳದೆ ಹಿಂದೆಗೆದರು. ಅಂಥ ವಿಷಮ ಪರಿಸ್ಥಿತಿಯಲ್ಲಿ ಶರಣರ ರಕ್ಷಣೆಗೆ ನಿಂತವರಲ್ಲಿ ಡೋಹರ ಕಕ್ಕಯ್ಯ ಪ್ರಮುಖನು. ಶರಣರನ್ನು ರಾಜನ ಸೈನ್ಯವು

ಬೆನ್ನಟ್ಟಿದಾಗ ಶರಣಧರ್ಮದಂತೆ ಕಾಯಕವೇ ಕೈಲಾಸವೆಂದು ಬಗೆದು ಕಾಯಕದಲ್ಲಿ ಉಳಿಹಿಡಿದ ಕೈಯಲ್ಲಿ ಕಕ್ಕಯ್ಯನು ಶರಣರ ಮತ್ತು ಶರಣ ಧರ್ಮದ ಉಳಿವಿಗಾಗಿ ಕತ್ತಿಯನ್ನು ಹಿಡಿದು ಹೋರಾಡಿದ ವೀರ. ವಚನ ಸಾಹಿತ್ಯವನ್ನು ನಾಶಗೊಳಿಸಲು ಬೆಂಬತ್ತಿದ ವೈರಿಗಳೊಂದಿಗೆ ಸೆಣಸಾಡಿದ. ಶರಣರೆಲ್ಲ ಉಳವಿಯ ಮಹಾಮನೆಯನ್ನು ಸೇರಲು ಅನುವು ಮಾಡಿಕೊಟ್ಟ ಧೀರ. ಕಕ್ಕೇರಿಯ ಬಳಿ ಕಲಿಯಾಗಿ ಕಾದು, ಅಭಿನವ ಮಲ್ಲಿಕಾರ್ಜುನನಲ್ಲಿ ಬಯಲಾದ, ಮರಣದಲ್ಲಿಯೇ ಮಹಾನವಮಿಯನ್ನು ತೋರಿಸಿದ.

'ಬೊಪ್ಪನು ನಮ್ಮ ಡೋಹರ ಕಕ್ಕಯ್ಯ' 'ಕಿರಿಯಯ್ಯ ಡೋಹರ ಕಕ್ಕಯ್ಯ' 'ಅಪ್ಪನು ಡೋಹರ ಕಕ್ಕಯ್ಯ' 'ಕಕ್ಕಯ್ಯ ಹಿರಿಯಯ್ಯ' 'ಡೋಹರನೆಂಬೆನೆ ಕಕ್ಕಯ್ಯನ?' ಎಂದು ಸುಮಾರು ಹನ್ನೊಂದು ಸಲ ತಮ್ಮ ವಚನಗಳಲ್ಲಿ ಕಕ್ಕಯ್ಯನನ್ನು ಪ್ರಸ್ತಾಪಿಸಿದ್ದಾರೆ ಬಸವಣ್ಣನವರು. ಇದು ಬಸವನಿಗೆ ವ್ಯಯಕ್ತಿಕವಾಗಿ ಆತ್ಮೀಯನಾದ ಡೋಹರ ಕಕ್ಕಯ್ಯನ ಶರಣಧರ್ಮದ ಔನ್ನತ್ಯವನ್ನು ಅರಿವಿಗೆ ತರುತ್ತದೆ.

'ಕೀಳು ಡೋಹರ ಕಕ್ಕ' ಎಂದು ಜೇಡರ ದಾಸಿಮಯ್ಯ ಉಲ್ಲೇಖಿಸಿದ್ದಾನೆ. ಬಸವಣ್ಣ ಇಷ್ಟಲಿಂಗ ಅನುಗ್ರಹಿದಾಗ ತನ್ನ ಕಷ್ಟಕುಲದಲ್ಲಿ ಹುಟ್ಟಿದ ಕರ್ಮ ಪರಿಹಾರಗೊಂಡಿತ್ತೆಂದು ಹೇಳುತ್ತಾನೆ.

ಇಷ್ಟಲಿಂಗ ಧಾರಣವಾದ ಬಳಿಕ ಅವನ ಮನಸ್ಥಿತಿ ಹೇಗಾಯಿತೆಂಬುದು ಈ ವಚನದಿಂದ ಸ್ಪಷ್ಟವಾಗುವುದು.

'ನೆನೆಯಲರಿಯೆ ನಿರ್ಧರಿಸಲರಿಯೆ,
ಮತವಿಲ್ಲವಾಗಿ ಭಾವಿಸಲರಿಯೆ,
ಬೆರೆಸಲರಿಯೆ ಭಾವ ನಿರ್ಭಾವವಾಯಿತ್ತಾಗಿ,
ಧ್ಯಾನ ಮೌನವನರಿಯೆ,
ತಾನೆಯಾಯಿತ್ತಾಗಿ ಜ್ಞಾತೃ ಜ್ಞಾನ ಜ್ಞೇಯಂಗಳೆಲ್ಲವ
ಮೀರಿ ಅಭಿನವ ಮಲ್ಲಿಕಾರ್ಜುನನಲ್ಲಿ ಪರಮ ಸುಖಿಯಾದೆ' (ವ.ಶಾ.ಸಾ.ವ. ೯೯೧)

ಎನ್ನುವ ಕಕ್ಕಯ್ಯನ ಈ ಅನುಭಾವ ಅನನ್ಯವಾದುದು.

೪.೭. ಉರಿಲಿಂಗ ಪೆದ್ದಿ :

ಹನ್ನೆರಡನೆಯ ಶತಮಾನದ ಶಿವಶರಣರ ಸಮೂಹದಲ್ಲಿ ಹಲವು ಆದರ್ಶ ದಂಪತಿಗಳು ಇತಿಹಾಸದಲ್ಲಿ ದಾಖಲೆಗೊಂಡಿದ್ದಾರೆ. ಅವರಲ್ಲಿ 'ಉರಿಲಿಂಗದೇವರ ಮತ್ತು ಕಾಲವ್ವೆ' ಯರು ಪ್ರಮುಖರಾಗಿದ್ದಾರೆ. ಉರಿಲಿಂಗಪೆದ್ದಿಯು ಉರಿಲಿಂಗದೇವರ ಪರಮ ಶಿಷ್ಯನು. ಉರಿಲಿಂಗಪೆದ್ದಿಯ ಕುರಿತಾಗಿ ಡಾ। ಮಹಾದೇವ ಬಣಗಾರ ಅವರು ರಚಿಸಿದ ನಾಟಕ ಧ್ವನಿಪೂರ್ಣವಾಗಿದೆ. ಸಮಗ್ರ

ವಚನ ಸಂಪುಟ ಮೂಲಿಕೆಯಲ್ಲಿ ಬಂದಿರುವ ಸಂಕೀರ್ಣ ವಚನ ಸಂಪುಟ ಒಂದರಲ್ಲಿ ಈತನ ಕುರಿತಾಗಿ ಬಂದಿರುವ ವಿವರ ಹೀಗಿದೆ. ಉರಿಲಿಂಗದೇವನ ಶಿಷ್ಯ ಉರಿಲಿಂಗಪೆದ್ದಿ ಇವರಲ್ಲಿ ಉರಿಲಿಂಗದೇವನು ಅವಸೆ ಕಂಧಾರ ಹೆಸರಿನ ಗ್ರಾಮದವನು. ಪುಲಿಗೆರೆಯ ಮಹಾಲಿಂಗದೇವನ ಗುರುಪರಂಪರೆಯಲ್ಲಿ ಐದನೆಯವನು, 'ಶರಣಸತಿ ಲಿಂಗಪತಿ' ಭಾವದ ಈತನ ನಿಷ್ಠೆಯನ್ನು ಪರೀಕ್ಷಿಸಲು ಪರವಾದಿಗಳು ಗುಡಿಸಲಿಗೆ ಬೆಂಕಿ ಹಚ್ಚಿದರೂ ವಿಚಲಿತನಾಗದೆ ಲಿಂಗಪೂಜಾನಿಷ್ಠೆ ಮೆರೆದ ಶರಣನಿಗೆ ನಂದಿವಾಡದ ಸೂತಯ್ಯ ಭಕ್ತನಿಗೆ ಗುಪ್ತರೀತಿಯಲ್ಲಿ ಈತನು ಲಿಂಗದೀಕ್ಷೆ ನೀಡುವುದನ್ನು ಚೋರವೃತ್ತಿಯ ಪೆದ್ದಣ್ಣ ನೋಡಿ, ತನಗೂ ಲಿಂಗಬೇಕೆಂಬ ಅಪೇಕ್ಷೆಯಿಂದ, ನಿತ್ಯವು ಉರಿಲಿಂಗದೇವನ ಮನೆಗೆ ಹುಲ್ಲು-ಕಟ್ಟಿಗೆ ಹೊತ್ತು ತರುತಿದ್ದನು. ಇದಕ್ಕೆ ಪ್ರತಿಯಾಗಿ ಹನಪಡೆಯದೆ, ಲಿಂಗದೀಕ್ಷೆ ನೀಡಬೇಕೆಂದು ಪದೇ ಪದೇ ಕೇಳಲು, ಸಿಟ್ಟಿಗೆದ್ದ ಉರಿಲಿಂಗದೇವ 'ಗೇಜಾದಗಡಿಜಾ' ಎಂದು ಗದರಿಸಿ ಕಲ್ಲನ್ನು ಎಸೆಯಲು, ಆಶಬ್ದವನ್ನು ಮಂತ್ರವೆಂದು, ಆ ಕಲ್ಲನ್ನು ಲಿಂಗವೆಂದು ಭಾವಿಸಿ ಶಿವಭಕ್ತನಾಗಿ ಪರಿವರ್ತನೆಗೊಂಡಿತು. ನಂದರಾಜನು ಕಟ್ಟಿಸಿದ ಕೆರೆಯಲ್ಲಿ ಗುರು ಶಿಷ್ಯರಿಬ್ಬರೂ ನೀರಿನ ಸೆಲೆ ಕಾಣಿಸಿಕೊಳ್ಳುವಂತೆ ಮಾಡಿದರು. ಪೆದ್ದಣ್ಣನು ಉರಿಲಿಂಗದೇವನ ತರುವಾಯ ಗುರುಪೀಠವೇರಿದನು. ಇವನು ಜಾತಿಯಿಂದ ಅಸ್ಪೃಶ್ಯನೆಂದು ತಿಳಿದು ಬರುವುದರಿಂದ ಈ ಪೀಠಾರೋಹಣ ಒಂದು ವಿಶೇಷ ಘಟನೆಯೆಂದೇ ಹೇಳಬೇಕು. ಹರಿಜನ ಶಿವಭಕ್ತರ ಅನೇಕ ಮಠಗಳು ಕರ್ನಾಟಕದಲ್ಲಿದ್ದು ಅವುಗಳನ್ನು ಉರಿಲಿಂಗಪೆದ್ದಿ ಮಠಗಳೆಂದು ಕರೆಯುತ್ತಾರೆ.

"ಉರಿಲಿಂಗಪೆದ್ದಿಯ ವಚನಗಳಲ್ಲಿ ಎದ್ದು ಕಾಣುವ ಪ್ರಮುಖ ಧಾರ್ಮಿಕ ನಿಲುವುಗಳಲ್ಲಿ ಮುಖ್ಯವಾದುದು ಅವನ ಅಚಲ ಶಿವನಿಷ್ಠೆ; ಹಾಗೂ ಅವನು ಅಷ್ಟಾವರಣಗಳಲ್ಲಿನ ಪ್ರತಿಯೊಂದರ ಬಗ್ಗೆಯೂ ತೋರ್ಪಡಿಸುವ ಭಕ್ತಿಗೌರವಗಳು. ದಲಿತ ವರ್ಗದಿಂದ ಬಂದ ಉರಿಲಿಂಗಪೆದ್ದಿ ಮತ್ತು ಅವನಂತಹವರಿಗೆ, ಈ ಹೊತ್ತಿಗೆ ವೈದಿಕ ಪರಂಪರೆಯ ಮೇಲುವರ್ಗದ ದೈವಗಳೊಡನೆ ಸೇರಿ ಶಿಷ್ಟ ದೈವವಾಗಿದ್ದ ಶಿವನಿಗೆ ಹತ್ತಿರವಾಗುವುದೇ ರೋಚಕ ಅನುಭವವಾಗಿದ್ದಿರಬೇಕು. ಹಾಗಾಗಿ ಇತರ ಕೆಳವರ್ಗದ ವಚನಕಾರರಂತೆಯೇ ಅವನೂ, ಸಮಕಾಲೀನ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯನ್ನು ನಿರಾಕರಿಸಯೂ, ಸಾಂಪ್ರದಾಯಕವಾದ ಭಕ್ತಿ-ಆರಾಧನೆಗಳನ್ನು ನಿರಾಕರಿಸುವುದಿಲ್ಲ. ಮೇಲುವರ್ಗದವರು ಆರಾಧಿಸುವವರನ್ನನುಸರಿಸುವ ಮೂಲಕ ತಾವೂ ಅವರ ಸಮನೆಲೆಯನ್ನು ತಲುಪಿದೆವೆಂಬ ಭಾವನೆ ಆಗಿನ ಬಹುತೇಕ ಕೆಳ ವರ್ಗದವರಲ್ಲಿ ಉಂಟಾದಂತೆ ತೋರುತ್ತದೆ"೫.

ಇಂತ ಪರಿಶಿಷ್ಟ ಪರಂಪರೆಯ ಉರಿಲಿಂಗಪೆದ್ದಿ ಸಂಪ್ರದಾಯದ ಮಠಗಳು ಶಿಷ್ಟ ಪರಂಪರೆಯಾಗಿ ಬೆಳೆಯುತ್ತ ಹೋದಂತೆ ಅವು ವೀರಶೈವ ಪುರೋಹಿತಗಳ ಆಕ್ರಮಣಕ್ಕೆ ಗುರಿಯಾಗಿರುವ ಸಾಧ್ಯತೆ ಇದೆ. ಆಗ ಅಸ್ಪೃಶ್ಯ ಅನುಯಾಯಿಗಳ ಸಂಬಂಧವನ್ನು ಈ ಪುರೋಹಿಶಾಹಿಗಳು ಕತ್ತರಸಿ ಹಾಕಿದ ಫಲವಾಗಿ, ಅವರು ಆ ಕಡೆಯೂ ಈ ಕಡೆಯೂ ದೂರವಾಗಿ ತ್ರಿಶಂಕು ಸ್ಥಿತಿಯ ಕುಟುಂಬಗಳಾಗಿ ಉಳಿದವರೆನಿಸುತ್ತದೆ. ಹೀಗೆ ಉಳಿದುಕೊಂಡರೂ ಕಟುಂಬ ನೆಲೆಯಲ್ಲಿ ಉರಿಲಿಂಗಪೆದ್ದಿ ಸೂತ್ರವನ್ನು

ನಂಬಿ ಬಾಳುತ್ತಿದ್ದವರು ಮತ್ತೆ ಐತಿಹಾಸಿಕ ಅಗತ್ಯಕ್ಕೆ ಸಂಬಂಧಿಸಿದ ಫಲವಾಗಿ ೨೫೦ ವರ್ಷಗಳ ಹಿಂದೆ ಅದೇ ಕಂಧಾರ ಸಮೀಪದ ಗುಲಬುರ್ಗಾ, ಬೀದರ ಜಿಲ್ಲೆಯ ಬೇವಿಚಿಂಚೋಳಿಯ ಶ್ರೀ ಶಿವಯೋಗಿಸ್ವಾಮಿಗಳು ಗುಲ್ಬುರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕೋಡ್ಲಾ ಗ್ರಾಮದಲ್ಲಿ ಮಠ ಸ್ಥಾಪಿಸುವ ಮೂಲಕ ಈ ಪರಂಪರೆಯನ್ನು ಹುಟ್ಟುಹಾಕಿದರು. ಒಂದರ್ಥದಲ್ಲಿ ಇವರನ್ನು 'ದ್ವಿತೀಯ ಉರಿಲಿಂಗಪೆದ್ದಿ'ಗಳೆಂದು ಹೇಳಬಹುದು. 'ಶ್ರೀ ಉರಿಲಿಂಗಪೆದ್ದೀಶ್ವರ ಮಹಾಸಂಸ್ಥಾನಮಠ' ಹೆಸರಿನಲ್ಲಿ ಪ್ರಸಿದ್ಧಿಗೆ ಬಂದಿರುವ ಈ ಮಠ ಪರಂಪರೆಯಲ್ಲಿ ಉತ್ತರ-ದಕ್ಷಿಣ ಕರ್ನಾಟಕದಲ್ಲಿ ಸುಮಾರು ೪೧ ಮಠಗಳು ಹುಟ್ಟಿಕೊಂಡಿವೆ.

ಉರಿಲಿಂಗಪೆದ್ದಿಯು ಹೇಗಿದ್ದನು ಎಂಬುದನ್ನು ಆತನ ವಚನದ ಮೂಲಕವೇ ಅವನನ್ನು ಪರಿಚಯಿಸಿಕೊಳ್ಳಬಹುದು. 'ಮಹಿಷಾಸುರನೆಂಬ ಕೋಣನ ಕೊಂದು ಹೋಮಕ್ಕಿಕ್ಕಿ ಮಾಂಸವ ತಿನ್ನ ಹೇಳಿತ್ತೆ ವೇದ? ಅಹುದು ತಿನ್ನ ಹೆಳಿತ್ತು, ಅದೆಂತೆಂದಡೆ ಜಾತಿ ವರ್ಣ ಆಶ್ರಮ ಕುಲಗೋತ್ರ ನಾಮವೆಂದ ಕೋಣನ ಕೊಲ್ಲ ಹೇಳಿತ್ತಲ್ಲದೆ. ಕೋಣ ತಿಂಬ ಕುನ್ನಿ ಹೊಲೆಯರ ಮುಖವ ನೋಡಲಾಗದು. ಕಲಿಯುಗದ ನಾಲ್ಕು ಲಕ್ಷ ಮೂವತ್ತೆರಡು ಸಾವಿರ ವರ್ಷಗಳಲ್ಲಿ ಮಾಂಸವ ತಿನ್ನ ಹೆಳಿತ್ತೇ ವೇದ? ಅಹುದು ತಿನ್ನ ಹೆಳಿತ್ತು, ಅದೆಂತೆಂದಡೆ, ಮನ ಬುದ್ಧೀ ಚಿತ್ತ ಅಹಂಕಾರವೆಂಬ ಹೋತನು ಕೊಂದು ತಿಂಬ ಹೊಲೆಯರ ಮುಖವ ನೋಡಲಾಗದು ಇಂತಿ ಹೊನ್ನ ಗೋವ ತಿಂಬ ಕುನ್ನಿಗಳ ತೋರದಿರಾ ಉರಿಲಿಂಗಪೆದ್ದಿ ಪ್ರೀಯ ವಿಶ್ವೇಶ್ವರಾ'

ಅಂಬಿಗರ ಚೌಡಯ್ಯನಂತೆ ಉರಿಲಿಂಗಪೆದ್ದಿಯದು ನೇರ ಮತ್ತು ನಿಷ್ಠುರ, ದಿಟ್ಟ ವ್ಯಕ್ತಿತ್ವ, ಹಾಗೆ ಪ್ರಗತಿಪರ ವೈಚಾರಿಕ ಶಕ್ತಿಯಿಂದ ಕೂಡಿದ ಸಮತೂಕದ ನಿಲುವಾಗಿದೆ.

'ಭಕ್ತಿಭಾಂಡದ ಶಿವಭಕ್ತರ ನಿಷೇಧವ ಮಾಡುವ
ಕರ್ಮಭಾಂಡದ ದ್ವಿಜರು ನೀವು ಕೇಳಿಭೋ,
ಸತ್ಯಂ ಭೋ ಭೂತ ಪಂಚಪ್ರಾಣ ಇಂದ್ರಿಯನಿಗ್ರಹಮೆಂದೋದಿ
ಗುದ್ದಿ ಗುದ್ದಿ ಹೋತನ ತಿಂಬುವುದಾವಾಚಾರವೋ?'

(ಸ.ವ.ಸಂ:೬ ವ.ಸಂ, ೧೪೭೩)

ಇಂಥಲ್ಲಿ ಪ್ರಖರ ಬಂಡಾಯ ಎದ್ದು ತೋರುತ್ತದೆ. ಮಾತುಗಳು ತುಸು ಒರಟಾದರೂ ಸತ್ಯವನ್ನು ಪ್ರತಿಪಾದಿಸುವಾಗ, ವಿರೋಧಿಗಳನ್ನು ತರಾಟೆಗೆ ತೆಗೆದುಕೊಳ್ಳುವಾಗ ಅನಿವಾರ್ಯವಾಗುತ್ತದೆ. ಪ್ರಸ್ತುತ ವಚನ ನಾಲ್ಕು ಪುಟಗಳನ್ನು ವ್ಯಾಪಿಸಿದೆ. ನೂರಾ ಇಪ್ಪತ್ತೆರಡು ಸಾಲುಗಳನ್ನು ಒಳಗೊಂಡಿದೆ. ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸುತ್ತ ಹೋಗುವುದು ಕುತೂಹಲಕರವಾದ ಅಂಶವಾಗುತ್ತದೆ. ಅವರಿಗೆ ಅವರದೇ ಭಾಷೆಯಲ್ಲಿ ಹೇಳುವುದು ಒಂದು ರೀತಿಯಾದರೆ, ಸಂಸ್ಕೃತ ಕಲಿಯಬಾರದೆಂದವರಿಗೆ ಸೆಡ್ಡು ಹೊಡೆದು ಸಂಸ್ಕೃತ ಕಲಿತು ಅವರ ಮಾರಿಗೆ ಹೊಡೆದಂತೆ ಮಾತನಾಡಿದ್ದು ಮತ್ತೊಂದು ಬಗೆಯಾಗಿದೆ.

ಬ್ರಾಹ್ಮಣ, ಬ್ರಾಹ್ಮತ್ವವನ್ನು ಕೆಣಕುವ, ಪ್ರಶ್ನಿಸುವ ಉರಿಲಿಂಗಪೆದ್ದಿಯು ಋಷಿಗಳ ಮೂಲವನ್ನು ಜಾಲಾಡಿದ್ದಾನೆ. ಬ್ರಾಹ್ಮಣರೆಂದು ಹೇಳಿಕೊಳ್ಳುವ ಗೋತ್ರಮಾಡಿಕೊಂಡಿರುವ ಬಹುಪಾಲು ಋಷಿಗಳ ಮೂಲನೆಲೆ ಯಾವುದು? ಅವಪೂರ್ವಾಶ್ರಮವೆಂಥದು ಎಂಬುದನ್ನು ಬಯಲುಗೊಳಿಸಿದ್ದಾನೆ. ಉರಿಲಿಂಗಪೆದ್ದಿಯ ರೋಷ ಮತ್ತು ಕೆಚ್ಚು ಎಂತಹದೆಂದರೆ, ತಾವು ಓದುವ, ವೇದಾಗಮಂಗಳು ತಮಗೆ ಹಗೆಯಾಗಿ ನಡೆಯೂಂದು ಪರಿ ನುಡಿಯೊಂದು ಪರಿ ಆಗಿವುದು ಎಂದು ಟೀಕಿಸಿ, 'ಶಾಪಹತರಾಗಿ ಶಿವದ್ರೋಹಿಗಳಾಗಿ ನರಕಕ್ಕಿಳಿವ ಚಾಂಡಾಲರಿಂದ ವಿಪುರ ಸತ್ಪಾತ್ರರೆಂದಾರಾಧಿಸುವವರ ನರಕದ ಕುಳಿಯೊಳು ಮೆಟ್ಟಿ ನರಕಾಗ್ನಿಯಿಂದ ಸುಡುತಿರ್ಪ ಉರಿಲಿಂಗಪೆದ್ದಿಪ್ರಿಯ ವಿಶ್ವೇಶರ' ಎಂದಿರುವುದು ವಿನೂತನವಾಗಿದೆ. ಬ್ರಾಹ್ಮಣಿಕೆಗೆ ಹೊಸ ವ್ಯಾಖ್ಯಾನ ಬರೆದಿದ್ದಾನೆ, ಆತನ ಪ್ರಖರ ಪಾಂಡಿತ್ಯ, ಖಚಿತ ತೀರ್ಮಾನ ತೀಕ್ಷ್ಣ ಪ್ರತಿಕ್ರಿಯೆಗಳು ಪ್ರಶಂಸನೀಯವಾದವುಗಳಾಗಿವೆ. ಪೂರೋಹಿತಶಾಹಿಗಳ ಕುತಂತ್ರವನ್ನು, ಸನಾತನವಾದಿಗಳ ಕರ್ಮಕಾಂಡವನ್ನು ಖಂಡಿಸುವ, ಲಿಂಗಾಯತ ಮತವನ್ನು ಪ್ರತಿಪಾದಿಸುವ ಪೆದ್ದಿಯ ವಚನಗಳಲ್ಲಿ ವೀರಮಾಹೇಶ್ವರ ನಿಷ್ಠೆಯಿದೆ. ತನ್ನ ವಚನವನ್ನು ಕಟ್ಟಿಕೊಡುವಾಗ, ವಿಚಾರ ಸಮರ್ಥಿಸಿಕೊಳ್ಳುವಾಗ ಸಂಸ್ಕೃತ ಭಾಷೆಯನ್ನು ಬಳಸಿಕೊಳ್ಳುವುದು ಸುಭಾಷಿತ ಮತ್ತು ನುಡಿಗಳನ್ನು ಉದ್ಧರಿಸಿದ್ದು ಆತನ ಅಪ್ರತಿಮ ಪಾಂಡಿತ್ಯಕ್ಕೆ ನಿದರ್ಶನವನ್ನು ಒದಗಿಸುತ್ತದೆ. ಪುರಾಣ-ಶಾಸ್ತ್ರ, ವೇದ-ಆಗಮ-ಉಪನಿಷತ್ತು ಇವೆಲ್ಲ ಈತನಿಗೆ ಕರತಲಾಮಲಕವಾದಂತೆ ತೋರಿ ಬರುತ್ತದೆ. ವಚನ ಪಿತಾಮಹ ಹಳಕಟ್ಟಿಯವರು 'ವಚನಗಳಲ್ಲಿ ಸಂಸ್ಕೃತ ಶ್ಲೋಕಗಳನ್ನು ಉರಿಲಿಂಗಪೆದ್ದಿಯಷ್ಟು ಬಳಸಿದ ಮತ್ತೊಬ್ಬ ವಚನಕಾರನಿಲ್ಲ' ಎಂದಿರುವುದು ಸ್ಮರಣಾರ್ಹವಾಗಿದೆ.

ಉರಿಲಿಲಂಗಪೆದ್ದಿಯು ರಚಿಸಿರುವ ವಚನಗಳ ಸಂಖ್ಯೆ ಅಪಾರವಾಗಿದ್ದರೂ ಸದ್ಯ ಮುನ್ನೂರಾ ಅರವತ್ತಾರು ವಚನಗಳು ಉಪಲಬ್ಧವಾಗಿವೆ, ನಾಲ್ಕು ಸಾಲಿನ ವಚನಗಳಿಂದ ಮೊದಲುಗೊಂಡು ನಾಲ್ಕು ಪುಟಗಳವರೆಗೆ ವ್ಯಾಪ್ತಿಸಿರುವ ವಚನಗಳನ್ನೀತ ರಚಿಸಿದ್ದಾನೆ. ಭಕ್ತ ಭಕ್ತಿಯ ಜಿಜ್ಞಾಸೆಯಿದೆ, ಪ್ರಸಾದದ ಕುರಿತಾಗಿರುವ ವಚನಗಳಿವೆ. ಜಾತಿ-ಮತ-ಪಂಥ ನಿರಾಕರಿಸಿ ಸಮಾನತೆ ಕಾಣುವ ವಚನಗಳು ಹೇರಳವಾಗಿವೆ. ಶಿವನ ಪಾರಮ್ಯ ಸಾರುವ, ಲಿಂಗಾಯತ ಮತವನ್ನು ಪ್ರತಿಪಾಧಿಸುವ ರಚನೆಗಳು ಗಮನ ಸೆಳೆಯುತ್ತವೆ, ವಚನಗಳಲ್ಲಿ ಸಂಸ್ಕೃತ ಶ್ಲೋಕ ಬಳಸುವುದು, ಶ್ಲೋಕಕ್ಕಿರುವ ಮೂಲ ಆಕರಗಳನ್ನು ಉಲ್ಲೇಖಿಸುವುದು ಆತನ ಸಂಸ್ಕೃತ ಭಾಷೆ ಮತ್ತು ಸಾಹಿತ್ಯದ ಕುರಿತಾಗಿ ಆಳವಾದ ಜ್ಞಾನಕ್ಕೆ ಕನ್ನಡಿ ಹಿಡಿಯುತ್ತದೆ. ಪುಣ್ಯಕಥೆಗಳನ್ನು ಉದಾಹರಿಸಿ ಅಲ್ಲಿರುವ ಪಾತ್ರಗಳನ್ನು ಆಧಾರವಾಗಿ ನೀಡಿ ಶವಪಾರಮ್ಯ ಸಾರುವ ಆತನ ಪಾಂಡಿತ್ಯ ಕೌತುಕವಾಗಿದೆ.

ಉರಿಲಿಂಗಪೆದ್ದಿಯು ಲಿಂಗಾಯತ ಧರ್ಮದ ಪಂಚಾಚಾರ ಷಟ್‌ಸ್ಥಲ ಮತ್ತು ಅಷ್ಟಾವರಣಗಳ ಕುರಿತಾಗಿ ವಚನಗಳನ್ನು ರಚಿಸಿದ್ದಾನೆ. ಲಿಂಗವಂತನ ಲಕ್ಷಣಗಳನ್ನು ವಿವರಿಸುತ್ತಾನೆ, 'ಲಿಂಗವಂತ ಲಿಂಗವಂತ ಎಂಬಿರಿ ಎಂದು ಲಿಂಗವಂತರಾದಿರೋ' ಎಂಬ ವಚನದಲ್ಲಿ ಲಿಂಗವಂತರ ಕುರಿತಾಗಿ ಸ್ಪಷ್ಟವಾಗಿ ವಿವರಿಸುತ್ತಾನೆ. ಜಾತಿ-ಮತ ನಿರಾಕರಿಸಿ, ಸಮಾನತೆಯನ್ನು ಪ್ರತಿಪಾದಿಸುವಾಗ ಸುಧಾರಣಾವಾದಿಯಾಗಿ ಗೋಚರಿಸುತ್ತಾನೆ.

'ಹೊನ್ನು ಬಿಟ್ಟು, ಹೆಣ್ಣು ಬಿಟ್ಟು, ಮಣ್ಣು ಬಿಟ್ಟು
ಬ್ರಹ್ಮಚಾರಿಗಳಾಗಬೇಕೆಂದು
ಬಣ್ಣವಿಟ್ಟು ನುಡಿವ ಅಣ್ಣಗಳ ಪರಿಯ ನೋಡಿರೊ' (ವ.ಶಾ.ಸಾ.ವ. ೯೯೯)

ಎಂದು ಆರಂಭವಾಗುವವ ವಚನವು ಕೊನೆಯಲ್ಲಿ –

'ಹೆಣ್ಣು, ಹೊನ್ನು, ಮಣ್ಣು ಈ ಮೂರನು ಹಿಡಿದು
ಸದ್ಭಕ್ತಿ ದಾಸೋಹವ ಮಾಡಬಲ್ಲಡೆ ಭವಂ ನಾಸ್ತಿ
ಇಲ್ಲಿ ಇದ್ದಡೆಯೂ ನೀರ ತಾವರೆಯಂತಿಪ್ಪರು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ, ನಿಮ್ಮ ಶರಣರು'

(ಸ.ವ.ಸಂ:೬ ವ.ಸಂ, ೧೬೨೭)

ಈ ವಚನದಲ್ಲಿ ಸಂಸಾರಯೋಗವನ್ನು ಪ್ರತಿಪಾದಿಸಿದ್ದು ಸ್ಪಷ್ಟವಾಗಿದೆ. ಉರಿಲಿಂಗಪೆದ್ದಿ, ಜೀವ–ಶಿವ, ಭಕ್ತ–ಪರಮಾತ್ಮನ ಕುರಿತಾಗಿ ಮಾತನಾಡುತ್ತಾನೆ. ಭಕ್ತಿ ದಾಸೋಹ ಕುರಿತಾಗಿಯೂ ಮಾತನಾಡುತ್ತಾನೆ. ಸಮರಸಭಾವಕ್ಕೆ ಹೆಚ್ಚು ಒತ್ತು ನೀಡುತ್ತಾನೆ. ಶಿವಪಾರಮ್ಯ ಪ್ರತಿಪಾದಿಸುವ ಭರದಲ್ಲಿ ಅನ್ಯದೈವಗಳನ್ನು ತೀವ್ರ ಖಂಡಿಸುತ್ತಾನೆ. ಅಂತರಂಗದ ಪೂಜೆಗೆ ಮಹತ್ವವನ್ನು ಕೊಡುವ ಉರಿಲಿಂಗಪೆದ್ದಿ ಪ್ರಾಣಲಿಂಗದ ಪೂಜೆಯು ನಿಜವಾದ ಆರಾಧನೆಯೆಂದು ನಂಬಿದ ಅನುಭಾವಿ.

ಉರಿಲಿಂಗಪೆದ್ದಿ ಮತ್ತು ಕಾಳವ್ವೆಯರದು ಅಪರೂಪ ಮತ್ತು ಅನುರೂಪದ ದಾಂಪತ್ಯ. ಶರಣ ಧರ್ಮಕ್ಕೆ ಅನುಸಾರವಾಗಿ ದಾಂಪತ್ಯ ರೂಪಿಸಿಕೊಂಡವರು ಸಂಸಾರವನ್ನು ಒಂದು ಯೋಗವೆಂದು ತಿಳಿದು ಆಚರಿಸಿದವರು.

'ಈಗ ಕರ್ನಾಟಕ, ಮಹಾರಾಷ್ಟ್ರ, ಆಂದ್ರಪ್ರದೇಶಗಳಲ್ಲಿ ಉರಿಲಿಂಗಪೆದ್ದಿಯ ಪರಂಪರೆಯ ಅನೇಕ ಮಠಗಳಿದ್ದು, ಆ ಮಠಗಳ ಮಠಾಧೀಶರು ಲಿಂಗಾಯತ ಹರಿಜನರು. ಕೆಲವು ವರ್ಷಗಳ ಹಿಂದೆ ಭಾಲ್ಕಿಯ ಹಿರೇಮಠದ ಚನ್ನಬಸವ ಸ್ವಾಮಿಗಳು ಭಾಲ್ಕಿಯಲ್ಲಿ ಉರಿಲಿಂಗಪೆದ್ದಿ ಪರಂಪರೆಯ ಮಠಗಳ ಮಠಾಧೀಶರ ಸಮ್ಮೇಳನ ನಡೆಸಿದ್ದರು. ಅಸ್ಪೃಶ್ಯರು ಮಠಾಧೀಶರಾಗುವ ಪರಂಪರೆಗೆ ನಾಂದಿ ಹಾಡುವ ಮೂಲಕ ಕೆಳವರ್ಗದವರಿಗೆ ಅಂಟಿಕೊಂಡಿದ್ದ ಅಸ್ಪೃಶ್ಯತೆಯ ಅಂಟುರೋಗವನ್ನು ತೊಳೆದ ಮೊದಲ ಸಾಮಾಜಿಕ ವೈದ್ಯ ಉರಿಲಿಂಗಪೆದ್ದಿ ಆಗಿದ್ದನು.

ಶರಣೆಯರ ವಚನಗಳು

೪.೮. ಆಯ್ದಕ್ಕಿ ಲಕ್ಕಮ್ಮ :-

ಶರಣರು ರೂಪಿಸಿದ ಕಾಯಕ ಮತ್ತು ದಾಸೋಹ ತತ್ವಗಳನ್ನು ತನ್ನ ಬದುಕಿನ ಮುಖ್ಯ ಮೌಲ್ಯವನ್ನಾಗಿ ಸ್ವೀಕರಿಸಿದ ಲಕ್ಕಮ್ಮ, ಶರಣಶ್ರೇಷ್ಠ ಆಯ್ದಕ್ಕಿ ಮಾರಯ್ಯನ ಪತ್ನಿ. ಮೂಲತಃ

ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಅಮರೇಶ್ವರ ಗ್ರಾಮದವರಾದ ಈ ದಂಪತಿಗಳು ಬಸವಣ್ಣನವರ ಕೀರ್ತಿವಾರ್ತೆ ಕೇಳಿ ಕಲ್ಯಾಣಕ್ಕೆ ಬಂದು, ಅಲ್ಲಿ ಮಹಾಮನೆಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ಜಂಗಮ ದಾಸೋಹ ಮಾಡುವ ಕಾಯಕವನ್ನು ಕೈಕೊಳ್ಳುತ್ತಾರೆ.

ಲಕ್ಕಮ್ಮನ ೨೫ ವಚನಗಳು ಲಭ್ಯವಿವೆ, ಇವಳ ವಚನದ ಅಂಕಿತ 'ಮಾರಯ್ಯಾ ಪ್ರಿಯ ಅಮರೇಶ್ವರಲಿಂಗ' ಇಲ್ಲಿರುವ ವಚನಗಳೆ ಸನ್ನಿವೇಶ ಪ್ರೇರಣೆಯಿಂದ ಹುಟ್ಟಿದುದರಿಂದ ಬಿಡಿ ಬಿಡಿಯಾಗಿದ್ದರೂ ಅವುಗಳಲ್ಲಿ ಭಾವದ ಏಕಸೂತ್ರತೆ ಕಂಡುಬರುತ್ತದೆ.

'ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?' ಎಂಬ ನಿಶ್ಚಲ ನಿಲುವು, 'ಆಸೆಯಂಬುದು ಅರಸಿಂಗಲ್ಲದೆ ಶವಭಕ್ತರಿಗುಂಟೆ?' ಎಂಬ ಅರಿವು 'ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ ಅರಿವಂಗೆ ಬೇರೊಂದೊಡಲುಂಟೆ?' ಎಂಬ ಸಮತಾಭಾವ, ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ, ಇದು ನಿಮ್ಮ ಮನವೋ ಬಸವಣ್ಣನ ಅನುಮಾನದ ಚಿತ್ತವೋ?' ಎಂದು ಬಸವಣ್ಣನ ಒಳ್ಳೆಯತನವನ್ನೇ ಪ್ರಶ್ನಿಸುವ ಕಿಚ್ಚು 'ಅಯ್ದಿಹೆನೆಂಬ ಕಾಯಕದ ಅರಿಕೆ ಹಿಂಗಿತೆ, ನಾ ಮಾಡಿಹನೆಂಬ ತವಕ ಹಿಂಗಿತೆ?' ಎಂದು ಆಸೆಬುರುಕ ಗಂಡನನ್ನೇ ಝಂಕಿಸಿ ಹೇಳುವಂತಹ ರೋಷ,' ಮಾರಯ್ಯಪ್ರೀಯ ಅಮರೇಶ್ವರ ಲಿಂಗವುಳ್ಳನ್ನಕ್ಕರ ನನಗಾರ ಹಂಗಿಲ್ಲ' ಎಂಬ ಆತ್ಮವಿಶ್ವಾಸ–ಇವು ಲಕ್ಕಮ್ಮನಲ್ಲಿ ಕಾಣುವ ಒಟ್ಟು ಅವಳ ವ್ಯಕ್ತಿತ್ವದ ಅಂಶಗಳು.

ಗಂಡ ಕಾಯಕ ಮರೆತು ಅನುಭಾವಗೋಷ್ಠಿಯಲ್ಲಿ ಮೈಮರೆತಾಗ 'ಕಾಯಕ ನಿಂದಿತ್ತು ಹೋಗಯ್ಯಾ ಎನ್ನುತ್ತಾಳೆ' ಹೀಗೆ ಎಚ್ಚರಿಸಿ ಸಮಯ ಪ್ರಜ್ಞೆಯನ್ನು ಮಿಡಿದುದು, ಹೆಚ್ಚಿಗೆ ಅಕ್ಕಿಯನ್ನು ಆಯ್ದುತಂದಾಗ 'ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ' ಅಲ್ಲಿಯೇ ಸುರಿದು ಬನ್ನಿ,' ಎಂದು ಮರಳಿ ಕಳಿಸುವುದು, ಮಾಡುವ ಭಕ್ತಿಯಲ್ಲಿ ಅಹಂಕಾರ ತೋರಿದಾಗ 'ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು' ಎಂದು ವಿವೇಕ ತೋರಿದುದು, ಭಕ್ತಿಗೆ ಪ್ರತಿಫಲವನ್ನು ಅಪೇಕ್ಷಿಸಿದಾಗ 'ಮಾಡಿ ನೀಡಿ ಹೋದೆಹೆನೆಂಬಾಗ ಕೈಲಾಸವೇನು ಕೈಕೂಲಿಯೆ?' ಎಂದು ನಿರಪೇಕ್ಷ ನಿಷ್ಕಾಮಭಕ್ತಿ ಅನುಸರಿಸಲು ತಿಳಿಸುದುದು, 'ನಿನ್ನ ವಿರಕ್ತಿನಷ್ಟವಾಗದ ಮುನ್ನ ಮಾರಯ್ಯಪ್ರೀಯ ಅಮರೇಶ್ವರ ಲಿಂಗವನರಿಯಿರಯ್ಯ' ಎಂದು ಅರಿವಿನ ಮಾರ್ಗ ಅನುಸರಿಸಲು ಬೋಧಿಸಿದ್ದನ್ನು ನೋಡಿದರೆ ಲಕ್ಕಮ್ಮ ಏರಿ ನಿಂತ ಆಧ್ಯಾತ್ಮಿಕ ನಿಲುವನ್ನು ನಿದರ್ಶಿಸುತ್ತದೆ. ಇಲ್ಲಿ ಲಕ್ಕಮ್ಮ ಶರಣರು ಕೊಟ್ಟ ಸ್ತ್ರೀ ಸ್ವಾತಂತ್ರ್ಯ ವೃಕ್ಷದ ಸತ್ಫಲವಾಗಿ ಕಾಣುತ್ತಾಳೆ.

'ಅವ ಬೀಜ ಬೀಳುವಲ್ಲಿ ಮೊಳೆ ಮುಖ ಹಿಂಚು ಮುಂಚುಂಟೆ? ಮೂಲ ನಷ್ಟವಾದಲ್ಲಿ ಅಂಕುರ ನಿಂದಿತು' 'ಕೈದಕೊಡುವರಲ್ಲದೆ ಕಲಿತನವ ಕೊಡುವರುಂಟೆ? ಹೆಣ್ಣ ಕೊಡುವರಲ್ಲದೆ ಕೂಟಕ್ಕೊಳರಾದವರುಂಟೆ? ಕಳುವ ಚೋರಂಗೆ ಬಡವರೆಂದು ದಯವುಂಟೆ?' 'ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ, ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ' 'ಭಕ್ತರಿಗೆ ಬಡತನವುಂಟೆ? ನಿತ್ಯಂಗೆ ಮರಣವುಂಟೆ?' 'ಮನಶುದ್ಧ ವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ,

ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು' ಎಂಬಂತಹ ಸೂತ್ರಬದ್ಧವಾದ ಮಾತುಗಳು ವಚನಗಳ ಸೊಗಸನ್ನು ಹೆಚ್ಚಿಸಿವೆ, ಲಕ್ಕಮ್ಮನ ಭಾವಶ್ರೀಮಂತಿಕೆಯನ್ನು ಪ್ರಕಾಶಿಸಿವೆ.

ಒಟ್ಟಾರೆ ಅನುಭವ ಪಕ್ವವಾದದ್ದು. ಅದರಲ್ಲಿ ದ್ವಂದ್ವವಿಲ್ಲ. ಹಾಗಾಗಿಯೇ ಅವಳ ಸಾಹಿತ್ಯ ರಚನೆ ಓದುಗರಲ್ಲಿ ಒಂದು ಆತ್ಮೀಯ ಭಾವವನ್ನು ಮೂಡಿಸುತ್ತದೆ. ಲಕ್ಕಮ್ಮನ ಕಾಯಕನಿಷ್ಠೆ, ಸಮತಾಭಾವ, ಧೈರ್ಯ, ಛಲ, ಆತ್ಮವಿಶ್ವಾಸ, ಭಕ್ತಿ, ಆಧ್ಯಾತ್ಮಿಕ ಅರಿವು ಇತ್ಯಾದಿಗಳೆಲ್ಲವನ್ನೂ ಅವಳ ವಚನಗಳು ಗರ್ಭೀಕರಿಸಿಗೊಂಡಿವೆ. ವಸ್ತು, ವಿಷಯಗಳಂತೆ ನಿರೂಪಣೆಯ ಅಂಶವೂ ಸೂತ್ರಬದ್ಧವಾಗಿ ಮೂಡಿ ಅವಳ ವಚನಗಳ ಕಾವ್ಯಗುಣವನ್ನು ಹೆಚ್ಚಿಸಿವೆ. ಪತಿ, ಪತ್ನಿಯನ್ನು ಬದುಕಲ್ಲಿ ನಡೆಯಿಸುವ ಕಾರ್ಯ ಸಹಜವಾಗಿರುವ ಮೌಲ್ಯ ಎಂದು ಒಪ್ಪಿಕೊಂಡ ಸಮಾಜವೊಂದರಲ್ಲಿ ಪತ್ನಿಯೇ ಪತಿಯನ್ನು ನಡೆಸುವ, ಎಚ್ಚರಿಸುವ, ಬುದ್ಧಿ ಹೇಳುವ ಕಾರ್ಯವನ್ನು ವಹಿಸಿಕೊಂಡದ್ದರ ಉದಾಹರಣೆ ಲಕ್ಕಮ್ಮನಲ್ಲಿ ನಮಗೆ ಸಿಗುತ್ತದೆ. ಪರಕ್ಕಿಂತಲೂ, ಇಹದ ಬದುಕಿನ ವಾಸ್ತವಕ್ಕೇ ಹೆಚ್ಚು ಒತ್ತು ಕೊಡುತ್ತಾಳೆ ಅವಳು. ಹಾಗಾಗಿ ಅವಳ ವ್ಯಕ್ತಿತ್ವ ಶಿವಭಕ್ತೆಯಾಗಿ ವಿಜೃಂಭಿಸುವುದಕ್ಕಿಂತ ಹೆಚ್ಚಾಗಿ ಕಾಯಕ ಜೀವಿಯಾಗಿಯೇ ಶೋಭಿಸಿದೆ.

೪.೯. ಸೂಳೆ ಸಂಕವ್ವೆ :

ಇವಳ ವಚನದ ಅಂಕಿತ 'ನಿರ್ಲಜ್ಜೇಶ್ವರ'. ಮೊದಲು ವೇಶ್ಯಾವೃತ್ತಿಯನ್ನು ಮಾಡುತ್ತಿದ್ದಳು. ನಂತರ ಶರಣರ ಚಳುವಳಿಯ ಪ್ರಭಾವಕ್ಕೊಳಗಾಗಿ ಸಾತ್ವಿಕ ಬದುಕಿನತ್ತ ಸಾಗಿ ಬಂದಿರಬೇಕೆಂದು ಆಕೆಯ ಹೆಸರಿನ ಹಿಂದೆ ಹತ್ತಿದ ವಿಶೇಷಣ ಹಾಗೂ ವಚನದಲ್ಲಿ ವ್ಯಕ್ತವಾದ ವಿಷಯ ದೃಢಪಡಿಸುತ್ತವೆ. ಇವಳೊಬ್ಬ ಸ್ವಾಭಿಮಾನಿ ಪ್ರಾಮಾಣಿಕವಾಗಿ ಬದುಕಿದ ದಿಟ್ಟ ಮಹಿಳೆ. ಈಕೆಯ ಒಂದು ವಚನ ಮಾತ್ರ ದೊರೆತಿದೆ. ವ್ರತಭ್ರಷ್ಟರ ಟೀಕೆಯೇ ಇದರ ವಸ್ತು. ವ್ರತಹೀನರ ಸಂಗ ಶಿಕ್ಷಾರ್ಹ ಎನ್ನುವುದು ಇವಳ ನಿರ್ಧಾರದ ನಿಲುವು ಇದನ್ನು ತನ್ನ ವೃತ್ತಿಯ ಅನುಭವದ ಹಿನ್ನಲೆಯಲ್ಲಿ ಯಾವ ಅಂಜಿಕೆ, ಆತ್ಮವಂಚನೆಯಿಲ್ಲದೆ ಅತ್ಯಂತ ಸಹಜವಾಗಿ ಪ್ರಕಟಿಸಿದ ಧೀರ ವಚನಕಾರ್ತಿ.

'ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಹೆ
ಹಿಡದಡೆ ಬತ್ತಲೆ ನಿಲಿಸಿ ಕೊಲುವರಯ್ಯ' (ವ.ಶಾ.ಸಾ.ವ. ೧೩೮೩)

ಎಂಬ ಮಾತಿನಲ್ಲಿ ಅವಳ ನಿಯತ್ತಿನ ಬದುಕಿನ ಪ್ರಾಮಾಣಿಕ ಚಿತ್ರ ಮೂಡಿನಿಂತಿದೆ. ಜೊತೆಗೆ ಏಕದೇವನಿಷ್ಠೆಯ ಧ್ವನಿಯೂ ಮೂಡಿ ಬಂದಿದೆ.

'ವ್ರತ ಹೀನನರಿದು ಬೆರೆದಡೆ ಕಾಡ ಕತ್ತಿಯಲ್ಲಿ ಕಿವಿ ಮೂಗು ಕೊಯ್ವರಯ್ಯ' ಎಂಬಲ್ಲಿ ವ್ರತಹೀನನ್ನು ಅರಿತೂ ಬೆರೆತವರಿಗೆ ಒದಗುವ ಕಠಿಣ ಶಿಕ್ಷೆ. ಆ ಕಾಲಕ್ಕೆ ವ್ರತಾಚಾರಕ್ಕಿದ್ದ ಮಹತ್ವ ವ್ಯಕ್ತವಾಗಿವೆ. ಸರಳ ದೇಶೀ ಮುಡಿಗಳಲ್ಲಿ ಒಡಮೂಡಿದ ಸಾಮಾನ್ಯ ಸ್ತ್ರೀಯೊಬ್ಬಳ ಈ ಸಹಜ ಅಭಿವ್ಯಕ್ತಿ ಅಪೂರ್ವವೆಂದೇ ಹೇಳಬೇಕು.

ಋಗ್ವೇದದಲ್ಲಿ ಇಂದ್ರಾಣಿ, ಲೋಪಾಮುದ್ರೆ, ಶಚಿ ಮೊದಲಾದ ಮಹಿಳೆಯರು ಮಂತ್ರಗಳನ್ನು ರಚಿಸಿದ್ದಾರೆಂದು ತಿಳಿದುಬಂದಿದೆ. ಮನು 'ಧರ್ಮಸಾರ'ವನ್ನು ರಚಿಸಿ ಹೆಣ್ಣು ಅಶುಭ ಸೂಚಕವೆಂದು ಜರೆದಿದ್ದಾನೆ, ಹೆಣ್ಣಿಗೆ ವೈದಿಕ ವರ್ಣವ್ಯವಸ್ಥೆಯಲ್ಲಿ ಉಪನಯನದ ಹಕ್ಕು ಇಲ್ಲದೆ ಇರುವುದರಿಂದ ಜ್ಞಾನವನ್ನು ಪಡೆಯುವ ಹಕ್ಕಿನಿಂದಲೂ ವಂಚಿತಳನ್ನಾಗಿಸಿದರು.

ಬುದ್ಧನ ಕಾಲದಲ್ಲಿ ಮಹಿಳೆಯನ್ನು ಕುರಿತ ಆಲೋಚನೆ ಕ್ರಿಯಾತ್ಮಕವಾಗಿತ್ತೆಂಬುದಕ್ಕೆ ಬುದ್ಧ ಸಂಘದಲ್ಲಿ ನಿದರ್ಶನಗಳು ದೊರೆತಿವೆ. ಸ್ತ್ರೀ, ಮಾನವನ ಉನ್ನತಿಕೆಯ ಬಗ್ಗೆ ಮಾಡಿರುವ ಕ್ರಿಯಾಚಟುವಟಿಗಳು ಅಂದರೆ ಪ್ರಜಾಪ್ರಭುತ್ವದ ಚಿಂತನೆ 'ಬುದ್ಧ ಸಂಘ'ದಲ್ಲಿಯೇ ಕಂಡುಬಂದಿರುವುದು ಗಮನಾರ್ಹವಾಗಿದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ಪಂಪ' ಭಾರತ'ದಲ್ಲಿ ಚಿತ್ರಿಸಿರುವ ದ್ರೌಪದಿಯ ಪಾತ್ರ ಮಹಿಳಾ ಬಂಡಾಯದ ಬುನಾದಿಯಾಗಿದೆ. ಕೆಟ್ಟ ವೈದಿಕ ಧರ್ಮದ ಮೌಲ್ಯಗಳ ವಿರುದ್ಧ ಮೂಡಿಬಂದಿರುವ ಪ್ರತಿಭಟನೆಯಾಗಿ, ಆ ಸಂದರ್ಭಕ್ಕೆ ಮಾತ್ರ ಸೀಮಿತವಾಗದ ಬಹುಶ್ರುತತೆಯನ್ನು ದ್ರೌಪದಿಯ ಪಾತ್ರದಲ್ಲಿ ಕಾಣಬಹುದು.

೧೨ನೇ ಶತಮಾನದಲ್ಲಿ ನಡೆದ ಕ್ರಾಂತಿಯ ಮೂಲ ಮತ್ತು ಮುಖ್ಯ ನಾಯಕನಾದ ಬಸವಣ್ಣ ಉಪನಯನದ ಸಂದರ್ಭದಲ್ಲಿ ಜನಿವಾರವನ್ನು ಕಿತ್ತೆಸೆಯುವ ಕ್ರಿಯೆ ಮೊದಲು ಬಂಡಾಯದ ಕಹಳೆಯಾಗಿದೆ. ಹೊಸಸಮಾಜದ ರಚನೆಯ ಮುಕ್ತ ಚರ್ಚೆಗೆ ಅನುಭವ ಮಂಟಪವನ್ನು ಬುನಾದಿಯನ್ನಾಗಿಸಿದ್ದ ಬಸವಣ್ಣನ ವ್ಯಕ್ತಿತ್ವದ ಪಾರದರ್ಶಕತೆಗೆ ಸಂಕೇತವಾಗಿದೆ. ಸಮತಾವಾದದ ಮೂಲ ಭೂಮಿಕೆಯಾದ ಅನುಭವ ಮಂಟಪದಲ್ಲಿ ಪುರುಷರೊಂದಿಗೆ ಮಹಿಳೆಯರೂ ಪರಸ್ಪರವಾಗಿ ತಮ್ಮ ಲೋಕೋತ್ತರ ಚಿಂತನೆಯನ್ನು ಮಾಡುತ್ತಿದ್ದರೆಂಬ ಅಂಶವೇ ಗಮನಾರ್ಹವಾಗಿದೆ. ಕನ್ನಡ ಸಾಹಿತ್ಯದಲ್ಲಿ ವಚನಕಾರ್ತಿಯರು ಮೊಟ್ಟಮೊದಲಿಗೆ ಯಜಮಾನ ಸಂಸ್ಕೃತಿ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿದರು. ಈ ಪ್ರತಿಭಟನೆಯಲ್ಲಿ ಸೂಳೆಸಂಕವ್ವೆಯು ಒಬ್ಬಳಾಗಿದ್ದಳು. ಶರಣರ ಸಾಂಸ್ಕೃತಿಕ ಚಳುವಳಿಗೆ ತಳಸಮುದಾಯದ ಶರಣೆ ಸೂಳೆ ಸಂಕವ್ವೆಯು ಕೇವಲ ಒಂದೇ ವಚನವನ್ನು ರಚಿಸಿದ್ದರೂ ಆ ವಚನದಿಂದ ಕಂಡುಬರುವ ತಾತ್ವಿಕ ಅಂಶಗಳು ಚಾಲನೆಯನ್ನು ಒದಗಿಸಿತ್ತು ಎಂದರೆ ತಪ್ಪಾಗಲಾರದು ಮತ್ತು ಸಂಕವ್ವೆ ಆ ಒಂದೇ ವಚನದಲ್ಲಿ ಈ ಧಾರ್ಮಿಕ ಚಳುವಳಿ ಮಹಿಳೆಯ ವಿಮೋಚನೆಗೆ ಚಾಲನೆಯನ್ನು ಒದಗಿಸಿದ್ದು, ಸಮಾನತೆ ಮತ್ತು ವೈಚಾರಿಕತೆಯ ಶುದ್ಧ ಭಾವವನ್ನು ವ್ಯಕ್ತಪಡಿಸಿದ್ದು ಶತಸತ್ಯ.

೪.೧೦. ಕಾಳವ್ವೆ :

ತಳಸಮುದಾಯಕ್ಕೆ ಸೇರಿದ ಉರಿಲಿಂಗಪೆದ್ದಿಯ ಪತ್ನಿಯೇ ಕಾಳವ್ವೆ, ಅಭಿವ್ಯಕ್ತಿಯ ಭಾಗವಾದ ಈಕೆಯ ವಚನಗಳಲ್ಲಿ ವೈಚಾರಿಕ ಮನೋಭಾವ ವ್ಯಕ್ತವಾಗಿದೆ. ತನ್ನ ಪರಿಸರದ ಶರಣಧರ್ಮ ಆರಾಧಕರ ದ್ವಂದ್ವ ಮತ್ತು ಜಂಗಮವೇಷವನ್ನು ತೀವ್ರವಾಗಿ ವಿಡಂಬಿಸಿದ್ದಾಳೆ. ದಲಿತ ವರ್ಗದ

ವಚನಕಾರ್ತಿಯರಲ್ಲಿಲ್ಲದ ವಿಶೇಷ ಪ್ರತಿಭೆ ಮತ್ತು ಪಾಂಡಿತ್ಯದೊಂದಿಗೆ ಶಾಸ್ತ್ರಜ್ಞಾನದ ಹಿನ್ನಲೆಯನ್ನೂ ಹೊಂದಿದವಳಾಗಿದ್ದಾಳೆ. ಈಕೆಯ ಹುಟ್ಟೂರು ಮಹಾರಾಷ್ಟ್ರದ ಕಂದಹಾರ್ ಗ್ರಾಮ. ೧೨ನೇ ಶತಮಾನದ ಕಲ್ಯಾಣದ ಶರಣರ ಚಳುವಳಿಯನ್ನು ಸೇರಿಕೊಂಡು ಶರಣ ಸಂಸ್ಕೃತಿಯನ್ನು ಮುಂದೆ ನಡೆಸಿದ ಅಸ್ಪೃಶ್ಯ ದಂಪತಿಗಳು–ಕಾಳವ್ವೆ ಮತ್ತು ಉರಿಲಿಂಪೆದ್ದಿ.

ಇವಳು ಶಿವಶರಣೆಯಾಗಿ, ವಚನಕಾರಳಾಗಿ ಖ್ಯಾತಿವೆತ್ತವಳಾಗಿದ್ದಾಳೆ. ಕಾಳವ್ವೆಯು ವಚನಾಂದೋಲನದಲ್ಲಿದ್ದ ಏಕೈಕ ದಲಿತ ವಚನಕಾರ್ತಿ. ಇವಳ ವೈಯಕ್ತಿಕ ಬದುಕಿಗೆ ಸಂಬಂಧಿಸಿದ ವಿಚಾರಗಳಾವವೂ ಲಭಿಸುವುದಿಲ್ಲ. 'ಉರಿಲಿಂಗಪೆದ್ದಿಗಳರಸ' ಎಂಬುದು ಕಾಳವ್ವೆಯ ವಚನದ ಅಂಕಿತವಾಗಿದೆ. ಇದುವರೆಗೆ ಹನ್ನೆರಡು ವಚನಗಳು ಲಭಿಸಿವೆ. 'ಭಕ್ತನ ಲಕ್ಷಣ, ವ್ರತಾಚರಣೆಯ ಮಹತ್ವ, ಪ್ರಸಾದದ ಮಹಿಮೆ ಮತ್ತು ಕಾಯಕನಿಷ್ಠೆ ಇವು ಈಕೆಯ ವಚನಗಳಲ್ಲಿ ಕಂಡುಬರುವ ಮುಖ್ಯ ಅಂಶಗಳು'. ಕಾಯಕದ ಮಹತ್ವ ತಿಳಿಸುವ ವಚನ ಹೀಗಿದೆ,

'ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯಶುದ್ಧವಿಲ್ಲದುದು ಕಾಯಕವಲ್ಲ.
ಅಸೆಯೆಂಬುದು ಭವದ ಬೀಜ
ನಿರಾಸೆಯೆಂಬುದು ನಿತ್ಯಮುಕ್ತಿ
ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ' **(ಸ.ವ.ಸಂ:೫ ವ.ಸಂ, ೭೩೫)**

ಇದರಲ್ಲಿ ಭಕ್ತನ ಲಕ್ಷಣ ಮತ್ತು ಸತ್ಯಶುದ್ಧವಾದ 'ಕಾಯಕ'ದ ವ್ಯಾಖ್ಯಾನವಿದೆ. ಶಿವಶರಣರು ಕಾಯಕ ಮತ್ತು ದಾಸೋಹ ಎಂಬ ಎರಡು ಮಹೋನ್ನತ ಮೌಲ್ಯಗಳನ್ನು ಪ್ರತಿಪಾದಿಸಿರುವುದು ಐತಿಹಾಸಿಕ ಸತ್ಯವಾಗಿದೆ. ಸಮಾಜೋಧಾರ್ಮಿಕ ಆಂದೋಲನದಲ್ಲಿ ಪಾಲುಗೊಂಡ ಕಾಳವ್ವೆ, ವಚನ ಚಳುವಳಿಗೆ ಪೂರಕವಾದ ಸಿದ್ಧಾಂತ ಪ್ರತಿಪಾದಿಸಿರುವುದು ಗಮನಾರ್ಹವಾಗಿದೆ.

'ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ?
ಹಸಿದು ತಂದು ಮಾಡುವಾತ ಭಕ್ತನೆ?
ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ?"
'ನಿಂದಯೂ ಭವೇತ್ ಕುಷ್ಟೀ ದಾಸೀಗರ್ಭಸು ಜಾಯತೇ'
ಎಂಬುದಾಗಿ, ತನ್ನ ಪ್ರಾಣದ ಮೇಲೆ ಬಂದಡೂ ಬರಲಿ,
ಇವರ ಬಿಡಬೇಕು. ಬಿಡದಿರಲು ಉರಿಲಿಂಗಪೆದ್ದಿಗಳರಸನೊಲ್ಲನವ್ವಾ'(ವ.ಶಾ.ಸಾ.ವ. ೭೪೮)

ಈ ವಚನದಲ್ಲಿ ಯಾರು 'ಭಕ್ತರಲ್ಲ' ಎಂಬುದನ್ನು ಸ್ಪಷ್ಟಪಡಿಸಿದ್ದಾಳೆ. ಮೊದಲ ಮೂರು ಪಾದಗಳಲ್ಲಿ ಪ್ರಶ್ನೆಗಳೇ ಇವೆ. ಮುಂದೆ ಸಂಸ್ಕೃತ ಶ್ಲೋಕ ಬಳಸಿ ತನ್ನ ಮಾತಿಗೆ ಪುಷ್ಠಿ ನೀಡುತ್ತಾಳೆ.

ಓರ್ವ ದಲಿತ ಹೆಣ್ಣು ಮಗಳು ಅಕ್ಷರಾಭ್ಯಾಸ ಮಾಡಿದ್ದು. ಸಂಸ್ಕೃತ ಕಲಿತು ವಚನಗಳಲ್ಲಿ ಸಾಂದರ್ಭಿಕವಾಗಿ ಬಳಸಿಕೊಳ್ಳುವುದು ಅಸಾಮಾನ್ಯ ಸಾಧನೆಯಾಗಿ ಕಾಣುತ್ತದೆ. ಕಾಳವ್ವೆಯ ವೈಚಾರಿಕ, ಎಲ್ಲದಕ್ಕೂ ಈ ವಚನವು ಸಾಕ್ಷಿಯಾಗುತ್ತದೆ.

'ವ್ರತ' ವೆಂದರೇನು? ವ್ರತದ ಅರ್ಥ, ಅದರ ಮಹತ್ವ ವ್ರತವನ್ನು ವ್ಯಾಖ್ಯಾನಿಸಿರುವ ವಚನ ತುಂಬ ಪ್ರಸಿದ್ಧವಾಗಿದೆ.

'ವ್ರತವೆಂಬುದು ನಾಯಕ ರತ್ನ
ವ್ರತವೆಂಬುದು ಸುಪ್ಪಾಣಿಯ ಮುತ್ತು,
ವ್ರತವೆಂಬುದು ಜೀವನ ಕಳೆ
ವ್ರತವೆಂಬುದು ಸುಯಿಧಾನ
ವ್ರತ ತಪ್ಪಲು ಉರಿಲಿಂಗಪೆದ್ದಿಗಳರಸನೊಲ್ಲನವ್ವಾ' (ವ.ಶಾ.ಸಾ.ವ. ೧೩೬೬)

ವ್ರತವನ್ನು 'ನಾಯಕರತ್ನ', 'ಸುಪ್ಪಾಣಿಯ ಮಾತು', 'ಜೀವನಕಳೆ', 'ಸುಯಿಧಾನ' ಈರೀತಿ ನಾಲ್ಕು ವಿಧವಾಗಿ ವಿವರಿಸಿದ್ದಾಳೆ. ವ್ರತವು ತುಂಬ ಮಹತ್ವದ್ದಾಗಿದೆ ಜೀವನದ ಕಳೆಯಾಗಿದೆ, ಸುಪ್ಪಣಿಯೇ ತಾನಾಗಿದೆ. ಅದಕ್ಕಾಗಿ ವ್ರತ ತಪ್ಪಿಸಬಾರದು, 'ನೋಂಪಿ'ಯಾಗಿ ಅದನ್ನು ಚಾಚೂ ತಪ್ಪದೆ ಆಚರಿಸಬೇಕು. ವ್ರತ ತಪ್ಪಿದರೆ ಇಷ್ಟದೈವ ಮೆಚ್ಚುವುದಿಲ್ಲ. ಶಿವಭಕ್ತರು ವಚನ ಪಾಲಿಸಬೇಕೆಂಬ ಸದಾಶಯ ಪ್ರಸ್ತುತ ವಚನದಲ್ಲಿ ಮಡುಗಟ್ಟಿದೆ. ಮುಂದುವರೆದು ಮತ್ತೊಂದು ವಚನದಲ್ಲಿ–

'ವ್ರತ ಹೋದಾಗಳೆ ಇಷ್ಟಲಿಂಗದ ಕಳೆ ನಷ್ಟವವ್ವಾ
ಅವರು ಲಿಂಗವಿದ್ದೂ ಭವಿಗಳು
ಅದು ಹೇಗೆಂದರೆ, ಪ್ರಾಣವಿಲ್ಲದ ದೇಹದಂತೆ
ಉರಿಲಿಂಗಪೆದ್ದಿಗಳರಸ ಬಲ್ಲನೊಲ್ಲನವ್ವಾ' (ವ.ಶಾ.ಸಾ.ವ. ೧೩೬೮)

ವ್ರತ ಹೋದರೆ ಇಷ್ಟಲಿಂಗ ಕಳೆಗುಂದುವುದು, ಲಿಂಗವಿದ್ದರೂ ವ್ರತವಿಲ್ಲದಿದ್ದರೆ ಅವರು ಭವಿಗಳಿದ್ದಂತೆ ಎಂದು ಹೇಳಿ, 'ವ್ರತ' ದೇಹದೊಳಗಿರುವ 'ಪ್ರಾಣ'ವಿದ್ದಂತೆ, ಪ್ರಾಣವಾಯುವಿದ್ದಂತೆ ಎಂದು ವ್ಯಾಖ್ಯಾನಿಸಿದ್ದು ವ್ರತದ ಮಹತ್ವ ತಿಳಿಸುವುದೇ ಆಗಿದೆ. ವ್ರತವಿಲ್ಲದವರು 'ಪ್ರಾಣವಿಲ್ಲದ ದೇಹದಂತೆ' ಎಂದು ಹೋಲಿಕೆ ನೀಡಿದ್ದು ವ್ರತಕ್ಕಿರುವ ಮಹತ್ವವನ್ನು ಕಾಳವ್ವೆ ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾಳೆ.

ಕಾಯಕ ಮಾಡಿ, ದಾಸೋಹಕ್ಕೆ ನೀಡಿ, ವ್ರತವನ್ನು ಆಚರಿಸುವಾತ ಶಿವಶರಣನು. ಕಾಯಕದಲ್ಲಿ ಬಂದ 'ಪಡಿ'ಯು ಪದಾರ್ಥವಾಗಿ 'ಪ್ರಸಾದ' ರೂಪು ಪಡೆಯುತ್ತದೆ. ದುಡಿಯದೆ ಬಿಟ್ಟಿಯಾಗಿ ತಿನ್ನುವುದು ಪ್ರಸಾದವಾಗುವುದಿಲ್ಲ. ತನ್ನ ಪರಿಶ್ರಮವಿಲ್ಲದ ಅನ್ನ ಪ್ರಸಾದವಾಗದು ಎಂಬುದನ್ನು ವಿವರಿಸುತ್ತ ಕಾಳವ್ವೆ ಹೇಳಿದ ಅಂಶ ಮಹತ್ತರವಾಗಿದೆ.

'ಉಂಡೊಡೆಯರಲ್ಲಿ ಕೊಂಬ ಪ್ರಸಾದ ಕಾರಿದಕೂಳು
ಸಣ್ಣವರಲ್ಲಿ ಕೊಂಬ ಪ್ರಸಾದ ಸಂತೆಯ ಸೂಳೆಯ ಎಂಜಲು
ಅಳಿಯನಲ್ಲಿ ಕೊಂಬ ಪ್ರಸಾದ ಅಮೇಧ್ಯ
ಮಕ್ಕಳಲ್ಲಿ ಕೊಂಬ ಪ್ರಸಾದ ಗೋಮಾಂಸ
ತಮ್ಮನಲ್ಲಿ ಕೊಂಬ ಪ್ರಸಾದ ಸಿಂಗಿ
ನೆಂಟರಲ್ಲಿ ಕೊಂಬ ಪ್ರಸಾದ ನರಮಾಂಸ
ವಂದಿಸಿ ನಿಂದಿಸಿ ಕೊಂಬ ಪ್ರಸಾದವ
ಉರಿಲಿಂಗಪೆದ್ದಿಗಳರಸನೊಲ್ಲನವ್ವಾ' (ಸ.ವ.ಸಂ:೫ ವ.ಸಂ, ೭೩೨)

ಒಡೆಯರಲ್ಲಿ, ಸಂಬಂಧಿಕರಲ್ಲಿ, ಬಂಧು-ಬಾಂಧವರಲ್ಲಿ ಸಣ್ಣವರಲ್ಲಿ ದೊಡ್ಡವರಲ್ಲಿ ಹೀಗೆ ಯಾರಲ್ಲೂ ಪ್ರಸಾದ ಕೊಳ್ಳಬಾರದು. ಹಾಗೆ ಕೊಂಬ ಪ್ರಸಾದ, ಪ್ರಸಾದವಾಗದೆ ಮತ್ತೇನೋ ಆಗಿ ಬಿಡುತ್ತದೆ. 'ವಂದಿಸಿ ನಿಂದಿಸಿ ಕೊಂಬ ಪ್ರಸಾದ' ಶಿವಾರ್ಪಿತವಲ್ಲ, ಅಂತಹದನ್ನು ಲಿಂಗ ಒಪ್ಪುವುದಿಲ್ಲ. ಇಷ್ಟದೈವ ಮೆಚ್ಚಬೇಕಾದರೆ ತನ್ನ ಸ್ವಂತ ಶ್ರಮದಿಂದ ಬಂದಿರಬೇಕು. ಇನ್ನೂ ಸ್ಪಷ್ಟಗೊಳಿಸಬೇಕೆಂದರೆ, 'ಸತ್ಯಶುದ್ಧವಾದ ಕಾಯಕ'ದಿಂದ ಬಂದುದು 'ಪ್ರಸಾದ'ವಾಗಿ ಸ್ವೀಕೃತವಾಗುತ್ತದೆ. ಪ್ರಸಾದದ ಕುರಿತಾಗಿಯೇ ಮತ್ತೊಂದು ವಚನದಲ್ಲಿ,

'ನಿಂದಿಸಿ ಕೊಂಬ ಪ್ರಸಾದ ಕುನ್ನಿಯ ಪ್ರಸಾದ
ಅವರು ತ್ರಿವಿಧಕ್ಕೆ ಇಚ್ಛೆಸರು
ಅಲ್ಲಿ ನಿಂದಿಸಿ ಅವರ ಬಿಟ್ಟಲ್ಲಿ
ಅವರ ಹಿಂದೆ ಕೊಂಡುದು ಅವರ ಮಲಮೂತ್ರ,
ಉರಿಲಿಂಗಪೆದ್ದಿಗಳರಸನೊಲ್ಲನವ್ವಾ' (ಸ.ವ.ಸಂ:೫ ವ.ಸಂ, ೭೩೮)

ಹೀಗೆ 'ಪ್ರಸಾದ'ದ ಪರಿಕಲ್ಪನೆ ಕಾಳವ್ವೆಯಲ್ಲಿ ಸುಸ್ಪಷ್ಟವಾಗಿದೆ.

ಕಾಳವ್ವೆ ಪ್ರಖರ ವೈಚಾರಿಕ ಪ್ರಜ್ಞೆಯುಳ್ಳ ವಚನಕಾರ್ತಿ, ಅಜ್ಞಾನ, ಅಂಧಾನುಕರಣೆ, ಜೀವವಿರೋಧಿ ನಿಲುವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾಳೆ. ಪುರೋಹಿತಶಾಹಿಗಳ ಕುತಂತ್ರವನ್ನು ಬಯಲಿಗೆಳೆದ ಧೀರೆಯವಳು. ಅವಳ ಪ್ರಸಿದ್ಧವಾದ ವಚನ ಹೀಗಿದೆ,

'ಕುರಿ ಕೋಳಿ ಕಿರಿಮೀನು ತಿಂಬವರಿಗೆಲ್ಲ ಕುಲಜ ಕುಲಜರಂದೆಂಬರು
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬರ ಮಾದಿಗ
ಕೀಳುಜಾತಿಯೆಂಬರು, ಅವರೆಂತು ಕೀಳುಜಾತಿಯಾದು?
ಜಾತಿಗಳಾ ನೀವೇಕೆ ಕೀಳಾಗಿರೋ?

ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ
ನಾಯಿ ನೆಕ್ಕಿ ಹೋಯಿತು.
ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಯಿತು.
ಅದೆಂತೆಂದಡೆ,
ಸಿದ್ಧಲಿಕೆಯಾಯಿತು, ಸಗ್ಗಳಿಕೆಯಾಯಿತು
ಸಿದ್ಧಲಿಕೆಯ ತುಪ್ಪವನು, ಸಗ್ಗಳಿಕೆಯ ನೀರನು
ಶುದ್ಧವೆಂದು ಕುಡಿವ ಬುದ್ಧಿಗೇಡಿ ವಿಪ್ರರಿಗೆ ನಾಯನರಕ ತಪ್ಪದಯ್ಯಾ
ಉರಿಲಿಂಗಪೆದ್ದಿಗಳರಸು ಬಲ್ಲನವ್ವಾ' (ಸ.ವ.ಸಂ:೫ ವ.ಸಂ, ೭೩೩)

ಅತ್ಯಂತ ಪ್ರಖರ ವಿಚಾರಧಾರೆಯನ್ನಿದರಲ್ಲಿ ಗುರುತಿಸಬಹುದು. ಶೂದ್ರರು ಕಲಿಯಬಾರದು, ದಲಿತರು ಸಂಸ್ಕೃತವನ್ನು ಕಿವಿಯಿಂದ ಕೇಳಬಾರದು.ನಾಲಗೆಯಿಂದ ಉಚ್ಚರಿಸಬಾರದು ಎಂಬ ಸಮಾಜದ ಕಟ್ಟುಕಟ್ಟಳೆಯಿದ್ದ ಕಾಲದಲ್ಲಿ ಪುರೋಹಿಶಾಹಿಗಳ ಅಹಂಕಾರ ಮತ್ತು ಅಟ್ಟಹಾಸವನ್ನು ಕಾಳವ್ವೆ ಮಟ್ಟಹಾಕಿದ್ದು ಅವಳ ಧೈರ್ಯ ಹಾಗೂ ವೈಚಾರಿಕತೆ, ಸಮಾನತೆಯ ಏರೆತ್ತರಕ್ಕೂ ಸಾಕ್ಷಿಯಾಗಿದೆ.

ಪುರೋಹಿತಶಾಹಿಗಳು ಮತ್ತು ಸನಾತನವಾದಿಗಳ ಕರ್ಮವನ್ನೇ ಜಾಲಾಡಿದ ವಚನ ಮಹತ್ತರವಾಗಿದೆ.

'ಕೃತಯುಗ ಮೂವತ್ತೆರಡು ಲಕ್ಷ ವರುಷದಲ್ಲಿ ಹೋಮನಿಕ್ಕಿ ಕುಂಜರನೆಂಬ ಆನೆಯ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು. ತ್ರೇತಾಯುಗ ಹದಿನಾರು ಲಕ್ಷ ವರುಷದಲ್ಲಿ ಬ್ರಾಹ್ಮಣರು ಹೋಮವನಿಕ್ಕುವಾಗ ಮಹಿಷನೆಂಬ ಕರೆ ಎಮ್ಮೆಯ ಮಗನ ಕೊಂದು ಹೋಮವನಿಕ್ಕಿದರು. ದ್ವಾಪರಯುಗ ಎಂಟುಲಕ್ಷ ವರುಷದಲ್ಲಿ ಹೋಮವನಿಕ್ಕುವಾಗ ಅಶ್ವನೆಂಬ ಕುದುರೆ ಕೊಂದು ಹೋಮವನಿಕ್ಕಿದರು, ಬ್ರಾಹ್ಮಣರು. ಕಲಿಯುಗ ನಾಲ್ಕು ಲಕ್ಷ ವರುಷದಲ್ಲಿ ಹೋಮವನಿಕ್ಕುವಾಗ ಜಾತಿಯಾಡಿನ ಮಗ ಹೋತನ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು. 'ಅಣೋರಣಿಯಾನ್ ಮಹತೋ ಮಹಿಯಾನ್' ಎಂಬುದಾಗಿ, 'ಶಿವಭಕ್ತ ಹೊತ್ತಾರೆಯೆದ್ದು ಗುರುಲಿಂಗಜಂಗಮಕ್ಕೆ ಶರಣೆನ್ನದೆ ಮುನ್ನ ಒಂಟಿಬ್ರಾಹ್ಮಣ ಕಂಡು ಶರಣಾರ್ಥಿ ಎಂದೆಡೆ ಎಂಬತ್ತುನಾಲ್ಕು ಲಕ್ಷಯೋನಿಯಲ್ಲಿ ಹಂದಿಯ ಬಸುರಲ್ಲಿ ಬಪ್ಪುದು ತಪ್ಪ ನೋಡಾ ಉರಿಲಿಂಗಪೆದ್ದಿಗಳರಸ ಒಲ್ಲನವ್ವಾ' ನಮ್ಮಲ್ಲಿ ಪರಂಪರಾಗತ ನಂಬಿಗೆಗಳಿದ್ದವು. ಮುಂಜಾನೆ ಎದ್ದಕೂಡಲೇ ವಿಧವೆಯ ಮುಖ ನೋಡಬಾರದು, ಕ್ಷೌರಿಕನ ಮಾತನಾಡಿಸಬಾರದು ಇತ್ಯಾದಿ, ಆ ನಂಬಿಗೆಗಳ ಬುಡವನ್ನೇ ಅಲ್ಲಾಡಿಸುವಂತೆ ಕಾಳವ್ವೆಯು 'ಒಂಟಿಬ್ರಾಹ್ಮಣ' ಕಾಣಬಾರದು, ಕಂಡರೂ ಮಾತನಾಡಿಸಬಾರದು. ಅವರಿಗೆ ಶರಣಾರ್ಥಿ ಎಂದರೆ ಏನಾಗುತ್ತೆ ಎಂಬುದನ್ನು ವಿವರಿಸಿದ್ದಾಳೆ. ಈ ವಚನ ಬ್ರಾಹ್ಮಣರ ಕುತಂತ್ರವನ್ನು ಬಯಲಿಗೆಳೆದುದರ

ಜೊತೆ-ಜೊತೆಗೆ ಶಿವಭಕ್ತರು ನಡೆದುಕೊಳ್ಳಬೇಕಾದ ದಾರಿ ತೋರುತ್ತದೆ. ಕಾಳವ್ವೆಯ ಪ್ರಖರ ವೈಚಾರಿಕ ವ್ಯಕ್ತಿತ್ವಕ್ಕಿದ್ದ ನಿದರ್ಶನವಾಗಿದೆ.

೪.೧೧. ವರದಾನಿ ಗುಡ್ಡವ್ವೆ :

'ಗುಡ್ಡವ್ವೆ' ಹೆಸರಿನ ಶರಣೆಯರ ಉಲ್ಲೇಖ ವೀರಶೈವ ಕಾವ್ಯದಲ್ಲಿ ಸದ್ಯ ಮೂರು ಕಡೆ ಕಂಡು ಬರುತ್ತದೆ. ವರದಾನಿ ಗುಡ್ಡವ್ವೆ, ನಾವದಿಗೆಯ ಗುಡ್ಡವ್ವೆ ಮತ್ತು ಬತ್ತಲೇಶ್ವರನ ಪುಣ್ಯ ಸ್ತ್ರೀ ಗುಡ್ಡವ್ವೆ ವರದಾನಿ ಗುಡ್ಡವ್ವೆ, ನಾವದಿಗೆ ಗುಡ್ಡವ್ವೆ ಒಂದೆಯಾಗಿದ್ದು, ಈಕೆ ಬಸವಪೂರ್ವ ಯುಗದಲ್ಲಿದ್ದವಳೆಂದು ತಿಳಿದು ಬರುತ್ತದೆ. ಇನ್ನುಳಿದ ಬತ್ತಲೇಶ್ವರನ ಪುಣ್ಯ ಸ್ತ್ರೀ ಗುಡ್ಡವ್ವೆ ೧೪೩೦ ರಲ್ಲಿ ಇದ್ದವಳೆಂದು ಕವಿ ಚರಿತೆಕಾರರು ಮತ್ತು ಡಾ.ಎಲ್.ಬಸವರಾಜು ಮೊದಲಾದವರು ತಿಳಿಸಿದ್ದಾರೆ.

ವರದಾನಿ ಗುಡ್ಡವ್ವೆ ಶಾಸನೋಕ್ತ ಶರಣೆಯಾಗಿದ್ದಾಳೆ. ೧೧೪೮ ರ 'ತಾಳಿಕೋಟೆ ಶಾಸನ' ೧೨೯೯ ರ 'ಇಂಗಳಗಿ ಶಾಸನ' ಮತ್ತು ೧೨೭೮ ರ 'ಬಿಜಾಪುರ ಶಾಸನ'ಗಳು, ವೈಷ್ಣವರು ಕಿತ್ತೆಸೆದಿದ್ದ ಶಿವಲಿಂಗವನ್ನ ತನ್ನ ಷೋಡಷಗಣದ ಬೆಂಬಲದಿಂದ ಪುನಃ ಸ್ಥಾಪಿಸಿದ ಈ ವಚನಕಾರ್ತಿಯು ಪುರಾಣೋಕ್ತಳೂ ಆಗಿದ್ದಾಳೆ. ಅಲ್ಲದೆ, ಬಸವಪೂರ್ವ ಯುಗದ ವಚನಕಾರ್ತಿಯೆಂಬುದದೂ ಅಷ್ಟೇ ಮುಖ್ಯವಾಗಿದೆ! ಈ ಪುರಾಣೋಕ್ತ ವಚನಕಾರ್ತಿಯ ಜನ್ಮಸ್ಥಳ ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಅಲಂಪುರ ಇರಬಹುದೆಂದು ಊಹಿಸಲಾಗಿದೆ.

ಅಸ್ಪೃಶ್ಯ ಜನಾಂಗದಿಂದ ಬಂದ ಈ ಶರಣೆಯ ಇತಿವೃತ್ತ ಶಿವ ಸಂಸ್ಕೃತಿಯ ಪರಂಪರೆಯ ಉದ್ದಕ್ಕೂ ಒಬ್ಬ ವೀರಮಹಿಳೆ ಮತ್ತು ಪವಾಡ ಸ್ತ್ರೀ ಎನಿಸಿಕೊಂಡಿದ್ದಾಳೆ. ಶಿವಶರಣರ ಭಕ್ತಿ, ನಡೆ-ನುಡಿ ಮತ್ತು ಪುಣ್ಯಸ್ಮರಣೆಗೆ ಅರ್ಹಳಾಗಿದ್ದಾಳೆ. ಗುಡ್ಡವ್ವೆ ವಚನಕಾರಳು ಎಂಬುದಕ್ಕೆ ಆಧಾರಗಳೇನೂ ಇಲ್ಲವಾದರೂ ಗುಡ್ಡವ್ವೆಯ ಒಂದು ವಚನ ದೊರಕಿದ್ದು ಅತ್ಯಂತ ಗಮನಾರ್ಹವಾಗಿದೆ. ನಾವದಿಗೆ ಗ್ರಾಮದ ಬ್ರಾಹ್ಮಣರ ಅಗ್ರಹಾರದ ಮೂಲಕ ಹೋಗುತ್ತಿರುವಾಗ ಅವಮಾನಿತಳಾಗಿ, ತನಗಾದ ಅವಮಾನಕ್ಕೆ ಪ್ರತೀಕಾರವಾಗಿ ಕೆಟ್ಟ ಬ್ರಾಹ್ಮಣರನ್ನು ಶಪಿಸುತ್ತ ಶಿವನನ್ನು ಏಕರೂಪ ಮನಸ್ಥಿತಿಯಿಂದ ಸ್ಮರಿಸಿ ಶಿವಕೃಪೆಗೆ ಪಾತ್ರಳಾಗುವುದರ ಮೂಲಕ ಬದುಕಿನ ಸಾಕ್ಷಾತ್ಕಾರವನ್ನು ಕಂಡುಕೊಂಡಳೆಂಬ ಪ್ರಸಂಗವು ಭೀಮಕವಿಯಿಂದ ರಚಿತವಾದ 'ಬಸವಪುರಾಣ'ದಲ್ಲಿ ಬಂದಿದೆ. ಭಾರತೀಯ ಬಹುಮುಖೀ ಸಂಸ್ಕೃತಿಯ ವ್ಯವಸ್ಥೆಯಲ್ಲಿ ಸಾಮಾಜಿಕ ಬಂಧನಗಳ ವಿಮೋಚನೆ ಮತ್ತು ಸಾಹಿತ್ಯಕವಾಗಿ ತನ್ನ ಮಹತ್ವವನ್ನು ಶರಣ ಸಾಹಿತ್ಯ ಕಾಪಾಡಿಕೊಂಡು ಬಂದಿರುವುದು ಗಮನಾರ್ಹವಾಗಿದೆ.

'ತನು ಬೆತ್ತಲೆಯಾದಡೇನು, ಮನಬೆತ್ತಲೆಯಾಗದನ್ನ?
ವ್ರತವಿದ್ದಡೇನು, ವ್ರತಹೀನನಾದ ಬಳಿಕ?
ನೆರೆದೆಡೆ ನರಕವಯ್ಯ ನಿಂಬೇಶ್ವರ' (ಸ.ವ.ಸಂ:೫ ವ.ಸಂ. ೧೦೪೯)

'ನಿಂಬೇಶ್ವರ' ಅಂಕಿತದಿಂದ ಕೂಡಿದ ಈ ವಚನದಲ್ಲಿ ತನು ಮನ ಶುದ್ಧಿರಹಿತ ಡಂಭಾಚಾರದ ಭಕ್ತಿಯನ್ನು ಮತ್ತು ಮೇಲ್ಜಾತಿ ವರ್ಗದವರನ್ನು ತರಾಟೆಗೆ ತಗೆದುಕೊಂಡಿರುವುದು ಮರ್ಮಾಘಾತವಾಗಿದೆ. 'ಮೈಗೆಟ್ಟ ಹೊಲತಿ ದೂರಹೋಗು' ಎಂಬ ಜಾತಿ ನಿಂದನೆಗೆ ಒಳಗಾದ ಗುಡ್ಡವ್ವೆಯಲ್ಲಿ ವ್ಯಕ್ತವಾಗಿರುವ ಅಸ್ಪೃಶ್ಯ ವಿರೋಧಿ ಧೋರಣೆ ಇಡೀ ಮಾನವ ಕುಲಕ್ಕೆ ಪ್ರಮುಖ ಪ್ರಶ್ನೆಯಾಗಿ ಉಳಿದು ಹೋಗಿದೆ! ಜಾತಿ, ಕುಲ, ಹಾಗೂ ಗೋತ್ರಗಳನ್ನು ಕುರಿತು ಈ ಪ್ರತಿಭಟನೆ ಆ ಕಾಲಧರ್ಮಕ್ಕೆ ಅಸಾಮಾನ್ಯವಾದ ವಿಚಾರವಾಗಿದೆ.

ಪ್ರಾಚೀನ ಶರಣೆಯಾದ ವರದಾನಿ ಗುಡ್ಡವ್ವೆಯ ಜೀವನದ ಘಟನಾವಳಿಗಳು ನಡೆದು ಹೋಗುವುದನ್ನು ಭೀಮಕವಿ ತನ್ನ 'ಬಸವಪುರಾಣ'ದಲ್ಲಿ ವಿವರಿಸಿದ್ದಾನೆ. ಮೂಲತಃ ಮೈಯೆಲ್ಲತೊನ್ನು ಹತ್ತಿದವಳಾದ ಗುಡ್ಡವ್ವೆ ಈ ತೊನ್ನು ರೋಗದಿಂದ ದೈಹಿಕವಾಗಿ ಘೋರ ಉಪದ್ರವಗಳಿಗೆ ಗುರಿಯಾಗಿರುತ್ತಾಳೆ. ಇಂತಹ ಸ್ಥಿತಿಯಲ್ಲಯೇ ಬ್ರಾಹ್ಮಣರಿಂದ ಅಪಾರ ಅವಮಾನಕ್ಕೆ ಗುರಿಯಾದ ಗುಡ್ಡವ್ವೆಯು ನಾವದಿಗೆ ಪುರದ ನಡುವೆ ನಿಂತು ಈ ರೀತಿಯಾಗಿ ಪ್ರತಿಜ್ಞೆಗೈಯ್ಯುತ್ತಾಳೆ.

'ಪಾಪಕರ್ಮದ್ವಿಜರು ನುಡಿಯಲು
ಶಪಿಸುತೆ ಗುಡ್ಡವ್ವೆ ಮನದನು
ತಾಪವೇತಕ್ಕಿನ್ನು ಸೌರಾಷ್ಟ್ರಕೆ ನಾನೆಯ್ದಿ
ಆ ಪರಮನಿಂದೆನ್ನೆ ಒಡಲಿನ
ರೂಪಮಂ ಪಡೆದಲ್ಲದೇಮ
ತೀ ಪುರಕೆ ನಡೆತಪ್ಪನೇ ಎಂದಾಗೆ ನಿಶ್ಚೈಸಿ!' (ಭೀಮ ಕವಿ ಬಸವ ಪುರಾಣ)

ಅಪಮಾನಿತಳಾದ ಗುಡ್ಡವ್ವೆ, ಸೌರಾಷ್ಟ್ರದ ಶಿವಕ್ಷೇತ್ರದಲ್ಲಿ ಶಿವದರ್ಶನ ಮಾಡಿ ತನ್ನ ದೇಹಕ್ಕಂಟಿರುವ ತೊನ್ನಿನ ಕಾಯಿಲೆಯನ್ನು ನಿವಾರಿಸಿಕೊಳ್ಳುವವರೆಗೂ ನಾವದಿಗೆ ಪುರಕ್ಕೆ ನಾನಿನ್ನು ಹಿಂದಿರುಗುವುದಿಲ್ಲವೆಂದು ವೀರನಿಷ್ಟೇಯ ದೃಢಸಂಕಲ್ಪ ಮಾಡಿ, ಆ ಕ್ಷಣದಿಂದಲೇ ನಾವದಿಗೆ ಪುರವನ್ನು ತೊರೆದುಬಿಟ್ಟಳು.

ವರದಾನಿ ಗುಡ್ಡವ್ವೆಯ ವೀರನಿಷ್ಠೆಯನ್ನೂ ಅವಳ ಶಿವಭಕ್ತಿಯನ್ನೂ ಮೆಚ್ಚಿ ನೆಲದ ಮೇಲೆ ಬಿದ್ದು ಒರಲುತ್ತಿದ್ದ ಗುಡ್ಡವ್ವೆಯ ಎದುರಿಗೆ ಶಿವ ಪ್ರತ್ಯಕ್ಷನಾಗುತ್ತಾನೆ.

'ಅಂಗನೆಯ ಸರ್ವಾಂಗಮಂದಿ
ವ್ಯಾಂಗ ಮಾಗಿರಲೀ ಯಲಾಲಲಿ
ತಾಂಗಿ ಸರ್ವಾಂಗದೊಳೆರಗಿ ವಂದಿಸುತ ಮುಂದಿರಲ
ಮಂಗಳಾಂಗನು ಮತ್ತೆ ಕರುನಾ
ಪಾಂಗದಲಿ ನೋಡುತ್ತ ನಿನ್ನತಿ
ಸಾಂಗ ಭಕ್ತಿಗೆ ಮೆಚ್ಚಿದೆವು ನಾವಬ್ಜದಳನೇತ್ರೆ' (ಭೀಮ ಕವಿ ಬಸವ ಪುರಾಣ)

ಶಿವದರ್ಶನದಿಂದ ಗುಡ್ಡವ್ವೆಯ ತೊನ್ನಿನ ಅಂಗಗಳೆಲ್ಲ ದಿವ್ಯಾಂಗಗಳಾಗಲು, ಆ ಕ್ಷಣದಿ ಸರ್ವಾಂಗದಲಿ ಶಿವನಿಗೆ ವಂದಿಸಿದ ಗುಡ್ಡವ್ವೆಯ ಪರಮಭಕ್ತಿಯನ್ನು ಕೊಂಡಾಡಿ, ಕರುಣಾ ದೃಷ್ಟಿಯಲ್ಲಿ ಅವಳನ್ನು ನೋಡುತ್ತ 'ನಿನ್ನತಿ ಸಾಂಗಭಕ್ತಿಗೆ ಮೆಚ್ಚಿದೆವು ನಾವಬ್ಜದಳನೇತ್ರೆ' ಎಂಬುದಾಗಿ ಶಿವನು ಮೆಚ್ಚುತ್ತಾನೆ.

ಪ್ರಸ್ತುತ ವರದಾನಿ ಗುಡ್ಡವ್ವೆಯಂಥ ಒಬ್ಬ ಯಃಕಶ್ಚಿತ್ ಅಸ್ಪೃಶ್ಯಳನ್ನು ಪ್ರಸ್ತುತ ಭೀಮಕವಿಯ 'ಬಸವಪುರಾಣ'ದ ಕಾವ್ಯನಾಯಕಿಯರಲ್ಲಿ ಒಬ್ಬಳನ್ನಾಗಿ ಕಾಣಲು ಸಾಧ್ಯವಾದದ್ದು ಕೂಡ ಶರಣ ಸಾಹಿತ್ಯದಲ್ಲಿ. ದಲಿತ ವರ್ಗದ ಶರಣ ಶರಣೆಯರೇ ಕಟ್ಟಿದ ಶರಣ ಸಂಸ್ಕೃತಿಯಲ್ಲಿ ಮತ್ತು ಬಸವಾದಿ ಪ್ರಮಥರ ವಚನಗಳಲ್ಲಿ ಎಂಬುದನ್ನು ಮರೆಯಲು ಸಾಧ್ಯವಿಲ್ಲ.

ನಿನ್ನ ಅಚಲನಿಷ್ಠೆಗೆ ಮೆಚ್ಚಿರುವುದಾಗಿ ಹೇಳಿದ ಶಿವನು, ವರವೇನು ಬೇಡು ಎಂಬುದಾಗಿ ಶಿವನು ನುಡಿದಾಗ ಗುಡ್ಡವ್ವೆ ಹೇಳುತ್ತಾಳೆ.

'ನಿಧಿಯಿದಿರೊಳಿರೆ ಕಡೆಗೆ ಜಲಗಂ ತೊಳೆಯ
ಹೋದೆಹೆಯೆಂಬ ಮರಳುಂಟೆ?' (ಭೀಮ ಕವಿ ಬಸವ ಪುರಾಣ)

ಅಂದರೆ ನಿಧಿಯೇ ಎದುರಿಗಿರುವಾಗ ಕಣ ತೊಳೆದು ಚಿನ್ನ ಹುಡುಕುವುದು ಮರುಳತನವಲ್ಲವೆ? ಎಂದು ಪ್ರಶ್ನಿಸುತ್ತಾಳೆ. ಆದರೂ ಗುಡ್ಡವ್ವೆ ಶಿವನಿಂದ ಬೇಡಿದ್ದೇನೆಂದರೆ ನಾವದಿಗೆ ಪುರಕ್ಕೆ ಬಂದು ನೀನು ನೆಲೆಸಿದರಷ್ಟೇ ನನಗೆ ಸಾಕೆಂದು ಬೇಡಿಕೊಳ್ಳುತ್ತಾಳೆ, ಅಷ್ಟೇ ಅಲ್ಲದೆ, ಶಿವಲಿಂಗವನ್ನು ಕಿತ್ತೊಗೆದಿದ್ದ ವೈಷ್ಣವರ ವಿರುದ್ಧ, ಕಲಿತನದಿಂದ ಹೋರಾಡಿ, ತನ್ ಷೋಡಶಗಣದ ಬೆಂಬಲದಿಂದ ಅದೇ ಶಿವಲಿಂಗವನ್ನು ಪುನಃ ಸ್ಥಾಪಿಸಿದಳೆಂದು ಗುಡ್ಡವ್ವೆಯನ್ನು ಕುರಿತ ಕ್ರಿ.ಶ. ೧೧೮೪ ರ ತಾಳೀಕೋಟೆ ಶಾಸನದ ವಾಸ್ತವ ಇತಿಹಾಸವನ್ನು ಈ ಕಾವ್ಯದ ಹಿನ್ನಲೆಯಲ್ಲಿ ಅರ್ಥಮಾಡಿ ಕೊಳ್ಳಬೇಕಾಗುತ್ತದೆ.

ತೊನ್ನಿನ ವ್ಯಾದಿಯನ್ನು ಕಳೆದುಕೊಂಡು ದಿವ್ಯಾಂಗನೆಯಾದ ಗುಡ್ಡವ್ವೆ, ನಾವದಿಗೆಪುರದಲ್ಲಿ ಶಿವದೇವಾಲಯವನ್ನು ಕಟ್ಟಿಸುತ್ತಾಳೆ, ಆ ಶಿವದೇವಾಲಯ ಇಂದಿಗೂ ಇದೆ ಎಂಬ ಪ್ರತೀತಿಯಿದೆ. ಆದರೆ ಇಲ್ಲಿ ತುಂಬಾ ಗಮನಾರ್ಹವೆನಿಸುವ ಸಂಗತಿಯೆಂದರೆ, ಶಿವದರ್ಶನವನ್ನು ಪಡೆದ ಗುಡ್ಡವ್ವೆಯಂಥ ಶರಣ ಮಹಿಳೆಯರಿದ್ದಾರೆ. ಅದರಲ್ಲೂ ನಿರ್ದಿಷ್ಟವಾಗಿ ದಲಿತವರ್ಗದ ಶರಣ-ಶರಣೆಯರು ತಮಗಾಗಿ ಶಿವನಿಂದ ಏನನ್ನೂ ಬಯಸದೇ, ಅವರು ಬಯಸಿದುದೆಲ್ಲ ಶಿವಸಂಸ್ಕೃತಿಯ ಪ್ರತಿಷ್ಠಾನ ಮತ್ತು ಉಸ್ಥಾನವೇ ಹೊರತು ಬೇರೇನೂ ಅಲ್ಲ.

ಸದ್ಯ, ವರದಾನಿ ಗುಡ್ಡವ್ವೆಯ ಬಗೆಗ ಇಲ್ಲಿ ನಮೂದಿಸಬೇಕಾದ ಅಂಶವೆಂದರೆ, ಅವಳಿಗಂಟಿದ್ದ ತೊನ್ನಿನ ವ್ಯಾದಿಯ ವಿಷಯ. ಏಕೆಂದರೆ ಈ ತೊನ್ನಿನ ವ್ಯಾಧಿ, ಕುಷ್ಠರೋಗ ಮತ್ತು ಅತಿಘೋರವೆನಿಸುವ ಉದರಶೂಲೆ- ಈ ಮುಂತಾದ ಖಾಯಿಲೆಗಳನ್ನು ಶರಣ ಸಂದರ್ಭದಲ್ಲಿ ವೀರಶೈವ ಪುರಾಣಕಾರರು

ಸಾಂಕೇತಿಕವಾಗಿ ಬಳಸಿರುವುದರ ಹಿಂದಿನ ಮನೋವೈಜ್ಞಾನಿಕ ಉದ್ದೇಶವನ್ನು ಮನಗಾಣಬೇಕು ಅಂದರೆ ಅವರು ಶಿವಪಾರಮ್ಯವನ್ನು ಸ್ವೀಕರಿಸುವ ಮೊದಲು ಅಥವಾ ಶಿವಸಾಕ್ಷಾತ್ಕಾರ ಪಡೆಯುವ ಮುಂಚೆ ವರ್ಣಧರ್ಮ, ಜಾತಿ ಮತ್ತು ಅಸ್ಪೃಶ್ಯತೆಗಳ ವ್ಯವಸ್ಥೆಯಲ್ಲಿ ಅವರು ಕುಷ್ಠರೋಗಿಗಳು ಅಥವಾ ತೊನ್ನಿನ ರೋಗಿಗಳಿಗಿಂತಲೂ ಘೋರವಾದ ಮನೋಕ್ಲೈಬ್ಯವನ್ನವರು ಅನುಭವಿಸುತ್ತಿದ್ದರು. ವಾಸ್ತವಿಕ ಸತ್ಯವನ್ನು ಈ ರೋಗಗಳ ಮುಖಾಂತರ ಪುರಾಣಗಳಲ್ಲಿ ಬಳಸಲಾಗಿದೆ ಎಂಬುದನ್ನು ವಿಶೇಷವಾಗಿ ಪರಿಶೀಲಿಸಬೇಕಾಗುತ್ತದೆ. ಅದೂ ಅಲ್ಲದೆ, ಈ ಬಗೆಯ ಸಾಂಕೇತಿಕ ಅರ್ಥತಂತ್ರಗಳನ್ನು ಕೇವಲ ಹರಿಹರಾದಿ ಕನ್ನಡ ಶಿವಪುರಾಣಕಾರರಲ್ಲಿ ಮಾತ್ರವಲ್ಲದೆ, ತಮಿಳು ಶೈವಪುರಾಣಕಾರನಾದ ಶೇಕ್ಕಿಳಾರನ 'ಪೆರಿಯ ಪುರಾಣ'ದಲ್ಲೂ ಈ ಮನೋ ವೈಜ್ಞಾನಿಕ ತಂತ್ರಗಳನ್ನೇ ಬಳಸಿರುವುದನ್ನು ನೆನಯಬಹುದಾಗಿದೆ.

ಅಂತಲೇ ಅಸ್ಪೃಶ್ಯ ವರದಾನಿ ಗುಡ್ಡವ್ವೆಯ ತೊನ್ನಿನ ವ್ಯಾಧಿಯಾಗಲಿ ಶಿವಸಾಕ್ಷಾತ್ಕಾರದ ನಂತರ ಅದನ್ನವಳು ಕಳೆದುಕೊಂಡದ್ದಾಗಲಿ 'ಬಸವಪುರಾಣ'ದ ಆ ಪವಾಡ ಇದೇ ಸಾಂಕೇತಿಕ ಅರ್ಥವನ್ನು ಹೊಂದಿರುವಂತಿದೆ.

ಕೊನೆ ಟಿಪ್ಪಣಿಗಳು

೧. ಶ್ರೀಶೈಲ ನಾಗರಾಳ (ಸಂ) 'ತಳವರ್ಗದ ವಚನಕಾರರು' ಪು. ೧೬, ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರುಗಿ.

೨. ಬಸವರಾಜ ಸಿದ್ಧಾಶ್ರಮ 'ಅಂಬಿಗರ ಚೌಡಯ್ಯ ಆರೋಹಿಸಿದಾಗ' ಪು. ೭೨, ೨೦೧೧, ಶಾಂತ ಪ್ರಕಾಶನ ಅಂಬಿಗರ ಚೌಡಯ್ಯನ ಪೀಠ ನರಸೀಪುರ.

೩. ಶ್ರೀಶೈಲ ನಾಗರಾಳ (ಸಂ) 'ತಳವರ್ಗದ ವಚನಕಾರರು' ಪು. ೧೭೧, ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರುಗಿ.

೪. ಎಂ. ಚಿದಾನಂದಮೂರ್ತಿ. 'ದೇವರ ದಾಸಿಮಯ್ಯ-ಶಂಕರ ದಾಸಿಮಯ್ಯ-ಜೇಡರ ದಾಸಿಮಯ್ಯ' ಪು. ೬೦, ೨೦೧೪, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು.

೫. ಪಿ. ವಿ. ನಾರಾಯಣ. 'ವಚನ ಸಮಸ್ತ' ಪು. ೭೩೯, ೨೦೧೭, ಸಪ್ನ ಬುಕ್ ಹೌಸ್, ಗಾಂದಿನಗರ, ಬೆಂಗಳೂರು.

ಅಧ್ಯಾಯ : ಐದು

ವಚನಗಳ ಮತ್ತು ವರ್ತಮಾನಗಳ ತಲ್ಲಣಗಳು

ಅಧ್ಯಾಯ : ಐದು

ವಚನಗಳ ಮತ್ತು ವರ್ತಮಾನಗಳ ತಲ್ಲಣಗಳು

ಆಧುನಿಕ ಭಾರತದಲ್ಲಿ ಅನೇಕ ಜನಪರ ಚಳುವಳಿಗಳು ನಡೆದಿವೆ, ನಡೆಯುತ್ತಿವೆ. ಮಹಾರಾಷ್ಟ್ರದಲ್ಲಿ ಮಹಾತ್ಮ ಫುಲೆ ಚಳುವಳಿ, ತಮಿಳುನಾಡಿನಲ್ಲಿ ಪೆರಿಯಾರ್ ಚಳುವಳಿ, ಕೇರಳದಲ್ಲಿ ಅಂಬೇಡ್ಕರ್ ಚಳುವಳಿ, ರೈತ ಚಳುವಳಿ, ಹಿಂದುಳಿದ ವರ್ಗಗಳ ಚಳುವಳಿ, ಮಂಡಲ ವರದಿಯ ಹೋರಾಟಗಳು ಇತ್ಯಾದಿ ಚಳುವಳಿಗಳು ಮತ್ತು ಹೋರಾಟಗಳನ್ನು ಗಮನಿಸಿದಾಗ ಈ ಎಲ್ಲವುಗಳಿಗೆ ಮೂಲಬೀಜ ವಚನಗಳೇ ಎಂಬುದು ನನ್ನ ಅನಿಸಿಕೆಯಾಗಿದೆ.

ಎಲ್ಲ ವರ್ಗ, ವರ್ಣ ಹಾಗೂ ವಯೋಮಾನಗಳಿಗೆ ಎಲ್ಲ ಕಾಲಕ್ಕೂ ಬೇಕಾಗುವ ಮೌಲ್ಯಗಳನ್ನು ನೀಡಿದವರು ವಚನಕಾರರು. ತಮ್ಮ ಉದ್ಧಾರದ ಜೊತೆ ಸಮಾಜದ ಉದ್ಧಾರ ಮಾಡಿದವರು ೧೨ ನೇ ಶತಮಾನದ ವಚನಕಾರರು. ಸರ್ವ ಸಮಾನತೆ, ಸಹಬಾಳ್ವೆ, ಕಾಯಕತತ್ತ್ವ, ಡಾಂಭಿಕ ಭಕ್ತರ ಆಚರಣೆ, ಸಂಪ್ರದಾಯ, ಸಮಾಜ ಮತ್ತು ಮಾನವನ ನಡುವೆ ಬರುವ ಕುಲ, ಹೆಣ್ಣಿನ ಕಲ್ಪನೆ, ಮಾನವೀಯತೆಗಳನ್ನೊಳಗೊಂಡ ವಚನಕಾರರ ತತ್ತ್ವಗಳು ನಮ್ಮ ಬಾಳಿಗೆ ಹೈಲೋಜಿನ್ ದೀಪಗಳಾಗಿವೆ.

ವರ್ತಮಾನ ಪೀಳಿಗೆಯ ಗುಂಪಿಗೆ ಸೇರಿದವರಾದ ನಾವು ನೀವುಗಳು ವಚನ ಸಾಹಿತ್ಯದ ಅವಶ್ಯಕತೆಯನ್ನು ಮನಗಾಣದೆ ದಾರಿ ತಪ್ಪುತ್ತಿದ್ದೇವೆ. ಹೀಗಾಗಿಯೇ ನಮ್ಮಗಳ ನಡುವೆ ಏನೆಲ್ಲ ಅನಾಹುತಗಳು ಮೇಲಿಂದ ಮೇಲೆ ನಡೆಯುತ್ತಲೇ ಇವೆ. ಉದಾಹರಣೆಗೆ ಜಾತೀಯತೆ, ಕೋಮುಗಲಭೆ ಗುಜರಾತ್ ಮತ್ತು ಪಾರ್ಲಿಮೆಂಟ್ ಪ್ರಕರಣ, ಅಯೋಧ್ಯೆ ವಿವಾದ, ಅಮೆರಿಕೆಯ ವಿಶ್ವವಾಣಿಜ್ಯ ಕೇಂದ್ರದ ಮೇಲೆ ಆಕ್ರಮಣ, ಡಾ. ರಾಜಕುಮಾರ ಹಾಗೂ ನಾಗಪ್ಪ ಅಪಹರಣ, ವೀರಪ್ಪನ್ ಅಟ್ಟಹಾಸ, ಕಾವೇರಿ ನದಿ ನೀರಿನ ಗುದ್ದಾಟ, ಸ್ತ್ರೀ ಸಮಾನತೆಯ ನಾಟಕೀಯ ಹೇಳಿಕೆಗಳು, ಮೈಸೂರಿನ ರೆಸಾರ್ಟ್ ಪ್ರಕರಣ, ಇಂಥ ಹತ್ತು ಹಲವು ವಿವಾದಾತ್ಮಕ ಪ್ರಕರಣಗಳು ಹುಟ್ಟಿಕೊಂಡು ಚರ್ಚಿತ ವಿಷಯಗಳಾಗಿವೆ.

"ಕಂಡರಿಯದ ವಿಷಯಗಳನ್ನು ಕಲ್ಪನೆಯಲ್ಲಿ ಮೂಡಿಸಿ ಮಿಥ್ಯೆಯನ್ನು ಸೃಷ್ಟಿಸಿಕೊಂಡ ಆದಿಮಾನವನ ನಂಬಿಕೆಗಳು ವಿಜ್ಞಾನ ಬೆಳೆದಂತೆ ಹುಸಿಯಾಗಿ, ವಿಜ್ಞಾನದ ಫಲಿತಾಂಶಗಳು ಮಾನವನ ಒಳಿತಿಗಾಗಿ ಬಳಕೆಯಾದಾಗ, ಹೊಸ ಹೊಸ ಆವಿಷ್ಕಾರಗಳಿಗೆ ಮನ್ನಣೆ ಸಿಗಲಾರಂಭಿಸಿತು"[೧].

ಸಮಾಜದಲ್ಲಿ ಉದ್ಭವಿಸುತ್ತಿರುವ ಇಂತಹ ವಿವಾದಗಳ ಸೊಕ್ಕು ಅಡಗಿಸುವ ಅದ್ಭುತ ಶಕ್ತಿ ವಚನಸಾಹಿತ್ಯಕ್ಕಿದೆ. ಅದರಲ್ಲಿ ಏನಿಲ್ಲ! ಎಲ್ಲ ಸಮಸ್ಯೆಗಳ ನಿವಾರಣೆ ಮಾಡುವ ಸಮಾಧಾನಕರ ಉತ್ತರ ಅಲ್ಲಿದೆ. ಹೀಗಾಗಿ ವಚನ ಸಾಹಿತ್ಯ ಪ್ರಮುಖ ಸ್ಥಾನ ಪಡೆದುಕೊಳ್ಳುತ್ತ ಸಾಗುತ್ತದೆ.

ವಚನ ಸಾಹಿತ್ಯದಲ್ಲಿ ಅಡಗಿರುವ ತತ್ತ್ವಗಳ ಅರಿವನ್ನು ಮೂಡಿಸುವ ಮೂಲಕ ಮಾನವನನ್ನು ದೇವಮಾನವನನ್ನಾಸುವ ಮಹತ್ತರ ಕಾರ್ಯ ನಾವು ನೀವುಗಳು ಎಸೆಗಬೇಕಾಗಿದೆ. ವರ್ಗ, ವರ್ಣ, ಜಾತಿ ವ್ಯವಸ್ಥೆ , ಮೂಢನಂಬಿಕೆ, ಕಂದಾಚಾರಗಳ ಮೌಢ್ಯತೆಯಲ್ಲಿ ಸಿಕ್ಕು ನಲುಗಿದ ಮಾನವರನ್ನು ಇವೆಲ್ಲವುಗಳ ಬಂಧನಗಳಿಂದ ಬಿಡಿಸುವ ತಂತ್ರವನ್ನು ವಚನಗಳು ರೂಪಿಸುತ್ತವೆ.

ಆಚಾರವೇ ಸ್ವರ್ಗ, ಅನಾಚರವೇ ನರಕ, ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ದಯವೇ ಧರ್ಮದ ಮೂಲ, ಸದುವಿನಯವೇ ಸದಾಶಿವನ ವಲುಮೆ, ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯನಾಗಿರುವವರಿಗೆ ಮರಣವೇ ಮಹಾನವಮಿ ಎಂದು ಹೇಳಿ ನೀತಿಯ ನೆಲೆಗಟ್ಟಿನ ಮೇಲೆಯೇ ಸುಂದರ ಸಮಾಜ ನಿರ್ಮಿಸುತ, ಹೋಗಬೇಕಾಗಿದೆ.

ಕಲ್ಲು ದೇವರು ದೇವರಲ್ಲ, ಮಣ್ಣು ದೇವರು ದೇವರಲ್ಲ, ಈ ಮರದೇವರು ದೇವರಲ್ಲ. ಈ ವಚನ, ಅಯೋಧ್ಯ ವಿವಾದಕ್ಕೆ ಔಷಧ ಕೊಟ್ಟು ರೋಗ ನಿವಾರಣೆ ಮಾಡುತ್ತದೆ. ಧರ್ಮಯುದ್ಧಕ್ಕಾಗಿ ಹೋರಾಟ ಎಸಗುತ್ತಿರುವ ಮಹನೀಯರಿಗೆ 'ದಯವೇ ಧರ್ಮದ ಮೂಲವಯ್ಯ' ಎಂಬ ವಚನ ಚಿಂತನೆಗೆ ಒಳಗಾಗಿಸಿ ಸಮನ್ವಯತೆ, ಪ್ರೀತಿ ಸಾರುತ್ತದೆ. ಕಾಗೆ ಬಂಧುಗಳ ಕಂಡರೆ ಕರೆಯದೆ ತನ್ನ ಬಳಗವನು ಎಂಬ ವಚನ ಸಹಕಾರದ ಮಾನವತಾವಾದವನ್ನು ಮೆರೆಯುತ್ತದೆ. ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿಯಲ್ಲ ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬೆಲ್ಲಾ ಹೆಣ್ಣಿನ ಕುರಿತಾಗಿದ್ದ ಮೂಢಪರಂಪರೆಯನ್ನು ಅಳಸಿ ಹೊಸ ಭಕ್ತಿಭಾವನೆಯನ್ನು ನಿರ್ಮಿಸುತ್ತ ಹೋಗುತ್ತದೆ.

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನ್ನೋದಿ ಹಾರುವನಾದ– ವಚನ ಜಾತಿ ಉಪಜಾತಿಯ ಪರಿಚಯವನ್ನು ಪರಿಣಾಮಕಾರಿಯಾಗಿ ಮಾಡಿಕೊಡುತ್ತ ಪುರೋಹಿತಶಾಹಿಗಳಿಗೆ ಎಚ್ಚರಿಕೆಯನ್ನು ನೀಡುತ್ತದೆ. ಹೀಗೆ ವಚನ ಸಾಹಿತ್ಯ ತಿಳುವಳಿಕೆಯ ಗಂಟೆ ಬಾರಿಸುತ್ತ ಸಾಗುತ್ತದೆ.

ವರ್ತಮಾನದಲ್ಲಿ ಮಾನವನ ವೈಚಾರಿಕತೆಯನ್ನು ಕುಂಠಿತಗೊಳಿಸಿ, ವಿಚಾರಕ್ಕೆ ಬದಲಾಗಿ ಕುರುಡು ವಿಶ್ವಾಸಕ್ಕೆ ಪ್ರೇರೇಪಿಸುವುದು ಭೂತ ಪೂಜೆಯಾದರೇನು, ಭವಿಷ್ಯ ಕಥನವಾದರೇನು? ೧೩, ಒಬ್ಬರಿಗೆ ಅಶುಭ ಸಂಖ್ಯೆಯಾದರೆ ಇನ್ನೊಬ್ಬರಿಗೆ ೭ ಶುಭಸಂಖ್ಯೆ. ಅಲ್ಲಿ ಕರಿಬೆಕ್ಕು ಅಡ್ಡಬಂದರೆ ಅಶುಭ, ಇಲ್ಲಿ ಯಾವ ಬೆಕ್ಕು ಅಡ್ಡ ಬಂದರೂ ಅಶುಭ. ಒಂದೇ, ಎರಡೇ ಎಷ್ಟೊಂದು ಅಂಧ ವಿಶ್ವಾಸಗಳು. ಈ ವಿಜ್ಞಾನ ಯುಗದಲ್ಲಿಯೂ ತಾಯತ ಕಟ್ಟಿಕಳ್ಳುವರಾರೋ, ಶಾಂತಿ ಮೂಡಿಸುವರಾರೋ, ಶುದ್ಧೀಕರಣಗೈಸುವವರಾರೋ, ಜ್ಯೋತಿಷಿಗಳನ್ನು, ಹಸ್ತಸಾಮುದ್ರಿಕ ಹೇಳುವವರನ್ನು ಭವಿಷ್ಯ

ಹೇಳುವವರನ್ನು, ರಮಲ ವಿದ್ಯಾ ಪರಿಣಿತರನ್ನು ಶಕುನ ಹೇಳುವವರನ್ನು ಕನಸಿಗೆ ಅರ್ಥ ಕಟ್ಟುವವರನ್ನು, ಹಲ್ಲಿ ಲೊಚಗುಟ್ಟಿದ್ದಕ್ಕೆ ಪರಿನಾಮ ಹೇಳುವವರನ್ನು, ಸಂಖ್ಯಾಶಾಸ್ತ್ರಿಗಳನ್ನು, ವೇತಾಳಿಗಳನ್ನು, ಮಾಂತ್ರಿಕರನ್ನು, ತಂತ್ರಿಗಳನ್ನು., ಮಣಿ–ವೀಕ್ಷಕರನ್ನು, ಪವಾಡ ಪುರಷರೆಂಬ ಬಡಾಯಿ ಕೊಚ್ಚಿಕೊಳ್ಳುವವರನ್ನು, ಕರಿದಾರ ಚೀಟಿ ಕಟ್ಟುವವರನ್ನು, ರಸ್ತೆಬದಿಗಳಲ್ಲಿ ಗಿಳಿಭವಿಷ್ಯ, ರಟ್ಟಿನ ಭವಿಷ್ಯ ಹೇಳುವವರನ್ನು, ಮನೆಮನೆ ತಿರಿದುಂಬ ಬುಡುಬುಡುಕೆರನ್ನು, ಬುಟ್ಟಿ ಹಿಡಿದು ಬೇಡುತ್ತಾ ತಿರುಗುವ ಕುಂಚಿಕೊರವೆಯರನ್ನು, ಜೋಗುತಿಯರನ್ನು, ದುಂಬಾಲಬಿದ್ದು ಕೇಳುವರಾರೋ! ನಾ ನೀನೆಂಬ ನಾಮಾಂಕಿತರನ್ನು ಬಿಟ್ಟಿಲ್ಲ. ಈ ಪೊಳ್ಳು ಪರಿಪಾಠಗಳು, ಟೊಳ್ಳು ರೂಢಿಗಳು, ಜೊಳ್ಳು ನಂಬಿಕೆಗಳು, ಹೊಳ್ಳು ಮೂಢಾವಾರಣೆಗಳು, ಭ್ರಮೆಗಳು, ಭ್ರಾಂತಿಗಳು, ಹುಚ್ಚು ಗೀಳುಗಳು, ನ್ಯೂನ್ಯತೆಗಳು, ಶಾಸ್ತ್ರಾಂಧತೆಗಳು, ತಪ್ಪು ತಿಳುವಳಿಕೆಗಳು ಧರ್ಮ ನಿರಪೇಕ್ಷ ದೇಶಗಳಲ್ಲಿ ಧಾರ್ಮಿಕ ಮೂಲದ ಮೂಢ ವಿಶ್ವಾಸದ ಬದಲಾಗಿ ಇನ್ನಾವುದೋ ಇರಬಹುದು. ಈ ಅಫೀಮಿನ ಅವತಾರಗಳು ವಿಶ್ವವ್ಯಾಪಿಯಾಗಿವೆ. ಈ ದೇಶದಲ್ಲಿ ಹಿಂದು ಸಮಾಜದಲ್ಲಂತೂ ಇವುಗಳದೇ ಸ್ವರಾಜ್ಯ ಇವುಗಳದೇ ಸಾಮ್ರಾಜ್ಯ.

ಇಂದಿನ ಹಾಡೆ ಹೀಗಿರುವಾಗ ಎಂಟನೂರು ವರ್ಷಗಳ ಹಿಂದಿನವರ ಪಾಡು ಹೇಗಿರಬಹುದು? ಇವುಗಳ ಅಜ್ಞಯುಗದ ಅವಶೇಷ ಮಾತ್ರವಾಗಿ ಉಳಿದಿರಲಿಲ್ಲ. ಅಜ್ಞರನ್ನು ಅನವರತವಾಗಿ ಅಜ್ಞಾನದಲ್ಲಿಯೇ ಇರಿಸಿ ಅವರನ್ನು ಪಶುಗಳಂತೆ ದುಡಿಸಿಕೊಂಡು, ತಮ್ಮ ಬೊಜ್ಜು ಬೆಳಸಿಕೊಂಡಿದ್ದವರಿಗೆ, ಅನುಕೂಲವಾದ ಉಪಯುಕ್ತವಾದ ಅಸ್ತ್ರಗಳಾಗಿಯೂ ಇದ್ದುವೆಂಬುದನ್ನು ನೆನೆದಾಗ ಇವುಗಳ ಉಚ್ಚಾಟನೆಗಾಗಿ ಪ್ರಯತ್ನಿಸುವುದು ಅದೆಂಥ ಕೃತಜ್ಞತಾ ಶೂನ್ಯ ಕಾರ್ಯವಾಗಿತ್ತೆಂಬುದರ ಕಲ್ಪನೆ ಬಾರದಿರದು. ದಾರಿದ್ರ್ಯಕ್ಕೆ ದೇವರೇ ಕಾರಣ, ದಾರಿದ್ರ್ಯ ನಿವಾರಣೆಗಾಗಿ ಯತ್ನಿಸುವುದು ದೇವರಿಚ್ಛೆಗೆ ವಿರೋಧವಾಗಿ ವರ್ತಿಸಿದಂತೆ ಪುನರ್ಜನ್ಮದ ಪಾಪದ ಫಲವನ್ನು ಈ ಜನ್ಮದಲ್ಲಿಯೇ ಅನುಭವಿಸುವುದಲ್ಲದೆ ಮೇಲಿನವರ ಸೇವೆಯನ್ನು ಪ್ರತಿಫಲಾಪೇಕ್ಷೆ ಇಲ್ಲದೆ ಮನಃಪೂರ್ವಕವಾಗಿ ಮಾಡಿದರೆ ಮುಂದಿನ ಜನ್ಮದಲ್ಲಿ ಒಳ್ಳೆಯದನ್ನು ಕಾಣುವೆ. ಆದುದರಿಂದ ಇದ್ದುದರಲ್ಲಿಯೇ ಬಿದ್ದು ಒದ್ದಾಡು ಎಂಬ ಬೋಧನೆಯ ಜೊತೆಗೆ ಈ ಕುರುಡು ನಂಬಿಗೆಗಳನ್ನು ಭ್ರಾಮಕ ವಾಡಿಕೆಗಳನ್ನು ಪುರಾಣಗಳ ಅಡಗೊಲಜ್ಜಿ ಕತೆಗಳಲ್ಲಿ ಅನಂತ ದೇವಿ ದೇವತೆಗಳಲ್ಲಿ, ಅಂತ್ರ, ತಂತ್ರ–ಮಂತ್ರಗಳಲ್ಲಿ ಶ್ರದ್ಧೆಯನ್ನು ಇನ್ನೂ ಆಳವಾಗಿ ಬೆಳೆಸಿ ಇವುಗಳ ಜೇಡಜಾಲದಲ್ಲಿ ಸಿಕ್ಕ ಈ ನೊಣಗಳು ಎಂದೆಂದೂ ಇವುಗಳಿಂದ ಬಿಡುಗಡೆ ಪಡೆಯದಂತೆ ಮಾಡಿದ್ದರು. ಅಂದಿನ ತುಡುಗುಣಿಗಳು ಕಾಟುಗ, ಕೆತ್ತುಗ, ಪೋಲುಗರು. ಅವರಿಗೆ ಶೋಷಕರೆಂಬುದು ಇಂದಿನ ಹೆಸರು, ತುಡುಗುಣಿಗಳೆಂಬುದು ಬಸವಣ್ಣನಿಟ್ಟ ಹೆಸರು. ಪಟ್ಟಭದ್ರ ಹಿತಗಳೆಂಬುದು ಇಂದಿನ ಹೆಸರು, ಕಾಟುಕ, ಕೆತ್ತುಗ, ಪೋಲಗರು ಬಸವಣ್ಣ ಕೊಟ್ಟಿರುವಂತಹ ಹೆಸರುಗಳು.

"ಭಾರತೀಯರು ೩೩ ಕೋಟಿ ದೇವರುಗಳನ್ನು ಪೂಜಿಸುತ್ತಾರೆಂಬ ನಂಬಿಕೆ ಇದೆ. ಬಹುದೇವೋಪಾಸನೆಯಿಂದ ಏಕಾಗ್ರತೆಯಾಗಲಿ, ಮಾನಸಿಕ ಶಾಂತಿ ನೆಮ್ಮದಿಗಳಾಗಲಿ ದೊರೆಯಲಾರವು

ಎಂದು ಶರಣರು ಪರಿಭಾವಿಸಿ ಏಕದೇವೋಪಾಸನೆಗೆ ಒತ್ತುಕೊಟ್ಟರು. ಪರಮ ಪತಿವ್ರತೆಯಾದ ಹೆಣ್ಣುಮಗಳಿಗೆ ಒಬ್ಬನೇ ಗಂಡನಿದ್ದಂತೆ, ಭಕ್ತನಾದವನಿಗೆ ದೋವನೊಬ್ಬನೆ ಎಂದು ಬಸವಣ್ಣನವರು ಹೇಳಿದರು. ಜನರು ಯಾವ ಯಾವ ರೀತಿಯ ದೇವರುಗಳನ್ನು ಸೃಷ್ಟಿ ಮಾಡುತ್ತಾರೆ ಮತ್ತು ಪ್ರಸಂಗ ಬಂದಾಗ ಆ ದೇವತೆಗಳ ಕುರಿತಾದ ಅವರ ತೀರ್ಮಾನಗಳು ಎಷ್ಟು ಅಸಂಬದ್ಧವಾಗಿರುತ್ತವೆ ಎಂಬುದನ್ನು ಬಸವಣ್ಣನವರು ಹೀಗೆ ಹೇಳುತ್ತಾರೆ;

'ಅರಗು ತಿಂದು ಕರಗುವ ದೈವವನೆಂತು ಸರಿಯೆಂಬೆನಯ್ಯಾ?

ಉರಿಯ ಕಂಡೆಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ?

ಅವಸರ ಬಂದೆಡೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ?

ಅಂಜಿಕೆಯಾದೆಡೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ?

ಸಹಜಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೆ ದೇವ.'

ಇಷ್ಟಕ್ಕೆ ನಮ್ಮ ಜನರ ದೈವದ ಭಕ್ತಿ ಮುಗಿಯುವುದಿಲ್ಲ. ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲನಾರಿ ದೈವ, ಕೊಳಗ ದೈವ, ಗಿಣ್ಣಿಲು ದೈವ, ದೈವ ದೈವವೆಂದು ಕಾಲಿಡಲಿಂಬಿಲ್ಲ. ಇಂಥ ಸಾವಿರಾರು ಕ್ಷುದ್ರ ದೈವಗಳ ಪರಿನಾಮವಾಗಿ ಜನಸಾಮಾನ್ಯರು ಶೋಷಣೆಗೊಳಗಾದರೆ, ಶ್ರೀಮಂತರು ಈ ದೈವಗಳ ಆಚರಣೆಯ ನೆಪದಲ್ಲಿ ಲಕ್ಷಾಂತರ ರೂಪಾಯಿ ಹಾಳುಮಾಡುತ್ತಾರೆ. ಬಸವಣ್ಣನವರು ಈ ದೈವಗಳು ನಾಯಿಗಿಂತ ಕರಕಷ್ಟ ಎಂದು ಮತ್ತೊಂದು ವಚನದಲ್ಲಿ ವಿಡಂಬಿಸುತ್ತಾ ಇಂಥ ಹೇಸಿ ದೈವಂಗಳ ಬೇಡಿ ಬೇಡಿ ನಿರರ್ಥಕ ಕೆಡಬೇಡ ಎಂದು ವಿನಂತಿಸಿಕೊಳ್ಳುತ್ತಾರೆ"೨.

ಅರಿವಿನ ಜನ್ಮಕ್ಕೆ ಬಂದೂ, ಬಹುಜನರನ್ನು ಮರವೆಯ ಪಶುಗಳನ್ನಾಗಿ ಮಾಡುವ ಈ ಸಾಮಾಜಿಕ ಅನಿಷ್ಟಗಳ, ಅರಿಷ್ಟಗಳ, ಅವಲಕ್ಷಣಗಳ ಮೂಲೋಚ್ಚಾಟನೆಯಾಗಲೇ ಬೇಕೆಂದರು ವಚನಕಾರರು. ಮೇಲ್ವರ್ಗದವರ ಶೋಷಣೆ, ಕೆಳವರ್ಗದವರ ಅಜ್ಞತೆಗಳ ವಿರುದ್ಧ ಒಮ್ಮೆಗೆಲೆ ಯುದ್ಧ ಸಾರಿದ್ದ ಅವರು ತಮ್ಮ ದ್ವಿಮುಖ ಆಂದೋಲನವನ್ನು ಧಾರ್ಮಿಕ ದಂಡಯಾತ್ರೆಯಂತೆ ನಡೆಸಿ ಯುಗ ಪ್ರವರ್ತಕರಾದರು. ಶ್ರೀ ಸಾಮಾನ್ಯರ ಮೂಢರೂಡಿ, ಪರಿಪಾಠ ಪ್ರಕ್ರಿಯೆಗಳನ್ನು ಕೇವಲ ಖಂಡಿಸಿ ಸಂತೃಪ್ತರಾಗದೆ ಅವರಿಗೆ ಸುಖಕರವೂ ಸುಯುಕ್ತಿಕವೂ ಆದ ಪ್ರತಿನಿಧಾನವನ್ನು ಕಲ್ಪಿಸಿಕೊಟ್ಟು ಅವಸ್ಥಾಂತರ ಸುಲಭವಾಗುವಂತೆಸಗಿದರು. ಒಂದೇಟಿಗೆ ಎಷ್ಟೊಂದು ಶುಷ್ಕ ಸಂಪ್ರದಾಯಗಳು. ವ್ಯಕ್ತರೀತಿನೀತಿಗಳು ಉರುಳಿಹೋದವು! ಇವೆಲ್ಲವನ್ನು ಉಳಿದು ದೇವನೊಬ್ಬನನ್ನು ಮಾಣದೇ ನೆನೆವುದು ಎಷ್ಟು ಸುಲಭ ಮಾರ್ಗ, ವಿವೇಕ ಸಮ್ಮತ ಮಾರ್ಗ ಇನ್ನು ಅವಲೋಕಿಸಿದರೆ.

'ಪಂಚಾಂಗ ಪಂಚಾಂಗಕ್ಕೆಂದು ಕಳವಳಗೊಂಡು ಜೋಯಿಸನ

ಕರೆಯಿಸಿ ಕೈ ಮುಗಿದು ಕಾಣಿಕೆಯನಿತ್ತು ಎಲೆ ಅಡಿಕೆಯಿಂಕೊಟ್ಟು

ಜೋಯಿಸನ ವಾಕ್ಯವು ಸಕಲ ಕಾರ್ಯಕ್ಕೆ ಸಿದ್ಧಿಯೆಂದು

ಅವನ ಬಾಯ ತೊಂಬಲ ತಿಂಬ
ಹಂದಿಗಳೇನುಬಲ್ಲರಯ್ಯಾ ಶಿವಾಚಾರದ ಪದ್ಧತಿಯನು?
ಪಂಚಾಂಗವೆಂಬ ಶಬ್ದಕ್ಕೆ ಅರ್ಥವ ಹೇಳಲರಿಯದೆ ಜೋಯಿಸರು ಕೆಟ್ಟರು
ಕೇಳಲರಿಯದೆ ಅನಂತ ಹಿರಿಯರು ನರಕಕ್ಕೆ ಇಳಿದರು.
ಪಂಚಾಂಗವೆಂದೊಡೆ ಹೇಳಿದೆ ಕೇಳಿರಣ್ಣ
ಪಂಚ ಅಂದರೆ ಐದು, ಅಂಗವೆಂದರೆ ದೇಹವು
ಪೃಥ್ವಿ, ಆಫ್, ತೇಜ, ವಾಯು, ಆಕಾಶ, ಈ ಪಂಚವು
ಕೂಡಿ ದೇಹವಾಯಿತ್ತು.
ಈ ದೇಹದೊಳಗೆ ಕಾಮ, ಕ್ರೋಧ, ಮೋಹ, ಲೋಭ, ಮದ,
ಮತ್ಸರದಚ್ಚು ಮುರಿಯುವುದೇ ಪಂಚಾಂಗ.
ಮುಟ್ಟದಿರುವುದೇ ಪಂಚಾಂಗ
ತನ್ನ ಇಷ್ಟಲಿಂಗವಲ್ಲದಕ್ಕೆ ಕೈಯ ಮುಗಿಯದಿರುವುದೇ ಪಂಚಾಂಗ
ಜಾತಿಸೂಚಕ, ಜನನ ಸೂತಕ, ಉಚ್ಛಿಷ್ಟಸೂಚಕ, ಮೃತಸೂಚಕ,
ರಜಸೂತಕ ಈ ಪಂಚಸೂತಕವರಿದ ಶರಣರು ಕೇಳುವರಾಗಿ
ಶರಣರು ಕೇಳುವರಾಗಿ
ಶಿವಭಕ್ತರಿಗೆಲ್ಲ ಕ್ರಿಯಾ, ಜ್ಞಾನ, ಇಚ್ಛಾ, ಆದಿಚಿತ್ ಶಕ್ತಿ
ಯಾದುದೇ ಪಂಚಾಂಗ.
ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ, ಗಣಾಚಾರವೇ ಪಂಚಾಂಗ
ಗುರುಪ್ರಸಾದ, ಲಿಂಗಪ್ರಸಾದ, ಜಂಗಮ ಪ್ರಸಾದ, ಗಣಪ್ರಸಾದ,
ಮಹಾಪ್ರಸಾದ, ಕೊಂಬುವುದೇ ಪಂಚಾಂಗ
ಇಂತಿ ಪಂಚಾಂಗದ ನಿಲವನರಿಯದೆ ಪಂಚಸೂತಕದೊಳಗೆ
ಹೊಡೆದಾಡುವ ಪಂಚ ಮಹಾಪಾತಕರ ಎನಗೊಮ್ಮೆ
ತೋರದಿರಯ್ಯಾ ನಿಸ್ಸಂಗ ನಿರಾಳ ಪ್ರಭುವೆ.' (ವ.ಶಾ.ಸಾ.ವ ೧೫೨೩)

ಎಂದು ಪಂಚಾಂಗವೆಂದು ಮಾನಸಿಕ ಹಿಂಸೆಗೊಳಗಾಗುವುದರ ಬದಲು ಪಂಚಾಂಗವೆಂಬುದನ್ನು ಮಾನವ ಬದುಕಿನ ಸದಾಚಾರಕ್ಕೆ ಸಮನ್ವಯಿಸಿ ಮಾರ್ಗದರ್ಶನ ಮಾಡಿದ್ದಾರೆ. ವಿಚಾರವಿಲ್ಲದೆ ಪರಂಪರೆ ಎಂದು ಆಚರಿಸುವ ಗೊಡ್ಡು ಆಚಾರಗಳನ್ನೂ ಖಂಡಿಸಿದ್ದಾರೆ. ಪಂಚಾಂಗವ ಕೇಳಿ ಲಗ್ನವಾದ ಶ್ರೀರಾಮನ ಹೆಂಡತಿ ಸೀತೆ ರಾವಣನಿಗೇಕೆ ಸೆರೆಯಾದಳು? ಪಂಚಾಂಗ ಕೇಳಿ ಲಗ್ನವಾದ ಅನೇಕ ಮಂದಿಯ ಹೆಂಡಂದಿರು ಮುಂಡೆಯರಾದರೇಕೆಂದು ಛೇಡಿಸಿದ್ದಾರೆ.

ಆದಿಪುರಾಣ, ವೇದಪುರಾಣ, ರಾಮಾಯಣ, ಮಹಾಭಾರತ ಗ್ರಂಥಗಳನ್ನು ಪೂಜಿಸಿದರೆ, ಪಾರಾಯಣ ಮಾಡಿದರೆ ಪುಣ್ಯಲಭಿಸುವುದೆಂಬುದನ್ನು ಖಂಡಿಸಿದ್ದಾರೆ.

'ಆದಿಪುರಾಣ ಅಸುರರಿಗೆ ಮಾರಿ
ವೇದ ಪುರಾಣ ಹೋತಿಂಗೆ ಮಾರಿ
ರಾಮ ಪುರಾಣ ರಕ್ಕಸರಿಗೆ ಮಾರಿ
ಭಾರತ ಪುರಾಣ ಗೋತ್ರಕ್ಕೆ ಮಾರಿ
ಎಲ್ಲಾ ಪುರಾಣ ಕರ್ಮಕ್ಕೆ ಮೊದಲು
ನಿಮ್ಮ ಪುರಾಣಕ್ಕೆ ಪ್ರತಿಯಲ್ಲ ಕೂಡಲಸಂಗಮದೇವಾ' (ಸ.ವ.ಸಂ:೧ ವ.ಸಂ, ೫೭೧)

ವೈಚಾರಿಕತೆಯ ಮೂಲವಾದ ವಚನಸಾಹಿತ್ಯಕ್ಕೆ ಸರಿಯಾದ ಪುರಾಣ ಯಾವುದು ಇಲ್ಲ ಹಾಗೆಯೇ

'ವೇದ ವಿಪ್ರರ ಬೋಧೆ
ಶಾಸ್ತ್ರ ಸಂತೆಯ ಮಾತು
ಪುರಾಣ ಪುಂಡರ ಗೋಷ್ಠಿ
ಆಗಮ ಅನೃತದ ನುಡಿ
ತರ್ಕ, ವ್ಯಾಕರಣ, ಕವಿತ್ವಗಳೆಲ್ಲ ಕಲಾಪ್ರೌಢಿಮೆ
ತನ್ನೊಳಗನರಿದ ಅರಿವಿಂಗೆ ಘನವಿಲ್ಲೆಂದ ಕಲಿದೇವರ ದೇವಾ' (ವ.ಶಾ.ಸಾ.ವ ೧೫೭೯)

ಶಾಸ್ತ್ರ, ಪುರಾಣ, ಆಗಮ, ವೇದಗಳ ಬಗ್ಗೆ ಅಂಧಶ್ರದ್ಧೆಯನ್ನೇ ಕಿತ್ತಿಹಾಕಿದರು. ಬಸವಾದಿ ವಚನಕಾರರು, ಹೊಲೆಯುಂಟೆ ಲಿಂಗವಿದ್ದಡೆಯುಲ್ಲಿ? ಹೊಲೆಗಂಡಲ್ಲದೆ ಪಿಂಡದ ನೆಲೆಗಾತ್ರಯವಿಲ್ಲವೆಂದು? ಜಾತಿಸೂತಕ, ಜನನಸೂತಕ, ಮೃತಸೂತಕ, ರಜಸೂತಕ, ಉಚ್ಛಿಷ್ಟಸೂಚಕವೆಂಬ ಪಂಚಸೂತಕಗಳ ಬಗ್ಗೆ ಇದ್ದ ಮೌಢ್ಯತೆಯನ್ನು ತೊಡೆದು ಹಾಕಿದರು.

'ಕೇಶಕಾಷಾಯಾಂಬರವ ನಿಕ್ಕಿದೊಡೇನು?
ವಿಭೂತಿ ರುದ್ರಾಕ್ಷಿಯ ಧರಿಸಿದೊಡೇನೊ?
ಸಾಕಾರದಲ್ಲಿ ಸನ್ಮತನಲ್ಲ, ನಿರಾಕಾರದಲ್ಲಿ ನಿರತನಲ್ಲ
ಪಾರಮಾರ್ಥದಲ್ಲಿ ಪರಿಣಾಮಿಯಲ್ಲ ಕಾರಣ
ಕೂಡಲಸಂಗಮದೇವಾ ತುರುಬಾಗಲಿ, ಜಡೆಯಾಗಲಿ
ಬೋಳಾಗಲಿ ಅರಿವು ಆಚಾರವುಳ್ಳೊಡೆ ಜಂಗಮ' (ವ.ಶಾ.ಸಾ.ವ ೨೪೫೨)

ಬಾಹ್ಯ ವೇಷಭೂಷಣಗಳಿಂದ ಗುರುಜಂಗಮರೆಂದು ಸ್ವೀಕರಸದೆ ಅವರ ಆಚಾರವಿಚಾರಗಳನ್ನು ಪರಾಮರ್ಶಿಸಿಯೇ ಮನ್ನಿಸಬೇಕು.ನಿಮ್ಮ ಜೀವನಕ್ಕೆ ಮಾರ್ಗದರ್ಶಕರನ್ನು ಪರಾಮರ್ಶಿಸದೆ ಒಪ್ಪಿಕೊಳ್ಳಬಾರದು.

ಚಂದ್ರಗ್ರಹಣ, ಸೂರ್ಯಗ್ರಹಣಗಳು ವೈಜ್ಞಾನಿಕ ಸತ್ಯಗಳು. ಸೂರ್ಯ, ಚಂದ್ರ, ಪೃಥ್ವಿ ಒಂದೇ ಸರಳರೇಖೆಯಲ್ಲಿ ಬಂದಾಗ ಗ್ರಹಣಗಲಾಗುತ್ತವೆಂಬುದನ್ನು ಶಾಲೆ ಕಲಿತ ಪ್ರತಿಯೊಬ್ಬರು ತಿಳಿದಿರುವರು. ಆಕಾಶದಲ್ಲಿ ನಡೆಯುವ ಪ್ರಕ್ರಿಯೆಗಳು ಬೂಮಿಯ ಮೇಲಿನ ಮಾನವನಿಗೆ ಯಾವುದೇ ತರದ ಪರಿನಾಮ ಬೀರಲು ಸಾಧ್ಯವಾಗದು. ಗ್ರಹಣ ಕಾಲದಲ್ಲಿ ಊಟ ಮಾಡಬಾರದು, ನೀರು ಕುಡಿಯಬಾರದು, ಗರ್ಭಿಣಿಯು ಕತ್ತಲೆಕೋಣೆಯಲ್ಲಿ ಕೂಡ್ರಬೇಕೆಂದು ಮೂಢಾಚರಣೆಗಳನ್ನು ಆಚರಿಸುತ್ತಾರೆ ನೀರನ್ನು ಚೆಲ್ಲಿ ಹೊಸ ನೀರು ತುಂಬುತ್ತಾರೆ. ತುಪ್ಪ, ಎಣ್ಣೆ ಮುಂತಾದವುಗಳಲ್ಲಿ ಗರಿಕೆ ಹಾಕಿದರೆ ದೋಷ ಹೋಗುತ್ತದೆಂದು ಉಪಯೋಗಕ್ಕೆ ಬಳಸುತ್ತಾರೆ. ಮುಚ್ಚಿಟ್ಟ ನೀರು ದೋಷಿತವಾದರೆ, ಕೆರೆ, ಹಳ್ಳ, ನದಿ, ಬಾವಿಗಳಲ್ಲಿಯೆ ತೆರೆದಿಟ್ಟ ನೀರು ದೋಷಿತವಾಗುವುದಿಲ್ಲವೆ? ಇದು ತಲೆತಲಾಂತರಗಳಿಂದ ಬಂದ ಧಾರ್ಮಿಕ ವ್ರತನಿಯಮಗಳ ಅಂದಾನುಕರಣೆ. ಸ್ವಾರ್ಥಿಗಳಾದ ಪೂಜಾರಿ ಪುರೋಹಿತರು ಧರ್ಮಗುರುಗಳು ಜನರ ಮನಸ್ಸಿನಲ್ಲಿ ಹೋಗಿಸಿರುವ ಭಯಭೀತಿಗಳು.

ಪ್ರಸ್ತುತ ಕಾಲದಲ್ಲಿ ಬಲಗೈ ಶ್ರೇಷ್ಠ, ಎಡಗೈ ಕನಿಷ್ಠ, ಮನೆಯೊಳಗೆ ಮೊದಲು ಪ್ರವೇಶ ಮಾಡುವಾಗ ಬಲಗಾಲು ಹಾಕಬೇಕೆಂಬ ಮೂಢನಂಬಿಕೆಗಳು ಇನ್ನೂ ಜೀವಂತವಾಗಿವೆ. ತುರಿಕೆಯ ಕಾಟ ಎಲ್ಲಮ್ಮನದೆಂದು, ರೋಗ ಬಂದಾಗ ಬಡಬಡಿಸಿದರೆ ದೆವ್ವನ ಕಾಟವೆಂದು ಆಸ್ಪತ್ರೆಗೆ ಒಯ್ಯದೆ ರೋಗ ಉಲ್ಬಣಿಸಿ ಪ್ರಾಣ ಕಳೆದುಕೊಂಡ ಉದಾಹರಣೆ ಕಣ್ಮುಂದಿವೆ. ಚಂದ್ರಗುತ್ತಿಯ ದೇವಾಲಯಕ್ಕೆ ಬೆತ್ತಲೆ ಸೇವೆ. ಸವದತ್ತಿ ಎಲ್ಲಮ್ಮನಿಗೆ ವೇಶ್ಯೆಗಾರಿಕೆಗಾಗಿ ಬಿಡುವುದು. ಜಡೆ ಇಳಿದಿವೆಯೆಂದು ಹೊಲಸುನಾರುವಂತೆ ದೇಹ ವಿರೂಪಗೊಳಿಸಿಕೊಳ್ಳುವುದು. ತಿರುಪತಿ, ಮಂತ್ರಾಲಯ, ಧರ್ಮಸ್ಥಳಕ್ಕೆ ಮುಡಿ ಹಾಗೂ ಮುಡುಪು ಕೊಡುವುದು. ದೇಹ ದಂಡನೆಯಂತಹ ಉರುಳುಸೇವೆ ಬರಿಗಾಲ ನಡಿಗೆ, ದಿರ್ಘದಂಡ ನಮಸ್ಕಾರಗಳನ್ನು ಉಪವಾಸ ವ್ರತಗಳನ್ನು ಆಚರಿಸುವುದು ಇನ್ನೂವರೆಗೂ ನಡೆದು ಬಂದಿರುತ್ತದೆ.

ಮುಂಜಾವಿನಲ್ಲಿ ಕ್ಷೌರಿಕನ ಮುಖ ನೋಡುವುದು ಕೆಡಕು ಎಂಬ ಮೂಢನಂಬಿಕೆಯವರಿಗೆ ಬಸವಣ್ಣನವರು ಹಡಪದ ಅಪ್ಪಣ್ಣನನ್ನು ತಮ್ಮ ವೈಯಕ್ತಿಕ ಕಾರ್ಯದರ್ಶಿಗಳನ್ನಾಗಿ ನೇಮಿಸಿಕೊಂಡಿದ್ದರು. ತಮ್ಮನ್ನು ಬೇಟಿಯಾಗಬೇಕಾದರೆ ಮೊದಲು ಹಡಪದ ಅಪ್ಪಣನವರನ್ನು ಭೇಟಿಯಾಗಬೇಕಿತ್ತು.

ಮಕ್ಕಳಾಗದವರಿಗೆ ಬನ್ನಿಗಿಡ ಸುತ್ತುಹಾಕಿದರೆ ಮಕ್ಕಳಾಗುತ್ತವೆಂದು ಹೇಳುವ ಪುರೋಹಿತಶಾಹಿ ಜನ, ಹತ್ತೆಂಟು ಹುಣ್ಣಿಮೆ ಅಮವಾಸ್ಯೆಗಳು ತಮ್ಮ ಹತ್ತಿರ ಬರಲು ಹೇಳಿ ನೈತಿಕವಾಗಿಯೂ ಶೋಷಣೆ ಮಾಡುತ್ತಾರೆ.

ಕಣ್ಣುತಪ್ಪಿ ಪರಸ್ತ್ರೀಯರನ್ನು ನೋಡಿದರೆ, ನಾಲಿಗೆ ತಪ್ಪಿ ಪರರನ್ನು ದೂಷಿಸಿದರೆ ಪ್ರಾಣಕ್ಕೆ ಅಪಾಯ ತರುವುದರಿಂದ ಕಣ್ಣುತಪ್ಪಿ ನೋಡುವುದೇ ಮಾರಿ, ನಾಲಿಗೆ ತಪ್ಪಿ ನುಡಿಯುವುದೇ ಮಾರಿ ಎಂದು ಎಚ್ಚರಿಸಿದ್ದಾರೆ. ದಿನ, ವಾರಗಳು ಶ್ರೇಷ್ಠವೆಂದು ಏಕೋಭುಕ್ತ ಉಪವಾಸಗಳ ಮಾಡುವವರಿಗೆ ನಾಯಕನರಕ ತಪ್ಪದೆಂದು ಎಚ್ಚರಿಸಿದ್ದಾರೆ. 'ಭಯಂಕರ ಭ್ರಮೆಗೊಂಡಿತ್ತು ಮಂತ್ರ ತಂತ್ರ' ಎಂದು ಮಂತ್ರತಂತ್ರಗಳ ಬಗ್ಗೆ ಎಚ್ಚರಿಸಿದ್ದಾರೆ. ವಶ್ಯಗಳ ವಿಷಯ ಪ್ರಸ್ತಾಪಿಸುವಿಯಾ?

'ವಶ್ಯವ ಬಲ್ಲೆವೆಂದೆಂಬಿರಯ್ಯಾ?

ಬುದ್ಧಿಯನರಿಯದ ಮನುಜರು ಕೇಳಿರಯ್ಯಾ?

ವಶ್ಯವಾವುದೆಂದರಿಯದೆ

ಮರುಳಗೊಂಬರೆಲೆ ಗಾವಿಲ ಮನುಜರಿರಾ?

ಓ ನಮಃ ಶಿವಾಯ ಎಂಬ ಮಂತ್ರ ಸರ್ವಜನವಶ್ಯ

ಕೂಡಲಸಂಗಮದೇವಾ' (ಸ.ವ.ಸಂ:೧ ವ.ಸಂ, ೭೮)

ಹಲ್ಲಿಯ ಶಕುನ, ಹಕ್ಕಿಯ ಶಕುನವೆಂದು ಸಂಶಯಕ್ಕೊಳಗಾಗಿ ಬಡಬಡಿಸುವ ಜನರಿಗೆ ಎಚ್ಚರಿಸಿದ ವಚನಕಾರರು ಅಂಥ ಶಕುನಗಳನ್ನು ನಿರಾಕರಿಸಿದ್ದಾರೆ.

'ಶಕುನವೆಂದೆಂಬೆ ಅವಶಕುನವೆಂದೆಂಬೆ ।

ನಿಮ್ಮವರು ಅಳಲಿಕೆ ಅಂದೇಕೆ ಬಂದೆ?

ನಿಮ್ಮವರು ಅಳಲಿಕೆ ಇಂದೇಕೆ ಹೋದೆ?

ನೀ ಹೋ ಹಾಗಳಕ್ಕೆ! ನೀ ಬಾ ಹಾಗಳಕ್ಕೆ ।

ಅಕ್ಕೆ ಬಾರದ ಮುನ್ನ ಪೂಜಿಸು ಕೂಡಲಸಂಗಮದೇವನ' (ಸ.ವ.ಸಂ:೧ ವ.ಸಂ, ೧೬೭)

ಅಂದರೆ ವಚನಕಾರರ ದಿಟ್ಟಿಗೆ ಬಿದ್ದ ವಿವೇಕ ವಿರಹಿತ ಆಚರಣೆಗಳೆಲ್ಲವೂ ಅರಿವಿನ ಒರೆಗಲ್ಲಿಗೆ ಗುರಿಯಾದವು. ಆಳ್ಳುತೂರಿ ಗಟ್ಟಿಕಾಳು ಉಳಿಸಿಕೊಳ್ಳುವ ಹೊಸಬೀಜಗಳ ಬಿತ್ತಿ ಹೊಸ ಪಯರು ಬೆಳೆಯುವ, ಕಳೆ ಕಿತ್ತು ಬೆಳೆ ಉಳಿಸಿಕೊಳ್ಳುವ, ಬೆಳೆದುದನ್ನು ಭಕ್ತರ ಬಳಗಕ್ಕೆ ಸಲ್ಲಿಸುವ ಕಾರ್ಯ ಕಲ್ಯಾಣದಲ್ಲಿ ಅಭೂತಪೂರ್ವವಾಗಿ ಸಾಗಿ ಸಮಾಜದ ಸರ್ವತೋಮುಖವಾದ ಸಂಸ್ಕರಣ ನಡೆಯಿತು.

'ಹರಸಿ ಮಾಡುವುದು ಹರಿಕೆಯದಂಡ

ನೆರಹಿ ಮಾಡುವುದು ಡಂಬಿನಭಕ್ತಿ

ಹರಿಸಬೇಡ ನೆರಹಬೇಡ

ಬಂದ ಬರವನರಿದರೆ ಕೂಡಿಕೊಂಡಿಪ್ಪ

ನಮ್ಮ ಕೂಡಲಸಂಗಮದೇವ.' (ವ.ಶಾ.ಸಾ.ವ ೧೬೭೮)

ಒಂದು ಸಮಾಜದಲ್ಲಿ ಬಹಳ ಆಳವಾಗಿ ಬೇರೂರಿರುವ ಮೂಲಭೂತ ನಂಬಿಗೆಗಳು ಹಾಗೂ ತತ್ತ್ವಗಳು ಆ ಸಮಾಜಕ್ಕೆ ವಿಶಿಷ್ಟವಾಗಿದ್ದು, ಅದರ ಪ್ರಗತಿಗೆ ಪೂರಕವಾಗಿರುವ ಸಂದರ್ಭಗಳುಂಟು. ಇಂತಹ ಮೂಲಭೂತ ನಂಬಿಗೆಗಳು– ಇತರ ಸಣ್ಣಪುಟ್ಟ ಗೌಣ ನಂಬಿಕೆಗಳಿಗಿಂತ ಹೆಚ್ಚಾಗಿ ಗಮನಾರ್ಹವಾಗಿರುತ್ತವೆ. ಈ ಪ್ರಬಲವಾದ ನಂಬಿಕೆಗಳು ಸಮಾನ್ಯವಾಗಿ ಆ ಸಮಾಜದ ಧಾರ್ಮಿಕ ತತ್ತ್ವಗಳ ಹಿನ್ನಲೆಯ ಆಧಾರವನ್ನು ಹೊಂದಿರುತ್ತವೆ. ಎರಡು ಬೇರೆಬೇರೆ ಸಮಾಜಗಳ ಧಾರ್ಮಿಕ ನಂಬಿಕೆಗಳ ಮಧ್ಯೆ ಘರ್ಷಣೆಯುಂಟಾದಾಗಲೇ ಅಮಾನುಷವು ಹೇಯವೂ ಆದ ಮತೀಯ ಗಲಭೆಗಳು ತಲೆದೋರುವವು. ಅನೇಕ ವೇಳೆ ಯಾವುದೋ ದೇಶ ಕಾಲಗಳಿಗೆ ಹಾಗು ಸಮಕಾಲೀನ ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ರೂಪಗೊಂಡ ನಂಬಿಗೆಗಳು ಇಂದಿನ ಪರಿಸ್ಥಿತಿಗೆ ಹೊಂದಿಕೊಳ್ಳದಿದ್ದರೂ ಹಾಗೆಯೇ ಆಚರಣೆಯಲ್ಲಿ ಉಳಿದುಕೊಂಡು ಬಂದಿರುತ್ತವೆ. ಮದುವೆಯ ಮುಂಚೆ ಆ ಮದುವೆಯ ಕಾಲಕ್ಕೆ ನಡೆಯುವ ಕಂದಾಚಾರಗಳು, ಒಬ್ಬರು ಮಾಡುತ್ತಾರೆಂದು ಮಾಡುವ ದುಂದುವೆಚ್ಚ ಆಚರಣೆ ಜೀವಂತ ಸಾಕ್ಷಿಯಾಗಿದೆ.

ಮಾನವಾಭಿವೃದ್ಧಿಗೆ ಮಾರಕವಾದ ಮೂಢನಂಬಿಕೆಗಳನ್ನು, ಅವುಗಳ ದುಷ್ಪರಿಣಾಮಗಳನ್ನು ಮತ್ತು ನಿರರ್ಥಕತೆಯನ್ನು ವೈಜ್ಞಾನಿಕವಾಗಿ ಚರ್ಚಿಸಿ, ತರ್ಕದ ಒರೆಗಲ್ಲಿಗೆ ತಿಕ್ಕಿ ಜನತೆಯ ಮುಂದೆ ಬಿಚ್ಚಿಟ್ಟವರಲ್ಲಿ ಹನ್ನೆರಡನೆಯ ಶತಮಾನದ ವಚನಕಾರರು ಅಗ್ರಗಣ್ಯರು. ವಚನಕಾರರು ಯಾವುದೇ ವಿಚಾರ, ತತ್ವ, ಚಿಂತನೆಗಳನ್ನು ತಕ್ಷಣ ಒಪ್ಪಿ ಹಾಡಿ ಹೊಗಳಿದವರಲ್ಲ ಅವುಗಳ ಸಾಧಕ–ಬಾಧಕಗಳನ್ನು ತೂಗಿ, ಜನಸಾಮಾನ್ಯರ ಪರವಾಗಿದ್ದರೆ ಮಾತ್ರ ಒಪ್ಪಿಕೊಂಡರು. ಜನ ವಿರೋಧಿಯಾಗಿದ್ದರೆ ಸಾರಾಸಗಟಾಗಿ ನಿರಾಕರಿಸಿದವರು. ಅಂತೆಯೇ ವೈದಿಕರು ಪರಮ ಪವಿತ್ರವೆಂದು ನಂಬಿದ ವೇದಕ್ಕೆ ವಚನಕಾರರು ಒರೆಕಟ್ಟಿದರು, ಶಾಸ್ತ್ರಕ್ಕೆ ನಿಗಳನ್ನಿಕ್ಕಿದರು, ತರ್ಕದ ಬೆನ್ನಬಾರನೆತ್ತಿದರು, ಆಗಮದ ಮೂಗು ಕೊಯ್ದರು. ಸ್ವರ್ಗ, ನರಕ, ಪಾಪ, ಪುಣ್ಯಗಳಂತಹ ನಂಬಿಕೆಗಳ ಸುತ್ತ ಹೆಣೆದ ಮೌಢ್ಯವನ್ನು ಪರಿಹರಿಸಿದರು. ಸತ್ಯದ ನಿಲುವನ್ನರಿತು, ಸದ್ಗುಣವನ್ನು ಬಿತ್ತಿ ಬೆಳೆದರು. ವಚನಕಾರರ ಮಹಾನತೆ ಇರುವುದು, ಅವರು ಅರ್ಥಹೀನವಾದುದ್ದನ್ನು ತಿರಸ್ಕರಿಸುವುದರಲ್ಲಿ ಮಾತ್ರವಲ್ಲ, ಅರ್ಥವತ್ತಾದುದನ್ನು ಕಟ್ಟಿಕೊಡುವುದರಲ್ಲಿ, ಪರ್ಯಾಯವನ್ನು ಸೂಚಿಸುವುದರಲ್ಲಿ. ಪಂಪನ ವಾಕ್ಯ 'ಮಾನವ ಜಾತಿ ತಾನೊಂದೆ ವಲಂ' ಇದನ್ನು ಮಾನವ ಬದುಕಿನ ಮೂಲ ಮಂತ್ರವಾಗಿಸುವುದೇ ವಚನಕಾರರ ಪರಮ ಗುರಿಯಾಗಿತ್ತು.

ವೈದಿಕರು ಕಲ್ಲಿಗೆ ದೇವರು ಮಾಡಿದರು, ನಾಯಿಗೆ ನಾರಾಯಣ ಮಾಡಿದರು, ಬೆಕ್ಕು, ಕತ್ತೆ, ಕಾಗೆ, ಹಂದಿ, ಪಶು, ಮಾರಿ, ಮಸಣಿ ಮುಂತಾದವುಗಳನ್ನು ದೇವರೆಂದು ಕರೆದರು. ಪ್ರಜೆ ಪುನಸ್ಕಾರಗಳನ್ನು ಪವಿತ್ರವೆಂದು ದುಡಿಮೆಯನ್ನು ಕೀಳು ಮಾಡಿದರು. ಅಷ್ಟೇ ಅಲ್ಲ, ಅದರ ಬಗ್ಗೆ ಅಸ್ಪೃಶ್ಯ ಭಾವನೆ ಬೆಳೆಸಿದರು. ವಚನಕಾರರು ದುಡಿಮೆಯನ್ನು ಕಾಯಕವೆಂಬ ಪವಿತ್ರವಾದ ಹೆಸರಿನಿಂದ ಕರೆದರು. ಕಾಯಕವನ್ನು ಕೈಲಾಸದ ಮಟ್ಟಕ್ಕೆ ಏರಿಸಿದರು.

'ಒಡೆಯರು ಭಕ್ತರು ತಾವೆಂದು ಅಡಿಮೆಟ್ಟಿ ಹೋದಲ್ಲಿ
ತಡೆಯಿತು ಶಕುನವೆಂದುಳಿದಡೆ,
ಕಾಗೆ ವಿಹಂಗ ಮಾರ್ಜಾಲ ಮರವಕ್ಕಿ ಗರ್ದಭ ಶಶಕು ಶಂಕೆಗಳು
ಮುಂತಾದ ಸಂಕಲ್ಪಕ್ಕೊಳಗಾದಲ್ಲಿ
ವ್ರತಕ್ಕೆ ಭಂಗ, ಆಚಾರಕ್ಕೆ ದೂರ
ಅದಂತೆಂದಡೆ
ಅಂಗಕ್ಕೆ ಆಚಾರವ ಸಂಬಂಧಿಸಿ,
ಮನಕ್ಕೆ ಅರಿವು–ಅರಿವಿಂಗ ವ್ರತವ ಮಾಡಿದಲ್ಲಿ
ಬೇರೊಂದು ಪರಿಹರಿಸುವ ನಿಮಿತ್ತವುಂಟೇ?
ಇಂತೀ ಸತ್ಕ್ರಿಯಾವಚಿಂರೆ ಕಷ್ಟಜೀವನದ ಲಕ್ಷದಲ್ಲಿ
ಚಿತ್ತ ಮೆಚ್ಚಿಹನಕ್ಕ
ಆತನು ಆಚಾರ ಭ್ರಷ್ಟ, ಏಲೇಶ್ವರ ಲಿಂಗಕ್ಕೆ ದೂರ.' (ವ.ಶಾ.ಸಾ.ವ ೧೫೩೪)

ಮನುಷ್ಯನು ತನ್ನ ಕೆಲಸಕಾರ್ಯಗಳನ್ನು ಮಾಡಲು ಹೋಗುವಾಗ ದಾರಿಯಲ್ಲಿ ಕಾಗೆ, ಹಕ್ಕಿ, ಬೆಕ್ಕು, ಮರವಕ್ಕಿ, ಕತ್ತೆ, ಮೊಲಗಳು ಎದುರು ಬಂದರೆ ಅಪಶಕುನವೆಂದು ಭಾವಿಸಿ ಮರಳಿ ಹೋಗುವುದನ್ನು ಕಂಡು ಏಲೇಶ್ವರ ಕೇತಯ್ಯ ಇದನ್ನು 'ವ್ರತಕ್ಕೆ ಭಂಗ' ಆಚಾರಕ್ಕೆ ದೂರವೆಂದು ಕರೆದನು. ಅಂಗಕ್ಕೆ ಆಚಾರದಿಂದ, ಮನಕ್ಕೆ ಅರಿವಿನಿಂದ, ಅರಿವಿಗೆ ವ್ರತಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಹಾಗೆ ಮಾಡದೆ ಶಕುನಗಳಿಂದ ಪರಿಹಾರ ಕಂಡುಕೊಳ್ಳುವವರಿಗೆ ಆಚಾರ ಭ್ರಷ್ಟರೆಂದು ಕರೆದ.

ಆ ದಿನ ಶುಭ, ಈ ದಿನ ಅಶುಭವೆಂದು, ದಿನ ವಾರಗಳನ್ನು ಶ್ರೇಷ್ಠ ಕನಿಷ್ಠಗಳ ಕಲ್ಪನೆಯನ್ನು ಹುಟ್ಟು ಹಾಕುವವರನ್ನು ಕಂಡು...

'ಸೋಮವಾರ ಮಂಗಳವಾರದಂದು ಮಾಡುವ ಭಕ್ತನ
ಲಿಂಗಭಕ್ತರಿಗಂತು ಸರಿಯೆಂಬೆನಯ್ಯ
ದಿನ ಶ್ರೇಷ್ಠವೋ ಲಿಂಗ ಶ್ರೇಷ್ಠವೋ?
ಆತ ದಿನವೇ ಶ್ರೇಷ್ಠವೆಂದು, ದಿನವೇ ದೈವವೆಂದು,
ಮಾಡುವವನಾಗಿ ಆತ ದಿನದ ಭಕ್ತನು.
ಲಿಂಗಭಕ್ತನು ಲಿಂಗವೇ ಘನವೆಂದು, ದೈವವೆಂದು,
ಮಾಡುವವನಾಗಿ ಆತ ಲಿಂಗ ಭಕ್ತನು.
ದಿನವೊಂದೇ ಶಿವಶರಣಯೆಂಬುವಂತೆ
ದಿನವೊಂದೇ ಕೂಡಲಸಂಗನ ಮಾಣದೆ ನೆನೆವಂಗೆ.' (ವ.ಶಾ.ಸಾ.ವ ೧೯೨೨)

ಕಾಯಕಕ್ಕಿಂತ ದಿನವೇ ಶ್ರೇಷ್ಠವೆಂದು ಹೇಳುವವರು ದಿನದ ಭಕ್ತರೆ ಹೊರತು ಕೂಡಲಸಂಗನ ಭಕ್ತರಲ್ಲ. ಕೆಲವರಿಗೆ ದಿನ ಮುಖ್ಯವಾದರೆ ಮತ್ತೆ ಕೆಲವರಿಗೆ ವಾರ, ತಿಥಿ, ಅಷ್ಟಮಿ, ನವಮಿಗಳ ಹುಚ್ಚು ಹಿಡಿದಿರುತ್ತದೆ. ಮೌಢ್ಯದ ಮಹಾಮನೆಯಂತಿರುವ ಇವುಗಳನ್ನು ವಚನಕಾರರು ತೀವ್ರವಾಗಿ ವಿರೋಧಿಸಿದರು.

'ಅಷ್ಟಮಿ ನವಮಿ ಎಂಬ ಕಲ್ಪಿತವೇಕೋ ಶರಣಂಗೆ
ಲಿಂಗವೆಲ್ಲಿಯದೋ ವಿಘ್ನವೆಲ್ಲಿಯದೋ ಸಂಗಯ್ಯಾ?
ದೋಷವೆಲ್ಲಿಯದೋ ದುರಿತವೆಲ್ಲಿಯದೋ ಸಂಗಯ್ಯಾ?' (ಸ.ವ.ಸಂ:೧ ವ.ಸಂ, ೬೯೯)

ಎಂದು ಹೇಳಿ ನಮ್ಮವರು ಒಪ್ಪಿಗೊಂಡರೆ ಅದೇ ಶುಭ ಲಗ್ನ, ಶುಭ ದಿನವೆಂದು ಬಸವಣ್ಣನವರು ಹೇಳುತ್ತಾರೆ.

'ಎಮ್ಮವರು ಬೆಸಗೊಂಡರೆ ಶುಭ ಲಗ್ನವೆನ್ನಿರಯ್ಯಾ
ರಾಶಿಕೂಟ ಗಣ ಸಂಬಂಧ ಉಂಟೆಂದು ಹೇಳಿರಯ್ಯಾ
ಚಂದ್ರಬಲ ತಾರಾ ಬಲ ಉಂಟೆಂದು ಹೇಳಿರಯ್ಯಾ
ನಾಳಿನ ದಿನಕ್ಕೆ ಇಂದಿನ ದಿನವೆ ಲೇಸೆಂದು ಹೇಳಿರಯ್ಯಾ
ಕೂಡಲ ಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯ.' (ಸ.ವ.ಸಂ:೧ ವ.ಸಂ, ೮೩)

ಶುಭಾಶುಭ, ತಾರಾಬಲ, ಚಂದ್ರಬಲ, ರಾಶಿಕೂಟ, ಗಣಸಂಬಂಧ ಮುಂತಾದವುಗಳನ್ನು ತಿಳಿದುಕೊಳ್ಳಲು ಪಂಚಾಂಗವನ್ನು ತೆಗೆದು, ಲಗ್ನಕ್ಕೆ ಶುಭಘಳಿಗೆ ಮುಹೂರ್ತ ನಿರ್ಧರಿಸುವುದನ್ನು ವಚನಕಾರರು ಅಲ್ಲಗಳೆಯುತ್ತಾರೆ. ಹಿರಿಯರೆಲ್ಲರು ಕೂಡಿ ಎಲ್ಲರಿಗೂ ಬಿಡುವು ಸಿಗುವ ಸಮಯ, ಸಂದರ್ಭದಲ್ಲಿ ಕಾರ್ಯ ಮಾಡಬೇಕೆಂದು ಹೇಳುತ್ತಾರೆ. ಹಿರಿಯರೆಲ್ಲರೂ ಕೂಡಿಮಾಡುವ ಕೆಲಸದಲ್ಲಿ ರಾಶಿಕೂಟ, ಗಣ ಸಂಬಂಧ, ಚಂದ್ರಬಲ, ತಾರಾಬಲ ಇವೆಲ್ಲವೂ ತಾನೆತಾನಾಗಿ ಕೂಡಿಬರುತ್ತದೆ. ಶುಭಕಾರ್ಯ ಮಾಡಲು ಶುಭಘಳಿಗೆ ಬೇಕಾಗಿಲ್ಲ ನಾಳಿನ ದಿನಕ್ಕೆ ಇಂದಿನ ದಿನವೇ ಒಳ್ಳೆಯದೆಂದು ಹೇಳಿ ಸಮಯದ ಮಹತ್ವವನ್ನು ಎತ್ತಿ ಹಿಡಿಯುತ್ತಾರೆ.

ಸ್ವರ್ಗ-ನರಕ, ಪಾಪ-ಪುಣ್ಯ, ಇಹಲೋಕ-ಪರಲೋಕ, ಪುನರ್ಜನ್ಮ ದೇವರು ದಿಂಡರು ಇತ್ಯಾದಿ ನಂಬಿಕೆಗಳು, ಕಲ್ಪನೆಗಳು ಜನರ ಮನದಲ್ಲಿ ಕಾಲಾನುಕಾಲದಿಂದಲೂ ಮನೆ ಮಾಡಿಕೊಂಡಿವೆ. ಇವುಗಳ ಜೊತೆಗೆ ತಮ್ಮ ಬದುಕನ್ನು ತಳಕು ಹಾಕಿ ಸುಖ ಜೀವನದ ಕನಸು ಕಾಣುತ್ತಾ ಬಂದಿದ್ದಾರೆ. ಈ ನಂಬಿಕೆಗಳು ಆಚರಣೆಗಳು ಸಮಾಜದ ಮೇಲ್ ಸ್ಥರದಲ್ಲಿದ್ದವರಿಗೆ ಶೋಷಣೆಗೆ ಸಾಧನಗಳಾಗಿಬಿಟ್ಟಿವೆ. ಇಂಥ ನಂಬಿಕೆಗಳು ಸೂಕ್ಷ್ಮವಾಗಿ ಗಮನಿಸಿದರೆ ಕಾಯಕದಿಂದ ವ್ಯಕ್ತಿಯ ಮನಸ್ಸು ಬೇರ್ಪಡಿಸುತ್ತವೆ. ದುಡಿಯುವುದು ಕೀಳು ಎಂಬ ಭಾವನೆಗೆ ಕಾರಣವಾಗುತ್ತವೆ. ಕಾಯಕದಿಂದ ದೂರಾಗಿ ಕಾಣದ ಸ್ವರ್ಗಕ್ಕಾಗಿ, ಸಿಗದ ಪುಣ್ಯಕ್ಕಾಗಿ, ಬರದ ಪುನರ್ಜನ್ಮಕ್ಕಾಗಿ ಹಪಹಪಿಸುವುದೇ

ಒಂದು ಕಾಯಕವೆಂದು ತಿಳಿಯುತ್ತಾರೆ. ವಚನಕಾರರು ಇವುಗಳು ಕಾಯಕದಿಂದ ಹೊರತಾದವುಗಳೆಂದು ಹೇಳುತ್ತಾರೆ.

'ಪುಣ್ಯ ಪಾಪವೆಂಬವು ತಮ್ಮಿಷ್ಟ ಕಂಡಿರೇ!
ಅಯ್ಯ ಎಂದಡೆ ಸ್ವರ್ಗ!
ಎಲವೋ ಎಂದಡೆ ನರಕ
ದೇವ-ಭಕ್ತ-ಜಯ-ಜೀಯಾ ಎಂದು ನುಡಿಯೊಳಗೆ
ಕೈಲಾಸವೈದುವುದು ಕೂಡಲಸಂಗಮದೇವ.' (ಸ.ವ.ಸಂ:೧ ವ.ಸಂ, ೨೪೦)

'ದೇವಲೋಕ-ಮೃತ್ಯಲೋಕವೆಂಬುದು ಬೇರಿಲ್ಲ ಕಾಣಿರಣ್ಣ
ಸತ್ಯವ ನುಡಿವುದೇ ದೇವಲೋಕ!
ಮಿಥ್ಯವ ನುಡಿವುದೇ ಮರ್ತ್ಯಲೋಕ!
ಆಚಾರವೇ ಸ್ವರ್ಗ! ಅನಾಚಾರವೇ ನರಕ!
ನೀವೇ ಪ್ರಮಾಣ ಕೂಡಲಸಂಗಮದೇವ.' (ಸ.ವ.ಸಂ:೧ ವ.ಸಂ, ೨೩೯)

ಬಸವಣ್ಣನವರ ಈ ವಚನಗಳು ವೈದಿಕ ನಂಬಿಕೆಗಳಾದ ಪಾಪ-ಪುಣ್ಯ, ಸ್ವರ್ಗ-ನರಕ ಕಲ್ಪನೆಗಳನ್ನು ನೇರವಾಗಿ ಅಷ್ಟೇ ಸರಳವಾಗಿ ಅಲ್ಲಗಳೆದಿದ್ದಾರೆ. ನಮ್ಮ ನಡೆ-ನುಡಿಗಳಲ್ಲಯೇ ಸ್ವರ್ಗ ನರಕಗಳು, ದೇವಲೋಕ-ಮರ್ತ್ಯಲೋಕಗಳಿವೆ. ಒಳ್ಳೆಯ ಆಚಾರ, ಅಯ್ಯಾ ಎಂಬ ಸದುವಿನಯದ ನುಡಿಗಳೆ ಸ್ವರ್ಗ, ಎಲವೋ ಎಂಬ ಅಸಭ್ಯ ಮಾತು ಅನಾಚಾರಗಳು ನರಕವೆಂದು ಕರೆದರು. ಸ್ವರ್ಗ, ನರಕಗಳು ನಮ್ಮನ್ನು ಬಿಟ್ಟು ಹೊರಗಿಲ್ಲ, ಅವು ನಮ್ಮ ನಡೆ ನುಡಿಗಳಲ್ಲಿಯೇ ಇವೆ ಎಂದು ಹೇಳುವುದರ ಮೂಲಕ ಹಳೆ ನಂಬಿಕೆಗಳನ್ನು ಹೊಡೆದು ಹಾಕಿದ್ದಾರೆ.

ನಮ್ಮ ದೇಶದಲ್ಲಿ ಹೆಣ್ಣು ಓಡಿಸಿಕೊಂಡು ಹೋದದ್ದು ಮಹಾಕಾವ್ಯವಾಗಿದೆ. ಅಣ್ಣ ತಮ್ಮಂದಿರ ಹೊಲ ಮನೆಯ ಜಗಳ ಮಹಾಕಾವ್ಯವಾಗಿದೆ. ಹೆಂಡತಿ ಗಂಡನ ಪ್ರಾಣವನ್ನು ಮರಳಿ ತಂದದ್ದು ಮಹಾಕಾವ್ಯವಾಗಿದೆ. ಆದರೆ ಭೂಮಿಯಲ್ಲಿ ದುಡಿದ ವ್ಯಕ್ತಿ ಬಗ್ಗೆಯಾಗಲಿ, ದುಡಿಮೆ ಬಗ್ಗೆಯಾಗಲಿ ಮಹಾಕಾವ್ಯ ಹುಟ್ಟಲಿಲ್ಲ. ನವರಸಗಳು ಕಾವ್ಯಗಳಲ್ಲಿ ರಾರಾಜಿಸಿದವು, ಆದರೆ 'ಬೆವರು ರಸ'ದ ಕುರಿತ ಒಂದು ಒಳ್ಳೆಯ ಮಾತು ಕೇಳಿ ಬರಲಿಲ್ಲ. ಅಷ್ಟೇ ಅಲ್ಲ, ದುಡಿಮೆ ತುಚ್ಛೀಕರಿಸಲ್ಪಟ್ಟಿತು. ಅವಜ್ಞೆಗೆ ಒಳಗಾಗಿದೆ. ದುಡಿಮೆಯ ಮಹತ್ವವನ್ನು ಮೊದಲಿಗೆ ಎತ್ತಿ ಹಿಡಿದವರೆಂದರೆ ೧೨ನೇ ಶತಮಾನದ ವಚನಕಾರರು. ದುಡಿಮೆಯೇ ದೇವರೆಂದು ದುಡಿಮೆಗೆ ಭಕ್ತಿಯೆಂದು ಗೌರವದಿಂದ ಕರೆದರು. ಕಾಯಕವೇ ಕೈಲಾಸವೆಂದರು.

ಭಾರತೀಯ ಸಮಾಜದ ಮೇಲೆ ಮೌಢ್ಯ, ಮೂಢನಂಬಿಕೆ, ಅಂಧಶ್ರದ್ಧೆಗಳು ಹೇಳತೀರದ ಅನಾಹುತ ಮಾಡಿವೆ. ಕಾಲಕಾಲಕ್ಕೆ ವಿಚಾರವಾದಿಗಳು, ಚಿಂತಕರು, ಸಾಮಾಜಿಕ ಹೋರಾಟಗಾರರು

ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಸಮಾಜದಲ್ಲಿದ್ದ ಕಸವನ್ನು ಕಿತ್ತೆಸೆದು ಹಸನು ಮಾಡಿದ್ದಾರೆ. ಅಂಥವರಲ್ಲಿ ಬುದ್ಧ, ಬಸವ, ಅಂಬೇಡ್ಕರ, ಫುಲೆ ಮುಂತಾದವರು ಪ್ರಮುಖರು. ಇಂತಹ ವರ್ತಮಾನದಲ್ಲಿ ವಚನಗಳು ಮೌಢ್ಯವನ್ನು ಕಿತ್ತೆಸೆದು ಮಾನವೀಯತೆಯನ್ನು ಎತ್ತಿಹಿಡಿಯುತ್ತಿವೆ.

ವಚನಗಳ ಪರ್ಯಾಯ ಚಿಂತನೆಗಳು

ವೈದಿಕ ಧರ್ಮವು ಮೋಕ್ಷದ ದಾರಿಯಲ್ಲಿ ಸಾಗಲು ತಪಸ್ಸು, ಸಂಸಾರದ ನಿರಾಕರಣೆ ಇತ್ಯಾದಿ ಅಂಶಗಳನ್ನು ಪ್ರತಿಪಾದಿಸುತ್ತಿದ್ದು ಪ್ರಸ್ತುತ ದಿನಗಳಲ್ಲಿ ಇದು ದುರಂತವೇ ಸರಿ. ಇದಕ್ಕೆ ಕೆಲವರು ಮಾತ್ರ ಅರ್ಹತೆಯನ್ನು ಪಡೆದವರಾಗಿರುತ್ತಿದ್ದರು. ಕಠಿಣವಾದ ಈ ಆಚರಣೆಗಳನ್ನು ಪಾಲಿಸುವುದಾಗಲೀ ಅಥವಾ ಅವುಗಳನ್ನು ಅರ್ಥೈಸಿಕೊಳ್ಳುವುದಾಗಲೀ ಎಲ್ಲರಿಗೂ ಸುಲಭಗ್ರಾಹ್ಯವಾಗಿರಲಿಲ್ಲ. ಇಂದ್ರಿಯಗಳನ್ನು ನಿಗ್ರಹಿಸಿ ಜಪ ತಪಗಳ ಮುಖಾಂತರ ಭಗವಂತನನ್ನು ಕಾಣುವ ಈ ರೀತಿಯ ದಾರಿಯನ್ನು ವಚನಗಳು ಖಂಡಿಸಿದವು. ವೈದಿಕತತ್ವವಾದರೋ ಮೋಕ್ಷದ ದಾರಿಯಲ್ಲಿ ಸಾಗುವ ಜೀವವು ಸಂಸಾರವನ್ನು ಸಾರಾಸಗಟಾಗಿ ತಿರಸ್ಕರಿಸಬೇಕು ಎಂದು ಸಾರಿತ್ತು. ಜೀವನದಲ್ಲಿ ವಿರಕ್ತಿಯನ್ನು ಹೊಂದಿ ಸಂಸಾರದಿಂದ ವಿಮುಖತೆಯನ್ನು ಹೊಂದಿದಾಗ ಮಾತ್ರ ಮೋಕ್ಷ ಸಾಧನೆ ಎಂಬುದು ಅದರ ಪ್ರತಿಪಾದನೆ. ಆದರೆ ವಚನಗಳು ಇದನ್ನು ತಿರಸ್ಕರಿಸಿ ಇದಕ್ಕೆ ಸಂಪೂರ್ಣ ವಿರುದ್ಧವಾಗಿ ನೆಲೆಯಿಂದ ಸಂಸಾರದ ಒಳಗೆ ಇದ್ದು ಸಾಯುಜ್ಯವನ್ನು ಪಡೆಯಬಹುದು ಎಂಬ ನೂತನ ಪರ್ಯಾಯ ಮಾರ್ಗವನ್ನು ಬೋಧಿಸಿದವು.

> **'ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವವು ದೋಷಂಗಳು**
> **ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು**
> **ಸತಿ ಪತಿ ರತಿ ಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು?**
> **ಸತಿ ಪತಿ ರತಿಸುಖ ಭೋಗೋಪವಿಳಾಸವ ಬಿಟ್ಟನೆ ಸಿಂಧು ಬಲ್ಲಾಳನು?'**

(ಬಸವಣ್ಣನ ವಚನ ಸಂಪುಟ: ವ.ಸಂ. ೬೩೯.)

ಎಂದು ಹೇಳಿ ಸಂಸಾರದಲ್ಲಿದ್ದು ಭಗವಂತನನ್ನು, ಪಡೆಯಬಹುದೆಂದು ವಚನಗಳು ಸಾರಿದವು. 'ಮೃದುವಚನಗಳೇ ಸಕಲ ಜಪಂಗಳು, ಮೃದುವಚನವೇ ಸಕಲ ತಪಂಗಳು' ಎಂದು ಜಪ ತಪಗಳಿಗೆ ಬದಲಾಗಿ ಪರರೊಂದಿಗೆ ಒಳ್ಳೆಯ ಮಾತುಗಳನ್ನಾಡುವುದೇ ನಿಜವಾದ ಜಪ-ತಪ ಎಂಬ ಪರ್ಯಾಯಗಳನ್ನು ನೀಡಿದವು. ಧರ್ಮ ಎಂಬುದು ಸಾಮಾನ್ಯವಾದ ಮನುಷ್ಯನಿಗೆ ಸರಳವಾಗಿ ವಿವರಿಸಲಾಗದ ಅತ್ಯಂತ ಜಟಿಲವಾದ ಸಂಗತಿಯಾಗಿ ಹಿಂದೆ ಕಂಡು ಬರುತ್ತಿತ್ತು. ಆದರೆ ಇದನ್ನು 'ದಯವೇ ಧರ್ಮದ ಮೂಲವಯ್ಯಾ' ಎಂದು ಧರ್ಮ ಎಂಬುದಕ್ಕೆ ಸರಳವಾದ ವ್ಯಾಖ್ಯಾನವನ್ನು ನೀಡುವುದರ ಮುಖಾಂತರ ಹೊಸದಾಗಿ ಅರ್ಥೈಸಿದವು.

‘ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ

ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ,

ತನ್ನ ಬಣ್ಣಿಸಬೇಡ, ಇದಿರ ಅಳಿಯಲು ಬೇಡ

ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ

ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ’

(ಬಸವಣ್ಣನವರ ವಚನ ಸಂಪುಟ, ವ.ಸಂ. ೨೩೫)

ಎಂದು ಬಹಳ ಸರಳವಾಗಿ ತಮ್ಮ ಶುದ್ಧವಾದ ನಡವಳಿಕೆಯ ಮುಖಾಂತರವೇ ಭಗವಂತನನ್ನು ಒಲಿಸಬಹುದು, ಅದಕ್ಕಾಗಿ ಕಠಿಣವಾದ ತಪಸ್ಸು, ವ್ರತಗಳಂತಹ ಆಚರಣೆಗಳ ಅಗತ್ಯವಿಲ್ಲ ಎಂದು ಪ್ರತಿಪಾದಿಸಿದವು.

ಧಾರ್ಮಿಕ ವಿಧಿಗಳನ್ನು ನಡೆಸುವಾಗ ವೈದಿಕ ಧರ್ಮವು ಮಂತ್ರಗಳಿಗೆ ಪ್ರಾಮುಖ್ಯತೆಯನ್ನು ನೀಡಿತ್ತು. ಅದು ಯಜ್ಞ ಯಾಗಾದಿಗಳಿರಲಿ, ದೈನಂದಿನ ಪೂಜೆಗಳಂತಹುದೇ ಇರಲಿ, ಯಾವುದೇ ಪ್ರಮುಖವಾದ ಆಚರಣೆಗಳಲ್ಲಿ ಶಾಸ್ತ್ರೋಕ್ತವಾದ, ಸಂಸ್ಕೃತದ ಮಂತ್ರಗಹಳನ್ನು ಬಳಸಲಾಗುತ್ತಿತ್ತು. ಇದು ಸಮಾನ್ಯ ಜನರಿಗೆ ತಿಳಿಯುತ್ತಿರಲಿಲ್ಲ. ಆದ್ದರಿಂದ ವೈದಿಕ ಸಂವಹನ ಮಾಧ್ಯಮವಾದ ಸಂಸ್ಕೃತವನ್ನು ತೊರೆದು ಛಂದೋಬದ್ಧ ರಚನೆಗಳಾದ ಮಂತ್ರಗಳ ಬದಲಾಗಿ ಛಂದೋರಹಿತ ರಚನೆಗಳಾದ ವಚನಗಳನ್ನು ಪರ್ಯಾಯವಾಗಿ ಬಳಸಲು ಪ್ರಯತ್ನಿಸಿದವರು ವಚನಕಾರರು. ಮಂತ್ರಗಳ ಸ್ಥಳದಲ್ಲಿ ವಚನಗಳನ್ನು ಬಳಸಬೇಕೆಂಬುದು ವಚನಕಾರರ ಆಶಯವಾಗಿತ್ತು.

ವರ್ತಮಾನದಲ್ಲಿ ಅತೀಯಾಗಿ ಅನ್ವಯಿಸುತ್ತಿರುವಂತಹ ವೈದಿಕ ಗ್ರಂಥಗಳ ಭಾಷೆಯಾದ ಸಂಸ್ಕೃತವನ್ನು ವಚನಕಾರರು ತಮ್ಮ ವಚನಗಳಲ್ಲಿ ಬಳಸದೆ ಅದನ್ನು ಮೂಲೆಗುಂಪು ಮಾಡಿದರು. ಅದಕ್ಕೆ ಪರ್ಯಾಯವಾಗಿ ಕನ್ನಡ ಭಾಷೆಯನ್ನು ಬಳಕೆಗೆ ತಂದರು. ನಗೆಯ ಮಾರಿತಂದೆ ಎಂಬ ವಚನಕಾರನು ತನ್ನ ಒಂದು ವಚನದಲ್ಲಿ ಸಂಸ್ಕೃತದ ಮಾತಿನ ಪಸರವ ಹರಡಿಕೊಂಡು ತನ್ನ ಮಾತಿನಿಂದ ಜನರನ್ನು ಮರುಳು ಮಾಡುತ್ತಿದ್ದ ಪಂಡಿತರನ್ನು ಹೀಯಾಳಿಸಿರುವುದು ಇಲ್ಲಿ ಗಮನಿಸಬಹುದು. ಸಂಸ್ಕೃತ ಮಾತ್ರವಲ್ಲದೆ ಯಾಗ, ಜಪ ತಪಗಳು ಕೂಡಾ ವಚನಕಾರರ ವಚನಗಳಿಂದ ತಿರಸ್ಕಾರಕ್ಕೆ ಒಳಗಾಗಿರುವುದನ್ನು ಹಾಗೂ ಇವುಗಳ ಬದಲಾಗಿ ವಚನಗಳ ಭಾಷೆ ಮತ್ತು ಶೈಲಿಯೇ ಶ್ರೇಷ್ಠ ಎಂಬ ಚಿಂತನೆ ಮಾಡಿರುವುದನ್ನು ಗಮನಿಸಬಹುದು.

‘ಅಶ್ವಮೇಧಯಾಗವಂತಿರಲಿ

ಅಜಪೆ ಉಪದೇಶ ಸಮಾಧಿಯಂತಿರಲಿ, ಹೋ!

ಗಾಯ್ತ್ರಿಯ ಜಪವಂತಿರಲಿ, ಹೋ!

ಜನ ಮೋಹನ ಮಂತ್ರವಂತಿರಲಿ, ಹೋ!

ಕೂಡಲಸಂಗನ ಶರಣರ ನುಡಿಗಡಣ

ಎಲ್ಲಕ್ಕಧಿಕ ನೋಡಾ.'

(ಬಸವಣ್ಣನವರ ವಚನ ಸಂಗ್ರಹ, ವ.ಸಂ. ೬೧೧)

'ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೆ ಇಷ್ಟವಯ್ಯಾ,

ಸ್ಮೃತಿಗಳು ಸಮುದ್ರದ ಪಾಲಾಗಲಿ,

ಶ್ರುತಿಗಳು ವೈಕುಂಠವ ಸೇರಲಿ,

ಪುರಾಣಗಳು ಅಗ್ನಿಯ ಸೇರಲಿ,

ಆಗಮಗಳು ವಾಯುವ ಹೊಂದಲಿ,

ಎಮ್ಮ ನುಡಿ ಕಪಿಲಸಿದ್ಧ ಮಲ್ಲಿಕಾರ್ಜುನ ಮಹಾಲಿಂಗದ

ಹೃದಯದೊಳು ಗ್ರಂಥಿಯಾಗಿರಲಿ'

(ಸಿದ್ಧರಾಮೇಶ್ವರ ವಚನ ಸಂಪುಟ, ವ.ಸಂ. ೧೪೩.)

ಅಲ್ಲಮ ಪ್ರಭುವು ತನ್ನೊಂದು ವಚನದಲ್ಲಿ 'ವೇದಗಳೆಂಬವು ಬ್ರಹ್ಮನ ಭೂತಾಟ, ಶಾಸ್ತ್ರಗಳು ಸರಸ್ವತಿಯ ಗೊಡ್ಡಾಟ. ಆಗಮಗಳು ಋಷಿಯ ಮರುಲಾಟ, ಪುರಾಣಗಳು ಪೂರ್ವದವರ ಒದ್ದಾಟ' ಎಂದು ಹೇಳಿ ಇವುಗಳನ್ನು ತಿರಸ್ಕರಿಸಿ ಹೊಸಮಾರ್ಗವನ್ನು ಕಾಣಬೇಕಾದುದು ಶರಣರ ಲಕ್ಷಣ ಎನ್ನುತ್ತಾನೆ. ಹೀಗೆ ಮಂತ್ರ, ಶಾಸ್ತ್ರ, ಪುರಾಣಗಳಿಗೆ ಪರ್ಯಾಯವಾಗಿ ವಚನಗಳನ್ನು ಬಳಕೆಗೆ ತರುವ ಮುಖಾಂತರ, 'ಭಗವಂತನಿಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಎಂಬ ರೀತಿಯಲ್ಲಿ ವಚನಕಾರರ ವಚನಗಳು ತಮ್ಮ ಕಾರ್ಯವನ್ನು ನಡೆಸಿದ್ದಾವೆ. ಆದ್ದರಿಂದಲೇ ಶ್ರೀ ಎಂ. ಆರ್. ಶ್ರೀನಿವಾಸ ಮೂರ್ತಿಯವರು ಹೇಳಿರುವಂತೆ 'ವಚನಗಳು ಕನ್ನಡದ ಉಪನಿಷತ್ತುಗಳು, ತಪೋನಂದನ' ಎಂದು ಕರೆಸಿಕೊಂಡಿವೆ.

ವಚನಗಳು ಕೇವಲ ಮಂತ್ರಗಳನ್ನು ಮಾತ್ರ ಬದಲಾಯಿಸ ಬಯಸಲಿಲ್ಲ. ವೈದಿಕರ ಮಂತ್ರ ಸಹಿತವಾದ ಆಚರಣೆಗಳು ಹಾಗೂ ಪೂಜಾ ವಿಧಾನಗಳು ವರ್ತಮಾನದಲ್ಲಿ ಅತೀಯಾಗಿ ಹಬ್ಬಿವೆ ಅದಕ್ಕಾಗಿ ವಚನಗಳು ಭಗವಂತನನ್ನು ಪಡೆಯಲು ಸಾತ್ವಿಕ ರೂಪದ ಪೂಜೆ, ಅಷ್ಟವಿದಾನಾರ್ಚನೆ, ಷೋಡಶೋಪಚಾರಗಳ ಮೂಲಕವು ಸಾಧ್ಯ ಎಂದು ಪ್ರತಿಪಾದಿಸಿದವು. ವರ್ತಮಾನದಲ್ಲಿ ಅನೇಕ ಮೃದುಹೃದಯಿಗಳ ಮನಸ್ಸಿನಲ್ಲಿ ಹಿಂಸಾತ್ಮಕವೂ ಬೀಭತ್ಸಕರವೂ ಆದ ಧಾರ್ಮಿಕವಾದ ಕೆಲವು ಆಚರಣೆಗಳು ಜಿಗುಪ್ಸೆಯನ್ನು ತರಿಸಿದ್ದಾವೆ. ಧರ್ಮವೆಂಬುದು ಪರಿಶುದ್ಧವಾಗಿರಬೇಕೆಂದು ಮಾಂಸಾಹಾರ, ಬಲಿ ಇವುಗಳ ಜಾಗದಲ್ಲಿ ಪೂಜೆ, ಅರ್ಚನೆಗಳ ಮುಖಾಂತರ ಭಗವಂತನನ್ನು ಒಲಿಸುವ ರೀತಿಯನ್ನು ವಚನಗಳು ಪ್ರತಿಪಾದಿಸಿದವು. 'ತ್ರಿಕಾಲ ತನ್ನ ಇಷ್ಟಲಿಂಗಕ್ಕೆ ಪೂಜೆಯ ಮಾಡುವವನೇ ಸದ್ಭಕ್ತನೆಂದು' ಸಂಗಮೇಶ್ವರದ ಅಪ್ಪಣ್ಣನೆಂಬ ವಚನಕಾರ ಹೇಳಿದ್ದಾನೆ.

ವೈದಿಕ ಪರಂಪರೆಯಲ್ಲಿ ಬಹುದೇವತೆಗಳ ಆರಾಧನೆಗೆ ಅವಕಾಶವಿತ್ತು. ಕೆಳವರ್ಗದವರೂ ಕೂಡಾ ಅನೇಕ ಕ್ಷುದ್ರ ದೇವತೆಗಳ ಪೂಜೆಗಳನ್ನು ಮಾಡುತ್ತಿದ್ದರು. ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಹಾಗೂ ರುದ್ರರನ್ನು ವೇದಗಳು ಒಪ್ಪಿಕೊಂಡಿದ್ದವು. ಆದರೆ ವಚನಗಳು ಈ ಎಲ್ಲಾ ದೇವತೆಗಳನ್ನು ಸಾರಾಸಗಟಾಗಿ ತಿರಸ್ಕರಿಸಿದವು.

'ಈಶ ನಿಮ್ಮ ಪೂಜಿಸಿದ ಬಳಿಕ

ಅನ್ಯ ದೈವಂಗಳಿಗೆ ಹೇಸಲೆ ಬೇಕು'

(ಸಂಕೀರ್ಣ ವಚನ ಸಂಪುಟ ೨. ಜೇಡರ ದಾಸಿಮಯ್ಯನ ವಚನ, ವ.ಸಂ. ೭೪೪)

ಎಂದು ಸಾರುವ ಮೂಲಕ ಶಿವನ ಪಾರಮ್ಯವನ್ನು ಎತ್ತಿಹಿಡಿದವು ಅಲ್ಲದೆ ಅನೇಕ ಕಡೆಗಳಲ್ಲಿ 'ನಾರಾಯಣನೆಂಬುವವನ ಕಾಣೆ, ಗೀರಾಯಣನೆಂಬುವವನ ಕಾಣೆ, ಬೊಮ್ಮನೆಂಬುವನ ಕಾಣೆ, ಗಿಮ್ಮನೆಂಬವನ ಕಾಣೆ' ಎಂದು ಹೇಳಿ 'ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡದಿರಿ ಒಬ್ಬನೇ ದೇವ' ಎಂದು ಹೆಳುತ್ತಾ, 'ದೇವನೊಬ್ಬ ನಾಮ ಹಲವು' ಎಂದು ಅನೇಕ ದೇವರುಗಳ ಪೂಜಿಸುವುದನ್ನು ವಚನಗಳು ಕಂಡಿಸಿದವು. ಕೇವಲ ಮೇಲ್ವರ್ಗಕ್ಕೆ ಸೇರಿದ ದೇವರುಗಳನ್ನು ಮಾತ್ರವಲ್ಲದೆ ಕೆಳವರ್ಗದವರು ಹೆಚ್ಚಾಗಿ ಪೂಜಿಸುತ್ತಿದ್ದ ನಾನಾ ಕ್ಷುದ್ರ ದೈವೋಪಾಸನೆಯು ಕೂಡಾ ವಚನಕಾರರ ವಚನಗಳ ಖಂಡನೆಗೆ ಗುರಿಯಾಯಿತು.

'ಮಡಕೆ ದೈವ, ಮೊರದೈವ, ಬೀದಿಯ ಕಲ್ಲುದೈವ

ದಣಿಗೆ ದೈವ, ಬಿಲ್ಲನಾರಿ ದೈವ, ಕಾಣಿರೋ

ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೋ

ದೈವ ದೈವವೆಂದು ಕಾಲಿಡಲಿಂಬಿಲ್ಲ

ದೈವನೊಬ್ಬನೆ ಕೂಡಲಸಂಗಮದೇವ'

(ಬಸವಣ್ಣನವರ ವಚನ ಸಂಪುಟ, ವ.ಸಂ. ೫೬೨)

ಎಂದು ಕ್ಷುದ್ರ ದೈವದ ಪೂಜಕರನ್ನು, ಹಲವು ದೇವರನ್ನು ಪೂಜಿಸುತ್ತಿದ್ದವರನ್ನು ಏಕದೈವೋಪಾಸನೆಯ ಮಾರ್ಗಕ್ಕೆ ವಚನಗಳು ಸೇರಿಸಿದವು. ವೈದಿಕದಲ್ಲಿದ್ದ ವಿಷ್ಣು, ಬ್ರಹ್ಮ ಮತ್ತು ರುದ್ರರಿಗೆ ಬದಲಾಗಿ ಶಿವನನ್ನು ಪರ್ಯಾಯವಾದ ದೇವರಾಗಿ ನೀಡಿದವು. ವಚನಗಳಲ್ಲಿ ಕಂಡು ಬರುವ ಶಿವನು ವೇದಕಾಲದಿಂದ ಬಂದ ರುದ್ರನಿಗಿಂತ ಭಿನ್ನವಾದವನು ಎಂಬ ಅಭಿಪ್ರಾಯ ಹಲವು ವಚನಕಾರರ ವಚನಗಳಲ್ಲಿ ಇವೆ. ಈ ರೀತಿ ಹಿಂದಿನಿಂದಲೂ ಬಂದ ತ್ರಿಮೂರ್ತಿಗಳು, ನಾನಾ ದೈವಂಗಳು, ಕ್ಷುದ್ರ ದೇವತೆಗಳು ಇವೆಲ್ಲವುಗಳನ್ನು ನಿರಾಕರಿಸಿ ಅದಕ್ಕೆ ಪರ್ಯಾಯವಾಗಿ ಎಲ್ಲರಿಗೂ ಸಮಾನವಾದ ಶಿವನನ್ನು ನೀಡಿರುವುದು ಕೂಡಾ ವಚನಗಳ ಪರ್ಯಾಯ ಚಿಂತನೆಯ ನೆಲೆಯನ್ನು ತೋರಿಸುತ್ತದೆ.

ವಚನಗಳಲ್ಲಿ ವೈದಿಕ ಧರ್ಮದ ಆಚರಣೆಗಳಿಗೆ ಸರಿಸಮಾನವಾದ ಕೆಲವು ವಿಧಿಗಳನ್ನು ಶರಣ ಸಂಸ್ಕೃತಿಯಲ್ಲಿ ಪರ್ಯಾಯವಾಗಿ ರೂಪುಗೊಂಡಿವೆ. ವೈದಿಕರಲ್ಲಿ ಹುಟ್ಟಿನಿಂದ ಯಾರು ಬ್ರಾಹ್ಮಣರಲ್ಲ. ಅವರಿಗೆ ಉಪನಯನದ ಸಂಸ್ಕಾರವನ್ನು ಮಾಡಿ ಅವರನ್ನು ದ್ವಿಜರನ್ನಾಗಿ ಮಾಡಿ ಬ್ರಾಹ್ಮಣತ್ವಕ್ಕೆ ಅರ್ಹರೆನಿಸುವಂತೆ ಮಾಡುತ್ತಾರೆ. ವಚನಕಾರರ ವಚನಗಳಲ್ಲೂ ಜಂಗಮನ ಮಗ ಜಂಗಮನಾಗಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿ ವೈದಿಕ ಆಚರಣೆಗಳಿಗೆ ಸರಿಸಮಾನವಾದ ದೀಕ್ಷೆಯಂತಹ ವಿಧಿಯೊಂದನ್ನು ಪರ್ಯಾಯವಾಗಿ ರೂಪಿಸಿದವು.

'ಆಕಳ ಹೊಟ್ಟೆಯಲ್ಲಿ ಹೋರಿ ಹುಟ್ಟಿದಡೇನು?
ಲಿಂಗ ಮುದ್ರೆಯನೊತ್ತುವನ್ನಕ್ಕ ಬಸವನಲ್ಲ
ಜಂಗಮದ ಆತ್ಮದಲ್ಲಿ ಪಿಂಡ ಉತ್ಪತ್ತಿಯಾದಡೇನು?
ದೀಕ್ಷಿತನಾಗದನ್ನಕ್ಕ ಜಂಗಮದೇವನಲ್ಲ'

(ಚೆನ್ನಬಸವಣ್ಣನವರ ವಚನಸಂಪುಟ, ವ.ಸಂ. ೯೮೦)

ಇವುಗಳಲ್ಲದೆ, ವೈದಿಕರಲ್ಲಿದ್ದ ವಿವಾಹದ ಪದ್ಧತಿಯ ಆಚರಣೆಗಳಲ್ಲಿ ಹಲವು ಬದಲಾವಣೆಗಳನ್ನು ಮಾಡಿ ಲಿಂಗಭಕ್ತನಾದವನು ವಿವಾಹದಲ್ಲಿ ಶಿವಗಣಂಗಳಿಗೆ ವಿಭೂತಿ, ವೀಳೆಯುವ ಕೊಟ್ಟು ಆರೋಗಣೆಯ ಮಾಡಿಸಿ ಶಿವಗಣಂಗಳ ಸಾಕ್ಷಿಯಾಗಿ ಪ್ರಸಾದವನ್ನಿಕ್ಕುವುದೇ ಸದಾಚಾರ ಎಂದು ನಿಯಮಿಸಿದವು. ಹಾಗೆಯೇ ಲಿಂಗಭಕ್ತರು ಮೃತಪಟ್ಟಾಗ ವೈದಿಕರಲ್ಲಿದ್ದ ಸುಡುವ ಪದ್ಧತಿಗೆ ಬದಲಾಗಿ ಹೂಳುವುದನ್ನು ಪರ್ಯಾಯವನ್ನಾಗಿ ವಚನಕಾರರ ವಚನಗಳು ನೀಡಿದವು. ವಚನಗಳ ಪ್ರಕಾರ ಪಂಚಾಕ್ಷರಿ ಮಂತ್ರದಲ್ಲಿ ದಗ್ಧವಾದವನನ್ನು ಮತ್ತೆ ಸುಡುವರೇ ಎಂದು ಹೇಳಿರುವುದನ್ನು ಗಮನಿಸಬಹುದು.

ವೈದಿಕ ಆಚರಣೆಯಲ್ಲಿ ದೇವಾಲಯಗಳಿಗೆ ಹಾಗೂ ಪೂಜೆಯನ್ನು ನೆರವೇರಿಸುವ ಪೂಜಾರಿ–ಪುರೋಹಿತರಿಗೆ ಅಗ್ರಸ್ಥಾನವಿತ್ತು. ಈ ದೇವಾಲಯಗಳು ಅಂದು ಉಳ್ಳವರ, ಮೇಲ್ವರ್ಗದವರ ಪಾಲಿಗೆ ಮಾತ್ರ ಇದ್ದು ಕೆಳವರ್ಗದಿಂದ ಬಂದವರಿಗೆ ಅದರೊಳಗೆ ಪ್ರವೇಶವೂ ಇರಲಿಲ್ಲ. ದೇವಸ್ಥಾನವು ದೂರ ತಳ್ಳಿದ್ದ ಕೆಳವರ್ಗದ ಜನರನ್ನು ವಚನಗಳು ದೇವಾಲಯದೊಳಗೆ ಕರೆದುಕೊಂಡು ಹೋಗುವ ಪ್ರಯತ್ನವನ್ನು ಮಾಡಲಿಲ್ಲ. ಬದಲಾಗಿ ಆ ಕಾಲದಲ್ಲಿ ಶೋಷಣೆಯ ನೆಲೆಯಾಗಿದ್ದು, ಅನೇಕ ಅಕ್ರಮಗಳು ನಡೆಯುತ್ತಿದ್ದ ದೇವಾಲಯಗಳ ಅಸ್ತಿತ್ವವನ್ನೇ ನಿರಾಕರಿಸುವುದರ ಮೂಲಕ ಅದರ ಶ್ರೇಷ್ಠತೆಯನ್ನು ವಚನಗಳು ಪ್ರಶ್ನಿಸಿದವು. ಪರಂಪರೆಯಿಂದ ಬಂದ ದೇವಾಲಯಗಳನ್ನಾಗಲೀ, ಅಲ್ಲಿನ ಸ್ಥಾವರ ಮೂರ್ತಿಯ ಪೂಜೆಯನ್ನಾಗಲೀ ಸಾಮಾನ್ಯ ಮನುಷ್ಯನಾದವನು ಸುಲಭವಾಗಿ ಬಿಟ್ಟುಬಿಡಲಾರ. ಆ ಚಿಂತನೆಯನ್ನು ಅವನು ಅರಗಿಸಿಕೊಳ್ಳಲಾರ. ಆದರೆ ವಚನಗಳು ಅದಕ್ಕೆ ಬದಲಿಯಾಗಿ ಯಶಸ್ವಿಯಾದ ಪರ್ಯಾಯವನ್ನು ಕಟ್ಟಿಕೊಟ್ಟವು.

ವಚನಕಾರರ ವಚನಗಳು ದೇವಾಲಯಗಳ ನಿರ್ಮಾಣವನ್ನೇನೂ ವಿರೋಧಿಸಿರಲಿಲ್ಲ. ಆದರೆ ದೇವಾಲಯಗಳು ಉಳ್ಳವರ ಸ್ವತ್ತಾಗಿದ್ದು ಸಾಮಾನ್ಯನಿಗೆ ಅದು ದೂರವಾಗಿದ್ದಾಗ ದೇಹವನ್ನೇ

ದೇಗುಲವನ್ನಾಗಿಸಿದವು ವಚನಗಳು. ದೇವಾಲಯದ ಸ್ಥಾವರ ಲಿಂಗದ ಬದಲು ದೇಹದ ಮೇಲೆ ಇಷ್ಟಲಿಂಗವನ್ನು ಕಟ್ಟಿಕೊಂಡು ಅದನ್ನು ತ್ರಿಕಾಲ ಪೂಜಿಸುವ ಮೂಲಕ ಮೋಕ್ಷವನ್ನು ಪಡೆಯಬಹುದೆಂಬ ಪರ್ಯಾಯವನ್ನು ನೀಡಿದವು.

ವಚನಗಳು ಪ್ರಮುಖವಾಗಿ ನೀಡಿದ ಪರ್ಯಾಯ ಚಿಂತನೆಗಳಲ್ಲಿ ಇಷ್ಟಲಿಂಗದ ಪರಿಕಲ್ಪನೆಯೂ ಒಂದು. ವೀರಶೈವಕ್ಕೂ ಮೊದಲೇ ಪ್ರಚಲಿತವಿದ್ದಂತಹ ಶೈವ ಧರ್ಮವೂ ಇಷ್ಟಲಿಂಗದ ಆರಾಧನೆಯನ್ನು ಹೇಳಿದ್ದರೂ ಅದಕ್ಕೆ ಹೆಚ್ಚಿನ ಒತ್ತು ನೀಡಿ ವ್ಯಕ್ತಿ ವಿಶಿಷ್ಟವಾದ ದೈವ ಪ್ರತೀಕವಾದ ಇಷ್ಟಲಿಂಗಕ್ಕೆ ಮಹತ್ವವನ್ನು ತಂದುಕೊಟ್ಟಿದ್ದು ೧೨ನೇ ಶತಮಾನದ ವಚನಕಾರರ ವಚನಗಳು. ಮಿಕ್ಕ ದೈವಗಳ ಪೂಜೆ ಮಾತ್ರವಲ್ಲದೆ ಲಿಂಗಪ್ರತಿಷ್ಠೆ ಸ್ಥಾವರ ಲಿಂಗಪೂಜೆಗಳು ವೀರಶೈವಕ್ಕೆ ಪ್ರತಿಗಾಮಿಯೆಂದು ಸಾರಿ ತಮ್ಮ ದೇಹಗಳ ಮೇಲೆ ಸದಾ ರಾರಾಜಿಸುವ ಒಷ್ಟಲಿಂಗವನ್ನು ಶರಣನಾದವನು ಪೂಜಿಸಬೇಕೆಂದು ನಿಯಮಿಸಿದ್ದು ವಚನಗಳೆ.

ವರ್ತಮಾನದಲ್ಲಿ ವಚನಗಳ ಆಲೋಚನೆಗಳು

ವಾಸ್ತುದೋಷ :

ಪ್ರಸ್ತುತ ಕಾಲದಲ್ಲಿ ಜನರ ಭಯ-ಆಸೆ-ಅಜ್ಞಾನಗಳು, ಸ್ವಾರ್ಥ ವಂಚಕರಿಗೆ ಬಂಡವಾಳವಾಗಿದೆ. ಭಯ ಪಡುವವರ ಮೇಲೆ ಜಿರಲೆ ಎಸೆಯುವವರು ನೂರಾರು ಮಂದಿ! ಬುದ್ಧಿಯಿಲ್ಲದವರಿಗೆ ಟೋಪಿ ಹಾಕಲು ಸರದಿಯ ಸಾಲೇ ಇದೆ. ತಪ್ಪು ಅವರದಲ್ಲ. ಜನರಲ್ಲಿರುವ ಭಯ-ಆಸೆ-ಅಜ್ಞಾನ. ಸ್ವಾರ್ಥ ಜನರು ಮಾಡುವ ಶೋಷಣೆಗೆ ಸಿಕ್ಕಿ ಪಾಡುಪಡುವುದೇ ಶಿಕ್ಷೆ. ಸಾಕು, ಇನ್ನಾದರೂ ಸತ್ಯವನ್ನು ತಿಳಿದು ಅಜ್ಞಾನದಿಂದ ಜ್ಞಾನದ ಕಡೆಗೆ ಸಾಗೋಣ ಸಾವು, ನೋವು, ನಷ್ಟ-ಜೀವನದ ಅವಿಭಾಜ್ಯ ಅಂಗಗಳು. ಎಚ್ಚರಿಕೆ, ಮುಂದಾಲೋಚನೆ, ಸದಾಚಾರ ಮತ್ತು ಸದ್ವಿಚಾರಗಳಿಂದ ಅವುಗಳನ್ನು ನೇರವಾಗಿ ಎದುರಿಸುವುದೊಂದೇ ಮಾರ್ಗ. ಭಯ ಪಡುವುದರಿಂದಾಗಲಿ ಎದುರಿಸಲು ಹೆದರಿ ಹೇಡಿತನದಿಂದ ವಂಚಕರಿಗೆ ಆಗುವುದಾಗಲೀ ಪರಿಹಾರವಲ್ಲ. ತೊಂದರೆ ಬಾರದಂತೆ ಯೋಚಿಸೋಣ, ಯೋಜಿಸೋಣ, ಬಂದಲ್ಲಿ ಎದುರಿಸುವ ಧೈರ್ಯವನ್ನು ಕುದರಿಸಿಕೊಳ್ಳೋಣ.

ಹೀಗೊಂದು ಪರಿಹಾರ :-ಸೈಟು ೩೦x೪೦. ವಾಸ್ತುವಿನ ಪ್ರಕಾರ ಶೌಚಾಲಯ ೧೦೦ ಅಡಿ ದೂರವಿರಬೇಕು. ಪರಿಹಾರ ಹೇಗೆ? ದೇವರ ದಯೆ! ನಾಲ್ಕು ಸೈಟಿನ ಆಚಿನ ಸೈಟಿನವನಿಗೂ ಇದೇ ಸಮಸ್ಯೆ! ಪರಿಹಾರ ಸಿಕ್ಕಿಯೇ ಬಿಟ್ಟಿತು!! ಅವರ ಶೌಚಾಲಯ ಇವರ ಸೈಟಿನಲ್ಲಿ!! ಶೌಚಾಲಯ ಏಕೆ ದೂರವಿರಬೇಕು? ಆರೋಗ್ಯ ದೃಷ್ಟಿಯಿಂದ ಅದು ದೂರವಿರುವುದೇ ಕ್ಷೇಮ. Attached bath ಯುಗದಲ್ಲಿ ಇದರ ಮಹತ್ವ ತಿಳಿಯುವುದಾದರೂ ಹೇಗೆ? ಮೇಲಿನ ಪರಿಹಾರ ವೈಜ್ಞಾನಿಕ ವಾಸ್ತುವಿನ ಅವಹೇಳನ ಮಾತ್ರ. ಇಂದು ಮೂರ್ಖ ವಾಸ್ತುವಿನ ಹಾವಳಿ ಜಾಸ್ತಿಯಾಗಿರುವುದು. ನಮ್ಮ ಸಾಮಾನ್ಯಜ್ಞಾನ ಎಷ್ಟು ಅ-ಸಾಮಾನ್ಯವಾಗಿದೆ ಎಂಬುದನ್ನು ತೋರಿಸುತ್ತದೆ.

ಎಲ್ಲವೂ ಚೆನ್ನಾಗೇ ಇತ್ತು! ನೀವು ಆರೋಗ್ಯವಾಗಿಯೇ ಇದ್ದೀರೆನ್ನಿ. ಆದರೂ ಡಾಕ್ಟರರ ಬಳಿಗೆ ಹೋದಾಗ ಅವರು ನಿಮ್ಮನ್ನು ಹಾಗೆಯೇ ಕಳಿಸಿದರೆ ಖಾಯಿಲೆಯ ಹೆಸರು ಹೇಳದಿದ್ದರೆ, ಪಾಪ!! ಅವರಿಗೂ ಸಮಾಧಾನವಿಲ್ಲ, ನಿಮಗೂ ತೃಪ್ತಿಯಿಲ್ಲ. ಈ ವಾಸ್ತು ಶಾಸ್ತ್ರಿಗಳ ಹಣೇಬರಹವೂ ಇದೇ. ಅವರ ಕಣ್ಣಿಗೆ ಕಾಣುವ ಯಾವುದೇ ಕಟ್ಟಡ ವಾಸ್ತುವಿನ ದೃಷ್ಟಿಯಿಂದ ಸರಿಯಾಗಿರುವುದಿಲ್ಲ. ಅದು ಸರಿಯಾಗಬೇಕಾದರೆ ಅವರಿಂದಲೇ ಸಲಹೆ ಪಡೆದು, ದಕ್ಷಿಣೆ ತೆತ್ತು (ಕೆಲವರ ಸಲಹೆ ಬಿಟ್ಟಿಯಿರಬಹುದು!), ಕಿಟಕಿ, ಬಾಗಿಲುಗಳ ಸ್ಥಾನಪಲ್ಲಟ ಮಾಡಲೇಬೇಕು. ಅಷ್ಟೆಲ್ಲಾ ಆದಮೇಲೆ ಅದನ್ನು ಅಪ್ಪಿತಪ್ಪಿ ಮತ್ತೊಬ್ಬ ವಾಸ್ತುಶಾಸ್ತ್ರಿಗಳಿಗೆ ತೋರಿಸೀರಿ, ಜೋಕೆ! ಜೇಬು ಹಗುರವಾಗುವ ಸಂಭವವೇ ಹೆಚ್ಚು. ವಾಸ್ತುಶಾಸ್ತ್ರಿಗಳು ನಮ್ಮ ಮನೆಗೆ ಆಗಮಿಸುವವರೆಗೂ ಮನೆಯವರೆಲ್ಲರ ಆರೋಗ್ಯ, ಸಂಪಾದನೆ, ಸಾಮರಸ್ಯ ಚೆನ್ನಾಗಿದ್ದುದು, ಅವರು ಬಂದುಹೋದ ನಂತರ ಬಿಗಡಾಯಿಸುತ್ತದೆ. ಅಲ್ಲಿಯವರೆಗೂ ಸುಮ್ಮನಿದ್ದ ಕಿಟಕಿ, ಬಾಗಿಲುಗಳು ನಮ್ಮ ವಿರುದ್ಧ ಏನೋ ಮಸಲತ್ತು ಮಾಡುತ್ತಿರುವಂತೆ ಭಾಸವಾಗುತ್ತದೆ! ಇನ್ನು ಸುಮ್ಮನಿರಲು ಸಾಧ್ಯವೇ? ಚೆನ್ನಾಗಿರುವುದನ್ನು ಕುಟ್ಟಿ, ಚಚ್ಚಿ, ಒಡೆದು, ಅನುಕೂಲವೋ ಅನಾನುಕೂಲವೋ ಅಂತೂ ಬದಲಾಯಿಸಿದ ಮೇಲೆ, ಅನೇಕರ ಅಳಲು – 'ಎಲ್ಲವೂ ಚೆನ್ನಾಗಿಯೇ ಇತ್ತು'!!

ಆರೋಗ್ಯ, ಸಂಪಾದನೆ, ಸಾಮರಸ್ಯ ಚೆನ್ನಾಗಿಲ್ಲದಿದ್ದಲ್ಲಿ? ವಾಸ್ತುದೋಷಗಳನ್ನು ಸರಿಪಡಿಸಿದರೆ ಆರೋಗ್ಯ, ಸಂಪಾದನೆ, ಸಾಮರಸ್ಯಗಳು ಸಿಗುತ್ತವೆ- ಎಂದು ವಾಸ್ತುಶಾಸ್ತ್ರಿಗಳು ಬೇಕಿದ್ದರೆ ಕೊಚ್ಚಿಕೊಳ್ಳಬಹುದು. ಇದು ಸತ್ಯವೇ ಆಗಿದ್ದ ಪಕ್ಷದಲ್ಲಿ ಆರೋಗ್ಯ, ಸಂಪಾದನೆ, ಸಾಮರಸ್ಯಗಳಿಗಾಗಿ ಪ್ರತಿಯೊಬ್ಬರೂ ನಡೆಸುತ್ತಿರುವ ದೊಂಬರಾಟವನ್ನು ನಿಲ್ಲಿಸಬಹುದಲ್ಲವೆ? ಆಸ್ಪತ್ರೆಗಳೇಕೆ? ಔಷಧಿ, ಚಿಕಿತ್ಸೆಗಳೇಕೆ? ಆರೋಗ್ಯ ನಿಯಮಗಳ ಪಾಲನೆಯೇಕೆ? ವ್ಯಾಪಾರ-ವಹಿವಾಟೇಕೆ? ಲೆಕ್ಕಾಚಾರಗಳೇಕೆ? ರೀತಿ-ನೀತಿಗಳೇಕೆ? ಸಂಘ-ಸಹಕಾರಗಳೇಕೆ? ವಾಸ್ತುವಿನ ಪ್ರಕಾರ ಮನೆ, ಕಾರ್ಯಾಲಯಗಳನ್ನು ಕಟ್ಟಿಬಿಟ್ಟರೆ ಸಾಕು, ಸುಖ-ಸಮೃದ್ಧಿಗಳ ಮಾಯಾಲೋಕ ನಿರ್ಮಾಣವಾದಂತೆಯೇ ಇಲ್ಲದಿದ್ದರೆ ಆ ಮನೆಯಲ್ಲಿ ಶಾಂತಿ, ಸಮಾಧಾನ ನೆಲೆಸುವುದಿಲ್ಲ. ಸಂಪತ್ತು ವೃದ್ಧಿಯಾಗುವುದಿಲ್ಲ. ನೋವು ಹಾನಿಗಳು ತಪ್ಪುವುದಿಲ್ಲ ಎಂದೆಲ್ಲಾ ಭಯ ಹುಟ್ಟಿಸುತ್ತಾರೆ. ಕೆಲವರು ಆ ಮನೆಮುರುಕರ ಮಾತು ಕೇಳಿ ಕಟ್ಟಿದ ಮನೆಯನ್ನು ಕೆಡವಿ ವಾಸ್ತುವಿಧಾನ ಅಳವಡಿಸುತ್ತಿದ್ದಾರೆ. ಹಾಗೆ ಅಳವಡಿಸಿದರೂ ಶಾಂತಿ, ಸಮಾಧಾನ ನೆಲೆಗೊಂಡಿಲ್ಲ. ಏಕೆಂದರೆ ಶಾಂತಿ ಸಮಾಧಾನಕ್ಕೆ ವಾಸ್ತು ಮುಖ್ಯವಲ್ಲ. ದೊಡ್ಡ ಮನೆ ಮುಖ್ಯವಲ್ಲ. ಒಳ್ಳೆಯ ಮನಸ್ಸು ಮುಖ್ಯ. ಸಂತೃಪ್ತಿ ಮುಖ್ಯ. ಎಲ್ಲದಕ್ಕಿಂತಲೂ ಮಿಗಿಲಾಗಿ ಧೈರ್ಯ, ತಾಳ್ಮೆ ಮುಖ್ಯ. ಈ ಕುರಿತು ವಚನವಂದರ ಆಲೋಚನೆಯನ್ನು ಅವಲೋಕಿಸಿದರೆ,

'ಮನೆ ನೋಡಾ ಬಡವರು, ಮನ ನೋಡಾ ಘನ.
ಸೋಂಕಿನಲ್ಲಿ ಸುಖಿ, ಸರ್ವಾಂಗ ಕಲಿಗಳು.
ಪಸರಕ್ಕನುವಿಲ್ಲ, ಬಂದ ತತ್ಕಾಲಕ್ಕುಂಟು,
ಕೂಡಲಸಂಗನ ಶರಣರು ಸ್ವತಂತ್ರ ಧೀರರು' (ಸ.ವ.ಸಂ:೧ ವ.ಸಂ, ೩೨೬)

ಘನ ಮನವುಳ್ಳವರು, ಪರಮಾತ್ಮನಲ್ಲಿ ನಿಷ್ಠೆಯುಳ್ಳವನು, ಸಂಯಮಶೀಲರು, ಸಂತೃಪ್ತಿವುಳ್ಳವರು, ಕಷ್ಟಗಳನ್ನು ಎದುರಿಸುವ ಧೀರರು ಎಂಥ ಮನೆಯಲ್ಲಿದ್ದರೂ ಸದಾ ಶಾಂತಿ, ಸಮಾಧಾನದಿಂದ ಇರುತ್ತಾರೆ. ಮಹಲಿನಲ್ಲಿ ಇರುವವರು ತೃಪ್ತರಿರುತ್ತಾರೆ ಎಂದೇನೂ ಅಲ್ಲ. ಗುಡಿಸಲಿನಲ್ಲಿ ಇರುವವರು ಅತೃಪ್ತರಿರುತ್ತಾರೆ ಎಂದೇನೂ ಅಲ್ಲ. ಬದುಕುವ ಕಲೆ ಗೊತ್ತಿದ್ದರೆ ಗುಡಿಸಲೇ ಸ್ವರ್ಗ ಆಗಿಬಿಡುತ್ತದೆ. ಇಲ್ಲ ವಾದರೆ ಮಹಲೂ ನರಕವಾಗುತ್ತದೆ.

ಮನೆಯಲ್ಲಿರುವವರ ಮನಸ್ಸುಗಳಲ್ಲಿ ಹೊಂದಾಣಿಕೆ ಇರದಿದ್ದರೆ, ಮನಸ್ಸು ಬಡವಾಗಿದ್ದರೆ ಎಂಥ ಮನೆ ಇದ್ದರೂ ಅಲ್ಲಿ ಶಾಂತಿ ಸಮಾಧಾನವಿರುವುದಿಲ್ಲ. 'ಹೊರಗಣ ಶ್ರೀಂಗಾರ, ಒಳಗಣ ರಣರಂಗ' ಎಂದು ಅಲ್ಲಮರು ಹೇಳುವಂತೆ ಹೊರಗೆ ನೋಡಲು ಸುಂದರವಾದ, ಅಂದವಾದ ಅರಮನೆಯಾಗಿದ್ದರೂ ಹೊಂದಾಣಿಕೆಯ ಕೊರತೆಯಿಂದಾಗಿ ಒಳಗೆ ರಣರಂಗವಾಗಿರುತ್ತದೆ.

ಅದಕ್ಕಾಗಿ ವಾಸ್ತುವಿಗೂ ಮತ್ತು ಶಾಂತಿ, ಸಮಾಧಾನಕ್ಕೆ ಯಾವುದೇ ಸಂಬಂಧವಿಲ್ಲ. ವಿವೇಚನೆ ಮತ್ತು ಶಾಂತಿಗೂ ನೇರ ಸಂಬಂದವಿದೆ. 'The more considerate we are, the more peaceful we become' ಎಂಬಂತೆ ವಿವೇಚನೆ ಹೆಚ್ಚಿದಂತೆ ಶಾಂತಿ ಹೆಚ್ಚುತ್ತದೆ.

ವಾಸ್ತುಶಾಸ್ತ್ರದ ಪ್ರಕಾರ ದೇವರ ಮನೆ ಈಶಾನ್ಯದಲ್ಲಿರಬೇಕು. ಅಷ್ಟೆ ಅಲ್ಲದೆ ದೇವರ ಮುಖ ಮತ್ತು ಪೂಜೆ ಮಾಡುವವರ ಮುಖ ನಿರ್ದಿಷ್ಟ ದಿಕ್ಕಿನಲ್ಲಿಯೇ ಇರಬೇಕು. ಇದು ಅನೌಪಚಾರಿಕವಾದುದು. ಏಕೆಂದರೆ ಜಗದಗಲ, ಮುಗಿಲಗಲ, ಮಿಗೆಯಗಲ ಪರಮಾತ್ಮನು ವಿಶ್ವವ್ಯಾಪಿಯಾಗಿದ್ದಾನೆಂದು ಬಸವಣ್ಣನವರ ವಚನವು ಹೇಳುತ್ತದೆ.

'ಎತ್ತೆತ್ತ ನೋಡಿದತ್ತತ್ತ ನೀನೆ ದೇವಾ,
ಸಕಲ ವಿಸ್ತಾರದ ರೂಹು ನೀನೆ ದೇವಾ,
'ವಿಶ್ವತಶ್ಚಕ್ಷು' ನೀನೆ ದೇವಾ,
'ವಿಶ್ವತೋಮುಖ' ನೀನೆ ದೇವಾ
'ವಿಶ್ವತೋಬಾಹು' ನೀನೆ ದೇವಾ
'ವಿಶ್ವತಃ ಪಾದ' ನೀನೆ ದೇವ, ಕೂಡಲಸಂಗಮದೇವಾ.' (ವ.ಶಾ.ಸಾ.ವ ೪೬)

ದೇವರು ಎಲ್ಲೆಡೆಯೂ ಇರುವಾಗ ದೇವರ ಮನೆ ಯಾವ ದಿಕ್ಕಿನಲ್ಲಿದ್ದರೇನು? ಪೂಜೆ ಮಾಡುವವರ ಮುಖ ಯಾವ ದಿಕ್ಕಿನಲ್ಲಿದ್ದರೇನು? ದೇವರು ಕಾಡುವುದಿಲ್ಲ. ಕಾಡುವವ ದೇವರಲ್ಲ ಎಂಬ ಸತ್ಯದ ಅರಿವಾಗಬೇಕು. ಆಗ ಮಾತ್ರ ದೇವರ ಭಯ ಹೋಗುತ್ತದೆ. ಹೀಗೆ ವಾಸ್ತು ಶಾಸ್ತ್ರದಲ್ಲಿ ಅನೇಕ ಅವೈಚಾರಿಕ, ಅವೈಜ್ಞಾನಿಕ ಸಂಗತಿಗಳಿವೆ. ಅದಕ್ಕಾಗಿ ವಾಸ್ತುದೋಷ ಮತ್ತು ಆ ದೋಷ ನಿವಾರಣೆಗೆ ಸೂಚಿಸುವ ಪರಿಹಾರಗಳಲ್ಲಿ ಅರ್ಥವಿಲ್ಲ.

ಒಟ್ಟಿನಲ್ಲಿ ಜಾತಕದೋಷ, ಸರ್ಪದೋಷ, ಜನನ-ಮರಣದೋಷ, ವಾಸ್ತುದೋಷ ಮುಂತಾದ ದೋಷಗಲಲ್ಲಿ ಹಾಗೂ ದೇವರಕಾಟ, ನವಗ್ರಹಗಳ ಕಾಟ ಮುಂತಾದ ದುರಿತಗಳಲ್ಲಿ ಹುರುಳಿಲ್ಲ. ತಮ್ಮ ಸ್ವಾರ್ಥಕ್ಕಾಗಿ ಪುರೋಹಿತರು, ಜ್ಯೋತಿಷಿಗಳು, ವಾಸ್ತು ಶಾಸ್ತ್ರಜ್ಞರು ಸೃಷ್ಟಿಸಿದ ಬೆದರು ಗೊಂಬೆಗಳಿವು. ಅವುಗಳಿಗೆ ಹೆದರದೆ ಬದುಕುವವನೆ ವಿವೇಕಿ. 'ದೋಷವೆಲ್ಲಿಯದೋ ದುರಿತವೆಲ್ಲಿಯದೋ ಸಂಗಯ್ಯಾ?' ಎಂದು ಬಸವಣ್ಣನವರು ತಮ್ಮ ವಚನದಲ್ಲಿ ವೈಚಾರಿಕವಾಗಿ ಪ್ರಶ್ನಿಸುತ್ತ ದೋಷ ದುರಿತಗಳನ್ನು ತಳ್ಳಿಹಾಕುತ್ತಾರೆ.

> **'ಲಗ್ನವೆಲ್ಲಿಯದೊ ವಿಘ್ನವೆಲ್ಲಿಯದೊ ಸಂಗಯ್ಯಾ?**
> **ದೋಷವೆಲ್ಲಿಯದೋ ದುರಿತವೆಲ್ಲಿಯದೊ ಸಂಗಯ್ಯಾ?**
> **ನಿಮ್ಮ ನೆನೆವಂಗೆ ಭವಕರ್ಮವೆಲ್ಲಿಯದೊ**
> **ಕೂಡಲಸಂಗಯ್ಯಾ?'** (ವ.ಶಾ.ಸಾ.ವ ೧೫೨೬)

ಬಸವಣ್ಣನವರ ಈ ವಚನದಲ್ಲಿರುವ ವೈಚಾರಕಿ ಪ್ರಶ್ನೆಗಳು ಶುಭ-ಅಶುಭ ಮುಹೂರ್ತ, ಜನನ-ಮರಣ ದೋಷ, ಜಾತಕ ದೋಷ ಮುಂತಾದ ದೋಷಗಳ ಹಾಗೂ ಮನೆದೇವರ ಕಾಟ ನವಗ್ರಹಗಳ ಕಾಟ ಮುಂತಾದ ದುರಿತಗಳ ಬಗೆಗೆ ಇರುವ ಮೂಢನಂಬಿಕೆಗಳನ್ನು ಕಿತ್ತೆಸೆಯುತ್ತವೆ.

ಜ್ಯೋತಿಷ್ಯ :

ವರ್ತಮಾನದಲ್ಲಿ ಪ್ರತಿಯೊಂದು ಊರಿನಲ್ಲಿಯೂ ಜ್ಯೋತಿಷ್ಯಾಲಯಗಳು ನಾಯಿಕೊಡೆಯಂತೆ ಹುಟ್ಟಿಕೊಳ್ಳುತ್ತಿವೆ. ದೂರದರ್ಶನವು ಜ್ಯೋತಿಷ್ಯವನ್ನು ಬಿತ್ತರಿಸುತ್ತಿರುವುದು ಅತ್ಯಂತ ದುರಂತ ಮನುಕುಲದ ಜೊತೆ ಅನಾದಿಕಾಲದಿಂದಲೂ ಪಿಡುಗಿನಂತೆ ಇದ್ದು ದೇಶ ಕಾಲ ಪಾತ್ರಾನುಗುಣವಾಗಿ ವಿವಿಧ ರೂಪ ತಳೆದು ಸರ್ವವ್ಯಾಪಿಯಾಗಿರುವ ಪರಮಶೋಷಣೆಗಳು ಎರಡು-ವ್ಯಭಿಚಾರ ಮತ್ತು ಜ್ಯೋತಿಷ್ಯ. ಮೊದಲನೆಯದು ಒಡಲಿಗೆ ಅಂಟಿದ ಜಾಡ್ಯ, ಎರಡನೆಯದು ಮನಕ್ಕೆ ಮುಸುಕಿನ ಮೌಢ್ಯ.

"ಜೋತಿಷ್ಯಶಾಸ್ತ್ರವು ಬಹುಪುರಾತನವಾದುದು. ವೈದಿಕ ಕಾಲದ ಧಾರ್ಮಿಕ ಕ್ರಿಯೆಗಳಾದ ಯಜ್ಞ ಯಾಗಾದಿಗಳನ್ನು ಆಚರಿಸಲು ಅನುಕೂಲವಾದ ಸುಸಮಯವನ್ನು ಸೂಚಿಸಲು ಹುಟ್ಟಿದ ಈ ಕಾಲ ವಿಜ್ಞಾನ ಬರುಬರುತ್ತ ಧರ್ಮದ ಅಂಗವಾಗಿ ಬೆಳೆದದ್ದರಿಂದ ಹಿಂದೂ ಧರ್ಮದಲ್ಲಾದ ಅವ್ಯವಸ್ಥೆ ಇಲ್ಲೂ ನುಗ್ಗಿತು. ಗೃಹಗಳಿಗೂ ವರ್ಣಾಶ್ರಮ ಧರ್ಮದ ಜನ್ಮ-ಜನ್ಮಾಂತರಗಳ, ಕರ್ಮಸಿದ್ಧಾಂತಗಳ ಬಣ್ಣ ಬಳಿಯಲಾಯಿತು. ವೇದದ ಷಡಂಗಗಳಲ್ಲಿ ಇದು ಒಂದಾಗಿದೆ. ಶಿಕ್ಷಾ, ಛಂದಸ್ಸು, ಕಲ್ಪ, ಜೋತಿಷ್ಯ, ವ್ಯಾಕರಣ, ನಿರುಕ್ತ ಇವೇ ಆ ಅಂಗಗಳು. ಇವುಗಳಲ್ಲಿ ಜ್ಯೋತಿಷ್ಯವು ವೇದ ಪುರುಷನ ಚಕ್ಷವೆಂಬ ಗೌರವಕ್ಕೆ ಪಾತ್ರವಾಗಿದೆ. ಸಹಸ್ರಾರು ವರ್ಷಗಳ ಇತಿಹಾಸವನ್ನು ಒಡೆದ ಈ ಶಾಸ್ತ್ರವನ್ನು ಋಷಿಗಳು ಅಭ್ಯಾಸ ಮಾಡಿ ಜೀವನದಲ್ಲಿ ಪ್ರಯೋಗ ಪರೀಕ್ಷಿಸಿ ಸಿದ್ಧಾಂತ ಕಂಡುಹಿಡಿದಿದ್ದಾರೆಂದು ನಂಬಿಸುತ್ತಿದ್ದಾರೆ"[೩]

ವ್ಯಕ್ತಿ ಜ್ಯೋತಿಷ್ಯದ ದಾಸನಾಗಲು ಕಾರಣಗಳು, ಬದುಕಿನ ಸವಾಲು ಎದುರಿಸುವ ಛಲ ಇಲ್ಲದಿರುವಿಕೆ, ಆಲಸ್ಯ, ಗಾಳಿಗೋಪುರ ಕಟ್ಟಿ ಅದರಲ್ಲಿ ಐಷಾರಾಮವಾಗಿ ವಿಹರಿಸುವ ಕನಸು, ಪರಂಪರೆಯನ್ನು ಪ್ರಶ್ನಿಸುವ ಮನೋಭಾವದ ಕೊರತೆ, ಬದುಕಿನ ಬಗೆಗಿನ ವಿನಾಕಾರಣ ಭಯ ಅಂಜುಬುರುಕನನ್ನು ಹಗ್ಗವೂ ಹಾವಾಗಿ ಹೆದರಿಸುತ್ತದೆ. ಒಂದೊಂದು ಸಲ ಕಾಕತಾಳೀಯವಾಗಿ ಭವಿಷ್ಯ ನಿಜವಾಗಬಹುದು. ಹಾಗೆಂದ ಮಾತ್ರಕ್ಕೆ ಅದೊಂದು ವಿಜ್ಞಾನವೆಂದು ಹೇಳಲಾಗುವುದಿಲ್ಲ.

ಜ್ಯೋತಿಷಿಗಳ ನವಗ್ರಹಗಳ ಪಟ್ಟಿಯಲ್ಲಿರುವ ಗ್ರಹಗಳು ಯಾವುವೆಂದರೆ ಸೂರ್ಯ, ಚಂದ್ರ, ಬುಧ, ಶುಕ್ರ, ಮಂಗಳ, ಗುರು, ಶನಿ, ರಾಹು ಮತ್ತು ಕೇತು. ಇವುಗಳಲ್ಲಿ ಸೂರ್ಯ ಮತ್ತು ಚಂದ್ರರಂತೂ ಗ್ರಹಗಳೇ ಅಲ್ಲ. ರಾಹು, ಕೇತುಗಳ ಭೌತಿಕ ಅಸ್ತಿತ್ವವೇ ಇಲ್ಲ. ಇನ್ನುಳಿದ ಐದು ಗ್ರಹಗಳಾದ ಬುಧ, ಶುಕ್ರ, ಮಂಗಳ, ಗುರು ಮತ್ತು ಶನಿ ಇವು ನಮ್ಮಿಂದ ಕೋಟಿಗಟ್ಟಲೇ ಕಿಲೋಮೀಟರ್ ದೂರದಲ್ಲಿವೆ. ಅವು ನಿರ್ಜೀವ ಬಂಡೆಗಳು ಅಥವಾ ಗುರುಗ್ರಹದಂತೆ ಬರಿ ಅನಿಲ ಬಂಡೆಗಳು ಜ್ಯೋತಿಷಿಗಳು ಅವುಗಳಿಗೆ ಮನುಷ್ಯನ ಗುಣ ಅವಗುಣಗಳನ್ನು ಆರೋಪಿಸಿ ಶನಿ ದುಷ್ಟನೆಂದೂ, ಶುಕ್ರ ಸ್ನೇಹಪರನೆಂದೂ, ಬುಧ ಸೌಮ್ಯನೆಂದೂ, ಮಂಗಳ ಕ್ರೂರಿ ಎಂದೆಲ್ಲಾ ಹೇಳುತ್ತಾರೆ.

ಆದರೆ ಶುಕ್ರನ ಮೇಲ್ಮೈ ಉಷ್ಣತೆ ಮತ್ತು ಒತ್ತಡ ಅತಿಯಾಗಿದ್ದು ಅಲ್ಲಿ ಕೇವಲ ಇಂಗಾಲದ ಡೈ ಆಕ್ಸೈಡ್‌ನ ವಾತಾವರಣ ಇದೆ. ಅಲ್ಲಿ ಜೀವಿ ಬದುಕುವುದು ಅಸಾಧ್ಯ. ಅಂದಮೇಲೆ ಅದೆಂಥ ಸ್ನೇಹಪರ ಗ್ರಹ ಇದ್ದೀತು? ಇದ್ದುದರಲ್ಲಿ ಸಾಹಸಪಟ್ಟು ಇಳಿದು ಅಡ್ಡಾಡಬಹುದಾದ ಗ್ರಹವೆಂದರೆ ಮಂಗಳ. ಆದರೆ ಜ್ಯೋತಿಷಿಗಳ ಪ್ರಕಾರ ಅದು ಕ್ರೂರಿ. ಎಂಥ ವಿಪರ್ಯಾಸ?

ಅದಕ್ಕಾಗಿ ಗ್ರಹಗಳಿಗೆ ಗುಣಗಳನ್ನು ಕಲ್ಪಿಸುವುದು ಮತ್ತು ಅವು ಮನುಷ್ಯನ ಮೇಲೆ ಪ್ರಭಾವ ಬೀರುತ್ತವೆ ಎಂದು ಕವಡೆ ಕುಂಡಲಿಗಳ ಮೂಲಕ ಜ್ಯೋತಿಷ್ಯ ಹೇಳುವುದು ಇಂದಿನ ವಿಜ್ಞಾನ ತಂತ್ರಜ್ಞಾನ ಕಾಲದಲ್ಲಿ ಹಾಸ್ಯಾಸ್ಪದವೆನಿಸುತ್ತದೆ.

ವೈಜ್ಞಾನಿಕವಾಗಿ ಹೇಳುವುದಾದರೆ ಗ್ರಹಗಳು Angular Momentum ದ ಕಾರಣದಿಂದ ತಮ್ಮ ಪಾಡಿಗೆ ತಾವು ಸುತ್ತುತ್ತಿರುತ್ತವೆ. ಅದೊಂದು ನೈಸರ್ಗಿಕ ಕ್ರಿಯೆ. ಅವುಗಳ ಚಲನೆಗೂ ಮನುಷ್ಯನ ಆಗುಹೋಗುಗಳಿಗೂ ಯಾವುದೇ ರೀತಿಯ ಸಂಬಂಧವಿಲ್ಲ.

ಹೀಗಾಗಿ ಜ್ಯೋತಿಷ್ಯಕ್ಕೆ ಯಾವುದೇ ವೈಜ್ಞಾನಿಕ ಆಧಾರಗಳಿಲ್ಲ ಎಂದು ಹೇಳಬೇಕಾಗುತ್ತದೆ. ಭೌತ ನಿಯಮಗಳು ಸರ್ವವ್ಯಾಪಿ ಮಾನವಕೃತ ನಿಯಮಗಳನ್ನು ಭೌತನಿಯಮಗಳಿಗೆ ತಳಕು ಹಾಕುವುದು ಶುದ್ಧ ಅಸಂಬದ್ಧ ಕ್ರಿಯೆ. ಜಡ ಆಕಾಶಕಾಯಗಳಿಗೆ ಪೂಜೆ, ಪ್ರಾರ್ಥನೆ , ಹೋಮ, ಬಲಿ, ಪ್ರಾಯಶ್ಚಿತ್ತ ಮುಂತಾಗಿ ಲಂಚ ಕೊಟ್ಟು ಭೌತನಿಯಮಗಳನ್ನು ತನಗೆ ಅನುಕೂಲವಾಗುವಂತೆಯೂ ತನ್ನ ಶತ್ರುಗಳಿಗೆ ಪ್ರತಿಕೂಲವಾಗುವಂತೆಯೂ ತಾನು ಪರಿವರ್ತಿಸಬಲ್ಲೆ ಎಂಬ ಯೋಚನೆಯು ಭೌದ್ಧಿಕ ದಿವಾಳಿ ಕೋರತನದ ನಿದರ್ಶನ.

ಖಗೋಲಶಾಸ್ತ್ರ (Astonomy) ಬೇರೆ, ಜ್ಯೋತಿಷ್ಯಶಾಸ್ತ್ರ (Astrology) ಬೇರೆ. ಮಳೆ ಗ್ರಹಣಗಳ ಕುರಿತು ಲೆಕ್ಕಹಾಕಿ ಕರಾರುವಕ್ಕಾಗಿ ಹೇಳಲು ಸಾಧ್ಯವಿದೆ. ಆದರೆ ಮನುಷ್ಯನ ಸಮಸ್ಯೆಗಳಿಗೆ ಕುಂಡಲಿ, ಕವಡೆ, ಪಂಚಾಂಗಗಳಿಂದ ಲೆಕ್ಕಹಾಕಿ ಪರಿಹಾರ ಕೊಡಲಿಕ್ಕೆ ಆಗುವುದಿಲ್ಲ.

ನಮ್ಮ ಸಮಸ್ಯೆಗೆ ಪರಿಹಾರವನ್ನು ನಾವೇ ಕಂಡುಕೊಳ್ಳಬೇಕು. ಸಮಸ್ಯೆಯ ಮೂಲಕಾರಣಗಳನ್ನು ತಿಳಿದುಕೊಂಡಾಗ ಪರಿಹಾರ ಸಿಕ್ಕೇ ಸಿಗುತ್ತದೆ. ನಮ್ಮನ್ನು ನವಗ್ರಹಗಳು ಕಾಡುವುದಿಲ್ಲ. ಕಾಡಲಿಕ್ಕೆ ಅವುಗಳಿಗೆ ಕ್ಷಣವೂ ಬಿಡುವಿಲ್ಲ. ನಮ್ಮಲ್ಲಿಯ ಅಜ್ಞಾನ ನಮ್ಮನ್ನು ಕಾಡುತ್ತದೆ. ಅದಕ್ಕಾಗಿ ನವಗ್ರಹಗಳ ಕಾಟ, ಜಾತಕದೋಷ, ಮತ್ತು ಅವುಗಳ ಪರಿಹಾರಕ್ಕಾಗಿ ಮಾಡುವ ಪೂಜೆ ಮುಂತಾದವುಗಳಲ್ಲಿ ಹುರುಳಿಲ್ಲ.

ಗಿಡದ ಎಲೆಯ ಹಿಂಭಾಗದ ರೇಖೆಗಳನ್ನು ನೋಡಿ ಈ ಗಿಡ ಇಷ್ಟೇ ಫಲ ಕೊಡುತ್ತದೆ ಎಂದು ಹೇಳುವುದು ಮೂರ್ಖತನ. ಹಾಗೆಯೇ ಹಸ್ತರೇಖೆ, ಕುಂಡಲಿಯ ಆಧಾರದ ಮೇಲೆ ವ್ಯಕ್ತಿಯ ಆಗುಹೋಗುಗಳ ಭವಿಷ್ಯ ನಿರ್ಣಯ ಮಹಾಮೂರ್ಖತನವಾಗುತ್ತದೆ.

ಮಾನವನ ದೈನಂದಿನ ಚಟುವಟಿಕೆಗಳಲ್ಲಿ ಗ್ರಹಗಳು ಪ್ರತ್ಯಕ್ಷ ಭಾಗವಹಿಸುತ್ತ ಅವನಿಂದ ಲಂಚ ದೊರೆತಾಗ ಅವನಿಗೆ ಒಳ್ಳೆಯದನ್ನು ಕರುಣಿಸುತ್ತವೆ, ದೊರೆಯದಾಗ ಕೇಡನ್ನು ಬಗೆಯುತ್ತವೆ ಎಂದು ಹೆಳುವುದು ಹಾಸ್ಯಾಸ್ಪದವೆನಿಸುತ್ತದೆ.

ಜ್ಯೋತಿರ್ ವಿಜ್ಞಾನ ಮತ್ತು ಜ್ಯೋತಿಷ್ಯ ಶಾಸ್ತ್ರಗಳು ಎರಡೂ ಬೇರೆ ಬೇರೆ. ಜ್ಯೋತಿರ್ ವಿಜ್ಞಾನದಲ್ಲಿ ಸೂರ್ಯ, ಚಂದ್ರ, ಗ್ರಹ, ನಕ್ಷತ್ರ ಇತ್ಯಾದಿ ಆಕಾಶಕಾಯಗಳ ಕುರಿತು ವಿವರಣೆ ಹಾಗೂ ಅಧ್ಯಯನಗಳಿರುತ್ತವೆ. ಜ್ಯೋತಿಷ್ಯದಲ್ಲಿ ಮನುಷ್ಯನ ಮೇಲೆ ನಕ್ಷತ್ರಗಳು, ಗ್ರಹಗಳು ಸೇರಿದಂತೆ ವಿವಿಧ ವಸ್ತುಗಳು ಹೇಗೆ ಪ್ರಭಾವ ಬೀರುತ್ತವೆ ಎಂದು ಅವಕ್ಕೆ ಸಂಬಂಧವಿಲ್ಲದ ಲೆಕ್ಕಚಾರ ಹಾಕುತ್ತ ಜನರನ್ನು ಮರುಳು ಮಾಡುತ್ತ ಜ್ಯೋತಿಷಿಗಳು ಕಾಲ ಕಳೆಯುತ್ತಿದ್ದಾರೆ ಇಂತಹ ಜ್ಯೋತಿಷ್ಯವು ಸಂಪೂರ್ಣ ಸುಳ್ಳು. ಅದನ್ನು ನಂಬುವುದರಲ್ಲಿ ಅರ್ಥವೇ ಇಲ್ಲ. ಜ್ಯೋತಿಷಿಗಳಿಗೆ ತಮ್ಮ ಭವಿಷ್ಯವೇ ಸರಿಯಾಗಿ ತಿಳಿದಿಲ್ಲದಿರುವಾಗ ಇನ್ನೊಬ್ಬರ ಭವಿಷ್ಯವನ್ನು ಹೇಗೆ ಹೇಳುತ್ತಾರೆ ಎಂದು ೧೭ನೇಯ ಶತಮಾನದಲ್ಲಿ ಷಟ್‌ಸ್ಥಲ ಚಕ್ರವರ್ತಿ ಎಂದು ಖ್ಯಾತನಾದ ವಚನಕಾರ ಚೆನ್ನಬಸವಣ್ಣ ತಮ್ಮದೊಂದು ವಚನದಲ್ಲಿ ಸ್ಪಷ್ಟಪಡಿಸುತ್ತ ಹೋಗುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಅನೇಕ ಕಥೆ, ಉದಾಹರಣೆಗಳನ್ನು ನೀಡಿ ಎಲ್ಲರಿಗೂ ಮನನವಾಗುವಂತೆ ಮಾಡುತ್ತಾರೆ ಆ ವಚನ ಹೀಗಿದೆ,

'ಶಿವತಂತ್ರದಿಂದ ಸುಖದುಃಖಂಗಳು ಬರುತಿಹವು ಎಂದರಿಯದೆ,

ನರಗುರಿಗಳಿಗೆ ರೋಗ ದಾರಿದ್ರ್ಯ ಅಪಜಯಂಗಳು ಬರುತ್ತಿರಲು,

ವಿಪ್ರಗೆ ಕೈ ಮುಗಿದು ಕಾಣಿಕೆಯನಿಕ್ಕಿ ತನ್ನ ಹೆಸರ ಹೇಳಿ

ಸೂರ್ಯಬಲ ಚಂದ್ರಬಲ ಬ್ರಹಸ್ಪತಿಬಲ ನವಗ್ರಹಬಲವ
ಕೇಳುವವರಿಗೆ ಎಲ್ಲಿಯದೋ ಶಿವಭಕ್ತಿ?
ಸೂರ್ಯನು ಜ್ಞಾನವುಳ್ಳವನಾದಡೆ,
ಗೌತಮ ಮುನೀಶ್ವರನ ಹೆಂಡತಿ ಅಹಲ್ಯಾದೇವಿಗೆ ಮೋಹಿಸಿ
ಮುನಿಯ ಶಾಪದಿಂದ ಕಷ್ಟದೊಳಗಿಹನೆ?
ಅಲ್ಲದೆ, ದಕ್ಷನ ಯಾಗದಲ್ಲಿ ಹಲ್ಲ ಹೋಗಲಾಡಿಸಿಕೊಂಬನೆ?
ಚಂದ್ರನು ಜ್ಞಾನವುಳ್ಳವನಾದಡೆ,
ಗುರುವಿನ ಹೆಂಡತಿಯ ಕೊಂಡೊಯ್ದು ಜಾತಜ್ವರದಲ್ಲಿ ಅಳಲುತಿಹನೆ?
ಬೃಹಸ್ಪತಿ ಜ್ಞಾನವುಳ್ಳವನಾದಡೆ ಸಕಲ ಜ್ಯೋತಿಷ್ಯಗಳ ನೋಡಿ
ವಿವಾಹವಾದ ಹೆಂಡತಿ ರೋಹಿಣಿದೇವಿಯ
ಚಂದ್ರನೆತ್ತಿಕೊಂಡು ಹೋದಾಗ ಸುಮ್ಮನಿದ್ದುದು ಏನು ಜ್ಞಾನ?
ಶನಿ ಜ್ಞಾನವುಳ್ಳವನಾದಡೆ ಕಂಟನಾಗಿ ಸಂಕೋಲೆ ಬೀಳ್ವನೆ?
ಅದು ಕಾರಣ–
ತಮಗೆ ಮುಂಬಹ ಸುಖ ದುಃಖಂಗಳನರಿಯದವರು
ಮತ್ತೊಬ್ಬರ ಸುಖ ದುಃಖಂಗಳ ಮೊದಲೇ ಅರಿಯರು
ಬ್ರಹಸ್ಪತಿ ಮತದಿಂದೆ ದಕ್ಷ ಯಾಗವನಿಕ್ಕೆ ಕುರಿದಲೆಯಾಯಿತ್ತು
ಬ್ರಹಸ್ಪತಿಯ ಮತದಿಂದೆ ದ್ವಾರಾವತ ನೀರಲ್ಲಿ ನೆರೆದು
ಕೃಷ್ಣನ ಹದಿನಾರು ಸಾವಿರ ಸ್ತ್ರೀಯರ ಹೊಲೆಬೇಡರು ಸರೆಯನೊಯ್ದರು
ಶ್ರೀರಾಮನ ಹೆಂಡತಿ ಸೀತಾಂಗನೆ ಸೆರೆಯಾದಳು.
ಇಂತೀ ತಮತಮಗೆ ಮುಂದೆ ಬಹ ಅಪಜಯಂಗಳನರಿಯದ ಕಾರಣ
ಆ ಬೃಹಸ್ಪತಿ ಜ್ಞಾನಿಯ ಮತದಿಂದೆ, ಅಬಾಷ ಜೋಯಿಸರ ಮಾತ ಕೇಳಿ
ಹುಣ್ಣಿಮೆ ಅಮವಾಸೆಯಲ್ಲಿ ಉಪವಾಸವಿದ್ದು.
ಗ್ರಹಬಲವುಳ್ಳ ಶುಭ ಮುಹೂರ್ತಂಗಳಲ್ಲಿ, ಅರಳಿಯ ಮರಕ್ಕೆ ನೀರಹೊಯ್ದು
ನೂಲ ಸುತ್ತಿ ವಿಪ್ರ ಜೋಯಿಸರ್ಗೆ ಹೊನ್ನು ಹಣವ ಕೊಟ್ಟಡೆ
ಹೋದಿತೆಂಬ ಅನಾಚಾರಿಯ ಮಾತ ಕೇಳಲಾಗದು.
'ವಸಿಷ್ಠೇನ ಕೃತೇ ಲಗ್ನೇ ಏನೇ ರಾಮೇಣ ವಾಸಿತೇ ।

ಕ್ರಮಮೂಲೇ ಪ್ರಧಾನೇತು ಕಿಂಕರೋತಿ ಶುಭಗ್ರಃ ॥

ಇಂತೆಂದುದಾಗಿ, ಬಹು ಕಂಟಕವ ಹೊನ್ನು ಹೆಣ್ಣು ಶುಭಲಗ್ನದಿಂದೆ

ಪರಿಹರಿಸೇನೆಂದಡೆ ಹೋಗಲರಿಯದು.

ಹಸಿವಿಲ್ಲದ ಮದ್ದು ಕೊಟ್ಟೇನು, ತೊರೆಯ ದಾಂಟಿಸೆಂಬಂತೆ,

ಅಶನವ ನೀಡೆಂಬಂತೆ ಖೇಚರದ ಮದ್ದು ಕೊಟ್ಟೇನು,

ಕುರುಡನ ಕೈಯ ಕುರುಡ ಹಿಡಿದು ಹಾದಿಯ ತೋರುವಂತೆ,

ಲಜ್ಜೆ ನಾಚಿಕೆ ಇಲ್ಲದೆ ವಿಪ್ರರ ಕೈಯೆ ಲಗ್ನವ ಕೇಳಲಾಗದು.

ಸದ್ಭಕ್ತರಾದವರಿಗೆ ನಿಮ್ಮ ಬಲವೇ ಬಲವಯ್ಯ

ಕೂಡಲಚೆನ್ನಸಂಗಮದೇವ!' (ವ.ಶಾ.ಸಾ.ವ.೧೫೩೦)

ಪ್ರಸ್ತುತ ಕಾಲದಲ್ಲಿ ಜನರಿಗೆ ಸುಖ-ದುಃಖಗಳು ಯಾಕೆ ಬರುತ್ತವೆ ಎಂಬುದು ಸರಿಯಾಗಿ ಗೊತ್ತಿಲ್ಲ. ಅವು ಜಗದ ನಾಯಕನು ಆಡಿಸುವ ಆಟಗಳು ಆತನ ಸಂವಿಧಾನವಾಗಿದೆ. ಇದನ್ನು ಕಂಡುಕೊಳ್ಳುವ ಜನರು ತಮಗೆ ರೋಗ-ರುಜಿನ, ಬಡತನ, ಸೋಲುಗಳು, ಸಮಸ್ಯೆಗಳ ಬೆಂಬತ್ತಿದಾಗ, ಅವುಗಳ ಬಗ್ಗೆ ಸರಿಯಾಗಿ ಅರ್ಥಮಾಡಿಕೊಳ್ಳುವುದಿಲ್ಲ. ಆ ದಿಕ್ಕಿನತ್ತ ಯೋಚಿಸುವುದೇ ಇಲ್ಲ. ಎಲ್ಲರೂ ನೇರವಾಗಿ ಜ್ಯೋತಿಷಿಗಳ ಕಾಲಿಗೆ ಎರಗುತ್ತಾರೆ. ಅವರಿಗೆ ಹಣ-ಬಂಗಾರ ಕೊಟ್ಟು ತಮ್ಮ ಸಂಕಷ್ಟಗಳನ್ನು ತೋಡಿಕೊಳ್ಳುತ್ತಾರೆ. ತಮ್ಮ ಬಲದ ಬಗ್ಗೆ ಪ್ರಶ್ನಿಸುತ್ತಾರೆ. ತಮಗೆ ಸೂರ್ಯಬಲವಿದೆಯೇ? ಚಂದ್ರಬಲ ಹೇಗಿದೆ? ಬ್ರಹಸ್ಪತಿ ಬಲ ಬರುವುದೇ? ನವಗ್ರಹಗಳ ಶಾಂತಿ ವಿಧಾನಗಳಾವವು? ಎಂದು ಜ್ಯೋತಿಷಿಗಳಿಗೆ ಸಂಪೂರ್ಣವಾಗಿ ಶರಣಾಗುವರಿಗೆ ಶಿವಭಕ್ತಿ ಎಲ್ಲಿಯದು ಎಂದು ಚೆನ್ನಬಸವಣ್ಣ ಪ್ರಶ್ನಿಸುತ್ತಾನೆ. ಅದಕ್ಕೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳನ್ನು ಆ ವಚನಕಾರ ಕೇಳುತ್ತ, ವರ್ತಮಾನ ಕಾಲದ ಜನರನ್ನು ಎಚ್ಚರಿಸುತ್ತಾನೆ.

ಸೂರ್ಯ, ಚಂದ್ರ, ಬ್ರಹಸ್ಪತಿಗಳು ಜ್ಯೋತಿಷ್ಯದ ಪ್ರಕಾರ ಬಲಶಾಲಿಗಳು. ಅವರು ನಿಜವಾಗಿ ಬಲಶಾಲಿಗಳಾಗಿದ್ದು, ನಮ್ಮ ಸಮಸ್ಯೆಗಳ ಪರಿಹರಿಸುವವರಾಗಿದ್ದರೆ ಯಾಕೆ ಪುರಾಣ ಕಥೆಗಳಲ್ಲಿ ಈ ಬಲಶಾಲಿಗಳು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಒದ್ದಾಡಿದ ಪ್ರಸಂಗಗಳಿವೆ ಎಂದು ಕೇಳುವ ಮೂಲಕ ಚೆನ್ನಬಸವಣ್ಣ ಅವರ ಅಸ್ತಿತ್ವದ ಮೂಲಕ್ಕೇ ಕೈ ಹಾಕುತ್ತಾನೆ. ಸೂರ್ಯನು ಜ್ಞಾನವುಳ್ಳವನೆಂದು ನಂಬಿಸಲಾಗಿದೆ. ಅದೇ ಸೂರ್ಯನು ಗೌತಮಮುನಿಗಳ ಹೆಂಡತಿ ಅಹಲ್ಯೆಯನ್ನು ಮೋಹಿಸುತ್ತಾನೆ. ಗೌತಮರಿಗೆ ಆ ವಿಷಯ ತಿಳಿದು ಸೂರ್ಯನಿಗೆ ಶಾಪ ಕೊಡುತ್ತಾರೆ. ಒಬ್ಬ ಸಾಮಾನ್ಯ ಮುನಿಯಿಂದ ಶಾಪಕ್ಕೆ ಒಳಗಾಗಿ ಕಷ್ಟ-ನಷ್ಟಗಳನ್ನು ಮೈಮೇಲೆ ಎಳೆದುಕೊಂಡುದುದಲ್ಲದೇ, ದಕ್ಷನು ನಡೆಸಿದ ಯಾಗದಲ್ಲಿ ಈ ಸೂರ್ಯನ ಹಲ್ಲನ್ನು ಉದರಿಸಿಕೊಳ್ಳುವ ಪ್ರಸಂಗವು ನಡೆಯುತ್ತದೆ. ಹಾಗಾಗಿ ಇಂಥ ಸೂರ್ಯನು ನಿಜವಾಗಿ ಬಲಶಾಲಿಯೂ ಅಲ್ಲ. ಜ್ಞಾನಿಯೂ ಅಲ್ಲ ಎಂಬುದು ಚೆನ್ನಬಸವಣ್ಣನ ಅಭಿಮತ.

ಚಂದ್ರನು ಬಲವುಳ್ಳವ ಮತ್ತು ಜ್ಞಾನಿಯಾಗಿರುವುದರಿಂದ ನಮ್ಮ ಸಮಸ್ಯೆ ಪರಿಹರಿಸುತ್ತಾನೆಂದು ಜ್ಯೋತಿಷಿಗಳು ಹೇಳುತ್ತಾರೆ. ಅದೇ ಜ್ಯೋತಿಷಿಗಳ ಮೂಲ ಬಂಡವಾಳದ ಜ್ಯೋತಿಷ್ಯವನ್ನು ಕಂಡುಕೊಂಡು ಪ್ರಚಾರಕ್ಕೆ ತಂದವರು ಬ್ರಹಸ್ಪತಿ ಮುನಿಗಳು. ಚಂದ್ರನು ಬ್ರಹಸ್ಪತಿಗಳ ಬಳಿಗೆ ಜ್ಯೋತಿಷ್ಯವನ್ನು ಅಭ್ಯಾಸ ಮಾಡಲು ಬರುತ್ತಾನೆ. ಅಲ್ಲಿ ಗುರುಗಳ ಪತ್ನಿ ರೋಹಿಣಿದೇವಿಯನ್ನು ಮೋಹಿಸಿ ಅಪಹರಿಸುತ್ತಾನೆ. ಇದರಿಂದ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದಿರಲಿ, ಬ್ರಹಸ್ಪತಿ ಜ್ಯೋತಿಷ್ಯವನ್ನು ಕಂಡುಹಿಡಿದವರು, ಮುಂದೆ ನಡೆವುದೆಲ್ಲವನ್ನು ಸರಿಯಾಗಿ ತಿಳಿದವರು, ಹಾಗಾಗಿ ಎಲ್ಲವನ್ನೂ ಅಳೆದು ತೂಗಿ ನೋಡಿ ರೋಹಿಣಿಯನ್ನು ಮದುವೆಯಾಗಿರುತ್ತಾರಲ್ಲವೆ? ಆಕೆ ಚಂದ್ರನೊಂದಿಗೆ ಪರಾರಿಯಾಗುವಾಗ ಅವರ ಜ್ಞಾನ ನೆರವಿಗೇಕೆ ಬರಲಿಲ್ಲ? ಶನಿಯನ್ನು ಕಂಡರೆ ಅನೇಕರಿಗೆ ಭಯ. ಆದರೆ ಅದೇ ಶನಿಯು ಬಲವುಳ್ಳವನಾಗಿದ್ದರೆ ಕುಂಟನಾಗಿ ಕಷ್ಟಗಳನ್ನು ಯಾಕೆ ಅನುಭವಿಸಿದನು? ಇವರೆಲ್ಲರೂ ತಮ್ಮ ತಮ್ಮ ಕಷ್ಟಗಳನ್ನೇ ಪರಿಹರಿಸಿಕೊಳ್ಳದವರು. ಅಂತವರು ನಮಗೆ ಬಲ ತಂದು, ಸಮಸ್ಯೆಗಳಿಗೆ ಪರಿಹಾರ ಕೊಡಲು ಸಾಧ್ಯವೇ ಇಲ್ಲ ಎಂಬುದು ಚೆನ್ನಬಸವಣ್ಣನ ವಾದ.

ಜ್ಯೋತಿಷ್ಯವನ್ನು ಹೇಳುತ್ತೇವೆ ಎಂದು ಹೇಳುವವರೆಲ್ಲರೂ ಈ ಉದಾಹರಣೆಗಳಂತೆ ತಮಗೆ ಮುಂದೆ ಬರುವ ಸುಖ-ದುಃಖಗಳನ್ನು ತಿಳಿದವರೇನಲ್ಲ. ಹಾಗಾಗಿ ತಮ್ಮದೇ ಗೊತ್ತಿಲ್ಲದವರು, ಮತ್ತೊಬ್ಬರ ಕಷ್ಟ ನಷ್ಟಗಳನ್ನು ಮೊದಲೇ ಹೇಗೆ ತಿಳಿಯುತ್ತಾರೆ? ಆ ಜ್ಯೋತಿಷಿಗಳ ಮಾತು ಕೇಳಿ ಅನೇಕರು ಸಮಸ್ಯೆಗೆ ಸಿಲುಕಿದ್ದಾರೆ. ಬ್ರಹಸ್ಪತಿಯ ಮಾತು ಕೇಳಿದ ದಕ್ಷನು ಯಾಗವನ್ನು ಮಾಡಿದ, ಕೊನೆಗೆ ತನ್ನ ತಲೆಯನ್ನೆ ಬಲಿಕೊಡಬೇಕಾಯಿತು. ಬ್ರಹಸ್ಪತಿ ಹೇಳಿದಂತೆ ಕೇಳಿದ್ದಕ್ಕೆ ದ್ವಾರಕೆಯು ನೀರಿನಿಂದ ಅಮೃತವಾಯಿತು. ಕೃಷ್ಣನ ೧೬ ಸಾವಿರ ಗೋಪಿಕೆಯರು ಬೇಡರಿಗೆ ಸೆರೆಸಿಕ್ಕ ಕಥೆಯನ್ನು ಚೆನ್ನಬಸವಣ್ಣ ನೆನಪಿಸುತ್ತಾನೆ. ಸಾಕಷ್ಟು ಜ್ಯೋತಿಷ್ಯವನ್ನು ತಿಳಿದಿದ್ದ ವಸಿಷ್ಠರು ಸೀತಾ-ರಾಮರ ಮದುವೆ ಮಾಡಿಸಿದರು. ಆದರೂ ಸೀತೆ ರಾವಣನ ಬಂಧಿಯಾಗುವುದು ತಪ್ಪಲಿಲ್ಲ.

ಈ ರೀತಿಯಾಗೆ ತಮಗೆ ಮುಂದೆ ಬರುವಂತಹ ಸೋಲುಗಳನ್ನೇ ಅರಿಯದ ಜ್ಯೋತಿಷಿಗಳ ಹಾಗೂ ಅವರ ಹೇಳಿಕೆಗಳ ಬೆನ್ನು ಹತ್ತಿದ್ದೇವೆ. ಸುಳ್ಳು ಹೇಳುವ ಜ್ಯೋತಿಷಿಗಳ ಮಾತು ಕೇಳಿ ಹುಣ್ಣಿಮೆ-ಅಮವಾಸ್ಯೆಗಳಲ್ಲಿ ಉಪವಾಸ ಮಾಡುತ್ತಿದ್ದೇವೆ. ಜೊಯಿಸರು ಹೆಳುವ ಸಮಯ ಕೇಳಿ ಅದನ್ನೇ ಶುಭಮುಹೂರ್ತವೆಂದು ತಿಳಿದಿದ್ದೇವೆ. ಅವರು ಹೇಳಿದರೆಂದು ಅರಳಿಮರಕ್ಕೆ ನೀರನ್ನು ಹಾಕುತ್ತ ನೂಲನ್ನು ಸುತ್ತುತ್ತಿದ್ದೇವೆ. ಆ ದಾರಿ ತೋರಿದ್ದಕ್ಕಾಗಿ ಅವರಿಗೆ ಹಣ, ಬಂಗಾರ ಕೊಟ್ಟರೆ ನಮ್ಮ ಸಮಸ್ಯೆಗಳು ಪರಿಹಾರವಾಗುವುದಕ್ಕೆ ಸಾಧ್ಯವೆ? ಎಂಬುದು ಶರಣಶ್ರೇಷ್ಠನ ಪ್ರಶ್ನೆ.

ಬಂದಿರುವ ಹಾಗೂ ಮುಂದೆ ಬರುವಂತಹ ಸಂಕಟಗಳನ್ನು ಬಂಗಾರ ಕೊಟ್ಟು ಒಳ್ಳೆಮುಹೂರ್ತದಲ್ಲಿ ಪರಿಹರಿಸುತ್ತೇವೆಂದರೆ ಅದು ಸಾಧ್ಯವಿಲ್ಲದ ಮಾತು. ಜ್ಯೋತಿಷಿಗಳು ನಮಗೆ ನೀಡುವ ಪರಿಹಾರ ಹೇಗಿದೆ ಎಂದರೆ, ತುಂಬಾ ಹಸಿದಿರುವಂಥ ವ್ಯಕ್ತಿಯು ಅನ್ನವಿರುವವನ ಬಳಿಗೆ

ಬಂದು, ನನಗೆ ಅನ್ನ ನೀಡು ನಾನು ನಿನಗೆ ಹಸಿವಾಗದಿರುವಂಥ ಔಷಧಿ ನೀಡುತ್ತೇನೆ ಎಂಬಂತಿದೆ. ಅದೇ ರೀತಿ ನದಿ ದಾಟುವ ಪಯಣಿಗನು, ಅಂಬಿಗನಿಗೆ ನನ್ನನ್ನು ಆಚೆ ದಡಕ್ಕೆ ನೀನು ತಲುಪಿಸಿದರೆ, ನಿನಗೆ ಹಕ್ಕಿಯಂತೆ ಹಾರುವ ಶಕ್ತಿಯನ್ನು ಕರುಣಿಸುತ್ತೇನೆ ಎಂಬಂತಿದೆ. ಒಬ್ಬ ಕುರುಡನು ಮತ್ತೊಬ್ಬ ಕುರುಡನ ಕೈ ಹಿಡಿದು ದಾರಿ ತೋರಿಸುವದಕ್ಕೆ ಸಮನಾಗಿದೆ. ಜ್ಯೋತಿಷಿಗಳು ಹೇಳುವ ಪರಿಹಾರ ಎಂದು ಚೆನ್ನಬಸವಣ್ಣ ಉದಾಹರಣೆ ನೀಡಿ ಸರಳವಾಗಿ ಮನನವಾಗುವಂತೆ ಮಾಡಿದ್ದಾರೆ.

ಕೊನೆಗೆ ಆ ವಚನಕಾರನು ತನ್ನ ವಚನದಲ್ಲಿ ಸುಳ್ಳು ಹೇಳುವಂಥ ಜ್ಯೋತಿಷಿಗಳಿಂದ ನಿಮಗೆ ಪ್ರಯೋಜನವಾಗುವುದಿಲ್ಲ. ಅದರ ಬದಲಾಗಿ ನಿಮಗೆ ನಿಮ್ಮ ಬಲದಲ್ಲಿ ನಂಬಿಕೆ ಬರಬೇಕು, ನಿಮ್ಮಲ್ಲಿರುವ ಬಲವೇ ನಿಮ್ಮ ಸಮಸ್ಯೆಗೆ ಪರಿಹಾರ ಎಂದು ಅತ್ಯಂತ ಅದ್ಭುತವಾಗಿ ತಿಳಿ ಹೇಳಿದ್ದಾನೆ.

ಅಂದಿನ ದಿನದಲ್ಲೇ ಚೆನ್ನಬಸವಣ್ಣನವರು ನಮಗೆ ಬರುವಂಥ ಎಲ್ಲಾ ಸಂಕಷ್ಟಗಳಿಗೆ ನಾವೇ ಪರಿಹಾರ ಕಂಡುಕೊಳ್ಳಬೇಕು. ಅದರ ಬದಲು ನಮ್ಮಗಳ ದೌರ್ಬಲ್ಯವನ್ನೇ ಬಂಡವಾಳ ಮಾಡಿಕೊಂಡ ಜ್ಯೋತಿಷಿಗಳ ಬಳಿ ಹೋಗಿ ಮೋಸ ಹೋಗಬೇಡಿರಿ ಎಂದು ದಿಟ್ಟವಾಗಿ ಹೇಳುತ್ತ ಜನರನ್ನು ಎಚ್ಚರಿಸಿರುವ ಪರಿ ಇಂದಿಗೂ ಮೆಚ್ಚಲೇಬೇಕಾದುದು. ಆದರೆ ಇಂದು ನಾವು ೨೧ನೆಯ ಶತಮಾನದಲ್ಲಿದ್ದರೂ ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವದ ಕೊರತೆ ಎದ್ದು ಕಾಣುತ್ತದೆ. ನಮಗೆಲ್ಲ ಚೆನ್ನಬಸವಣ್ಣನಂತೆ ಅನೇಕ ವಚನಕಾರರ ವಚನಗಳು ಮಾರ್ಗದರ್ಶನ ಮಾಡುತ್ತವೆ. ಅವುಗಳನ್ನು ಸರಿಯಾಗಿ ತಿಳಿದುಕೊಂಡು ಆ ನಿಟ್ಟಿನಲ್ಲಿ ನಾವು ನಡೆಯಬೇಕಿದೆ.

'ತಿಥಿವಾರವೆಂದರಿಯೆನಯ್ಯಾ ಲಗ್ನವಿಲಗ್ನವೆಂದರಿಯೆನಯ್ಯಾ ಇದನರಿತು ಹದಿನಾರು ವಾರ, ಹದಿನೆಂಟು ಕುಲವೆಂದೆಂಬರು ನಾನಿದನರಿಯೆನಯ್ಯಾ, ಇರುಳೊಂದು ವಾರ, ಹಗಲೊಂದು ವಾರ. ಭವಿಯೊಂದು ಕುಲ, ಭಕ್ತನೊಂದು ಕುಲ. ನಾವು ಬಲ್ಲುದು ಇದು ತಾನೆ, ಬಸವಪ್ರಿಯ ಕೂಡಲಚೆನ್ನಸಂಗಮದೇವಾ.' ವಾರ ತಿಥಿಗಳು ಮನುಷ್ಯನ ವ್ಯವಹಾರಕ್ಕೆ ಇವೆ. ಅವು ವ್ಯವಹಾರಿಕ ಸಾಧನಗಳು ಮಾತ್ರ ಅದೇ ಸರ್ವಸ್ವವೆಂದು ಭಾವಿಸಿದಲ್ಲಿ ಅಪಾಯವಿದೆ. ಈ ದೃಷ್ಟಿಯಿಂದ ಶರಣರ ನುಡಿಯೇ ಜ್ಯೋತಿಷ್ಯ ನಡೆಯೇ ಪಂಚಾಂಗವಾಯ್ತು ಎಂದು ಚೆನ್ನಬಸವಣ್ಣನವರು ಹೇಳುತ್ತಾ, ತಮ್ಮ ಮತ್ತೊಂದು ವಚನದಲ್ಲಿ ಈ ರೀತಿ ತಿಳಿಸುತ್ತಾರೆ.

'ಉದಯ ಮಧ್ಯಾಹ್ನ ಸಂಧ್ಯಾ ಕಾಲವನೋಡಿ
ಮಾಡುವ ಕರ್ಮಿ ನೀ ಕೇಳಾ
ಉದಯವೇನೆಂದೋ ಶರಣಂಗೆ?
ಮಧ್ಯಾಹ್ನವೆಂದೇನೋ ಶರಣಂಗೆ? ಅಸ್ತಮಾನವೆಂದೆನೋ ಶರಣಂಗೆ?
ಮಹಾಮೇರುವಿನ ಮರೆಯಲಿರ್ದು

ತನ್ನ ನೆರಳನರುಸುವ ಭಾವ ಭ್ರಮಿತರ ಮೆಚ್ಚ ನಮ್ಮ

ಕೂಡಲ ಚನ್ನಸಂಗಮದೇವಾ' (ವ.ಶಾ.ಸಾ.ವ.೧೫೨೫)

ಉದಯ ಮಧ್ಯಾಹ್ನ ಸಂಧ್ಯಾಕಾಲವ ನೋಡಿ ಕರ್ಮ ಮಾಡುವ ಕರ್ಮಿ ನೀ ಕೇಳಾ ಎಂದು ಪ್ರಶ್ನಿಸಿ ಶರಣರಿಗೆ ಕಾಲದ ಹಂಗಿಲ್ಲ ಅವರು ಕಾಲಾತೀತರು. ಮಹಾಮೇರು ಸದೃಶ ಭಗವಂತನ ಆಶ್ರಯದ ನೆರಳಲ್ಲಿ ನೆಲೆನಿಂತ ಮಾನವರು ಅಲ್ಪವಾದ ತಮ್ಮ ನೆರಳನ್ನು ಹುಡುಕುವುದು ಭ್ರಮೆಯಾಗುತ್ತದೆ ಎಂದು ಎಚ್ಚರಿಸಿದ್ದಾನೆ. ಭಗವಂತನ ಮಹಾನೆರಳಿನಲ್ಲಿ ಮಾನವನ ಅಲ್ಪ ನೆರಳು ನಾಪತ್ತೆಯಾಗುತ್ತದೆ. ಪ್ರಜ್ವಲಿಸುವ ಜ್ಯೋತಿಯ ಮುಂದೆ ಮಿಂಚುಹುಳದ ಬೆಳಕೆಲ್ಲಿ ಕಾಣುತ್ತದೆ. ಕಾಲವನ್ನು ವಿಭಾಗಿಸಿ ಶುಭಾಶುಭಗಳನ್ನು ಅರಿಯುವದಕ್ಕಿಂತ ಅಖಂಡ ಕಾಲಾತೀತ ಸ್ವರೂಪನಾದ ದೇವನಲ್ಲಿ ಭಕ್ತಿ ಇಡುವುದೇ ಮೇಲೆಂದು ಶರಣರ ಅಚಲ ನಂಬಿಕೆ.

'ಚಂದ್ರಬಲ ತಾರಾಬಲವೆಂಬರಿ: ಎಲೆ ಅಣ್ಣಗಳಿರಾ ಚಂದ್ರಂಗೆ ಯಾರಬಲ? ಇಂದ್ರಂಗೆ ಯಾರ ಬಲ? ಇಂದ್ರಂಗೆ ಮುಕುಂದಂಗೆ, ಬ್ರಹ್ಮಂಗೆ, ಚಂದ್ರಂಗೆ ಬರದೆ ಸೊಡ್ಡಳನ ಬಲವು ಕೇಳಿರಣ್ಣಾ' ಚಂದ್ರಬಲ-ಇಂದ್ರಬಲ-ತಾರಾಬಲಕ್ಕಿಂತ ಭಗವಂತನ ಬಲವೇ ಶ್ರೇಷ್ಠವೆಂದು ಸೊಡ್ಡಳಬಾಚರಸ ಅಭಿಪ್ರಾಯ.

'ಆಗುತಿದೆ ಉದಯ ಮಧ್ಯಾಹ್ನ ಅಸ್ತಮಾನ ಹೋಗುತಿದೆ ದಿನವಾರ ಮಾಸ ಸಂವತ್ಸರವು ಸಾವುತಿದೆ ಆಯುಷ್ಯ ಭಾಷೆ ಇದರೊಳು ಬೇಗ ತಿಳಿದು ನೀಗಿ ನಿಷ್ಪತ್ತಿಯಾದರೆ ಬಸವಪ್ರಿಯ ಕೂಡಲಚೆನ್ನಬಸವಣ್ಣ' ಕಾಲದ ಗಣನೆಯಲ್ಲಿ ಆಯುಷ್ಯ, ಭಾಷೆ ಸಾಯುತ್ತಿದೆ. ಇದನ್ನು ಬೇಗ ತಿಳಿದು ಭಗವದ್ಭಕ್ತಿಯಲ್ಲಿ ತೊಡಗಿ ಜೀವನವನ್ನು ಪಾವನಗೊಳಿಸಿಕೊಳ್ಳಬೇಕೆಂದು ಅಪ್ಪಣ್ಣ ಎಚ್ಚರಿಸುತ್ತಾನೆ ಮತ್ತು ಮುಂದುವರೆದು ಹೀಗೆ ಹೆಳುತ್ತಾನೆ-

'ಉದಯ ಮಧ್ಯಾಹ್ನ ಅಸ್ತಮಯ ಕತ್ತಲೆಯ ಬೆಳಗು

ದಿನವಾರ ಲಗ್ನ ತಿಥಿ ಮಾಸ ಸಂವತ್ಸರಗಳು

ಹೋಗುತ್ತ ಬರುತ್ತಲಿವೆ.

ಇವ ನೋಡಿದವರೆಲ್ಲ ಇದರೊಳಗೆ ಹೋಗುತ್ತ ಬರುತ್ತಲಿದ್ದಾರೆ.

ಜಗಕ್ಕೆ ಇದೀಗ ಇಷ್ಟವಾಗಿಪ್ಪವು.

ಎನ್ನ ದೇವಂಗೆ ಇವೊಂದು ಇಲ್ಲ

ಬಸವಪ್ರಿಯ ಕೂಡಲಚನ್ನಬಸವಣ್ಣ' (ವ.ಶಾ.ಸಾ.ವ. ೧೫೨೫)

ಪ್ರಸ್ತುತಕಾಲದ ಜನರ ನಡತೆಯನ್ನು ನೋಡಿದರೆ ಸುಮುಹೂರ್ತ ದಿನ-ವಾರ-ತಿಥಿ-ಮಾಸದಲ್ಲಿ ಆಸಕ್ತರಾಗಿದ್ದಾರೆ. ಆನರಿಗೆ ಇವೇ ಇಷ್ಟವಾಗಿವೆ ಆದರೆ ದೇವನಿಗೆ ಇವುಗಳ ಹಂಗಿಲ್ಲ. ಆತನು ಕಾಲಾತೀತನೆಂದು ವಿಚಾರ ವ್ಯಕ್ತಪಡಿಸುತ್ತಾನೆ.

‘ಅಚ್ಚಶಿವೈಕ್ಯಂಗೆ ಹೊತ್ತಾರೆ ಅಮವಾಸ್ಯೆ

ಮಟ್ಟ ಮಧ್ಯಾಹ್ನ ಸಂಕ್ರಾಂತಿ ಮತ್ತೆ ಅಸ್ತಮಾನ

ಪೌರ್ಣಿಮೆ ಎಂಬುದಿಲ್ಲ. ಭಕ್ತನ ಮನೆಯ ಅಂಗಳವೇ

ವಾರಣಾಸಿ ಕಾಣಾ ರಾಮನಾಥ’ –ಜೇಡರ ದಾಸಿಮಯ್ಯ (ಸ.ವ.ಸಂ:೭ ವ.ಸಂ, ೭೧೪)

ಭಗವದ್ಭಕ್ತನಿಗೆ ಅಮವಾಸ್ಯೆ ಸಂಕ್ರಾಂತಿ–ಪೌರ್ಣಿಮೆ ಉದಯ ಅಸ್ತಮಾನಗಳೆಂಬ ಕಾಲನಿಯಮ ನಿಬಂಧನೆಗಳಿಲ್ಲ. ತೀರ್ಥಯಾತ್ರೆ ಇಲ್ಲ. ಭಗವದ್ಭಕ್ತನ ಮನೆಯ ಅಂಗಳವೇ ಕಾಶಿಯಷ್ಟು ಪರಮ ಪವಿತ್ರವೆಂದೂ ಅದೇ ತೀರ್ಥಕ್ಷೇತ್ರ ಸುಕ್ಷೇತ್ರವೆಂದೂ ದಾಸಿಮಯ್ಯನ ಅಭಿಪ್ರಾಯವಾಗಿದೆ.

ಒಟ್ಟಾರೆ ೧೨ನೇ ಶತಮಾನದ ವಚನಕಾರರು ಕಾಯಕನಿಷ್ಠೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರಿಂದಲೇ, ಅವರು ಎಂದೂ ಜ್ಯೋತಿಷ್ಯ ಮತ್ತು ಪಂಚಾಂಗದಂಥ ವಿಚಾರಗಳಿಗೆ ಮಾರು ಹೋಗಿರಲಿಲ್ಲ. ಏಕೆಂದರೆ ತಾವೇ ಪ್ರತಿಯೊಂದು ವಸ್ತುಗಳನ್ನು ಸೃಷ್ಟಿ ಮಾಡುವಂತಹವರು ‘ನಾ ಇಲ್ಲದ ಮೇಲೆ ಶಿವನಿಲ್ಲ’ ಎಂದು ಪ್ರತಿಪಾದಿಸಿದವರು.

ಇಂತಹ ಪವಿತ್ರ ವಚನಗಳ ಸಂದೇಶವನ್ನು ಪಾಲಿಸದೇ ವರ್ತಮಾನದಲ್ಲಿಯಾವ ವ್ಯಕ್ತಿಗೆ ಕಾಯಕ ನಿಷ್ಠೆ ಇರುವುದಿಲ್ಲವೋ ಅಂತಹ ವ್ಯಕ್ತಿ ಮೂಢನಂಬಿಕೆ, ಜ್ಯೋತಿಷಿ, ದಂತ ವಿಚಾರಗಳಲ್ಲಿ ಮುಳುಗಿರುತ್ತಾನೆ. ಮೂರು ವೈಚಾರಿಕ ವಿಚಾರಗಳನ್ನು ಮತ್ತು ಮುಂದೆ ಮೂಡಬಹುದಾದ ವಿಚಾರಗಳನ್ನು ಒರೆಗಲ್ಲಿಗೆ ತಿಕ್ಕಿ ಯೋಚಿಸಿ ಮುನ್ನಡೆಯುತ್ತಾನೋ ಅಂತಹವರು ಜೀವನದ ಸಾರ್ಥಕತೆಯನ್ನು ಪಡೆಯುತ್ತಾರೆ. ಹಾಗೂ ಅಗೋಚರವಾದಂತಹ ಮೂಢನಂಬಿಕೆಗಳು, ಜ್ಯೋತಿಷ್ಯ, ಪಂಚಾಂಗದ ವಿಚಾರಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ.

ಕಾಯಕನಿಷ್ಠೆ ಇರುವಂತವರಿಗೆ ಆ ಶಿವನೇ ಬಂದು ನಿಂತರೂ ಕೂಡ ಅವರು ಕಣ್ಣೆತ್ತಿ ನೋಡಲಾರರು. ಇದಕ್ಕೆ ಶೂನ್ಯ ಸಂಪಾದನೆಯಲ್ಲಿ ಬರುವ ನುಲಿಯ ಚಂದಯ್ಯ ಕಥೆಯೇ ಉದಾಹರಣೆಯಾಗಿ ನಿಂತಿದೆ. ಹಾಗಾಗಿ ೧೨ನೇ ಶತಮಾನದಲ್ಲಿ ನಡೆದ ಕಾಯಕ ಜೀವಿಗಳ ಚಳುವಳಿ ವಾಸ್ತವ ನೆಲಗಟ್ಟಿನಲ್ಲಿ ಇದ್ದುದರಿಂದಲೇ ಅಂದಿನ ವಚನಕಾರರನ್ನು ನಾವು ದೈವ ಸಮಾನವಾಗಿ ಕಾಣುತ್ತೇವೆ.

‘ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ ಚಿತ್ತಶುದ್ದದಲ್ಲಿ ಕಾಯಕ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದರತ್ತ ಲಕ್ಷ್ಮಿ ತಾನಾಗಿಪ್ಪಳು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗದ ಸೇವೆಯಲ್ಲುಳ್ಳನ್ನಕ್ಕ’ ಅಂದರೆ ಇಂದಿನ ದಿನದಲ್ಲೂ ಈ ವಚನ ಎಷ್ಟು ಪ್ರಸ್ತುತ ಎನ್ನುವುದನ್ನು ಹೇಳಬೇಕಾಗಿಲ್ಲ. ಯಾರೇ ಆಗಿರಲಿ ತಾವು ಮಾಡುವಂತಹ ಕೆಸದಲ್ಲಿ ಮನ ಶುದ್ಧವಿರಬೇಕು, ಚಿತ್ತ ಶುದ್ಧವಿರಬೇಕು ಮತ್ತು ಕಾಯಕದಲ್ಲಿ ನಿಷ್ಠೆ ಇರಬೇಕು. ಅಂತಹವರು ಎಂದೂ ಜ್ಯೋತಿಷ್ಯ, ಪಂಚಾಂಗದಂತಹ ವಿಚಾರಗಳ ಬಗ್ಗೆ ತಲೆ ಕೆಡಸಿಕೊಳ್ಳುವುದಿಲ್ಲ. ಆದರೆ ಬಹುತೇಕ ಜನ ತಾವು

ಮಾಡುವಂತಹ ಕೆಸದಲ್ಲಿ ನಿಷ್ಠೆ ಇಲ್ಲದಿರುವುದರಿಂದ ಲಕ್ಷ್ಮಿಯು ಒಲಿಯುವುದಿಲ್ಲ ಎಂಬುದು ಸರ್ವವಿಧದಿಂದಲೂ ಸತ್ಯವಾದದ್ದು. ಇತ್ತೀಚಿನ ದಿನಗಳಲ್ಲಿ ಮಧ್ಯಮ ವರ್ಗದವರು ಹೆಚ್ಚು ಹೆಚ್ಚು ಜ್ಯೋತಿಷ್ಯ ಮತ್ತು ಪಂಚಾಂಗಗಳಲ್ಲಿ ಮುಳುಗಿದ್ದಾರೆ, ಎಂದರೆ, ಅವರ ಸಮಸ್ಯೆಗಳಿಗೆ ಅದರಲ್ಲಿ (ಜ್ಯೋತಿಷ್ಯದಲ್ಲಿ) ಪರಿಹಾರ ಹುಡುಕಲು ಪ್ರಯತ್ನಿಸಿದ್ದಾರೆ. ಆದರೆ ಕಾಯಕ ನಿಷ್ಠೆಯಲ್ಲಿ ಹೆಚ್ಚು ಒಲವು ತೋರಿ ಆಸಕ್ತಿಯಿಂದ ಕೆಲಸ ಮಾಡಿದರೆ ನಿಜಕ್ಕೂ ಅವರ ಸಮಸ್ಯೆ ತನ್ನಿಂದ ತಾನೇ ಪರಿಹಾರ ಆಗುತ್ತದೆ.

ದೇವರ ಕಲ್ಪನೆ :

ಭಾರತ ದೇಶದಲ್ಲಿ ವೇದಕಾಲದಿಂದ ಅನೇಕ ದೇವರುಗಳನ್ನು ಪೂಜಿಸುತ್ತ ಬಂದಿರುವರೆಂಬುದು ಐತಿಹಾಸಿಕ ಸತ್ಯವಾಗಿದೆ. ನಾಗಪೂಜೆಯಿಂದ ಆರಂಭವಾಗಿ ಗುಂಡುಕಲ್ಲಿನ ಪೂಜೆಯವರೆಗೆ ನಡೆದುಬಂದಿದೆ. ಈ ವಿಶ್ವವನ್ನು ಸೃಷ್ಟಿಸಿದ ಮೂಲಸತ್ಯವೊಂದಿದ್ದು ಈ ವಿಶ್ವವನ್ನು ತನ್ನ ಲೀಲೆಗಾಗಿ ನಡೆಸುತ್ತಾ ಬಂದಿರುವನು. ಆದರೂ ಆದಿಮಾನವನಿಂದ ಹಿಡಿದು ಪ್ರಜ್ಞಾವಂತರು ಬದುಕುತ್ತಿರುವ ವರ್ತಮಾನದ ಕಾಲದಲ್ಲಿಯು, ನಿಸರ್ಗದ ವೈಪರೀತ್ಯಗಳನ್ನು ಕಂಡು ಭಯದಿಂದ ನಿಸರ್ಗದ ಸುಪ್ತಶಕ್ತಿಗಳಿಗೆ ಒಂದೊಂದು ದೇವರನ್ನು ಕಲ್ಪಿಸಿ ವಾಯು, ವರುಣ, ಅಗ್ನಿ ಸೂರ್ಯ, ಚಂದ್ರ, ಗ್ರಹಗಳು ಮುಂತಾದವುಗಳನ್ನು ದೇವರೆಂದು ಪೂಜೆ ಮಾಡಲು ಪ್ರಾರಂಭಿಸಿದ್ದಾರೆ.

ನಂತರ ತಮ್ಮ ನಿತ್ಯ ಬದುಕಿನಲ್ಲಿ ಸಹಾಯ ಸೌಕರ್ಯಗಳನ್ನು ಕೊಡುವ ಚರಾಚರ ವಸ್ತುಗಳನ್ನು ಪೂಜಿಸುತ್ತ ಬಂದಿದ್ದಾರೆ. ಕಲ್ಲು, ಮಣ್ಣು, ನದಿ, ಕಟ್ಟೆಗೆ, ಯಂತ್ರ ಮುಂತಾದ ನಿರ್ಜೀವ ವಸ್ತುಗಳನ್ನು ಹಾಗೂ ಎತ್ತು, ಆಕಳು, ಕುದುರೆ, ಕುರಿ ಮುಂತಾದ ಜೀವಿಗಳನ್ನು ಅವುಗಳ ಉಪಕಾರ ಸ್ಮರಣೆಗೆಂದು ಪೂಜೆ ಮಾಡಿದ. ಮಾನವನಿಗೆ ಭಯಹುಟ್ಟಿಸಬಹುದಾದ, ಅಪಾಯವನ್ನುಂಟು ಮಾಡಬಹುದಾದ ಕ್ರೂರ ಪ್ರಾಣಿ, ವಿಷಜಂತುಗಳನ್ನು, ಕ್ಷುದ್ರ ದೇವತೆಗಳನ್ನು ಪೂಜೆ ಮಾಡುತ್ತಾ ಬಂದಿದ್ದಾರೆ. ಕಾಲಾನುಕ್ರಮದಲ್ಲಿ ಶಿವ, ವಿಷ್ಣು, ಹನುಮ, ಗಣಪ, ಶಕ್ತಿ ಮುಂತಾದ ಪೌರಾಣಿಕ ದೇವತೆಗಳ ಪೂಜೆ ಪ್ರಾರಂಭವಾಯಿತು.

ಮಾನವನ ಬುದ್ಧಿ ವಿಕಾಸವಾದಂತೆ ವಿಶ್ವದ ತುಂಬೆಲ್ಲ ತುಂಬಿ ತುಳುಕುವ ವಿಶ್ವಚೈತನ್ಯವು ತನ್ನಲಿದೆಯೆಂದು ನಿಶ್ಚಯಿಸಿ ಅದರ ನಿಲುವನ್ನರಿಯಲು ಪ್ರಯತ್ನಿಸತೊಡಗಿದ. ಈ ಆಧ್ಯಾತ್ಮಿಕ ಕಲ್ಪನೆಯು ಪುಷ್ಪವಾಗಿಪರಿಪಕ್ವಗೊಂಡು ಉನ್ನತ ಮಧುರ ಫಲಗಳನ್ನು ನೀಡಿದುದು ಹನ್ನೆರಡನೆಯ ಶತಮಾನದ ವಚನಕಾರರ ಕಾಲದಲ್ಲಿ. ಅವರು ದೇವರ ಕುರಿತು ಜನರಲ್ಲಿರುವ ತಪ್ಪು ಕಲ್ಪನೆಗಳನ್ನು ತಮ್ಮ ವಚನಗಳ ಮೂಲಕ ತಗೆದು ಹಾಕಿದರು.

ಅಂತಹ ವಚನಕಾರರು ಕೊಟ್ಟಿರುವ ಸಂದೇಶಗಳನ್ನು ಅವಲೋಕಿಸಿಯು ಪ್ರಸ್ತುತ ಪ್ರಜ್ಞಾವಂತ ಜನರೇ ಮೌಢ್ಯ ಆಚರಣೆಗೆ ಒಳಗಾಗಿದ್ದಾರೆ. ತಮ್ಮಲ್ಲಿರುವ ಶಕ್ತಿಯನ್ನು ಮರೆತು, ಕಲ್ಲು, ಮಣ್ಣು,

ಮರ, ಪಂಚಲೋಹದಿಂದ ಮಾಡಿದ ಮೂರ್ತಿಗಳು, ತೀರ್ಥಕ್ಷೇತ್ರಗಳಲ್ಲಿರುವ ಮೂರ್ತಿಗಳು ದೇವರಲ್ಲ. ತನ್ನ ತಾನರಿದು ತಾನಾರೆಂದು ತಿಳಿದರೆ ತಾನೇ ದೇವ ಎಂದು ಬಾಲ ಸಂಗಯ್ಯನವರು ಹೇಳುತ್ತಾರೆ.

'ಕಲ್ಲು ದೇವರು ದೇವರಲ್ಲ, ಮಣ್ಣು ದೇವರು ದೇವರಲ್ಲ,

ಮರ ದೇವರು ದೇವರಲ್ಲ, ಪಂಚಲೋಹದಿಂದ ಮಾಡಿದ ದೇವರು

ದೇವರಲ್ಲ. ಸೇತು ರಾಮೇಶ್ವರ, ಗೋಕರ್ಣ, ಕಾಶಿ, ಕೇದಾರ

ಮೊದಲಾಗಿ ಅಷ್ಟಾಷಷ್ಟಿಕೋಟಿ ಪುಣ್ಯಕ್ಷೇತ್ರಂಗಳಲ್ಲಿಹ ದೇವರು

ದೇವರಲ್ಲ. ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೇ

ದೇವ ನೋಡಾ, ಅಪ್ರಮಾಣ ಕೂಡಲಸಂಗಮದೇವಾ.' (ವ.ಶಾ.ಸಾ.ವ. ೨೨೩)

ಅನೇಕರು ಕಲ್ಲೇ ದೇವರೆಂದು ಪೂಜಿಸುತ್ತಾರೆ. ಆದ್ದರಿಂದ ಅವರು ಸಾಧನೆಯ ಸೋಪಾನಗಳನ್ನು ಏರಲಾರರು. ಪ್ರಾಣಲಿಂಗಾದಿಗಳ ದರ್ಶನ ಮತ್ತು ಸಾಮರಸ್ಯ ಸಿದ್ಧಿಯನ್ನು ಪಡೆಯರು. ಆದುದರಿಂದ ಅವರು ಮಾಡುವ ಪೂಜೆ ವ್ಯರ್ಥ ಪ್ರಯಾಸವಾಗುತ್ತದೆ ಎಂದು ಅಲ್ಲಮರು ತಿಳಿಸುತ್ತಾರೆ.

'ಕಲ್ಲು ದೇವರೆಂದು ಪೂಜಿಸುವರು, ಆಗದು ಕಾಣಿರೋ!

ಆಗಡಿಗರಾದಿರಲ್ಲಾ.

ಮುಂದೆ ಹುಟ್ಟುವ ಕೂಸಿಂಗೆ

ಇಂದು ಮೊಲೆಯ ಕೊಡುವಂತೆ ಗುಹೇಶ್ವರಾ!' (ಸ.ವ.ಸಂ:೨ ವ.ಸಂ, ೨೧೦)

ಬನ್ನಿಮರ, ಅರಳೆಮರ, ತುಳಸಿ ಮುಂತಾದ ಕೆಲವು ಗಿಡಮರಗಳಲ್ಲಿ ಔಷಧೀಯ ಗುಣಗಳಿವೆ. ಕೆಲವು ಹೇರಳವಾಗಿ ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ಅದಕ್ಕಾಗಿ ಆರೋಗ್ಯದ ತೊಂದರೆ ಇದ್ದವರಿಗೆ ಅಂತಹ ಮರಗಳನ್ನು ಬೆಳಗಿನ ಜಾವದಲ್ಲಿ ಸುತ್ತು ಹಾಕಲು ಕೆಲ ನಾಟಿ ವೈದ್ಯರು ಸೂಚಿಸುತ್ತಾರೆ. ಆದರೆ ಅವು ದೇವರೆಂದು ಅವುಗಳಿಗೆ ಸೀರೆ ಸುತ್ತುವುದು, ಬಳೆ ತೊಡಿಸುವುದು, ಲಗ್ನ ಮಾಡುವುದು, ತೊಟ್ಟಿಲ, ಟೆಂಗಿನಕಾಯಿ ಕಟ್ಟುವುದು ಮೂಢನಂಬಿಕೆ. ಕೆಲವು ತೀರ್ಥಗಳಲ್ಲಿ ಚರ್ಮರೋಗ ವಾಸಿ ಮಾಡುವ ಗುಣವಿರಬಹುದು. ಹಾಗೆಂದ ಮಾತ್ರಕ್ಕೆ ಎಲ್ಲ ತೀರ್ಥಗಳು ದೇವರೆಂದು ಕಂಡ ಕಂಡಲ್ಲಿ ಮುಳುಗುವುದರಲ್ಲಿ ಅರ್ಥವಿಲ್ಲ. ಮರಗಳನ್ನು ರಕ್ಷಿಸುವುದು, ನದಿಗಳ ನೀರು ಕಲುಷಿತವಾಗದಂತೆ ನೋಡಿಕೊಳ್ಳುವುದು ಎಲ್ಲರ ಜವಾದ್ಬಾರಿಯಾಗಿದೆ.

ಪ್ರಸ್ತುತ ಕಾಲದ ಬುದ್ಧಿವಂತ ಮೇದಾವಿಗಳಲ್ಲಿಯೆ ಗಂಗಾಸ್ನಾನ ಮುಂತಾದವುಗಳಿಂದ ದೋಷ, ಪಾಪ ಅಳಿದು ಪುಣ್ಯಪ್ರಾಪ್ತಿಯಾಗುವುದು ಎಂಬ ನಂಬಿಕೆಯಿದೆ. ಅಂಥ ನಂಬಿಕೆಯನ್ನು ಹೋಗಲಾಡಿಸುವ ಸಿದ್ಧರಾಮೇಶ್ವರರ ವಚನ :

'ಒಬ್ಬರ ಮನವ ನೋಯಿಸಿ, ಒಬ್ಬರ ಮನವ ಘಾತವ ಮಾಡಿ

ಗಂಗೆಯ ಮುಳುಗಿದಡೇನಾಗುವುದಯ್ಯಾ?

ಚಂದ್ರನು ಗಂಗೆಯ ತಡಿಯಲ್ಲಿದ್ದಡೇನು?

ಕಲಂಕ ಬಿಡದಾಯಿತ್ತಯ್ಯಾ?

ಅದು ಕಾರಣ

ಮನವ ನೋಯಿಸಿದವನೆ, ಒಬ್ಬರ ಘಾತವ ಮಾಡದವನೆ

ಪರಮ ಪಾವನ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನ.' (ವ.ಶಾ.ಸಾ.ವ. ೧೪೭೬)

ಗಂಗಾಸ್ನಾನ ಬಹಿರಂಗದ ಕೊಳೆಯನ್ನು ತೆಗೆಯಬಹುದು. ಅಂತರಂಗದ ಕೊಳೆಯನ್ನು ತೆಗೆಯಲಾರದು. ಪರರ ಮನಸ್ಸನ್ನೂ ನೋಹಿಸಿ, ಮೋಸ ವಂಚನೆ ಮಾಡಿ ಗಂಗೆಯಲ್ಲಿ ಸ್ನಾನ ಮಾಡಿದರೆ ಮೋಸ, ವಂಚನೆಯ ಕಲಂಕ ಹೋಗಲಾರದು ಎಂದು ಸಿದ್ಧರಾಮೇಶ್ವರರು ಹೇಳುತ್ತಾರೆ.

ಪೌರಾಣಿಕ ಕಥೆಯ ನಾಯಕನಾದ ಶಿವನ ಜಡೆಯಲ್ಲಿ ಗಂಗೆ ಇದ್ದಾಳೆ ಮತ್ತು ಅವಳ ತಲಿಯಲ್ಲಿಯೇ ಚಂದ್ರನಿದ್ದಾನೆ. ನಿರಂತರವಾಗಿ ಗಂಗಾಜಲ ಚಂದ್ರನ ಮೇಲೆ ಬೀಳುತ್ತಿದ್ದರೂ ಚಂದ್ರನು ಗುರುಪತ್ನಿಯನ್ನು ಮೋಹಿಸಿದ್ದಕ್ಕಾಗಿ ಅಂಟಿದ ಗುರುದ್ರೋಹಿ ಎಂಬ ಕಲಂಕ ಇನ್ನೂ ಹೋಗಿಲ್ಲ ಅದಕ್ಕಾಗಿ ಗಂಗೆಯಲ್ಲಿ ಸ್ನಾನ ಮಾಡಿದರೆ ಮಾಡಿದ ಪಾಪಗಳು ತೊಳೆದು ಹೋಗುತ್ತವೆ ಎಂಬ ನಂಬಿಕೆ ಅರ್ಥಹೀನವಾದುದು. ಪರರಿಗೆ ಮೋಸ, ವಂಚನೆ ಮಾಡದವನೇ ಪರಮಪಾವನ ಎಂದು ಸಿದ್ಧರಾಮೇಶ್ವರರ ವಚನಾರ್ಥವಾಗಿದೆ.

ಮಕರ ಸಂಕ್ರಾಂತಿಯಂದು ಸೂರ್ಯನು ದಕ್ಷಿನಾಯನದಿಂದ ಉತ್ತರಾಯಣಕ್ಕೆ ಪ್ರವೇಶವನ್ನು ಹೊಂದುತ್ತಾನೆ. ಇದು ಅತ್ಯಂತ ಪವಿತ್ರ ದಿನ ಎಂದು ನಂಬಿಕೆಯಿದೆ. ಇದು ಪ್ರತಿವರ್ಷ ಜನವರಿ ೧೪ ರಂದು ಬರುವುದು ಎಂದು ಹೆಳುತ್ತಾರೆ. ಅಂದು ಪ್ರಾತಃಕಾಲದಲ್ಲಿ ನದಿಸ್ನಾನ ಮಾಡಿ ಸೂರ್ಯದೇವನಿಗೆ ಅರ್ಘ್ಯವನ್ನು ಅರ್ಪಿಸಿ ನಮಸ್ಕರಿಸಿದರೆ ಸಪ್ತಾಶ್ವರಥಾರೂಢನಾದ ಸೂರ್ಯದೇವ ಅನಂತ ಪುಣ್ಯಫಲ ನೀಡುತ್ತಾನೆ ಎಂಬ ನಂಬಿಕೆಯಿದೆ. ಆದರೆ ನಿತ್ಯ ಗತಿಶೀಲವಾದ ವಿಶ್ವವು ಸೌರವ್ಯೂಹದ ವಿನ್ಯಾಸದಲ್ಲಿಯೂ ಬದಲಾವಣೆ ಮಾಡಿದೆ. ಅದರ ಫಲವಾಗಿ ಉತ್ತರಾಯಣಾರಂಭದ ದಿನದಲ್ಲಿಯೂ ಬದಲಾವಣೆ ಆಗುತ್ತದೆ ಎಂಬುದು ವಿಜ್ಞಾನಿಗಳ ಅಭಿಮತ. ಆದರೆ ಮಕರ ಸಂಕ್ರಮಣ ಮಾತ್ರ ಸ್ಥಗಿತ ಪರಂಪರೆಯಂತೆ ಜನವರಿ ೧೪ ರಂದು ಉಳಿದುಕೊಂಡಿದೆ. ಅದಕ್ಕಾಗಿ ಜನವರಿ ೧೪ ಸಂಕ್ರಾಂತಿ ದಿನವೆಂದು ಹೇಳುವುದಾಗಲಿ, ಅದು ಪವಿತ್ರದಿನವೆಂದು ನಂಬುವುದಾಗಲಿ ಅವೈಜ್ಞಾನಿಕ. ನಿಜವಾದ ಶಿವಭಕ್ತನಿಗೆ ಪ್ರತಿದಿನ ಪವಿತ್ರವಾದುದು.

ಹಿಮಾಲಯದ ಬ್ರಹ್ಮಕುಂಡದ ಗಂಗಾಜಲ ಬಹಳ ಪವಿತ್ರವಾದುದು ಎಂದು ಶಿವರಾತ್ರಿ ನಿಮಿತ್ಯ ಭಕ್ತರಿಗೆ ತೀರ್ಥರೂಪದಲ್ಲಿ ನೀಡಲು ಎಲ್ಲ ಮುಜರಾಯಿ ದೇವಾಲಯಗಳಿಗೆ ಸರಕಾರ

ಗಂಗಾಜಲವನ್ನು ಸರಬರಾಜು ಮಾಡುವ ವ್ಯವಸ್ಥೆ ಮಾಡುತ್ತಿದೆ. ಆದರೆ ನಿಜವಾದ ತೀರ್ಥ ಕುರಿತು ನಮ್ಮ ಜೇಡರ ದಾಸಿಮಯ್ಯನವರ ವಚನ ಹೇಳುತ್ತದೆ,

'ಸತ್ಯದ ನುಡಿ ತೀರ್ಥ, ಭಕ್ತಿಯ ನಡೆ ತೀರ್ಥ,

ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ,

ಹರಿವಾ ನದಿ ಎತ್ತಣಾ ತೀರ್ಥ ರಾಮನಾಥ.'

(ಸ.ವ.ಸಂ:೭ ವ.ಸಂ, ೮೬೦)

ಬುದ್ಧನ ನಡೆ-ನುಡಿ ಅಂಗೂಲಿ ಮಾಲನಂತಹ ರಾಕ್ಷಸನನ್ನು ಬೌದ್ಧನನ್ನಾಗಿಸಿತು. ಬಸವನ ನಡೆ-ನುಡಿ ಕಳ್ಳನನ್ನು ಭಕ್ತನನ್ನಾಗಿಸಿತು. ಅದಕ್ಕಾಗಿ ಮನುಷ್ಯರನ್ನು ಬದಲಾಯಿಸುವ ಸತ್ಯದ ನಡೆ-ನುಡಿಗಳೆ ಪವಿತ್ರವಾದ ತಿರ್ಥಗಳು.

'ನಿನ್ನ ಸಾಹೇಬ್ ನಿನ್ನಲ್ಲಿಯೇ ಇದ್ದಾನೆ. ಅವನನ್ನು ಹುಡುಕಲು ನೀನೆಲ್ಲಿಗೆ ಹೋಗಬೇಡ' ಎಂದು ಕಬೀರದಾಸರು ಹೇಳಿದರೆ, 'The only to worship is the human, Soal in the human body, the highest temple' 'ದೇವರೆಂಬ ಪವಿತ್ರವಾದ ದೇವಾಲಯದಲ್ಲಿರುವ ಆತ್ಮನೊಬ್ಬನೇ ದೇವನು' ಎಂದು ಸ್ವಾಮಿ ವಿವೇಕಾನಂದರು ಹೇಳಿದರೆ, 'ನಮ್ಮೊಳಗಿರುವ ದೇವರನ್ನು ಹೊರಗೇಕೆ ಹುಡುಕುವುದು?' ಎಂದು ಮಹಾತ್ಮಾ ಗಾಂಧೀಜಿಯವರು ವೈಚಾರಿಕವಾಗಿ ಪ್ರಶ್ನಿಸುತ್ತಾರೆ. ಮನೆಯಲ್ಲಿ ಲಕ್ಷ್ಮೀ ಪೂಜೆ ಮುಂತಾದವುಗಳಲ್ಲಿ ಮನೆಯವರೇ ನೀರು ತುಂಬಿದ ತಂಬಿಗೆಯ ಮೇಲೆ ಕಾಯಿಯಿಟ್ಟು ವಸ್ತ್ರಹೊದಿಸಿ ತಮ್ಮ ಆಭರಣ ಹಾಕಿ ದೇವರೆಂದು ಪೂಜಿಸುವುದು ದೇವರ ಆಟ ಅಲ್ಲವೆ. ಪರಂಪರೆ ಎಂದು ವಿಚಾರವಿಲ್ಲದೆ ಇಂಥ ದೈವಂಗಳನು ಆರಾಧಿಸುತ್ತ ಬಂದಿರುವರು. ಮನೆಯೊಳಗೆ ದೇವರಿದ್ದಾನೆಂದು ಯಾರು ಮನೆಯ ಬಾಗಿಲು ತಗೆದು ಮಲಗುವುದಿಲ್ಲ. ಅದೇ ಉತ್ತಮ ನಾಯಿ ಇದ್ದರೆ ಬಾಗಿಲು ತೆರೆದು ಮಲಗುತ್ತೇವೆ. ನಾಯಿಯ ಮೇಲೆ ವಿಶ್ವಾಸವಿದೆ, ದೇವರ ಮೇಲೆ ಇಲ್ಲ. ಕಳ್ಳರು ಬಂದಾಗ ದೇವರು ನಮ್ಮನ್ನು ರಕ್ಷಿಸುವ ಬದಲು ನಾವೇ ದೇವರನ್ನು ರಕ್ಷಿಸಬೇಕಾಗುತ್ತದೆ. ಅದಕ್ಕಾಗಿ ಇಂಥ ದೇವರುಗಳನ್ನು ವಚನಕಾರರು ಖಂಡಿಸಿದ್ದಾರೆ.

'ವೀರಭದ್ರ, ಬಸವಣ್ಣ, ಮಲ್ಲಿಕಾರ್ಜುನನೆಂಬ ದೈವಂಗಳಿಗೆ

ನಮ್ಮ ಕುಲದೈವಗಳೆಂದು ಹೇಳುವವರಿಗೆ

ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ

ಪಾದೋದಕ, ಪ್ರಸಾದವಿಲ್ಲ ಕೂಡಲಸಂಗಮದೇವಾ.' (ವ.ಶಾ.ಸಾ.ವ. ೧೪೬೩)

ಪರಿಹಾರ ಧರ್ಮವನ್ನು ಸೂಚಿಸುವ ಹೊರಗಿನ ದೇವರುಗಳು ದೇವರೇ ಅಲ್ಲ. ಆತ್ಮವಿಶ್ವಾಸ ಕಳೆದುಕೊಂಡು ಭಯದಿಂದ ಪೂಜಿಸುವುದು ಪೂಜೆ ಅಲ್ಲ. ಆತ್ಮವಿಶ್ವಾಸ ಪೂರಿತ ದಯಾಮೂಲ ಧರ್ಮವೇ ನಿಜವಾದದ್ದು. 'ತನ್ನ ಬಿಟ್ಟು ದೇವರಿಲ್ಲ ಮಣ್ಣುಬಿಟ್ಟು ಮಡಿಕೆಯಿಲ್ಲ ಧರಣಿಯ ಕಲ್ಲಿಗೆ

ಶರಣೆಂದು ಪೂಜೆಯ ಮಾಡಬಾರದು' ಎಂಬ ನಾಡನುಡಿಗಳನ್ನು ಪರಿಶೀಲಿಸಿದಾಗ ಹಾಗೂ ಕೈಲಾಸದಲ್ಲಿರುವ ದೇವರುಗಳು ದೇವಾಲಯಗಳಲ್ಲಿ ಹಾಗೂ ಮನೆಯ ಜಗುಲಿಗಳಲ್ಲಿರುವ ಮೂರ್ತಿಗಳು ಪೂಜಿಸಲು ಯೋಗ್ಯವಲ್ಲದವು ಎಂಬುದು ತಿಳಿದಿರಲಿಕ್ಕೆ ಸಾಕು. ತನ್ನಲ್ಲಿಯೇ ದೇವರಿದ್ದಾನೆಂದು ವಚನಕಾರರು 'ಕರಿಯು ಕನ್ನಡಿಯೊಳಗಡಗಿದಂತೆ ನೀ ಎನ್ನೊಳಡಗಿದೆಕೂಡಲಸಂಗಮ ದೇವಾ' ಎಂದು ಹೇಳಿದ ವಚನದಸಾಲು ೧೨ನೇ ಶತಮಾನದಿಂದ ೨೧ನೇ ಶತಮಾನದ ವರೆಗೆ ದೇವರ ಕಲ್ಪನೆಯನ್ನು ಹೆಳುತ್ತಲೇ ಇದೆ.

ಪ್ರಸ್ತುತ ದಿನಗಳಲ್ಲಿ ಮನೆದೇವರು, ಕುಲದೇವತೆ, ಆರಾಧ್ಯದೇವರು ಎಂದು ಬಹುದೇವರನ್ನು ಹೇಳುವುದರ ಕುರಿತು ದೇವನೊಬ್ಬನೇ ಎಂದು ವಚನವೊಂದು ಎಚ್ಚರಿಸುತ್ತದೆ.

'ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ

ಒಬ್ಬನೇ ಕಾಣಿರೋ, ಇಬ್ಬರೆಂಬುದು ಹುಸಿನೋಡಾ?

ಕೂಡಲಸಂಗಮ ದೇವನಲ್ಲದೆ ಇಲ್ಲವೆಂದಿತ್ತು ವೇದ' (ಬ.ಚ.ಸಂ, ವ.ಸಂ,೮೨೧)

ಜನರು ಲೌಕಿಕ ಸುಖದ ಬಯಕೆಯಿಂದ ನೂರಾರು ದೇವತೆಗಳನ್ನು ಕಲ್ಪಿಸಿಕೊಂಡಿದ್ದಾರೆ. ಮಾರಯ್ಯಾ, ಬೀರಯ್ಯಾ, ಕಾಳಯ್ಯಾ, ಮಾಳಯ್ಯಾ ಮೊದಲಾದ ದೈವಗಳು ಊರ ದಾರಿಯಲ್ಲಿ, ಹಾಳು ಮೊರಡಿಗಳಲ್ಲಿ, ಕೆರೆ, ಬಾವಿಕಟ್ಟೆಗಳಲ್ಲಿ ವಾಸಿಸುತ್ತವೆ. ಮನೆಯಲ್ಲಿ ಏನಾದರೂ ಸಮಸ್ಯೆಯಾದರೆ ಈ ದೇವತೆಗಳ ಕಾಟವೆಂದು ಜನ ಅವುಗಳಿಗೆ ಮಾರುಹೋಗುತ್ತಾರೆ. ಬಲಿ ಕೊಡುವುದು, ಎಡೆ ನೀಡುವುದು ಮೊದಲಾದವುಗಳಿಂದ ಅವುಗಳನ್ನು ತೃಪ್ತಿಪಡಿಸಬೇಕೆಂದು ಬಯಸುತ್ತಾರೆ. ರೋಗ ವಾಸಿಯಾಗದಿದ್ದರೆ ವೈದ್ಯರನ್ನು ಬದಲಾಯಿಸುವಂತೆ ಜನರು ದೇವರನ್ನು ಬದಲಾಯಿಸುತ್ತಾರೆ.

ಒಂದು ದೇವರಿಂದ ಸಮಸ್ಯೆ ಬಗೆಹರಿಯದಿದ್ದರೆ ಇನ್ನೊಂದು ದೇವರಿಗೆ ಬೇಡಿಕೊಳ್ಳುವರು. ಈ ದೇವರು ಸರಿಯಿಲ್ಲ ಆ ದೇವರು ಜಾಗೃತ ಎಂದು ಯಾರಾದರೂ ಹೇಳಿದರೆ ಅಲ್ಲಿಗೂ ಹೋಗುತ್ತಾರೆ. ಭಯದಿಂದ ಹಲವು ದೇವರ ಹಾವಳಿಗೆ ಸಿಕ್ಕಿಹಾಕಿಕೊಳ್ಳದೆ ಭಕ್ತಿಯಿಂದ ಏಕೈಕ ನಿಷ್ಠೆಯಿಂದ 'ಕೂಡಲಸಂಗಮದೇವಗೆ ಶರಣು' ಎಂದರೆ ಸಾಕು ಎಂದು ಬಸವಣ್ಣನವರ ವಚನದ ಹೇಳಿಕೆಯಾಗಿದೆ.

'ಹಾಳು ಮೊರಡಿಗಳಲ್ಲಿ ಊರ ದಾರಿಗಳಲ್ಲಿ

ಕೆರೆ, ಬಾವಿ, ಹೂಗಿಡ, ಮರಂಗಳಲ್ಲಿ

ಗ್ರಾಮಮಧ್ಯಂಗಳಲ್ಲಿ ಜಲಪಥ ಪಟ್ಟಣ ಪ್ರದೇಶದಲ್ಲಿ

ಹಿರಿಯಾಲದ ಮರದಲ್ಲಿ ಮನೆಯಮಾಡಿ,

ಕರೆವೆಮ್ಮೆಯ ಹಸುಗೂಸು ಬಸುರಿ ಬಾಣತಿ

ಕುಮಾರಿ ಕೊಡಗೂಸು ಎಂಬವರ ಹಿಡಿದುಂಬ, ತಿರಿದುಂಬ

ಮಾರಯ್ಯ, ಬೀರಯ್ಯ, ಕೇಚಲಗಾವಿಲ ಅಂತರ ಬೆಂತರ

ಕಾಳಯ್ಯ, ಮಾರಯ್ಯ, ಮೂಳಯ್ಯ, ಕೋತಯ್ಯಗಳೆಂಬ ನೂರು

ಮಡಿಕೆಗೆ ನಮ್ಮ ಕೂಡಲಸಂಗಮದೇವ

ಶರಣೆಂಬುದೆಂದು ದಡಿ ಸಾಲದೆ?' (ವ.ಶಾ.ಸಾ.ವ. ೧೬೯)

ವಚನಕಾರರು ನಾಸ್ತಿಕರಲ್ಲ. ಸಂಪೂರ್ಣ ಆಸ್ತಿಕರು. ಆದರೆ ಏಕದೇವೋಪಾಸಕರು. ಜಗತ್ತಿಗೆ ದೇವರು ಒಬ್ಬನೇ. ಅವನು ಶಾಶ್ವತ. ಆತನೇ ಶಿವ, ಮಹಾದೇವ, ಪರಮಾತ್ಮ, ಸರ್ವ ಜೀವಿಗಳಿಗೆ ಒಡೆಯನಾದ ಪಶುಪತಿ ಎಂದು ಬಸವಣ್ಣನವರ ವಚನ ಹೆಳುತ್ತದೆ.

'ಸ್ವಾಮಿ ನೀನು, ಶಾಶ್ವತ ನೀನು

ಎತ್ತಿದೆ ಬಿರಿದ ಜಗವೆಲ್ಲರಿಯಲು

ಮಹಾದೇವ, ಮಹಾದೇವ, ಮಹಾದೇವ

ಇಲ್ಲಿಂದ ಮೇಲೆ ಶಬ್ದವಿಲ್ಲ

ಪಶುಪತಿ ಜಗಕ್ಕೇಕೋದೇವ

ಸ್ವರ್ಗ ಮರ್ತ್ಯ ಪಾತಾಳದೊಳಗೆ

ಒಬ್ಬನೇ ದೇವ ಕೂಡಲಸಂಗಮದೇವ.' –(ಸ.ವ.ಸಂ:೧ ವ.ಸಂ, ೫೨೭)

ಶಿವನು ಸರ್ವಾಂತರ್ಯಾಮಿಯಾಗಿದ್ದಾನೆ. 'ಮಣ್ಣು ಬಿಟ್ಟು ಮಡಿಕೆಯಿಲ್ಲ, ತನ್ನ ಬಿಟ್ಟು ದೇವರಿಲ್ಲ' ಎಂಬಂತೆ ಪ್ರತಿಯೊಂದು ಜೀವಿಯಲ್ಲಿ ದೇವನಿದ್ದಾನೆ. ಆದರೆ ಅಗಸ ನೀರೊಳಗಿರ್ದು ನೀರಿಗಾಗಿ ಪರಿತಪಿಸುವಂತೆ, ಹರಿಯುವ ನದಿಯ ದಡದಲ್ಲಿಯೇ ಇದ್ದು ನೀರಿಗಾಗಿ ಬಾವಿ ತೋಡುವಂತೆ, ಸಾಗರದಲ್ಲಿಯ ಮೀನು ಸಾಗರವನ್ನು ಕಾಣಬೇಕೆಂದು ಹಾತೊರೆಯುವಂತೆ ಜನರು ದೇವರ ಹುಡುಕಾಟದಲ್ಲಿ ಕಾಲಹರಣ ಮಾಡುತ್ತಿದ್ದಾರೆ. ತೀರ್ಥಯಾತ್ರೆ ಮಾಡುತ್ತಾರೆ. ಲಕ್ಷ-ಲಕ್ಷ ಬಿಲ್ವಾರ್ಚನೆ ಮಾಡುತ್ತಾರೆ. ಅಷ್ಟೇ ಅಲ್ಲ ದೇವರಿಗಾಗಿಯೇ ಒಂದು ದೇವಾಲಯವನ್ನು ತಾವೇ ನಿರ್ಮಿಸಿ ಅದರಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡುವುದು ಪ್ರಸ್ತುತ ಪ್ರಜ್ಞಾವಂತರ ಕಾಲದಲ್ಲಿ ಹಾಸ್ಯಾಸ್ಪದವೆನಿಸುತ್ತದೆ.

ಇಂಥ ದೇವಾಲಯಗಳಲ್ಲಿ ಇರುವ ದೇವರುಗಳನ್ನು ಪೂಜಿಸಲು, ಜನರ ಭಯವನ್ನು ಬಂಡವಾಳವನ್ನಾಗಿಸಿಕೊಂಡು ಅದನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳಲು ಅರ್ಚಕರ ವೃಂದ ಹುಟ್ಟಿಕೊಂಡಿತು. ಅವರು ಹೇಳಿದಂತೆ ಉಳ್ಳವರು ದೇವಾಲಯಗಳನ್ನು ಕಟ್ಟಲಾರಂಭಿಸಿದರು.

ಬಡವರು ಎಲ್ಲ ಕಟ್ಟಡಗಳನ್ನು ಸಹಿಸುತ್ತ ಉಳ್ಳವರ ಸೇವೆ ಮಾಡುತ್ತಾ ಬಂದಿದ್ದರೂ ಅವರಿಗೆ ಉಳ್ಳವರ ದೇವಾಲಯಗಳಲ್ಲಿ ಪ್ರವೇಶವಿರಲಿಲ್ಲ. ಪುರೋಹಿತ ವರ್ಗವು ಸ್ತ್ರೀಯರಿಗೆ, ಸಾಮಾನ್ಯ

ಜನರಿಗೆ ದೇವಾಲಯ ಪ್ರವೇಶವನ್ನು ಬಹಿಷ್ಕರಿಸಿದರೆ ಬಸವಣ್ಣನವರು ದೇವಾಲಯ ಸಂಸ್ಕೃತಿಯನ್ನೇ ಬಹಿಷ್ಕರಿಸಿದರು ದೇಹವೇ ದೇವಾಲಯ, ಅಂತರಂಗದಲ್ಲಿರುವ ಚೈತನ್ಯವೇ ದೇವರು ಎಂಬ ಸತ್ಯವನ್ನು ತಿಳಿಸಿದರು,

'ಉಳ್ಳವರು ಶಿವಾಲಯ ಮಾಡುವರು,

ನಾನೇನು ಮಾಡುವೆ ಬಡವನಯ್ಯಾ,

ಎನ್ನ ಕಾಲೆ ಕಂಭ, ದೇಹವೆ ದೇಗುಲ

ಶಿರವೆ ಹೊನ್ನ ಕಲಶವಯ್ಯಾ,

ಕೂಡಲಸಂಗಮದೇವಾ, ಕೇಳಯ್ಯಾ

ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.' (ವ.ಶಾ.ಸಾ.ವ. ೨೦೧೦)

ದೇಹವು ದೇವನಿರುವ ಪವಿತ್ರವಾದ ಆಲಯ. ಈ ದೇವಾಲಯಕ್ಕೆ ಸನ್ಮಾರ್ಗದತ್ತ ಸಾಗುವ ಕಾಲುಗಳೇ ಕಂಭ. ಸುಜ್ಞಾನವನ್ನು ಹೊಂದಿದ, ಸಹಸ್ರಾರ ಚಕ್ರವಿರುವ ಶಿರವೆ ಬಂಗಾರದ ಕಳಸ ಎಂದು ಬಸವಣ್ಣನವರ ವಚನ ಹೇಳುತ್ತದೆ.

ಈ ಕಾಯವು ಕೂಡಲಸಂಗಮ ದೇವನನ್ನು ಒಲಿಸಲು ಬಂದ ಪ್ರಸಾದ ಕಾಯ. ಯಾವ ಕಾರಣಕ್ಕೂ ಇದರ ಪಾವಿತ್ರ್ಯತೆಯನ್ನು ಕೆಡಿಸಿಕೊಳ್ಳಬಾರದು. ಈ ದೇಹವೆಂಬ ದೇವಾಲಯದಲ್ಲಿ ಚೈತನ್ಯರೂಪಿ ದೇವನಿದ್ದಾನೆ. 'ಜಂಗಮ' ಎಂದರೆ ಅನಂತವಾದ, ನಿರಂತರವಾದ ಚೈತನ್ಯ ದೇವಾಲಯವನ್ನು ಕುರಿತು ಅಲ್ಲಮ ಪ್ರಭುಗಳ ವಚನದ ನಿಲುವು:

'ದೇಹದೊಳಗೆ ದೇವಾಲಯವಿದ್ದು

ಮತ್ತೆ ಬೇರೆ ದೇವಾಲಯವೇಕೆ?

ಎರಡಕ್ಕೆ ಹೇಳಲಿಲ್ಲಯ್ಯಾ?

ಗುಹೇಶ್ವರಾ, ನೀನು ಕಲ್ಲಾದಡೆ ನಾನೇನಪ್ಪೆನು!' (ಸ.ವ.ಸಂ:೨ ವ.ಸಂ, ೨೧೩)

ಅಲ್ಲಮರ ವಚನ ಹೇಳುತ್ತದೆ ದೇಹವಿದು ನಿಸರ್ಗ ನಿರ್ಮಿಸಿದ ಸುಂದರ ದೇವಾಲಯ. ಚೈತನ್ಯ ಘನವಸ್ತುವನ್ನು ಅಭಿವ್ಯಕ್ತಿಗೊಳಿಸುವ ಭವ್ಯನಿಲಯ. ಇದಕ್ಕಿಂತ ಭಿನ್ನವಾದ ದೇವಾಲಯದ ಅವಶ್ಯಕತೆಯಿಲ್ಲ. ಚೈತನ್ಯಕ್ಕಿಂತ ಭಿನ್ನವಾದ ದೇವರಿಲ್ಲ. ಸಾಧಕನು ಅರ್ಚಿಸುವ ದೇವನೆ ಕಲ್ಲಾಗಿಬಿಟ್ಟರೆ ಸಾಧಕನ ಗತಿಯೇನು? ಜಡದಲ್ಲಿ ಬೆರೆತು ಜಡವಾಗಬೇಕಾಗುತ್ತದೆಯಷ್ಟೆ.

ರಾಜಾರಾಮ ಮೋಹನರಾಯರಯ 'ದೇಹವೆಂಬ ದೇವಾಲಯದಲ್ಲಿಯೇ ದೇವರನ್ನು ಕಾಣಲು ಯತ್ನಿಸು' ಎಂದು ಸೂಚಿಸಿದ್ದ ದೇವಾಲಯಗಳ ಕಟ್ಟಡಗಳು ಕಲ್ಲಿನವು ಆ ದೇವಾಲಯಗಳ ಒಳಗಿರುವ ದೇವರು ಸಹ ಕಲ್ಲು. ಅಂಥ ಕಲ್ಲಿನ ದೇವಾಲಯಗಳಲ್ಲಿ ಲಿಂಗ ಪ್ರತಿಷ್ಠೆಯನ್ನು ಮಾಡಿದವರಿಗೆ ನರಕ ಎಂದು ಹೆಳುತ್ತಾ ತಮ್ಮ ಇನ್ನೊಂದು ವಚನದಲ್ಲಿ ಅಲ್ಲಮರು ಹೇಳುತ್ತಾರೆ :

'ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ

ಆ ಕಲ್ಲು ಕಲ್ಲ ಮೇಲೆ ಕೆಡೆದಡೆ ದೇವರೆತ್ತ ಹೋದರೊ?

ಲಿಂಗ ಪ್ರತಿಷ್ಠೆಯ ಮಾಡಿದವರಿಗೆ

ನಾಯಕನರಕ ಗುಹೇಶ್ವರಾ.' (ಸ.ವ.ಸಂ:೨ ವ.ಸಂ. ೨೧೨)

ದೇವಾಲಯ ಸಂಸ್ಕೃತಿ ಜಡತ್ವವಾದರೆ ದೇಹ-ದೇವಾಲಯ ಸಂಸ್ಕೃತಿ ಜಡತ್ವವದಿಂದ ಚೈತನ್ಯದೆಡೆಗೆ ಕೊಂಡೊಯ್ಯುತ್ತದೆ. ದೇವಾಲಯ ಸಂಸ್ಕೃತಿ ಮೂಢನಂಬಿಕೆಗಳನ್ನು ಬಿತ್ತಿ, ಭಯವನ್ನು ಬೆಳೆಸಿ ಪರಾವಲಂಬಿಗಳನ್ನಾಗಿಸುತ್ತದೆ. ದೇಹ-ದೇವಾಲಯ ಸಂಸ್ಕೃತಿ ವಾಸ್ತುವಿಕತೆಯನ್ನು ಬಿತ್ತಿ, ವೈಚಾರಿಕತೆಯನ್ನು ಬೆಳೆಸಿ, ಆತ್ಮಸ್ಥೈರ್ಯವನ್ನು ಹೆಚ್ಚಿಸಿ ಸ್ವಾವಲಂಬಿಗಳನ್ನಾಗಿಸುತ್ತದೆ. ದೇವಾಲಯ ಸಂಸ್ಕೃತಿಯಲ್ಲಿ ಪುರೋಹಿತರದೆ ಕಾರುಬಾರು. ದೇಹ-ದೇವಾಲಯ ಸಂಸ್ಕೃತಿಯು ದೇವ ಭಕ್ತರ ನಡುವಿನ ದಲ್ಲಾಳಿಗಳನ್ನು ದೂರೀಕರಿಸಿ ನೇರ ಸಂಬಂಧವನ್ನು ಕಲ್ಪಿಸುತ್ತದೆ. ಅರ್ಚಿಸಲು, ಪೂಜಿಸಲು, ದೈವತ್ವವನ್ನು ಅನುಭವಿಸಲು ಬೇರೆಯವರ ಮಧ್ಯಸ್ಥಿಕೆ ಬೇಕಾಗಿಲ್ಲ. ಹೀಗಾಗಿ ಯಾವ ಧಾರ್ಮಿಕ ಶೋಷಣೆ, ಧಾರ್ಮಿಕ ಭ್ರಷ್ಟಾಚಾರಗಳಲ್ಲಿ ದೇವರ ದರ್ಶನಕ್ಕಾಗಿ ರಾತ್ರಿಯಿಡಿ ಸರದಿಯಲ್ಲಿ ನಿಲ್ಲಬೇಕಾಗಿಲ್ಲ. ಕಾಲ್ತುಳಿತಕ್ಕೆ ಸಿಕ್ಕಿ ಸಾಯುವ ಸಂಭವವಿಲ್ಲ.

ಆಚರಣೆಗಳು :

ವರ್ತಮಾನದ ತಲ್ಲಣಗಳಲ್ಲಿ ಅನೇಕ ಮೌಢ್ಯ ಆಚರಣೆಗಳಿಗೆ ಜನರು ವಿಪರೀತವಾಗಿ ಮಾರುಹೋಗಿದ್ದಾರೆ. ಪ್ರಕೃತಿಯಲ್ಲಾಗುವ ವೈಪರೀತ್ಯಗಳನ್ನು ಕಂಡು ಭಯಭೀತರಾಗುತ್ತಿದ್ದಾರೆ. ಬೀಸುವ ಗಾಳಿ ಬಿರುಗಾಳಿಯಾದಾಗ, ಬೀಳುವ ಮಳೆ ಭೋರ್ಗರೆದಾಗ, ಬಿಸಿಲಿನ ತಾಪ ಅತಿಯಾದಾಗ ಜೀವ-ಬೀತಿ ಉಂಟಾಗತೊಡಗಿತು. ಗಾಳಿ ಮೇಲಿನಿಂದ ಬೀಸುತ್ತದೆ, ಮಳೆ ಮೇಲಿನಿಂದ ಬೀಳುತ್ತದೆ, ಬೆಳಕು ಮೇಲಿನಿಂದ ಬರುತ್ತದೆ. ಅದಕ್ಕಾಗಿ ಇವುಗಳನ್ನೆಲ್ಲಾ ಕೊಡುವ ಶಕ್ತಿ ಮೇಲಿರುವುದು ಎಂದು ಭ್ರಮಿಸಿದರು. ಆ ಶಕ್ತಿಗೆ ದೇವರೆಂದರು. ಭಯ ಉಂಟಾದಾಗ ಮೂಖ ಮೇಲೆ ಮಾಡಿ ಕೈ ಎತ್ತಿ ಓ ದೇವರೇ! ನಮ್ಮನ್ನು ಕಾಪಾಡು ಎಂದು ಮೊರೆಯಿಡಲು ಪ್ರಾರಂಭಿಸಿದರು. ತಮ್ಮ ಅಳಲಿಕೆ ಬಳಲಿಕೆಗಳಿಗೆ ಮೊರೆಯಿಟ್ಟ ಮಾನವನ ಮಾತುಗಳೇ ಮಂತ್ರ, ಸ್ತೋತ್ರ, ಪ್ರಾರ್ಥನೆಗಳಾದವು.

ಒಮ್ಮೆ ಅರಣ್ಯದಲ್ಲಿ ಕಾಡ್ಗಿಚ್ಚು ಹತ್ತಿತ್ತು. ಹೊತ್ತಿ ಉರಿಯುವ ಬೆಂಕಿಯಿಂದ ಹೊಗೆಯು ಮೇಲೆಯೇ ಹೋಗುವುದನ್ನು ಕಂಡು ಮಾನವನಿಗೆ ಆಶ್ಚರ್ಯವಾಯಿತು. ಬೆಂಕಿಯಿಂದ ಉಂಟಾದ ಹೊಗೆಯು ಅಂತರಿಕ್ಷದಲ್ಲಿರುವ ದೇವನಿಗೆ ತಲುಪುತ್ತದೆ ಎಂದುಕೊಂಡರು. ದೇವರಿಗೆ ಅರ್ಪಿಸಬೇಕಾದುದನ್ನು ಬೆಂಕಿಗೆ ಅರ್ಪಿಸಿದರೆ ಹೊಗೆಯ ಮುಖಾಂತರವಾಗಿ ದೇವರಿಗೆ ತಲುಪುತ್ತದೆ ಎಂಬ ಮೂಢನಂಬಿಕೆಯೊಂದಿಗೆ ಬೆಂಕಿಗೆ ವಸ್ತುಗಳ ಅರ್ಪಣೆ, ಅರ್ಚನೆ ನಡೆಯತೊಡಗಿತು. ಆ ಬೆಂಕಿಯೇ ಅಗ್ನಿದೇವನಾದ. ಅದೇ ನಾಗರಿಕತೆಗೊಂಡು ಹೋಮ, ಹವನ, ಯಜ್ಞಗಳು ರೂಢಿಗೊಂಡವು.

ಇಂಥ ಅವೈಜ್ಞಾನಿಕ ವಿಚಾರ ಇಂದಿಗೂ ಮುಂದುವರೆದುದನ್ನು ಕಾಣುತ್ತೇವೆ. ಕೆಲವೇ ವರ್ಗದ ಜನರು ಆಚರಿಸುತ್ತಿದ್ದ ಹೋಮ-ಹವನವನ್ನು ಜನಮರಳೋ ಜಾತ್ರೆ ಮರಳೋ ಎಂಬಂತೆ ಒಬ್ಬರ ಕಂಡು ಇನ್ನೊಬ್ಬರು ಆಚರಿಸುತ್ತಿರುವುದು ವರ್ತಮಾನದ ದೊಡ್ಡ ದುರಂತವಾಗಿದೆ. ಮನೆ ಶಾಂತಿಗಾಗಿ, ಚುನಾವಣೆಯಲ್ಲಿ ಗೆಲ್ಲಲು, ಪ್ರಭಾವಿ ವ್ಯಕ್ತಿ ಅನಾರೋಗ್ಯದಿಂದ ಚೇತರಿಸಿಕೊಳ್ಳಲು, ಅಧಿಕಾರ ಪಡೆಯಲು, ಪಡೆದ ಅಧಿಕಾರ ಶಾಶ್ವತವಾಗಿ ಉಳಿಸಿಕೊಳ್ಳಲು ಹೋಮ-ಹವನಗಳನ್ನು ಮಾಡಿಸುತ್ತಿದ್ದಾರೆ. ಪ್ರಧಾನಿ ಪಟ್ಟ ಉಳಿಯಲೆಂದು ಚಂಡಿಕಾಹೋಮ ಮಾಡಿದರೂ ಪಟ್ಟಕಳೆದುಕೊಂಡ ಉದಾಹರಣೆಗಳಿವೆ. ಮುಖ್ಯ ಮಂತ್ರಿಸ್ಥಾನದ ಭದ್ರತೆಗಾಗಿ ರಾಜಸೂಯ ಯಾಗವನ್ನು ಕೈಕೊಂಡ ಕೆಲವೆ ದಿನಗಳಲ್ಲಿ ಸ್ಥಾನ ಕಳೆದುಕೊಂಡಿದ್ದಾರೆ. ನಮ್ಮ ಸಂವಿದಾನದ ೫೧ನೇ ಪರಿಚ್ಛೇದದ 'ಮೂಲಭೂತ ಕರ್ತವ್ಯ'ಗಳಲ್ಲಿ ಈ ರೀತಿಯಾಗಿ ಘೋಷಿಸಲಾಗಿದೆ :

'It shall be the duty of every citizen of India to develop the scientific temper, humanism and the spirit of enquiry and reform'

ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ದೇಶದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ ಎಂಬುದು ನಮ್ಮ ಸಂವಿಧಾನದ ಆಶಯಗಳಲ್ಲೊಂದಾಗಿದೆ. ಆದರೆ ಸಂವಿಧಾನಾತ್ಮಕ ಹುದ್ದೆಗೇರಿ ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳುವುದಾಗಿ ಪ್ರತಿಜ್ಞಾವಿಧಿ ಸ್ವೀಕರಿಸಿಯೂ ಯಜ್ಞ, ಯಾಗ ವಾಮಾಚಾರಗಳಲ್ಲಿ ಕಾಲಹರಣ ಮಾಡುತ್ತಿದ್ದಾನೆ. ಇನ್ನೂ ಕೆಲವರು ವಾಮ ಮಾರ್ಗದ ಮುಖಾಂತರ ಸಂಗ್ರಹಿಸಿದ ಹಣದ ಜೊತೆಗೆ, ಪಾಪದ ಕೆಸರು ಮೆತ್ತಿಕೊಳ್ಳುವುದೆಂದು, ತಾವು ಮಾಡಿದ ಪಾಪದ ವಿಮೋಚನೆಗಾಗಿ ಒಂದಿಲ್ಲೊಂದು ಪ್ರಾಯಶ್ಚಿತ್ತ ಮಾಡಿಕೊಳ್ಳಲು ಮುಂದಾಗುತ್ತಿರುವುದು ಹಾಸ್ಯಾಸ್ಪದವಾಗಿದೆ. ಶ್ರೀಮಂತ ದೇವರ ಹುಂಡಿಗೆ ಕಪ್ಪುಹಣದ ಕಂತೆಯನ್ನು ಹಾಕುವುದು, ಮಠ-ಮಂದಿರಗಳಿಗೆ ಹೇರಳವಾಗಿ ದಾನ ಮಾಡುವುದು, ತೀರ್ಥಯಾತ್ರೆ ಕೈಗೊಳ್ಳುವುದು, ದೇವಸ್ಥಾನಗಳಿಗೆ ಬೆಳ್ಳಿ ಬಾಗಿಲನ್ನು ಮಾಡಿಸಿಕೊಡುವುದು, ದೇವರಿಗೆ ಚಿನ್ನದ ಕಿರೀಟ ಸಮರ್ಪಿಸುವುದು, ಇಷ್ಟು ಸಾಲದೇ ಹೋಮ-ಹವನವನ್ನು ಮಾಡಿಸಿದರೆ ನಮ್ಮ ಪಾಪ ನಾಶವಾಗುತ್ತದೆ. ಎಂದು ಅತೀಯಾಗಿ ಹಣವನ್ನು ವ್ಯಯ ಮಾಡಿ ಹೋಮ ಮಾಡುವುದು ಪ್ರಸ್ತುತ ಕಾಲದಲ್ಲಿ ವಿಪರೀತವಾಗಿದೆ. ಇಂಥ ಆಚರಣೆಗೆ ಒಳಗಾದವರನ್ನು ವಚನಕಾರನಾದ ಚಂದಿಮರಸನು ತಮ್ಮ ವಚನವೊಂದರಲ್ಲಿ ಈ ರಿತಿ ಎಚ್ಚರಿಸಿದ್ದಾರೆ.

'ಕಿಚ್ಚು ದೈವವೆಂದು ಹವಿಯ ಕೇಳುವರು
ಕಿಚ್ಚು ಮನೆಯ ಸುಡುವಾಗ
ಬಚ್ಚಲ ಕೆಸರ ಬೀದಿಯ ಧೂಳ ಚೆಲ್ಲಿ
ಬೊಬ್ಬಿರಿದು ಎಲ್ಲರ ಕರೆವರು
ಸಿಮ್ಮಲ್ಲಿಗೆಯ ಚೆನ್ನರಾಮನ ಮಂತ್ರ ತಪ್ಪಿದ ಬಳಿಕ
ವಂದಿಸುವುದ ಬಿಟ್ಟು ನಿಂದಿಸುತ್ತಿಪ್ಪರು, ನಂದಿಸುತ್ತಿಪ್ಪರು.' (ವ.ಶಾ.ಸಾ.ವ. ೧೪೭೦)

ಅಗ್ನಿ ದೇವರೆಂದು ಅಗ್ನಿಗೆ ಗಂಧದ ಕಟ್ಟಿಗೆ, ತುಪ್ಪ, ರೇಷ್ಮೆ ಬಟ್ಟೆ, ದಾನ್ಯ, ಮುಂತಾದ ಅಮೂಲ್ಯವಾದ ವಸ್ತುಗಳನ್ನು ಅರ್ಪಿಸುತ್ತಾರೆ. ಆದರೆ ಅಂಥವರ ಮನೆಗೆ ಆಕಸ್ಮಿಕವಾಗಿ ಅಗ್ನಿ ಹತ್ತಿಕೊಂಡರೆ ಬೊಬ್ಬೆಹೊಡೆಯುತ್ತ ಸುತ್ತಲಿನವರನ್ನು ಕರೆಯುವರು. ಬೀದಿಯ ಧೂಳು, ಬಚ್ಚಲ ನೀರ ಚೆಲ್ಲುವರು ಸಾಕ್ಷಾತ್ ಅಗ್ನಿ ದೇವನೆ ಪ್ರತ್ಯಕ್ಷನಾಗಿದ್ದಾನೆಂದು ವಂದಿಸುವುದನ್ನು ಬಿಟ್ಟು ನಿಂದೆಯನ್ನು ಮಾಡುತ್ತ ನಂದಿಸಲು ಯತ್ನಿಸುವರು ಎಂದು ಚಂದಿಮರಸನು ಹೇಳುತ್ತಾ ಹೋಮ-ಹವನಗಳ ಬಗೆಗೆ ಇರುವ ತಪ್ಪು ಕಲ್ಪನೆಯನ್ನು ತೆಗೆದು ಹಾಕುತ್ತಾರೆ.

ಹೋಮ-ಹವನಗಳು ಲೋಕಕಲ್ಯಾಣಕ್ಕಾಗಿ, ಲಕ್ಷದೀಪೋತ್ಸವ ಜ್ಞಾನದ ಪ್ರತೀಕ ಎಂದು ಸಮಾರಂಭಗಳಲ್ಲಿ ಹೇಳುವ ಜನನಾಯಕರೂ, ಮಠಾಧೀಶರೂ ಇದ್ದಾರೆ. ವಸ್ತುಗಳನ್ನು ಬೆಂಕಿಯಲ್ಲಿ ಸುಡುವುದರಿಂದ ಅದೆಂಥ ಕಲ್ಯಾಣವಾದೀತು? ಅವುಗಳನ್ನು ಅವಶ್ಯವಿದ್ದವರಿಗೆ ಕೊಟ್ಟರೆ ಕಲ್ಯಾಣವಾಗುವುದು. ಅಗ್ನಿಯಲ್ಲಿ ಅಮೂಲ್ಯವಾದ ವಸ್ತುಗ:ಳನ್ನು ಸುಡದೆ ಅವಗುಣಗಳಾದ ಅಪ್ರಾಮಾಣಿಕತನ, ಅಹಂಕಾರ, ಮೋಸ, ವಂಚನೆ, ದೋಷ, ಅಸೂಯೆ, ದುರಾಸೆ ಮುಂತಾದವುಗಳನ್ನು ಜ್ಞಾನಾಗ್ನಿಯಲ್ಲಿ ಸುಟ್ಟರೆ ತಮಗೂ ದೇಶಕ್ಕೂ ಕಲ್ಯಾಣವಾದೀತು.

ಕಾಮನೆಗಳನ್ನು ಈಡೇರಿಸಿಕೊಳ್ಳಲು, ಇಷ್ಟಾರ್ಥಸಿದ್ಧಿಗಾಗಿ ಹೋಮ-ಹವನಗಳನ್ನು ಅನೇಕರು ಪ್ರಸ್ತುತದಲ್ಲಿ ಅತೀಯಾಗಿ ಮಾಡುತ್ತಿದ್ದಾರೆ. ಆದರೆ ಮನದ ಕಾಮನೆಗಳೆಂಬ ಹೊಗೆಯನ್ನು ನಿಲ್ಲಿಸಿ ನಿಷ್ಕಾಮರಾಗಿ ಭಕ್ತಿಯ ಮಾಡುವವರು ವಿರಳ ಎಂದು ಅಲ್ಲಮರು ತಮ್ಮ ವಚನದಲ್ಲಿ ವ್ಯಕ್ತಪಡಿಸುತ್ತಾರೆ.

'ಹೋಮ ಮಾಡುವವರ ಕಂಡೆ,
ಹೊಗೆಯ ನಿಲಿಸುವವರಾರನೂ ಕಾಣೆ.
ದೂರ ದಾರಿಯ ನಡೆವರ ಕಂಡೆ.
ಕಾಲುಗಳ ನುಂಗುವರನಾರನೂ ಕಾಣೆ.
ಅಳುತ್ತ ಬೊಬ್ಬೆಗೊಟ್ಟು ರಣದೊಳಗೆ ಅಳಿದು
ಮುಂಡ ಮುಂದೆ ನಡೆವವರ ಕಂಡೆ,
ಹರಿದ ಶಿರನ ಹಿಡಿದುಕೊಂಡು
ಕುಣಿದಾಡುವರನಾರನೂ ಕಾಣೆ ಗುಹೇಶ್ವರಾ!' (ಸ.ವ.ಸಂ:೨ ವ.ಸಂ, ೪೮೯)

ವರ್ತಮಾನದಲ್ಲಿ ವಿಜ್ಞಾನ ಬೆಳೆಯುತ್ತಿದೆ. ಆದರೆ ವೈಚಾರಿಕ ಮನೋಭಾವ ಕ್ಷೀಣಿಸುತ್ತಿದೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಜನರು ಆಧುನಿಕ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ. ಆದರೆ ಅವರಲ್ಲಿರುವ ಮೌಢ್ಯ ಆಚರಣೆಗಳು ಮಾತ್ರ ದೂರವಾಗಿಲ್ಲ. ವೇಗದ ಬದುಕಿನಲ್ಲಿ ಉಂಟಾಗುವ ಒತ್ತಡಗಳನ್ನು ನಿವಾರಿಸಿಕೊಳ್ಳಲು ಸುಶಿಕ್ಷಿತರು ಕೂಡಾ ಸ್ವಯಂಘೋಷಿತ ದೇವರುಗಳ, ಬಾಬಾಗಳ ಪಾದಕ್ಕೆ ಬಿದ್ದು ಕಲಿತ ವಿಜ್ಞಾನದ ಮೂಲತತ್ವಗಳನ್ನೇ ಮರೆಯುತ್ತಿದ್ದಾರೆ. ಶೂನ್ಯದಿಂದ ಏನನ್ನೂ

ಸೃಷ್ಟಿಸಲು ಸಾಧ್ಯವಿಲ್ಲ ಎಂದು ಓದಿ ಅಂಕಗಳಿಸಿದ ವಿದ್ಯಾವಂತರೇ ಅಂಧಶ್ರದ್ಧೆಗಳಿಗೆ ದಾಸರಾಗುತ್ತಿದ್ದಾರೆ. ಗ್ರಹಣವೆಂದರೆ ಕೇವಲ ನೆರಳು ಬೆಳಕುಗಳ ಹಿಡಿವಾಟ ಎಂದು ಪಾಠ ಹೇಳುವ ವಿಜ್ಞಾನದ ಶಿಕ್ಷಕರೂ ಗ್ರಹಣ ಉಂಟಾದಾಗ ಕೆಲವು ವಿಧಿಗಳನ್ನು ಆಚರಿಸುತ್ತಿರುವುದು ವಿಪರ್ಯಾಸ. ಸೌರಮಂಡಲದಲ್ಲಿ ರಾಹುವಿನ ಭೌತಿಕ ಅಸ್ತಿತ್ವವಿಲ್ಲ ಎಂದು ತಿಳಿದ ಅನೇಕ ಭೌತ ವಿಜ್ಞಾನಿಗಳು ರಾಹುಕಾಲ ನಂಬುತ್ತಾರೆ. ಮೂಢ ಆಚರಣೆಗಳಿಗೆ ಸದಾ ಪುಷ್ಟಿಕೊಡುವ ಅರ್ಚಕರ ವೃಂದದ ಜೊತೆಗೆ ವಿಜ್ಞಾನಿಗಳು ಸೇರಿದರೆ ಅದಕ್ಕಿಂತ ದೊಡ್ಡ ದುರಂತ ಬೇರೊಂದಿಲ್ಲ.

ವಿಜ್ಞಾನದ ಆವಿಷ್ಕಾರಗಳನ್ನು ಬಳಸಿಕೊಳ್ಳುತ್ತೇವೆ. ಮೊದಲು ದೂರದವರೆಗೆ ಜನರು ಹೋಗಲು ಎತ್ತಿನಗಾಡಿ, ಕುದರೆಗಾಡಿ ಮುಂತಾದವುಗಳನ್ನು ಬಳಸುತ್ತಿದ್ದರು. ಈಗ ವಾಹನ ಸೌಕರ್ಯವಾಗಿದೆ. ಎತ್ತಿನಗಾಡಿಗೆ ಬದಲಾಗಿ ಯಂತ್ರ ವಾಹನಗಳನ್ನು ಬಳಸುತ್ತಿದ್ದಾರೆ. ಎತ್ತಿನಗಾಡಿಯಲ್ಲಿ ಹೋಗುವುದು ಮೊದಲಿನಿಂದಲೂ ಬಂದ ಪದ್ಧತಿ ಎಂದು ಯಾರೂ ಯಂತ್ರವಾಹನ ಬಿಟ್ಟು ಎತ್ತಿನಗಾಡಿಯಲ್ಲಿ ಹೋಗುವುದಿಲ್ಲ. ಆದರೆ ಕೆಲವು ಹಳೆಯ ಸಂಪ್ರದಾಯಗಳಲ್ಲಿ ಹುರುಳಿಲ್ಲ ಎಂದು ಜ್ಞಾನಿಗಳು ಹೇಳಿದರೂ ಅವುಗಳನ್ನು ಬಿಡಲಿಕ್ಕೆ ಜನರು ಸಿದ್ಧರಿಲ್ಲ. ಅವು ಮೊದಲಿನಿಂದಲೂ ಬಂದವುಗಳು, ಬಿಡಲಿಕ್ಕಾಗುವುದಿಲ್ಲ ಎಂದಂತಾಗುತ್ತದೆ ಅವರ ವಾದ. ಜನರಿಗೆ ಬದಲಾವಣೆ ಬಗ್ಗೆ ಭಯವೋ, ಆತಂಕವೋ ತಿಳಿಯದು. ಬದಲಾವಣೆಗೆ ಅವರ ಮನ ತೆರೆಯುವುದೇ ಇಲ್ಲ. ಹೇಗಿದೆಯೋ ಹಾಗೆಯೇ ಇರಬೇಕೆಂದು ಬಯಸುತ್ತಾರೆ. ಸಮಾಜದಲ್ಲಿ ಅನೇಕ ಅನಿಷ್ಠ ಪದ್ದತಿಗಳಿವೆ. ಅವುಗಳಿಗೆ ಪರಿಹಾರೋಪಾಯಗಳು ಗೊತ್ತು. ಆದರೆ ಬದಲಾವಣೆ ಮಾಡುವ ಕ್ಷಣ ಬಂದಾಗ ಮನಸ್ಸು ಥಟ್ಟನೇ ಹಿಂಜರಿಯುತ್ತದೆ. ಬದಲಾವಣೆಗೆ ಸಿದ್ಧವಾಗುವುದಿಲ್ಲ. ಮನ ತೆರೆಯುವ ತನಕ ಬದಲಾವಣೆ ಕಷ್ಟ. ಕೇವಲ ಬುದ್ಧಿವಂತಿಕೆಯಿದ್ದರೆ ಸಾಲದು ತಮ್ಮಲ್ಲಿರುವ ಅಜ್ಞಾನ, ದೌರ್ಬಲ್ಯಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯಬೇಕು. ಅದಕ್ಕೆ ವೈಚಾರಿಕ ಮನೋಭಾವದ ಅವಶ್ಯಕತೆಯಿದೆ.

ಜೀವನಕ್ಕೆ ಕೆಲವು ಹಳೆಯ ಸಂಪ್ರದಾಯಗಳು ಅವಶ್ಯಕ. ಆದರೆ ಸರಿಯಾದ ದಾರಿಯನ್ನು ತೋರಿಸದ, ಜನರ ಶೋಷಣೆ ಮಾಡುವ ಸಂಪ್ರದಾಯಗಳು ನಿಷ್ಪ್ರಯೋಜಕ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ವಿವೇಚಿಸಿ ಆಚರಿಸಬೇಕು. ಅಂದರೆ ಸಂಪ್ರದಾಯಗಳಿಗೆ ವೈಚಾರಿಕತೆ ಮೇಳೈಸುವುದು ಅವಶ್ಯಕ. ಚಿಕ್ಕ ಬಾಲಕನು ತಾಯಿ ಕೊಟ್ಟ ಕೋಲನ್ನೇ ಕುದರೆ ಎಂದುಕೊಂಡು ಆಟವಾಡುತ್ತಾನೆ. ಬೆಳೆದು ದೊಡ್ಡವನಾದಂತೆ, ನಿಜವಾದ ಕುದುರೆಯನ್ನು ಕಂಡಾಗ ಅವನಿಗೆ ತಾಯಿ ಕೊಟ್ಟ ಕೋಲು, ಕುದುರೆಯಲ್ಲ ಎಂಬುದರ ಅರಿವಾಗುತ್ತದೆ. ಅಂಥ ಅರಿವಾದಂದಿನಿಂದ ಅವನು ಕೋಲ-ಕುದರೆ ಆಟವನ್ನು ನಿಲ್ಲಿಸುತ್ತಾನೆ. ಹಾಗೆಯೇ ಮೂಢನಂಬಿಕೆಗಳಿಗೆ ವೈಚಾರಿಕ ಸ್ಪರ್ಶ ನೀಡಬೇಕು. ನಿಜವನ್ನರಿಯಬೇಕು. ನಿಜದರಿವಾದಾಗಲಾದರೂ ಮೂಢ ಆಚರಣೆಯ ಮೇಲಿರುವ ನಂಬಿಕೆಗಳನ್ನು ಬಿಡಬೇಕು.

ಮಾನವನು ನಾಗರಿಕತೆಯ ಹಂತಕ್ಕೆ ತಲುಪುವ ಪೂರ್ವದಲ್ಲಿ ಅನೇಕ ನಂಬಿಕೆಗಳ ಮೇಲೆ ಜೀವನವನ್ನು ಸಾಗಿಸಿರುವುದನ್ನು ನಾವು ಕಾಣಬಹುದು. ಅವುಗಳಲ್ಲಿ ಬಹುಪಾಲು ನಂಬಿಕೆಗಳು

ಜೀವಕ್ಕೆ ಉಂಟಾಗಬಹುದಾದ ತೊಂದರೆಗೆ ಹೆದರಿ ಅನುಸರಿಸಿಕೊಂಡು ಬಂದಂತಹ ನಂಬಿಕೆಗಳೆ ಬಹಳ. ಯಾವುದೇ ನಂಬಿಕೆಯು ನಂಬುವವನ ಮನಸ್ಥಿತಿಯನ್ನು ಅನುಸರಿಸುತ್ತದೆ. ಒಬ್ಬರ ನಂಬಿಕೆಯು ಮತ್ತೊಬ್ಬನ ನಂಬಿಕೆಯಾಗಿರಬೇಕೆಂದಿಲ್ಲ ಏಕೆಂದರೆ, ನಂಬಿಕೆ ಎಂಬುದು ವೈಯಕ್ತಿಕವಾದದ್ದು, ಅದು ಅವರ ಅನುಭವದ ಮೇಲೆ ಬಲಗೊಳ್ಳುತ್ತದೆ. ಇಂತಹ ವೈಯಕ್ತಿಕ ನಂಬಿಕೆಗಳು ಸಾರ್ವತ್ರೀಕರಣಗೊಂಡಾಗ ಅವುಗಳು ಮೂಢ ಆಚರಣೆಗಳಾಗಿ ರೂಪುಗೊಳ್ಳುವ ಅಪಾಯವಿರುತ್ತದೆ. ಏಕೆಂದರೆ ಅನುಭವವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಸೂಕ್ತ ಕಾರಣ ಅರಿಯದೆ ಆಚರಿಸುವ ಎಲ್ಲಾ ಆಚರಣೆಗಳು ಮೌಢ್ಯತೆಯನ್ನು ಬೆಳೆಸುವಲ್ಲಿ ಸಹಕರಿಸುತ್ತವೆ. ಮೌಢ್ಯತೆ ಎಂಬುದು ಸಕಾರಣವನ್ನು ಅರಿಯದೆ, ವೈಚಾರಿಕ ಮನೋಭಾವರಹಿತವಾಗಿ ಅಂಧಶ್ರದ್ಧೆಯಿಂದ ಆಚರಿಸುವ ಆಚರಣೆಗಳು ಮೌಢ್ಯವೆನ್ನುವುದು ಮಾನವನ ವಿಕಾಸದ ಜೊತೆಗೆ ಸಾಗಿ ಬಂದಿರುವುದು. ಇಂದಿನ ವೈಜ್ಞಾನಿಕ ಸಮಾಜದಲ್ಲಿಯೂ ಸಹ ಇವುಗಳು ಉಳಿದುಕೊಂಡು ಬಂದಿರುವುದು ನಾಗರಿಕ ಸಮಾಜವೇ ತಲೆ ತಗ್ಗಿಸಬೇಕಾದ ಅಂಶ.

ಇಂದು ಕರ್ನಾಟಕ ಸರಕಾರವು ಜಾರಿಗೆ ತರಲು ಪ್ರಯತ್ನಿಸುತ್ತಿರುವ 'ಮೌಢ್ಯ ನಿಷೇಧ ಕಾಯಿದೆ'ಯ ಅಂಶಗಳನ್ನು ೧೨ನೆಯ ಶತಮಾನದಲ್ಲಿ ವಚನಕಾರರು ಜನಸಾಮಾನ್ಯರಿಗೆ ತಿಳಿಯಪಡಿಸುವಲ್ಲಿ ಯಶಸ್ವಿಯಾಗಿರುವುದು ಅವರ ವಚನಗಳಿಂದ ನಮಗೆಲ್ಲ ಸಾಧ್ಯವಾಗುತ್ತದೆ. ಪ್ರಸ್ತುತ ಕರಡು ವಿಧೇಯಕ್ಕೆ 'ಕರ್ನಾಟಕ ನರಬಲಿ ಹಾಗೂ ಇತರೆ ಅಮಾನವೀಯ ದುಷ್ಟ ಪದ್ದತಿಗಳು, ವಾಮಾಚಾರಗಳು ಪ್ರತಿಬಂಧಕ ನಿರ್ಮೂಲನಾ ವಿಧೇಯಕ' ಎಂದು ನಾಮಕರಣ ಮಾಡಲಾಗಿದೆ. ಇದರಲ್ಲಿರುವ ಪ್ರಮುಖ ನಿಷೇಧಗಳೆಂದರೆ

೧. "ದೇವತೆಗಳನ್ನು ಆಹ್ವಾನಿಸಲು ಅಥವಾ ತೃಪ್ತಿಪಡಿಸಲು ನರಬಲಿ ಕೊಡುವುದು.

೨. ಪವಾಡ ಪ್ರದರ್ಶನದ ಮೂಲಕ ಜನರಿಗೆ ಮೋಸಮಾಡುವುದು.

೩. ಅತೀಂದ್ರಿಯ ಶಕ್ತಿಯ ಅನುಗ್ರಹ ಹೊಂದಲು ಜೀವಕ್ಕೆ ಹಾನಿ ಮಾಡುವುದು, ಅಮಾನವೀಯ, ದುಷ್ಟ, ಅಘೋರಿ ಪದ್ದತಿ ವಾಮಾಚಾರ ಅನುಸರಿಸುವುದು ಮತ್ತು ಅದಕ್ಕೆ ಪ್ರಚೋದನೆ ನೀಡುವುದು.

೪. ಭಾನಾಮತಿ, ಮಾಟಮಂತ್ರ ನಡೆಸಿ ನಿಧಿನಿಕ್ಷೇಪ ನೀರಿನ ಮೂಲ ಹುಡುಕುವುದು.

೫. ಮೈಮೇಲೆ ದೇವರು, ದೆವ್ವ ಬರುತ್ತದೆಂದು ನಂಬಿಸುವುದು.

೬. ದೆವ್ವ ಉಚ್ಚಾಟನೆ ಹೆಸರಿನಲ್ಲಿ ಕಿರುಕುಳ ಲೈಂಗಿಕ ದೌರ್ಜನ್ಯ.

೭. ವ್ಯಕ್ತಿಯೊಬ್ಬ ಸೈತಾನನ ಅವತಾರವೆಂದು ಘೋಷಿಸುವುದು.

೮. ಭಾನಾಮತಿ, ಮಾಟಮಂತ್ರ, ಭೂತಾರಾಧನೆ ಹೆಸರಿನಲ್ಲಿ ನಗ್ನವಾಗಿ ಮೆರವಣಿಗೆ ಮಾಡುವುದು.

೯. ಕ್ಷುದ್ರಶಕ್ತಿ ಇದೆ ಎಂದು ಭಾವನೆ ಸೃಷ್ಟಿಸುವುದು.

೧೦. ಬೆರಳುಗಳ ಮೂಲಕ ಶಸ್ತ್ರಚಿಕಿತ್ಸೆ ಅಥವಾ ಗರ್ಭದಲ್ಲಿರುವ ಭ್ರೂಣಲಿಂಗ ಬದಲಾಯಿಸುವುದಾಗಿ ನಂಬಿಸುವುದು.

೧೧. ಅಲೌಕಿಕ ಶಕ್ತಿಯ ಮೂಲಕ ತಾಯ್ತನ ನೀಡುವ ಭರವಸೆ ನೀಡಿ ಮಹಿಳೆ ಜೊತೆ ಸಂಪರ್ಕ ಹೊಂದುವುದು.

೧೨. ಬುದ್ಧಿಮಾಂಧ್ಯ ವ್ಯಕ್ತಿ ದೈವಶಕ್ತಿಹೊಂದಿದ್ದಾನೆಂಬ ಭಾವನೆ ಸೃಷ್ಟಿಸಿ ಮೋಸ ಮಾಡುವುದು.

೧೩. ಬೂತೋಚ್ಚಾಟನೆ ಮಾಡುವುದು.

೧೪. ಕೊಕ್ಕೆಯಿಂದ ನೇತು ಹಾಕುವುದು, ಸಿಡಿ ಅಥವಾ ದೇಹಕ್ಕೆ ಚುಚ್ಚಿಕೊಂಡು ಕೊಕ್ಕೆಯಿಂದ ತೇರು ಎಳೆಯುವುದು.

೧೫. ಮಕ್ಕಳಿಗೆ ಚಿಕಿತ್ಸೆ ನೀಡುವ ನೆಪದಲ್ಲಿ ಎತ್ತರದಿಂದ ಮುಳ್ಳುಗಳ ಮೇಲೆ ಎಸೆಯುವುದು, ಬರೆಹಾಕುವುದು.

೧೬. ಋತುಮತಿಯಾದ ಅಥವಾ ಗರ್ಭಿಣಿಯರನ್ನು ಒಂಟಿಯಾಗಿರುವಂತೆ ಮಾಡುವುದು, ಬೆತ್ತಲೆಸೇವೆ.

೧೭. ಪ್ರಾಣಿಗಳನ್ನು ಅದರ ಕುತ್ತಿಗೆಯನ್ನು ಕಚ್ಚುವ ಮೂಲಕ ಕೊಲ್ಲುವ(ಗಾವು) ದುಷ್ಟಪದ್ಧತಿ.

೧೮. ಮಡೆಸ್ನಾನ.

೧೯. ಕೆಂಡ ಹಾಯುವ ಪದ್ಧತಿ.

೨೦. ಬಾಯಿಬೀಗ ಪದ್ಧತಿ (ದವಡೆಗಳ ಮೂಲಕ ಕಬ್ಬಿಣದ ಸಲಾಕೆ ತೂರಿಸುವುದು)

೨೧. ವಾಸ ಮನೆಗಳ ಮೇಲೆ ಮಾಟಮಂತ್ರದ ಹೆಸರಿನಲ್ಲಿ ಕಲ್ಲು ಎಸೆಯುವುದು.

೨೨. ನಾಯಿ ಹಾವು ಅಥವಾ ಚೇಳಿನ ಕಡಿತಕ್ಕೆ ಮಂತ್ರ ತಂತ್ರಾಗಮದ–ದೋರ ಚಿಕಿತ್ಸೆ ನೀಡುವುದು."೪.

ಈ ಮೇಲಿನ ಎಲ್ಲ ಮೌಢ್ಯ ಆಚರಣೆಯ ಅಂಶಗಳನ್ನು ಒಳಗೊಂಡಂತೆ ೧೨ನೆಯ ಶತಮಾನದಲ್ಲಿ ವಚನಕಾರರು ಅವುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರಯತ್ನಿಸಿರುವುದನ್ನು ನಾವು ಅವರ ಅನೇಕ ವಚನಗಳಿಂದ ಕಾಣಬಹುದು. ದೇವರ ಹೆಸರಿನಲ್ಲಿ ಪ್ರಾಣಿಬಲಿಕೊಟ್ಟು ಆ ಪ್ರಾಣಿಯನ್ನು ತಮ್ಮ ಬಾಯಿ ಚಪಲಕ್ಕೆ ದೇವರ ಬೇಡಿಕೆ ಎಂದು ನಂಬಿಸಿ ಭಂಜಿಸುವವರನ್ನು ವಚನಕಾರರು ಉಗ್ರವಾಗಿ ವಿರೋಧಿಸಿದ್ದಾರೆ.

'ಮೊರನ ಗೋಟಲಿ ಬಪ್ಪ ಕಿರುಕುಳ ದೈವಕ್ಕೆ

ಕುರಿಯನಿಕ್ಕಿಹೆವೆಂದು ನಲಿನಲಿದಾಡುವರು,

ಕುರಿ ಸತ್ತು ಕಾವುದೆ ಹರ ಮುಳಿದವರ?

ಕುರಿಬೇಡ ಮರಿಬೇಡ; ಬರಿಯ ಪತ್ರೆಯ ತಂದು

ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.' –(ಸ.ವ.ಸಂ:೧ ವ.ಸಂ, ೫೬೦)

ದೇವರು ಯಾವಾಗಲು ಬಲಿ ಬೇಡುವುದಿಲ್ಲ. ಸಕಲವನ್ನು ಸೃಷ್ಟಿಸಿದ ದೇವರು ಪ್ರಾಣಿ ಬಲಿ ಬೇಡುವವನಲ್ಲ, ಕಾರಣ ಜನರನ್ನು ಮರುಳುಮಾಡುವ ಒಂದು ವರ್ಗವು ಬಲಿ ಬೇಡುವ ಪದ್ಧತಿಯನ್ನು ಜಾರಿಗೆ ತಂದಿತು. ಇದು ತಪ್ಪು ಎಂದು ಅಂದೆ ವಚನಕಾರರು ಪ್ರತಿಭಟಿಸಿದರು. ಅಂತೆಯೇ ಸಕಲ ಜೀವಾತ್ಮರಿಗೆ ಲೇಸನು ಬಯಸುವವನೆ ಕುಲಜನೆಂದು ಕರೆದರು. ಇಲ್ಲಿ ಚಿಂತಿಸಬೇಕಾದ ಒಂದು ಅಂಶವೇನೆಂದರೆ ದೇವರ ಹೆಸರಿನಲ್ಲಿ ನಡೆಯುತ್ತಿರುವ ಈ ಬಲಿ ಪದ್ಧತಿಯನ್ನು ಅಮಾಯಕ, ಅಸಹಾಯಕ ಪ್ರಾಣಿಗಳನ್ನು ಮಾತ್ರ ಅಂದರೆ ಸಾಧು ಪ್ರಾಣಿಗಳನ್ನು ಮಾತ್ರ ಬಲಿಗಾಗಿ ಕೊಲ್ಲಲಾಗುತ್ತದೆ. ಕುರಿ, ಕೋಳಿ, ಹಸುಗಲು, ಕೋಣಗಳನ್ನು ಬಯಸುವ ದೇವರು ಹುಲಿ ಆನೆ ಸಿಂಹಗಳನ್ನು ಏಕೆ ಬಲಿ ಬಯಸಲಿಲ್ಲ ಎಂಬುದನ್ನು ಚಿಂತಿಸಿದಾಗ ನಮಗೆ ಅರ್ಥವಾಗುತ್ತದೆ. ಅಂದರೆ ದೇವರ ಹೆಸರಿನಲ್ಲಿ ಮುಗ್ಧಪ್ರಾಣಿಗಳನ್ನು ಕೊಂದು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವ ಹುನ್ನಾರವು ಈ ಸಂಪ್ರದಾಯದಲ್ಲಿ ಅಡಗಿದೆ ಎಂದು ಬಸವಣ್ಣನವರು, 'ಕುರಿಬೇಡ ಮರಿಬೇಡ; ಬರಿಯ ಪತ್ರೆಯ ತಂದು ಮರಿಯದೆ ಪೂಜಿಸು ನಮ್ಮ ಕೂಡಲಸಂಗಮದೇವನ' ಎಂದಿದ್ದಾರೆ. ದೇವರ ಹೆಸರಿನಲ್ಲಿ ಪ್ರಾಣಿಬಲಿ ಕೊಡುವುದು ತಪ್ಪು ಎಂದು ಅಂದೇ ವಚನಕಾರರು ಅರಿತಿದ್ದರು.

ಇಂತಹ ಸಂಪ್ರದಾಯಗಳನ್ನು ಪ್ರೇರೇಪಿಸುವ ಮತ್ತು ಆಚರಣೆಯಲ್ಲಿ ತೊಡಗುವವರನ್ನು ಜೇಡರ ದಾಸಿಮಯ್ಯನವರ ವಚನವು ಖಂಡಿಸಿದೆ.

'ಮಾರಿಯ ಪೂಜಿಸಿ, ಮಸಣಕ್ಕೆ ಹೋಗಿ,

ಗೋರಿಗೊಳಿಸಿ, ಕುರಿಯ ಕೊರಳನೆ ಕೊಯ್ದುಂಬ

ಕ್ರೂರಕರ್ಮಿಗಳನವರ ಶಿವಭಕ್ತರೆನಬಹುದೆ?

ಅರಿಯದೆ ಅವನ ಮನೆಯಲುಂಡ ಭಕ್ತ

ಅಘೋರನರಕಕ್ಕಿಳಿವ ಕಾಣಾ! ರಾಮನಾಥ.' (ವ.ಶಾ.ಸಾ.ವ. ೧೪೭೧)

ಪ್ರಾಣಿಹಿಂಸೆಯಿಂದ ದೇವರನ್ನು ಪೂಜಿಸುವವರನ್ನು ಭಕ್ತ ಎನಲಾಗದು ಎಂದಿದ್ದಾರೆ. ಹಾಗೆಯೇ ಈ ಸಂಪ್ರದಾಯವನ್ನು ಪೋಷಿಸಿ ಬೆಳೆಸುವವರನ್ನು ದೇವರು ಅಘೋರ ನರಕದಲ್ಲಿಕ್ಕುವ ಎಂದು ಎಚ್ಚರಿಸುವ ಮೂಲಕ ಸಮಾಜದಲ್ಲಿನ ಈ ರೀತಿಯ ಅಮಾನುಷ ಕ್ರಿಯೆಯನ್ನು ತಡೆಗಟ್ಟಲು ಪ್ರಯತ್ನಿಸುವುದು ನಾವು ಕಾಣಬಹುದು.

ತಮ್ಮನ್ನು ತಾವು ರಕ್ಷಿಸಿಕೊಳ್ಳದೆ ಅಮಾಯಕರ ಜೀವಬಲಿ ಬೇಡುವ ದೈವಂಗಳನ್ನೆ ಧಿಕ್ಕರಿಸುವಂತೆ ಮಾಡುವ ಮೂಲಕ ಅಂದಿನ ಸಮಾಜದಲ್ಲಿ ಜನರನ್ನು ಭಯಭೀತರನ್ನಾಗಿಸಿದ್ದ ದೇವರುಗಳ ಹೆಸರಿನಲ್ಲಿ ನಡೆಯುತ್ತಿದ್ದ ಪ್ರಾಣಿ ಬಲಿ ಆಚರಣೆಯನ್ನು ತಡೆದರು.

ಅಂದಿನ ಮತ್ತು ಪ್ರಸ್ತುತ ಕಾಲದಲ್ಲಿಯ ಕೆಲವು ಮೂಢನಂಬಿಕೆಗಳ ಆಚರಣೆಯ ಕುರಿತು ಅಂಬಿಗರ ಚೌಡಯ್ಯನವರು ತಮ್ಮ ಒಂದು ವಚನದಲ್ಲಿ ವಿವರವಾಗಿ ತಿಳಿಸಿದ್ದಾರೆ. ಜೊತೆಗೆ ಅವುಗಳನ್ನು ಆಚರಿಸುವವರನ್ನು ಮತ್ತು ಆಚರಣೆಗೆ ಪ್ರಚೋದಿಸುವವರನ್ನು ಎಚ್ಚರಿಸಿದ್ದಾರೆ.

'ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಕೊರಳಿಗೆ ಕವಡೆಯ ಕಟ್ಟಿ ನಾಯಾಗಿ ಬೊಗಳುವರು!
ಅದಾವ ವಿಚಾರವಯ್ಯ?
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಬೇವಿನುಡಿಗೆಯನುಟ್ಟು ಹಡಲಿಗೆಯ ಹೊತ್ತು
'ಉಧೋ ಉಧೊ' ಎಂಬರು! ಅದಾವ ವಿಚಾರವಯ್ಯಾ?
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಹಗ್ಗಹುರಿ-ಬೆನ್ನಸಿಡಿ-ಬಾಯಬೀಗದಲ್ಲಿ ಹೋಗುವರು!
ಅದಾವ ವಿಚಾರಯ್ಯ?
ಇಂಥ ಭವಿಮಾರ್ಗದಲ್ಲಿ ಚರಿಸುವ ಶಿವದ್ರೋಹಿಗಳಿಗೆ
ಲಿಂಗಧಾರಣವ ಮಾಡುವನೊಬ್ಬ ಗುರುದ್ರೋಹಿ,
ಅವರಿಗೆ ಚರಣೋದಕವ, ತಾ ಧರಿಸುವ ವಿಭೂತಿ-ರುದ್ರಾಕ್ಷಿಯ
ಕೊಡುವನೊಬ್ಬ ಲಿಂಗದ್ರೋಹಿ!
ಅವನು ಭಕ್ತನೆಂದು ಅವನ ಮನೆಯ ಹೊಕ್ಕು,
ಮಂತ್ರವ ಹೇಳಿ,
ಅನ್ನವ ತಿಂದವನೊಬ್ಬ ಜಂಗಮದ್ರೋಹಿ!
ಇಂತೀ ನಾಲ್ವರಿಗೆ ಸೂರ್ಯಚಂದ್ರರುಳ್ಳನ್ನಕ್ಕ
ಎಕ್ಕಲಕೊಂಡದಲ್ಲಿಕ್ಕದೆ ಮಾಣ್ಬನೆ ಅಂಬಿಗರ ಚೌಡಯ್ಯನು?' (ವ.ಶಾ.ಸಾ.ವ. ೩೭೧)

ಈ ವಚನದಲ್ಲಿ ಅಂಬಿಗರ ಚೌಡಯ್ಯನವರು ಅಂದಿನ ಕಾಲದಲ್ಲಿ (ಇಂದು ಸಹ ಕೆಲವು ಕಡೆ) ಜಾರಿಗೆ ಇದ್ದ ಮೌಢ್ಯ ಆಚರಣೆಗಳ ಕುರಿತು ತಿಳಿಸಿದ್ದಾರೆ.ಕೊರಳಿಗೆ ಕವಡೆಯ ಕಟ್ಟುವುದು, ಬೇವಿನುಡಿಗೆಯನುಟ್ಟು ಹಡಲಿಗೆಯ ಹೊತ್ತು 'ಉಧೋ ಉಧೋ' ಎಂದು ದೇವಿಯ ಹೆಸರಿನಲ್ಲಿ

ಭಿಕ್ಷೆ ಬೇಡುತ್ತಾ ತಿರುಗುವುದು, ಹಗ್ಗಹುರಿ-ಬೆನ್ನಸಿಡಿ-ಬಾಯಬೀಗದಲ್ಲಿ ಹೋಗುವುದು, ಇವುಗಳನ್ನು ಮೌಢ್ಯ ಆಚರಣೆಗಳೆಂದು ಗುರುತಿಸಿದ್ದ ಅಂಬಿಗರ ಚೌಡಯ್ಯನವರು, ಇಂತಹ ಆಚರಣೆಗಳನ್ನು ತಡೆಗಟ್ಟಲು ಪ್ರಯತ್ನಿಸಿದ್ದಾರೆ. ಅಲ್ಲದೆ ಈ ರೀತಿಯ ಆಚರಣೆಗೆ ಪ್ರಚೋದಿಸುವವರನ್ನು ಶಿವದ್ರೋಹಿ, ಗುರುದ್ರೋಹಿ, ಲಿಂಗದ್ರೋಹಿ, ಜಂಗಮದ್ರೋಹಿ! ಎಂದು ಜರೆದಿದ್ದಾರೆ. ಮೌಢ್ಯ ಪ್ರತಿಬಂಧಕ ಕಾಯಿದೆಯಲ್ಲಿ ಈ ಎಲ್ಲ ಅಂಶಗಳು ಅಡಕವಾಗಿರುವುದನ್ನು ಜನರು ಪ್ರಸ್ತುತ ದಿನಗಳಲ್ಲಿ ಅವಲೋಕಿಸಿದವರಾಗಿದ್ದೇವೆ.

ಪೂಜೆಯ ಕಲ್ಪನೆ :

ಪೂಜೆ ಎಂದರೆ ದೇವನಲ್ಲಿ ಅನನ್ಯ ಪ್ರೇಮಾಭಿವ್ಯಕ್ತಿ. ಸಮರ್ಪಣಾ ಭಾವದಿಂದ ದೇವನಲ್ಲಿ ಉಪಚಾರಗೈಯುವುದೇ ಪೂಜೆ, ಹಾಗಿಲ್ಲದ ಪೂಜೆ ಬರಿ ಆಡಂಬರ, ಅದು ಯಾವ ಫಲವನ್ನೂ ಕೊಡದು. ನಮ್ಮಲ್ಲಿರುವ ದೇವನನ್ನು ನಾವೇ ಪೂಜಿಸಿಕೊಳ್ಳಬೇಕು. ಆದರೆ ಧಾರ್ಮಿಕ ವ್ಯವಸ್ಥೆಯಲ್ಲಿ ತನ್ನ ಪರವಾಗಿ ಇನ್ನಾರೋ ಪೂಜೆಯನ್ನು ಮಾಡುವ ಪದ್ದತಿಯಿದೆ, ಗುಡಿಗಳಿಗೆ ಹೋಗಿ ಅರ್ಚನೆ ಮಾಡಿಸುವ, ಮನೆಗಳಿಗೆ ಪುರೋಹಿತರನ್ನು ಕರೆಯಿಸಿ ಪೂಜೆ ಮಾಡಿಸುವ ವಾಡಿಕೆಯಿದೆ.

ಸತಿಯೊಡನೆ ದಾಂಪತ್ಯದ ಸಂಬಂಧವನ್ನು, ಹಸಿವಾದರೆ ಊಟವನ್ನು ತಾನೆ ಮಾಡಬೇಕು. ತನ್ನ ಪರವಾಗಿ ಇನ್ನೊಬ್ಬರಿಂದ ತನಗಾದ ಹಸಿವು, ತೃಷೆ ಮುಂತಾದ ಬಯಕೆಗಳನ್ನು ತೀರಿಸಲಿಕ್ಕಾಗದ ಹಾಗೆಯೇ ಪೂಜೆ ಎಂಬುದು ಸಹ, ತನ್ನ ಆತ್ಮೋದ್ಧಾರವನ್ನು ತಾನೆ ಕಂಡುಕೊಳ್ಳಬೇಕು. ತನ್ನ ಇಷ್ಟಲಿಂಗದ ಮುಖಾಂತರ ತನ್ನ ಅಂತರಂಗದಲ್ಲಿರುವ ದೇವನನ್ನು ತಾನೆ ಅರಿಯಬೇಕು, ಅನುಭವಿಸಬೇಕು ಎಂದು ವಚನಕಾರರ ಸಲಹೆಯಾಗಿದೆ.

'ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲು ಮಾಡಿಸಬಹುದೇ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲು ಮಾಡಿಸಬಹುದೇ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೇ,
ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ' (ವ.ಶಾ.ಸಾ.ವ. ೯೩೭)

ಪೂಜೆ ಯಾಂತ್ರಿಕ ಪೂಜೆ ಆಗಬಾರದು, ಭಕ್ತಿ, ಶ್ರದ್ಧೆ, ನಿಷ್ಠೆಯಿಂದ ಪೂಜೆ ಮಾಡಿಕೊಳ್ಳಬೇಕು. ಎಷ್ಟು ಹೊತ್ತು, ಎಷ್ಟು ಕಾಲ ಪೂಜೆ ಮಾಡಿಕೊಳ್ಳುತ್ತೇವೆ ಎನ್ನುವುದು ಮುಖ್ಯವಲ್ಲ. ಎಷ್ಟು ಶ್ರದ್ಧೆಯಿಂದ ಮಾಡಿಕೊಳ್ಳುತ್ತಿದ್ದೇವೆ ಎನ್ನುವುದು ಮುಖ್ಯ, ಎಷ್ಟು ವರುಷ ಸಾಧನೆಯಲ್ಲಿ ತೊಡಗಿದ್ದೇವೆ ಎನ್ನುವುದಕ್ಕಿಂತ ಎಷ್ಟು ನಿಷ್ಠೆಯಿಂದ ಸಾಧನೆಯಲ್ಲಿ ತೊಡಗಿದ್ದೇವೆ ಎನ್ನುವುದು ಮುಖ್ಯ, ಭಕ್ತಿ, ನಿಷ್ಠೆ, ಶ್ರದ್ಧೆಗಳಿಲ್ಲದ ಪೂಜೆ ವ್ಯರ್ಥ ಪ್ರಯಾಸವೆಂದು ಅವಿರಳ ಜ್ಞಾನಿ ಚನ್ನಬಸವಣ್ಣನವರು ಹೇಳುತ್ತಾರೆ:

‘ಸತ್ಯವಿಲ್ಲದ ಭಕ್ತಿಯ ಸಾವಿರ ವರುಷ ಮಡಿದರೇನು?

ನಿಷ್ಠೆಯಿಲ್ಲದ ಪೂಜೆಯನೇಸುಕಾಲ ಮಾಡಿದರೇನು?

ಭಾವನೆಲೆಗೊಳ್ಳದ ಪ್ರಸಾದವನೇಸುಕಾಲ ಕೊಂಡಲ್ಲಿ ಫಲವೇನು?

ಅಭ್ಯಾಸವಾಯಿತಲ್ಲದೆ,

ಒಬ್ಬರೊಬ್ಬರ ಕಂಡು ಮಾಡುವರಲ್ಲದೆ ಸಹಜವಿಲ್ಲ, ಸಮ್ಯಕ್ಕಿಲ್ಲ,

ನಿಜವಿಲ್ಲ. ಇದು ಕಾರಣ ಇಂತಪ್ಪವರ ಭಕ್ತರೆಂದೆನಲಾಗದು

ಕೂಡಲಚನ್ನಸಂಗಯ್ಯಾ ನೀ ಸಾಕ್ಷಿಯಾಗಿ ಛೀಯೆಂಬೆನು’ (ವ.ಶಾ.ಸಾ.ವ. ೮೬೬)

ಪೂಜೆಯಲ್ಲಿ ಪರಮಾತ್ಮನೆ ಸರ್ವಸ್ವ ಎಂಬ ಸಂಪೂರ್ಣ ಸಮರ್ಪಣಾಭಾವ (Total Surrendeness) ಇರಬೇಕು. ಬಸವಣ್ಣನವರ ಭಾವದ ಮೂಲಕವೇ ಇದನ್ನು ತಿಳಿಯಬೇಕು:

‘ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು

ನೀನಿಲ್ಲದೆ ಮತ್ತಾರೂ ಇಲ್ಲವಯ್ಯಾ,

ಕೂಡಲಸಂಗಮದೇವಾ,

ಹಾಲಲದ್ದು, ನೀರಲ್ಲದ್ದು’ (ಸ.ವ.ಸಂ:೧ ವ.ಸಂ, ೪೮೧)

ವಚನಗಳ ಕಾಲದಿಂದ ವರ್ತಮಾನ ಕಾಲದಲ್ಲಿಯು ಲೋಕದ ಬಹುಜನ ಅಭಿಷೇಕ, ಪತ್ರೆ, ಪುಷ್ಪ, ಧೂಪ, ದೀಪ, ನೈವೇದ್ಯ ಮುಂತಾದ ಉಪಚಾರಗಳಿಂದ ದೇವನನ್ನು ಪೂಜಿಸುತ್ತಾರೆ. ಕೊನೆಯಲ್ಲಿ ಫಲವ ಬೇಡುತ್ತಾರೆ. ಆ ಫಲವು ಉಪಚಾರದ ವಸ್ತುಗಳಿಗೆ ದೊರೆಯಬಹುದು, ಈ ಪೂಜಕರಿಗಂತೂ ಅಲ್ಲ, ಏಕೆಂದರೆ ಆ ವಸ್ತುಗಳು ಇವರ ಒಡವೆಗಳಲ್ಲ. ಅವೆಲ್ಲವು ಪರಮಾತ್ಮ ನೀಡಿದವುಗಳು. ಅಂತರಂಗದ ಪೂಜಾಪರಿಕಗಳಿಂದ ದೇವನನ್ನು ಪೂಜಿಸಬೇಕೆಂದು ಅಲ್ಲಮರು ಹೇಳುತ್ತಾರೆ:

‘ಉದಕ ಮಜ್ಜನವಲ್ಲ, ಪತ್ರೆ ಪೂಜೆಯಲ್ಲ

ಧೂಪ ಪರಿಮಳವಲ್ಲ, ಕಂಚು ಬೆಳಗಲ್ಲ,

ಸುಯಿಧಾನ ಅರ್ಪಿತವಲ್ಲ!

ಅದೆಂತೆಂದಡೆ;

ಸಜ್ಜನವೆ ಮಜ್ಜನ, ಸತ್ಯಸದಾಚಾರವೇ ಪತ್ರಪುಷ್ಪ

ಅಷ್ಟಮದಂಗಳ ಸುಟ್ಟುದೆ ಧೂಪ,

ನಯನವೆ ಸ್ವಯಂ ಜ್ಯೋತಿ

ಪರಿಣಾಮವೇ ಅರ್ಪಿತ ಕಾಣಾ ಗುಹೇಶ್ವರಾ’ (ಸ.ವ.ಸಂ:೨ ವ.ಸಂ, ೯೫೭)

ನಮ್ಮಲ್ಲಿಯ ಸಜ್ಜನತ್ವವೇ ಲಿಂಗಕ್ಕೆ ಪವಿತ್ರವಾದ ಸ್ನಾನ. ನಮ್ಮ ಪರಿಶುದ್ಧವಾದ ನಡೆ, ನುಡಿಗಳೇ ಪತ್ರೆಪುಷ್ಪ. ಕುಲ, ಛಲ, ಧನ, ರೂಪ, ಯೌವನ, ವಿದ್ಯೆ, ರಾಜ್ಯ, ತಪಸ್ಸುಗಳಿಂದ ಉಂಟಾಗುವ ಅಹಂಕಾರವನ್ನು ಕಳೆಯುವುದೇ ಧೂಪ. ಎಲ್ಲರನ್ನು ಶಿವಭಾವದಿಂದ ಕಾಣುವ ಅರಿವಿನ ಕಣ್ಣುಗಳೇ ಜ್ಯೋತಿ ಪರಿಣಾಮವೆಂದರೆ ಸಂತೋಷ, ವಿಷಯಗಳಿಂದ ದೊರೆವ ಸಾಮಾನ್ಯ ಸಂತೋಷವಲ್ಲ, ಮನಸ್ಸು ನಿರ್ವಿಷಯಗೊಂಡು ಮಹಾಲಿಂಗದಲ್ಲಿ ಬೆರೆತು ಹೋದಾಗ ಉಂಟಾಗುವ ದಿವ್ಯ ಆನಂದ. ಪರಿಣಾಮದಲ್ಲಿ ಮನದ ಪರಿಣಾಮವೇ ಲೇಸು ಎಂಬಂತೆ ಮನಸ್ಸಿನ ದಿವ್ಯ ಆನಂದವೇ ಪರಮಾತ್ಮನಿಗೆ ಅರ್ಪಿತವಾಗುವ ನಿಜವಾದ ನೈವೇದ್ಯ. ಅದಕ್ಕಾಗಿ ಬಾಹ್ಯ ಪೂಜಾಸಾಮಾಗ್ರಿಗಳಾದ ಪತ್ರೆ, ಪುಷ್ಪ, ಧೂಪ, ದೀಪ ಮುಂತಾದವುಗಳ ಜೊತೆ ಅಂತರಂಗ ಪೂಜಾ ಸಾಮಗ್ರಿಗಳಾದ ಸಜ್ಜನತ್ವ, ಅದಾಚಾರ, ನಿರಹಂಕಾರ, ಸಮತೆ, ಸಮಾಧಾನ ಸಂತೃಪ್ತಿಗಳನ್ನು ಅಳವಡಿಸಿಕೊಂಡು ಮಾಡಿಕೊಳ್ಳುವ ಪೂಜಾ ಫಲ ಪ್ರಧವಾಗಿತ್ತದೆ. ಇಲ್ಲವಾದರೆ ಅದೊಂದು ಯಾಂತ್ರಿಕ ಪೂಜೆಯಾಗಿ ವ್ಯರ್ಥವಾಗುತ್ತದೆ. ಅದಕ್ಕಾಗಿ ವಚನಕಾರರ ಶಿವಯೋಗದ ಪೂಜೆಯಲ್ಲಿ ಅಂತರಂಗದ ಜ್ಯೋತಿಯ ದರ್ಶನವನ್ನು ನಿತ್ಯಲೂ ಮಾಡಿಕೊಳ್ಳಿರಿ ಎಂದು ಸ್ಪಷ್ಟಪಡಿಸಿದ್ದಾರೆ.

ಕೇರಳದ ಶಬರಿಮಲೆ ಬೆಟ್ಟದ ಮೇಲೆ ಸಂಕ್ರಮಣದ ದಿನ 'ಮಕರಜ್ಯೋತಿ' ಎಂಬ ದೈವಿ ಜ್ಯೋತಿ ಕಾಣುತ್ತದೆ ಎಂದು ನಂಬಿ ಲಕ್ಷಂತರ ಜನ ಶಬರಿಮಲೆಗೆ ಹೋಗುತ್ತಾರೆ. ಸ್ವಾಮಿ ಅಯ್ಯಪ್ಪನ ದರ್ಶನ ಪಡೆದು ಮಕರ ಜ್ಯೋತಿಯನ್ನು ಕಾಣಬೇಕೆಂದು ಜನ ಬೆಟ್ಟದ ಕಡೆಗೆ ಧಾವಿಸುತ್ತಾರೆ. ಜನದಟ್ಟಣೆಯಿಂದ ಅನೇಕರು ಪ್ರಾಣ ಕಳೆದುಕೊಂಡಿರುವುದು ಹೊಸತೆನಲ್ಲ, ದೇವರ ದರ್ಶನಕ್ಕಾಗಿ ಹೋದವರು ಸಾವಿಗೀಡಾಗುವುದೆಂದರೆ ಅಲ್ಲಿ ದೇವರ ಅಸ್ತಿತ್ವಕ್ಕಾದರೂ ಎಲ್ಲಿಯ ಬೆಲೆ?

ಮಕರಜ್ಯೋತಿ ಸಹಜವಾದುದಲ್ಲ. ಮಾನವ ನಿರ್ಮಿತವಾದುದು ಎಂದು ಅನೇಕ ವಿಚಾರವಾದಿಗಳು, ವಿಜ್ಞಾನಿಗಳು, ದೇವಸ್ಥಾನ ಮಂಡಳಿಯ ಮಾಜಿ ಆಯುಕ್ತರೊಬ್ಬರು ಹೇಳಿದರೂ ಇನ್ನೂ ಅನೇಕ ಜನರು ಮಕರ ಜ್ಯೋತಿಯನ್ನು ಕಾಣಲು ಪ್ರಸ್ತುತಕಾಲದಲ್ಲಿಯೂ ಹೋಗುತ್ತಲೇ ಇದ್ದಾರೆ. ದೇವರು ಧರ್ಮದ ಹೆಸರಿನಲ್ಲಿ ಮನುಷ್ಯರನ್ನು ನಂಬಿಸುವ, ವಂಚಿಸುವ ಪ್ರಕ್ರಿಯೆಗಳ ಬಗ್ಗೆ ಜನರು ಎಚ್ಚರಗೊಳ್ಳಬೇಕು.

ವಚನಕಾರರು ಅಂತರಂಗದಲ್ಲಿರುವ ಅರಿವಿನ ಜ್ಯೋತಿಯನ್ನು ಪ್ರತಿದಿನ ಕಂಡುಕೊಳ್ಳುವ 'ಶಿವಯೋಗ' ವನ್ನು ತಿಳಿಸಿದ್ದಾರೆ. ಅದನ್ನು ಅಳವಡಿಸಿಕೊಂಡರೆ ಶಬರಿಮಲೆಯ ಮಕರಜ್ಯೋತಿ, ಮುಂತಾದ ಬಯಲ ಜ್ಯೋತಿಗಳ ಹಾವಳಿ ಕಡಿಮೆಯಾಗಿ ಒಳಗಿನ ಜ್ಯೋತಿ ತಂತಾನೆ ಪ್ರಜ್ವಲಿಸುವುದು.

ಬಹಿರಂಗದ ಜ್ಯೋತಿಯನ್ನು ಕಾಣಲು ತೀರ್ಥಕ್ಷೇತ್ರಗಳ ದರ್ಶನಕ್ಕೆಂದು ತೀರ್ಥಯಾತ್ರೆಯನ್ನು ಮಾಡುವುದು ವಚನಕಾರರು ಖಂಡಿಸಿದ್ದಾರೆ. ನಿಸರ್ಗ ಸೌಂದರ್ಯವನ್ನು ವೀಕ್ಷಿಸಲು, ಬದುಕಿನಲ್ಲಿ ಬೇಸರ ಉಂಟಾದಾಗ ಪ್ರವಾಸಕ್ಕೆ ಹೋಗುವುದು ಸಹಜ. ಆದರೆ ಕೆಲವರು ಕಾಶಿ, ರಾಮೇಶ್ವರ, ಕೇದಾರ ಮುಂತಾದ ತೀರ್ಥಯಾತ್ರೆ ಮಾಡಿದರೆ ಪುಣ್ಯ ಪ್ರಾಪ್ತಿಯಾಗುವುದೆಂಬ ನಂಬಿಕೆಯಿಂದ

ಸಾಲ ಮಾಡಿಯಾದರೂ ತೀರ್ಥಯಾತ್ರೆಗೆ ಹೋಗುತ್ತಾರೆ. ಅಂಥವರನ್ನು ಕುರಿತು ಅಂಬಿಗರ ಚೌಡಯ್ಯನವರ ವಚನ:

'ಕಾಶಿಯಾತ್ರೆಗೆ ಹೋದೆನೆಂಬ
ಹೇಸಿಮಾಳರ ಮಾತು ಕೇಳಲಾಗದು!
ಕೇದಾರಕ್ಕೆ ಹೋದೆನೆಂಬ
ಹೇಸಿಹೀನರ ನುಡಿಯ ಆಲಿಸಲಾಗದು!
ಸೇತುಬಂಧ ರಾಮೇಶ್ವರಕ್ಕೆ ಹೋದೆನೆಂಬ
ಸರ್ವಹೀನರ ಮುಖವ ನೋಡಲಾಗದು!
ಪರ್ವತಕ್ಕೆ ಹೋದೆನೆಂಬ
ಪಂಚಮಹಾಪಾತಕರ ಮುಖವ ನೋಡಲಾಗದು!
ಅಂದೆಂತೆಂದಡೆ :
ಕಾಯವೆ ಕಾಶಿ, ಒಡಲೆ ಕೇದಾರ
ಮಾಡಿನೀಡುವ ಹಸ್ತವೇ ಸೇತುಬಂಧ ರಾಮೇಶ್ವರ
ಮಹಾಲಿಂಗ ಹೊತ್ತಿರುವ ಸಿರಸ್ಸೆ ಶ್ರೀಶೈಲಪರ್ವತ ನೋಡಾ
ಎಂದಾತ ನಮ್ಮ ಅಂಬಿಗರ ಚೌಡಯ್ಯನ.' (ವ.ಶಾ.ಸಾ.ವ. ೧೪೮೬)

ದೇವರ ಆಲಯವಾದ ದೇಹವೇ ಕಾಶಿ, ಒಡಲೆ ಕೇದಾರ, ಸತ್ಯಶುದ್ಧ ಕಾಯಕ ಮತ್ತು ದಾಸೋಹದಲ್ಲಿ ನಿರತವಾದ ಕೈಗಳೇ ರಾಮೇಶ್ವರ, ಜ್ಞಾನದ ಖಣಿಯಾದ ಶಿರವೆ ಶ್ರೀಶೈಲ ಪರ್ವತ. ಇಡಿ ಶರೀರವೇ ಅತ್ಯಂತ ಪವಿತ್ರವಾದ ತೀರ್ಥಕ್ಷೇತ್ರ, ಅದರ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವುದು ತೀರ್ಥಯಾತ್ರೆ ಎಂದು ಅಂಬಿಗರ ಚೌಡಯ್ಯನವರು ಹೇಳುತ್ತಾರೆ. ಹೊರಗಿನ ಹನ್ನೆರಡು ಜ್ಯೋತಿರ್ಲಿಂಗಗಳ ದರ್ಶನಕ್ಕಾಗಿ ಪರಿತಪಿಸದೆ ಅಂತರಂಗದಲ್ಲಿರುವ ಮಹಾಲಿಂಗದ ದರ್ಶನಕ್ಕಾಗಿ ಮನಸ್ಸನ್ನು ಅಣಿಗೊಳಿಸಬೇಕು.

ಅಂತರಂಗದ ಜ್ಯೋತಿಯನ್ನು ಕಾಣಲು ತೀರ್ಥಕ್ಷೇತ್ರಗಳನ್ನು ಗುಡಿಗಳನ್ನು ಸುತ್ತಬೇಕಾಗಿಲ್ಲ. ತೀರ್ಥಸ್ನಾನ ಮಾಡಬೇಕಾಗಿಲ್ಲ. ಬೆಟ್ಟಗಳನ್ನೇರಿ ಹುಡುಕಾಡಬೇಕಾಗಿಲ್ಲ. ಕಠೋರ ವ್ರತ, ನೇಮಗಳಿಂದ ದೇಹವನ್ನು ದಂಡಿಸಬೇಕಾಗಿಲ್ಲ. ಪ್ರತಿಕ್ಷಣ ಪ್ರತಿದಿನ ವಿಷಯ ಸುಖಗಳನ್ನು ನೆನೆಯುವ, ಅವುಗಳತ್ತ ಹರಿದಾಡುವ ಮನಸ್ಸನ್ನು ನಿಯಂತ್ರಿಸಿದರೆ ಸಾಕು ಎಂದು ಅಲ್ಲಮ ಪ್ರಭುಗಳು ತಮ್ಮ ವಚನದಲ್ಲಿ ಹೇಳುತ್ತಾರೆ :

'ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷ ಗಂಗೆಯ ಮಿಂದಡಿಲ್ಲ.
ತುಟ್ಟ ತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ.
ನಿತ್ಯ ನೇಮದಿಂದ ತನುವ ಮುಟ್ಟಿಕೊಂಡದಿಲ್ಲ.
ನಿಚ್ಚಕ್ಕೆ ನಿಚ್ಚ ನೆನೆವ ಮಾನವ,
ಅಂದಂದಿಗೆ ಅತ್ತಲಿತ್ತ ಹರಿವ ಮನವ ಚಿತ್ತಿನಲಿ ನಿಲ್ಲಿಸಬಲ್ಲಡೇ,
ಬಚ್ಚ ಬರಿಯ ಬೆಳಗು ಗುಹೇಶ್ವರ ಲಿಂಗವು!' (ವ.ಶಾ.ಸಾ.ವ. ೧೪೮೪)

ಹೊರಗಿನ ಜ್ಯೋತಿಯನ್ನು ಕಾಣಲು ಅಲೆದಾಡದೆ ಶಿವಯೋಗ ಸಾಧನೆಯಿಂದ ಅಂತರಂಗದಲ್ಲಿಯೇ ಇರುವ ಆ ಪರಂಜ್ಯೋತಿಯನ್ನು ಪ್ರತಿದಿನ ಕಾಣಲು ಸಿದ್ಧರಾಗಿರಿ ಎಂದು ಅಲ್ಲಮರು ಹೇಳಿದರೆ, ಅಂತರಂಗ ಪೂಜಾಪರಿಕರಗಳನ್ನು ಕುರಿತು ಅಕ್ಕಮಹಾದೇವಿಯ ವಚನ :

'ತನುಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು.
ಮನಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು.
ಧನಕರಗದವರಲ್ಲಿ ಅಕ್ಷತೆಯ ನೊಲ್ಲೆಯಯ್ಯಾ ನೀನು.
ಹದುಳಿಗರಲ್ಲದವರಲ್ಲಿ ಗಂಧವನೊಲ್ಲೆಯಯ್ಯಾ ನೀನು.
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು.
ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು.
ತ್ರಿಕರಣಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯಾ ನೀನು.
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ
ಚೆನ್ನಮಲ್ಲಿಕಾರ್ಜುನಾ.' (ವ.ಶಾ.ಸಾ.ವ. ೯೩೯)

ಮಜ್ಜನವೆಂದರೆ ಲಿಂಗಸ್ನಾನ. ತನುಕರಗಿಸುವುದೆಂದರೆ ಸತ್ಯಶುದ್ಧ ಕಾಯಕ, ಸದಾಚಾರ, ಜಂಗಮಸೇವೆಯಲ್ಲಿ ಶರೀರವನ್ನು ತೊಡಗಿಸುವುದು. ತನುಕರಗಿಸದೇ ಲಿಂಗದ ಮಜ್ಜನ ಲಿಂಗಕ್ಕೆ ಅನರ್ಪಿತ ಎಂದು ಅಕ್ಕ ಹೇಳುತ್ತಾರೆ. ಅಂದರೆ ಸತ್ಯಶುದ್ದ ಕಾಯಕ, ಸದಾಚಾರ, ಜಂಗಮಸೇವೆಗಳಿಲ್ಲದ ಲಿಂಗಸ್ನಾನ ಅಪೂರ್ಣ.

ಪಷ್ಪ ಮೃದುತ್ವದ ಸಂಕೇತ. ಮನಕರಗಿಸುವುದೆಂದರೆ ಮನದಲ್ಲಿಯ ಕಾಠಿಣ್ಯತೆಯನ್ನು ಕಳೆದು ಮೃದುಗೊಳಿಸುವುದು ಅಂಥ ಮೃದುವಾದ ಮನಸ್ಸೇ ಪುಷ್ಪ. ತೆಂಗು ಕಾಠಿಣ್ಯತೆಯ ಸಂಕೇತ ಅದರೊಳಗಿನ ತಿಳಿಯಾದ, ಸಿಹಿಯಾದ ನೀರು ನಿರ್ಮಲತೆ ಮತ್ತು ಸಿಹಿತನದ ಸಂಕೇತ. ತೆಂಗನ್ನು ಒಡೆಯುವುದೆಂದರೆ ಮನದ ಕಾಠಿಣ್ಯತೆಯನ್ನು ಕಳೆದುಕೊಳ್ಳುವುದು. ಮನದಲ್ಲಿಯೆ ಸಿಟ್ಟು, ಅಹಂಕಾರ, ದ್ವೇಷ, ಅಸೂಯೆ, ಕಪಟತನ ಕಳೆದು ಮನ ಮೃದುವಾಗಬೇಕು. ಅಲ್ಲವಾದರೆ ಎಷ್ಟು ಪುಷ್ಪ ಏರಿಸಿದರೂ, ಎಷ್ಟು ತೆಂಗು ಒಡೆದರೂ ಅಪ್ರಯೋಜಕ.

ಧನವನ್ನು ಕೇವಲ ಸಂಗ್ರಹಿಸದೆ ಸತ್ಪಾತ್ರಕ್ಕೆ, ದಾಸೋಹಕ್ಕೆ ವಿನಿಯೋಗಿಸುವುದೇ ನಿಜವಾದ ಅಕ್ಷತೆ. ಹದುಳಿಗರು ಎಂದರೆ ವಿನಯಶೀಲರು. 'ಸದುವಿನಯವೇ ಸದಾಶಿವನ ಒಲುಮೆ' ಎಂದು ಬಸವಣ್ಣವರು ಹೇಳಿದಂತೆ ವಿನಯಶೀಲರಾಗಬೇಕು. ಅತಿಥಿಗಳು ಮನೆಗೆ ಬಂದರೆ ಕುಳ್ಳಿರಿ ಎಂದರೆ ಮನೆಯಲ್ಲಿ ತಗ್ಗು ಬೀಳುವುದಿಲ್ಲ. ನಾಲ್ಕು ಒಳ್ಳೆಯ ಮಾತುಗಳನ್ನಾಡಿದರೆ ಶರೀರ ಸಂಪತ್ತು ಹಾಳಾಗದು. ಬಂದವರನ್ನು ಗೌರವದಿಂದ, ವಿನಯದಿಂದ ಬರಮಾಡಿಕೊಳ್ಳಬೇಕು. ಅಂಥ ವಿನಯಶೀಲತೆ ಎಲ್ಲಡೆ ಸುಗಂಧ ಸೂಸುತ್ತದೆ. ಅದೇ ನಿಜವಾದ ಗಂಧ. ಅಂತರಂಗದ ಅರಿವಿನ ಕಣ್ಣನ್ನು ತೆರೆಯಬೇಕು. ಸರಿ–ತಪ್ಪು, ಒಳ್ಳೆಯದು–ಕೆಟ್ಟದ್ದು ಇವುಗಳನ್ನು ನಿರ್ಧರಿಸುವ ವಿವೇಕವನ್ನು ಬೆಳೆಸಿಕೊಳ್ಳಬೇಕು. ಅಂಥ ವಿವೇಕವೇ ಆರತಿ.ನಾವು ಯಾವ ಪರಂಪರೆಯಿಂದ ಬಂದೆವು ಎನ್ನುವುದು ಮುಖ್ಯವಲ್ಲ. ನಮ್ಮ ಸುತ್ತಲೂ ಎಷ್ಟು ಸುಗಂಧದ ಪರಿಮಳ ಸೂಸಿದೆವು ಎನ್ನುವುದು ಮುಖ್ಯ. ಸುಗಂಧವಾದ ಪರಿಮಳ ಹರಡಲು ಭಾವ ಪರಿಶುದ್ಧ ಆಗಿರಬೇಕು. ಭೇದಭಾವ ಅಳಿಯಬೇಕು. ಅಂಥ ಪರಿಶುದ್ಧವಾದ ಭಾವವೇ ದೇವನಿಗರ್ಪಿಸುವ ಪರಿಮಳದ ಧೂಪ. ಜನರು ಅನೇಕ ರೀತಿಯ ಪದಾರ್ಥಗಳಿಂದ ನೈವೇದ್ಯ ತಯಾರಿಸುತ್ತಾರೆ. ಪರಿಯಾಣ ಭಾಜನವಲ್ಲ, ಲಿಂಗಕ್ಕೆ ತನ್ನ ಮನವೇ ಭಾಜನ ಎಂದು ಬಸವಣ್ಣವರು ಹೇಳುವಂತೆ ಮನಸ್ಸಿನ ಸಮಾಧಾನ, ಸಂತೃಪ್ತಿಗಳೇ ನಿಜವಾದ ಅರ್ಪಿತ. ಅಂಥ ಮನದ ಪರಿಣಾಮವೇ ನಿಜವಾದ ನೈವೇದ್ಯ ಎಂದು ಅಕ್ಕ ಹೇಳುತ್ತಾಳೆ.

ವಿಕಾರವೆಂದರೆ ತನುವಿಕಾರ, ಇಂದ್ರಿಯ ವಿಕಾರ, ಮನೋವಿಕಾರ ಈ ತ್ರಿವಿಧ ವಿಕಾರ ಅಳಿಯುವುದೇ ನಿಜವಾದ ಪೂಜೆ. ತನುವಿಕಾರಕ್ಕೆ ಕಾರಣವಾದ ಹಸಿವು, ತೃಷೆ, ವ್ಯಸನಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ಇಂದ್ರಿಯಗಳಿಲ್ಲದೆ ಬದುಕು ಅಸಾಧ್ಯ. ಆದರೆ ಅವುಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು. ಒಳ್ಳೆಯದನ್ನೇ ನೋಡಬೇಕು, ಒಳ್ಳೆಯದನ್ನೇ ಕೇಳಬೇಕು, ಉತ್ತಮವಾದುದನ್ನೇ ಸೇವಿಸಬೇಕು. ನೋಡಬಾರದ್ದನ್ನು ನೋಡಿದರೆ, ಕೇಳಬಾರದ್ದನ್ನು ಕೇಳಿದರೆ, ತಿನ್ನಬಾರದ್ದನ್ನು ತಿಂದರೆ, ಕುಡಿಯಬಾರದ್ದನ್ನು ಕುಡಿದರೆ ಇಂದ್ರಿಯಗಳು ವಿಕಾರಗೊಳ್ಳುತ್ತವೆ. ಅವುಗಳ ಬಯಕೆಯನ್ನು ಪೂರೈಸಲಿಕ್ಕೆ ಪ್ರಯತ್ನಿಸಿದರೆ ಬೆಂಕಿಯಲ್ಲಿ ತುಪ್ಪ ಸುರಿದಾಗ ಬೆಂಕಿ ಮತ್ತಷ್ಟು ಪ್ರಜ್ವಲಿಸುವಂತೆ ಇಂದ್ರಿಯಗಳು ಮತ್ತಷ್ಟು ವಿಕಾರಗೊಳ್ಳುತ್ತವೆ. ಇಂದ್ರಿಯಗಳನ್ನು ಪ್ರಸಾದೀಕರಣಗೊಳಿಸುವುದರಿಂದ ಮಾತ್ರ ವಿಕಾರವಳಿಯಲು ಸಾಧ್ಯ.

ಮನಸ್ಸಿಗೆ ಅದ್ಭುತ ಶಕ್ತಿಯಿದೆ. ಆದರೆ ಅದು ಚಂಚಲವಾಗಿದೆ. ಅದನ್ನು ನಮ್ಮ ಹಿಡಿತದಲ್ಲಿಟ್ಟುಕೊಂಡರೆ ಅದ್ಭುತ ಸಾಧನೆ ಸಾಧ್ಯ. ಅದು ಹರಿದತ್ತ ಹರಿಯಲು ಬಿಟ್ಟರೆ ವಿಕಾರಗೊಳ್ಳುತ್ತದೆ. ನಾಯಿ ತನ್ನ ಬಾಲವನ್ನು ಅಲುಗಾಡಿಸುವುದು ಸಹಜ. ಆದರೆ ಬಾಲವೇ ನಾಯಿಯನ್ನು ಅಲುಗಾಡಿಸಿದರೆ ನಾಯಿಯ ಪಾಡೇನು? ಹಾಗೆಯೇ ಮನಸ್ಸನ್ನು ನಾವು ನಿಯಂತ್ರಿಸಬೇಕು. ಮನಸ್ಸೇ ನಮ್ಮನ್ನು ನಿಯಂತ್ರಿಸ ಹತ್ತಿದರೆ ನಮ್ಮ ಗತಿ ಅಧೋಗತಿ. ಉತ್ತಮ ವಿಚಾರ, ಆಚಾರಗಳತ್ತ ಮನಸ್ಸನ್ನು

ಹರಿಬಿಡುವುದರಿಂದ ಮಾತ್ರ ಮನೋವಿಕಾರವಳಿಯಲು ಸಾಧ್ಯ. ಹೀಗೆ ತ್ರಿವಿಧ ವಿಕಾರವಳಿದರೆ ದೇಹವು ಪವಿತ್ರವಾಗುತ್ತದೆ. ಪೂಜೆ ನೆಲೆಗೊಳ್ಳುತ್ತದೆ.

ಸಮತೆ ಎಂದರೆ ಎಲ್ಲ ಪರಿಸ್ಥಿತಿಯನ್ನು ಸಮಭಾವದಿಂದ ಸ್ವೀಕರಿಸುವುದು. ಸಮತೆ ನೆಲೆಗೊಂಡರೆ ನಮ್ಮಲ್ಲಿ ಸಮಾಧಾನ, ಶಾಂತಿ ಸದಾ ನೆಲೆಗೊಳ್ಳುತ್ತದೆ. ಅದೇ ನಿಜವಾದ ನೈವೇದ್ಯ. ಎಲ್ಲವನ್ನು ಅರಿತು, ಅರಿದೆನೆಂಬ ಅಹಂಭಾವವಿಲ್ಲದೆ ಇರುವವನೇ ಪರಪೂರ್ಣ ಎಂದು ಬಾಚಯ್ಯನವರು ಹೇಳುವುದು ಪ್ರಸ್ತುತ ಕಾಲದ ತಲ್ಲಣಗಳಿಗೆ ಮಾರ್ಮಿಕವಾದ ಸಂದೇಶವಾಗಿದೆ.

ಒಟ್ಟಾರೆ ೧೨ನೇ ಶತಮಾನದ ವಚನಗಳ ಸಂದೇಶದಂತೆ ವರ್ತಮಾನದ ಜನರು, ತಾವೂ ಮರುಳಾಗದೆ, ಜನರನ್ನೂ ಮರುಳಗೊಳಿಸದೆ ಢಾಂಬಿಕದ, ಅರ್ತವಿಲ್ಲದ ಪೂಜೆಯನ್ನು ಬಿಟ್ಟು, ವಚನಕಾರರ ವಚನಗಳ ವೈಚಾರಿಕ ಪೂಜೆಯನ್ನು ಅಳವಡಿಸಿಕೊಳ್ಳುವುದು ಪ್ರಸ್ತುತ ಕಾಲಕ್ಕೆ ಸರ್ವರಿಗೂ ಅನಿವಾರ್ಯವಾಗಿದೆ.

ಕೊನೆ ಟಿಪ್ಪಣೆಗಳು

೧. ವೆಂಕಟಯ್ಯ ಅಪ್ಪಗೆರೆ 'ಸಾಮಾನ್ಯ ಘಟನೆಗಳ ವೈಜ್ಞಾನಿಕ ವಿಶ್ಲೇಷಣೆ' ಪು. ೭, ೨೦೦೨, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಕ್ರೆಸೆಂಟ್ ರಸ್ತೆ, ಬೆಂಗಳೂರು.

೨. ಪ್ರಕಾಶ ಗಿರಿಮಲ್ಲನವರ 'ವಚನಧರ್ಮ:ವೈಚಾರಿಕ ವಿವೇಚನೆ' ಪು. ೧೫, ೨೦೧೮, ಪ್ರಕಾಶಕರು ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀಮುರುಘಾಮಠ, ಧಾರವಾಡ.

೩. ಸಿದ್ಧರಾಮ ಶರಣರು ಬೆಲ್ದಾಳ, ಡಿ. ಎಂ. ಧನ್ನೂರ 'ಬಸವತತ್ವ ಪ್ರದೀಪಿಕೆ' ಪು. ೭೫, ೨೦೧೬, ಅಲ್ಲಮಪ್ರಭು ಸಂಶೋಧನ ಕೇಂದ್ರ ಬಸವಕೇಂದ್ರ, ಶ್ರೀ ಮುರುಘಾಮಠ, ಚಿತ್ರದುರ್ಗ.

೪. ೦೯-೦೭-೨೦೧೬ರ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದದ್ದು.

ಅಧ್ಯಾಯ : ಆರು

ವಚನ ಸಾಹಿತ್ಯದಲ್ಲಿ ಜಾತ್ಯಾತೀತ ನಿಲವುಗಳು

ಅಧ್ಯಾಯ : ಆರು

ವಚನ ಸಾಹಿತ್ಯದಲ್ಲಿ ಜಾತ್ಯಾತೀತ ನಿಲವುಗಳು

ವಚನಕಾರರು ಹನ್ನೆರಡನೇ ಶತಮಾನದಲ್ಲಿ ಸ್ಥಾಪಿಸಿದ ಶರಣಸಂಕುಲ ಎಂಬ ನವಸಮಾಜವು ಜಾತಿ, ಕುಲ, ವರ್ಣ, ವರ್ಗ, ಮತ್ತು ಲಿಂಗಭೇದಗಳಿಂದ ಮುಕ್ತವಾಗಿತ್ತು. ವಿವಿಧ ಜಾತಿಮೂಲಗಳಿಂದ ಬಂದ ಕಾಯಕಜೀವಿಗಳು ಈ ನವಸಮಾಜದಲ್ಲಿ ಒಂದಾಗಿ ಬದುಕುತ್ತಿದ್ದರು. ಕಾಯಕದೊಳಗಿನಜಾತಿಯ ವಿಷಯವನ್ನು ಹೊರಹಾಕಿದ್ದರಿಂದ ಎಲ್ಲ ಕಾಯಕಗಳಿಗೆ ಸಮಾನ ಗೌರವ ಲಬಿಸಿತ್ತು. ವೈದಿಕರು ಆಚರಿಸುವ ಮನುಧರ್ಮದ ತಾಯಿಬೇರಾದ ಕರ್ಮಸಿದ್ಧಾಂತವನ್ನು ಬಸವಣ್ಣನವರು ಅಲ್ಲಗಳೆದು ಕಾಯಕಸಿದ್ಧಾಂತದ ಮೇಲೆ ಈ ಶರಣಸಂಕುಲದಪರಿಕಲ್ಪನೆಯನ್ನು ಕಾರ್ಯಗತಗೊಳಿಸಿದರು. ಜಾತಿ, ವರ್ಣ ವರ್ಗ ಮತ್ತು ಲಿಂಗಭೇದಗಳನ್ನು ಕರ್ಮಸಿದ್ಧಾಂತ ಸಂರಕ್ಷಿಸುತ್ತದೆ. ಪಾಪ ಮತ್ತು ನರಕದ ಭಯ ಮೂಡಿಸುತ್ತದೆ. ಪುಣ್ಯ ಮತ್ತು ಸ್ವರ್ಗದ ಆಸೆ ಹುಟ್ಟಿಸುತ್ತದೇ. ಮೋಕ್ಷ ಮತ್ತು ಪುನರ್ಜನ್ಮಗಳನ್ನು ಪ್ರತಿಪಾದಿಸುತ್ತದೆ. ಇಂಥ ಕರ್ಮಸಿದ್ಧಾಂತದ ಟೊಳ್ಳುತನವನ್ನು ಬಯಲಿಗೆಳೆಯುವ ಮೂಲಕ ಬಸವಣ್ಣನವರು ವೈದಿಕ ಅಥವಾ ಮನುಧರ್ಮದ ಕ್ರೌರ್ಯವನ್ನು ಎತ್ತಿತೋರಿಸಿದರು. ಇಂಥ ಕುತಂತ್ರಗಳಿಂದ ಬ್ರಾಹ್ಮಣರು, ರಾಜರು, ಮೇಲ್ಜಾತಿ ಮತ್ತು ಮೇಲ್ವರ್ಗದವರು 'ಭೂಸುರರು' ಮತ್ತು 'ಮಹಾಜನರು' ಎಂದು ಕರೆಯಿಸಿಕೊಳ್ಳುತ್ತ ಬಂದಿರುವುದನ್ನು ಬಸವಣ್ಣನವರು ಗಮನಿಸಿದರು. ವೈದಿಕ ಧರ್ಮದ ಷಡ್ಯಂತ್ರದ ಮೂಲಕ ಕೆಳಜಾತಿ ಮತ್ತು ಕೆಳವರ್ಗದ ಬಹುಜನರನ್ನು ಶೋಷಣೆಗೆ ಒಳಪಡಿಸಿದ್ದನ್ನು ಬಹಿರಂಗಪಡಿಸಿದರು.

ಜನರಲ್ಲಿ ಅರಿವು ಮೂಡಿಸುತ್ತ, ವೈದಿಕರು ಸೃಷ್ಟಿಸಿದ ಎಲ್ಲ ರೀತಿಯ ಶೋಷಣೆಯ ಸಂಕೋಲೆಗಳನ್ನು ಕಳಚುವ ವಚನ ಚಳುವಳಿಯನ್ನು ಹೂಡಿದರು. ವಚನ ಚಳುವಳಿಯು ದುರ್ಬಲರಲ್ಲಿದ್ದ ಶಕ್ತಿಸಾಧ್ಯತೆಗಳನ್ನು ಬಯಲು ಮಾಡುವುದರಲ್ಲಿ ಸಫಲವಾಯಿತು. ಎಷ್ಟೋ ಮಂದಿ ಕೆಳವರ್ಗದವರೂ ತಮ್ಮ ಅನಿಸಿಕೆಗಳನ್ನು ನಿರ್ಭಿಡೆಯಿಂದ ಉಸಿರಿಸಿಕೊಳ್ಳುವಂತಾಯಿತು. ಕೆಲವರು ತಮ್ಮ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಅಲ್ಪ ಸ್ವಲ್ಪ ಚಿಂತಿಸಿದರೂ ಬಹು ಮಂದಿ ಆಧ್ಯಾತ್ಮಿಕ ಜಗತ್ತನ್ನು ಹೊಕ್ಕು ಅಲ್ಲೇ ಮೈಮರೆತಂತೆ ಕಾಣುತ್ತಾರೆ. ಕೆಳವರ್ಗದವರಿಗೆ ತಮ್ಮದೇ ಧಾರ್ಮಿಕ ಬದುಕು ಇತ್ತಾದರೂ ಯಜಮಾನ ಸಂಸ್ಕೃತಿಯ ನೆಲೆಯಲ್ಲಿ ಅವರು ದೈವದೂರರು; ಶಿಷ್ಟ ಮೋಕ್ಷ ಪ್ರಪಂಚದಿಂದ ವಂಚಿತರು. ಹೀಗಾಗಿ ಒಂದು ಆಳವಾದ ವಿಷಾದ ಅವರನ್ನು ಆವರಿಸಿದ್ದರಲ್ಲಿ ಅಚ್ಚರಿಯಿಲ್ಲ. ಚಳವಳಿಯ ಕಾರಣದಿಂದ

ಅವರಲ್ಲಿ ಆತ್ಮವಿಶ್ವಾಸ ಉಕ್ಕಿ ತಾವೂ ಕಡಿಮೆಯೇನಲ್ಲ ಎಂಬ ಭಾವ ಚಿಗುರಿದ್ದು ದೊಡ್ಡ ಸಂಗತಿ. ಪ್ರಾಯಶಃ ಈ ಚಳವಳಿ ಇನ್ನೂ ದೀರ್ಘ ಕಾಲ ಇನ್ನೂ ವ್ಯಾಪಕವಾಗಿ ನಡೆದಿದ್ದರೆ, ಕೆಳವರ್ಗದವರು ವ್ಯವಸ್ಥೆಯನ್ನು ಮೀರಿ ನಡೆದುಕೊಳ್ಳುವ ಧೈರ್ಯವಹಿಸಬಹುದಾಗಿತ್ತೇನೋ; ಅಥವಾ, ತಮ್ಮದೇ ನಿಜವಾದ ಜಗತ್ತು, ಶಿಷ್ಟರದ್ದಲ್ಲ ಎಂಬ ವಾದವನ್ನು ಮಂಡಿಸುತ್ತಿದ್ದರೇನೋ. ಆದರೆ ಅದಕ್ಕೆ ಆಸ್ಪದವಾಗಲಿಲ್ಲ. ಹಾಗೆ ನಡೆದಿದ್ದರೆ, ನಾವು ಬಹು ಹಿಂದೆಯೇ, ಪಾಶ್ಚಾತ್ಯರಿಂದ ಆಮದು ಮಾಡಿಕೊಳ್ಳದ ನಮ್ಮದೇ ಹೊಸ ವೈಚಾರಿಕ ಜಗತ್ತನ್ನು ನಿರ್ಮಿಸಿಕೊಂಡಿರುತ್ತಿದ್ದವೇನೋ.

ಅದಿರಲಿ, ತಮಗೆ ಹೀಗೆ ಶಿಷ್ಟ ಸಂಸ್ಕೃತಿಯು ತೆರೆದುಕೊಂಡದ್ದರಿಂದ ಪುಲಕಿತರಾದ ಕೆಳವರ್ಗದವರು. ತಾವು ಹಂಬಲಿಸಿದ್ದ, ಆಧ್ಯಾತ್ಮಿಕತೆಯ ಪೂರದಲ್ಲಿ ಕೊಚ್ಚಿ ಹೋದರು. ಅಥವಾ ಹೀಗೂ ಇರಬಹುದು; ಐಹಿಕವಾಗಿ ತಮಗೆ ಪೂರ್ಣವಾಗಿ ದಕ್ಕದ ಸ್ವಾತಂತ್ರ್ಯ ಆಧ್ಯಾತ್ಮಿಕ ನೆಲೆಯಲ್ಲಿ ದೊರಕಿದ್ದರಿಂದ ಅದರಲ್ಲೇ ಹೆಚ್ಚು ನೆಮ್ಮದಿಯನ್ನು ಪಡೆದರೇನೋ ಎಂದರೆ ಸಾಮಾಜಿಕವಾಗಿ ತಮಗೆ ಸಮಾನತೆ ದೊರಕುವುದು ಅಷ್ಟು ಸುಲಭವಲ್ಲ ಎಂಬ ವಾಸ್ತವ್ಯದ ಅರಿವಿನಿಂದ ಅವರು ಯಾರ ಹಂಗೂ ಇಲ್ಲದ ಆಧ್ಯಾತ್ಮಿಕ ಜಗತ್ತಿನಲ್ಲಿ ವಿಹರಿಸತೊಡಗಿದರೇನೋ. ಇದು ಕೇವಲ ಧಾರ್ಮಿಕ ಜಗತ್ತಲ್ಲ, ಅದನ್ನು ಮೀರಿದ್ದು. ಸಾಂಸ್ಥಿಕ ಧರ್ಮದಲ್ಲೂ ಸಾಮಾಜಿಕ ಕಟ್ಟುಪಾಡುಗಳೇ ಕೆಲಸ ಮಾಡುವುದು, ವ್ಯಕ್ತಿಯ ಸ್ಥಾನವನ್ನು ಖಚಿತಗೊಳಿಸುವುದು. ವಚನ ಚಳವಳಿ ತನಗೆ ಹೊಂದೆ ಇದ್ದ ಇತರ ಧರ್ಮಗಳ ಸಾಂಸ್ಥಿಕ ಸ್ವರೂಪವನ್ನು ಅಲ್ಲಗಳೆದು ಹೊಸ ಪರ್ಯಾಯಗಳನ್ನು ನಿರ್ಮಿಸಿಕೊಳ್ಳುವ ಯತ್ನ ಮಾಡಿದ್ದರಿಂದಾಗಿ, ಅದಿನ್ನೂ ಪೂರ್ಣವಾಗದ ಆಕಾರವನ್ನು ಪಡೆಯದಿದ್ದುದರಿಂದಾಗಿ, ಕಟ್ಟುನಿಟ್ಟುಗಳು ಪ್ರಬಲವಾಗಿರಲಿಲ್ಲ. ಇದರಿಂದ ವಚನಕಾರರು ತಮ್ಮ ಮನಸ್ಸಿನಲ್ಲಿ ನಡೆಸಿದ ಅನುಸಂಧಾನವೇ ಅವರಿಗಿದ್ದ ಏಕೈಕ ಮಾರ್ಗವಾಗಿತ್ತು. ಇದಕ್ಕೆ ಯಾರ ಹಂಗೂ ಇಲ್ಲ. ತನ್ನ ಮತ್ತು ತನ್ನ ನಂಬಿದ ದೈವದ ನಡುವೆ ಇನ್ನಾರ ಪ್ರವೇಶಕ್ಕೂ ಆಸ್ಪದವಿಲ್ಲ; ಮಧ್ಯವರ್ತಿಯ ಅವಶ್ಯಕತೆಯನ್ನು ಚಳವಳಿ ನಿರಾಕರಿಸಿತ್ತಲ್ಲ. ಇದರಿಂದ ಅನುಭಾವ ಸ್ವಾತಂತ್ರ್ಯ ಅವರಿಗೆ ಬಹು ಅಪ್ಯಾಯಮಾನವಾಯಿತು. ಅದರಲ್ಲೂ ವಚನ ರಚನೆ ಮಾಡುವವರಿಗೆ ತಮ್ಮ ಅಂಕಿತದ ನೆವದಲ್ಲಿ ತಮ್ಮದೇ ದೈವವನ್ನು ಆವಿಷ್ಕರಿಸಿಕೊಳ್ಳುವ ಅವಕಾಶವೂ ಪ್ರಾಪ್ತವಾಯಿತು. ಇದರಿಂದಾಗಿ ಅವರು ಕುಳಿತಲ್ಲಿ, ನಿಂತಲ್ಲಿಯೇ ತಮ್ಮ ಜಗತ್ತಿನಲ್ಲಿ ನುಸುಳಿಕೊಳ್ಳಲು ಸಾಧ್ಯವಾಯಿತು.

ಉರಿಲಿಂಗಪೆದ್ದಿ-ಕಾಳವ್ವೆ -ಅಂಬಿಗ ಚೌಡಯ್ಯರಂತಹ ಕೆಳವರ್ಗದ ವಚನಕಾರರು ಬಹು ಉಗ್ರವಾಗಿ ಜಾತಿವ್ಯವಸ್ಥೆಯಂತಹ ಸಾಮಾಜಿಕ ಅನಿಷ್ಟಗಳನ್ನು ಪ್ರಶ್ನಿಸುತ್ತಾರೆ; ಕೆಲವರು ಹಳೆಯ ಜಾತಿ ಪದ್ಧತಿಗೆ ಹೊಸ ಬಣ್ಣ ಬಳಿಯುತ್ತಾರೆ; ಪೆದ್ದಿಯಂತಹವರು ಹೊಸ ಪುರಾಣಗಳನ್ನು ನಿರ್ಮಿಸಿ ತಮ್ಮ ಮೇಲ್ಮೆಯನ್ನು ಪ್ರತಿಪಾದಿಸುತ್ತಾರೆ, ನಿಜ. ಇದೇನೂ ಗಣ್ಯವಾದ ವಿಷಯವಲ್ಲ. ತಮ್ಮ ಹಕ್ಕನ್ನು ಪ್ರತಿಪಾದಿಸುವ ಅವರ ಆವೇಶದ ಹಿಂದೆ ವೈಚಾರಿಕತೆಯೊಂದಿಗೇ ಸೃಜನಶೀಲ ಪೌರಾಣಿಕತೆಯೂ ಕೆಲಸ ಮಾಡಿದೆ. ಆದರೆ ಬಹುತೇಕ ಕೆಳವರ್ಗದ ವಚನಕಾರರು (ಇವರು ಹೊಸ ಧಾರೆಯನ್ನು

ಸೇರಿದ ಅಸಂಖ್ಯಾತ ಕೆಳವರ್ಗದವರ ಪ್ರತಿನಿಧಿಗಳು) ತಮ್ಮ ರಚನೆಗಳನ್ನು ಆಧ್ಯಾತ್ಮಿಕ ಅನುಭವಗಳ ಅಭಿವ್ಯಕ್ತಿಗೆ ಬಳಸಿಕೊಳ್ಳುತ್ತಾರೆ. ಅವರಿಗೂ ಇಹಕ್ಕಿಂತ ಪರವೇ ಮುಖ್ಯವಾಗಿದ್ದುದರಿಂದ, ತಮಗೆ ದೊರೆತ ಹೊಸ ಸ್ವಾತಂತ್ರ್ಯವನ್ನು ಶಾಶ್ವತವಾದದ್ದನ್ನು ಪಡೆಯಲು ಬಳಸಿಕೊಳ್ಳುತ್ತಾರೆ. ಆಧ್ಯಾತ್ಮ ಅವರ ಆಳಾಗಿಬಿಡುತ್ತದೆ. ತಮಗೆ ಸಿಕ್ಕಿದ್ದು ಅಪರೂಪವೆಂಬಂತೆ ಅದಕ್ಕೆ ಅವಚಿಕೊಳ್ಳುತ್ತಾರೆ. ಹೆಣ್ಣು ಮಕ್ಕಳು ಮಾಡಿದ್ದು ಇದನ್ನೇ. ಅವರಿಗೆ ಐಹಿಕತೆಯ ಹೊಸ ಆವಿಷ್ಕರಣಕ್ಕಿಂತ ಆಧ್ಯಾತ್ಮಿಕತೆಯೇ ಹೆಚ್ಚು ತುರ್ತು ಎನ್ನಿಸುತ್ತದೆ. ಇದು ಚಳುವಳಿಯು ಮುಂದಿಟ್ಟ ವೈಚಾರಿಕ ಪ್ರಣಾಲಿಕೆಯ ಮಿತಿಯೋ, ಜನರ ಮನೋಭಾವದ ಸ್ವರೂಪವೋ ಅಥವಾ ಅದೇ ವಾಸ್ತವವೋ ಚಿಂತಿಸಬೇಕು.

ವೈದಿಕ ಚೌಕಟ್ಟಿನ ವ್ಯವಸ್ಥೆಯಲ್ಲಿ ಜಾತಿ ಒಂದು ಭಯಂಕರ ವಿಚಾರ. ಏಕೆಂದರೆ, ಒಬ್ಬನ ಇಡೀ ಜೀವಮಾನವು ಅವನು ಯಾರಿಗೆ ಹುಟ್ಟಿದ ಎಂಬುದನ್ನೇ ಅವಲಂಬಿಸುತ್ತದೆ; ಜಾತಿ ಎಂದರೆ ಇದೇ: ಅದು ಅನುಲ್ಲಂಘನೀಯವಾದದ್ದು. ಹಾಗಾಗಿಯೇ ವಚನ ಚಳುವಳಿಯು ಕೆಳವರ್ಗದವರ ಆಕ್ರೋಶದ ಧ್ವನಿಯಾಯಿತು. ಆದರೆ ಏಕೆ ವೀರಶೈವದಲ್ಲಿಯೂ ಜಾತಿಗಳು ಉಳಿದುಕೊಂಡು ಬಂದಿತು ಎಂಬುದನ್ನು ಕಂಡುಕೊಳ್ಳಬೇಕಾಗಿದೆ. ವಚನ ಚಳುವಳಿಯ ಕಾಲದಲ್ಲೇ ವೀರಶೈವಕ್ಕೆ ಬಂದವರಲ್ಲಿಯೂ ಜಾತಿಭೇದ ಕಾಣುತ್ತಿತ್ತು. 'ಉಂಬುದು ಉಡುವುದು ಸದಾಚಾರ, ಕೊಂಬುದು ಕೊಳುವುದು ಕುಲಾಚಾರ' ಎಂಬಂತಹ ಭೇದ ಸಮರ್ಥನೆಯ ಮಾತೂ ಜೋರಾಗಿಯೇ ಕೇಳಿಸುತ್ತಿತ್ತು. ಈ ಬಗ್ಗೆ ಕೆಳವರ್ಗದ ಅನೇಕ ವಚನಕಾರರು ತಮ್ಮ ಕೋಪ ವ್ಯಕ್ತಪಡಿಸುವುದಲ್ಲದೆ, ಅದರ ತಾತ್ವಿಕತೆಯ ಬಗ್ಗೆ ಅನೇಕ ನೆಲೆಗಳಲ್ಲಿ ವಿಶ್ಲೇಷಣೆ ಮಾಡುತ್ತಾರೆ. ಸಮಾನತೆಯ ನೆಲೆಗಟ್ಟನ್ನು ಪ್ರತಿಪಾದಿಸಿದ ವೀರಶೈವಕ್ಕೆ ಹೊಸ ಭರವಸೆಯಿಂದ ಬಂದವರಿಗೆ ಅಲ್ಲಿಯೂ ನಿರಾಸೆ ಕಾದಿತ್ತು. ತಾತ್ವಿಕವಾಗಿ 'ಶಿವಾಚಾರ' ಅಥವಾ 'ಸಮಯಾಚಾರ'ವು ಶಿವಭಕ್ತರಲ್ಲಿ ತಾರತಮ್ಯವನ್ನು ನಿಷೇಧಿಸುತ್ತದೆ. ಆದರೆ ಪ್ರಸ್ತುತಃ ಇದು ಆಚರಣೆಯಲ್ಲಿರಲಿಲ್ಲ. ಹಾಗಾಗಿ ಇದರ ವಿರುದ್ಧ ಕೆಲವರು ಆಕ್ರೋಶ ವ್ಯಕ್ತಪಡಿಸುತ್ತಾರೆ. ಮುಖ್ಯ ವಚನಕಾರರ ಹಾಗೆಯೇ ಕೆಳವರ್ಗದವರೂ ಈ ಸಿಟ್ಟನ್ನು ತೋರ್ಪಡಿಸುತ್ತಾರೆ. 'ಅಜಾತನೆಂದೆನಬೇಡ ಜಾತನೆಂದೆನಬೇಡ. ಹದಿನೆಂಟು ಜಾತವಾದರಾವದು? ಒಂದೇ ಗುರುವಿನ ವೇಷವಿದ್ದವರಿಗೆ ದಾಸೋಹವ ಮಾಡುವುದೇ ಶಿವಾಚಾರ' ಎಂದು ಮಡಿವಾಳ ಮಾಚಯ್ಯನೂ; 'ಕುಲಹೀನ ಶಿಷ್ಯಂಗೆ ಅನುಗ್ರಹವು ಮಾಡಿ ತಿರುಗಿ ಅವನ ಮನೆಯಲ್ಲಿ ಉಣ್ಣಬಾರದೆಂದು ಅಕ್ಕಿ ಕಣಕವ ತಕ್ಕೊಂಡು ಹೋಗುವ ಗುರುವನು ಕಂಡಡೆ ಕೆಡಹಿ ಮೂಗಕೊಯ್ದು ಇಟ್ಟಂಗಿಯ ಕಲ್ಲಿಲೆ ತಿಕ್ಕಿ ಸಾಸಿವೆ ಹಿಟ್ಟಿನ ತಳಿದು ಮೇಲೆ ಲಿಂಬಿಯ ಹುಳಿಯನೆ ಹಿಂಡಿ ಪಡುವ ಗಾಳಿಗೆ ಹಿಡಿ' ಎಂದು ಅಂಬಿಗ ಚೌಡಯ್ಯನೂ ಆಕ್ರೋಶ ವ್ಯಕ್ತಪಡಿಸುತ್ತಾರೆ. ಗುರು-ಶಿಷ್ಯ, ಭಕ್ತ-ಜಂಗಮ ಇವರ ನಡುವೆ ಜಾತಿ ತಾರತಮ್ಯವನ್ನು ಇಂತಹ ಕಡೆಗಳಲ್ಲಿ ಅಲ್ಲಗಳೆಯಲಾಗಿದೆ ಎಂದರೆ ಅದು ವ್ಯಾಪಕವಾಗಿಯೇ ಇದ್ದಿರಬೇಕು.

"ಕರ್ನಾಟಕದಲ್ಲಿ ಅನೇಕ ಉಪಜಾತಿ ಉಪ ಪಂಗಡಗಳು ಬಸವತತ್ವದ ಪ್ರಭಾವಕ್ಕೆ ಒಳಗಾಗಿವೆ. ಹೆಸರು, ಆಹಾರ, ವಿಚಾರ, ವಿವಾಹ, ವರ್ತನೆ ಮುಂತಾದವುಗಳ ಮೇಲೆ ಬಸವತತ್ವದ ಮುದ್ರೆ ಇದೆ. ಸಿಂಧೆ, ಮಲ್ಲಪ್ಪನಂಥವರು ಹಾಗೂ ಅವರ ಪಂಗಡ ಬಸವತತ್ವದ ಪ್ರಭಾವಕ್ಕೆ ಒಳಗಾಗಿವೆ. ವೈಶ್ಯರು ಮನೆದೇವರು ಬಸವಣ್ಣನಾಗಿದ್ದಾನೆ. ಚಂದ್ರಶೇಖರ ಕಂಬಾರರಂಥವರು ಕರ್ನಾಟಕದಲ್ಲಿ ಲಿಂಗಾಯತ ಪ್ರಭಾವ ವ್ಯಾಪಕವಾಗಿದೆ ಎಂದು ಪ್ರತಿಪಾದಿಸಿದ್ದಾರೆ. 'ಕಾಯಕ' ಗೌರವಿಸುವವರು ಹಾಗೂ ಸಸ್ಯಾಹಾರಿಗಳು ಲಿಂಗ ಸಮಾನತೆಯನ್ನು ಒಪ್ಪುವವರು ಅಂದರೆ ಅವರೆಲ್ಲ ಲಿಂಗಾಯತ ಪ್ರಭಾವಕ್ಕೆ ಒಳಗಾಗಿದ್ದಾರೆ"[೧]. ಜೀವನದ ಅನುಭವವೆಲ್ಲ ಎಲ್ಲರಿಗೂ ಒಂದೇ ಬಗೆಯದಾಗಿರುವಾಗ ಹುಟ್ಟಿನ ಮೇಲೆ ಜಾತಿಯ ಹೆಸರಲ್ಲಿ ತಾರತಮ್ಯವೇಕೆ ಎಂಬುದು ಕೆಲವರ ವಿಸ್ಮಯಕ್ಕೆ ಕಾರಣವಾಗುತ್ತದೆ. 'ಶುಕ್ಲಶೋಣಿತ ಮಜ್ಜೆ ಮಾಂಸ ಹಸಿವು ತೃಷೆ ವ್ಯಸನ ವಿಷಯಾದಿಗಳೊಂದೆ ಭೇದ, ಮಾಡುವ ಕೃಷಿ ವ್ಯವಸಾಯ ಹಲವಲ್ಲದೆ, ಶೋರುವ ಶೋರಿಕೆ ಅರಿವಾತ್ಮನೊಂದೆ ಭೇದ. ಅವ ಕುಲವಾದಡೂ ಅರಿದಲ್ಲಿಯೇ ಪರತತ್ವಭಾವಿ' ಎಂಬುದು ಮಾದಾರ ಚೆನ್ನಯ್ಯನ ಮಾತು. ದೇಹ ರಚನೆ ಮತ್ತು ಅನುಭವಗಳ ಸ್ವರೂಪ ಎಲ್ಲರಿಗೂ ಸಮಾನವಾಗಿರುವಾಗ ಹುಟ್ಟಿನ ಮೇಲೆ ಭೇದವೆನಿಸುವುದರ ಬಗ್ಗೆ ಚಿಂತನಾತ್ಮಕ ವಿಶ್ಲೇಷಣೆ ಇಲ್ಲಿದೆ. ಇದೇ ಭಾವನೆಯನ್ನು ಹಲವಾರು ಇತರರೂ ವ್ಯಕ್ತ ಪಡಿಸುತ್ತಾರೆ. ಬೊಂತಾದೇವಿಯು ಇನ್ನೊಂದು ಬಗೆಯಲ್ಲಿ ಈ ಜೀವನಕ್ಕೆ ಹೇಗೆಯೋ ಹಾಗೆಯೇ ಅವ್ಯಕ್ತ ಅನುಭಾವದ ನೆಲೆಯಲ್ಲೂ ತಾರತಮ್ಯವಿಲ್ಲದ್ದರಿಂದ ಜಾತಿ ತಾರತಮ್ಯ ತರ್ಕಹೀನ ಎಂಬುದು ಅವಳ ಮಾತು: 'ಊರ ಒಳಗಣ ಬಯಲು, ಊರ ಹೊರಗಣ ಬಯಲುಂಟೆ? ಊರಹೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆಯ ಬಯಲೆಂದುಂಟೆ?' ಎಂಬ ಮಾರ್ಮಿಕ ಪ್ರಶ್ನೆಯ ಮೂಲಕವೇ ಅವಳು ತಾರತಮ್ಯವನ್ನು ಅಲ್ಲಗಳೆಯುತ್ತಾಳೆ.

ಆಧ್ಯಾತ್ಮಿಕ ಅನುಭವವನ್ನು ಪಡೆಯಬೇಕಾದರೆ ಜಾತಿ ಭೇದವನ್ನು ತೊರೆಯಬೇಕು; ಅಥವಾ ಮೇಲು ನೆಲೆಯನ್ನು ತಲುಪಿದಾಗ ಜಾತಿಯ ಸೋಂಕು ತಾನಾಗಿ ಅಳಿಯುತ್ತದೆ ಎಂಬರ್ಥದಲ್ಲಿ ಕೆಲವರು ಆಲೋಚಿಸಿದರು. ಇತರ ಭಕ್ತಿ ಚಳವಳಿಗಳು ಮಾಡಿದ್ದು ಇಂತಹ ಪರಿಷ್ಕಾರಗಳನ್ನೇ. ಭಕ್ತಿಯ ನೆಲೆಯಲ್ಲಿ ಅಥವಾ ಅನುಭಾವದ ನೆಲೆಯಲ್ಲಿ ತಾರತಮ್ಯಕ್ಕೆ ಜಾಗವಿಲ್ಲ; ಏಕೆಂದರೆ ಅದು ಅಮೂರ್ತವಾದ ಸ್ವಚ್ಛ, ಅನುಭವ, ಹೊರ ಬದುಕಿನ ಯಾವ ಲೋಪವೂ ಅಲ್ಲಿ ಸಲ್ಲದು. ಆದರೆ ವಚನ ಚಳುವಳಿ ಕೇವಲ ಭಕ್ತಿ ಚಳವಳಿಯಲ್ಲ. ಅದೊಂದು ಪ್ರಜ್ಞಾಪೂರ್ವಕ ಸುಧಾರಣಾ ಚಳವಳಿ. ಆದರೂ ಕೆಲವರು ಈ ಹಂತದಲ್ಲೂ ಆಲೋಚನೆ ನಡೆಸುತ್ತಾರೆ. 'ನಿಜದಿಂದ ಕ್ಷತ್ರಿಯನೆಂದು ನಿಜವನರಿಯದ ಕರ್ಣನ ವ್ಯಾಧಭಾವ ಬಿಡದಂತೆ ನಾನು ನನ್ನ ನಿಜವನರಿದಡೂ ಜಾತಿಯಾಶ್ರಮ ಗುಣಧರ್ಮ ಜೀವಾದಿಭೇದಂಗಳೊಳಗಾದ ಮಾಯಾಮಯಂಗಳೆಂಬ ಮುನ್ನಿನ ಭ್ರಮೆಗಳ ಬಿಡಲರಿಯದ ಬಡ ಮನುಜರೆಲ್ಲರೂ ನಿಜಗುಣನ ನಿಜಭಾವದಲ್ಲಿ ನಿಲ್ಲದವಂಗೆ ನಿಜಸುಖವು ಸಾಧ್ಯವಪ್ಪುದೇ ಹೇಳಾ' ಎಂಬ ಚಂದಿಮರಸನ (ಇವನೇನೂ ರಾಜನಲ್ಲ, ಹೆಸರಷ್ಟೇ ಅರಸ). ವಚನವನ್ನು ನೋಡಿ.

ಕರ್ಣ ಕ್ಷತ್ರಿಯನಾಗದಿದ್ದರೂ ಹುಟ್ಟಿ ಬೆಳೆದ ಪರಿಸರದ ಗಾಢ ಗುಂಗು ಅವನನ್ನಾವರಿಸಿತ್ತು. ಅದೇ ರೀತಿಯಲ್ಲಿ ಆತ್ಮಜ್ಞಾನಿಯೂ ಕೆಲವೇಳೆ ತನ್ನ ಐಹಿಕ ಸ್ಥಿತಿಯ ಗುಂಗಿನಿಂದಾಗಿ ಮೇಲುಸ್ತರದ ಶುದ್ಧ ಅನುಭವದಿಂದ ವಂಚಿತನಾಗುತ್ತಾನೆ ಎಂಬುದು ಇಲ್ಲಿಯ ಭಾವ. ಜಾತಿ ಎಂಬುದು ಗುಂಗು ಎಂದು ಹೇಳಿದರೂ ಆತ್ಮಜ್ಞಾನದ ನೆಲೆಯಲ್ಲಿ ಅದಕ್ಕೆ ಸ್ಥಾನವಿಲ್ಲ ಎಂದು ಈತ ಹೇಳುತ್ತಿದ್ದಾನೆಯೇ ಹೊರತು, ಅದಕ್ಕೆ ಅರ್ಥವೇ ಇಲ್ಲ ಎಂದು ಗಟ್ಟಿಯಾಗಿ ಹೇಳುತ್ತಿಲ್ಲ ಎಂಬುದೇ ಆಶ್ಚರ್ಯಕರ ವಿಚಾರ. ಹಾವಿನಹಾಳ ಕಲ್ಲಯ್ಯನ ಒಂದು ವಚನವೂ ಇದೇ ರೀತಿಯ ವಿಶ್ಲೇಷಣೆಗೆ ತೊಡಗುತ್ತದೆ. ಐಹಿಕ ಅಸಿತ್ವದಲ್ಲಿ ಒಂದೇ ಬಗೆಯಲ್ಲಿದ್ದರೂ ಅರಿವಿನ ಹಂತದಲ್ಲಿ ಜಾತಿತನ ಕಳಚಿಕೊಳ್ಳುತ್ತದೆ ಎನ್ನುತ್ತಾನೆ: 'ನಿಮ್ಮ ಶರಣರು ಅಜಾತ ಚರಿತ್ರರಾಗಿ ಆವ ಜಾತಿಯವನೂ ಹೊದ್ದರು.'

ಭಾರತೀಯ ಬದುಕಿನಲ್ಲಿ ಜಾತಿಯನ್ನು ಬಿಟ್ಟು ಅಸ್ತಿತ್ವವೇ ಇಲ್ಲ ಎನ್ನುವಂತಹ ಪರಿಸ್ಥಿತಿ. ಹಾಗಾಗಿ ಕೆಲವರು ವ್ಯಕ್ತಿ ವ್ಯಕ್ತಿಗಳಲ್ಲಿರಬಹುದಾದ ವ್ಯತ್ಯಾಸ ಸತ್ಯವೇ ಹೊರತೂ, ಜಾತಿಗಳ ನಡುವಣ ವ್ಯತ್ಯಾಸ ಅಲ್ಲ; ಜಾತಿಗಳಾಗಿರುವುದು ವೃತ್ತಿ ವ್ಯತ್ಯಾಸದಿಂದಲೇ ಹೊರತು ಮೂಲಭೂತವಾಗಿ ಅಲ್ಲ; ವ್ಯಕ್ತಿಯ ಗುಣಾನುಸಾರವಾಗಿ ಅವನಿಗೆ ಬೆಲೆ ನೀಡಬೇಕೆಂದು ಕೆಲವರು ಜಾತಿಯನ್ನು ಪುನರ್ ವ್ಯಾಖ್ಯಾನಿಸಲು ತೊಡಗಿದರು. 'ವೇದಶಾಸ್ತ್ರಕ್ಕೆ ಹಾರುವನಾಗಿ, ವೀರವಿತರಣಕ್ಕೆ ಕ್ಷತ್ರಿಯನಾಗಿ, ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ, ವ್ಯಾಪಾರದೊಳಗಾಗಿ ಕೃಷಿಯ ಮಾಡುವುದಕ್ಕೆ ಶೂದ್ರನಾಗಿ–ಇಂತೀ ಜಾತಿಗೋತ್ರದೊಳಗಾದ ನೀಚ ಶ್ರೇಷ್ಠವೆಂಬ ಎರಡು ಕುಲವಲ್ಲದ ಹೊಲೆ ಹದಿನೆಂಟು ಜಾತಿಯೆಂಬ ಕುಲವಿಲ್ಲ. ಬ್ರಾಹ್ಮಣ ಸರ್ವಜೀವಹತ ಕರ್ಮಕ್ಕೊಳಗಾದಲ್ಲಿ ಸಮಗಾರ–ಈ ಉಭಯವನರಿದು ಮರೆಯಲಿಲ್ಲ' ಎಂಬುದು ಮಾದಾರ ಚೆನ್ನಯ್ಯನ ಮಾತು. ಜ್ಞಾನಿಯೇ ಬ್ರಾಹ್ಮಣ, ಜೀವ ಹಂತಕನೇ ಹೊಲೆಯ ಎಂಬುದು ಇಲ್ಲಿನ ತಾತ್ಪರ್ಯ. ಅಂದರೆ, ಮಾನವರನ್ನು ಗುಣದ ಮೇಲೆ ವಿಂಗಡಿಸುವಾಗ ಹಳೆಯ ಜಾತಿಸೂಚಕ ಹೆಸರುಗಳನ್ನೇ ಬಳಸಿ ಹೊಸ ಅರ್ಥ ಕೊಡುವ ಇಲ್ಲಿ ಪ್ರಯತ್ನಿಸಲಾಗಿದೆಯೇ ವಿನಾ ಆ ಪರಿಕಲ್ಪನೆಯನ್ನೇ ಅಲ್ಲಗಳೆಯುವ ನಿಲುವನ್ನು ತಳೆದಿಲ್ಲ.

ವೈದಿಕ ಪರಿಸರವೆಂದರೆ ಜಾತಿವ್ಯತ್ಯಾಸಕ್ಕೆ ಅನುಲ್ಲಂಘನೀಯ ಒಪ್ಪಿಗೆ; ಋಗ್ವೇದದ ಭಾವವೆಂದು ಪರಿಗಣಿತವಾದ 'ಪುರಷಸೂಕ್ತ'ದ ವರ್ಣಮೂಲಕ್ಕೆ ಮಾನ್ಯತೆ. ಅಲ್ಲಿನ ಪ್ರಕಾರ ಬ್ರಾಹ್ಮಣ ಅತ್ಯಂತ ಶ್ರೇಷ್ಠ. ವರ್ಣಗಳು ಜಾತಿಗೆ ಎಡೆಮಾಡಿಕೊಟ್ಟರೂ, ಮೊದಲ ಮೂರು ವರ್ಣಗಳು ಹಾಗೆಯೇ ಜಾತಿಗಳಾಗಿ ಮಾರ್ಪಾಟು ಹೊಂದಿದರೆ, ಶೂದ್ರ ವರ್ಣದಲ್ಲಿ ಆ ಕಾಲಕ್ಕೆ ಹದಿನೈದು ಜಾತಿಗಳು ಹುಟ್ಟಿಕೊಂಡಿದ್ದವು. ಹೀಗಾಗಿ ಉಟ್ಟು ಹದಿನೆಂಟು ಜಾತಿಗಳು; ಮೇಲಿನ ತುದಿ ಬ್ರಾಹ್ಮಣನಾದರೆ, ಕೆಳ ತುದಿ ಮಾದಿಗ. ಆಗಿನ ಸಮಾಜದಲ್ಲಿ ಜಾತಿಗಳ ಸ್ಥಾನ ನಿರ್ದಿಷ್ಟ; ಶ್ರೇಣೀಕರಣ ಆಗಾಗಲೇ ಭದ್ರವಾಗಿತ್ತು. ಸೊಡ್ಡಳ ಬಾಚರಸನ ವಚನ ಅಂತಹ ಚಿತ್ರವೊಂದನ್ನು ನೀಡುತ್ತದೆ. ಅಂಬಿಗರ ಚೌಡಯ್ಯನೂ ಅಲ್ಪಸ್ವಲ್ಪ ಇದೆ ಎಂಬ ಭಾವನೆ; ಹಾಗಾಗಿ ಬಾಹ್ಯದಲ್ಲಿ ತಾರತಮ್ಯ ಕೂಡದು ಎಂಬ ನಿಲುವು. ಆದರೆ ಕೆಲವರು ಇಷ್ಟು ಸೌಮ್ಯವಾಗಿ ಹೇಳುವವರಲ್ಲ. ಸಿಡಿಮದ್ದಿನ ಮಾತು ಅವರದು.

ಅಂಥವರಲ್ಲಿ ಎದ್ದು ಕಾಣುವ ಹೆಸರು ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆಯದು. 'ಕುರಿ ಕೋಳಿ ಕಿರಿ ಮೀನು ತಿಂಬುವರಿಗೆಲ್ಲ ಕುಲಜ ಕುಲಜರೆಂದರು; ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯಾದನು! ಅವರೆಂತು ಕೀಳುಜಾತಿಯವರು? ಜಾತಿಗಳೇ ನೀವೇಕೆ ಕೀಳಾದಿರೋ? ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿ ಹೋಯಿತು; ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣರಿಗೆ ಶೋಭಿತವಾಯಿತು. ಸಿದ್ಧಲಿಕೆಯ ತುಪ್ಪವನು, ಸಗ್ಗಳೆಯ ನೀರನು ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕವಯ್ಯಾ' ಎಂಬಲ್ಲಿ ಕಾಳವ್ವೆ ತನ್ನದೇ ಆದ ತರ್ಕದ ಮೂಲಕ ಮಾದಿಗ ಹೇಗೆ ಕೀಳಾಗುತ್ತಾನೆ ಎಂದು ಪ್ರಶ್ನಿಸುವ ದಿಟ್ಟತನ ತೋರುತ್ತಾಳೆ. ಇಲ್ಲಿ ಎತ್ತಿರುವ ಪ್ರಶ್ನೆ ಅಸ್ಪೃಶ್ಯರದ್ದು. ಬ್ರಾಹ್ಮಣ ಮಾತ್ರವಲ್ಲ ಇತರ ಜಾತಿಗಳವರೂ ಸೇರಿ ಕೀಳು ಎಂದು, ಪ್ರಾಯಶಃ ಊರ ಒಳಗೆ ತಮ್ಮನ್ನು ಬಿಟ್ಟುಕೊಳ್ಳದ ಪದ್ಧತಿಯನ್ನು ಅವಳು ತರ್ಕಬದ್ಧವಾಗಿ ವಿಶ್ಲೇಷಿಸಿಸುತ್ತಿದ್ದಾಳೆ. ಶ್ರೇಣೀಕೃತ ವ್ಯವಸ್ಥೆಯಲ್ಲಿ ಅತ್ಯಂತ ಮೇಲು ಎಂಬುವ ಬ್ರಾಹ್ಮಣನು ಮಾದಿಗ ಮಾಡಿದ ಸಿದ್ಧಲಿಕೆ-ಸಗ್ಗಳೆಗಳನ್ನು ಬಳಸಿಕೊಂಡು ಅವುಗಳ ನಿರ್ಮಾತೃಗಳನ್ನು ಹಳಿಯುವ ಹೀನಬುದ್ಧಿಯನ್ನು ಝುಂಕಿಸಿ ಕೇಳುವ ಅವಳ ಕ್ರೋಧ ಅರ್ಥವಾಗುತ್ತದೆ. ಇಂಥದೇ ರೀತಿಯಲ್ಲಿ ರಚಿತವಾಗಿರುವ ತನ್ನೊಂದು ವಚನದಲ್ಲಿ ಅಂಬಿಗರ ಚೌಡಯ್ಯ ಬ್ರಾಹ್ಮಣರನ್ನು 'ಗುಜ್ಜ ಹೊಲೆಯರು' ಎಂದು ಅಳಿಯುತ್ತಾನೆ.

ಎಲ್ಲ ಕಾಲದಲ್ಲೂ ಪ್ರಾಯಶಃ ಆಧುನಿಕ ಪರಿಭಾಷೆಯಲ್ಲಿ ಸಂಸ್ಕೃತಾನುಕರಣವೆಂದು ಕರೆಯಲಾಗುವ ಪ್ರಕ್ರಿಯೆ ನಡೆಯುತ್ತಿತ್ತು. ಅಂದರೆ, ಮೇಲು ವರ್ಗಜಾತಿಗಳವರನ್ನು ಕೆಳಗಿನವರೆನ್ನಿಸಿಕೊಂಡವರು ಸಾಂಸ್ಕೃತಿಕವಾಗಿ ಅನುಕರಿಸುವುದು. ಎಲ್ಲರಿಗಿಂತ ಶ್ರೇಷ್ಠನೆನ್ನಿಸಿಕೊಂಡ ಬ್ರಾಹ್ಮಣ ಮಿಕ್ಕೆಲ್ಲರಿಗೆ ಅನುಕರಣೀಯನೆಂದು ಒಂದೆಡೆ ಒರಿಗಣಿತಬಾಗಿದ್ದರೆ, ಮತ್ತೊಂದಡೆಯಲ್ಲಿ ಅತ್ಯಂತ ಕೆಳಗಿನವರ ಆಕ್ರೋಶ ಸಹಜವಾಗಿಯೇ ಬ್ರಾಹ್ಮಣ್ಯವು ಪ್ರತೀಕಿಸುವ ಎಲ್ಲದರ ಬಗ್ಗೆ ತೋರ್ಪಡುತ್ತಿತ್ತು. ಬಾಹ್ಮಣ ಶ್ರೇಷ್ಠತೆಯನ್ನು ಪ್ರಶ್ನಿಸಿದರೆ ಒಟ್ಟು ವ್ಯವಸ್ಥೆಯನ್ನೇ ಪ್ರಶ್ನಿಸಿದಂತೆ. ಹಾಗಾಗಿ ಕೆಳವರ್ಗದ ವಚನಕಾರರು ಜಾತಿಶ್ರೇಣೀಕರಣದಲ್ಲಿ ತಮ್ಮಿಂದ ಇನ್ನೊಂದು ತುದಿಯಲ್ಲಿರುವ ಬ್ರಾಹ್ಮಣನ ಬಗ್ಗೆ ಕಿಡಿ ಕಾರುತ್ತಾರೆ. 'ಅಸತ್ಯದಲ್ಲಿ ನಡೆದು ವಿಪ್ರರು ನಾವು ಘನವೆಂದು ಹೊತ್ತು ಹೋಕರ ಮಾತೇತಕ್ಕೆ?' ಎಂದು ಮಾದಾರ ಚೆನ್ನಯ್ಯನು ಹೇಳಿದರೆ, 'ಬ್ರಾಹ್ಮಣನು ಅಧಿಕವೆಂದೆನೆಂಬಿರಿ, ಆ ಮಾತದು ಮಿಥ್ಯ' ಎಂದು ಸೊಡ್ಡಳ ಬಾಚರಸ ಹೇಳುತ್ತಾನೆ; 'ವರ್ಣಾನಾಂ ಬ್ರಾಹ್ಮಣೋ ಗುರುಃ ಎಂಬ ಕ್ರೂರ ಹೃದಯರ ಮಾತ ಕೇಳಲಾಗದು' ಎಂದು ಉರಿಲಿಂಗಪೆದ್ದಿ ನುಡಿಯುತ್ತಾನೆ; ಅವನೇ ಮತ್ತೊಂದೆಡೆ 'ಗುರುಲಿಂಗ ಜಂಗಮಕ್ಕೆ ಶರಣೆನ್ನದೆಮುನ್ನ ಒಂಟಿ ಬ್ರಾಹ್ಮಣನ ಕಂಡು ಶರಣಾರ್ಥಿ ಎಂದಡೆ ಎಂಬತ್ತು ನಾಲ್ಕು ಲಕ್ಷ ಯೋನಿಯಲ್ಲಿ ಹಂದಿಯ ಬಸುರಲ್ಲಿ ಬಪ್ಪುದು ತಪ್ಪದು' ಎಂದು ಶಪಿಸುತ್ತಾನೆ.

ಇದೇ ರೀತಿ ಬ್ರಾಹ್ಮಣ ಶ್ರೇಷ್ಠತೆಯನ್ನು ಅಲ್ಲಗಳೆಯಲು ಹೊಸ ಪುರಾಣವನ್ನು ಸೃಷ್ಟಿಸುವ ಕೆಲಸವನ್ನು ಉರಿಲಿಂಗಪೆದ್ದಿ ಮಾಡುತ್ತಾನೆ. ಅವನು ವಚನಕಾರರಲ್ಲೆಲ್ಲ ಅತ್ಯಂತ ಹೆಚ್ಚು ಸಂಸ್ಕೃತ

ಉಲ್ಲೇಖಗಳನ್ನು ನೀಡುವವನು; ಬಹು ದೊಡ್ಡ ಸಂಸ್ಕೃತ ಪಂಡಿತ. ದಲಿತನಾಗಿದ್ದರೂ ಒಂದು ಮಠದ ಅಧಿಪತಿಯಾಗಿದ್ದನಂತೆ. ಅವನಲ್ಲಿ ಕಾಣುವ ಪುರಾಣ ಜಾನಪದದಲ್ಲಿ ಪ್ರಚಲಿತವಾದದ್ದೋ ಅಥವಾ ಅವನದೇ ಸೃಷ್ಟಿಯೋ ತಿಳಿಯುವುದಿಲ್ಲ. ಈ ದೃಷ್ಟಿಯಿಂದ ಅವನ ಮಾತುಗಳನ್ನು ವಿಶೇಷವಾಗಿ ಅಧ್ಯಯನ ಮಾಡುವ ಅವಶ್ಯಕತೆಯಿದೆ. ಉರಿಲಿಂಗಪೆದ್ದಿ ಬ್ರಾಹ್ಮಣ ಶ್ರೇಷ್ಠತೆಯ ಐತಿಹ್ಯವನ್ನು ಅಲ್ಲಗಳೆಯುತ್ತಾನೆ. ಶಿವಪೂಜೆಯನ್ನು ಮಾಡಿ ಬ್ರಾಹ್ಮಣತ್ವವನ್ನು ಗಳಿಸದೆ, 'ದೀಕ್ಷೆಯಿಲ್ಲದೆ ಸತಿಶೂದ್ರಗಿತ್ತಿಗೆ ಹುಟ್ಟಿದವನೊಡನುಂಬ ಅನಾಚಾರಿಗೆ ಎಲ್ಲಿಯದೋ ಬ್ರಾಹ್ಮಣತ್ವ?' ಎಂದು ಪ್ರಶ್ನಿಸುತ್ತಾನೆ. ಕರಸ್ಥಲದಲ್ಲಿ ಲಿಂಗ, ಉರಸ್ಥಲದಲ್ಲಿ ರುದ್ರಾಕ್ಷಿ ಮಾಲೆ ಹಿಡಿದವರು ನಿಜವಾದ ಬ್ರಾಹ್ಮಣನೇ ಹೊರತೂ ಮಿಕ್ಕವರೆಲ್ಲ 'ಶಾಪತಹ ಬ್ರಾಹ್ಮಣರು' ಎಂದು ಹೇಳುತ್ತಾನೆ. ವಿವಿಧ ಯುಗಗಳಲ್ಲಿ ವಿವಿಧ ಬಗೆಯ ಯಜ್ಞಗಳನ್ನು ಮಾಡಿ ಬೇರೆ ಬೇರೆಯ ಪ್ರಾಣಿಗಳನ್ನು ಬಲಿಗೊಟ್ಟು ಆ ಮಾಂಸವನ್ನು ತಿನ್ನುವ ಬ್ರಾಹ್ಮಣರನ್ನು 'ಹೀನ ಹೊಲೆಯ', 'ಜಿನುಗು ಹೊಲೆಯ', 'ಕುನ್ನಿ ಹೊಲೆಯ' ಎಂಬ ಮಾತುಗಳಿಂದ ಹೀಗಳೆಯುತ್ತಾನೆ! ಅಷ್ಟಮದಗಳು, ಜಾತಿವರ್ಣ ಆಶ್ರಮ ಕುಲಗೋತ್ರಗಳು, ಅಹಂಕಾರ ಮುಂತಾದವನ್ನು ಪ್ರಾಣಿಗಳೆಂದು ಸೂಚಿಸಿ ಅವುಗಳನ್ನು ಕೊಲ್ಲಬೇಕೆಂದು ವೇದಗಳಲ್ಲಿ ಹೇಳಿದೆಯೇ ಹೊರತು ವಾಸ್ತವ ಪ್ರಾಣಿಗಳನ್ನಲ್ಲ ಎಂದು ಪ್ರತಿಪಾದಿಸುತ್ತಾನೆ. ಹಾಗೆ ಪ್ರಾಣಿಗಳನ್ನು ಕೊಂದು ಯಜ್ಞಗಳನ್ನು ಮಾಡುವವರೇ ಶಾಪತಹ ಬ್ರಾಹ್ಮಣರು. 'ಆವ ಜಾತಿಯವನಾದಡೇನುಶಿವಭಕ್ತನೇ ಬ್ರಾಹ್ಮಣ' ಎಂದು ಬೇರೊಂದೆಡೆ ಹೆಳುವ ಉರಿಲಿಂಗಪೆದ್ದಿಯು, 'ಶಿವಭಕ್ತನೇ ಕುಲಜ' ಎಂದು ಪುನರ್ ಮೌಲ್ಯಮಾಪನ ಮಾಡುತ್ತಾನೆ. ಅಲ್ಲಿಯೇ ಬ್ರಾಹ್ಮಣರನ್ನು ಎರಡು ಗುಂಪಾಗಿ ವಿಂಗಡಿಸುವ ಈತನು, 'ರುದ್ರನ ಮುಖದಲ್ಲಿ ಹುಟ್ಟಿದವನೇ ಬ್ರಾಹ್ಮಣ, ಮಿಕ್ಕಾದ ವಿಪ್ರರೆಲ್ಲರೂ ಋಷಿಗೋತ್ರದಲ್ಲಿ ಹುಟ್ಟಿದರು' ಎಂದು ವಿಶ್ಲೇಷಿಸುತ್ತಾನೆ. ಋಷಿಮೂಲದ ವಿಪ್ರರು ಅಧಮ ಜಾತಿಯವರೆಂದು, ಅಧಮ ಜಾತಿಯಲ್ಲಿ ಹುಟ್ಟಿದರೂ ರುದ್ರಭಕ್ತರಾದ ಕಾರಣ ಬ್ರಾಹ್ಮಣರಾಗುತ್ತಾರೆ ಎಂದೂ ಅವನ ಪ್ರಕಾರ ಬ್ರಾಹ್ಮಣ ಬೇರೆ, ವಿಪ್ರ ಬೇರೆ. ಈ ವಿಪ್ರರು ಪಿಂಡಪ್ರಧಾನ ಮಾಡುತ್ತಾರೆ ಹಾಗೂ ಭೂತ ಬಯಲನ್ನಿತ್ತು, ಭೂತವೇಷವನ್ನು ತಿನ್ನುತ್ತಾರೆ, ಇಂತಹವರನ್ನು 'ಅಕುಲಜರು' ಎಂದು ಉರಿಲಿಂಗಪೆದ್ದಿ ಕರೆಯುತ್ತಾನೆ.

ಮತ್ತೂ ಒಂದೆಡೆ 'ಮಹಾಬ್ರಾಹ್ಮಣಮೀಶಾನಂ' ಎಂಬ ಶ್ರುತಿವಾಕ್ಯವನ್ನು ಉಲ್ಲೇಖಿಸಿ ಉರಿಲಿಂಗಪೆದ್ದಿಯು 'ಮಹಾ ಬ್ರಾಹ್ಮಣನೇ ಮಹಾದೇವನು' ಎಂದು ವ್ಯಾಖ್ಯೆ ನೀಡುತ್ತಾನೆ. ಮುಂದುವರೆದು, 'ಗುರುರ್ದೇವೋ ಮಹಾದೇವೋ ಗುರು ದೇವಸ್ಸದಾಶಿವಃ ಗುರುದೇವಃ ಪರಂ ತತ್ವಂ ತಸ್ಮೈ ಶ್ರೀ ಗುರುವೇ ನಮಃ' ಎಂಬುದಾಗಿ ಮಾಹಾದೇವನೇ ಶ್ರೀಗುರುಕಾಣಿರಣ್ಣಾ. 'ಆ ಶ್ರೀ ಗುರುವಿನ ಕರಕಮಲದಲ್ಲಿ ಉದ್ಭವಿಸಿದ ತಚ್ಛಿಷ್ಯನೇ ಮಹಾಬ್ರಾಹ್ಮಣನು' ಎಂದು ವಿವರಿಸುತ್ತಾನೆ. ಮುಂದೆ ಅನೇಕ ಸಂಸ್ಕೃತೋಲ್ಲೇಖಗಳನ್ನು ನೀಡಿ, 'ದೃಷ್ಟ ವಾಕ್ಯಂಗಳನು ವಿಚಾರಿಸಿ ನೋಡಿದಡೆಯೂ ಶಿವಭಕ್ತನೇ ಉತ್ತಮನು' ಎಂಬ ತೀರ್ಪು ನೀಡುತ್ತಾನೆ. 'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬ ಮಾತನ್ನು ಖಂಡಿಸಿ, ಬ್ರಾಹ್ಮಣನಿಂದಾಗಿ ಅನೇಕರು ಹಾಳಾದ ಪುರಾಣ ಕತೆಗಳನ್ನು ಉಲ್ಲೇಖಿಸುತ್ತಾನೆ.

ಬಹುಮುಖ್ಯವಾದ ಒಂದು ವಚನವನ್ನು ನಾವು ವಿಶೇಷವಾಗಿ ಗಮನಿಸಬೇಕು. ಅಲ್ಲಿ ಉರಿಲಿಂಗಪೆದ್ದಿಯು ಸಮಾಜ ದಲ್ಲಿ ಎರಡು ತುದಿಗಳೆಂದು ಪರಿಗಣಿತರಾದ ಬ್ರಾಹ್ಮಣ ಮತ್ತು ಹೊಲೆಯರಿಬ್ಬರೂ ಮೂಲತಃ ಸಮಾನರು ಎಂದು ಪ್ರತಿಪಾದಿಸುತ್ತಾನೆ. ಇಬ್ಬರೂ ಜಮದಗ್ನಿಗೆ ಹುಟ್ಟಿದ ಮಕ್ಕಳು; ಬ್ರಾಹ್ಮಣ ರೇಣುಕಾದೇವಿಯ ಮಗನಾದರೆ, ಹೊಲೆಯ ಮಾತಂಗಿಯ ಮಗ. ಅವರಲ್ಲಿ ವೈಷಮ್ಯ ಉಂಟಾದಾಗ ಭಾರಧ್ವಾಜ ವಿಶ್ವಾಮಿತ್ರ ಅಗಸ್ತ್ಯ ನಾರದ ಕೌಂಡಿಲ್ಯ–ಈ ಐವರು ತಮ್ಮ ಸಾಕ್ಷಿಯಲ್ಲಿ ಅವರಿಗೆ ಆಸ್ತಿ ವಿಭಾಗವನ್ನು ಮಾಡಿಕೊಡುತ್ತಾರೆ. ಅದರ ಪ್ರಕಾರ, ಗ್ರಾಮದೊಳಗಿದ್ದ ಮನೆ ಬ್ರಾಹ್ಮಣರಿಗೆ, ಗ್ರಾಮದ ಹೊರಗಣ ಮನೆ ಹೊಲೆಯರಿಗೆ; ಜೀವಂತ ಹಸುವನ್ನು ಗೋದಾನ ರೂಪದಲ್ಲಿ ಪಡೆಯುವ ಹಕ್ಕು ಬ್ರಾಹ್ಮಣನಾದರೆ, ಸತ್ತ ಹುಸುನೆಳೆದುಕೊಂಡು ಹೋಗುವವನು ಹೊಲೆಯ. ತಮ್ಮಿಬ್ಬರಲ್ಲಿ ಯಾವ ಸಂಬಂಧವೂ ಉಳಿದಿಲ್ಲ ಎಂದು ಹೊಲೆಯನಿಗೆ 'ಸಂಬೋಳಿ' ಎಂಬ ಹೆಸರನ್ನು ಕೊಟ್ಟು ಬ್ರಾಹ್ಮಣರು 'ತೊರೆ ಪತ್ರ'ವನ್ನು ಬರೆದರು. ಮುಂದೆ ನಳ ಮಹಾರಾಜನು ಪಿತೃಕಾರ್ಯ ಮಾಡಿದಾಗ ಹೊನ್ನ ಗೋವನ್ನು ದಾನ ಮಾಡಿದಾಗ ಅದನ್ನು ಇಬ್ಬರೂ ಹಂಚಿಕೊಂಡರಂತೆ. ಆಕಾರಣದಿಂದ ಬ್ರಾಹ್ಮಣರನ್ನು ಉತ್ತಮ ಕುಲಜರೆಂದು ನಮಸ್ಕರಿಸುವ 'ಅಜ್ಞಾನಿ ಹೊಲೆಯರನ್ನು' ಏನೆನ್ನಬೇಕು ಎಂದು ಅಚ್ಚರಿ ವ್ಯಕ್ತಪಡಿಸುತ್ತಾನೆ. ಈ ಐತಿಹ್ಯದ ಮೂಲವಾವುದೋ ತಿಳಿಯದು. ಆದರೆ ಇಲ್ಲಿ ವ್ಯಕ್ತವಾದ ಆತ್ಮಪ್ರತಿಷ್ಠೆ ಅಪರೂಪವಾದದ್ದು. ತಾವು ಬ್ರಾಹ್ಮಣರ ಸಮಾನ, ಅಷ್ಟೇಕೆ ಅವರಿಗಿಂತ ಮಿಗಿಲು ಎಂಬ ಆತ್ಮಪ್ರತ್ಯಯ ವಚನ ಚಳುವಳಿಯು ಮೂಡಿಸಿದ ಕೆಚ್ಚಿನ ಪ್ರತೀಕವಾಗಿದೆ.

ಈ ಬಗೆಯ ಕೆಚ್ಚು ಬಹುಜನ ಕೆಳವರ್ಗದ ವಚನಕಾರರಲ್ಲಿ ಕಾಣುವುದಿಲ್ಲ; ಆಗಲೇ ಗಮನಿಸಿರುವಂತೆ ಅವರ ಕಣ್ಣು ಆಧ್ಯಾತ್ಮಿಕ ಸಾಧನೆಯ ಮೇಲೆ. ಆ ಮೂಲಕ ಅವರು ತಮ್ಮ ಜಾತಿಕೀಳರಿಮೆಯನ್ನು ಹೋಗಲಾಡಿಸಿಕೊಳ್ಳಲು ಪ್ರಯತ್ನಸಿರಬಹುದು. ಕೆಟ್ಟ ಚಾಳಿಯವನನ್ನು ಬೈಯಬೇಕಾದರೆ ಹೊಲೆಯ ಮಾದಿಗ ಎಂಬ ಪದಗಳನ್ನೇ ಇವರೂ ಬಳಸಿದರು. ಆ ಪದಗಳು ತುಚ್ಛತನವನ್ನು ಸೂಚಿಸುವಂತೆ ಪರಿಭಾವಿಸಿದರು. ಅಲ್ಲದೆ ದೊಡ್ಡ ವಿಚಿತ್ರವೆಂದರೆ, ಜಾತಿವ್ಯವಸ್ಥೆಯನ್ನು ಧಿಕ್ಕರಿಸಿದ ಶರಣರು ಜಾತಿಪರಿಕಲ್ಪನೆಯನ್ನು ಸಂಪೂರ್ಣವಾಗಿ ತೊರೆಯಲಿಲ್ಲ. ಪುನರ್ ಮೌಲ್ಯಮಾಪನದಂತಹ ಕಾರ್ಯಗಳಿಂದಾಗಿ, ವೈದಿಕದ ದಟ್ಟ ನೆರಳಡಿ ಬಂದ ವೀರಶೈವವು ಮತ್ತೆ ಜಾತಿವ್ಯವಸ್ಥೆಗೆ ಮರಳುವಂತಾಯಿತು. ವೃತ್ತಿ–ಜಾತಿಗಳ ನಡುವೆ ಸಂಬಂಧವಿದ್ದುದರಿಂದಾಗಿ, ಜಾತಿಯನ್ನು ಧಿಕ್ಕರಿಸಿದರೂ ಅದಕ್ಕೆ ಮೂಲವಾದ ಅನುವಂಶಿಕ ವೃತ್ತಿಯನ್ನು ನಿರಾಕರಿಸಿ ಹೊಸ ವೃತ್ತಿಯನ್ನು ಕೈಗೊಳ್ಳಬಹುದಾದ ವೃತ್ತಿಸ್ವಾತಂತ್ರ್ಯ ಬಾರದ್ದರಿಂದಾಗಿ ಮತ್ತೆ ವೃತ್ತಿಯಾಧಾರಿತ ಜಾತಿಗಳು ತಮ್ಮ ಯಥಾಸ್ವರೂಪವನ್ನು ಉಳಿಸಿಕೊಂಡು ಮುಂದುವರಿಯಲು ಕಾರಣವಾಯಿತು. ಅಂತಹ ವೃತ್ತಿಗೆ ಕಾಯಕವೆಂದು ಕರೆದ ಎಲ್ಲ ಕಾಯಕಜೀವಿಗಳ ಬದುಕಿನ ಸನ್ಮಾರ್ಗವಾದ ವಚನಕಾರರ ದೃಷ್ಟಿಯಲ್ಲಿ ಮಂದಿರಗಳಿಲ್ಲ, ಮೂರ್ತಿಗಳಿಲ್ಲ, ಸ್ಥಾವರಗಳಿಲ್ಲ, ಮಠಗಳಿಲ್ಲ, ಸ್ವಾಮಿಗಳಿಲ್ಲ, ಇಷ್ಟಲಿಂಗದ ಮೂಲಕ

ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಅಪ್ರಮಾಣನಾದ ದೇವರ ಪೂಜೆ ಬಿಟ್ಟರೆ ಇನ್ನಾವ ದೇವರು ಪೂಜೆ ಇಲ್ಲ, ಪ್ರತಿಯೊಬ್ಬರ ಮತ್ತು ಪ್ರತಿಯೊಂದರ ಒಳಗೆ ಇರುವ ಈ ಏಕದೇವನನ್ನು ಹುಡುಕಿಕೊಂಡು ಯಾವ ಕ್ಷೇತ್ರಗಳಿಗೂ ಹೋಗಬೇಕಿಲ್ಲ. ನಮ್ಮೊಳಗಿನ ಅಂತಃಸಾಕ್ಷಿ ಎಂಬ ದೇವರ ಕುರುಹು ಆದ ಇಷ್ಟಲಿಂಗವನ್ನು ಪೂಜಿಸಲು ಯಾವುದೇ ಅಭಿಷೇಕಗಳೂ ಇದಕ್ಕಿಲ್ಲ. ಹೋಮ, ಹವನ, ಯಜ್ಞ, ಯಾಗಾದಿಗಳ ಮಾತೇ ಇಲ್ಲ. ಹರಕೆ ಹೊರುವ ಸಮಸ್ಯೆ ಇಲ್ಲ. ನಿಜವಾದ ಅರ್ಥದಲ್ಲಿ ಇಷ್ಟಲಿಂಗ ಪೂಜೆ ಎಂಬುದು ನಮ್ಮೊಳಗಿನ ಅಂತಃಸಾಕ್ಷಿ ಎಂಬ ಘನದ ಜೊತೆ ಬೆರೆಯುವುದೇ ಆಗಿದೆ. ಈ ಮಂಗಳಕರವಾದ ಕೂಡುವಿಕೆಗೆ 'ಶಿವಯೋಗ' ಎಂದೂ ಕರೆಯುತ್ತಾರೆ. 'ಶಿವ' ಎಂದರೆ ಮಂಗಳಕರವಾದುದು. 'ಯೋಗ' ಎಂದರೆ ಕೂಡುವುದು. ಒಂದು ದೃಷ್ಟಿಯಿಂದ ಬಸವಧರ್ಮವು ಯೋಗಧರ್ಮವೇ ಆಗಿದೆ. ಇಲ್ಲಿ ಎರಡು ರೀತಿಯ ಕೂಡುವಿಕೆಗಳಿವೆ. ಮೊದಲನೆಯದಾಗಿ ಅಂತರಂಗದಲ್ಲಿ, ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಅಂತಃಸಾಕ್ಷಿಯ ಜೊತೆ ಕೂಡಿದರೆ. ಎರಡನೆಯದಾಗಿ ಬಹಿರಂಗದಲ್ಲಿ ಸಕಲ ಜೀವಾತ್ಮರ ಜೊತೆ ಕೂಡುವುದು. ಆ ಮೂಲಕ ಜಗತ್ತಿನಲ್ಲಿ ಸರ್ವ ಜೀವಿಗಳು ಬದುಕಲು ಯೋಗ್ಯವಾಗುವಂಥ ವಾತಾವರಣ ಸೃಷ್ಟಿಸುವುದು. ಹೀಗೆ ಇದು ಸಮಾಜಮುಖಿ ಯೋಗಧರ್ಮವಾಗಿದೆ.

ಸರ್ವಸಮತ್ವದಿಂದ ಕೂಡಿದ ಶರಣಸಂಕುಲದಲ್ಲಿ ಸಂಸ್ಕಾರ, ಸಂಸ್ಕೃತಿ, ಸಮಾಜ, ಅರ್ಥವ್ಯವಸ್ಥೆ, ಧರ್ಮದ ಮಾನವೀಯ ಸ್ಪಂದನ, ಅನುಭಾವದ ನೆಲೆ, ಕಾಯಕದ ಬೆಲೆ ಮುಂತಾದವುಗಳೆಲ್ಲ ಸರ್ವರಿಗೂ ಒಂದೇ ತೆರನಾಗಿದ್ದವು. ಇಲ್ಲಿ ಎಲ್ಲರೂ ಶರಣರು, ಅಂದರೆ ನವಮಾನವರು. ಎಲ್ಲ ರೀತಿಯ ಅಸಮಾನತೆಯಿಂದ ಮುಕ್ತರಾಗಿ ಹೊಸ ಬಾಳಿಗೆ ಬೆಳಕಾದವರು. ಇಂಥ ಬದುಕುವ ವಿಧಾನವನ್ನು ಕಂಡುಹಿಡಿದ ಬಸವಣ್ಣನವರ ಅನುಭಾವ ಸಮಾನತೆಯ ಮೇಲೆ ನಿಂತಿದ್ದರೆ, ವೈದಿಕರ ಆಧ್ಯಾತ್ಮವೆಂಬುದು ಅಸಮಾನತೆಯ ಮೇಲೆ ನಿಂತಿದೆ. ಬಸವಣ್ಣನವರ ಕಾಯಕಧರ್ಮ ಅಂತಃಕರಣದಿಂದ ಕೂಡಿದ ಸಮಷ್ಟಿಪ್ರಜ್ಞೆಯ ಕಡೆಗೆ ಒಯ್ದರೆ, ವೈದಿಕರ ಮನುಧರ್ಮ ಅಹಂಕಾರದಿಂದ ಕೂಡಿದ ವ್ಯಷ್ಟಿ ಪ್ರಜ್ಞೆಯ ಕಡೆಗೆ ಒಯ್ಯುತ್ತದೆ. ಎಲ್ಲಿಯೂ ಒಂದಾಗದಂಥ ಈ ಎರಡು ಧರ್ಮಮಾರ್ಗಗಳನ್ನು ಕೂಡಿಸುವ ಪ್ರಯತ್ನ ಮಾಡುವವರು ನಿಜವಾದ ಅರ್ಥದಲ್ಲಿ ಬಸವಧರ್ಮವನ್ನು ಮನುಧರ್ಮದ ಕೂಪದಲ್ಲಿ ಎಸೆಯುವ ಉದ್ದೇಶವನ್ನೇ ಹೊಂದಿರುತ್ತಾರೆ. ಈ ಪಿತೂರಿಯನ್ನು ತಡೆಯಬೇಕಾದರೆ ಬಸವಣ್ಣನವರ ನೇತೃತ್ವದಲ್ಲಿ ನಡೆದ ಕಾಯಕ ಜೀವಿಗಳ ಚಳುವಳಿಯನ್ನು ಮರುಮೌಲ್ಯೀಕರಣಕ್ಕೆ ಒಳಪಡಿಸುವುದು ಈ ಕಾಲದ ತುರ್ತು ಅಗತ್ಯವಾಗಿದೆ. ಕಾಯಕಜೀವಿಗಳ ಚಳುವಳಿಯು ನೇರವಾಗಿ ಜಾತಿವಿರೋಧಿ ಚಳವಳಿಯೇ ಆಗಿದೆ. ಆ ಮೂಲಕ ಎಲ್ಲ ರೀತಿಯ ಶೋಷಣೆಯನ್ನು ವಿರೋಧಿಸುತ್ತ ಕಾಯಕದ ಗೌರವವನ್ನು ಕಾಪಾಡುವಂಥದ್ದಾಗಿದೆ.

ವೈದಿಕರು ವಿವಿಧ ಕಾಯಕಗಳನ್ನು ಮುಂದೆ ಮಾಡಿ ಮೇಲು ಕೀಳು ಭಾವನೆಯ ಜಾತಿಗಳನ್ನು ಸೃಷ್ಟಿಸಿದರು. ಪ್ರತಿಯೊಬ್ಬರು ತಮ್ಮ ತಮ್ಮ ಕಾಯಕಗಳಿಗೇ ಅಂಟಿಕೊಂಡಿರುವಂತೆ ಮಾಡಿದರು. ಆ

ಮೂಲಕ ಈ ಶ್ರೇಣೀಕೃತ ಸಮಾಜ ಸದಾ ಯಥಾಸ್ಥಿಯಲ್ಲೇ ಮುಂದುವರಿಯುವಂತೆ ನೋಡಿಕೊಂಡರು. ಜನರು ಕಾಯಕಗಳಲ್ಲಿ ಅಷ್ಟೇ ಅಲ್ಲದೆ ನೂರೆಂಟು ದೇವರುಗಳಲ್ಲಿ ಹರಿದು ಹಂಚಿ ಹೋಗುವಂತ ಬಹುದೇವೋಪಾಸನಾ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಬಡವರ ದೇವರುಗಳು ಮತ್ತು ಶ್ರೀಮಂತರ ದೇವರುಗಳೆಂಬ ಭೇದವನ್ನು ತೋರ್ಪಡಿಸಿದರು. ವೈದಿಕರ ಶಿಷ್ಟದೇವತೆಗಳಿಗೆ ಶೂದ್ರರ ಕ್ಷುದ್ರ ದೇವತೆಗಳು ಬಿಟ್ಟಿ ಕೂಲಿ ಮಾಡುವ ಆಳುಗಳಾದವು. ಹೀಗೆ ಶೂದ್ರರು, ಅತಿಶೂದ್ರರು ಮತ್ತು ಅವರ ದೇವತೆಗಳೆಲ್ಲ ಸೇರಿ ಒಂದು ಬೃಹತ್ ಶೋಷಿತ ವರ್ಗವಾಗಿ ರೂಪುಗೊಂಡರು. ಬಹುಜನರಿಂದ ಕೂಡಿದ ಈ ಉತ್ಪಾದಕ ವರ್ಗಕ್ಕೆ ಶೂದ್ರ ವರ್ಣ ಎಂದು ಕರೆಯಲಾಯಿತು. ಅಲ್ಪ ಜನರಿಂದ ಕೂಡಿದ ಅನುತ್ಪಾದಕ ವರ್ಗದಲ್ಲಿ ಮೂರು ವರ್ಣಗಳು ರಾರಾಜಿಸಿದವು. ಶೂದ್ರರನ್ನು ಅಕ್ಷರವಂಚಿತರನ್ನಾಗಿಸಿ, ಓದುತ್ತ ಬರೆಯುತ್ತ ಕಾಲ ಕಳೆಯುವ ಬ್ರಾಹ್ಮಣ ವರ್ಣ, ಕೊಲ್ಲುವುದು ಮತ್ತು ಸಾಯುವುದನ್ನೇ ನಂಬಿದ್ದ ಕ್ಷತ್ರಿಯ ವರ್ಣ ಹಾಗೂ ಕೊಳ್ಳುವುದು ಮತ್ತು ಮಾರುವುದುರ ಮೇಲೆ ಅವಲಂಬಿತವಾದ ವೈಶ್ಯವರ್ಣದ ಜನರು ಜೀವನಾವಶ್ಯಕ ವಸ್ತುಗಳನ್ನು ಉತ್ಪಾದಿಸಲಿಲ್ಲ. ಆದರೆ ಬಹುಜನರಾದ ಶೂದ್ರರು ಈ ಮೂರು ವರ್ಣದವರಿಗೆ ಅವಶ್ಯಕವಾದ ಎಲ್ಲ ವಸ್ತುಗಳನ್ನು ಉತ್ಪಾದಿಸುವುದರಲ್ಲೇ ಬದುಕನ್ನು ಸವೆಸಿದರು. ಈ ದುಡಿಯುವ ಜನ ಯಾವುದೇ ತರನಾದ ಐಶಾರಾಮಿ ಜೀವನವನ್ನು ಸಾಗಿಸಲಿಲ್ಲ ದುಡಿಯುವುದೇ ಅವರ ಸ್ವಾತಂತ್ರ್ಯವಾಗಿತ್ತು! ಆ ದುಡಿಯದೆ ಇರುವ ಮೇಲಿನ ಮೂರು ವರ್ಣಗಳಜನ ಐಶಾರಾಮಿ ಜೀವನವಿಧಾನವನ್ನು ತಮ್ಮದಾಗಿಸಿಕೊಂಡಿದ್ದರು.

"ಕೆಲವು ವೇಳೆ ಹೊಸ ಪುರಾಣ ಸೃಷ್ಟಿ ಮಾಡುವ ಮೂಲಕ ಕೆಳವರ್ಗದವರು ತಮ್ಮ ಮೇಲ್ಮೈಯನ್ನು ಪ್ರತಿಪಾದಿಸುತ್ತಾರೆ. ಮಾದಾರ ಚೆನ್ನಯ್ಯನ ಈ ವಚನವನ್ನು ನೋಡಿ "ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ, ದೂರ್ವಾಸ, ಮಚ್ಚಿಗ, ದಧೀಚಿ ಕೀಲಿಗ, ಕಶ್ಯಪ ಕಮ್ಮಾರ, ರೋಮಜ ಕಂಚುಗಾರ, ಕೌಂಡಿಲ್ಯ ನಾವಿದನೆಂಬುದನರಿದು ಮತ್ತೆ ಕುಲವುಂಟೆಂದು ಛಲಕ್ಕೆ ಹೊರಲೇತಕ್ಕೆ? ಇಂತೀ ಸಪ್ತಋಷಿಯರುಗಳೆಲ್ಲರೂ ಸತ್ಯದಿಂದ ಮುಕ್ತರಾದುದನರಿಯದೆ...? ಇತ್ಯಾದಿಯಾಗಿ ಮಾದಾರ ಚೆನ್ನಯ್ಯ ಹೇಳುವಾಗ ಸಪ್ತರ್ಷಿಗಳೆಲ್ಲ ಕೆಳವರ್ಗದವರೇ ಎಂಬ ಹೊಸ ವಿಚಾರ ಬಂದಿದೆ. ವೈದಿಕ ಸಾಹಿತ್ಯದಲ್ಲಿನ ಸಪ್ತರ್ಷಿಗಳು ಕಲ್ಪಭೇದದಿಂದ ಭಿನ್ನರಾಗಿರುತ್ತಾರೆ. ಅವುಗಳಲ್ಲಿ ಎರಡು ಗಣಗಳು ಪ್ರಸಿದ್ಧ. ವೈವಸ್ವತ ಮನ್ವಂತರದ ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಸಿಷ್ಠರನ್ನು ಸಪ್ತರ್ಷಿಗಳೆಂದು ಮಹಾಭಾರತದ ಶಲ್ಯಪರ್ವದಲ್ಲಿ ಹೆಸರಿಸಿದ್ದರೆ; ಮರೀಚಿ, ಅತ್ರಿ, ಅಂಗೀರಸ್ಸು, ಪುಲಸ್ತ್ಯ, ಪುಲಹ, ಕ್ರತ, ವಸಿಷ್ಠರು ಸ್ವಾಯಂಭುವ ಮನ್ವಂತರದ ಸಪ್ತರ್ಷಿಗಳೆಂದು ಅದೇ ಭಾರತದ ಶಾಂತಿ ಪರ್ವದಲ್ಲಿ ಹೇಳಲಾಗಿದೆ. ಆದರೆ, ಚೆನ್ನಯ್ಯ ಹೇಳುತ್ತಿರುವ ಸಪ್ತರ್ಷಿಗಳಲ್ಲಿ ಇವರಾರು ಇಲ್ಲ ಎಂದರೆ ವೈದಿಕ ಸಪ್ತರ್ಷಿ ಕಲ್ಪನೆಗೆ ಪರ್ಯಾಯವಾಗಿ, ಕೇವಲ ಕೆಳಜಾತಿಗಳ ಋಷಿಗಳನ್ನು ಸಪ್ತರ್ಷಿಗಳೆಂದು ಇಲ್ಲಿ ಕರೆಯಲಾಗಿದೆ. ಇದು ಬ್ರಾಹ್ಮಣರು ತಮಗೆ ಸಮನಲ್ಲ ಎನ್ನುವ ದಲಿತರ ರೀತಿ. ಇಡೀ ವಚನ ಚಳುವಳಿಯು ವೈದಿಕಮತ ಸಂಬಂಧಿಯಾದುದನೆಲ್ಲ

ಸಾರಾಸಗಟಾಗಿ ಧಿಕ್ಕರಿಸಿ ಹೊಸ ಪರ್ಯಾಯಗಳನ್ನು ಸೃಷ್ಟಿಸಿತು. ಹಾಗೆಯೇ ತಮ್ಮನ್ನು ಕೀಳೆಂದು ಪರಿಗಣಿಸಿದವರನ್ನೇ ಕೀಳು ಎನ್ನುವುದರ ಮೂಲಕ ಕೆಳವರ್ಗದವರು ತಮ್ಮ ಮೇಲ್ಮೈಯನ್ನು ಮೆರೆಯಲು ಪ್ರಯತ್ನಿಸುತ್ತಾರೆ"೨.

ಈ ಅನುತ್ಪಾದಕ ವರ್ಣದವರಿಗೆ ಜನಿವಾರ ಇದೆ. ಆದರೆ ಉತ್ಪಾದನೆಯಲ್ಲಿ ತೊಡಗಿ ಬಡತನದಲ್ಲೇ ಜೀವ ಸವೆಸುವ ಬಹುಜನರಾದ ಶೂದ್ರರಿಗೆ ಜನಿವಾರ ಇಲ್ಲ. ಇಡೀ ವ್ಯವಸ್ಥೆಯೊಳಗಿನ ವರ್ಣಭೇದ ನೀತಿಯ ಸಂಕೇತವಾಗಿ ಜನಿವಾರವೆಂಬ ದಾರ ಇರುವುದು ವಿಚಿತ್ರ ಆದರೆ ಸತ್ಯ. ಬಸವಣ್ಣನವರು ಜನಿವಾರಕ್ಕೆ 'ನೇಣು' ಎಂದು ಕರೆದಿದ್ದಾರೆ. ಇಡೀಶೂದ್ರ ಜನಾಂಗದ ವ್ಯಕ್ತಿತ್ವಕ್ಕೆ ಈ ಜನಿವಾರ ನೇಣಾಗಿ ಪರಿಣಮಿಸಿದ್ದನ್ನು ಬಸವಣ್ಣನವರು ಗುರುತಿಸಿ ಎಂಟು ಶತಮಾನಗಳು ಗತಿಸಿದರೂ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಲಿಲ್ಲ. ಬದುಕಿನ ಎಲ್ಲ ರಂಗಗಳಲ್ಲಿಯೂ ಜಾತಿಗಳದ್ದೇ ಪ್ರಾಬಲ್ಯ ಎದ್ದು ಕಾಣುತ್ತಿದೆ. ಕೆಳಜಾತಿಗಳವರು ಶೋಷಣೆಯಿಂದ ಹೊರಬರಲು ತಮ್ಮ ಜಾತಿಗಳ ಮೊರೆ ಹೊಕ್ಕರೆ, ಮೇಲ್ಜಾತಿಯವರು ಶೋಷಣೆಯನ್ನು ಗಟ್ಟಿಗೊಳಿಸುವುದಕ್ಕಾಗಿ ಜಾತಿ ವ್ಯವಸ್ಥೆಯನ್ನು ಕಾಪಾಡುತ್ತಿದ್ದಾರೆ.

"ಜಾತಿವಾದ ಮೊದಲಿನಷ್ಟು ಇರದಿದ್ದರೂ ಅಸ್ಪೃಶ್ಯತೆಯ ಹೆಸರಿನಲ್ಲಿ ಅದು ಆಗಾಗ ತಲೆಹಾಕುತ್ತಿರುತ್ತದೆ. ಯುವ ಪೀಳಿಗೆಯಲ್ಲಿ ಕೆಲವರು ಅಂತರ್‌ಜಾತಿ ವಿವಾಹವನ್ನು ಇಚ್ಛಿಸುತ್ತಿದ್ದು, ಜಾತಿಯ ಜಟಿಲತೆಯನ್ನು ತಕ್ಕಮಟ್ಟಿಗೆ ನಿವಾರಿಸುತ್ತಿದೆ. ಭ್ರಷ್ಟಾಚಾರ ವಿರೋಧಿ ಆಂದೋಲನದ ನೇತೃತ್ವವನ್ನು ವಹಿಸಿಕೊಂಡಂತೆ ಅಸ್ಪೃಶ್ಯತಾ ವಿರೋಧಿ ಆಂದೋಲನಕ್ಕೂ ನೇತೃತ್ವ ಬೇಕಾಗುತ್ತದೆ. ಎಲ್ಲಾ ಧಾರ್ಮಿಕರು ಒಟ್ಟಾಗಿ ಈ ಆಂದೋಲನವನ್ನು ಕೈಗೆತ್ತಿಕೊಂಡರೆ ಅದೊಂದು ಉತ್ತಮ ಬೆಳವಣಿಗೆ. ಇಂಥ ಸಂಗ್ರಾಮಕ್ಕೆ ಚಾಲನೆ ಸಿಗುವುದಾದರೆ ಬಹುತೇಕ ಎರಡನೇ ಸ್ವಾತಂತ್ರ್ಯ ಸಂಗ್ರಾಮ ಇದಾಗುವುದು"೩.

ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಮಹಾಮಾನತಾವಾದಿ ಬಸವಣ್ಣನವರಿಗೆ ಅಗ್ರಹಾರದೊಳಗಿನ ಜೀವನವಿಧಾನದ ನೇರ ಅನುಭವವಿತ್ತು. ಸೂಕ್ಷ್ಮಮತಿಗಳಾದ ಬಸವಣ್ಣನವರು ಶೋಷಣೆಯ ವಿವಿಧ ಮೂಲಗಳನ್ನು ಅರಿತುಕೊಂಡು ಬಹಳ ಎಚ್ಚರಿಕೆಯಿಂದ ಈ ಕಾಯಕಜೀವಿಗಳ ಚಳವಳಿಯನ್ನು ಆರಂಭಿಸಿದರು. ಜಾತಿಗಳನ್ನು ಸಂಕರಗೊಳಿಸಿ ಕಾಯಕಜೀವಿಗಳನ್ನು ದುಡಿಯುವ ವರ್ಗವಾಗಿ ಸಂಘಟಿಸಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ. ಶೋಷಿತ ಜಾತಿಗಳನ್ನು ಕೂಡಿಸಿ ವರ್ಗವಾಗಿ ಪರಿವರ್ತನೆಗೊಳಿಸುವ ಬಸವಸೂತ್ರವನ್ನು ಶೂದ್ರರು ಮತ್ತು ಅತಿಶೂದ್ರರು ಅರ್ಥ ಮಾಡಿಕೊಳ್ಳದೆ ಇರುವುದು ಐತಿಹಾಸಿಕ ದುರಂತವಾಗಿದೆ. ಪಂಚಮ ವರ್ಣ ಎಂಬುದು ಇಲ್ಲ. 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ' ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಆತ್ಮಗೌರವಕ್ಕಾಗಿ ವೈದಿಕದ ಕ್ರೌರ್ಯದ ವಿರುದ್ಧ ಹೋರಾಡಿದ ಶೂದ್ರರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಿ ಅಸ್ಪೃಶ್ಯರನ್ನಾಗಿಸಲಾಯಿತು. ಹಾಗೆ ಬಹಿಷ್ಕಾರಕ್ಕೊಳಗಾದವರನ್ನು ಪಂಚಮರೆಂದು ಕರೆಯಲಾಯಿತು.

ಈ ಪಂಚಮರೇ ಅತಿಶೂದ್ರರು. ಅನ್ಯಾಯದ ಸಾಮಾಜಿಕ ಬಹಿಷ್ಕಾರ ಅವರ ಪೀಳಿಗೆಗೆ ಮುಂದುವರಿಯುತ್ತ ಸಾಗಿದ್ದರಿಂದಲೇ ಅಸ್ಪೃಶ್ಯ ಜಾತಿಗಳು ಹುಟ್ಟಿಕೊಂಡವು. ಬಸವಣ್ಣನವರ ಚಳವಳಿ ಎಂದರೆ ಶೂದ್ರರು ಮತ್ತು ಅತಿಶೂದ್ರರು ಒಗ್ಗಟ್ಟಾಗಿ ಮಾಡಿದ ಚಳವಳಿ ಎಂಬ ಸತ್ಯವನ್ನು ಅರಿತು ಸುಲಿಗೆ ಇಲ್ಲದ ಜಾತ್ಯತೀತ ಸಮಾಜ ನಿರ್ಮಾಣ ಮಾಡುವುದು ಮಾನವತಾವಾದಿಗಳ ಕರ್ತವ್ಯವಾಗಿದೆ.

ಯುರೋಪಿನಲ್ಲಿ ಬಂಡವಾಳಶಾಹಿ ವ್ಯವಸ್ಥೆ ಹುಟ್ಟಿದ್ದು ೧೩ನೇ ಶತಮಾನದಲ್ಲಿ. ೧೮ನೇ ಶತಮಾನದಲ್ಲಿ ಆರಂಭವಾದ ಔದ್ಯೋಗಿಕ ಕ್ರಾಂತಿಯ ನಂತರ ಸಂಘಟಿತ ದುಡಿಯುವ ವರ್ಗ ರೂಪುಗೊಂಡಿತು. ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಎಂಗೆಲ್ಸ್ ಅವರು ಕಾಯಕ ಜೀವಿಗಳ ತತ್ತ್ವಜ್ಞಾನವನ್ನು ವೈಜ್ಞಾನಿಕವಾಗಿ ಬರೆದದ್ದು ೧೯ನೇ ಶತಮಾನದಲ್ಲಿ. ದುಡಿಯುವ ಜನರ ಗಮನಾರ್ಹ ಚಳುವಳಿಗಳು ಆರಂಭವಾದದ್ದು ಕೂಡ ೧೯ನೇ ಶತಮಾನದಲ್ಲೇ. ಈ ಹಿನ್ನಲೆಯಲ್ಲಿ ಬಸವಣ್ಣನವರು ಜಗತ್ತಿನಲ್ಲಿ ಕಾಯಕ ಜೀವಿಗಳ ಮೊದಲ ಸಂಘಟಕ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

ಈ ಕಾಯಕಜೀವಿಗಳ ಸಂಘಟನೆ ವಿವಿಧ ಆಯಾಮಗಳಿಂದ ಕೂಡಿದ್ದಾಗಿದೆ. ಜಾತಿಸಂಕರದಿಂದ ಸಮಾನ ಹಕ್ಕುಗಳನ್ನು ಪಡೆಯುವ ಮೂಲಕ ಬರುವ ಗಣಪ್ರಜ್ಞೆ, ವಿವಿಧ ಕಾಯಕಜೀವಿಗಳ ಸಮೂಹ ನಾಯಕತ್ವದ ಮೂಲಕ ಬರುವ ಅಮರಗಣ ಪ್ರಜ್ಞೆ, ಸುಖ ದುಃಖಗಳಲ್ಲಿ ಜನಸಮುದಾಯ ಒಂದಾಗಿರುವಂತೆ ನೋಡಿಕೊಳ್ಳುವಂಥ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುವಂಥ ಏಕದೇವ ಪ್ರಜ್ಞೆ, ಜ್ಞಾನ ವಿಸ್ತಾರದ ಅಕ್ಷರ ಪ್ರಜ್ಞೆ, ಸ್ತ್ರೀಪುರುಷ ಸಮಾನತಾ ಪ್ರಜ್ಞೆ, ಕಾಯಕ ಪ್ರಜ್ಞೆ, ಪ್ರಸಾದ ಪ್ರಜ್ಞೆ ಮತ್ತು ದಾಸೋಹ ಪ್ರಜ್ಞೆಯಿಂದಾಗಿ ಶರಣಸಂಕುಲದ ಕಾಯಕಜೀವಿಗಳಿಗೆ ಹೊಸ ಜೀವನವಿಧಾನದ ದರ್ಶನವಾಯಿತು. 'ಅಸ್ಪೃಶ್ಯ ಮತ್ತು ಬಡ ಹಿಂದುಳಿದ ಜಾತಿಗಳಲ್ಲಿ ಜನ್ಮತಾಳುವುದು ಅಪಮಾನಕರ' ಎಂಬ ವಾತಾವರಣವನ್ನು ಬದಲಿಸುವುದರ ಮೂಲಕ ಬಡವರೊಳಗೆ ಸ್ವಾಭಿಮಾನ ಮೂಡಿಸುವಲ್ಲಿ ಬಸವಣ್ಣನವರು ಸಫಲರಾದರು. 'ಮನೆ ನೋಡಾ ಬಡವರು ಮನ ನೋಡಾ ಘನ... ... ಕೂಡಲಸಂಗನ ಶರಣರು ಸ್ವತಂತ್ರಧೀರರು' ಎಂದು ಹೇಳುತ್ತ, ದುಡಿದು ತಿನ್ನುವ ವರ್ಗವೇ ಆತ್ಮಗೌರವವುಳ್ಳ ವರ್ಗ ಎಂಬುದನ್ನು ಪ್ರತಿಪಾದಿಸಿದರು. ಅಪಮಾನಕ್ಕೊಳಗಾಗಬೇಕಾದವರು ಇತರರನ್ನು ಕೀಳಾಗಿ ನೋಡುವವರು ಮತ್ತು ಶೋಷಕರು ಎಂಬ ಸತ್ಯವನ್ನು ಜನಸಮುದಾಯ ಅರಿಯುವಂತೆ ಮಾಡಿದರು.

ತಮ್ಮ ಕಾಯಕದಿಂದ ಬರುವ ಜೀವನಾನುಭವದ ಮೂಲಕ ಅನುಭಾವದ ಎತ್ತರಕ್ಕೇರಿ ವಚನ ರಚನೆ ಮಾಡಿದ ಶರಣರು ವಿಶಿಷ್ಟವಾದ ಕಾಯಕಜೀವಿಗಳಾಗಿ ಕಂಗೊಳಿಸುತ್ತಾರೆ. ಎಲ್ಲ ರೀತಿಯಿಂದಲೂ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಪಡೆದ ಶರಣರ ನವಮಾನವಧರ್ಮ ಪಾಲನೆಗೆ ಅಂತಃಕರಣವೇ ಮಾರ್ಗದರ್ಶಿಯಾಗಿತ್ತು. ಕಾಯಕದ ಅನುಭವದಿಂದ ಅನುಭಾವದ ಮಟ್ಟಕ್ಕೆ ಏರುವ ಇಂಥ ಶರಣಸಂಕುಲದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಬಸವಣ್ಣನವರು 'ಅನುಭವ ಮಂಟಪ'ವನ್ನು ರಚಿಸಿದ್ದರು. ಅದಕ್ಕೆ ಕೆಳವರ್ಗದ ನಾಯಕತ್ವ ನೀಡಿದ್ದರು. ಆ ಅನುಭವ ಮಂಟಪದಲ್ಲಿ

ವಿವಿಧ ಕಾಯಕ ಮತ್ತು ಸಾಮಾಜಿಕ ಸ್ತರಗಳಿಂದ ಬಂದ ೭೭೦ ಪ್ರತಿನಿಧಿಗಳು (ಅಮರಗಣಂಗಳು) ಇದ್ದರು. ದುಡಿಯುವ ವರ್ಗದ ಅಭಿವ್ಯಕ್ತಿ ಸ್ವಾತಂತ್ರದ ಮೊದಲ ತಾಣವಾದ ಅನುಭವ ಮಂಟಪದಲ್ಲಿ ನಡೆಯುವ ಚರ್ಚೆಗಳಲ್ಲಿ ಮಹಿಳಾ ಪ್ರತಿನಿಧಿಗಳು ಮತ್ತು ಯುವಕರು ಕೂಡ ಭಾಗವಹಿಸುತ್ತಿದ್ದರು. ವೈದಿಕರು ಹಿರಿತನಕ್ಕೆ ಮಹತ್ವ ಕೊಡುತ್ತಾ ಅವರ ಕಂದಾಚಾರವನ್ನೇ ಮುಂದಿನ ಪೀಳಿಗೆ ಪಾಲಿಸಬೇಕು ಎಂಬ ಕಟ್ಟಳೆಗಳನ್ನು ಹಾಕುತ್ತಿದ್ದರು. ಆದರೆ 'ಅಜಕೋಟಿ ವರ್ಷದವರೆಲ್ಲ ಹಿರಿಯರೆ' ಎಂದು ಶರಣರಲ್ಲಿ ಚಿಕ್ಕ ವಯಸ್ಸಿನ ಅವಿರಳ ಜ್ಞಾನಿ ಚನ್ನಬಸವಣ್ಣವರು ಪ್ರಶ್ನಿಸಿದರು. ವಯಸ್ಸಿನ ಬದಲಿಗೆ ಅರಿವು ಪ್ರಧಾನವಾದ ವ್ಯವಸ್ಥೆಗೆ ಅನುಭವ ಮಂಟಪ ನಾಂದಿಯಾಯಿತು.

ಈ ಅನುಭವ ಮಂಟಪ ಆಧುನಿಕ ಸಂಸತ್ತಿನ ರೂಪುರೇಷೆಗಳನ್ನು ಒಳಗೊಂಡಿದೆ. ಅನುಭವ ಮಂಟಪದ ಶೂನ್ಯ ಸಿಂಹಾಸವನ್ನೇರಿದ ಅಲ್ಲಮ ಪ್ರಭುಗಳು ಲೋಕಸಭಾಧ್ಯಕ್ಷರಂತೆ ಕಾಣುತ್ತಾರೆ. ಸಮಾಜದ ವಿವಿಧ ಸ್ತರಗಳಿಂದ ಬಂದ ಅಮರಗಣಂಗಳ ಸಂಸತ್ ಸದಸ್ಯರ ಹಾಗೆ ಇದ್ದಾರೆ. ಅಮರಗಣಂಗಳಿಗೆ ಸಿಕ್ಕ ಪ್ರಾತಿನಿಧ್ಯದ ಹಿನ್ನಲೆಯಲ್ಲಿ, ಅವರು ಮನುವಾದಿ ಸಮಾಜದಲ್ಲಿ ಅನುಭವಿಸಿದ ಜಾತಿಗಳ ನೋವಿನ ಪರಿಗಣನೆ ಇದೆ. ಹೀಗಾಗಿ ಮಂಡಲ್ ಆಯೋಗದ ತರ್ಕವೂ ಇಲ್ಲಿದೆ. ವಯಸ್ಕರ ಶಿಕ್ಷಣ ಪದ್ಧತಿಯನ್ನು ಬಸವಣ್ಣನವರು ಆರಂಭಿಸಿದ್ದರು ಎಂಬುದಕ್ಕೆ ಬಹುಪಾಲು ಅಮರಗಣಂಗಳು ವಯಸ್ಕರಾದ ಮೇಲೆ ಅಕ್ಷರ ಕಲಿತದ್ದೇ ಸಾಕ್ಷಿ. ಅದೇ ರೀತಿಯಲ್ಲಿ ಮಹಿಳೆಯರು ಮತ್ತು ದಲಿತರಿಗೂ ಶಿಕ್ಷಣದ ವ್ಯವಸ್ಥೆ ಮಾಡಲಾಗಿತ್ತು. ಈ ಪ್ರಯತ್ನದ ಫಲವಾಗಿ ಅವರೆಲ್ಲ ವಚನಗಳನ್ನು ಬರೆದರು. ವಚನಕಾರರಲ್ಲಿ ಬಹುಪಾಲು ಮಂದಿ ಕೆಳಜಾತಿಗಳಿಂದಲೇ ಬಂದವರಾಗಿದ್ದಾರೆ. ಇದು ಕೂಡ ಭಾರತದಲ್ಲಿ ನಡೆದ ವಿಶಿಷ್ಟ ಪ್ರಯೋಗವೇ ಆಗಿದೆ. ಕನ್ನಡದಲ್ಲಿ ಹಿಂದುಳಿದ ಜಾತಿಗಳಿಂದ ಬಂದ ವಚನಕಾರರು ವಿಶ್ವಮಾನ್ಯವಾದ ಸಾಹಿತ್ಯ ರಚನೆ ಮಾಡುವ ಸಂದರ್ಭದಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಸಾಹಿತ್ಯ ರಚನೆಯಾಗಿದ್ದಿಲ್ಲ ಎಂಬುದು ಗಮನಾರ್ಹವಾಗಿದೆ.

ಒಂದು ಸಮಾಜವನ್ನು ಸುವ್ಯವಸ್ಥಿತವಾಗಿ ನಿಯಂತ್ರಿಸಲು ಪ್ರಭುತ್ವಕ್ಕೆ ಸಂವಿಧಾನದ ಅವಶ್ಯಕತೆ ಇದೆ. ಜಗತ್ತಿನ ಯಾವ ಮೂಲೆಯಲ್ಲೂ ಸಂವಿಧಾನ ಸೃಷ್ಟಿಯಾಗದ ಅಂದರ್ಭದಲ್ಲಿ ವಚನಕಾರರ ವಚನಗಳು ನವಸಮಾಜದ ಸಂವಿಧಾನದ ಅಂಶಗಳಂತೆ ಕಾಣುತ್ತವೆ. ೧೨೧೫ರಲ್ಲಿ ಇಂಗ್ಲಂಡ್‌ನಲ್ಲಿ ಕಿಂಗ್ ಜಾನ್ ಮತ್ತು ಜಮೀನುದಾರರ ಮಧ್ಯೆ ಒಪ್ಪಂದ ಏರ್ಪಟ್ಟಿತು. ರಾಜನ ಅಧಿಕಾರವನ್ನು ಮೊಟಕುಗೊಳಿಸಿದಂಥ ವಿಶ್ವದ ಈ ಮೊದಲ ಒಪ್ಪಂದಕ್ಕೆ ಮ್ಯಾಗ್ನಾಕಾರ್ಟಾ (ಮಹಾಒಪ್ಪಂದ) ಎಂದು ಕರೆಯುತ್ತಾರೆ. ೧೩ನೇ ಶತಮಾನದ ಈ ಒಪ್ಪಂದ 'ಜಗತ್ತಿನ ಸಂವಿಧಾನಗಳ ತಾಯಿ' ಎಂದು ಸಂವಿಧಾನ ತಜ್ಞರು ಭಾವಿಸಿದ್ದಾರೆ. ಆದರೆ ನಮ್ಮ ವಚನಕಾರರು ೧೨ನೇ ಶತಮಾನದಲ್ಲೇ ಬರೆದ ವಚನಗಳು ಸಂವಿಧಾನದ ಅಂಶಗಳಿಂದ ಮತ್ತು ಮಾನವ ಹಕ್ಕುಗಳಿಂದ ತುಂಬಿವೆ ಎಂಬುದನ್ನು ಅರಿತುಕೊಳ್ಳುವಲ್ಲಿ ಮತ್ತು ಜಗತ್ತಿಗೆ ತಿಳಿಸುವಲ್ಲಿ ನಾವು ಸೋತಿದ್ದೇವೆ.

ಪ್ರಜಾಪ್ರಭುತ್ವ ನಿರ್ಮಾಣದಲ್ಲಿ ಜನಭಾಷೆಯನ್ನು ಆಡಳಿತ ಭಾಷೆಯನ್ನಾಗಿಸುವುದು ಅವಶ್ಯವಾಗಿದೆ. ಯಾವ ಭಾಷೆಯೂ ದೇವ ಭಾಷೆಯಾಗಿರುವುದಿಲ್ಲ. ಭ್ರಮೆಯನ್ನು ಸೃಷ್ಟಿಸುವುದರ ಮೂಲಕ ಆಳುವ

ವರ್ಗ ತನ್ನ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡುತ್ತದೆ. ತನ್ನ ಭಾಷೆಯಲ್ಲೇ ಧರ್ಮಶಾಸ್ತ್ರ ಸೃಷ್ಟಿಸುತ್ತದೆ. ಆಗ ದುಡಿಯುವ ವರ್ಗಕ್ಕೆ ಧರ್ಮ ಮತ್ತು ಆಡಳಿತದ ಲಾಭಗಳು ಕನ್ನಡಿಯ ಗಂಟುಗಳಾಗಿ ಉಳಿಯುತ್ತವೆ. ವೈದಿಕರು ಸಂಸ್ಕೃತ ದೇವಭಾಷೆ ಎಂಬ ಭ್ರಮೆ ಹುಟ್ಟಿಸಿದರು. ಧರ್ಮವನ್ನು ಆ ಭಾಷೆಯಲ್ಲೇ ಹೆಣೆದರು. ಅದೇ ಭಾಷೆಯಲ್ಲಿ ಆಡಳಿತದ ಜಾಲವನ್ನು ಸೃಷ್ಟಿಸಿದರು. ಜನಭಾಷೆಗಳನ್ನು ಕೀಳಾಗಿ ಕಂಡರು. ದುಡಿಯುವ ವರ್ಗಕ್ಕೆ ಸಂಸ್ಕೃತ ಭಾಷೆ ನಿಲುಕದಂತೆ ನೋಡಿಕೊಂಡರು. ಹೀಗಾಗಿ ಶೂದ್ರರು ಆಡಳಿತ ವ್ಯವಸ್ಥೆಯಿಂದ ಮತ್ತು ಧರ್ಮದಿಂದ ವಂಚಿತರಾಗಿ ಸುಲಿಗೆಗೆ ಒಳಗಾಗುವುದೇ ತಮ್ಮ ಕರ್ಮ ಎಂದುಕೊಂಡರು. ಬುದ್ಧನ ಹಾಗೆ ವಚನಕಾರರಿಗೂ ಈ ಭಾಷಾಮೋಸದ ಅರಿವಾಗಿತ್ತು. ಅಂತೆಯೆ ಅವರು ಜನಭಾಷೆಯಾದ ಕನ್ನಡವನ್ನು ಧರ್ಮಭಾಷೆಯಾಗಿ ರೂಪಿಸಿದರು. ಆಗ ಕನ್ನಡ ಜನಪದಕ್ಕೆ ವೈದಿಕ ವ್ಯವಸ್ಥೆಯ ಕ್ರೌರ್ಯದ ಅರಿವಾಗತೊಡಗಿತು. ಇಡೀ ದಕ್ಷಿಣ ಭಾರತದಲ್ಲಿ ಮೂಡಿ ಬಂದ ಮೊದಲ ಧರ್ಮ ಇದಾಗಿದ್ದು ದುಡಿಯುವ ವರ್ಗದ ವಿಶ್ವವ್ಯಾಪಿ ಪ್ರಜ್ಞೆಯನ್ನು ಹೊಂದಿದೆ!

ಅನುಭವ ಮಂಟಪವೆಂಬುದು ಯುವಕರ, ಮಹಿಳೆಯರ ಮತ್ತು ದುಡಿಯುವ ಜನರ ವಾಕ್ ಸ್ವಾತಂತ್ರ್ಯದ ತಾಣವಾಯಿತು. ತಮ್ಮ ಭಾಷೆಯಲ್ಲಿ ಅವರು ಮಾತನಾಡುವ ವಾತಾವರಣ ಸೃಷ್ಟಿಯಾಗದ ಸಹಸ್ರಾರು ವರ್ಷಗಳಿಂದ ತುಂಬಿಕೊಂಡಿದ್ದ ನೋವು ಒಮ್ಮೆಲೆ ಹೊರಚಿಮ್ಮಿತು. ಹೀಗೆ ವಚನಕಾರರು ವ್ಯಷ್ಟಿ ಮತ್ತು ಸಮಷ್ಟಿ ಪ್ರಜ್ಞೆಯೊಂದಿಗೆ ಶೋಷಣೆ ಇಲ್ಲದ ನವಸಮಾಜದ ನಿರ್ಮಾಪಕರಾದರು. ಪವಾಡಗಳೆಲ್ಲ ಸುಳ್ಳು. ಆದರೆ ವಚನಕಾರರ ಮಾರ್ಗದರ್ಶನದಲ್ಲಿ ಒಂದೇ ತಲೆಮಾರಿನ ದುಡಿಯುವ ವರ್ಗ ಇಷ್ಟೆಲ್ಲ ಸಾಧಿಸಿದ್ದು ಪವಾಡಸದೃಶವಾಗಿದೆ. ನವ ಸಮಾಜದ ನಿರ್ಮಾಣದಲ್ಲಿ ಕಾಯಕದ ಪಾತ್ರ ಮಹತ್ವದ್ದಾಗಿದೆ. ದಯವೇ ಧರ್ಮದ ಮೂಲ ಎಂದು ಹೇಳಿದ ಬಸವಣ್ಣನವರಿಗೆ ಆ ದಯೆಯ ಮೂಲ ಕಾಯಕದಲ್ಲಿದೆ ಎಂಬುದು ಗೊತ್ತಿತ್ತು. ಬರಿ ಮಾತಿನ ದಯೆಯಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ದಯೆಯು ವಾಸ್ತವಕ್ಕೆ ಇಳಿಯಬೇಕಾದರೆ ಕಾಯಕದಿಂದ ಮಾತ್ರ ಸಾಧ್ಯ. 'ಆನು ಪರಸೇವೆಯ ಮಾಡುವೆನಯ್ಯ ಜಂಗಮ ದಾಸೋಹಕ್ಕೆಂದು' ಬಸವಣ್ಣನವರು ತಿಳಿಸಿದ್ದಾರೆ. ಬಸವಣ್ಣನವರ ಧಾರ್ಮಿಕ ಪರಿಭಾಷೆಯಲ್ಲಿ 'ದಯೆ' ಎಂಬುದು ಸಮಾಜ ಸೇವೆ (ಜಂಗಮ ದಾಸೋಹ) ಆಗಿದೆ. ಆದ್ದರಿಂದ ಕಾಯಕ ಮಾಡದೆ ಸಮಾಜ ಸೇವೆ ಮಾಡಲು ಸಾಧ್ಯವಿಲ್ಲ. ಸಮಾಜಸೇವೆ ಮಾಡದೆ ಧರ್ಮವಂತರಾಗಲು ಸಾಧ್ಯವಿಲ್ಲ. ಆದ್ದರಿಂದ ದುಡಿಯುವ ವರ್ಗವೇ ನಿಜವಾದ ಧರ್ಮವಂತ ವರ್ಗವಾಗಿದೆ. ಇದನ್ನೇ ಕಾರ್ಲ್ ಮಾರ್ಕ್ಸ್ 'ದುಡಿಯುವ ವರ್ಗದ ಸಂಸ್ಕೃತಿ' ಎಂದು ಕರೆದಿದ್ದಾರೆ. ದುಡಿಯುವವರ ಸಂಸ್ಕೃತಿಗೆ ವಿರುದ್ಧವಾಗಿದ್ದ ವೈದಿಕರ ಕುರಿತು ಕಾರ್ಲ್ ಮಾರ್ಕ್ಸ್ ೧೫೦ ವರ್ಷಗಳ ಹಿಂದೆ ಬರೆದ 'ಫಸ್ಟ್ ವಾರ್ ಆಫ್ ಇಂಡಿಯನ್ ಇಂಡಿಪೆಂಡೆನ್ಸ್' ಗ್ರಂಥದಲ್ಲಿ 'ಕ್ರೈಸ್ತರು ಯುರೋಪಿನಲ್ಲಿ ಸೃಷ್ಟಿಸಿದ್ದಕ್ಕಿಂತಲೂ ಭಯಂಕರವಾದ ನರಕವನ್ನು ಬ್ರಾಹ್ಮಣರು ಭಾರತದಲ್ಲಿ ಸೃಷ್ಟಿಸಿದ್ದಾರೆ' ಎಂದು ತಿಳಿಸಿದ್ದಾರೆ.

'ಒಂದು ಬಗೆಯ ಸ್ವಾಮಿಗಳು, ಸನ್ಯಾಸಿಗಳು ಮತ್ತು ಬ್ರಾಹ್ಮಣರು ದೇಶವನ್ನು ಅಧೋಗತಿಗೆ ತಳ್ಳಿದ್ದಾರೆ. ಕಳ್ಳತನ ಮತ್ತು ಧೂರ್ತತನದ ಬಗ್ಗೆ ಸದಾ ಯೋಚಿಸುವ ಇವರು ಇಂಥ ತಮ್ಮ ಚಿಂತನೆಗಳು ಧರ್ಮೋಪದೇಶಗಳೆಂದು ನಾಟಕವಾಡುತ್ತಾರೆ. ಜನರಿಂದ ಕಾಣಿಕೆಗಳನ್ನು ಪಡೆಯುತ್ತಾರೆ; ಕೂಡಲೇ 'ಮುಟ್ಟಬೇಡ' ಎಂದು ಬೊಬ್ಬೆ ಹಾಕುತ್ತಾರೆ' ಎಂದು ಸ್ವಾಮಿ ವಿವೇಕಾನಂದರು ಟೀಕಿಸಿದ್ದಾರೆ. ಕಾಯಕ, ಪ್ರಸಾದ ಮತ್ತು ದಾಸೋಹ ಪದಗಳು ಧರ್ಮಶಾಸ್ತ್ರದ ಪದಗಳಷ್ಟೇ ಅಲ್ಲದೆ ಬಸವಣ್ಣವರ ಅರ್ಥಶಾಸ್ತ್ರದ ಪದಗಳೂ ಆಗಿವೆ. ಕಾಯಕ ಎಂಬುದು ಯೋಗ್ಯ ಉತ್ಪಾದನೆ, ಪ್ರಸಾದ ಎಂಬುದು ಸದ್ಬಳಕೆ ಹಾಗೂ ದಾಸೋಹ ಎಂಬುದು ಸಮಾಜದಲ್ಲಿ ಯೋಗ್ಯ ವಿತರಣೆ. 'ಕಾಯಕವೇ ಕೈಲಾಸ' ಎಂಬುದು ಕಾಯಕ ಜೀವಿಗಳ ಈ ಧರ್ಮದ ಮಹಾ ವಾಕ್ಯಗಳಲ್ಲಿ ಒಂದಾಗಿದೆ. ಕಾಯಕದಲ್ಲಿ ತೊಡಗುವುದರ ಮೂಲಕ ವ್ಯಕ್ತಿಯೊಬ್ಬ ತನ್ನ ಅರಿವಿನ ವಿಸ್ತಾರದೊಂದಿಗೆ ಉತ್ಪಾದನಾ ವ್ಯವಸ್ಥೆಯ ಭಾಗವಾಗುತ್ತಾನೆ. ತಾನು ಉತ್ಪಾದಿಸಿದ್ದನ್ನು ಪ್ರಸಾದ ಪ್ರಜ್ಞೆಯಿಂದ ಸದ್ಬಳಕೆ ಮಾಡುವುದರ ಮೂಲಕ ಜನಸಮುದಾಯಕ್ಕೆ ವಸ್ತುವಿನ ಮಹತ್ವವನ್ನು ಅರಹುತ್ತಾನೆ. ದಾಸೋಹಂಭಾವದ ಮೂಲಕ ತನ್ನ ಬಳಿಯಲ್ಲಿದ್ದ ಮಿಗುತಾಯವನ್ನು ಸಾಮಾಜಿಕ ವಿತರಣೆಗೆ ಬಳಸುತ್ತಾನೆ.

ಆಧುನಿಕ ಜಗತ್ತಿನ ಅರ್ಥವ್ಯವಸ್ಥೆ ಹದಗೆಡುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಬಸವಣ್ಣನವರ ಅರ್ಥಶಾಸ್ತ್ರ ಹೊಸ ರೀತಿಯಲ್ಲಿ ಸರ್ವಸಮತ್ವ ಭಾವದೊಂದಿಗೆ ಬದುಕುವುದನ್ನು ಕಲಿಸುತ್ತದೆ. ಶರಣರು ವೈಯಕ್ತಿಕ ಸಂಪತ್ತನ್ನು ದಾಸೋಹ ಪ್ರಜ್ಞೆಯೊಂದಿಗೆ ಬಳಸುತ್ತ ಯಾರೂ ಹಸಿವಿನಿಂದ ಬಳಲದಂತೆ ನೋಡಿಕೊಳ್ಳುತ್ತಿದ್ದರು. ಹೀಗೆ ಸಾಮಾಜಿಕ ಪ್ರಜ್ಞೆಯೊಂದಿಗೆ ಮಾನವ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ, ಜಾತ್ಯತೀತ ಮನೋಭಾವ, ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳನ್ನು ಅಲ್ಲಗಳೆಯುವ ಕ್ರಮ, ಕಾಯಕ ಜೀವಿಗಳ ಸಂಘಟನೆ, ಕಾಯಕ ಜೀವಿಗಳಿಗೆ ವಯಸ್ಕರ ಶಿಕ್ಷಣ, ದಲಿತ ಮತ್ತು ಮಹಿಳಾ ಶಿಕ್ಷಣ, ಮಂದಿರ ಮತ್ತು ಮೂರ್ತಿಗಳ ನಿರಾಕರಣೆ, ಶರಣ ಸಂಕುಲದ ಆರ್ಥಿಕ ಸಮಸ್ಯೆಯ ಪರಿಹಾರಕ್ಕಾಗಿ ವ್ಯವಸ್ಥೆಗೊಳಿಸಿದ 'ಶಿವನಿಧಿ' ಅಥವಾ 'ಶಿವನಸೊಮ್ಮು' ಎಂಬ ಸಾಮಾಜಿಕನಿಧಿ ಸ್ಥಾಪನೆ, ಕಾಯಕಜೀವಿಗಳ ಕೇಂದ್ರಿತ ಸಮಾಜ ವ್ಯವಸ್ಥೆ, ವಿವಿಧ ಸಾಮಾಜಿಕ ಮೂಲಗಳಿಂದ ಬಂದವರಿಗೆ ಅನುಭವ ಮಂಟಪದಲ್ಲಿ ಲಿಂಗಭೇದವಿಲ್ಲದ ಪ್ರಾತಿನಿಧ್ಯ, ಸಾಮೂಹಿಕ ಚಿಂತನೆ, ಕಾಯಕ, ಪ್ರಸಾದ ಮತ್ತು ದಾಸೋಹದ ಕುರಿತು ಸಮಾಜಮುಖಿ ಕ್ರಾಂತಿಕಾರಿ ಪರಿಕಲ್ಪನೆ ಮತ್ತು ಸಮೂಹ ನಾಯಕತ್ವ ಮುಂತಾದವು ವಚನಕಾರರ ಕೊಡುಗೆಗಳಾಗಿವೆ.

"ಚನ್ನಬಸವಣ್ಣನವರು ವಯಸ್ಸಿನಲ್ಲಿ ಎಲ್ಲಾ ಶಿವಶರಣರಿಗಿಂತಲೂ ಕಿರಿಯರಾಗಿದ್ದರು. ಜ್ಞಾನದಲ್ಲಿ ಎಲ್ಲರಿಗಿಂತಲೂ ಹಿರಿಯರಾಗಿದ್ದರು. ವಚನ ಚಳುವಳಿಯು ಬಸವಣ್ಣನವರಿಂದ ಸಾಮಾಜಿಕ, ಧಾರ್ಮಿಕ ಆಯಾಮ ಪಡೆದರೆ ಚನ್ನಬಸವಣ್ಣನವರಿಂದ ತಾತ್ವಿಕ ಆಯಾಮವನ್ನು ಪಡೆಯಿತು. ಬಸವಣ್ಣನವರು ಧಾರ್ಮಿಕ ನೆಲೆಯಲ್ಲಿ ಸಾಮಾಜಿಕ-ಸುಧಾರಣೆಯನ್ನು ಬಯಸಿದರೆ ಚನ್ನಬಸವಣ್ಣನವರು 'ಷಟಸ್ಥಲ' ದಂತಹ ತಾತ್ವಿಕ ನೆಲೆಯಲ್ಲಿ ಮಾನವನ ಆಂತರಂಗಿಕ ಬದುಕಿನ ಸುಧಾರಣೆಯನ್ನು

ಬಯಸಿದರು. ಶರಣತತ್ವಗಳನ್ನು ಚನ್ನಬಸವಣ್ಣನವರು ವಿವರವಾಗಿ ತಿಳಿಸಿದಷ್ಟು ಉಳಿದ ಶರಣರಾರೂ ತಿಳಿಸಲಿಲ್ಲ. ಚನ್ನಬಸವಣ್ಣನವರನ್ನು 'ಷಟಸ್ಥಲ ಚಕ್ರವರ್ತಿ' ಎಮಧು ಶರಣರು ಗೌರವದಿಂದ ಕರೆದರು. ಬಸವಣ್ಣನವರು ಭಕ್ತಿಗೆ, ಅಲ್ಲಮಪ್ರಭು ಅನುಭಾವಕ್ಕೆ, ಸಿದ್ಧರಾಮ ಶಿವಯೋಗಕ್ಕೆ, ಅಕ್ಕಮಹಾದೇವಿ ವೈರಾಗ್ಯಕ್ಕೆ, ಹೆಸರಾದಂತೆ ಚನ್ನಬಸವಣ್ಣನವರು ಜ್ಞಾನ-ಕ್ರಿಯಾಶಕ್ತಿಗೆ ಹೆಸರಾಗಿದ್ದರು. ವಚನ ಚಳುವಳಿಯಲ್ಲಿ ಚನ್ನಬಸವಣ್ಣನವರ ಸ್ಥಾನ ವಿಶಿಷ್ಟವಾಗಿತ್ತು"೪.

'ಚನ್ನಬಸವಣ್ಣನೆಂಬ ಪ್ರಸಾದಿಯ ಪಡೆದು ಅನುಭವ ಮಂಟಪವನುವುಮಾಡಿ ಅನುಭವಮೂರ್ತಿಯಾದ ನಮ್ಮ ಬಸವಯ್ಯನು.' ಎಂದು ಬಸವಣ್ಣವರ ಮಡದಿನೀಲಮ್ಮನವರು ವಚನವೊಂದರಲ್ಲಿ ಉಲ್ಲೇಖಿಸಿದ್ದಾರೆ. ಬಸವಣ್ಣನವರು ಆ ಅನುಭವ ಮಂಟಪದ ಶೂನ್ಯ ಸಿಂಹಾಸನದ ಮೇಲೆ ಹಿಂದುಳಿದ ನಟುವರ ಜನಾಂಗದ ಜ್ಞಾನಿ ಅಲ್ಲಮಪ್ರಭುಗಳನ್ನು ಕೂಡಿಸಿದರು. ಈ ಪ್ರಸಂಗದಿಂದಾಗಿ ಮನುಧರ್ಮ ಸಿಂಹಾಸನದ ಪ್ರತಿಪಾದಕರು ದಿಗಿಲುಗೊಂಡರು. ಈ ಸನಾತನಿಗಳ ಪ್ರತಿನಿಧಿಗಳು ಬಿಜ್ಜಳ ರಾಜನ ಸಲಹೆಗಾರರೂ ಆಗಿದ್ದರು. 'ವರ್ಣಾಶ್ರಮ ವ್ಯವಸ್ಥೆಯನ್ನು ಕಾಪಾಡುವುದು ರಾಜಧರ್ಮ' ಎಂದು ಪ್ರತಿಪಾದಿಸುತ್ತ ರಾಜನ ತಲೆ ಕೆಡಿಸುವಲ್ಲಿ ಯಶಸ್ಸನ್ನು ಸಾಧಿಸಿದರು. ಶೂನ್ಯಸಿಂಹಾಸನವನ್ನು ಶೂದ್ರ ಏರಿದ ಕಾರಣದಿಂದಾಗಿ ಕಾಯಕ ಜೀವಿ ಶೂದ್ರರು ಮತ್ತು ಅತಿಶೂದ್ರರು ಒಂದಾಗಿ ಒಂದಿಲ್ಲೊಂದು ದಿನ ಸನಾತನ ಧರ್ಮ ಸಿಂಹಾಸನಕ್ಕೂ ಕಲ್ಯಾಣ ರಾಜ್ಯದ ರಾಜಸಿಂಹಾಸನಕ್ಕೂ ಗಂಡಾಂತರದ ವಾತಾವರನ ಸೃಷ್ಟಿಸುವರು ಎಂಬುದನ್ನು ಬಿಜ್ಜಳನಿಗೆ ಮನದಟ್ಟು ಮಾಡಿದರು.

ವಚನಕಾರರ ಕ್ರಾಂತಿಕಾರಿ ಚಟುವಟಿಕೆಗಳು ಮುಂದುವರಿಯುತ್ತಲೇ ಇದ್ದವು. ಅವರು ಅಸ್ಪೃಶ್ಯರನ್ನು 'ಹಿರಿಯಮಾಹೇಶ್ವರರು' ಎಂದು ಕರೆಯುತ್ತಿದ್ದರು. ಒಂದುದಿನ ಬಸವಣ್ಣನವರು ಹೊಲಗೇರಿಯಲ್ಲಿನ ಸಂಬೋಳಿ ನಾಗಿದೇವನ ಮನೆಗೆ ಹೋಗಿ ಪ್ರಸಾದ ಸ್ವೀಕರಿಸಿದರು. ಮೈಲಿಗೆಗೊಂಡ ಬಸವಣ್ಣವರು ಅಲ್ಲಿಂದ ನೇರವಾಗಿ ಅರಮನೆಗೆ ಬರುತ್ತಿದ್ದಾರೆ ಎಂದು ಮಂತ್ರಿಮಂಡಳದ ನಾರಣಕ್ರಮಿತ, ಕೃಷ್ಣಪೆದ್ದಿ, ವಿಷ್ಣುಭಟ್ಟ ಮತ್ತು ಕೇಶವಭಟ್ಟ ಮುಂತಾದವರು ಬಿಜ್ಜಳನ ಕಿವಿಯೂದಿದರು. ಅರಮನೆಯ ಅಂಗಳದಲ್ಲಿ ಒಡ್ಡೋಲಗದ ವ್ಯವಸ್ಥೆ ಮಾಡಿ 'ಮೈಲಿಗೆಗೊಂಡ' ಬಸವಣ್ಣನವರ ವಿಚಾರಣೆ ನಡೆಸಿದರು! ಹೀಗೆ ತುಳಿತಕ್ಕೊಳಗಾದವರ ಪರವಾಗಿ ನಿಂತು ಬಹಿರಂಗ ವಿಚಾರಣೆಗೊಳಗಾದ ಇನ್ನೊಬ್ಬ ಪ್ರಧಾನಿ ಎಲ್ಲಿಯೂ ಕಾಣ ಸಿಗುವುದಿಲ್ಲ. (೧೩ನೇ ಶತಮಾನದಲ್ಲೇ ಹರಿಹರ ಹೀಗೆ ಬರೆದಿದ್ದನ್ನು 'ಭಾರತದಲ್ಲಿ ಜಾತಿ ವ್ಯವಸ್ಥೇ ಇದಯೆ?' ಎಂದು ಪ್ರಶ್ನಿಸುವರು ಹೇಗೆ ಅರ್ಥೈಸುತ್ತಾರೆ? ಆಗ ಇನ್ನು ವಸಾಹತುಶಾಹಿಯ ಚಿಂತನಾ ಕ್ರಮವಿದು ಎನ್ನುತ್ತಾರೆಯೆ?)

ವೈದಿಕ ಸಿದ್ಧಾಂತಕ್ಕೆ ವಿರುದ್ಧವಾಗಿರುವ ಕಾಯಕಸಿದ್ಧಾಂತದ ಆಧಾರದ ಮೇಲೆ ರಚಿತವಾದ ಶರಣಸಂಕುಲದಲ್ಲಿ ಜಾತಿಗಳು ನಾಶವಾಗಿ ಕೇವಲ ವಚನಕಾರರ ನವಮಾನವಧರ್ಮ ಮಾತ್ರ ಬದುಕುವ ಮಾರ್ಗವಾಗಿತ್ತು. ಮನುಧರ್ಮದಲ್ಲಿನ ಶ್ರೇಣೀಕೃತ ಸಮಾಜದಲ್ಲಿ ಸಮಗಾರ ಜಾತಿಯವರಾಗಿದ್ದ

ಹರಳಯ್ಯನವರು ಇಷ್ಟಲಿಂಗದೀಕ್ಷೆಯ ನಂತರ ಲಿಂಗವಂತರಾದರು. ಆಗ 'ಸಮಗಾರ' ಎಂಬುದು ಜಾತಿಯ ಸಂಕೇತವಾಗಿ ಉಳಿಯದೆ ಕೇವಲ ಕಾಯಕದ ಸಂಕೇತವಾಗಿ ಉಳಿಯಿತು. ಬಿಜ್ಜಳನ ಆಸ್ಥಾನದಲ್ಲಿದ್ದ ಮಧುವರಸರು ಬ್ರಾಹ್ಮಣರಾಗಿದ್ದರು. ಆದರೆ ಲಿಂಗದೀಕ್ಷೆಯ ನಂತರ ಲಿಂಗವಂತರಾದರು. ಈ ಇಬ್ಬರೂ ಬಸವಣ್ಣನವರ ಶರಣಸಂಕುಲದ ಸದಸ್ಯರಾದರು. ಹೀಗೆ ಸಮಗಾರ ಮೂಲದ ಶರಣ ಹರಳಯ್ಯನವರು ಮತ್ತು ಬ್ರಾಹ್ಮಣ ಮೂಲದ ಮಧುವರಸರು ತಮ್ಮ ಜಾತಿಗಳ ಕುರುಹನ್ನು ಕಳೆದುಕೊಂಡು ಬಸವಧರ್ಮದಲ್ಲಿ ಒಂದಾಗಿದ್ದರು. ಅಂತೆಯ ಅವರ ಮಕ್ಕಳ ಮದುವೆಯ ನಿಶ್ಚಯ ಮಾಡಲಾಯಿತು. ಮಾನವ ಹಕ್ಕುಗಳ ಪ್ರತಿಪಾದನೆಗೋಸ್ಕರ ಮತ್ತು ಜಾತಿ ವಿನಾಶಕ್ಕಾಗಿ ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯನ್ನು ಏರ್ಪಡಿಸಿದಾಗ ಪಟ್ಟಭದ್ರ ಹಿತಾಸಕ್ತಿಗಳು ಗದ್ದಲ ಮತ್ತು ಗೊಂದಲ ಸೃಷ್ಟಿಸುವುದರ ಮೂಲಕ ಶರಣರ ಕಗ್ಗೊಲೆ ಮಾಡಿ ವಚನಕಟ್ಟುಗಳನ್ನು ಸುಟ್ಟವು. ಸಹಸ್ರಾರು ಶರಣರು ನಿರಾಶ್ರಿತರಾಗಿ ಕಲ್ಯಾಣ ಬಿಟ್ಟು ಹೋಗಬೇಕಾಯಿತು.

೧೯೩೯ರಿಂದ ೧೯೪೫ರ ವರೆಗೆ ನಡೆದ ಎರಡನೇ ಮಹಾಯುದ್ಧದ ನಂತರ ಜಗತ್ತಿನ ಜನಸಮುದಾಯಗಳಲ್ಲಿ ಮಾನವಹಕ್ಕುಗಳ ಕುರಿತು ವಿಶ್ವಾಸ ಮೂಡಿಸುವ ಮತ್ತು ದೇಶಗಳಿಗೆ ಭದ್ರತೆ ಒದಗಿಸುವ ದೃಷ್ಟಿಯಿಂದ ವಿಶ್ವಸಂಸ್ಥೆಯ ಉದಯವಾಯಿತು. ಆದರೆ ೧೨ನೇ ಶತಮಾನದಲ್ಲಿ ಬಸವಾದಿ ಪ್ರಮಥರು ತಮ್ಮ ಪರಿಸರದಲ್ಲಿ ಇಂಥ ವಿಶ್ವಸಂಸ್ಥೆಯ ಆಶಯಗಳನ್ನೊಳಗೊಂಡ ಕಾರ್ಯ ನಿರ್ವಹಿಸಿದರು. ಶರಣರು ಮಾನವ ಹಕ್ಕುಗಳ ಕುರಿತು ಚಳವಳಿ ಹೂಡಿದ್ದಕ್ಕೆ ಅವರ ಹತ್ಯಾಕಾಂಡವಾಯಿತು! ಎರಡನೇ ಮಹಾಯುದ್ಧದಲ್ಲಿ ೫ ಕೋಟಿ ಜನ ಸತ್ತ ಮೇಲೆ ವಿಶ್ವಸಂಸ್ಥೆ ಮಾನವ ಹಕ್ಕುಗಳ ಘೋಷಣೆ ಮಾಡಿತು! ಬದುಕಿನ ಈ ವೈರುಧ್ಯವನ್ನು ಹೋಗಲಾಡಿಸುವುದೇ ವಚನಕಾರರ ಉದ್ದೇಶವಾಗಿದೆ. ಕುಲಗೋತ್ರಗಳಿಲ್ಲದ, ಜಾತಿ ಉಪಜಾತಿಗಳಿಲ್ಲದ, ಅಸ್ಪೃಶ್ಯತೆ ಇಲ್ಲದ, ವರ್ಗ, ವರ್ಣ ಮತ್ತು ಲಿಂಗಭೇದಗಳಿಲ್ಲದ, ಕಾಸಗಿ ಆಸ್ತಿ ಇಲ್ಲದ ಆದರೆ ಸಾಮೂಹಿಕ ಸಂಪತ್ತಾದ ಶಿವನಿಧಿಯನ್ನು ಹೊಂದಿದ್ದ ಶರಣಸಂಕುಲವು ಪರಿಪೂರ್ಣ ಸಮಾನತೆಯ ಸಮಾಜವಾಗಿದೆ. 'ಕಾಸಗಿ ಆಸ್ತಿಯು ಮನುಷ್ಯತ್ವದ ವಿರುದ್ಧವಾಗಿರುತ್ತದೆ. ಮನುಷ್ಯತ್ವವು ಕಾಸಗಿ ಆಸ್ತಿಯ ವಿರುದ್ಧವಾಗಿರುತ್ತದೆ' ಎಂಬುದನ್ನು ತೋರಿಸಿ ಕೊಟ್ಟವರು ವಚನಕಾರರು. ಪ್ರಸಾದ ಪ್ರಜ್ಞೆಯಿಂದ ಬರುವ ದಾಸೋಹಂ ಭಾವದ ಮೂಲಕ ಕಾಸಗಿ ಆಸ್ತಿಯನ್ನು ಸಾಮಾಜಿಕ ಆಸ್ತಿಯಾಗಿಸಿ ಮಾನವೀಯತೆ ಪ್ರಧಾನವಾದ ಶರಣಸಂಕುಲವೆಂಬ ಸರ್ವಸಮತ್ವದ ಸಮಾಜವನ್ನು ನಿರ್ಮಿಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

ಹರಳಯ್ಯ ಮಧುವರಸರು ಲಿಂಗವಂತರಾಗುವ ಮೂಲಕ, ಮನುಧರ್ಮದಿಂದಾಗಿ ಅಂಟಿಕೊಂಡಿದ್ದ ಕೃತ್ರಿಮ ಜಾತಿ ಮತ್ತು ಮೇಲು ಕೀಳು ಗಳೆಂಬ ಅಂತಸ್ತುಗಳನ್ನು ಕಳೆದುಕೊಂಡು ನಿಜಮಾನವರಾದರು. ಹರಳಯ್ಯನವರ ಮಗ ಶೀಲವಂತ ಮತ್ತು ಮಧುವರಸರ ಮಗಳು ಲಾವಣ್ಯ ಕೂಡ ಲಿಂಗವಂತರಾದ ಕಾರಣ ಅವರ ಮದುವೆ ಸಹಜವಾಗಿಯೇ ಆಗಬೇಕಿತ್ತು. ಆದರೆ ಬಿಜ್ಜಳನ ಆಸ್ಥಾನದಲ್ಲಿದ್ದ ಪಟ್ಟಭದ್ರ ಹಿತಾಸಕ್ತಿಗಳು ಆ ಮದುವೆ 'ಧರ್ಮಬಾಹಿರ' ಎಂದು ಹುಯಿಲೆಬ್ಬಿಸಿದವು.

ಮನುಧರ್ಮದ ಪ್ರಕಾರ ಆ ಮದುವೆ ಧರ್ಮಬಾಹಿರ ಆಗಿತ್ತು. ಆದರೆ ಲಿಂಗವಂತ ಧರ್ಮದ ಪ್ರಕಾರ ಧರ್ಮಸಮ್ಮತವಾಗಿತ್ತು. ಮನುವಾದಿಗಳಿಗೆ ಅದು ಬ್ರಾಹ್ಮಣ ಕನ್ಯಾ ಮತ್ತು ಸಮಗಾರ ವರನ ಮಧ್ಯೆ ನಡೆಯುವ ಮದುವೆಯಾಗಿತ್ತು ವಚನಕಾರರ ಪ್ರಕಾರ ಅದು ಲಿಂಗವಂತರ ಮದುವೆಯಾಗಿತ್ತು. ಲಿಂಗವಂಥ ಧರ್ಮವು ಸನಾತನವಾದಿಗಳ ಚೌಕಟ್ಟಿನ ಧರ್ಮವಲ್ಲ. ಇದು ಚೌಕಟ್ಟಿಲ್ಲದ ಬಯಲಧರ್ಮ. 'ಶೂನ್ಯ' ಎಂಬುದು ಬಯಲೇ ಆಗಿದೆ. ಇದು ಸಕಲ ಚರಾಚರಗಳ ಸಮೇತ ಎಲ್ಲವನ್ನೂ ಒಳಗೊಂಡಿದೆ. 'ಎಲ್ಲರೂ ನಮ್ಮವರು. ಯಾರೂ ಹೊರಗಿನವರಲ್ಲ' ಎಂಬುದು ಲಿಂಗವಂತ ಧರ್ಮವಾದ ಬಸವಧರ್ಮದ ಘೋಷಣೆಯಾದರೆ, ವರ್ಣ, ಜಾತಿ, ಉಪಜಾತಿ, ವರ್ಗ ಮತ್ತು ಲಿಂಗಭೇದ ಸೃಷ್ಟಿಸಿ ನಿರಂತರ ಶೋಷಣೆಯ ಸಮಾಜವನ್ನು ಮುಂದುವರಿಸುವುದೇ ಮನುಧರ್ಮದ ಉದ್ದೇಶವಾಗಿದೆ.

ಮಾನವ ಘನತೆ ಮಾನವ ಹಕ್ಕುಗಳಿಗಾಗಿ ಮನುಧರ್ಮದ ಕ್ರೌರ್ಯದ ವಿರುದ್ಧ ಹೋರಾಡಿದ ಶರಣರು, ತತ್ತ್ವದ ಅನುಷ್ಠಾನಕ್ಕಾಗಿ ತಮ್ಮ ಭೌತಿಕ ಸಂಪಪತ್ತನ್ನು ಕಳೆದುಕೊಳ್ಳಲು ಸಿದ್ಧರಾದರು. ಹರಳಯ್ಯ ಮಧುವರಸರ ಮಕ್ಕಳ ಮದುವೆಗೆ ಮನುವಾದಿಗಳ ಮತ್ತು ದೊರೆ ಬಿಜ್ಜಳನ ವಿರೋಧವಿದ್ದಾಗ್ಯೂ ವಚನಕಾರರು ಆ ಮದುವೆಯನ್ನು ಸಾವಿಗಂಜದೆ ನೆರವೇರಿಸಿದರು. ಆಗ ಮನುವಾದಿಗಳಿಂದಾಗಿ ಕಲ್ಯಾಣದಲ್ಲಿ ಅಲ್ಲೋಲ ಕಲ್ಲೋಲವಾಯಿತು. ತಮ್ಮ ನಿಜ ಸಂಪತ್ತಾಗಿದ್ದ ವಚನಕಟ್ಟುಗಳ ರಕ್ಷಣೆಗಾಗಿ ಅವರು ಯಾವುದನ್ನೂ ಲೆಕ್ಕಿಸದೆ ಕಲ್ಯಾಣವನ್ನು ತೊರೆದರು. ಒಂದು ಜಾತ್ಯತೀತ ಮದುವೆಗಾಗಿ ವಚನಕಾರರು ಎಲ್ಲವನ್ನೂ ಕಳೆದುಕೊಂಡು ಮಾನವ ಘನತೆಯ ರಕ್ಷಣೆ ಮಾಡಿದರು. 'ನಡೆನುಡಿ ಸಿದ್ಧಾಂತ'ದಿಂದ ಕೂಡಿದ ತತ್ತ್ವಕ್ಕಾಗಿ ಅನೇಕ ಸಾತ್ವಿಕರು ಹುತಾತ್ಮರಾಗಲು ಕಾರಣವಾದ 'ಕಲ್ಯಾಣಕ್ರಾಂತಿ' ಎಂಬ ಇಂಥ ಘನಘೋರ ಘಟನೆ ಮಾನವ ಚರಿತ್ರೆಯಲ್ಲಿ ಇನ್ನೊಂದಿಲ್ಲ! ನಿಜವಾದ ಅರ್ಥದಲ್ಲಿ ಆ ಘಟನೆ ಕಲ್ಯಾಣಕ್ರಾಂತಿ ಅಲ್ಲ. ಕಲ್ಯಾಣದಲ್ಲಿ ಬಸವಾದಿ ಶರಣರಿಂದ ನಡೆಯಬೇಕಿದ್ದ ಕ್ರಾಂತಿಯನ್ನು ತಡೆದಂಥ ಮನುವಾದಿಗಳ ಕ್ಷಿಪ್ರಕ್ರಾಂತಿ. ಶರಣರ ಜನಾಂಗಹತ್ಯೆ ನಡೆದ ಈ ದುರ್ಘಟನೆ ಮಾನವೀಯತೆಯ ಮೇಲೆ ನಡೆದ ಅತ್ಯಾಚಾರವಾಗಿದೆ. ಬಿಜ್ಜಳನ ಕಲ್ಯಾಣದೊಳಗೆ ಬಸವಣ್ಣನವರ ಕಲ್ಯಾಣ ಸೃಷ್ಟಿಯಾಗಿತ್ತು. ಬಸವಣ್ಣವರ ಕಲ್ಯಾಣದಲ್ಲಿ ಪ್ರತಿಕ್ಷಣ ಕ್ರಾಂತಿ ನಡೆಯುತ್ತಿದ್ದರೆ. ಬಿಜ್ಜಳನ ಕಲ್ಯಾಣದ ವೈದಿಕರು ಪ್ರತಿಕ್ಷಣ ಕ್ಷಿಪ್ರಕ್ರಾಂತಿಯ ಲೆಕ್ಕ ಹಾಕುತ್ತಿದ್ದರು.

ವಿಲೋಮ ಪದ್ಧತಿಯ ಮದುವೆಯ ನಿರ್ಧಾರ ಮತ್ತು ಜಾತಿವಿನಾಶಿ ಚಳವಳಿಗಳು ಸನಾತನ ಧರ್ಮರಕ್ಷಣೆಗೆ ವಿರುದ್ಧವಾಗಿದ್ದವು. ಭೇದಭಾವದಿಂದ ಕೂಡಿದ ಸನಾತನ ಧರ್ಮ ರಕ್ಷಣೆ ರಾಜನ ಕರ್ತವ್ಯವಾಗಿತ್ತು. ಈ ವಿಚಾರವನ್ನು ಸನಾತನಿಗಳು ಬಿಜ್ಜಳ ರಾಜನ ಮುಂದಿಟ್ಟು ಬಸವಣ್ಣವರ ವಿರುದ್ಧ ಎಚ್ಚರಿಸುತ್ತಲೇ ಇದ್ದರು. ಸನಾತನಿಗಳ ಕುತಂತ್ರವನ್ನು ನಿಷ್ಕ್ರಿಯಗೊಳಿಸುವುದು; ಸನಾತನ ಧರ್ಮಕ್ಕೆ ವಿರುದ್ಧವಾದ ಮದುವೆಯಿಂದಾಗುವ ಕ್ಷೋಭೆಯನ್ನು ತಹಬಂದಿಗೆ ತರುವುದು ಮತ್ತು ಮನುಧರ್ಮಕ್ಕೆ ಸಮ್ಮತವಲ್ಲದ ಇತರ ದುಡಿಯುವ ಜನಪರ ಚಟುವಟಿಕೆಗಳಿಂದ ಉಂಟಾದ

ರಾಜತಾಂತ್ರಿಕ ಬಿಕ್ಕಟ್ಟನ್ನು ಶಮನಗೊಳಿಸುವುದಕ್ಕಾಗಿ ಬಸವಣ್ಣವರು ಪ್ರಧಾನಿ ಪದವಿಯನ್ನು ಬಿಟ್ಟುಕೊಟ್ಟು ಕೂಡಲಸಂಗಮಕ್ಕೆ ದೇಶಾಂತರ ಬರಬೇಕಾಯಿತು. ಅಲ್ಲಿಂದಲೇ ಅವರು ಕಲ್ಯಾಣದ ವಿದ್ಯಮಾನಗಳನ್ನು ಅರಿತುಕೊಂಡು ಶರಣರಿಗೆ ಸಲಹೆ ನೀಡುತ್ತಿದ್ದರು.

ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯಿಂದಾಗಿ ಸನಾತನಿಗಳ ಹಿಡತದಲ್ಲಿರುವ ಬಿಜ್ಜಳನ ಕಲ್ಯಾಣದಲ್ಲಿ ಸಮಾಜಿಕ ಪ್ರಕ್ಷುಬ್ಧ ವಾತಾವರಣ ಉಂಟಾಗುವುದೆಂಬುದು ವಚನಕಾರರಿಗೆ ಚೆನ್ನಾಗಿ ಗೊತ್ತಿತ್ತು. ಅವರು ಜಾತ್ಯತೀತ ತತ್ತ್ವದ ಪರಿಪಾಲನೆಗಾಗಿ ಎಲ್ಲ ತ್ಯಾಗಕ್ಕೂ ಸಿದ್ಧರಾಗಿ ಹರಳಯ್ಯ – ಮಧುವರಸರ ಮಕ್ಕಳ ಮದುವೆ ಮಾಡಿದರು. ಸನಾತನವಾದಿಗಳ ಮನಸ್ಸು ಹೊತ್ತಿ ಉರಿಯತೊಡಗಿತು. ಅವರೆಲ್ಲ ಸೇರಿ ಕಲ್ಯಾಣದಲ್ಲಿ ಹಾಹಾಕಾರ ಎಬ್ಬಿಸಿದರು. ಹರಳಯ್ಯ ಮಧುವರಸರಿಗೆ ಎಳೆಹೂಟೆ ಶಿಕ್ಷೆಯಾಯಿತು. ವಚನಕಾರರ ಮೇಲೆ ಹಲ್ಲೆ ಕಗ್ಗೊಲೆಗಳು ಆರಂಭವಾದವು. ವಚನಕಾರರ ವಚನಕಟ್ಟುಗಳನ್ನು ಸನಾತನಿಗಳು ಮತ್ತು ಬಿಜ್ಜಳನ ಸೈನಿಕರು ಸುಡತೊಡಗಿದರು. ಆಗ ಬಸವಣ್ಣನವರು ಕಲ್ಯಾಣದಲ್ಲಿನ ಶರಣರಿಗೆ ಕಳುಹಸಿದ ಸೂಚನೆಯ ಪ್ರಕಾರ ಅವರೆಲ್ಲ ಹೃದಯವಿದ್ರಾವಕ ಸ್ಥಿತಿಯಲ್ಲಿ ಕಲ್ಯಾಣ ತೊರೆದು ತಮಗೆ ಸಾಧ್ಯವಾದ ಕಡೆಗಳಲ್ಲಿ ಹೊರಟರು. ಮಡಿವಾಳ ಮಾಚಿದೇವ. ಡೋಹರ ಕಕ್ಕಯ್ಯ, ಕೂಗಿನಮಾರಿತಂದೆ ಮುಂತಾದ ಶರಣರು ಮಾರ್ಗ ಮಧ್ಯದಲ್ಲೇ ಲಿಂಗೈಕ್ಯರಾದರು. ಅಕ್ಕನಾಗಮ್ಮ, ನುಲಿಯ ಚಂದಯ್ಯ, ಕಿನ್ನರಿ ಬ್ರಹ್ಮಯ್ಯ ಮುಂತಾದ ಬಹುಸಂಖ್ಯೆಯ ವಚನಕಾರರು ಚನ್ನಬಸವಣ್ಣನವರ ನೇತೃತ್ವದಲ್ಲಿ ಉಳವಿ ತಲುಪಿದರು. ವಿಪರೀತಿ ವಾತಾವರಣದ ಆ ದುರ್ಗಮ ಕಾಡಿನಲ್ಲಿ ಜಿಗಣೆ, ಹಿಂಸಪ್ರಾಣಿಗಳು, ವಿಷಜಂತುಗಳು ಮತ್ತು ಧಾರಾಕಾರ ಮಳೆಯ ಮಧ್ಯೆ ಕಷ್ಟಕರವಾದ ಜೀವನ ಸಾಗಿಸುತ್ತ ವಚನ ಸಂಪತ್ತನ್ನು ರಕ್ಷಿಸಿದರು. ಜೀವ ಮತ್ತು ಸಂಪತ್ತಿನ ಬಗ್ಗೆ ಯೋಚಿಸುವ ಶರಣರು ತಮ್ಮ ಸಿದ್ಧಾಂತದ ಗೆಲವಿಗಾಗಿ ಶ್ರಮಿಸಿದರು. ೧೨ನೇ ಶತಮಾನದಲ್ಲೇ ಸನಾತನಿಗಳ ಸಂಪ್ರದಾಯಕ್ಕೆ ವಿರುದ್ಧವಾಗಿ ಜಾತಿವಿನಾಶದ ಮದುವೆ ಮಾಡಿಸುವುದಕ್ಕಾಗಿ ಶರಣರು ಒಗ್ಗಟ್ಟಾಗಿ ದುರಂತಗಳನ್ನು ಎದುರಿಸಿದ್ದು ಇತಿಹಾಸದಲ್ಲಿನ ಅನನ್ಯ ಘಟನೆಯಾಗಿದೆ.

ನಾಗರೀಕತೆಗೆ ಅಂಟಿದ ಕಳಂಕಗಳಾದ ಜಾತಿವಾದ, ವರ್ಣವ್ಯವಸ್ಥೆ, ವರ್ಗಭೇದ ಮತ್ತು ಲಿಂಗಭೇದಗಳ ವಿರುದ್ಧ ವಚನ ಸಾಹಿತ್ಯ ಹೊಂದಿದ ಅಂಶಗಳೇ ಭಾರತ ಸಂವಿಧಾನದ ಅಂಶಗಳಾಗಿವೆ. ಅದೇ ರೀತಿ ಮಾನವ ಹಕ್ಕುಗಳ ಎಲ್ಲ ಅಂಶಗಳೂ ಬಸವಣ್ಣನವರ ವಚನಗಳಲ್ಲಿವೆ. ೧೯೪೮ಲನೇ ಡಿಸೆಂಬರ್ ೧೦ರಂದು ನಡೆದ ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ ೩೦ ಅಂಶಗಳುಳ್ಳ ಮಾನವ ಹಕ್ಕುಗಳನ್ನು ಜಾಗತಿಕ ಘೋಷಣೆಯೊಂದಿಗೆ ಸ್ವೀಕರಿಸಲಾಯಿತು. ಲಿಂಗಭೇದ, ವರ್ಣಭೇದ ಮುಂತಾದ ಅನಿಷ್ಟಗಳನ್ನು ತೊಡೆದು ಹಾಕಲು ಯತ್ನಿಸಿತು. ಅನೈತಿಕ ಸಂಬಂಧಗಳಿಂದ ಜನಿಸಿದ ಹಕ್ಕುಗಳಲ್ಲಿ ವ್ಯತ್ಯಾಸವಿಲ್ಲವೆಂದು ವಿಶ್ವಸಂಸ್ಥೆ ಸಾರಿತು. 'ದಾಸೀಪುತ್ರನಾಗಲೀ ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ' ಎಂದು ಬಸವಣ್ಣನವರು ಹೇಳುವ ಮೂಲಕ ಅನೈತಿಕ ಸಂಬಂಧದಿಂದ ಜನಿಸಿದ ಮಕ್ಕಳು ಕೂಡ

ಸಮಾನ ಹಕ್ಕುಳ್ಳವರು ಎಂಬ ವಿಚಾರವನ್ನು ಎತ್ತಿ ಹಿಡಿದಿದ್ದಾರೆ. ಮಾನವರ ಮಧ್ಯದ ಜಾತಿ ಮತ್ತು ಅಂತಸ್ತುಗಳ ವಿನಾಶವೇ ಶರಣರ ಗುರಿಯಾಗಿತ್ತು.

'ಬ್ರಾಹ್ಮಣ ಭಕ್ತನಾದಡೇನಯ್ಯಾ ಸೂತಕಪಾತಕಂಗಳ ಬಿಡದನ್ನಕ್ಕ
ಕ್ಷತ್ರಿಯ ಭಕ್ತನಾದಡೇನಯ್ಯಾ ಹಿಂಸೆಯ ಬಿಡದನ್ನಕ್ಕ
ವೈಶ್ಯ ಭಕ್ತನಾದಡೇನಯ್ಯ ಕಪಟ ಸುಳ್ಳು ಬಿಡದನ್ನಕ್ಕ
ಶೂದ್ರ ಭಕ್ತನಾದಡೇನಯ್ಯಾ ಸ್ವಜಾತಿ ಎಂಬುದ ಬಿಡದನ್ನಕ್ಕ
ಇಂತೀ ಜಾತಿಡಂಬಕರ ಮೆಚ್ಚುವನೆ ಕೂಡಲಚನ್ನಸಂಗಮದೇವ?'

(ಸ.ವ.ಸಂ:೩ ವ.ಸಂ, ೧೪೦೩)

ನಿಜವಾದ ಅರ್ಥದಲ್ಲಿ ಶರಣರು ಯಾವುದೇ ವರ್ಣ, ಕುಲ ಅಥವಾ ಜಾತಿಯ ಪರ ಇದ್ದಿದ್ದಿಲ್ಲ. ಅವರು ಯಾವ ವರ್ಣದವರ ಕಡೆಗೂ ಹೋಗಿ ಅವರನ್ನು ಶ್ಲಾಘಿಸುತ್ತ ನಿಲ್ಲಲಿಲ್ಲ. ಎಲ್ಲರಡೆಗೆ ಹೋಗಿ ಎಲ್ಲರನ್ನೂ ನವಮಾನವ ಸಮಾಜದ ಕಡೆಗೆ ತರಲು ಯತ್ನಿಸಿದರು. ಮೇಲ್ಜಾತಿಯವರಿಗೆ ಇದರಿಂದ ಲಾಭವಿರಲಿಲ್ಲ. ಅವರೊಳಗಿನ ವಿಚಾರವಂತರು ಮಾತ್ರ ವಚನಕಾರರ ಕಡೆಗೆ ಬಂದರು. ಆದರೆ ಬಹುಪಾಲು ಶೂದ್ರರು ಮತ್ತು ಅತಿಶೂದ್ರರು ವಚನಕಾರರ ಸುಲಿಗೆ ಇಲ್ಲದ ಸಮಾಜವನ್ನು ಸೇರಿದರು. ಹೀಗೆ ಸೇರಿದವರೆಲ್ಲ ನವಮಾನವರಾದರು. ವಚನಕಾರರಿಗೂ ಜಾತಿಡಂಬಕರಿಗೂ ಯಾವುದೇ ಸಂಬಂಧವಿಲ್ಲವೆಂಬುದನ್ನು ಚನ್ನಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. ಎಲ್ಲ ವರ್ಣದವರ ಹಾಗೆ ಶೂದ್ರ ವರ್ಣದವರು ಕೂಡ ತಮ್ಮ ಪೂರ್ವಾಶ್ರಮದ ಕುರುಹುಗಳನ್ನು ಕಳೆದುಕೊಂಡು ನವಮಾನವರಾಗಬೇಕೆಂದು ಚನ್ನಬಸವಣ್ಣನವರು ಮೇಲಿನ ವಚನದಲ್ಲಿ ಸೂಚಿಸಿದ್ದಾರೆ.

'ಬಡಹಾರುವನೇಸು ಭಕ್ತನಾದಡೆಯೂ ನೇಣಿನ ಹಂಗ ಬಿಡ!
ಮಾಲೆಗಾರನೇಸು ಭಕ್ತನಾದಡೆಯೂ ಬಾವಿಯ ಬೊಮ್ಮನ ಹಂಗ ಬಿಡ!
ಬಣಜಿಗನೇಸು ಭಕ್ತನಾದಡೆಯೂ ಒಟ್ಟಿಲ ಬೆನಕನ ಹಂಗ ಬಿಡ!
ಕಂಚುಗಾರನೇಸು ಭಕ್ತನಾದಡೆಯೂ ಕಾಳಿಕಾದೇವಿಯ ಹಂಗ ಬಿಡ!
ನಾನಾ ಹಂಗಿನವನಲ್ಲ, ನಿಮ್ಮ ಶರಣರ ಹಂಗಿನವನಯ್ಯಾ
ಕೂಡಲಸಂಗಮದೇವಾ.' **(ಸ.ವ.ಸಂ:೧ ವ.ಸಂ, ೪೫೧)**

ಬಸವಣ್ಣವರು ಬ್ರಾಹ್ಮಣ್ಯದ ಎಲ್ಲ ಹಂಗಿನ ತೊಡಕುಗಳನ್ನು ಬಿಡಿಸಿಕೊಂಡು ಹೊಸತನವನ್ನು ಸಾಧಿಸಿದ್ದಾರೆ. 'ಶರಣರಹಂಗು' ಎಂಬ ಕ್ರಾಂತಿಕಾರಿ ಚಿಂತನಾ ಕ್ರಮದಿಂದ ಎಲ್ಲ ಜಾತಿ, ಕುಲ, ವರ್ಣ ಮತ್ತು ವರ್ಗಗಳಿಂದ ಹೊರಬಂದು ಸರ್ವಸಮತ್ವವನ್ನು ಸಧಿಸಲು ಸಾಧ್ಯವಾಗುವುದು ಎಂಬುದನ್ನು ಸೂಚಿಸಿದ್ದಾರೆ. ಅಸಮಾನತೆಯನ್ನು ಪ್ರತಿಪಾದಿಸುವ ಎಲ್ಲ ಚಿಂತನೆ ಮತ್ತು ಕ್ರಿಯೆಗಳನ್ನು

ಬಿಡದೆ ನವಮಾನವನಾಗಲು ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. 'ಎನ್ನ ತನು ಭಕ್ತ, ಮನ ಭವಿ' ಎಂದು ಇನ್ನೊಂದು ವಚನದಲ್ಲಿ ಹೇಳಿದ ಅವರು, ಬರಿ ಬಾಹ್ಯ ಬದಲಾವಣೆಯನ್ನು ವಿರೋಧಿಸಿದ್ದಾರೆ. ಬಹುಪಾಲು ಲಿಂಗಾಯತರು ನಾಲಿಗೆ ಮೇಲೆ ಜಾತ್ಯತೀತ ಬಸವಣ್ಣ ಮತ್ತು ಮೆದುಳಿನ ಒಳಗೆ ಜಾತಿವಾದಿ ಮನುವನ್ನು ಇಟ್ಟುಕೊಂಡ ಕಾರಣ ಎಡಬಿಡಂಗಿ ಸ್ಥಿತಿಯಲ್ಲಿದ್ದು ವೈದಿಕರ ಆಚರಣೆಯಲ್ಲಿ ತೊಡಗಿದ್ದರಿಂದಲೇ ಲಿಂಗಾಯತ ಧರ್ಮ ಸ್ವತಂತ್ರ ಧರ್ಮವಾಗಿ ಮುನ್ನಡೆಯಲು ಸಾಧ್ಯವಾಗುತ್ತಿಲ್ಲವೆಂಬುದು ವಾಸ್ತವವಾಗಿದೆ.

ಬಸವ ಪ್ರಿಯರು, ಬಸವ ಭಕ್ತರು, ಬಸವ ನಿಷ್ಠರು ಮತ್ತು ಬಸವ ವಚನ ಪ್ರಿಯರು ಸಾಮೂಹಿಕ ಪ್ರಜ್ಞೆಯೊಂದಿಗೆ ಬಸವತತ್ತ್ವ ನಿಷ್ಠರಾದಾಗ ಮಾತ್ರ ಬಸವಧರ್ಮ ಉಳಿಯಲು ಸಾಧ್ಯ. 'ಲಿಂಗಾಯತ ಒಂದು ಜಾತ್ಯತೀತ ಅವೈದಿಕ ಧರ್ಮ' ಎಂಬ ಸತ್ಯವನ್ನು ಅರಿತುಕೊಂಡು ಲಿಂಗಾಯತರೊಳಗೆ ಸೃಷ್ಟಿಯಾದ ಜಾತಿ ಉಪಜಾತಿಗಳಲ್ಲಿ ರಕ್ತಸಂಬಂಧ ಬೆಳೆಸುವ ಮೂಲಕ ಅವುಗಳ ನಿರ್ನಾಮ ಮಾಡುವುದು ನಿಜವಾದ ಲಿಂಗಾಯತರ ಕರ್ತವ್ಯವಾಗಿದೆ. ವೈದಿಕರ ಜಾತಿ ವ್ಯವಸ್ಥೆ ವಿರುದ್ಧ ಹೋರಾಡುವ ಮೊದಲ ಘಟ್ಟವಿದು. ಬೇರೆ ಸಮಾಜಗಳಲ್ಲಿನ ಬಸವ ತತ್ತ್ವನಿಷ್ಠರ ಜೊತೆ ಇಷ್ಟಲಿಂಗ ದೀಕ್ಷೆಯೊಂದಿಗೆ ರಕ್ತಸಂಬಂಧ ಬೆಳೆಸುವುದು ಎರಡನೆಯ ಘಟ್ಟದ ಹೋರಾಟವಾಗಿದೆ. ಈ ರೀತಿಯ ಬಸವನಿಷ್ಠರೆಲ್ಲ ಒಗ್ಗಟ್ಟಾಗುವುದರ ಮೂಲಕ ಸಾಮಾಜಿಕ ಅನಿಷ್ಟಗಳಾದ ದಲಿತರ ಮೇಲಿನಹಲ್ಲೆ, ಮಹಿಳೆಯರ ದೌರ್ಜನ್ಯ, ಭ್ರಷ್ಟಾಚಾರ, ಕೋಮುವಾದ ಮತ್ತು ಉಗ್ರವಾದದ ವಿರುದ್ಧ ಧ್ವನಿ ಎತ್ತುವ ಅವಶ್ಯಕತೆ ಇದೆ. ಇದು ಇಷ್ಟಕ್ಕೆ ನಿಲ್ಲದೆ ಬಸವತತ್ತ್ವದ ಮೇಲೆ ರಾಜ್ಯಾಡಳಿತ ನಡೆಸುವ ದಿನಗಳ ಕನಸು ಕಾಣಬೇಕಿದೆ. 'ತುಳಿತಕ್ಕೊಳಗಾದವರು ನಮ್ಮ ನಾಯಕರಾಗಬೇಕು' ಎಂಬ ಬಸವವಾದವನ್ನು ರಾಜ್ಯಸತ್ತೆ ಪಡೆಯುವುದರ ಮೂಲಕ ಸಾಕಾರಗೊಳಿಸಬೇಕಿದೆ. ಭಾರತೀಯ ಸಮಾಜದಲ್ಲಿ ಬಡತನ, ಅಸ್ಪೃಶ್ಯತೆ ಮತ್ತು ಜಾತಿಗಳು ಇರುವವರೆಗೆ ಬಸವ ತತ್ತ್ವನಿಷ್ಠರ ಹೋರಾಟ ಮುಂದುವರಿಯುತ್ತಲೇ ಇರಬೇಕು ಎಂಬ ಕ್ರಿಯಾತ್ಮಕ ನಿರ್ಧಾರದಿಂದ ಮಾತ್ರ ಹೊಸ ಸಮಾಜದೆಡೆಗೆ ಸಾಗಲು ಸಾಧ್ಯವಾಗುವುದು. ಬಸವಣ್ಣನವರು ಇಂಥ ಮಹಾನ್ ಉದ್ದೇಶದಿಂದ ಬ್ರಾಹ್ಮಣ್ಯವನ್ನು ಅಲ್ಲಗಳೆದರು ಹೊರತಾಗಿ ದ್ವೇಷದಿಂದ ಅಲ್ಲ ಎಂಬ ಸತ್ಯವನ್ನು ಅರಿತುಕೊಂಡು ಚಾಲ್ತಿಯಲ್ಲಿರುವ ಬ್ರಾಹ್ಮಣ್ಯದ ವಿರುದ್ಧ (ಬ್ರಾಹ್ಮಣರ ವಿರುದ್ಧ ಅಲ್ಲ) ಮತ್ತು ಈ ಕಾಲದ ಸುಲಿಗೆ ವ್ಯವಸ್ಥೆ ವಿರುದ್ಧ ಹೋರಾಡುವುದು ಪ್ರತಿಯೊಬ್ಬ ಬಸವತತ್ತ್ವನಿಷ್ಠನ ಕರ್ತವ್ಯವಾಗಿದೆ.

> **'ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ**
> **ಗೌತಮಮುನಿಗೆ ಗೋವೇಧೆಯಾಯಿತ್ತು**
> **ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ**
> **ಬಲಿಗೆ ಬಂಧನವಾಯಿತ್ತು.**

ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ

ಕರ್ಣನ ಕವಚ ಹೋಯಿತ್ತು

ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ

ದಕ್ಷಂಗೆ ಕುರಿದಲೆಯಾಯಿತ್ತು.

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ

ಪರಶುರಾಮ ಸಮುದ್ರಕ್ಕೆ ಗುರಿಯಾದನು.

ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ

ನಾಗಾರ್ಜುನನ ತಲೆ ಹೋಯಿತ್ತು.

ದೇವಾ, ಭಕ್ತನೆಂದು ನಂಬಿದ ಕಾರಣ

ನಮ್ಮ ಕೂಡಲಸಂಗನ ಶರಣರು ಕೈಲಾಸಿವಾಸಿಗಳಾದರು' (ಸ.ವ.ಸಂ:೧ ವ.ಸಂ, ೫೭೦)

ಅಸಮಾನತೆಯ ವ್ಯವಸ್ಥೆ ಸದಾ ಮೋಸದ ಪರಿಣಾಮವನ್ನೇ ಬೀರುತ್ತದೆ ಎಂಬುದರ ಬಗ್ಗೆ ಬಸವಣ್ಣನವರಿಗೆ ಮನದಟ್ಟಾಗಿದ್ದರಿಂದಲೇ ಇಂಥ ವಚನಗಳನ್ನು ಬರೆಯಲು ಸಾಧ್ಯವಾಯಿತು.

'ವಿಪ್ರರ ಕರೆದು 'ನೃಪರುಗಳಿ ಇಪ್ಪರೆ

ತಮ್ಮ ಶಿಶುವಿನೊಡನೆ'ಂದುಬೆಸಗೊಂಡಡೆ

'ಇಪ್ಪರು, ಇಪ್ಪರು, ತಾವು ಬಿತ್ತಿದ ಫಲಂಗಳ ತಾವು ಉಣ್ಣದವರುಂಟೆ?

ಎಂದು ಕಣ್ಣು ಕಾಣದೆ ಹೇಳಿದರು, ಅಣ್ಣಗಳು, ಕರ್ಮದ ಬಟ್ಟೆಯನು'. (ಸ.ವ.ಸಂ:೧ ವ.ಸಂ, ೬೨೪)

ವಿಪ್ರರು ಯಾವರೀತಿಯಲ್ಲಿ ರಾಜ್ಯಶಕ್ತಿಗೆ ದಿಕ್ಕುತಪ್ಪಿಸಿ ತಮ್ಮ ಲಾಭಕ್ಕೇ ಅಂಟಿಕೊಂಡಿರುತ್ತಿದ್ದರು ಎಂಬುದಕ್ಕೆ ಈ ವಚನ ಸಾಕ್ಷಿಯಾಗಿದೆ. ರಾಜನು ತಮ್ಮ ಮಗಳನ್ನು ಬಯಸಿ ಪ್ರಾಣಿಯ ಮಟ್ಟಕ್ಕೆ ಇಳಿಯುವುದನ್ನು ಕೂಡ ವಿಪ್ರರು ಸಮ್ಮತಿಸುವುದನ್ನು ಕಂಡು ಬಸವಣ್ಣನವರು ವಿಷಣ್ಣವದನರಾಗಿದ್ದಾರೆ. ತಮ್ಮ ಶರಣರ ಧರ್ಮ ಈ ವಿಪ್ರರ ಧರ್ಮಕ್ಕೆ ತದ್ವಿರುದ್ಧವಾದುದು ಎಂಬುದನ್ನು ಈ ಕೆಳಗಿನ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

'ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು.

ಉದ್ಧರಿಸುವನೊಬ್ಬ, ಶಿವಶರಣ ಸಾಲದೆ?

ನಾರಾಯಣ ವೃದ್ಧಬ್ರಾಹ್ಮಣನಾಗಿ ಬಂದು ಬಲಿಯ ಭೂಮಿಯ ಬೇಡಿದ.

ಕೊಟ್ಟ ಬಲಿ ಬಂಧನಕ್ಕೆ ಸಿಕ್ಕಿದ.

ಈಶ ಭಕ್ತನಾಗಿ ಬಂದು ದಾಸನ ವಸ್ತ್ರವ ಬೇಡಿದ.

ಕೊಟ್ಟ ದಾಸ ತವನಿಧಿಯ ಪಡೆದ.

ಕಪಟದಿಂದ ನಾರಾಯಣ ಹಾರುವನಾಗಿ ಬಂದು ಕರ್ಣನ ಕವಚವ ಬೇಡಿದ.

ಕೊಟ್ಟ ಕರ್ಣ ಕಳದಲ್ಲಿ ಮಡಿದ.

ಕಾಮಾರಿ ಜಂಗಮವಾಗಿ ಬಂದು ಸಿರಿಯಾಳನ ಮಗನ ಬೇಡಿದ.

ಕೊಟ್ಟ ಸಿರಿಯಾಳಸೆಟ್ಟ ಕಂಚಿಯಪುರ ಕೈಲಾಸಕ್ಕೊಯ್ದ.

ನಾರಾಯಣ ಹಾರುವನಾಗಿ ಬಂದು ನಾಗಾರ್ಜುನನ ಸಿರವ ಬೇಡಿದ.

ಕೊಟ್ಟ ನಾಗಾರ್ಜುನನ ಶಿರ ಹೋಯಿತ್ತು.

ಶಿವನು ಜಂಗಮವಾಗಿ ಬಂದು ಸಿಂಧುಬಲ್ಲಾಳ ವಧುವ ಬೇಡಿದ.

ಕೊಟ್ಟ ಸಿಂಧು ಬಲ್ಲಾಳ ಸ್ವಯಂಲಿಂಗವಾದ.

ಇದು ಕಾರಣ ಇಲ್ಲಿಯೂ ಲೇಸು, ಅಲ್ಲಿಯೂ ಲೇಸು;

ಕೊಡಿರೆ, ನಮ್ಮ ಕೂಡಲಸಂಗನ ಶರಣರಿಗೆ.' (ಸ.ವ.ಸಂ:೧ ವ.ಸಂ, ೬೨೨)

ಶೈವರ ಮತ್ತು ವೈದಿಕರ ಪುರಾಣ ಕಥೆಗಳಲ್ಲಿನ ವೈವಿಧ್ಯವನ್ನು ಕೂಡ ಬಸವಣ್ಣನವರು ಕಂಡುಹಿಡಿದಿದ್ದಾರೆ. ಬಸವಣ್ಣನವರು ಶೈವಕ್ಕೆ ಅಂಟಿಕೊಂಡವರಲ್ಲ. ಆದರೆ ಶೈವರ'ಭಕ್ತ ಪರ ನಿಲವು' ಅವರ ಇಷ್ಟವಾಗಿದೆ. ಹೀಗಾಗಿ ಅವರು ವೈದಿಕದ ಜೊತೆ ಶೈವವನ್ನು ಹೋಲಿಸುತ್ತಾರೆ. ಹೀಗೆಹೋಲಿಸುವಾಗ ತಮ್ಮ ಪರಂಪರೆಯ ಮೂಲ ವೈದಿಕ ಅಲ್ಲ ಎಂಬುದನ್ನು ಸೂಚಿಸುವುದೇ ಅವರ ಉದ್ದೇಶವಾಗಿದೆ.

'ವೇದ ನಡನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯ!

ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತ್ತಯ್ಯಾ!

ಆಗಮ ಹೊರತೊಲಗಿ ಅಗಲದಿತ್ತಯ್ಯಾ!

ನಮ್ಮ ಕೂಡಸಂಗಯ್ಯನು

ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ'. (ವ.ಶಾ.ಸಾ.ವ. ೧೬೨೭)

ಭಾರತೀಯ ಧರ್ಮ ಮತ್ತು ದರ್ಶನ ಪರಂಪರೆಯಲ್ಲಿ ದೇವರ ವಿಷಯದಲ್ಲಿ ಸ್ಥೂಲವಾಗಿ ಆರು ಪ್ರಕಾರಗಳಿವೆ. ಇವೆಲ್ಲವುಗಳಿಗಿಂತ ವಿಶಿಷ್ಟವಾದ ದೇವರ ಕಲ್ಪನೆಯನ್ನು ಬಸವಣ್ಣನವರು ಹೊಂದಿದ್ದಾರೆ. ಬಸವಣ್ಣನವರ ದೇವರು ನಮ್ಮೊಳಗೇ ಇದ್ದಾನೆ. ಸಕಲಜೀವಪ್ರಿಯನಾದ ಆತ ಜಾತೀಯತೆಯಿಂದ ಕೂಡಿದ ವರ್ಣ ವ್ಯವಸ್ಥೆಯನ್ನು ಸಹಿಸುವುದಿಲ್ಲ. ವೈದಿಕ ವ್ಯವಸ್ಥೆಯ ಶ್ರೇಣೀಕೃತ ಸಮಾಜದ ಕಟ್ಟಕಡೆಯ ಜಾತಿಯಾದ ಮಾದಾರ ಜಾತಿಯ ಚನ್ನಯ್ಯನವರ ಮನೆಯಲ್ಲಿ ಅಂಬಲಿಯನ್ನು ಕುಡಿಯುವುದರ ಮೂಲಕ ಬಸವಣ್ಣನವರ ದೇವರು ವೈದಿಕ ವ್ಯವಸ್ಥೆಗೆ ಕೊಡಲಿಪೆಟ್ಟು ಹಾಕಿದ್ದಾನೆ.

ವೈದಿಕರ ಬಹುದೇವತಾವಾದ: ವೈದಿಕರ ಕರ್ಮಕಾಂಡವಾದ ವೇದಗಳಲ್ಲಿ ನಿಸರ್ಗ ಮೂಲದ ಅಗ್ನಿ, ವರುಣ, ವಾಯು ಮುಂತಾದವುಗಳ ಜೊತೆ ಗೋವಿನ ದೇಹದಲ್ಲೇ ೩೩ ಕೋಟಿ ದೇವತೆಗಳಿವೆ! ಋಗ್ವೇದದ ಪುರುಷಸೂಕ್ತದ ಪ್ರಕಾರ ನಾಲ್ಕು ವರ್ಣಗಳಾಗಿವೆ. ಹೀಗೆ ಬಹುದೇವತೆಗಳನ್ನು ಮತ್ತು ಬಹುವರ್ಣೀಯ ಜನರನ್ನು ವೈದಿಕದರ್ಶನ ಸೃಷ್ಟಿಸಿದೆ. ಬಹುದೇವೋಪಾಸನೆ ವೈದಿಕದ ವಿಧಾನವಾಗಿದೆ. 'ಏಕಂ ಸತ್ ವಿಪ್ರಾಃ ಬಹುದಾ ವದಂತಿ' (ಸತ್ಯ ಒಂದೇ ಇದೆ. ಜ್ಞಾನಿಗಳು ಅದನ್ನು ವಿವಿಧ ರೀತಿಯಲ್ಲಿ ವರ್ಣಿಸಿದ್ದಾರೆ.) ಎಂದು ಋಗ್ವೇದ ಹೇಳಿದರೂ ವೇದಸಂಸ್ಕೃತಿ ದ್ವೈತದ ಮೇಲೆಯೆ ಅವಲಂಬಿತವಾಗಿದೆ. 'ದೇವನೊಬ್ಬ ನಾಮಹಲವು' ಎಂದು ಬಸವಣ್ಣವರು ಹೇಳುವುದರ ಮೂಲಕ ಬಹುದೇವತಾವಾದ ಎಂಬುದೊಂದು ಭ್ರಮೆ ಎಂದು ಎಚ್ಚರಿಸಿದ್ದಾರೆ.

ಶೈವರ ಏಕದೇವತಾವಾದ: ಸಗುಣ, ಸಾಕಾರ ಮತ್ತು ಹೆಂಡಿರು ಮಕ್ಕಳುಳ್ಳಶಿವನು ಶಿವಗಣಗಳೊಂದಿಗೆ ಇರುವ ಏಕದೇವತಾವಾದ. ಸಾಕಾರ ಮೂರ್ತಿ ಸ್ಥಾಪನೆ ಮಾಡುವುದರ ಮೂಲಕ ಮತ್ತು ಸೃಷ್ಟಿಕ್ರಿಯೆಯ ಸಂಕೇತವಾದ ಸ್ಥಾವರಲಿಂಗದ ಮೂಲಕ ಆರಾಧನೆ. ಶೂನ್ಯಧ್ಯಾನ ಪರಂಪರೆಯಲ್ಲಿ ಬರುವ ಯೋಗಿ ಶಿವ ಈತ ಎಂಬ ವಾದವೂ ಇದೆ. ಇತಿಹಾಸ ಪುರಾಣವಾಗುವ ಮತ್ತು ಪುರಾಣ ಇತಿಹಾಸವಾಗುವ ಇಂಥ ಪ್ರಕ್ರಿಯೆಯಲ್ಲಿ ವಿವಿಧ ಆಯಾಮಗಳಿಂದ ಈ ಒಗಟುಗಳನ್ನು ಬಿಡಿಸಬೇಕಾಗುತ್ತದೆ. ಪುರಾಣದ ಶಿವದೇವನಾಗಲೀ, ಐತಿಹಾಸಿಕ ಯೋಗಿ ಶಿವನಾಗಲಿ ಈ ಲೋಕದ ದೇವರುಗಳ ಪರವಾಗಿಯೇ ಇರುವುದು ಮುಖ್ಯವಾದುದು. ಆದರೆ ಹುಟ್ಟು, ಸಾವುಗಳಿಲ್ಲದ ವಚನಕಾರರ ನಿರಾಕಾರ ಶಿವನಿಗೂ ಈ ಶಿವನಿಗೂ ಸಂಬಂಧವಿಲ್ಲ. ವಚನಗಳು ಸೃಜನಶೀಲ. ಸಾಹಿತ್ಯವೂ ಆಗಿರುವುದರಿಂದ ತತ್ತ್ವ ಪ್ರತಿಪಾದನೆಗಾಗಿ ವಚನಕಾರರು ಪೌರಾಣಿಕ ಶಿವನನ್ನೂ ಸಾಂಕೇತಿಕವಾಗಿ ಬಳಸಿಕೊಳ್ಳುತ್ತಾರೆ ಎಂಬುದನ್ನು ಗಮನಿಸಿದಾಗ ಅಪಾರ್ಥಕ್ಕೆ ಎಡೆಯಾಗುವುದಿಲ್ಲ.

ಉಪನಿಷತ್ತುಕಾರರ ಏಕದೇವತಾವಾದ: ಜ್ಞಾನಕಾಂಡವಾದ ಉಪನಿಷತ್ತುಗಳು 'ವೇದಾಂತ' ಎನಿಸಿಕೊಂಡಿವೆ. 'ನಿರ್ಗುಣ, ನಿರಾಕಾರಬ್ರಹ್ಮ'ನೆಂಬ ಏಕದೇವನ ಉಪಾಸನೆಯ ಮೂಲಕ ಅದ್ವೈತವನ್ನು ಸಾಧಿಸಿವೆ. ಏಕದೇವೋಪಾಸನೆಯ ಮೂಲ ಉಪನಿಷತ್ತುಗಳಲ್ಲಿದೆ. (ಆದರೆ ಇದು ವಾಗದ್ವೈತ ಅಂದರೆ ಮಾತಿನ ಅದ್ವೈತದಲ್ಲೇ ಕೊನೆಗೊಳ್ಳುವುದು ಎಂದು ಶರಣ ನಗೆಯ ಮಾರಿತಂದೆ ಹೇಳುತ್ತಾನೆ.) ನಿರ್ಗುಣನೂ ನಿರಾಕಾರನೂ ಆದ ವಚನಕಾರರ ತತ್ತ್ವರೂಪಿ ಶಿವ ತುಳಿತಕ್ಕೊಳಗಾದವರ ಪರ ಇದ್ದಾನೆ!

ಜೈನರ ಸ್ವಯಂ ದೇವತಾವಾದ : ಜೈನ ತತ್ತ್ವಜ್ಞಾನದ ಪ್ರಕಾರ ಮಾನವ ಜಿತೇಂದ್ರನಾಗುತ್ತ ಸ್ವಯಂ ದೇವರಾಗುವನು ಹೊರತಾಗಿ ಬೇರೆ ದೇವರಿಲ್ಲ. ವಚನಕಾರರ ದೇವರು ಕೂಡ ನಮ್ಮೊಳಗೇ ಇದ್ದು ಅನ್ಯಾಯದ ವಿರುದ್ಧ ಹೋರಾಡಲು ಆದೇಶಿಸುತ್ತಾನೆ. ನಾವು ನಮ್ಮೊಳಗಿನ ದೇವರಿಗೆ

ಶರಣಾಗತರಾದಾಗ ಈ ಜಗತ್ತಿನಲ್ಲಿ ಯಾರಿಗೂ ಶರಣಾಗತರಾಗಬೇಕಿಲ್ಲ. ನಮ್ಮ ಮುಂದೆ ಇರುವುದು ಸರ್ವ ಸಮತ್ವಕ್ಕಾಗಿ ಮಾಡಬೇಕಾದ ಹೋರಾಟ ಮಾತ್ರ ಎಂಬುದು ಬಸವಣ್ಣನವರ ನಿಲುವಾಗಿದೆ.

ಲೋಕಾಯತರ ನಿರೀಶ್ವರವಾದ: ಭೌತಿಕವಾದವನ್ನು ಪ್ರತಿಪಾದಿಸುವ ಲೋಕಾಯತರು ನಿರೀಶ್ವರವಾದಿಗಳು. ಈ ಲೋಕ ಮತ್ತು ಲೋಗರ ಬಗ್ಗೆ ಲೋಕಾಯತರು ಸುಂದರವಾಗಿ ಮಾತನಾಡುತ್ತ 'ಚಾರ್ವಾಕರು' ಎನ್ನಿಸಿಕೊಂಡರು. ವಚನಕಾರರು ಮಂದಿರವಿಲ್ಲದ, ಮೂರ್ತಿ ಇಲ್ಲದ, ಪೂಜಾರಿಗಳಿಲ್ಲದ ವ್ಯವಸ್ಥೆಗೆ ನಮ್ಮನ್ನು ಆಹ್ವಾನಿಸಿ, ನಮ್ಮೊಳಗಿರುವ ಅಂತಃಸಾಕ್ಷಿಯೆಂಬ ದೇವರ ಸಹಾಯದಿಂದ ಲೋಕದಲ್ಲಿ ನಡೆಯುತ್ತಿರುವ ಅನ್ಯಾಯದ ವಿರುದ್ಧ ಹೋರಾಡಲು ಕಲಿಸಿದರು.

ಬುದ್ಧನ ಆಜ್ಞೇಯವಾದ: 'ದೇವರು ಮತ್ತು ಆತ್ಮನು ಇವೆಯೊ, ಇಲ್ಲವೊ ಎಂಬುದು ಮುಖ್ಯವಲ್ಲ; ಬದುಕು ಮುಖ್ಯ, ಎಂಬ ಈ ವಾದಕ್ಕೆ ಆಜ್ಞೇಯ (ಗೊತ್ತಿಲ್ಲ)ವಾದ ಎಂದು ಕರೆಯುತ್ತಾರೆ. ಲೋಕದ ಜನರ ದುಃಖದ ಮೂಲವನ್ನು ಕಂಡುಹಿಡಿದು ನಿವಾರಣೆ ಮಾಡುವ ಈ ಕ್ರಮವನ್ನು ಭಗವಾನ ಬುದ್ಧ ಅರುಹಿದ್ದಾರೆ. 'ಎರೆದಡೆ ನೆನೆಯದು, ಮರೆದಡೆ ಬಾಡದು, ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ; ಕೂಡಲಸಂಗಮದೇವಾ ಜಂಗಮಕ್ಕೆರೆದಡೆ ಸ್ಥಾವರ ನನೆಯಿತ್ತು.' ಎಂದು ಬಸವಣ್ಣನವರು ಹೇಳುವ ಮೂಲಕ ಜಂಗಮ (ಲೋಕ)ದ ದುಃಖ ನಿವಾರಣೆಯೇ ನಮ್ಮಗುರಿಯಾಗಿರಬೇಕು ಎಂದು ಸ್ಪಷ್ಟಪಡಿಸಿದ್ದಾರೆ. 'ಇನ್ನು ಜಂಗಮವೇ ಲಿಂಗವೆಂದು ನಂಬಿದೆ' ಎಂದು ಬಸವಣ್ಣನವರು ಹೇಳುವ ಮೂಲಕ ಜೀವಜಗತ್ತನ್ನು ಕಾಪಾಡುವುದೇ ನಿಜವಾದ ಪೂಜೆ ಎಂದು ಸೂಚಿಸಿದ್ದಾರೆ.

ತಮ್ಮ ಮೇಲೆ ಬೀರಿದ ಹಿಂದಿನ ಎಲ್ಲ ದಾರ್ಶನಿಕರ ಚಿಂತನೆಗಳನ್ನು ಬಸವಣ್ಣನವರು 'ಆದ್ಯರವಚನಗಳು' ಎಂದು ಕರೆದಿದ್ದಾರೆ. ಶೈವ ಲೋಕಾಯತ, ಜೈನ, ಬೌದ್ಧ ಮತ್ತು ಉಪನಿಷತ್ ಪರಂಪರೆಯ ಮಹತ್ವದ್ದನ್ನು ಸ್ವೀಕರಿಸುವುದರ ಮೂಲಕ ತಮ್ಮದೇ ಆದ 'ಚೈತನ್ಯಾತ್ಮಕ ಭೌತಿಕವಾದ' ಎಂಬ 'ಬಸವಾದ್ವೈತ' ತತ್ತ್ವವನ್ನು ಸೃಷ್ಟಿಸಿ ಲೋಕಕ್ಕೆ ನೀಡಿದರು. ಇತರ ವಸ್ತುಗಳಂತೆ ಮಾನವರೂ ಸ್ಥಾವರರೇ. ಒಳಗಿನ ಚೈತನ್ಯ ಮಾತ್ರ ಜಂಗಮ. (ಚೈತನ್ಯಕ್ಕೆ ಜಂಗಮ ಎಂದೂ ಕರೆಯುವರು. ಜಂಗಮ ಮಾತ್ರ ಚಲನಶೀಲವಾದುದು. ಹಾರುವ ವಿಮಾನವೂ ಸ್ಥಾವರವೇ ಒಳಗಿರುವ ಇಂಧನವೆಂಬುದು ಚೈತನ್ಯ. 'ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯ' ಎಂದು ಬಸವಣ್ಣನವರು ತಿಳಿಸಿದ್ದಾರೆ. ನಾವು ನಮ್ಮೊಳಗಿನ ಚೈತನ್ಯಕ್ಕೆ ಶರಣಾಗಿರಬೇಕು.ಆ ಮೂಲಕ ಚೈತನ್ಯದ ಜೊತೆ ಅದ್ವೈತವನ್ನು ಸಾಧಿಸಬೇಕು. ಆಗ ನಾವು ಸಕಲಜೀವಾತ್ಮರ ಜೊತೆ ಅದ್ವೈತ ಸಾಧಿಸಲು ಸಾಧ್ಯ. ಹೀಗೆ ವಚನಕಾರರು ಲೋಕಮುಖಿಯಾದ ತತ್ತ್ವದ ಪ್ರತಿಪಾದಕರಾಗಿದ್ದಾರೆ.

ಲೋಕಾಯತದ ಭೂಮುಖಿ ಚಿಂತನೆ. ಶೈವದ ಗಣಸಂಸ್ಕೃತಿ, ಸಾಕಾರ ನಿರಾಕಾರ ಮಧ್ಯದ ಕುರುಹಾದ ಇಷ್ಟಲಿಂಗ ಸೃಷ್ಟಿಸುವ ಮೂಲಕ ದೇವರ ಪರಿಕಲ್ಪನೆ ಕೊಡುವ ಮೂಲಕ ಉಪನಿಷತ್ತಿನ

ನಿರ್ಗುಣ, ನಿರಾಕಾರನಾದ ಏಕದೇವ ಉಪಾಸನೆ. ಜೈನರ ಅಹಿಂಸೆ, ಬೌದ್ಧರ 'ಬಹುಜನ ಹಿತಾಯ ಬಹುಜನ ಸುಖಾಯ' ತತ್ತ್ವದಿಂದ ಕೂಡಿದ ಪ್ರಜ್ಞೆ, ಶೀಲ ಮತ್ತು ಕರುಣಾಭಾವ ಮುಂತಾದವು ವಚನದರ್ಶನದಲ್ಲಿ ಮೇಳೈಸಿವೆ. ಇವೆಲ್ಲವುಗಳ ಸಹಾಯದೊಂದಿಗೆ ವಚನಕಾರರು ತಮ್ಮ ಕಾಲದ ಸಮಾಜದ ವಿಶ್ಲೇಷಣೆ ಮಾಡಿದರು. ಆ ಸಮಾಜದೊಳಗಿನ ವೈರುಧ್ಯಗಳನ್ನು ಕಂಡುಹಿಡಿದರು.

ಕಾರ್ಲ್ ಮಾರ್ಕ್ಸ್ ಹೇಳಿದಂತೆ ಮಾನವ ಸಮಾಜದ ಇತಿಹಾಸವು ವರ್ಗಹೋರಾಟಗಳ ಇತಿಹಾಸವೇ ಆಗಿದೆ. ಸಮಾಜದೊಳಗಿನ ವರ್ಗಗಳನ್ನು ಕಂಡುಹಿಡಿದು ಶೋಷಣೆಯ ವಿರುದ್ಧ ವಿಜಯ ಸಾಧಿಸಿದಾಗಲೆ ಸಾಮಾಜಿಕ ನ್ಯಾಯ ಸಿಗಲು ಸಾಧ್ಯ ಎಂಬುದು ಬಸವಣ್ಣನವರ ದೃಢನಿರ್ಧಾರವಾಗಿತ್ತು. ವೈದಿಕರ ಕುತಂತ್ರದಿಂದಾಗಿ ಜಾತಿಗಳ ಒಳಗೆ ಬಡ ಮತ್ತು ಶ್ರೀಮಂತ ವರ್ಗಗಳು ಅಡಗಿ ಕುಳಿತಿದ್ದನ್ನು ವಚನಕಾರರು ಗುರುತಿಸಿದರು. ಜಾತಿಗಳನ್ನು ಒಡೆದರು. ಕೆಳಜಾತಿಗಳ ಒಳಗೆ ಬಡವರ್ಗ ಮತ್ತು ಮೇಲ್ಜಾತಿಗಳ ಒಳಗೆ ಶ್ರೀಮಂತ ವರ್ಗ ಇರುವುದನ್ನು ಬಹಿರಂಗ ಪಡಿಸಿದರು. ತಾವು ಉಳ್ಳವರ ಜೊತೆ ಇರುವವರಲ್ಲ, ಬಡವರ ಜೊತೆ ಇರುವವರು ಎಂಬುದನ್ನು ಸಾರಿ ಹೇಳಿದರು ಈ ಬಡವರೇ ಅಸ್ಪೃಶ್ಯರು ಮತ್ತು ವಿವಿಧ ಕಾಯಕಗಳನ್ನು ಮಾಡುತ್ತಿದ್ದ ಶೂದ್ರರು. ತಾವು ಕೆಳಜಾತೀಕರಣ ಹಾಗೂ ಕರಳವರ್ಗೀಕರಣಗೊಂಡು ಬದುಕಿ ತೋರಿಸುವುದರ ಮೂಲಕ ದಲಿತರು ಮತ್ತು ಬಡವರ ಪರವಾಗಿ ಹೋರಾಡುವುದನ್ನು ಕಲಿಸಿದರು.

'ಒಡೆಯರು ಬಂದರೆ ಗುಡಿ ತೊರಣವ ಕಟ್ಟಿ,
ನಂಟರು ಬಂದರೆ ಸಮಯವಿಲ್ಲೆನ್ನಿ,
ಅಂದೇಕೆ ಬಾರರು?
ನೀರಿಂಗೆ ನೇಣಿಂಗೆ ಹೊರಗಾದಂದು, ಸಮಾಯಾಚಾರಕ್ಕೆ ಒಳಗಾದಂದು.
ಪುರುಷ ಮುಟ್ಟಲು ಕಬ್ಬುನ ಸುವರ್ಣವಾಯಿತ್ತು.
ಬಳಿಕ ಬಂಧುಗಳುಂಟೆ, ಕೂಡಲಸಂಗಮದೇವಾ?'

(ಸ.ವ.ಸಂ:೧ ವ.ಸಂ, ೪೪೯)

ಶೋಷಣೆ ಇಲ್ಲದ ನವಸಮಾಜ ನಿರ್ಮಾಣದ ತತ್ತ್ವಗಳನ್ನು ಸಾರುವ ಬಡನೀತಿ ಜಂಗಮರೇ ಬಸವಣ್ಣವರ ಒಡೆಯರು. ಅವರು ಬಂದಾಗ ಧ್ವಜ ಹಿಡಿದು ಮತ್ತು ತೋರಣ ಕಟ್ಟಿ ಸ್ವಾಗತಿಸಲು ತಿಳಿಸುವ ಅವರು, ತಮ್ಮ ರಕ್ತ ಸಂಬಂಧಿಕರು ಬಂದರೆ ಸಮಯ(ಧರ್ಮ) ಇಲ್ಲ ಎಂದು ಹೇಳಬೇಕೆನ್ನುತ್ತಾರೆ. ಕಂದಾಚಾರದಿಂದ ಹೊರಗಾಗಿ ಮಾನವೀಯ ಧರ್ಮದ ಆಚರಣೆಗೆ ಒಳಗಾದ ಅವರೇಕೆ ರಕ್ತಸಂಬಂಧವನ್ನು ಹಿಡಿದುಕೊಂಡು ಬರಲಿಲ್ಲ. (ಈಗ ಪ್ರಧಾನಿಯಾದ ಮೇಲೆ ಬಂದದ್ದೇಕೆ?) ನಾನಂದು ವೈದಿಕ ವ್ಯವಸ್ಥೆಯಲ್ಲಿ ಕಬ್ಬಿಣವಾಗಿದ್ದೆ. ಈಗ ಮಾನವೀಯ ತತ್ತ್ವವೆಂಬ ಪುರುಷ ಮುಟ್ಟಿದ ಕಾರಣ ಚೊಕ್ಕ ಚಿನ್ನವಾಗಿದ್ದೇನೆ. ಈಗ ನನಗೆ ವೈದಿಕ ಬಂಧುಗಳಿಲ್ಲ. ಜಾತಿಸಂಕರವಾಗಿ

ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಕೂಡಲಸಂಗನ ಶರಣರೇ ನನ್ನ ಬಂಧುಗಳು ಎಂಬುದನ್ನು ದೃಢನಿರ್ಧಾರದ ಬಸವಣ್ಣವರು ಸ್ಪಷ್ಟಪಡಿಸಿದ್ದಾರೆ.

ವೈದಿಕ ವ್ಯವಸ್ಥೆಯಿಂದ ಹೊರಬಂದ ಬಸವಣ್ಣನವರು ಲೋಕಾಯತ, ಬುದ್ಧ ಮುಂತಾದ ಅವೈದಿಕ ಪರಂಪರೆಯ ಮುಂದುವರಿದ ಭಾಗವಾಗುತ್ತಾರೆ. ಆ ಅವೈದಿಕ ಪರಂಪರೆಯ ಕೊಂಡಿಯನ್ನು ಮಾನವಕುಲ ಕಳಚಿಕೊಂಡರೆ ವೈದಿಕರ ಗುಲಾಮಗಿರಿಯಲ್ಲಿ ಬೀಳುವುದು ಅನಿವಾರ್ಯವಾಗುತ್ತದೆ. ಹಿಂದು ಎಂಬ ಶಬ್ದ ಯಾವುದೇ ವೇದ, ಶಾಸ್ತ್ರ ಮತ್ತು ಪುರಾಣಗಳಲ್ಲಿ ಇಲ್ಲ. ಸಿಂಧು ನದಿಯ ಪ್ರದೇಶದಲ್ಲಿರುವವರಿಗೆಲ್ಲ ಅರಬರು 'ಹಿಂದು' ಎಂದು ಕರೆದರು. ಅರಬಿ ಭಾಷೆಯಲ್ಲಿ 'ಸ' ಅಕ್ಷರ 'ಹ' ಆಗಿ ಪರಿವರ್ತನೆ ಆಗುವುದರಿಂದ. ಸಿಂಧು ಹೋಗಿ ಹಿಂದು ಆಯಿತು. ಆದ್ದರಿಂದ ಹಿಂದು ಧರ್ಮವು ನಿಜವಾದ ಅರ್ಥದಲ್ಲಿ ವೈದಿಕ ಧರ್ಮವೇ ಆಗಿದೆ. ಇಂದು ಶೈವ ಮುಂತಾದ ಅವೈದಿಕ ಪಂಥಗಳು ಸಾಮಾನ್ಯ ಅರ್ಥದಲ್ಲಿ ಜಾತಿ, ಕುಲ, ಮತ, ಪಂಥಗಳಿಂದ ಕೂಡಿದ ಹಿಂದೂ ಧರ್ಮದ ಭಾಗಗಳಾಗಿ ಹೋಗಿವೆ. ಈ ಭಾಗವಿಭಾಗಗಳಿಗೆ ಸೇರಿದವರೆಲ್ಲ ವೈರುಧ್ಯಗಳಿಂದ ಬದುಕುತ್ತಿದ್ದರೂ ಹಿಂದೂಧರ್ಮ ಎಂಬ ಪರಿಧಿಯಲ್ಲಿ ಬರುವಂತೆ ವೈದಿಕರು ಸಹಸ್ರಾರು ವರ್ಷಗಳಿಂದ ವ್ಯವಸ್ಥಿತವಾಗಿ ನೋಡಿಕೊಂಡು ಬಂದಿದ್ದಾರೆ. ಶೂದ್ರರು, ಅಂದರೆ ಜನಿವಾರ ಇಲ್ಲದವರು 'ಅವೈದಿಕ ಹಿಂದುಗಳು' ಎಂದು ಕರೆದುಕೊಳ್ಳುವುದು ಹೆಚ್ಚು ಸೂಕ್ತ. ಯಾವುದೇ ದೃಷ್ಟಿಯಿಂದಲೂ ಅವರು ವೈದಿಕ ಹಿಂದುಗಳಲ್ಲ. ವೈದಿಕವನ್ನು ಅವರ ಮೇಲೆ ಹೇರಲಾಗುತ್ತಿದೆ ಅಷ್ಟೆ. ಆದರೆ ವಚನಕಾರರ ಧರ್ಮವಾದ ಲಿಂಗವಂತ ಧರ್ಮವು ಜೈನ, ಬೌದ್ಧ, ಸಿಖ್, ಪಾರ್ಸಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಂತೆ ಸ್ವತಂತ್ರವಾದ ಅಲ್ಪಸಂಖ್ಯಾತ ಧರ್ಮವಾಗಿದೆ.

"ವಿವೇಚನಾಯುತ ಆಧ್ಯಾತ್ಮಿಕ ಜೀವನವು ಜನಸಾಮಾನ್ಯರ ಕ್ಷುದ್ರ ದೈವಗಳ ಪರಿಕಲ್ಪನೆಗೂ ದೂರ ಎಂಬುದನ್ನು ಅನೇಕ ವಚನಗಳು ಸಾರುತ್ತವೆ. 'ಅರಗು ತಿಂದು ಕರಗುವ ದೈವ, ಉರಿಯ ಕಂಡರೆ ಮುರುಟುವ ದೈವ', 'ಮೊರ ದೈವ, ಒನಕೆ ದೈವ', ಇತ್ಯಾದಿ ಎಂದು ಬಸವಣ್ಣ ಹೇಳುವಾಗ, ಯಾವುದು ದೈವ ಎಂಬ ಹೆಸರಿಗೆ ಪಾತ್ರವಲ್ಲವೋ ಅದನ್ನು ಅಜ್ಞರು ಪೂಜಿಸುತ್ತಾರೆ, ಯಾವುದುನಿಜವಾದ ದೈವವೋ ಅದನ್ನು ಅಜ್ಞರು ಕಡೆಗಣಿಸುತ್ತಾರೆ, ಎಂಬರ್ಥ ಉಂಟಾಗುತ್ತದೆ. ನಾವು ಕೊಟ್ಟ ಅಲ್ಪ ನೈವೇದ್ಯವನ್ನೇ ಸೇವಿಸುವ ದೈವ ನಿಜವಾಗಿಯೂ ದೈವವಲ್ಲ, ನೈವೇದ್ಯ ಕೊಡುವವನೇ ದೈವ. ಅರಗು ತಿಂದು ಕರುಗುವುದು ದೈವವಾದರೆ, ಅದು ನಿಜವಾಗಿಯೂ ಪೂಜಾಯೋಗ್ಯವಲ್ಲ, ಏಕೆಂದರೆ, ಆಗ ದೈವಕ್ಕೂ ಆದಿ ಮತ್ತು ಅಂತ್ಯವಿದೆ ಎಂದಾಗುತ್ತದೆ. ಅದೇ ರೀತಿ ಒರಳು, ಒನಜೆ, ಮೊರ, ಇತ್ಯಾದಿಗಳೆಲ್ಲವೂ ದೈವವಾದರೆ, ದೇವರು ಅಸಂಖ್ಯಾತರಾಗುತ್ತಾರೆ. ಆಗ ಕಾಲಿಡಲು ಸ್ಥಳವೇ ಇಲ್ಲದಂತಾಗುತ್ತದೆ. ಅಲ್ಲದೆ, ಬಹುದೇವತಾವಾದ ತಾತ್ವಿಕವಾಗಿ ಸ್ವೀಕಾರಾರ್ಹವಲ್ಲ. ಅದಕ್ಕೇ ಬಸವಣ್ಣನವರು 'ಇಬ್ಬರು ಮೂವರು ದೇವರೆಂದು ಉಬ್ಬಿ ಮಾತಾಡಬೇಡ, ದೋವನೊಬ್ಬನೇ ಕಾಣಿರೋ', ಎನ್ನುತ್ತಾರೆ. ವಚನಕಾರರ ದೈವ ಒಂದೇ, ಅವರ ಪರಿಕಲ್ಪನೆ ವೈಚಾರಿಕವಾಗಿ ನೋಡಿದರೆ ಸುಸಂಬದ್ಧವಾಗಿ ಕಾಣುತ್ತದೆ"೫.

ವಚನಕಾರರ ವಚನಗಳಲ್ಲಿ ಅನುಭಾವ ('ಆಧ್ಯಾತ್ಮ' ಪದ ಪ್ರಯೋಗ ವಚನಕಾರರಿಗೆ ಹಿಡಿಸುವುದಿಲ್ಲ. ಅದು ಮನುಷ್ಯರನ್ನು ಭೌತಿಕ ಜಗತ್ತಿನಿಂದ ದೂರ ಒಯ್ಯುತ್ತದೆ. ಆದರೆ ಶರಣರ 'ಅನುಭಾವ' ಭೌತಿಕ ಜಗತ್ತಿನ ಅನುಭವದ ಮೇಲೆ ನಿಂತಿದೆ. 'ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟ' ಎಂದು ಬಸವಣ್ಣವರು ತಿಳಿಸಿದ್ದಾರೆ.) ಭೌತಿಕ ಜಗತ್ತಿನ ಮಹತ್ವವನ್ನು ಎತ್ತಿ ಹಿಡಿಯುತ್ತದೆ ಮತ್ತು ಅದನ್ನು ಮಾನವೀಯಗೊಳಿಸುತ್ತದೆ. ಆದರೆ ವೈದಿಕರ ಆಧ್ಯಾತ್ಮದಲ್ಲಿ ಭೌತಿಕ ಜಗತ್ತಿಗೆ ಸ್ಥಾನವಿಲ್ಲ. ಇಂಥ ಮೋಸದ ಆಧ್ಯಾತ್ಮವನ್ನು ಸಾರುವ ಬ್ರಾಹ್ಮಣ್ಯವನ್ನು ವಚನಕಾರರು ಅಲ್ಲಗಳೆದಿದ್ದಾರೆ.

ಎಲ್ಲವೂ ಬಯಲಿನಿಂದ ಸೃಷ್ಟಿಯಾಗಿದೆ ಎಂಬ ಬಸವಣ್ಣನವರ ವಾದ ವೈಜ್ಞಾನಿಕವಾಗಿದೆ. ಕಣ್ಣಿಗೆ ಕಾಣದ ಚೈತನ್ಯದಿಂದ ಒಡಮೂಡಿದ ವಿಶ್ವವೆಂಬ ವಸ್ತು ಕಣ್ಣಿಗೆ ಕಾಣುವ ಚೈತನ್ಯವಾಗಿದೆ. ಕಣ್ಣಿಗೆ ಕಾಣುವ ಚೈತನ್ಯವೇ ಸ್ಥಾವರ.ಕಣ್ಣಿಗೆ ಕಾಣದ ಚೈತನ್ಯವೇ ಜಂಗಮ. ಈ ಕಾರಣದಿಂದಲೇ ಬಸವಣ್ಣನವರು 'ಸ್ಥಾವರ ಜಂಗಮ ಒಂದೇ ಎಂದಿದ್ದಾರೆ. ಆಯುಷ್ಯ ಮುಗಿದ ಮೇಲೆ ಸ್ಥಾವರವು ತನ್ನ ರೂಪ ಕಳೆದುಕೊಳ್ಳುವುದರಿಂದ 'ಸ್ಥಾವರಕ್ಕಳಿವುಂಟು' ಎಂದು ತಿಳಿಸಿದ್ದಾರೆ. ಸ್ಥಾವರವು ತನ್ನ ಅಸ್ತಿತ್ವ ಕಳೆದುಕೊಂಡ ಮೇಲೆ ಜಂಗಮವಾಗುತ್ತದೆ. ಅಂದರೆ ಕಣ್ಣಿಗೆ ಕಾಣುವ ಚೈತನ್ಯವು ತನ್ನ ಮೂಲಸ್ವರೂಪವಾದ ಕಣ್ಣಿಗೆ ಕಾಣದ ಚೈತನ್ಯವಾಗುತ್ತದೆ.

ಈ ಕಣ್ಣಿಗೆ ಕಾಣುವ ಚೈತನ್ಯವು ಒಂದು ದಿನ ಮಾಯವಾಗಿ ಕಣ್ಣಿಗೆ ಕಾಣದ ಚೈತನ್ಯದಲ್ಲಿ ಲೀನವಾಗುವುದು ಎಂದರೆ ಸೂರ್ಯ ಮುಂತಾದ ನಕ್ಷತ್ರಗಳು ಕೂಡ ಮಾಯವಾಗುವವು ಎಂದರ್ಥ. ಕಣ್ಣಿಗೆ ಕಾಣುವ ಚೈತನ್ಯದೊಳಗೆ ಅಂದರೆ ವಸ್ತುವಿನೊಳಗೂ ಕಣ್ಣಿಗೆ ಕಾಣದ ಚೈತನ್ಯವಿರುವುದು. ಆ ಚೈತನ್ಯ ಒಳಗೆ ಇರುವವರೆಗೆ ಕಣ್ಣಿಗೆ ಕಾಣುವಂಥದ್ದು ಜೀವಂತವಾಗಿರುವುದು. ಪ್ರಾಣ ಹೋದಮೇಲೆ ದೇಹವು ಮೃತದೇಹವಾಗುವ ಹಾಗೆ ಅಣು ಕೂಡ ಒಂದು ದಿನ ಚೈತನ್ಯವನ್ನು ಕಳೆದುಕೊಂಡು ಬಯಲಾಗುವುದು. ಅಂದರೆ ಮೂಲಚೈತನ್ಯದಲ್ಲಿ ಒಂದಾಗುವುದು. ಈ ಮೂಲ ಚೈತನ್ಯವನ್ನೇ ಬಸವಣ್ಣನವರು ದೇವರು ಎಂದು ಕರೆದಿದ್ದಾರೆ. ಹೀಗೆ ವಚನಸಾಹಿತ್ಯವು ವೈಜ್ಞಾನಿಕ ಮನೋಭಾವದಿಂದ ಕೂಡಿದ ಆಧುನಿಕ ಸಮಾಜದ ಕನಸುಗಳನ್ನು ಬಿತ್ತುವ ಸಾಹಿತ್ಯವಾಗಿದೆ.

ಕಾವ್ಯದಲ್ಲಿ ಕರುಣಾರಸ ಹರಿಸಬಹುದು. ಆದರೆ ನಿಜಜೀವನದಲ್ಲಿ ಹಾಗೆ ಕ್ರಿಯಾಶೀಲವಾಗಿ ಜನರ ಕಣ್ಣೀರನ್ನು ಒರೆಸುವಂಥ ಸಾಧನೆ ಮಾಡುವುದು ಅವಶ್ಯವಾಗಿದೆ. ವಿದ್ಯೆಯನ್ನು ಸ್ವಾರ್ಥಕ್ಕಾಗಿ ಬಳಸುವ ಸಂಪ್ರದಾಯ ನಮ್ಮಲ್ಲಿದೆ. ಅದೇ ಕಾರಣದಿಂದ ಶೂದ್ರರಿಗೆ ಮತ್ತು ಅತಿಶೂದ್ರರಿಗೆ ಅಕ್ಷರ ಜ್ಞಾನ ಸಿಗಲಿಲ್ಲ. ಸಿಕ್ಕಿದ್ದು ಅಲ್ಪಸಂಖ್ಯಾತರಾದ ಬ್ರಾಹ್ಮಣ ಮತ್ತು ಇತರ ಸವರ್ಣೀಯರಿಗೆ ಮಾತ್ರ! ಹೀಗೆ ವಿದ್ಯಾಸಾಧಕರು ಕ್ರೂರಿಗಳಾಗಿ ಬದುಕುತ್ತಾ ಬುದ್ಧಿಗೆಟ್ಟು ಹೋದರು. ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಎಂಬ ತ್ರಿಮತಸ್ಥರು ಸದಾ ತಮ್ಮ ಮತ ಶ್ರೇಷ್ಠ ಎನ್ನುವುದರಲ್ಲೇ ಕಾಲ ಕಳೆದರು. ಇಂಥ ತತ್ತ್ವ ಸಾಧನೆಯಲ್ಲಿ ಮಾನವೀಯತೆ ಎಂಬ ಭಕ್ತಿಭಾವ ಮರೆತು ಭಕ್ತಿಹೀನರಾದರು. ಸರ್ವಸಮತ್ವದಿಂದಿರುವುದೇ ಭಕ್ತಿ ಎಂಬುದು ಅವರಿಗೆ ಹೊಳೆಯಲೇ ಇಲ್ಲ. ಲಿಂಗಸಾಧಕರು ಕೂಡ

ಧಾರ್ಮಿಕ ಸಂಪ್ರದಾಯಗಳಲ್ಲಿ ಮುಳುಗುತ್ತ ಭೂಮಿಗೆ ಭಾರವಾದರು. ಆದರೆ ಬಸವಣ್ಣನವರು ಈ ಭೂಮಿಯ ಮೇಲಿನ ದುಃಖ ನಿವಾರಣೆಗಾಗಿ ತಮ್ಮ ಬದುಕನ್ನೇ ಮುಡಿಪಿಟ್ಟು ಸಮಾಜವೆಂಬ ಜಂಗಮದಲ್ಲಿ ಸಮಾನತೆಯ ಯಶಸ್ಸನ್ನು ಸಾಧಿಸಿ ಸ್ವಯಂ ದೇವಸ್ವರೂಪರೇ ಆದರು ಎಂಬುದನ್ನು ಚನ್ನಬಸವಣ್ಣನವರು ಭಾವಪೂರ್ಣವಾಗಿ ತಿಳಿಸಿದ್ದಾರೆ.

'ಲಿಂಗಭಕ್ತನ ವಿವಾಹದಲ್ಲಿ ಶಿವಗಣಂಗಳಿಗೆ

ವಿಭೂತಿ ವೀಳೆಯವ ಕೊಟ್ಟು ಆರೋಗಣೆಯ ಮಾಡಿಸಿ

ಶಿವಗಣಂಗಳು ಸಾಕ್ಷಿಯಾಗಿ ಪ್ರಸಾದವನಿಕ್ಕುವುದೇ ಸದಾಚಾರವಲ್ಲದೆ,

ವಾರ ತಿಥಿ ಸುಮುಹೂರ್ತವೆಂಬ ಲೌಕಿಕದ ಕರ್ಮವ ಮಾಡಿದಡೆ

ನಿಮ್ಮ ಸದ್ಭಕ್ತರಿಗೆ ದೂರವಯ್ಯಾ ಕೂಡಲಚನ್ನಸಂಗಮದೇವಾ'.

(ಸ.ವ.ಸಂ:೩ ವ.ಸಂ, ೧೫೩೧)

ಎಂದು ಚನ್ನಬಸವಣ್ಣನರು ಅನಿಶ್ಚಿತ ಹೇಳಿಕೆಗಳ ಪಂಚಾಂಗವನ್ನು ತಿರಸ್ಕರಿಸುತ್ತ ವೈಚಾರಿಕ ಪ್ರಜ್ಞೆಯನ್ನು ಎತ್ತಿ ಹಿಡಿದಿದ್ದಾರೆ. 'ಗುರು ಕೊಂಡುಮಾರಿದ ಈ ಲಿಂಗಬಿದ್ದಡೆ ಸಮಾಧಿಯುಂಟೆ?' ಎಂದು ಮೂಢನಂಬಿಕೆಗಳನ್ನು ಅಲ್ಲಗಳೆದಿದ್ದಾರೆ.

'ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ,

ಗ್ರಹಣ ಸಂಕ್ರಾಂತಿಯಿಂದ ವೆಗ್ಗಳ,

ಏಕಾದಶಿ-ವ್ಯತೀಪಾತದಿಂದ ವೆಗ್ಗಳ,

ಸೂಕ್ಷ್ಮ ಶಿವಪಥವನರಿದಂಗೆ

ಹೋಮ-ನೇಮ-ಜಪ-ತಪದಿಂದ ವೆಗ್ಗಳ,

ಕೂಡಲಸಂಗಮದೇವಾ ನಿಮ್ಮ ಮಾಣದೆ ನೆನೆವಂಗೆ.'

(ಸ.ವ.ಸಂ:೧ ವ.ಸಂ, ೬೧೦)

ಎಂದು ಬಸವಣ್ಣನವರು ವೈದಿಕದ ಎಲ್ಲ ಅಂಗಾಂಗಳನ್ನು ನಿಷ್ಕ್ರಿಯೆಗೊಳುಸುತ್ತಾರೆ. ಶಿವಪಥವನ್ನು ಅರಿಯುವುದು ಎಲ್ಲಕ್ಕಿಂತ ಹೆಚ್ಚಿನದು ಎಂದು ಹೆಳುತ್ತಾರೆ. 'ಅಷ್ಟಮಿ ನವಮಿ ಎಂಬ ಕಲ್ಪತವೇಕೋ ಶರಣಂಗೆ?' ಎಂದು ಪ್ರಶ್ನಿಸುತ್ತಾರೆ. 'ವೇದಶಾಸ್ತ್ರದವರ ಹಿರಿಯರೆನ್ನೆ, ಮಾಯಾಭ್ರಾಂತಿ ಕವಿದ ಗೀತಜ್ಞರ (ಭಗವದ್ಗೀತಾ ತಜ್ಞರ) ಹಿರಿಯರೆನ್ನೆ' ಎಂದು ಘೋಷಿಸುತ್ತಾರೆ.

ಕರ್ಮ ಸಿದ್ಧಾಂತದ ಪುಣ್ಯ ಪಾಪಗಳನ್ನು ಹೀಗೆ ಬಸವಣ್ಣನವರು ತಿರಸ್ಕರಿಸಿದ್ದಾರೆ. ಇವು ದೇಹಕ್ಕಾಗಲೀ ಜೀವಕ್ಕಾಗಲೀ ಅಂಟಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಮಣ್ಣಾಗುವ ದೇಹಕ್ಕೆ ಮತ್ತು ಬಯಲಾಗುವ ಜೀವಕ್ಕೆ ಪುನರ್ಜನ್ಮವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. 'ಆಚಾರವೇ ಸ್ವರ್ಗ,

ಅನಾಚರವೇ ನರಕ' ಎಂದು ಹೇಳುವ ಮೂಲಕ ಸ್ವರ್ಗ ನರಕಗಳನ್ನು ಅಲ್ಲಗಳೆದಿದ್ದಾರೆ. 'ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೋ, ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೋ' ಎನ್ನುತ್ತ ಮಾನವನ ಅಭ್ಯುದಯಕ್ಕೆ ಮಾರಕವಾಗಿರುವ ಕರ್ಮಸಿದ್ಧಾಂತವನ್ನು ತಿರಸ್ಕರಿಸಿದ್ದಾರೆ. ಕರ್ಮಸಿದ್ಧಾಂತವು ಬಹಳ ದುಷ್ಟ ತಂತ್ರವಾಗಿದೆ. ಸಂಚಿತ ಕರ್ಮ, ಪ್ರಾರಬ್ಧ ಕರ್ಮ ಮತ್ತು ಆಗಾಮಿ ಕರ್ಮದ ಬಲೆಗಳಲ್ಲಿ ಸಿಲುಕಿಸುವುದರ ಮೂಲಕ ವ್ಯಕ್ತಿಯ ಪೂರ್ವಾಪರಗಳೊಂದಿಗೆ ಭವಿಷ್ಯ ಹೇಳುವ ದುಷ್ಕರ್ಮಿಗಳು ಎಲ್ಲ ರೀತಿಯ ಐಶಾರಾಮಿ ಜೀವನ ಸಾಗಿಸುತ್ತಾರೆ.

ವೈದಿಕ ಧರ್ಮ ಇಂಥ ಕರ್ಮ ಸಿದ್ಧಾಂತದ ಮೇಲೆ ನಿಂತಿದ್ದನ್ನು ಬಸವಣ್ಣನವರು ಚೆನ್ನಾಗಿ ಗುರುತಿಸಿದ್ದಾರೆ. ಬಸವಣ್ಣನವರ ಭಕ್ತಿಸಾಮ್ರಾಜ್ಯ ಸರ್ವಸಮತ್ವದ ಮೇಲೆ ನಿಂತಿದೆ. ಅಂದರೆ ಅಲ್ಲಿ ಅಸ್ಪೃಶ್ಯತೆ ಇಲ್ಲ, ಜಾತಿಭೇದವಿಲ್ಲ, ಕಾಯಕಭೇದವಿಲ್ಲ, ಲಿಂಗಭೇದವಿಲ್ಲ, ವರ್ಣ ಮತ್ತು ವರ್ಗಭೇದಗಳಿಲ್ಲ. ಇಂಥ ಭಕ್ತಿ ಸಾಮ್ರಾಜ್ಯದ ಸಮಾಜಕ್ಕೆ ಬಸವಣ್ಣನವರು ಶರಣಸಂಕುಲವೆಂದು ಕರೆದರು. ಶರಣರು ಸರ್ವಸಮಾನತೆಯ ವಕ್ತಾರರಾಗಿ 'ನುಡಿದಂತೆ ನಡೆದು' ಬದುಕಿ ತೋರಿಸಿದರು. 'ಜಾತಿ ಸಂಕರವಾದ ಬಳಿಕ ಕುಲವನರಸುವರೆ' ಎಂದು ಬಸವಣ್ಣನವರು ಪ್ರಶ್ನಿಸಿದರು. ಶೂದ್ರರಿಗೆ ಯಾತನಾಮಯವಾಗಿರುವ 'ವರ್ಣವ್ಯವಸ್ಥೆ' ಮನುವಾದಿಗಳಿಗೆ ಐಶಾರಾಮಿ ವ್ಯವಸ್ಥೆಯಾಗಿದೆ. ಈ ವರ್ಣ ವ್ಯವಸ್ಥೆಯು ಕರ್ಮಸಿದ್ಧಾಂತದ ಮೇಲೆ ನಿಂತ ಕಾರಣ ಕರ್ಮಸಿದ್ಧಾಂತದ ತಾಯಿಬೇರಾದ ಅಸಮಾನತೆಯನ್ನು ಕೊಚ್ಚಿಹಾಕದೆ ವರ್ಣವ್ಯವಸ್ಥೆಯನ್ನು ನಿರ್ನಾಮ ಮಾಡಲು ಸಾಧ್ಯವಿಲ್ಲ. ಬಹುಜನರಿಗೆ ನ್ಯಾಯ ಒದಗಿಸಲು ಸಾಧ್ಯವಿಲ್ಲ. ಶೋಷಣೆಯ ಮೂಲವಾದ ಕರ್ಮಸಿದ್ಧಾಂತವು ಮೂಢನಂಬಿಕೆಯ ಆಗರವಾಗಿದೆ; ಭೇದಭಾವದ ಗಂಗೋತ್ರಿಯಾಗಿದೆ. ಈ ಕರ್ಮಸಿದ್ಧಾಂತವು ಲೋಕಕ್ಕೆ ಪುಣ್ಯ, ಮೋಕ್ಷ ಮತ್ತು ಸ್ವರ್ಗದ ಆಸೆ ಹಚ್ಚಿಸಿದೆ. ಪಾಪ, ನರಕ ಮತ್ತು ದುಃಖದಿಂದ ಕೂಡಿದ ಪುನರ್ಜನ್ಮದ ಭಯ ಹುಟ್ಟಿಸಿದೆ. 'ಭಯವೇ ಧರ್ಮದ ಮೂಲ' ಎನ್ನುವಂತೆ ಧರ್ಮದ ರೂಪುರೇಷೆಗಳನ್ನು ಸೃಷ್ಟಿಸಲು ಸಹಕಾರಿಯಾಗಿದೆ. ಮಾನವನ ಸುಖ ಮತ್ತು ದುಃಖಗಳು ಪೂರ್ವ ನಿರ್ಧಾರಿತ ಎಂಬ ಭ್ರಮೆಯನ್ನು ಸೃಷ್ಟಿಸಿದೆ. 'ಇದು ಶುಭಗಳಿಗೆ, ಇದು ಕೆಟ್ಟಗಳಿಗೆ' ಎಂದು ಕಾಲನಿರ್ಣಯ ಮಾಡಿದೆ. ನಮ್ಮ ಹಸ್ತರೇಖೆಗಳು ನಮ್ಮನ್ನು ಭವಿಷ್ಯದ ಕಡೆಗೆ ಒಯ್ಯುವ ದಾರಿಪಟ ಎಂಬ ನಂಬಿಕೆಗೆ ಕಾರಣವಾಗಿವೆ. ಜನ್ಮಜನ್ಮಾಂತರಗಳಲ್ಲಿ ರಾಶಿಯಾಗುತ್ತ ಬಿದ್ದಿರುವ ಸಂಚಿತ ಕರ್ಮ, ನಿಕಟಪೂರ್ವ ಜನ್ಮದ ಪ್ರಾರಬ್ಧ ಕರ್ಮ ಮತ್ತು ಮುಂಬರುವ ಜನ್ಮದಲ್ಲಿ ಬರುವ ಆಗಾಮಿ ಕರ್ಮಗಳ ಸುಳ್ಳು ಸೃಷ್ಟಿಯ ಮೂಲಕ ಮಾನವ ಸಮಾಜ ಎಂದೆಂದೂ ಬದಲಾಗದೆ ಮನೋರೋಗಿಗಳ ತಾಣವಾಗುವಂತೆ ನೋಡಿಕೊಂಡಿದೆ.

'ಲಿಂಗವ ಪೂಜಿಸಿ ಫಲವೇನಯ್ಯಾ
ಸಮರತಿ, ಸಮಕಳೆ, ಸಮಸುಖವನರಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ

ಕೂಡಲಸಂಗಮದೇವರ ಪೂಜಿಸಿ

ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?' (ವ.ಶಾ.ಸಾ.ವ. ೨೫೮೯)

ಬಸವಣ್ಣನವರು ತಿಳಿಸಿದ ಇಷ್ಟಲಿಂಗ ಪೂಜೆ ಎಲ್ಲ ಅನಿಷ್ಟಗಳಿಗೆ ಮಾರಕವಾಗಿದೆ. ಇದೊಂದು ಅರಿವಿನ ಮಾರ್ಗವಾಗಿದೆ. ಮನುಷ್ಯರನ್ನು ಎಲ್ಲ ರೀತಿಯ ಮೂಢನಂಬಿಕೆಗಳಿಂದ ಹೊರತಂದು ಎಲ್ಲರೀತಿಯ ಸಮಾನತೆಯ ಕಡೆಗೆ ಒಯ್ಯುವಂಥದ್ದಾಗಿದೆ. 'ಪುರುಷರು ಮೇಲು ಮತ್ತು ಸ್ತ್ರೀಯರು ಕೀಳು' ಎಂಬ ಲಿಂಗಭೇದ ಮಾಡದೆ ಇರುವುದು (ಸಮರತಿ), 'ಬ್ರಹ್ಮಕಳೆ' 'ಕ್ಷಾತ್ರಕಳೆ' ಎಂದು ವರ್ಣಭೇದ ಮಾಡದೆ ಇರುವುದು (ಸಮಕಳೆ), 'ಬಡವ' ಮತ್ತು 'ಶ್ರೀಮಂತ' ಎಂಬ ವರ್ಗಭೇದ ಮಾಡದೆ ಇರುವುದು (ಸಮಸುಖ) ಲಿಂಗಪೂಜಾ ಫಲವಾಗಿದೆ. ಅಲ್ಲದಡೆ ನದಿಯೊಳಗೆ ನದಿ ಬೆರೆಸಿದಂತೆ ಸಕಲಜೀವಾತ್ಮರೊಂದಿಗೆ ಒಂದಾಗಿ ಬದುಕುವ ಅರಿವು ಕೂಡ ಇಷ್ಟಲಿಂಗಪೂಜಾ ಫಲವೇ ಆಗಿದೆ. ಹೀಗೆ ಜಾತಿ, ವರ್ಣ, ವರ್ಗ ಮತ್ತು ಲಿಂಗಭೇದಗಳನ್ನು ಅಲ್ಲಗಳೆದು ಸಮತಾವಾದಿ ಸಮಾಜವನ್ನು ಸ್ಥಾಪಿಸುವುದೇ ವಚನಕಾರರ ಗುರಿಯಾಗಿದೆ. ವಚನಕಾರಧರ್ಮ ಎಂದರೆ ಸಮಾನತೆಯ ತತ್ತ್ವಜ್ಞಾನದಿಂದ ಕೂಡಿದ ಜೀವನವಿಧಾನ.

'ಫಲಾಪೇಕ್ಷೆ ಇಲ್ಲದೆ ಕರ್ಮಮಾಡು' ಎಂದು ಭಗವದ್ಗೀತೆ ಹೇಳುತ್ತದೆ. ಆದರೆ ಫಲಾಪೇಕ್ಷೆ ಇಲ್ಲದೆ ಲಿಂಗಪೂಜೆಯನ್ನೂ ಮಾಡಬೇಡ ಎಂದು ದುಡಿಯುವ ವರ್ಗದ ನಾಯಕ ಬಸವಣ್ಣನವರು ತಿಳಿಸುತ್ತಾರೆ. 'ಲಿಂಗಪೂಜಿಸಿ ಫಲವೇನಯ್ಯಾ' ಎಂಬುದು ಬಸವಣ್ಣನವರು ಲಿಂಗವಂತರಿಗೆ ಹಾಕಿದ ಪ್ರಶ್ನೆಯಾಗಿದೆ. ಬಸವಣ್ಣನವರು ಲಿಂಗಪೂಜಾ ಫಲವನ್ನು ಬಯಸುತ್ತಾರೆ. ಈ ಪೂಜಾ ಫಲವು ಭೌತಿಕವಾದುದಲ್ಲ, ಅರಿವಿಗೆ ಸಂಬಂಧಿಸಿದುದು. ಲಿಂಗಪೂಜಾ ಫಲವೆಂಬ ಅರಿವು ನಮ್ಮ ಒಳಲೋಕ ಮತ್ತು ಹೊರಲೋಕವನ್ನು ಒಂದಾಗಿಸುವಂಥದ್ದು. ಸಕಲ ಜೀವಾತ್ಮರ ಬಗ್ಗೆ ಸಮಾನತೆಯ ಭಾವ ತಾಳುವಂಥ ಅರಿವನ್ನು ಪಡೆಯುವುದೇ ಇಷ್ಟಲಿಂಗ ಪೂಜಾಫಲ.

ದೇವರ ಸಂಕೇತವಾದ ಇಷ್ಟಲಿಂಗದ ಪೂಜೆ ಎಂಬ ಶಿವಯೋಗದಿಂದ 'ದೊರೆಯುವ' ಪರಮಾತ್ಮ ಮತ್ತು ನಮ್ಮ ಅಂಗದಲ್ಲಿರುವ ಜೀವಾತ್ಮ ಒಂದಾಗಬೇಕು. ಆಗ ಜೀವಾತ್ಮನ ದೃಷ್ಟಿ ಪರಮಾತ್ಮನ ದೃಷ್ಟಿಯಾಗುತ್ತದೆ. ಆ ದೃಷ್ಟಿ ಸರ್ವರೀತಿಯ ಸಮಭಾವದಿಂದ ತುಂಬಿರುತ್ತದೆ. ಇದನ್ನು ಸಾಧಿಸಲಿಕ್ಕಾಗಿಯೇ ಇಷ್ಟಲಿಂಗ ಪೂಜೆ ಅಥವಾ ಶಿವಯೋಗದ ಸಾಧನೆ ಮಾಡುವುದು ಅವಶ್ಯವಾಗಿದೆ. ಹೀಗೆ ಸಾಧನೆ ಮಾಡಿದವರು ತಮ್ಮ ಆತ್ಮದಲ್ಲಿರುವ ಘನವನ್ನು ಅರಿತುಕೊಳ್ಳುತ್ತಾರೆ.

ಲಿಂಗಾಂಗಸಾಮರಸ್ಯವನ್ನು ಸಾಧಿಸಬೇಕಾದರೆ, ಹೀಗೆ ಜೀವಾತ್ಮನು ಸಮಭಾವದ ಮೂಲಕ ಜಂಗಮಾತ್ಮನಾದಮೇಲೆ ಪರಮಾತ್ಮನ ಜೊತೆ ಒಂದಾಗುವ ಯೋಗ್ಯತೆಯನ್ನು ಪಡೆಯಲು ಸಾಧ್ಯವಾಗುತ್ತದೆ. ಈ ರಹಸ್ಯವನ್ನು ಅರಿತು ಸಾಧಿಸುವುದೇ ಶಿವಯೋಗವೆಂಬ ಇಷ್ಟಲಿಂಗ ಪೂಜೆಯ ಫಲವಾಗಿದೆ.

ವ್ಯಕ್ತಿಯಾಗಿರುವ ಜೀವಾತ್ಮನು, ಸಾಮಾಜೀಕರಣಗೊಂಡು ಜಂಗಮಾತ್ಮನಾಗಲು ಸಮರತಿ, ಸಮಕಳೆ ಮತ್ತು ಸಮಸುಖದ ಅರಿವನ್ನು ಪಡೆಯಬೇಕು. ಆಗ ಆತನು ತನ್ನೊಳಗಿನ ಪರಮಾತ್ಮನನ್ನು ಅರಿಯಲು ಸಾಧ್ಯವಾಗುವುದು. ಹೀಗೆ ಒಳಗಿನ ಮೂಲಕ ಹೊರಗಿನದನ್ನು ಮತ್ತು ಹೊರಗಿನ ಮೂಲಕ ಒಳಗಿನದನ್ನು ನಿರಂತರವಾಗಿ ಅರಿಯುತ್ತ ವ್ಯಕ್ತಿತ್ವ ವಿಕಸನಗೊಂಡು ವಿಶ್ವಮಾನವರಾಗುವುದೇ ವಚನಕಾರರ ಗುರಿಯಾಗಿತ್ತು. ಹೀಗೆ ಈ ಲಿಂಗತತ್ತ್ವವು ಮನಸ್ಸನ್ನು ಒಂದಾಗಿಸುವ ತತ್ತ್ವವಾಗಿದೆ. ಲೇಸನ್ನೇ ಬಯಸುವ ವಚನಕಾರರು ನದಿಯೊಳಗೆ ನದಿ ಬೆರತಂತೆ ಇಡೀ ಮಾನವಕುಲದೊಂದಿಗೆ ಬೆರೆಯುತ್ತಾರೆ. ಎಲ್ಲವೂ ಇಷ್ಟಲಿಂಗದಲ್ಲೇ ಇರುವುದರಿಂದ ಇಷ್ಟಲಿಂಗ ಪೂಜೆ ಎಂಬುದು ವಿಶ್ವದ ಪೂಜೆ ಆಗುತ್ತದೆ. ಈ ಕ್ರಮದೊಂದಿಗೆ ವಚನಕಾರರು ಎಲ್ಲ ಧರ್ಮಗಳವರೊಂದಿಗೆ ಬೆರೆತು ಮಾನವಕುಲವನ್ನು ಒಂದಾಗಿಸುವ ಶಕ್ತಿಯನ್ನು ಪಡೆಯುತ್ತಾರೆ. ಮಾನವ ಕುಲವನ್ನು ಒಂದಾಗಿಸುವಲ್ಲಿ ಅಡ್ಡ ಬರುವ ಎಲ್ಲವನ್ನೂ ವಚನಕಾರರು ಎದುರಿಸಲು ಸಿದ್ಧವಾಗುತ್ತಾರೆ.

ಲಿಂಗಭೇದ, ವರ್ಣಭೇದ, ಜಾತಿಭೇದ, ವರ್ಗಭೇದ, ಕೋಮುವಾದ ಮತ್ತು ಉಗ್ರವಾದದಿಂದಾಗಿ ೨೧ನೇ ಶತಮಾನದ ಜಗತ್ತು ನರಳುತ್ತಿದೆ. ಬಸವಣ್ಣನವರು ಹೇಳಿದಂತೆ ಮನುಷ್ಯರು ನದಿಯೊಳಗೆ ನದಿ ಕೂಡಿದ ಹಾಗೆ ಒಂದಾಗುವುದರಿಂದ ಮಾತ್ರ ಈ ಎಲ್ಲ ದುರಂತಗಳಿಂದ ಪಾರಾಗಲು ಸಾಧ್ಯ.

'ವೇದಕ್ಕ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗವಳವನಿಕ್ಕುವೆ,
ತರ್ಕದ ಬೆನ್ನಬಾರವನೆತ್ತುವೆ, ಆಗಮದ ಮೂಗ ಕೊಯಿವೆ,
ನೋಡಯ್ಯಾ ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ.'

(ಸ.ವ.ಸಂ:೧ ವ.ಸಂ, ೭೧೭)

ಎಂದು ಬಸವಣ್ಣನವರು ಹಳೆಯ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ತಿರಸ್ಕರಿಸಿದ್ದರಿಂದಲೆ ನವಸಮಾಜದ ನಿರ್ಮಾಣ ಮಾಡಲು ಸಾಧ್ಯವಾಯಿತು. ಆದರೆ ಪಟ್ಟಭದ್ರ ಹಿತಾಸಕ್ತಿಗಳು ಈ ವ್ಯವಸ್ಥೆಯನ್ನು ಆರಂಭದಲ್ಲೇ ಕೊಚ್ಚಿಹಾಕಿದವು.

ಶರಣ ಸಂಸ್ಕೃತಿ ವಚನಗಳಲ್ಲಿ ಜೀವಂತವಿರುವುದು ಸಮಾಧಾನದ ಸಂಗತಿ. ಅದನ್ನು ಬದುಕಿಗೆ ಅಳವಡಿಸಿಕೊಳ್ಳುವುದರ ಮೂಲಕ ಜನಸಮುದಾಯವನ್ನು ವೈದಿಕ ಸಂಸ್ಕೃತಿಯಿಂದ ಮತ್ತು ಅದಕ್ಕೆ ಪೂರಕವಾಗಿರುವ ಸಾಮ್ರಾಜ್ಯಶಾಹಿ ಸಂಸ್ಕೃತಿಯಿಂದ ವಿಮೋಚನೆಗೊಳಿಸುವುದು ತುರ್ತು ಅವಶ್ಯಕತೆಯಾಗಿದೆ.

'ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ
ಸಲಿಗೆವಂತರಾಗಿ ಒಳಗೈದಾರೆ.

ಆನು ದೇವಾ ಹೊರಗಣಣವನು.

'ಸಂಬೋಳಿ', 'ಸಂಬೋಳಿ' ಎನ್ನುತ್ತ ಇಂಬಿನಲ್ಲಿ ಇದ್ದೇನೆ.

ಕೂಡಲಸಂಗಮದೇವಾ

ನಿಮ್ಮ ನಾಮವಿಡಿದ ಅನಾಮಿಕ ನಾನು.'

(ಸ.ವ.ಸಂ:೧ ವ.ಸಂ, ೯೩೪)

ಬಸವಣ್ಣನವರು ಅಸ್ಪೃಶ್ಯರ ಜೊತೆ ಒಂದಾಗುವ ಕ್ರಮವಿದು. ಅವರು ಈ ವಚನದಲ್ಲಿ ಬಳಸಿದ 'ಹೊರಗಣವನು', 'ಸಂಬೋಳಿ', 'ಇಂಬು' (ದೂರ), 'ಅನಾಮಿಕ' ಪದಗಳು ಅಸ್ಪೃಶ್ಯನನ್ನು ಸೂಚಿಸುತ್ತವೆ. 'ತಾನೂ ಅಸ್ಪೃಶ್ಯ' ಎಂದು ಬಸವಣ್ಣನವರು ಒತ್ತಿಹೇಳಿದ್ದಾರೆ. ಅಲ್ಲದೆ ಬೂಟಾಟಿಕೆಯ ಭಕ್ತರು ಸ್ಥಾವರಲಿಂಗದೇವರ ಮಂದಿರದಲ್ಲಿ ಸಲಿಗೆವಂತರಾಗಿ ಇದ್ದುದಕ್ಕೆ 'ಮಹಿಮರು' ಎಂದು ವ್ಯಂಗ್ಯವಾಡಿದ್ದಾರೆ. ಗುಡಿಯ ಒಳಗಡೆ ಪ್ರವೇಶ ಸಿಗದ ಅಸ್ಪೃಶ್ಯರ ಜೊತೆಗೆ ಹೊರಗಡೆ ನಿಂತು ಒಳಗಿದ್ದವರಿಗೆ ಎಚ್ಚರಿಸುತ್ತಿದ್ದಾರೆ. ('ಸಂಬೋಳಿ' ಪದಕ್ಕೆ 'ಎಚ್ಚರ' ಎಂಬ ಅರ್ಥವೂ ಇದೆ.)

'ಗೋತ್ರನಾಮವ ಬೆಸಗೊಂಡಡೆ

ಮಾತು ನೂಕದೆ ಸುಮ್ಮನಿದ್ದಿರಿದೇನಯ್ಯಾ?

ತಲೆಯ ಕುತ್ತಿ ನೆಲನ ಬರೆವುತ್ತಿದ್ದಿರಿದೇನಯ್ಯಾ?

ಗೋತ್ರನಾಮ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯನೆಂಬುದೇನು

ಕೂಡಲಸಂಗಯ್ಯ.' (ಸ.ವ.ಸಂ:೧ ವ.ಸಂ, ೭೪೫)

ಬಸವಣ್ಣನವರು ಈ ವಚನದಲ್ಲಿ ದೇವರನ್ನೂ ಅಸ್ಪೃಶ್ಯರ ಸಾಲಿನಲ್ಲಿ ತಂದು ನಿಲ್ಲಿಸುತ್ತಾರೆ. ಮಾದಾರ ಚೆನ್ನಯ್ಯ ಮತ್ತು ಡೋಹರ ಕಕ್ಕಯ್ಯನವರನ್ನು ದೇವರ ಗೋತ್ರಪುರಷರನ್ನಾಗಿ ಮಾಡುತ್ತಾರೆ!

ಶಿವಪುರಾಣದ ಪ್ರಸಂಗವೊಂದು ಈ ವಚನಕ್ಕೆ ಹಿನ್ನಲೆಯಾಗಿದೆ. 'ಗಿರಿಜಾಕಲ್ಯಾಣ'ದ ಸಂದರ್ಭದಲ್ಲಿ ವರನಾದ ಶಿವನಿಗೆ ಮದುವೆ ಮಾಡಿಸುವ ಪುರೋಹಿತ ಗೋತ್ರನಾಮ ಕೇಳುತ್ತಾನೆ. ಗೋತ್ರವಿಲ್ಲದ ಅವೈದಿಕ ಶಿವ ಕಕ್ಕಾಬಿಕ್ಕಿಯಾಗುತ್ತಾನೆ. ಆತನ ಬಾಯಿಯಿಂದ ಮಾತುಗಳು ಹೊರಡುವುದಿಲ್ಲ, ಏನೂ ತೋಚದವನಾಗಿ ತಲೆ ಕೆಳಗೆ ಮಾಡಿ ಹೆಬ್ಬೆರಳಿನಿಂದ ನೆಲ ಗೀಚತೊಡಗುತ್ತಾನೆ! ಈ ಪುರಾಣ ಪ್ರಸಂಗದಿಂದ ಬಸವಣ್ಣನವರು ಸಿಡಿಮಿಡಿಗೊಂಡಿದ್ದಾರೆ. ನಿಮ್ಮದು ಮಾದಾರ ಚೆನ್ನಯ್ಯನ ಗೋತ್ರ-ಡೋಹರ ಕಕ್ಕಯ್ಯನ ಗೋತ್ರ ಎಂಬುದು ಗೊತ್ತಿಲ್ಲವೆ ಎಂದು ಈ ವಚನದಲ್ಲಿ ದೇವರನ್ನು 'ಗದರಿಸಿದ್ದಾರೆ'. ಜಾತೀಯತೆ ಬಗ್ಗೆ ಬಸವಣ್ಣನವರಿಗೆ ಇದ್ದ ತೀವ್ರ ತಿರಸ್ಕಾರಕ್ಕೆ ಈ ವಚನ ಸಾಕ್ಷಿಯಾಗಿದೆ.

ತಾವು ಸಾಕ್ಷಾತ್ಕರಿಸಿಕೊಂಡ ಸತ್ಯದ ಪ್ರತಿಪಾದನೆಗೆ ಬಸವಣ್ಣನವರು, ಮಾನವ ಕುಲ ನಡೆದು ಬಂದ ದಾರಿಯ ಅರಿವಿನೊಂದಿಗಿನ ಬದುಕಿನ ವಾಸ್ತವತೆಯ ಜೊತೆಗೆ ಸಾಹಿತ್ಯದ ಸೃಜನಶೀಲತೆ

ಮತ್ತು ಪುರಾಣದ ಕಲ್ಪನೆಯನ್ನೂ ಬಳಸಿಕೊಳ್ಳುತ್ತಾರೆ. ಮೇಲಿನ ವಚನದಲ್ಲಿ ತಾವು ನಂಬದ ಪುರಾಣದ ಶಿವನನ್ನು ಮತ್ತು ತಾವು ನಂಬಿದ ಜೊತೆಗಾರರಾದ ಚನ್ನಯ್ಯ ಮತ್ತು ಕಕ್ಕಯ್ಯನವರನ್ನು ತಂದು ದಲಿತರ ಪರವಾಗಿ ನಿಂತು ಪುರಾಣದ ಶಿವನನ್ನು ಟೀಕಿಸುತ್ತಾರೆ.

ವೈದಿಕ ವ್ಯವಸ್ಥೆ ೧೨ನೇ ಶತಮಾನದಲ್ಲಿ ಜನಸಮುದಾಯದ ಮೇಲೆ ಯಾವರೀತಿ ಹಿಡಿತ ಸಾಧಿಸಿತ್ತು ಎಂಬುದನ್ನು ಈ ವಚನ ತಿಳಿಸುತ್ತದೆ. 'ತನಗೆ ಅನಿಸಿದ್ದೇ ಸತ್ಯ' ಎಂಬ ವೈದಿಕದ ಅಹಂಕಾರವನ್ನು ಬಸವಣ್ಣನವರು ಯಾವ ರೀತಿ ಪ್ರಶ್ನಿಸಿದರು ಎಂಬುದಕ್ಕೆ ಈ ವಚನ ಸಾಕ್ಷಿಯಾಗಿದೆ. 'ಮಮಕರ್ತ ಕೂಡಲಸಂಗನಶರಣರು ಅಕ್ಷಯರಧಿಕರು. ವಿಪ್ರರು ಕೀಳು ಜಗವೆಲ್ಲ ಅರಿಯಲು' ಎಂದು ಬಸವಣ್ಣನವರು ಹೇಳುತ್ತ ಹಳೆಯ ವ್ಯವಸ್ಥೆಯ ಕ್ರೌರ್ಯ ಮತ್ತು ಹೊಸವ್ಯವಸ್ಥೆಯ ಮಾನವೀಯತೆಯ ದರ್ಶನ ಮಾಡಿಸುತ್ತಾರೆ.

'ಜನನಸೂತಕ, ಕುಲಸೂತಕ, ರಜಃಸೂತಕ, ಎಂಜಲಸೂತಕ, ಪ್ರೇತಸೂತಕ ಎಂಬಿವಾದಿಯಾದ ಸರ್ವಸೂತಕಂಗಳು ಅಂಗಲಿಂಗ ಸಂಬಂಧಿಗಳಾದ ಲಿಂಗಭಕ್ತರಿಗಿಲ್ಲ ನೋಡಾ' ಎಂದು ಬಸವಣ್ಣನವರು ಸೂತಕ ಧರ್ಮವನ್ನು ತಿರಸ್ಕರಿಸಿ ಮಾನವರನ್ನು ಪರಿಶುದ್ಧತೆಯ ಕಡೆಗೆ ಒಯ್ಯುವಂಥ ಲಿಂಗವಂತ ಧರ್ಮದ ಮಹತ್ವವನ್ನು ಸಾರುತ್ತಾರೆ.

ತ್ರಿವಿದ ಸಾಹಿತ್ಯ : ವಚನ ಸಾಹಿತ್ಯ ಎಲ್ಲ ದೃಷ್ಟಿಯಿಂದಲೂ ಆಧುನಿಕ ಸಾಹಿತ್ಯವೇ ಆಗಿದೆ. ಅದರ ಶೈಲಿ ಕೂಡ ಆಧುನಿಕವಾದ ಗದ್ಯಶೈಲಿಗೆ ಸಮೀಪವಾಗಿದೆ. ಅದೇರೀತಿ ಹಾಡುಗಾರಿಕೆಗೆ ಬೇಕಾದ ಅಂಶಗಳನ್ನೂ ಒಳಗೊಂಡಿದೆ. ಹೀಗೆ ಗದ್ಯದ ದೇಹ ಮತ್ತು ಪದ್ಯದ ಜೀವವನ್ನು ಹೊಂದಿರುವ ಸಾಹಿತ್ಯ ಎಲ್ಲಿಯೂ ಕಾಣಸಿಗುವುದಿಲ್ಲ.

ವಚನಗಳು ಶಾಸ್ತ್ರ, ಸಾಹಿತ್ಯ ಮತ್ತು ಸಮಾಜವೆಂಬ ತ್ರಿವಿಧ ಅಂಶಗಳನ್ನು ಒಳಗೊಂಡಿವೆ. ಮೊದಲನೆಯದಾಗಿ ಧಾರ್ಮಿಕ ಸಾಹಿತ್ಯವಾಗಿರುವುದರಿಂದ ಇದರಲ್ಲಿ ಲಿಂಗವಂತ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ಆಚರಣೆ ಮತ್ತು ತತ್ತ್ವದ ವಿಚಾರಗಳಿವೆ. ಇದು ಸೃಜನಶೀಲ ಸಾಹಿತ್ಯವೂ ಆಗಿರುವುದರಿಂದ ಶಬ್ದಾರ್ಥದ ಜೊತೆಗೆ ಲಕ್ಷಣಾರ್ಥ ಮತ್ತು ಧ್ವನ್ಯರ್ಥಗಳು ಸಹಜವಾಗಿಯೇ ಮೂಡಿಬಂದಿವೆ. ಇವುಗಳ ಜೊತೆಗೇ ತತ್ತ್ವಾರ್ಥ ಮತ್ತು ಬೆಡಗಿನ ಅರ್ಥಗಳನ್ನೂ ಒಳಗೊಂಡಿವೆ. ಅನ್ಯೋಕ್ತಿ, ಅಲಂಕಾರ, ಪ್ರತಿಮೆ, ಪ್ರತೀಕ ಮುಂತಾದ ಕಾವ್ಯಮೀಮಾಂಸೆಯ ಇತರ ಅಂಶಗಳೂ ಸೇರಿಕೊಂಡಿವೆ. ಹೀಗೆ ಲಿಂಗಾಯತದ ಧರ್ಮಶಾಸ್ತ್ರವೇ ಆಗಿರುವ ವಚನಗಳು ಸಾಹಿತ್ಯಕವಾಗಿ ಸಾರ್ವತ್ರಿಕವಾಗಿವೆ. ಅಲ್ಲದೆ ಸಕಲ ಜೀವಾತ್ಮರ ಬಗೆಗಿನ ಕಾಳಜಿಯಿಂದಾಗಿ ಜನಮನವನ್ನು ಸೂರೆಗೊಳ್ಳುವ ಮೂಲಕ ಸಾಮಾಜಿಕವಾಗಿ ಮಹತ್ವದ್ದೆನಿಸುತ್ತದೆ. ಈ ಎಲ್ಲ ಕಾರಣಗಳಿಂದಾಗಿ ವಚನಗಳು ಶಾಸ್ತ್ರವೂ ಹೌದು, ಸಾಹಿತ್ಯವೂ ಹೌದು. ಅಷ್ಟೇ ಅಲ್ಲದೆ 'ನಡೆ ನುಡಿ ಸಿದ್ಧಾಂತ'ದ ಪರಿಣಾಮ ಬೀರುವ ನವಸಮಾಜದ ರೂಪುರೇಷೆಯೂ ಹೌದು.

"ಹನ್ನೆರಡನೆ ಶತಮಾನದ ವಚನಗಳಿಗೆ ಇರುವ ಉನ್ನತ ಮನ್ನಣೆ ಅವು ಒಂದು ವಿಶಿಷ್ಟ ಧಾರ್ಮಿಕ ಸಾಹಿತ್ಯ ಇಲ್ಲವೆ ಅವುಗಳನ್ನು ರಚಿಸಿದವರು ಧಾರ್ಮಿಕವಾಗಿ ಪೂಜ್ಯರು ಎಂಬೊಂದೇ ಕಾರಣಕ್ಕಾಗಿಯಲ್ಲ. ಆ ವಾಙ್ಮಯವನ್ನು ಕೇವಲ ಒಂದು ವಿಶಿಷ್ಟ ಮತಕ್ಕೆ ಸಂಬಂಧಿಸಿದುದೆಂದು ಪರಿಗಣಿಸಲಾಗುತ್ತಿದ್ದ ಕಾಲವೊಂದಿತ್ತು. ಆ ಮತದವರು ಮಾತ್ರ ಅದನ್ನು ಪೂಜ್ಯವೆಂದು ಭಾವಿಸಿಕೊಳ್ಳುತ್ತಿದ್ದರು.ಈಗ ಆ ಕಾಲ ಹಿಂದೆ ಸರಿದಿದೆ. ಸಾಹಿತ್ಯಿಕ ಧೋರಣೆಯವರೂ ತೀಕ್ಷ್ಣ ಆಸಕ್ತಿಯಿಂದ ಅದನ್ನು ಮತ್ತೆ ಮತ್ತೆ ಅಭ್ಯಸಿಸತೊಡಗಿದ್ದಾರೆ. ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಕವಾಗಿ ಆಧುನಿಕ ಕಾಲಕ್ಕೂ ಪ್ರಸ್ತುತವೆನಿಸಬಲ್ಲ ತತ್ವ, ನೀತಿ ಧೋರಣೆಗಳನ್ನು ಅಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಸೇರಿದ ನವೋದಯ ಸಾಹಿತಿಗಳು, ಪ್ರಗತಿಶೀಲರು, ನವ್ಯರು, ದಲಿತರು, ಬಂಡಾಯ ಸಾಹಿಗಳೇ ಮೊದಲಾದ ಪಂಥದವರೆಲ್ಲರೂ ವಚನಗಳ ಬಗೆಗೆ ಇಂದು ತಂತಮಗೆ ವಿಶಿಷ್ಟವಾದ ಆಸಕ್ತಿಯನ್ನೂ ಗೌರವ ದೃಷ್ಟಿಯನ್ನು ಹೊಂದಿದವರಾಗಿದ್ದಾರೆ. ಈ ವಿಧವಾದ ಸಾರ್ವತ್ರಿಕ ಗೌರವಾದರಕ್ಕೆ ಪ್ರಮುಖ ಕಾರಣಗಳನ್ನು ಹೀಗೆ ವಿವರಿಸಬಹುದು.

ವಚನ ಸಾಹಿತ್ಯ ಸೃಷ್ಟಿಯಾದುದು. ಘನಮನ ಸಂಪನ್ನರಿಂದ, ಉದಾತ್ತ ಬಾಳನ್ನು ಬಾಳಿದವರಿಂದ, ಹನ್ನೆರಡನೆಯ ಶತಮಾನದ ವಚನಕಾರರು ಜೀವನದ ಉನ್ನತ ಮೌಲ್ಯಗಳ ಪುನಃ ಶೋಧನೆಗಾಗಿ ತಮ್ಮ ಸುತ್ತ ಜೀವನವನ್ನು ಪರಂಪರೆಯನ್ನು ಅವುಗಳ ವಿವಿಧ ಸ್ತರಗಳಲ್ಲಿ ಆಳವಾಗಿ ತೀಕ್ಷ್ಣವಾಗಿ, ನಿರಂಕುಶಮತಿಯಿಂದ ಪರಿಶೀಲನೆಗೊಳಪಡಿಸಿದರು. ಆ ಪರಿಶೀಲನೆ ಪರೀಕ್ಷೆಗಳಿಗೆ ತಮ್ಮ ಅಂತರಂಗ ಬಹಿರಂಗ ಜೀವನವನ್ನು ಮೊದಲು ಒಪ್ಪಿಕೊಂಡರು. ಲೋಕದ ಡೊಂಕನ್ನು ತಿದ್ದುವುದಷ್ಟೇ ಅವರಿಗೆ ಮಹತ್ವದ್ದಾಗಿರಲಿಲ್ಲ. ತಂತಮ್ಮ ತನು–ಮನ ಸಂತೈಸಿಕೊಳ್ಳುವುದು, ಅರ್ಥೈಸಿಕೊಳ್ಳುವುದು ಘನ ಉದ್ದೇಶಕ್ಕೆ ಮುಡಿಪಿಟ್ಟುಕೊಳ್ಳುವುದೂ ಅಷ್ಟೇ ಮಹತ್ವದ್ದಾಗಿದ್ದಿತು"೬

ವಚನ ಸಾಹಿತ್ಯವು ಸಮಷ್ಟಿ ಪ್ರಜ್ಞೆಯಿಂದ ಕೂಡಿದ ಸಾಹಿತ್ಯವಾಗಿದೆ. ವಚನಕಾರರು ತಮ್ಮ ವಚನಗಳನ್ನು ಸಮಾಜೋ ಆಧ್ಯಾತ್ಮಿಕ ಸಂಸತ್ ಆಗಿದ್ದ ಅನುಭವ ಮಂಟಪದಲ್ಲಿ ಮಂಡಿಸಬೇಕಿತ್ತು. ಅಲ್ಲಿ ಚರ್ಚೆ ನಡೆದ ನಂತರವೇ ಅದಕ್ಕೆ ಅನುಭಾವ ಎಂಬ ಆಧ್ಯಾತ್ಮಿಕ, ಧಾರ್ಮಿಕ, ಸಾಹಿತ್ಯಕ ಮತ್ತು ಸಾಮಾಜಿಕ ಮಹತ್ವ ಬರುತ್ತಿತ್ತು. ಈ ರೀತಿ ಸಾಮಾಜಿಕವಾಗುವ ಮತ್ತು 'ನಡೆ ನುಡಿ ಸಿದ್ಧಾಂತ'ದಿಂದ ಕೂಡಿದ ವಚನ ಸಾಹಿತ್ಯದಂಥ ಸಮೂಹ ಸಾಹಿತ್ಯವೊಂದು ಧರ್ಮಗ್ರಂಥವಾಗಿರುವುದು ಜಗತ್ತಿನಲ್ಲಿ ಎಲ್ಲಿಯೂ ಕಾಣಸಿಗುವುದಿಲ್ಲ. ವಚನಕಾರರ ನಂತರ ಎಷ್ಟೋ ಶತಮಾನಗಳಾದ ಮೇಲೆ ಅಂದರೆ ೧೭೦೮ರಲ್ಲಿ ಸಿಖ್ಖರು ಸ್ವೀಕರಿಸಿದ 'ಗುರು ಗ್ರಂಥಸಾಹೇಬ್' ಧರ್ಮಗ್ರಂಥವೊಂದನ್ನು ಬಿಟ್ಟರೆ ಜಗತ್ತಿನಲ್ಲಿ ದೇವರನ್ನು ನಂಬುವ ಎಲ್ಲ ಧರ್ಮಗ್ರಂಥಗಳು ದೇವರ ವಾಕ್ಯಗಳಾಗಿವೆ. ದೇವರು ಮನುಷ್ಯರಿಗೆ ಹೇಳಿದ ಕ್ರಮ ಅವುಗಳಲ್ಲಿದೆ. ಆದರೆ ಲಿಂಗವಂತ ಧರ್ಮಗ್ರಂಥ 'ಗುರುವಚನ' ದೇವರ ವಾಕ್ಯಗಳಿಂದ ಕೂಡಿಲ್ಲ. ಸರ್ವ ಶರಣರ ವಚನಗಳಿಂದ ಕೂಡಿದೆ. ಬಸವಣ್ಣನವರು ಪದೆ ಪದೆ 'ಗುರುವಚನ' ಪದಪ್ರಯೋಗ ಮಾಡಿದ್ದಾರೆ. 'ಗುರುವಚನ' ಎಂದರೆ ಬರಿ ಬಸವಣ್ಣವರ ವಚನಗಳಲ್ಲ.

ಸತ್ಯಶುದ್ಧ ಶರಣರೆಲ್ಲ ತಮ್ಮೊಳಗಿನ ದೇವರಿಗೆ ಮಾಡಿಕೊಂಡ ನಿವೇದನೆಯೆ 'ಗುರುವಚನ' ತಮ್ಮ ನಡೆ ನುಡಿ ಸಿದ್ಧಾಂತದ ಕುರಿತು ಅವರೆಲ್ಲ ವಚನಗಳ ಮೂಲಕ ತಮ್ಮೊಳಗಿನ ದೇವರಿಗೆ ವರದಿ ಒಪ್ಪಿಸಿದ್ದಾರೆ.

ಮುಖ್ಯವಾಗಿ ಬಸವಣ್ಣನವರ 'ಷಟ್‌ಸ್ಥಲದ ವಚನಗಳು; ಅಲ್ಲಮಪ್ರಭುದೇವರ 'ಮಂತ್ರಗೋಪ್ಯ' ಮತ್ತು ಚನ್ನಬಸವಣ್ಣನವರ 'ಕರಣಹಸಿಗೆ' ಗಳೆಂಬ ಮೂರು ಗ್ರಂಥಗಳು ಸೇರಿ ಲಿಂಗವಂತರ ಧರ್ಮಗ್ರಂಥ ಎಂಬ ಪರಿಭಾವನೆ ಶರಣರ ಚಳುವಳಿಯ ನಂತರದ ಮಧ್ಯಕಾಲೀನ ಲಿಂಗವಂತರಲ್ಲಿ ಅಸ್ತಿತ್ವಕ್ಕೆ ಬಂದಿತು. ಕಲ್ಯಾಣ ಹತ್ಯಾಕಾಂಡದ ನಂತರ ಮಠೀಯ ವ್ಯವಸ್ಥೆ ಲಿಂಗಾಯತರಲ್ಲಿ ಜಾರಿಗೆ ಬಂದು ಸ್ವಾಮಿಗಳ ಸೃಷ್ಟಿಯಾದಾಗ ಅವರನ್ನು ಮಠಕ್ಕೆ ಪಟ್ಟಗಟ್ಟುವ ಸಂದರ್ಭದಲ್ಲಿ ಗುರುಗಳು ಮೇಲೆ ತಿಳಿಸಿದ ಮೂರು ವಚನ ಕಟ್ಟುಗಳನ್ನು ಅವರ ಜೋಳಿಗೆಯಲ್ಲಿ ಹಾಕುತ್ತಿದ್ದರು. ಆದರೆ ಎಲ್ಲ ಶರಣರ ವಚನಗಳು ಕೂಡ ಲಿಂಗವಂತ ಧರ್ಮಗ್ರಂಥದ ಭಾಗಗಳು ಎಂಬುದು ಸಮಂಜಸವಾಗಿದೆ.

ಬಸವಣ್ಣನವರ ವಚನಗಳು ಭೂಮಿ ಪ್ರಧಾನವಾಗಿವೆ, ಅಲ್ಲಮಪ್ರಭುಗಳ ಮಂತ್ರಗೋಪ್ಯ ಬಾಹ್ಯಾಕಾಶ ಪ್ರಧಾನವಾಗಿದೆ. ಚನ್ನಬಸವಣ್ಣನವರ ಕರಣಹಸಿಗೆ ದೇಹ ಮತ್ತು ಮನಸ್ಸು ಪ್ರಧಾನವಾಗಿದೆ. ಹೀಗೆ ಲಿಂಗವಂತರ ಧರ್ಮಗ್ರಂಥ, ಭೂಮಿ (ಬಸವಣ್ಣನವರ ಲೋಕಜ್ಞಾನ), ಬಾಹ್ಯಕಾಶ (ಅಲ್ಲಮ ಪ್ರಭುಗಳ ವ್ಯೋಮಜ್ಞಾನ) ದೇಹ ಮತ್ತು ಮನಸ್ಸಿನ(ಚನ್ನಬಸವಣ್ಣನವರ ಸ್ವಯಂಜ್ಞಾನ) ಕಡೆಗೆ ಒಯ್ಯುವ ಮಾರ್ಗದರ್ಶಿಯಾಗಿದೆ. ಆದರೆ ಇತರ ಶರಣರ ವಚನಗಳು ಈ ಧರ್ಮಗ್ರಂಥವನ್ನು ಇನ್ನೂ ಪರಿಪೂರ್ಣಗೊಳಿಸುವ ಸಾಮರ್ಥ್ಯ ಹೊಂದಿವೆ.

'ಸಕಲಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು' ಎಂದು ಹೇಳುವಲ್ಲಿ ಬಸವಣ್ಣನವರ ಜೀವಕಾರುಣ್ಯ ಎದ್ದು ಕಾಣುತ್ತದೆ. ಮಾನವ ಈ ಜಗತ್ತಿನ ಕೇಂದ್ರಬಿಂದು ಅಲ್ಲ, ಸಕಲ ಜೀವಾತ್ಮರೇ ಈ ಜಗತ್ತಿನ ಕೇಂದ್ರಬಿಂದು ಎಂಬುದನ್ನು ಬಸವಣ್ಣನವರು ಈ ವಚನದಲ್ಲಿ ಸೂಚಿಸಿದ್ದಾರೆ. ಆಧುನಿಕ ಪರಿಸರ ವಿಜ್ಞಾನಿಗಳು ೨೦ನೇ ಶತಮಾನದಲ್ಲಿ ಹೇಳಿದ್ದನ್ನು ಬಸವಣ್ಣನವರು ೧೨ನೇ ಶತಮಾನದಲ್ಲೇ ಹೇಳಿದ್ದಾರೆ. 'ಜೀವಜಾಲದಲ್ಲಿದೆ ಚರಾಚರವೆಲ್ಲ' ಎಂದು ಬಸವಣ್ಣನವರು ಹೇಳುವ ಮೂಲಕ ಪರಿಸರದ ಮಹತ್ವವನ್ನು ಸಾರಿದ್ದಾರೆ. ವಸ್ತುಗಳು ಮತ್ತು ಜೀವಿಗಳೆಲ್ಲ ಜೀವಜಾಲದಲ್ಲಿ ಬರುತ್ತವೆ ಎಂದು ಈ ಕಾಲದ ಪರಿಸರ ವಿಜ್ಞಾನಿಗಳು ಹೇಳುತ್ತಿದ್ದಾರೆ. ಬಸವಣ್ಣನವರು ನಿಶ್ಚಲವಾದ ಹಿಮಾಲಯದಂಥ ಭೌತಿಕವಸ್ತುಗಳನ್ನು ಕೂಡ ಜೀವಜಾಲದಲ್ಲಿ ಸೇರಿಸಿದ ಮೊದಲಿಗರು.

ಕಾಯಕಜೀವಿಗಳು ವಸ್ತುಗಳ ಉತ್ಪಾದನೆ ಮಾಡುತ್ತಲೇ ತತ್ತ್ವ, ಸಾಹಿತ್ಯ ಮತ್ತು ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವಂಥ ಸಾಹಿತ್ಯ ರಚನೆ ಮಾಡಿದ್ದು ನಮಗೆಲ್ಲ ಮಾದರಿಯಾಗಿದೆ. ೨೧ನೇ ಶತಮಾನದ ಹಾಹಾಕಾರವನ್ನು ತಡೆಗಟ್ಟಲು ಮತ್ತು ಸರಳ ಸಹಜವಾದ ಸಮೃದ್ಧ ಬದುಕನ್ನು ಕಟ್ಟಲು ವಚನಗಳು ಬಹಳ ಅವಶ್ಯವಾಗಿವೆ. ಹೀಗೆ ವಚನ ಸಾಹಿತ್ಯ ಆಧುನಿಕ ಯುಗದಲ್ಲೂ

ಪ್ರಸ್ತುತವಾಗಿದೆ. ಬಸವಣ್ಣನವರು ಮಾನವ ಕುಲದ ವಿಮೋಚಕರಾಗಬೇಕಾದರೆ ಮಾನವರು ಮೊದಲಿಗೆ ತಮ್ಮನ್ನು ಅರಿತುಕೊಳ್ಳಬೇಕು. ಸತಿಪತಿ ಮಧುರಭಾವದ ಮಹತ್ವವನ್ನು ತಿಳಿದುಕೊಳ್ಳಬೇಕು. ಆಮೂಲಕ ಮಧುರಭಕ್ತಿಯ ಸಂಸ್ಕಾರ ಪಡೆಯಬೇಕು .ಆ ಮಧುರಭಕ್ತಿಯು ಅವರಿಬ್ಬರೊಳಗೆ ಶಾಂತಿ ಸಮಾಧಾನ ತರುವಂಥದ್ದಾಗಿರಬೇಕು. ಈ ಶಾಂತಿ ಸಮಾಧಾನದ ಸಂಸ್ಕಾರವು ಇಡೀ ಕುಟುಂಬವನ್ನು ಆವರಿಸಬೇಕು. ಮಕ್ಕಳು ಬೆಳೆಯಲು ಸಹಕಾರಿಯಾಗುವ ಇಂಥ ವಾತಾವರಣ ಮನೆಯಲ್ಲಿ ನಿರ್ಮಾಣವಾಗಬೇಕು. ಹೀಗೆ ಮಧುರಭಾವವು ಕುಟುಂಬವನ್ನು ಆವರಿಸಿದಾಗ ಮಕ್ಕಳು ಸುಸಂಸ್ಕೃತರಾಗಿ ಬೆಳೆಯುವರು. ನಂತರ ಸಮಾಜದಲ್ಲಿ ಬೆಳೆಯುವಾಗ ಅವರ ನಡತೆ ಶಾಂತಿ ಸಮಾಧಾನಕ್ಕೆ ಪೂರಕವಾಗಿರುವುದರಿಂದ ಸಹಜವಾಗಿಯೇ ಸಾಮಾಜಿಕ ನೆಲೆಯಲ್ಲಿ ಸಂಸ್ಕೃತಿ ಮತ್ತು ನಾಗರೀಕತೆಯ ವಿಕಸನಕ್ಕೆ ಅವರು ತಮ್ಮ ಅಳಿಲು ಸೇವೆ ಸಲ್ಲಿಸುವವರು. ಇಂಥ ಸಮಾನತೆಯ ಪ್ರಜ್ಞೆ ಮೂಡಿಸುವ ವ್ಯಕ್ತಿತ್ವ ವಿಕಸನ ಹೊಂದಿದವರೇ ಶರಣರು. ಇಂಥವರು ಯಾವ ದೇಶದಲ್ಲೇ ಇದ್ದರೂ ಕಳ್ಳರಾಗಿರುವುದಿಲ್ಲ; ಕೊಲೆಗಡುಕರಾಗಿರುವುದಿಲ್ಲ; ಸುಳ್ಳುಹೇಳುವವರಾಗಿರುವುದಿಲ್ಲ; ಸಿಟ್ಟಿನ ಕೈಗೆ ಬುದ್ಧಿಯನ್ನು ಕೊಡುವವರಾಗಿರುವುದಿಲ್ಲ; ತಮ್ಮನ್ನೇ ಹೊಗಳಿಕೊಳ್ಳುವಂಥ ಆತ್ಮರತಿಯಲ್ಲಿ ತೊಡಗಿರುವುದಿಲ್ಲ; ಪರನಿಂದೆಯನ್ನು ಮಾಡುವವರಾಗಿರುವುದಿಲ್ಲ; ಬೇರೆಯವರು ಟೀಕಿಸಿದಾಗ ಅವರು ಟೀಕಿಸಿದರೇಕೆ? ಎಂಬುವುದಕ್ಕೆ ಕಾರಣವನ್ನು ಹುಡುಕದೆ ಪ್ರತಿಯಾಗಿ ಟೀಕಿಸುವ ಅನಾಗರೀಕತೆಯನ್ನು ಪ್ರದರ್ಶಿಸುವವರಾಗಿರುವುದಿಲ್ಲ.

ಹೀಗೆ ಬದುಕುವುದರಿಂದ ಅಂತರಂಗ ಶುದ್ಧಿಯಾಗುತ್ತದೆ. ಬಹಿರಂಗದಲ್ಲಿ ಸಮಾಜದ ಶುದ್ಧಿಯಾಗುತ್ತದೆ. ಇಂಥ ಜೀವನಕ್ರಮದಿಂದ ಮಾತ್ರ ದೇವರನ್ನು ಒಲಿಸಲು ಸಾಧ್ಯ ಎಂಬುದು ಎಲ್ಲ ವಚನಕಾರರ ದೃಢನಿರ್ಧಾರವಾಗಿದೆ. ಈ ಮಾತಿನಲ್ಲಿ ವ್ಯಕ್ತಿ, ಕುಟುಂಬ , ಸಮಾಜ, ದೇಶ ಮತ್ತು ವಿಶ್ವದ ಸಂಬಂಧವನ್ನು ಹೊಸೆಯುವ ಶಕ್ತಿ ಇದೆ. ಇಂಥ ಶರಣರು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತಾರೆ. ಲೇಸನ್ನೇ ಬಯಸುವುದರಲ್ಲಿ ಶಾಂತಿ, ಪ್ರೀತಿ ಮತ್ತು ಸಮಾನತೆಯ ತತ್ತ್ವ ಅಡಗಿದೆ. ವ್ಯಕ್ತಿಯಿಂದ ವಿಶ್ವದವರೆಗೆ ಜೀವಜಾಲದ ಸಂಬಂಧ ಅಡಗಿದೆ. ಇಂಥ ಶರಣರಿದ್ದ ದೇಶ ಪಾವನವಾಗುತ್ತದೆ. ಅದುವೇ ವಿಶ್ವ ಶಾಂತಿಗೆ ಕಾರಣವಾಗುತ್ತದೆ. ಇಷ್ಟಲಿಂಗದಿಂದ ಅಂತರಂಗದ ಸಂಸ್ಕಾರ ಪಡೆದು ಬಹಿರಂಗದಲ್ಲಿ 'ಜಂಗಮಲಿಂಗ'ದ ಅಂದರೆ ಸರ್ವಸಮತ್ವಭಾವದಿಂದ ಕೂಡಿದ ಸಮಾಜವೆಂಬ ದೇವರ ಸೇವೆಯನ್ನು ದಾಸೋಹಂ ಭಾವದೊಂದಿಗೆ ಮಾಡಲು ಸಾಧ್ಯವಾಗುತ್ತದೆ. ವ್ಯಷ್ಟಿಯಿಂದ ಸಮಷ್ಟಿಯವರೆಗೆ, ಸರ್ವಸಮತ್ವದ ಪ್ರಜ್ಞೆಯಿಂದ ಮತ್ತು ಪ್ರೇಮಭಾವದಿಂಧ ಬದುಕುವುದೇ ಮಧುರಭಕ್ತಿ. ದಯವನ್ನೇ ಧರ್ಮದ ಮೂಲವಾಗಿಸಿ ವಿಶ್ವಕಲ್ಯಾಣವನ್ನು ಸಾಧಿಸುವ ಶಕ್ತಿ.

ಹಳೆಯ ಸಾಮಾಜಿಕ ವ್ಯವಸ್ಥೆ ಇಂಥ ಮಧುರಭಕ್ತಿಯ ಸಾಧನೆಗೆ ತೊಡಕಾಗುವುದನ್ನು ವಚನಕಾರರು ಗಮನಿಸಿದರು. ಹಳೆಯ ವ್ಯವಸ್ಥೆಯಿಂದಾಗಿ ಬಹುಪಾಲು ಜನಸಾಮಾನ್ಯರ ಬದುಕು ಕಷ್ಟಕರವಾಗಿತ್ತು. ಜಾತಿಭೇದದ ಕಾರಣ ಮೇಲ್ಜಾತಿಯವರು ಕೆಳಜಾತಿಯವರನ್ನು ಮುಟ್ಟಿಸಿಕೊಳ್ಳದಿರುವುದು,

ಹೆಣ್ಣು ಗಂಡಿನ ಮಧ್ಯದ ಭೇದಭಾವದಿಂದಾಗಿ ಹೆಣ್ಣನ್ನು ಕೀಳಾಗಿ ನೋಡುವುದು. ಬಡವರು ಮತ್ತು ಉಳ್ಳವರು ಎಂಬ ಭೇದದಿಂದ ಬಡವರನ್ನು ಕೀಳಾಗಿ ನೋಡುವುದು. ಮಹಿಳೆಯರು, ಕೆಳಜಾತಿ ಮತ್ತು ಹಿಂದುಳಿದ ಜಾತಿಗಳಿಗೆ ಶಿಕ್ಷಣವನ್ನು ಕೊಡದಿರುವುದು. ಎಲ್ಲ ರೀತಿಯಿಂದಲೂ ಅವರು ಸದಾ ಸೇವಕರಾಗಿಯೇ ಇರುವಂತೆ ನೋಡಿಕೊಳ್ಳುವುದು. ಅಸಮಾನತೆಯ ಸಮಾಜದಲ್ಲಿ ಕಾಯಕಜೀವಿಗಳ ಶೋಷಣೆ ಮಾಡುವುದರ ಮೂಲಕ ಐಹಿಕ ಸುಖವನ್ನು ಅನುಭವಿಸುತ್ತ ದಾಸಿಯರನ್ನು ಮತ್ತು ವೇಶ್ಯೆಯರನ್ನು ಸುಖದ ಸಾಧನಗಳಾಗಿ ಬಳಸಿಕೊಳ್ಳುವುದು ವೈದಿಕ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿತ್ತು.

ಪುರೋಹಿತಶಾಹಿಗಳು, ಅಧಿಕಾರಶಾಹಿಗಳು ಮತ್ತು ಕುಲೀನರು ಎನ್ನಿಸಿಕೊಳ್ಳುವವರು ಯಥಾಸ್ಥಿತಿವಾದಿಗಳಾಗಿ ಬದುಕುವಂಥ ಈ ಸಮಾಜವನ್ನು ಕಳೆದ ಐದುಸಾವಿರ ವರ್ಷಗಳಿಂದ ಪೋಷಿಸಿಕೊಂಡು ಬರಲಾಗಿತ್ತು. ಇಂಥವರ ಸುಖಲೋಲುಪತೆಗೆ ತಕ್ಕಂತೆ ಲೈಂಗಿಕ ಶಿಲ್ಪಗಳಿಂದ ಕೂಡಿದ ಬೃಹತ್ ದೇವಾಲಯಗಳನ್ನು ನಿರ್ಮಿಸುವುದು ಮತ್ತು ಆ ದೇವಾಲಯಗಳನ್ನು ದೇವದಾಸಿಯರಿಂದ ಕೂಡಿದ ಸುಖದ ತಾಣಗಳನ್ನಾಗಿಸುವುದು ಜಗಜ್ಜಾಹೀರವಾಗಿತ್ತು. ಮೃಷ್ಟಾನ್ನಭೋಜನ, ಹಾಡು, ಕುಣಿತ, ರಸಿಕತೆಯೊಂದಿಗೆ ಧನಕನಕ ಸಂಪತ್ತಿನ ರಕ್ಷಣಾ ತಾಣವನ್ನಾಗಿಯೂ ದೇವಾಲಯಗಳನ್ನು ಬೆಳೆಸುತ್ತ ಪಟ್ಟಭದ್ರರು ರಾಜ್ಯಸತ್ತೆಯನ್ನು ಕೂಡ ತಮ್ಮ ಅಂಕಿತದಲ್ಲಿಟ್ಟುಕೊಳ್ಳುವಂಥ ಸಾಮರ್ಥ್ಯ ಪಡೆದದ್ದನ್ನು ಬಸವಣ್ಣನವರು ಗಮನಿಸಿದರು. ರಾಜರ ಸ್ಥಾನದಿಂದ ಅಷ್ಟೇ ಅಲ್ಲದೆ ದೇವಸ್ಥಾನಗಳಿಂದಲೂ ಕಾಯಕಜೀವಿಗಳ ನಿರಂತರ ಶೋಷಣೆ ನಡೆಯುತ್ತಿರುವುದನ್ನು ಕೊನೆಗೊಳಿಸಿದರು. ದೇಗುಲಸಂಸ್ಕೃತಿಗೆ ತಿಲಾಂಜಲಿಯನ್ನಿಟ್ಟು ಭಕ್ತಿಸಾಮ್ರಾಜ್ಯದ ಸ್ಥಾಪನೆಗೆ ಪಣತೊಟ್ಟರು.

'ಕುಂಡಲಿಗನ ಕೀಟದಂತೆ ಮೈ ಮಣ್ಣಾಗದಂತೆ ಇದ್ದೆಯಲ್ಲಾ ಬಸವಣ್ಣ;
ಜಲದೊಳಗಣ ತಾವರೆಯಂತೆ ಹೊದ್ದಿ ಹೊದ್ದದಂತೆ ಇದ್ದೆಯಲ್ಲಾ ಬಸವಣ್ಣ;
ಜಲದಿಂದಾದ ಮೌಕ್ತಿಕದಂತೆ ಜಲವು ತಾನಾಗದಂತೆ ಇದ್ದೆಯಲ್ಲಾ ಬಸವಣ್ಣ;
ಗುಹೇಶ್ವರಲಿಂಗದಾಣತಿವಿಡಿದು ತನುಗುಣಮತ್ತರಾಗಿದ್ದ
ಐಶ್ವರ್ಯಾಂಧಕರ ಮತವನೇನ ಮಾಡಿ ಬಂದೆಯ್ಯೆ ಬಸವಣ್ಣ.'

(ವ.ಶಾ.ಸಾ.ವ. ೨೪೦೬)

ಬಸವಣ್ಣನವರು ಐಶ್ವರ್ಯಾಂಧಕರ ಮತಕ್ಕೆ ಗತಿಗಾಣಿಸಿದ್ದನ್ನು ಅಲ್ಲಮಪ್ರಭುಗಳು ಹೊಗಳಿದ ಕ್ರಮ ಬಸವಣ್ಣನವರ ಕರ್ತೃತ್ವ ಶಕ್ತಿಗೆ ಹಿಡಿದ ಕನ್ನಡಿಯಾಗಿದೆ.

ದೇವಸ್ಥಾನದ ಸಂಸ್ಕೃತಿಯು ಅಸ್ಪೃಶ್ಯತೆ, ಅಸಮಾನತೆ, ಭೇದಭಾವ ಮತ್ತು ಮೂಢನಂಬಿಕೆಯ ರಕ್ಷಣಾ ಸ್ಥಾನವಾಗಿದೆ. ಬಡವರ ಶೋಷಣೆ ಮತ್ತು ಶ್ರೀಮಂತರ ಅಭಿವೃದ್ಧಿಗೆ ಕಾರಣವಾಗಿದೆ. ಈ ಕಾರಣದಿಂದಲೇ ಶೋಷಕವರ್ಗ ದೇವಾಲಯಗಳನ್ನು ನಿರ್ಮಿಸಿತು. ಶೋಷಿತ ವರ್ಗ ಆ ದೇವರುಗಳ

ಮುಂದೆ ನಿಂತು ತಮ್ಮ ದುಃಖ ನಿವಾರಣೆಗೆ ಯತ್ನಿಸಿತು. ಹೀಗೆ ಶೋಷಕರ ವಾಸ್ತವ ಮತ್ತು ಶೋಷಿತರ ಭ್ರಮೆಗಳು ಒಟ್ಟೊಟ್ಟಿಗೆ ಸಾಗುತ್ತಿರುವುದನ್ನು ಬಸವಣ್ಣನವರು ಗಮನಿಸಿದರು. 'ಉಳ್ಳವರು ಶಿವಾಲಯ ಮಾಡಿಹರು, ನಾನೇನು ಮಾಡಲಿ ಬಡವನಯ್ಯಾ' ಎಂದು ಬಡವರ ಪರವಾಗಿ ನಿಂತರು. ಉಳ್ಳವರು 'ಶಿವಾಲಯಗಳನ್ನೇಕೆ ನಿರ್ಮಿಸುವರು?' ಎಂಬ ರಹಸ್ಯವನ್ನು ಬಹಿರಂಗಪಡಿಸಿದರು. ತಾವು ದೇಗುಲ ಸಂಸ್ಕೃತಿಯಿಂದ ದೂರವಾದವರು ಎಂಬುದನ್ನು ಬಸವಣ್ಣನವರು ಸ್ಪಷ್ಟಪಡಿಸಿದರು. 'ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ ಸ್ಥಾವರ ದೈವಕ್ಕೆರಗಲಾರಗದು' ಎಂದು ಎಚ್ಚರಿಸಿದರು. 'ವೇದ, ಶಾಸ್ತ್ರ ಆಗ ಮಂಗಳ ನೋದಿದವರು ಹಿರಿಯರೆ?.. .. .. ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?' ಎಂದು ಪ್ರಶ್ನಿಸಿ ಕಟ್ಟಕಡೆಯ ಮನುಷ್ಯನ ಮತ್ತು ಆತನ ಜೀವನಾನುಭವದ ಪರವಾಗಿ ವಾದಿಸಿದರು. ಗಿಳಿಪಾಠದ ಶಾಸ್ತ್ರ ಪಂಡಿತರು ಅದು ಹೇಗೆ ಹಿರಿಯರಾಗುತ್ತಾರೆ ಎಂದು ಪ್ರಶ್ನಿಸಿದರು.

'ಕಳ್ಳನಾಣ್ಯ ಸಲುಗೆಗೆ ಸಲ್ಲದು' ಎಂದು ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದರು. 'ಇಂದಿಂಗೆ ನಾಳಿಂಗೆ ಬೇಕೆಂದೆ ನಾದಡೆ ನಿಮ್ಮಾಣೆ' ಎಂದು ಸಂಗ್ರಹ ಬುದ್ಧಿಗೆ ಕಡಿವಾಣ ಹಾಕಿದರು. 'ಕಾಯಕವಾದುದೆಂದು ಬೆಸಗೊಂಡಡೆ ನಿಮ್ಮಾಣೆ' ಎಂದು ಎಲ್ಲ ಕಾಯಕ ಜೀವಿಗಳು ಸಮಾನರು ಎಂದು ಸೂಚಿಸಿದರು. 'ಒಮ್ಮೆ ಶರಣೆಂದಡೆ ಪಾಪ ಕರ್ಮ ಓಡುವವು' ಎಂದು ಕರ್ಮಸಿದ್ಧಾಂತದಿಂದ ತುಳಿತಕ್ಕೊಳಗಾದ ಜನರಲ್ಲಿ ಆತ್ಮವಿಶ್ವಾಸ ಮೂಡಿಸಿದರು. 'ಅಹಂಕಾರವೆಂಬಸದಮದಗಜವೇರಿ ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ' ಎಂದು ಶೋಷಕವರ್ಗದ ಕೃತ್ರಿಮ ಬದುಕಿನ ಬಗ್ಗೆ ವಿಷಾದ ವ್ಯಕ್ತಪಡಿಸಿದರು. 'ಏನಯ್ಯಾ ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ ತಮಗೊಂದುಬಟ್ಟೆ (ದಾರಿ), ಶಾಸ್ತ್ರಕ್ಕೊಂದು ಬಟ್ಟೆ!' ಎಂದು ಪುರೋಹಿತಶಾಹಿಗಳ ಜೀವನವಿಧಾನಕ್ಕ ಅಸಹ್ಯಪಟ್ಟರು. 'ಉಂಬು ಜಂಗಮ ಬಂದಡೆ ನಡೆಯಂಬರು; ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ' ಎಂದು ಸಾಮಾಜಿಕಪ್ರಜ್ಞೆ ಇಲ್ಲದೆ ಲಿಂಗಪೂಜೆ ಮಾಡುವುದು ನಿಷ್ಪ್ರಯೋಜಕ ಎಂದು ಸಾರಿದರು. 'ಕುಲಕ್ಕೆ ತಿಲಕ ನಮ್ಮ ಮಾದಾರಚನ್ನಯ್ಯ, ನಿಮ್ಮಿಂದಧಿಕ ಕೂಡಲಸಂಗಮದೇವಾ' ಎಂದು ತಿಳಿಸುತ್ತ ಮನುವಾದಿ ಸಮಾಜದಿಂದ ಬಂದ ಕಟ್ಟಕಡೆಯ ಮನುಷ್ಯರು ಕೂಡ ತಮ್ಮಸಚ್ಚಾರಿತ್ರ್ಯದ ವ್ಯಕ್ತಿತ್ವ ವಿಕಸನ ಹೊಂದುತ್ತ ದೇವರಿಗಿಂತದೊಡ್ಡವರಾಗಬಲ್ಲರು ಎಂಬ ಆಶಾಭಾವವನ್ನು ಮೂಡಿಸಿದರು. 'ನ್ಯಾಯನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ. ಲೋಕವಿರೋಧಿ ಶರಣನಾರಿಗಂಜುವವನಲ್ಲ' ಎಂದು ಅನ್ಯಾಯವನ್ನು ವಿರೋಧಿಸಿದರು. 'ಅಪ್ಪನು ನಮ್ಮ ಮಾದರ ಚನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ' ಎಂದು ಎಲ್ಲರನ್ನೂ ರಕ್ತ ಸಂಬಂಧದಿಂದ ಕರೆಯುತ್ತ ಮಾನವಕುಲದ ಏಕತೆಯ ಬಗ್ಗೆ ಅರಿವು ಮೂಡಿಸಿದರು. 'ಕೈಲಾಸವೆಂಬುದೇನೋ, ಪೃಥ್ವಿಯ ಮೇಲೊಂದು ಮೊರೆಡಿ' ಎಂದು ಸ್ವರ್ಗದ ಮಹತ್ವವನ್ನು ಅಲ್ಲಗಳೆದರು. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಜೀವಕಾರುಣ್ಯವೊಂದೇ ಧರ್ಮದ ತಳಹದಿ ಎಂಬುವುದನ್ನು ಲೋಕದ ಜನರಿಗೆ ತಿಳಿಸಿಕೊಟ್ಟರು. 'ಗಣತಿಂಥಿಣಿಯೊಳಗಿರಿಸೆನ್ನಲಿಂಗವೆ' ಎಂದು ಜನಸಾಗರದ ಮಧ್ಯೆ ತಮ್ಮ ಅಸ್ತಿತ್ವವನ್ನು ಕಂಡುಕೊಂಡರು.

'ಭಕ್ತಿ ಇಲ್ಲದ ಬಡವ ನಾನಯ್ಯ; ಕಕ್ಕಯ್ಯನ ಮನೆಯಲ್ಲೂಬೇಡಿದೆ, ಚನ್ನಯ್ಯನ ಮನೆಯಲ್ಲೂ ಬೇಡಿದೆ, ಎಂದು ಹೇಳುತ್ತ ಕೆಳಜಾತಿ ಮತ್ತು ಕೆಳವರ್ಗದ ಜನರ ಅನುಭವಗಳನ್ನು ಎತ್ತಿಹಿಡಿದು ಅವುಗಳಿಂದ ಪಾಠ ಕಲಿತಿರುವುದಾಗಿ ತಿಳಿಸಿದರು. ವಿವಿಧ ದೇವರುಗಳ ಆರಾಧಕರ ಮೂಲ ದೇವರು ಒಬ್ಬನೆ ಮತ್ತು ಆರಾಧಕರೆಲ್ಲರೂ ಒಂದೇ ಮಾನವ ಜನಾಂಗ ಒಂದೇ ಜಗತ್ತಿಗೆ ಸೇರಿದವರು ಎಂಬುದನ್ನು ಮನದಟ್ಟು ಮಾಡಿಕೊಟ್ಟರು. ಕರ್ಣದಲಿ ಜನಿಸಿದವರುಂಟೆ ಜಗದೊಳು?' ಎಂದು ಮುಂತಾಗಿ ಪ್ರಶ್ನಿಸುವ ಮೂಲಕ ಎಲ್ಲ ತೆರನಾದ ಮೂಢನಂಬಿಕೆಗಳನ್ನು ಬಸವಣ್ಣನವರು ಅಲ್ಲಗಳೆದರು. 'ಲಿಂಗವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯಾ' ಎಂದು ಬೇಡುವ ಮೂಲಕ ಆದರ್ಶಗಳಿಗೆ ಅಂಟಿಕೊಂಡು ಸಮಾಜಪ್ರೇಮಿಗಳಾಗಿರಬೇಕು ಎಂಬ ಭಾವ ವ್ಯಕ್ತಪಡಿಸಿದರು. ಹೀಗೆ ಬಸವಣ್ಣನವರಿಗೆ ಸಮಾಜವೇ ದೇವರಾಗಿದೆ. ಜನಸೇವೆಯೇ ಪೂಜೆ, ಪ್ರಾರ್ಥನೇಗಳಾಗಿವೆ. ವಚನಕಾರರ ಧರ್ಮವು ನಿಜವಾದ ಅರ್ಥದಲ್ಲಿ ಸಮಾಜಸೇವಾ ಧರ್ಮವಾಗಿದೆ. ಸರ್ವಸಮತ್ವವನ್ನು ಸಾಧಿಸುವ ಮಹಾಸಾಧನವಾಗಿದೆ.

ಪೃಥ್ವಿಯಿಂದ ಸಕಲ ಜೀವರೆಲ್ಲರೂ ಉದ್ಭವ ಗುಹೇಶ್ವರಾ' ಎಂದು ಅಲ್ಲಪ್ರಭುಗಳು ಹೇಳುವಲ್ಲಿ ಸಕಲ ಜೀವರಾಶಿಗಳ ಮಧ್ಯದ ಘನಸಂಬಂಧವನ್ನು ಸೂಚಿಸುತ್ತಾರೆ. ಸರ್ವಸಮತ್ವದ ಚಿಂತನೆಗೆ ಮೂಲ ಆಕರ ಒದಗಿಸುತ್ತಾರೆ. ಒಂದೇ ವಸ್ತು ತನ್ನ ಲೀಲೆಯಿಂದ ಪರಮಾತ್ಮ ಜೀವಾತ್ಮ ಎಂದಾಯಿತು' ಎಂದು ಉರಿಲಿಂಗಪೆದ್ದಿಗಳು ಜೀವ ಮತ್ತು ದೇವರ ಮಧ್ಯದ ಅವಿರತ ಸಂಬಂಧವನ್ನು ಗುರುತಿಸುತ್ತಾರೆ. ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ' ಎಂದು ಹೇಳುವ ಮೂಲಕ ನುಲಿಯ ಚಂದಯ್ಯನವರು, ಎಲ್ಲರೂ ಉತ್ಪಾದನೆಯಲ್ಲಿ ತೊಡಗಿದಾಗ ಮಾತ್ರ ಸರ್ವಸಮತ್ವದ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಸೂಚಿಸುತ್ತಾರೆ. ಕಯಕವೇ ಕೈಲಾಸವಾದ ಕಾರಣ ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು' ಎಂದು ಆಯ್ದಕ್ಕಿ ಮಾರಯ್ಯನವರು ಇನ್ನೂ ಮುಂದುವರಿದು ಮೇಲಿನ ಮಾತಿಗೆ ಪುಷ್ಟಿ ಕೊಡುತ್ತಾರೆ. 'ಕೃತ್ಯ ಕಯಕವಿಲ್ಲದವರು ಭಕ್ತರಲ್ಲ' ಎಂದು ಕಾಳವ್ವೆ ಹೇಳುತ್ತಾ ಉತ್ಪಾದನಾ ವ್ಯವಸ್ಥೆ ಮತ್ತು ಮಾನವಸಂಪನ್ಮೂಲದ ಮಹತ್ವವನ್ನು ಸಾರುತ್ತಾಳೆ. 'ಹದ ಮಣ್ಣಲ್ಲದೆ ಮಡಕೆಯಾಗಲಾರದು' ಎಂದು ಹೇಳುವ ಕೇತಲದೇವಿ, ಗುಣಮಟ್ಟದ ಉತ್ಪನ್ನವಿರಬೇಕು ಮತ್ತು ಬದುಕು ಕೂಡ ಹಾಗೇ ಉನ್ನತವಾಗಿ ಇರಬೇಕು ಎಂದು ಸೂಚಿಸುತ್ತಾಳೆ. ಲಂಚವಂಚನಕ್ಕೆ ಕೈಯಾನದಭಾಷೆ' ಎಂದು ಕಸಗುಡಿಸುವ ಸತ್ಯಕ್ಕ ಪ್ರತಿಜ್ಞೆ ಮಾಡುವುದರ ಮೂಲಕ ಸಮಾಜವು ಕಾಯಕದಿಂದ ಬದುಕಬೇಕೆ ಹೊರತು ಭ್ರಷ್ಟಾಚಾರದಿಂದ ಅಲ್ಲ ಎಂಬ ಸಂದೇಶವನ್ನು ನೀಡುತ್ತಾಳೆ. 'ಆನೆ ಕುದುರೆ ಭಂಡಾರವಿರ್ದಡೇನೊ ತಾನುಂಬುದು ಪಡಿಯಕ್ಕಿ' ಎಂದು ದೊರೆಯಾಗಿದ್ದ ಮಹಾದೇವ ಭೂಪಾಲರು, ಕಾಯಕ ಸಿದ್ಧಾಂತವನ್ನು ಸ್ವೀಕರಿಸಿ ಮೋಳಿಗೆಯಮಾರಯ್ಯನವರಾಗಿ ಸಂಗ್ರಹಬುದ್ಧಿಗೆ ಕಡಿವಾಣ ಹಾಕುತ್ತಾರೆ.

ಹೀಗೆ ಎಲ್ಲ ವಚನಕಾರರು ಜ್ಯಾತ್ಯತೀತ ಕಾಯಕತತ್ತ್ವವನ್ನು ಎತ್ತಿಹಿಡಿದಿದ್ದಾರೆ. ಬಸವತತ್ತ್ವ ಕಾಯಕತತ್ತ್ವ ಮತ್ತು ಇಷ್ಟಲಿಂಗತತ್ತ್ವ ಬೇರೆ ಅಲ್ಲ ಎಂದು ತೋರಿಸಿಕೊಟ್ಟಿದ್ದಾರೆ. ಸಮಾನತೆಯಿಂದ

ಕೂಡಿದ ಸಮಾಜದ ಬೇರುಗಳು ಯೋಗ್ಯ ರೀತಿಯಲ್ಲಿ ಉತ್ಪಾದನೆ, ಯೋಗ್ಯರಿತಿಯಲ್ಲಿ ಬಳಕೆ ಮತ್ತು ಯೋಗ್ಯರೀತಿಯಲ್ಲಿ ಸಾಮಾಜಿಕ ವಿತರಣೆ ಎಂಬ ಸೂತ್ರದ ಮೇಲೆ ನಿಂತಿವೆ ಎಂಬುದನ್ನು ಶರಣರು ಸೂಚಿಸಿದ್ದಾರೆ. ಇದನ್ನೇ ವಚನಕಾರರ ದೃಷ್ಟಿಯ ಪರಿಭಾಷೆಯಲ್ಲಿ 'ಕಾಯಕ-ಪ್ರಸಾದ –ದಾಸೋಹ' ಎಂದು ಹೇಳಲಾಗಿದೆ. ಕಾಯಕದಿಂದ ಬಂದದ್ದು ವೈಯಕ್ತಿಕ ಆಸ್ತಿಯಾಗುವುದು. ಅದನ್ನು ದೇವರ ಪ್ರಸಾದವಾಗಿ ಸ್ವೀಕರಿಸುವುದರಿಂದ ಸಮಾಜವೆಂಬ ದೇವರಿಗೆ ವಿನಿಯೋಗಿಸುವ ಜವಾಬ್ದಾರಿಯಿಂದಾಗಿ ಇತಿಮಿತಿಯಿಂದ ಬಳಸಬೇಕಾಗುವುದು. ಹೀಗೆ ಪ್ರಸಾದ ಪ್ರಜ್ಞೆಯು ಖಾಸಗಿ ಆಸ್ತಿಯನ್ನು ಸಾಮೂಹಿಕ ಆಸ್ತಿಯಾಗಿ ಪರಿವರ್ತಿಸುವುದು. ನಂತರ ಮಿಗುತಾಯವೆಲ್ಲ ದಾಸೋಹ ರೂಪದಲ್ಲಿ ಶಿವನಿಧಿಗೆ ಸೇರುವುದು. ಆ ಮೂಲಕ ಆರ್ಥಿಕ ಸಮಸ್ಯೆ ಬಗೆಹರಿದು ಸಾಮಾಜಿಕ ಸ್ವಾಸ್ಥಕ್ಕೆ ಕಾರಣವಾಗುವುದು. ಈ ಕ್ರಮದೊಂದಿಗೆ ವಚನಕಾರರ ದೃಷ್ಟಿಯಲ್ಲಿ ಮಾನವರು ವಿಶ್ವಮಾನವರಾಗುತ್ತಾರೆ. ಅನುಭವದ ಬದುಕಿನಲ್ಲಿ ಸಂಗ್ರಹವಾಗುವ ಖಾಸಗಿ ಆಸ್ತಿ, ಅನುಭಾವದ ಬದುಕಿನಲ್ಲಿ ಶಿವನಿಧಿಗೆ ಸಲ್ಲುವ ಮೂಲಕ ಸಾಮೂಹಿಕ ಆಸ್ತಿಯಾಗುತ್ತದೆ. ಆಗ 'ಎಲ್ಲವೂ ನನ್ನದು' ಎಂಬ ಭಾವವನ್ನು ಕಳೆದುಕೊಂಡು 'ಎಲ್ಲವೂ ನಮ್ಮದು' ಎಂಬ ಭಾವದೊಂದಿಗೆ ಕ್ರೀಯಾಶೀಲವಾಗಿ ಬದುಕುವಾಗ ಸಕಲಜೀವಿಗಳಿಗೆ ಲೇಸೆನಿಸುವ ಸಮಾಜದ ನಿರ್ಮಾಣವಾಗುವುದು.

ಕಳೆದ ಶತಮಾನದುದ್ದಕ್ಕೂ, ವಿಭಿನ್ನ ನೆಲೆಯ ವ್ಯಾಖ್ಯಾನಗಳಿಗೆ ಒಳಗಾಗಿರುವ ವಚನ ಸಾಹಿತ್ಯದ ತಾತ್ವಿಕ ವಿವೇಚನೆ, ಅನುಭಾವಿಕ ಸಾಹಿತ್ಯಿಕ ಮತ್ತು ವೈಚಾರಿಕ ಹೊಳಹುಗಳು, ಸಮಾಜೋ-ಧಾರ್ಮಿಕ ಆಯಾಮಗಳು ವಚನ ಸಾಹಿತ್ಯದ ಸಂಕೀರ್ಣ ಸ್ವರೂಪವನ್ನು ವಿದಿತಪಡಿಸುತ್ತವೆ. ಜೀವಪರತೆ ಮತ್ತು ಪ್ರಗತಿಪರತೆಯ ವಿಶಾಲ ಭಿತ್ತಿಯನ್ನು ಪರಿಚಯಿಸುತ್ತವೆ. ಧರ್ಮಶಾಸ್ತ್ರಗಳ ಸಾರವಾಗಿ ವಚನ ಸಾಹಿತ್ಯವನ್ನು ಪರಿಭಾವಿಸಿದ ಮೊದಲ ಹಂತದ ಆಲೋಚನಾ ಕ್ರಮದಿಂದ ದೂರ ಬಂದಿರುವ ಇಂದಿನ ವಚನಾಧ್ಯಯನವು ಹೆಚ್ಚೆಚು ಬದುಕಿಗಭಿಮುಖವಾಗುತ್ತಿದೆ. ಸಮಕಾಲೀನ ಸಂವೇದನೆಗಳಿಗಣುಗುಣವಾಗಿ ನಡೆದು ಬಂದಿರುವ ವಚನ ಸಾಹಿತ್ಯದ ಸಾಮಾಜಿಕ-ಸಾಹಿತ್ಯಿಕ-ಸಾಂಸ್ಕೃತಿಕ ಅಧ್ಯಯನಗಳು ವಚನ ಸಾಹಿತ್ಯದ ಅಂತಃ ಸತ್ವವನ್ನು ಅನಾವರಣಗೊಳಿಸಿವೆ. ಧರ್ಮ-ತತ್ವ-ಸಿದ್ಧಾಂತಗಳ ಮನನಿಷ್ಠನೆಲೆಯಿಂದ, ಸಮಾಜ-ಸಂಸ್ಕೃತಿ-ಮನುಷ್ಯಕೇಂದ್ರಿತ ಧರ್ಮನಿರಪೇಕ್ಷ ನೆಲೆಯನ್ನು ವಿಸ್ತರಿಸಿಕೊಂಡಿರುವ ವಚನಾಧ್ಯಯನವು ವಿಮೋಚನೆ-ವ್ಯಕ್ತಿಸ್ವಾತಂತ್ರ -ಸಮಾನತೆಯ ಜನಪರ ಆಧುನಿಕ ಸಂವೇದನೆಗಳಿಗೂ ಇತ್ಯಾತ್ಮಕವಾಗಿ ಸ್ಪಂದಿಸುತ್ತಿರುವುದು ವಚನ ಸಾಹಿತ್ಯದ ಮಾನವತಾವಾದಿ ಧೋರಣೆಯ ಉದಾತ್ತ ಆಶಯಗಳ ಸಂಕೇತವಾಗಿದೆ.

ಪುರುಷ ನಿಷ್ಠ ಮತ್ತು ಪ್ರಭುತ್ವ ಕೇಂದ್ರಿತ ಸಮಾಜ ವ್ಯವಸ್ಥೆಯು ತನ್ನ ಸೌಲಭ್ಯಕ್ಕಾಗಿ ಹುಟ್ಟು ಹಾಕಿದ ಎಲ್ಲ ರೀತಿಯ ಅಸಮಾನತೆಗಳನ್ನು, ಸಾಮಾಜಿಕ-ಸಾಂಸ್ಕೃತಿಕ ತರ ತಮಗಳನ್ನು ತಾತ್ವಿಕವಾಗಿ ಪ್ರತಿಭಟಿಸಿದ ವಚನಕಾರರು, ಲಿಂಗ, ವರ್ಗ-ಜಾತಿಯಾಧಾರಿತ ತಾರತಮ್ಯವನ್ನು ಚಾರಿತ್ರಿಕವಾಗಿ ವಿಶ್ಲೇಷಿಸಿದರು-ವ್ಯಕ್ತನಿಷ್ಠ ಪ್ರತಿಭೆ ಮತ್ತು ಸ್ವಯಾರ್ಜಿತ ಘನತೆ-ಅರ್ಹತೆಯನ್ನು ಅಪಮೌಲ್ಯಗೊಳಿಸಿ,

ಜಾತಿಧರ್ಮದ ಹೆಸರಿನಲ್ಲಿ ಮನುಷ್ಯ ಕುಲವನ್ನು ಶ್ರೇಣೀಕೃತ ವರ್ಗಗಳಾಗಿ ಒಡೆದು, ಮನುಷ್ಯ ಸಂಬಂಧಗಳಿಗೆ ಜಾತಿಮತದ ಹೆಸರು ಬಳಿದು ವಿರೂಪಗೊಳಿಸಿದ ವ್ಯವಸ್ಥೆಯ ಕ್ರೌರ್ಯವನ್ನು ಖಂಡಿಸಿದರು. ಸಮಾನತೆ-ಸಾಮರಸ್ಯದ ಬದುಕನ್ನು ಪುರಸ್ಕರಿಸಿದರು. ಹುಟ್ಟು-ಬದುಕು-ಭಾವನೆ, ಅಂತಿಮವಾಗಿ ಸಾವಿನಲ್ಲಿಯೂ ಸಮಾನಗುಣಧರ್ಮ ಹೊಂದಿದ್ದರೂ, ಮನುಷ್ಯರಲ್ಲಿ ಶ್ರೇಷ್ಠ-ಕನಿಷ್ಠತೆಯ ಅಸಹಜ ಗ್ರಹಿಕೆಗಳನ್ನು ಹುಟ್ಟುಹಾಕಿದ ಮೇಲ್ವರ್ಗದ ಸ್ವಾರ್ಥನೀತಿಯನ್ನು ವಿಮರ್ಶಿಸಿದರು. 'ಹೊಲೆಗೊಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ಜಲಬಿಂದುವಿನ ವ್ಯವಹಾರ ಒಂದೇ, ಆಶೆಯಾಮಿಶರೋಷ ಹರುಷ ವಿಷಯಂಗಳೆಲ್ಲ ಒಂದೇ' ಎಂಬ ಪ್ರಕೃತಿಯ ಸಮಾನ ತತ್ವವನ್ನು ಗುರುತಿಸಿದರು. ವೃತ್ತಿಗಳೇ ಜಾತಿಗಳಾಗಿ, ಅರ್ಥ-ಅಧಿಕಾರಶಕ್ತಿಯೇ ಅಂತಿಮವಾಗಿ ಮನುಷ್ಯ ಸಂಬಂಧಗಳನ್ನು ಸಮಾಜ ವ್ಯವಸ್ಥೆಯನ್ನು ನಿಯಂತ್ರಿಸಿದ ದುರಂತವನ್ನು ಸ್ಪಷ್ಟ ಪಡಿಸಿದರು.

ಸಾವಿರಾರು ವರ್ಷಗಳಿಂದ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಶವಾಗಿ ಬೇರು ಬಿಟ್ಟಿದ್ದ ಜಾತಿವ್ಯವಸ್ಥೆಯ ನಿರ್ಮೂಲನೆ ಮತ್ತು ಸರ್ವಸಮಾನತೆಯ ಪ್ರತಿಷ್ಠಾಪನೆಯ ವಚನಕಾರರ ಕಾರ್ಯವು ಪ್ರವಾಹ ವಿರೋಧಿ ಸಾಹಸವಾಗಿತ್ತು. ಕುಲ-ಅಧಿಕಾರ-ಬುದ್ಧಿಯ ಬಲದಿಂದ ಉನ್ಮತ್ತರಾಗಿದ್ದ ಮೇಲ್ವರ್ಗದವರ ಮೇಲರಿಮೆ-ದರ್ಪವನ್ನು ಕರಗಿಸುವುದು ಮತ್ತು ಅಜ್ಞಾನ ಅಸಹಾಯಕತೆ-ಅಧೀನತೆಯಲ್ಲಿ ನಲುಗಿ ಹೋಗಿದ್ದ ದೀನ-ದಲಿತರ ಕೀಳರಿಮೆಯನ್ನು ಕಿತ್ತೆಸೆದು ಸ್ವಾವಲಂಬನೆ ಸ್ವಾಭಿಮಾನವನ್ನು ಎಚ್ಚರಿಸುವ ದ್ವಿಮುಖ ಸಾಹಿತ್ಯದಲ್ಲಿ ವಚನಕಾರರು ಅಂದು ಅನುಸರಿಸಿದ ವಿಧಾನಗಳು ಅಪೂರ್ವವಾಗಿವೆ. ಸಮಾನತೆ, ಸ್ವಾತಂತ್ರ್ಯ ಮತ್ತು ಭಾವೈಕ್ಯತೆಯ ಏಕಸೂತ್ರದಲ್ಲಿ ಸಕಲರನ್ನೂ ಒಂದು ಗೂಡಿಸಲು ವಚನಕಾರರು ಕಂಡುಕೊಂಡ ವಿಧಾಯಕ ಮಾರ್ಗಗಳು ಇಂದಿಗೂ ಅನುಕರಣೀಯವಾಗಿವೆ.

ಬುದ್ಧನ ತರುವಾಯ ಸಾಮಾಜಿಕ ವಿಷಮತೆಗಳ ವಿರುದ್ಧ ವೈಚಾರಿಕ ಸಮಸಾರಿದ ಶರಣರು ಶ್ರೇಷ್ಠ ಮಾನವತಾವಾದಿಗಳು. ಜೇಡರ ದಾಸಿಮಯ್ಯ, ಮಾದರ ಚನ್ನಯ್ಯ, ಡೋಹರ ಕಕ್ಕಯ್ಯ ಕೊಂಡಗುಳಿ ಕೇಶಿರಾಜ ಚಂದಿಮರಸ ಮುಂತಾದ ಆದ್ಯವಚನಕಾರರು ಸಾಂಪ್ರದಾಯಿಕ ವ್ಯವಸ್ಥೆಯ ಒಳಸುಳಿಗಳನ್ನು ವಿರೋಧಿಸಿ, ಗುಣನಿಷ್ಠ, ಅರಿವು-ಆಚಾರ ಸಮನ್ವಯ, ಸಂಸ್ಕೃತಿಯ ಆಶಯವನ್ನು ಎತ್ತಿ ಹಿಡಿದು ವಚನ ಚಳುವಳಿಗೆ ಕ್ರಾಂತಿಯ ಕಹಳೆಯನ್ನು ಊದಿದರು. 'ಆಚಾರವೇ ಹೂ ಅನಾಚಾರವೇ ಹೂಲೆ' 'ಬ್ರಹ್ಮನರಿದಲ್ಲಿ ಬ್ರಾಹ್ಮಣ' ಮುಂತಾದ ಕ್ರಾಂತಿಕಾರಿ ಆ ಘೋರಣೆಗಳಿಂದ ಜಾತಿವ್ಯವಸ್ಥೆಯನ್ನು ಮರುವಿಮರ್ಶಿಸಿದ ಮಾದರ ಚನ್ನಯ್ಯ ಜನನನಿಷ್ಠ, ವೃತ್ತಿ ನಿಷ್ಠ ಕುಲಜಾತಿಗಳ ಗ್ರಹಿಕೆಯ ವಿರುದ್ಧ ದಂಗೆಯೆದ್ದರು.

ಹೀಗೆ ಲಿಂಗಾಧಾರಿತ ಮತ್ತು ವರ್ಗ ಜಾತಿಯಾಧರಿತ ನೇರೆಯಲ್ಲಿಯೇ ನಿರ್ಣಯಿಸಲ್ಪಡುತ್ತಿದ್ದ ವ್ಯಕ್ತಿಗೌರವದ ವಿಚಾರಗಳನ್ನು ನಿರಾಕರಿಸಿ ಸಚ್ಚಾರಿತ್ರ್ಯ ಸುಜ್ಞಾನ-ಸತ್ಕ್ರಿಯೆಯಿಂದಲೇ ವ್ಯಕ್ತಿತ್ವದ ಹಿರಿತನವನ್ನು ಗುರುತಿಸಿದರು. ಅಂತೆಯೇ 'ಕೊಲ್ಲುವವನೇ ಮಾದಿಗ'ನಾದರೆ ಹೊಲಸು ತಿಂಬುವನೆ

ಹೊಲೆಯ'ನಾಗಿದ್ದಾನೆ. 'ಸಕಲ ಜೀವಾತ್ಮರಿಗೆ ಲೇಸವೇ ಬಯಸುವ' ಹೃದಯವಂತರೇ ಕುಲಜರಾಗಿ ಮನ್ನಣೆಗೊಂಡುದು ಶರಣರ ಸಾಮಾಜಿಕ ಕ್ರಾಂತಿಯ ಶ್ರೇಷ್ಠ ಸಾಧನೆಯಾಗಿದೆ. 'ವಿಪ್ರಮೊದಲು ಅಂತ್ಯಜ ಕಡೆಯಾಗಿ 'ಸದಾಚಾರಿಗಳೆಲ್ಲರೂ ಸಮಾನ ಗೌರವ ಪಡೆದುದು ಅನನ್ಯವಾಗಿದೆ. ಹೀಗೆ ಜಾತಿನಿಷ್ಠ ಕೀಳರಿಮೇಯಲ್ಲಿ ಹತಾಶರಾಗಿದ್ದ ಸಮುದಾಯದಲ್ಲಿ ಆತ್ಮವಿಶ್ವಾಸ, ಆತ್ಮಪ್ರತ್ಯಯವನ್ನು ಜಾಗ್ರತಗೊಳಿಸಿ, ಸ್ವಸಾಮರ್ಥ್ಯದಿಂದ ಸಾಮಾನ್ಯರೂ ಅಸಮಾನ್ಯರಾಗಿ ಬೆಳೆಯಬಲ್ಲ ಅವಕಾಶಗಳನ್ನು ಮುಕ್ತವಾಗಿಸಿ ಹೊಸ ಬದುಕಿನ ಹರಿಕಾರರಾದ ವಚನಕಾರರು ವೃತ್ತಿ ತಾರತಮ್ಯಗಳನ್ನು ನಿರಾಕರಿಸಿ ದುಡಿಮೆಗೆ ದೈವತ್ವನೀಡಿದರು. ಹೇಗೆ ಜಾತಿವೈಷಮ್ಯ ಮತ್ತು ವೃತ್ತಿ ತಾರತಮ್ಯಗಳಿಂದ ಮುಕ್ತವಾದ ಸಮಾನ–ಸಾಮರಸ್ಯ ಸಂಸ್ಕೃತಿಯನ್ನು ಕಟ್ಟ ಬಯಸಿದ ಶರಣರು ಸರ್ವಸಮಾನತೆ–ಸರ್ವಜೀವ ಹಿತ ಎನ್ನುವ ಬೀಜ ಮಂತ್ರವನ್ನು ಪ್ರತಿಪಾದಿಸಿದರು. ಸಾವಿರಾರು ವರ್ಷಗಳ ಬಹಿಷ್ಕೃತ ಬದುಕಿನಲ್ಲಿ ಬೆಂದು ಹೋಗಿದ್ದ ಶೋಷಿತ ಸಮುದಾಯಕ್ಕೆ ಮೊತ್ತ ಮೊದಲ ಬಾರಿಗೆ ಧಾರ್ಮಿಕ ಸ್ವಾತಂತ್ರ್ಯ ಸಾಮಾಜಿಕ ನ್ಯಾಯ ಮತ್ತು ಸಾಂಸ್ಕೃತಿ ಸಹಭಾಗಿತ್ವದ ಮುಕ್ತ ಅವಕಾಶ ನೀಡಿದರು. ಜಾತಿಭೇದದ ಕರಾಳ ವ್ಯವಸ್ಥೆಯಲ್ಲಿ ತಮ್ಮ ಬುದ್ಧಿ–ಮಾತು–ಮನಸ್ಸನ್ನುಕಳೆದುಕೊಂಡು, ನಿರಂತರ ದುಡಿಮೆ–ಬಡತನ–ಅಪಮಾನದ ಬವಣೆಯಿಂದ ಹತಾಶರಾಗಿದ್ದ ದೀನದಲಿತರನ್ನು ಪ್ರೀತಿ–ವಿಶ್ವಾಸ–ಬಂಧುತ್ವ ಮತ್ತು ಮಾನವೀಯತೆಯಿಂದ ಅಪ್ಪಿಕೊಂಡರು. ಶರಣರ ಇಂಥ ಲೋಕವಿರೋಧಿ ಕ್ರಾಂತಿಕಾರಿ ಧೋರಣೆಗಳು ಸಮಕಾಲೀನ ಸಮಾಜದ ಸ್ಥಗಿತ ವ್ಯವಸ್ಥೆಯನ್ನು ತೀವ್ರವಾಗಿ ಅಲ್ಲಾಡಿಸಿತು. ದುರ್ಬಲ ವರ್ಗದವರಲ್ಲಿ ಆತ್ಮ ಸನ್ಮಾನದ ಹೊಸ ಬದುಕಿನ ಕನಸನ್ನು ಹೆಣೆಯಿತು. ಅಣತೆಯೇ ಸಾವಿರಾರು ವರ್ಷಗಳ ಮೌನದ ಕತ್ತಲೆಯನ್ನು ಭೇದಿಸಿದ ದಲಿತರು ಮೊದಲ ಬಾರಿಗೆ ಮಾತನಾಡಿದರು. ವಿಚಾರ ಜೀವಿಗಳಾಗಿ ಅಕ್ಷರ ಪ್ರಪಂಚವನ್ನು ಪ್ರವೇಶಿಸಿದರು. ತಮಗೆ ದಕ್ಕದ ಸಾಮಾಜಿಕ–ಸಾಂಸ್ಕೃತಿಕ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡರು. ವಚನ ಚಳವಳಿಯ ಆಧ್ಯಾತ್ಮಿಕ ಆಶಯವನ್ನು ಸಾಮಾಜಿಕ ಮೌಲ್ಯಗಳನ್ನು ಗಂಭೀರವಾಗಿ ಚಿಂತಿಸಿದರು. ಪ್ರಧಾನ ಸಂಸ್ಕೃತಿಯ ಶೋಷಕ ನೀತಿಯನ್ನು ತೀವ್ರವಾಗಿ ಪ್ರತಿಭಟಿಸಿ, ಶರಣರ ಜೀವಪರ ವಿಚಾರಗಳನ್ನು ಬೆಂಬಲಿಸಿದರು. ಶರಣ ಧರ್ಮವನ್ನು ಅಪ್ಪಿಕೊಂಡ ಕೆಳವರ್ಗದ ಅನೇಕ ವಚನಕಾರರು ಆಧ್ಯಾತ್ಮ ಸಾಧಕರಾಗಿ ಆತ್ಮ ನಿರೀಕ್ಷಣೆ ನಡೆಸಿದರು. ಸಮಾಜ ಚಿಂತಕರಾಗಿ ವ್ಯವಸ್ಥೆಯ ಅಪಮೌಲ್ಯಗಳನ್ನು ಖಂಡಿಸಿದರು. ಹೀಗೆ ಶತಮಾನಗಳ ತಮ್ಮ ಮೂಕಯಾತನೆಗೆ ಶಬ್ದ ರೂಪ ನೀಡಿದ ದಲಿತ ವಚನಕಾರರು ಆತ್ಮ ವಿಸ್ಮೃತಿಯ ಪೊರೆಯನ್ನು ಕಳಚಿಕೊಂಡು ಆತ್ಮಜ್ಞಾನದ ಅನ್ವೇಷಣೆಗೆ ತೊಡಗಿದುದು ಮಾನವ ಚರಿತ್ರೆಯ ಇತಿಹಾಸದಲ್ಲಿ ವಿಮೋಚನೆಯ ವಿಮುಕ್ತಿಯ ಮೊದಲ ಅಧ್ಯಾಯವಾಗಿದೆ.

ಕುಲಜಾತಿ ತಾರತಮ್ಯದ ವಿರುದ್ಧ ವೈಚಾರಿಕ ಕ್ರಾಂತಿಯನ್ನು ಸಾರಿದ ಬಸವಣ್ಣನವರ ಸರ್ವಸಮಾನತೆಯ ಜಾತಿರಹಿತ ಸಮಾಜ ರಚನೆಯ ಧೋರಣೆಗಳಿಂದ ತೀವ್ರ ಪ್ರಭಾವಿತರಾದ ಕೆಳವರ್ಗದ ದೊಡ್ಡ ಸಮುದಾಯವು ವಚನಕಾರರ ಧರ್ಮವನ್ನು ಸ್ವೀಕರಿಸಿತು. ಅಸ್ಪೃಶ್ಯವರ್ಗದಿಂದಲೂ

ಹಲವಾರು ಶರಣರು ಮತಾಂತರಗೊಂಡು ಲಿಂಗದೀಕ್ಷೆ ಪಡೆದರು. ಇಂಥ ಹಿರಿಯ ಮಾಹೇಶ್ವರರನ್ನು ಬಸವಣ್ಣನವರು ಮನತುಂಬಿ ಕೊಂಡಾಡಿದ್ದಾರೆ. ಡೋಹರಕಕ್ಕಯ್ಯ, ಮಾದಾರ ಚನ್ನಯ್ಯ, ಶ್ವಪಚಯ್ಯ, ಚಿಕ್ಕಯ್ಯ ಮುಂತಾದ ದಲಿತ ಶರಣರ 'ಭಕ್ತಿಯ ಸದ್ಗುಣ'ವನ್ನು ಹಾಡಿ ಹರಸಿದ್ದಾರೆ. ದಲಿತ ಶರಣರೇ ತಮ್ಮ ಮೂಲ ಪುರಷರೆಂದು ಘೋಷಿಸಿರುವುದು ಜಾತಿನಿರಸನದ ಸಮಾನತೆಯ ಅರ್ಥಪೂರ್ಣ ಅಭಿವ್ಯಕ್ತಿಯಾಗಿದೆ.

ಜನನನಿಷ್ಠ ಜಾತಿಸೂಚಕವನ್ನು, ಜಾತಿನಿಷ್ಠ ಮೇಲರಿಮೆ ಕಿಲರಿಮೆಯನ್ನು ನಿರಸನಗೊಳಿಸಿ, ವ್ಯಕ್ತಿತ್ವದ ಘನತೆ ಗುಣ ಗೌರವವನ್ನು ಎತ್ತಿ ಹಿಡಿದ ಶರಣ ಸಂಸ್ಕೃತಿಯ ಉನ್ನತ ಆದರ್ಶಕ್ಕೆ ಬಸವಣ್ಣನವರ ವ್ಯಕ್ತಿತ್ವವೇ ಉತ್ತಮ ಉದಾಹರಣೆ. ಅಸ್ಪೃಶ್ಯ ಸ್ತರದಿಂದ ಶರಣರಾದ ಮಾದಾರ ಚನ್ನಯ್ಯ ಮತ್ತು ಡೋಹರ ಕಕ್ಕಯ್ಯರ ಮನೆಯ ದಾಸಿಯ ಮಗ ಮಗಳ ಸಂತಾನ ತಾವೆಂದು ಹೇಳಿಕೊಳ್ಳುವ ಮೂಲಕ ದಲಿತ ಶರಣರಿಗೆ ತೋರಿದ ಅದರ ಜಾತಿನಿರಸನದ ಆರೋಗ್ಯಕರ ನಿಲುವು ಅಪೂರ್ವವಾಗಿದೆ.

ವ್ಯಕ್ತಿಗತ ಪ್ರತಿಭೆ, ಅನುವಂಶಿಕ ಕೌಶಲ್ಯ, ಬುದ್ಧಿ ಮತ್ತೆ ಫಲವಾಗಿ ಆಯ್ದುಕೊಂಡ ಜೀವನೋಪಾಯದ ವೃತ್ತಿಗಳೇ ಕಾಲಾನಂತರದಲ್ಲಿ ಜಾತಿಗಳಾಗಿ, ವರ್ಣಾಶ್ರಮ ವ್ಯವಸ್ಥೆಯ ಜಾಲದಲ್ಲಿ ಶ್ರೇಷ್ಠ-ಕನಿಷ್ಠರಾಗಿ ವಿಭಜನೆಗೊಂಡ ಸಾಮಾಜಿಕ ಬೆಳವಣಿಗೆಯ ವೀಕೃತಗತಿಯನ್ನು ಇಲ್ಲಿ ವಚನಕಾರರು ಗ್ರಹಿಸಿದ್ದಾರೆ. ದೇಹ ದುಡಿಮೆ, ಕನಿಷ್ಠ ವರಮಾನದ ವೃತ್ತಿಗಳು ಕೀಳಾಗಿವೆ. ಮೇಲ್ವರ್ಗದವರ ವೃತ್ತಿಗಳು ಶ್ರೇಷ್ಠವಾಗಿದೆ. ವೃತ್ತಿಗೂ-ಜಾತಿಗೂ ಏಕಸೂತ್ರತೆ ಉಂಟಾದ ಹಿನ್ನಲೆಯನ್ನು ಬಲ್ಲ ವಚನಕಾರರು ವೃತ್ತಿಯ ಮತ್ತು ಜಾತಿಯ ತರತಮಗಳು ಮನುಷ್ಯ ಸಮಾಜವನ್ನು ಶ್ರೇಣಿಗಳಾಗಿಸಿದ ದುರಂತವನ್ನು ಅರಿತಿದ್ದಾರೆ. ಅಂತೆಯೇ 'ಕಾಯಕ' ತತ್ವದ ಮೂಲಕ ಜಾತಿ ಮತ್ತು ವೃತ್ತಿ ಸೂತಕಗಳೆರಡನ್ನೂ ಒಡೆಯಲು ಪ್ರಯತ್ನಿಸಿದರು 'ಆವ ಕಾಯಕ ಮಾಡಿದಡೆಯೂ ಒಂದೆ ಕಾಯಕವಯ್ಯಾ' ಎಂದು ವೃತ್ತಿಗೌರವವನ್ನು ಮೌಲ್ಯವಾಗಿಸಿದರು. ವೃತ್ತಿಗಳೆಲ್ಲವೂ ಸತ್ಯಶುದ್ಧ ಪ್ರಾಮಾಣಿಕತೆಯ ಸ್ಪರ್ಶದಿಂದ ಕಾಯಕಗಳಾಗಿ, ಜೀವ ಪರಮ ಸಂಯೋಗದ ಸಾಧನಗಳಾಗಿ ಮನ್ನಣೆ ಪಡೆದುಕೊಂಡವು. ವಿವಿಧ ವೃತ್ತಿಗಳಿಗೆ ಸಂಬಂಧಿಸಿದ ನೂರಾರು ವಚನಕಾರರು ಕಾಯಕವ್ರತವನ್ನು ಕೈಕೊಂಡು ತಂತಮ್ಮ ಮೂಲವೃತ್ತಿಗಳನ್ನು ಮುಂದುವರೆಸಿದರು. 'ಕಾಯವಿಡಿದಿಹಬನ್ನಬರ ಶಿವಭಕ್ತರಿಗೆ ಕಾಯಕವೇ ಕೈಲಾಸ' ಕಾಯಕ ನಿಷ್ಠೆಯುಳ್ಳ ಅನೇಕ ದಲಿತ ವಚನಕಾರರು ತಮ್ಮ ವೃತ್ತಿಯನ್ನು ಪ್ರೀತಿಸಿ-ಘೋಷಿಸಿದ್ದಾರೆ. ತಮ್ಮ ವೃತ್ತಿ ಸಂಬಂಧಿತ ಪರಿಸರ ಮತ್ತು ಪರಿಕರಗಳ ಮೂಲಕವೇ ಅನುಭಾವದ ವಿವೇಚನೆ ನಡೆಸಿದ್ದಾರೆ. ಡೋಹರ ಕಕ್ಕಯ್ಯ, ಧೂಳಯ್ಯ, ಮಾದಾರ ಚೆನ್ನಯ್ಯ, ತಳವಾದಿ ಕಾಮದೇವ, ಕನ್ನಡ ಕಾಯಕದ ಅಮ್ಮಿ ದೇವಯ್ಯ, ಮೇದಾರಕೇತಯ್ಯ ಇತ್ಯಾದಿ.

ಸದ್ಯಕ್ಕೆ ಲಭ್ಯವಿರುವ ಸು. ಎರಡು ನೂರಕ್ಕೂ ಅಧಿಕ ಸಂಖ್ಯೆಯ ವಚನಕಾರರಲ್ಲಿ ಅಂಬಿಗರ ಚೌಡಯ್ಯನು ಪ್ರಸ್ತಾಪಿಸಿರುವ ಹೊಲೆ ಹದಿನೆಂಟು ಜಾತಿಗಳಿಗೆ ಸಂಬಂಧಿಸಿದ ವಚನಕಾರರು ದೊಡ್ಡ

ಸಂಖ್ಯೆಯಲ್ಲಿದ್ದಾರೆ. ಹೀಗೆ ಕೆಳವರ್ಗದ ವಿಭಿನ್ನ ಸ್ತರಗಳಿಂದ ಶರಣ ಧರ್ಮಕ್ಕೆ ಮತಾಂತರ ಹೊಂದಿದವರು ಬಹು ಸಂಖ್ಯೆಯಲ್ಲಿದ್ದರೂ, ದಲಿತ ವರ್ಗದ ವಚನಕಾರರ ಸಂಖ್ಯೆ ಸೀಮಿತವಾಗಿದೆ. ಬಸವ ಪೂರ್ವಯುಗದ ಶರಣ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಶ್ವಪಚಯ್ಯ, ಚಿಕ್ಕಯ್ಯ, ಮತ್ತು ವಚನಕಾರರ ಯುಗದ ಹರಳಯ್ಯ, ಮಾದಾರ ಧೂಳಯ್ಯ, ಮತ್ತು ಅನಾಮಿಕ ನಾಚಯ್ಯ ಉರಿಲಿಂಗ ಪೆದ್ದಿ ಮುಂತಾದವರ ಉಲ್ಲೇಖಗಳು ಕಾವ್ಯ ಪುರಾಣಗಳಲ್ಲಿ ಸಿಕ್ಕರೂ, ವಚನಕಾರರಾದ ಕೆಲವು ದಲಿತ ಶರಣರನ್ನು ಕುರಿತು ಈ ಮುಂದೆ ಚರ್ಚಿಸಲಾಗಿದೆ.

ನಡೆ ಚನ್ನ, ನುಡಿ ಚೆನ್ನ, ಎಲ್ಲಿ ನೋಡದರೆ ಚೆನ್ನ, ಪ್ರಮಥರೊಳಗೆ ಚೆನ್ನ ಪುರಾತರೊಳಗೆ ಚೆನ್ನ, ಸವಿನೋಡಿ ಅಂಬಲಿಯ ರುಚಿಯಾಯಿತ್ತೆಂದು ಕೂಡಲ ಸಂಗಮದೇವರಿಗೆ ಬೇಕೆಂದು ಕೈದೆಗೆದ ನಮ್ಮ ಚೆನ್ನ' ಎಂದು ಬಸವಣ್ಣನವರ ಸ್ತುತಿಗೆ ಪಾತ್ರನಾದ ಮಾದಾರ ಚನ್ನಯ್ಯ ಬಸವ ಪೂರ್ವ ಯುಗದ ಶರಣ. ಸಾಮಾಜಿಕವಾಗಿ ನಿಸ್ಪಪ್ವವೆನಿಸಿದ ಅಸ್ಪೃಶ್ಯ ವರ್ಗದಿಂದ ಬಂದ ಚನ್ನಯ್ಯ ಶರಣ ಶ್ರೇಷ್ಠನಾಗಿ ಬೆಳೆದು ಶರಣ ಸಮುದಾಯಕ್ಕೆ ಮಾದರಿಯಾಗಿದ್ದಾನೆ. ಹರಿಹರನ ರಗಳೆಯ ಪ್ರಕಾರ ಚನ್ನಯ್ಯ ತಮಿಳುನಾಡಿನ ದೊರೆ ಕರಿಕಾಲ ಚೋಳನ ಕುದುರೆಗಳಿಗೆ ಹುಲ್ಲು ತರುವ ಕಾಯಕದಲ್ಲಿದ್ದ ಗುಪ್ತಭಕ್ತ, ಜಾತಿನಿಷ್ಟವಾಗಿದ್ದ ವ್ಯವಸ್ಥೆಯಲ್ಲಿ ಆಚಾರ ಶೀಲಗುಣ ನಿಷ್ಠೆಯನ್ನು ಮೌಲ್ಯವಾಗಿ ಪ್ರತಿಪಾದಿಸುವ ಚೆನ್ನಯ್ಯನ ವಿವೇಚನೆಯಲ್ಲಿ ಕರ್ಮ ಸಿದ್ಧಾಂತ ಮತ್ತು ಜಾತಿಸಂಸ್ಕೃತಿಯ ಮರುಮೌಲ್ಯಮಾಪನವಿದೆ. 'ಆಚಾರವೇ ಕುಲ ಅನಾಚಾರವೇಹೊಲೆ' ಎನ್ನುವಲ್ಲಿ ಶರಣ ಧರ್ಮದ ಜೀವಧ್ವನಿ ಮಿಡಿದಿದೆ. ವ್ಯಕ್ತಿಗತ ಕೌಶಲ್ಯ ಪ್ರತಿಭೆಯ ಫಲವಾಗಿ ರೂಢಿಸಿಕೊಂಡ ವೃತ್ತಿಗಳೇ ವರ್ಣವ್ಯವಸ್ಥೆಯಲ್ಲಿ ಪರಿವರ್ತನೆಗೊಂಡು, ನೀಚಶ್ರೇಷ್ಠವೆನ್ನುವ ತಾರತಮ್ಯಕ್ಕೆ ಗುರಿಯಾಗಿರುವ ಅತಾರ್ಕಿಕ ವಾಸ್ತವವನ್ನು ವಿಶ್ಲೇಷಿಸುವ ಚೆನ್ನಯ್ಯ ಸದಾಚಾರಿಯೇ ಶ್ರೇಷ್ಠ ಅನಾಚಾರಿಯೇ ನೀಚ. ಈ ಎರಡು ಕುಲಗಳಲ್ಲದೇ ಮಿಕ್ಕಾವ ಕುಲಗಳಿಗೂ ಮಾನ್ಯತೆಯಿಲ್ಲವೆನ್ನುವ ಸ್ಪಷ್ಟಧೋರಣೆಯಲ್ಲಿ ಮಾದಾರ ಚನ್ನಯ್ಯನ ಪ್ರಬುದ್ಧ ಚಿಂತನೆಯಾಗಿದೆ

'ವೇದ ಶಾಸ್ತ್ರಕ್ಕೆ ಹಾರುವನಾಗಿ
ವೀರವಿತರಣಕ್ಕೆ ಕ್ಷತ್ರಿಯನಾಗಿ
ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ
ವ್ಯಾಪಾರದೊಳಗಾಗಿ
ಕೃಷಿಯ ಮಾಡುವುದಕ್ಕೆ ಶೂದ್ರನಾಗಿ
ಇಂತೀ ಜಾತಿಗೋತ್ರದೊಳಗಾದ ನೀಚಶ್ರೇಷ್ಠವೆಂಬ
ಎರಡು ಕುಲವಲ್ಲದೆ ಹೊಲೆ ಹದಿನೆಂಟು ಜಾತಿಯಂಬ ಕುಲವೆಲ್ಲಿ॥' (ವ.ಶಾ.ಸಾ.ವ. ೧೫೪೯)

'ನರಕುಲ ಹಲವಾದಲ್ಲಿ ಯೊನಿಯ ಉತ್ಪತ್ಯ ಒಂದೇ ಭೇದ ಮಾತಿನ ರಚನೆ ಎಷ್ಟಾದಡೇನು? ನಿಹಿತವನರಿವುದು ಒಂದೇ ಭೇದ' ಎಂದು ಮನುಷ್ಯ ಸ್ವಾರ್ಥ ನಿರ್ಮಿತ ಅನೈಸರ್ಗಿಕ ಜಾತಿವ್ಯವಸ್ಥೇಯನ್ನು ಕುರಿತು ತಾತ್ವಿಕ ಜಿಜ್ಞಾಸೆ ನಡೆಸುವ ಚೆನ್ನಯ್ಯ, ಅನಂತ ವೈವಿಧ್ಯಮಯವಾದ ಪ್ರಕೃತಿಗೆ ಮೂಲ ಪಂಚಭೂತಗಳೇ ಆಗಿರುವಂತೆ, ವಸ್ತು ಪ್ರಪಂಚದ ವೈವಧ್ಯವನೆಲ್ಲಾ ನೋಡಬಲ್ಲ ಕಣ್ಣಬೊಂಬೆ ಒಂದೇ ಆಗಿರುವಂತೆ ಮಾನವ ಕುಲವೆಲ್ಲ ಒಂದೇ ಎನ್ನುವ ಉದಾತ್ತ ತತ್ತ್ವವನ್ನು 'ಆರೈದು ನೋಡುವ ದೃಷ್ಟಿ ಒಂದೇ ಬೊಂಬೆ, ಬೊಂಬೆ ಹಲವು ನೋಡಿಹೆ, ಬೊಂಬೆ ಹಲವಂದ ಕಾಣ್ಬಂತೆ ಅದರಂಗವ ತಿಳಿದು ನಿಂದಲ್ಲಿ ಹಲವು ಕುಲದ ಹೊಲೆಯೆಂದೂ ಇಲ್ಲವೆಂದೆ' ಎಂದು ನಿರ್ಣಯಿಸಿದ್ದಾನೆ. 'ನಡೆ ನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆಸೂತಕವಿಲ್ಲ' ಎಂದು ಆಚಾರ-ವಿಚಾರ ಶುದ್ಧಿಯನ್ನು ಎತ್ತಿಹಿಡಿದು 'ಆಚಾರವೇ ಕುಲ ಅನಾಚಾರವೇ ಹೊಲ' ಎಂದು ಘೋಷಿಸಿದ್ದಾನೆ. ವೇದ-ಆಗಮ-ಪುರಾಣ ಧರ್ಮಶಾಸ್ತ್ರಗಳನ್ನು ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯನ್ನು ಪ್ರತಿನಿಧಿಸುವ ಮೇರುಕೃತಿಗಳನ್ನು ರಚಿಸಿದ ಸಪ್ತ ಋಷಿಗಳೆಲ್ಲರೂ ಅಸ್ಪೃಶ್ಯ ವರ್ಗದಿಂದ ಜನಿಸಿದವರೆನ್ನುವುದನ್ನು ಎತ್ತಿ ತೋರಿಸಿ, ಸುಜ್ಞಾನ ಸತ್ಕ್ರಿಯೆಯಿಂದ ಲೋಕವಂದ್ಯರಾದುದನು ತಿಳಿಸಿ, ಜಾತಿ ಸಂಸ್ಕೃತಿಯ ಮರೆಮೋಸವನ್ನು ಬಯಲಿಗೆಳೆದಿದ್ದಾನೆ.

ವೃತ್ತಿ ವಾಚಕವಾಗಿದ್ದ ಕುಲಕಸುಬುಗಳು ಮುಂದೆ ಜಾತಿವಾಚಕವಾಗಿ ಬೆಳೆದ ಅನಿಷ್ಟ ಪರಂಪರೆಯನ್ನು ಅಲ್ಲಗಳೆದು, ಜ್ಞಾನವೇ ಸರ್ವಶ್ರೇಷ್ಠ ಅರ್ಹತೆಯನ್ನು ಸ್ಪಷ್ಟಪಡಿಸಿದ್ದಾನೆ. 'ನಡೆ ನುಡಿ ಸಿದ್ಧಾಂತವಾದಲ್ಲಿ ಕುಲಹೊಲೆ, ಸೂತಕವಿಲ್ಲ ನುಡಿಲೇಸು ನಡೆ ಅಧಮವಾದಲ್ಲಿ ಅದೇ ಹೊಲೆ' ಎಂದು ಆಚಾರವಿಲ್ಲದ ಬದುಕನ್ನು ಜರಿದು, 'ಅರಿದಲ್ಲಿಯೇ ಪರತತ್ತ್ವ ಭಾವಿ : ಮರೆದಲ್ಲಿಯೇ ಮಲಮಾಯಾ ಸಂಬಂಧಿ' ಎಂದು ಅರಿವು ಮರೆವಿನ ವಿವೇಚನೆ ನಡೆಸಿದ್ದಾರೆ.

ಜೇಡರ ದಾಸೀಮಯ್ಯನವರ ಸಮಕಾಲೀನರೂ, ಬಸವಣ್ಣನವರ ಹಿರಿಯ ಸಮಕಾಲೀನವರಾಗಿರುವ ಡೋಹರ ಕಕ್ಕಯ್ಯ ದಾಸೀಮಯ್ಯನವರ ಕಾಲಕ್ಕಾಗಲೇ ಭಕ್ತಶ್ರೇಷ್ಠರಾಗಿ ಮನ್ನಣೆ ಪಡೆದುಕೊಂಡವರು. ಬಸವಣ್ಣನವರು ತಮ್ಮ ಹತ್ತಾರು ವಚನಗಳಲ್ಲಿ ಕಕ್ಕಯ್ಯನವರ ಹಿರಿತನವನ್ನು ಮುಕ್ತ ಕಂಠದಿಂದ ಶ್ಲಾಘಿಸಿ ಅವರನ್ನು ತಮ್ಮ ತಂದೆಯ ಸ್ಥಾನದಲ್ಲಿಟ್ಟು ಗೌರವಿಸಿದ್ದಾರೆ.

'ಅಪ್ಪನು ನಮ್ಮ ಮಾದಾರ ಚೆನ್ನಯ್ಯ
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ
ಎನ್ನನೆ ತಕ್ಕರಿಯಿರಿ ಕೂಡಲಸಂಗಯ್ಯ?' (ಸ.ವ.ಸಂ:೧ ವ.ಸಂ, ೩೪೯)

ಶಿವತತ್ವ ಚಿಂತಾಮಣಿ, ಸಿಂಗಿ ರಾಜಪುರಾಣ, ಪ್ರೌಢದೇವರಾಯನ ಕಾವ್ಯ ಗುರುರಾಜ ಚಾರಿತ್ರ್ಯ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಬಸವರಾಜವಿಜಯ ಮುಂತಾದ ವೀರಶೈವ ಕಾವ್ಯಗಳಲ್ಲಿ ಸಮಕಾಲೀನ ವಚನಕಾರರ ವಚನಗಳಲ್ಲಿ ಕಕ್ಕಯ್ಯನವರ ಭಕ್ತಿ ಪ್ರಶಂಸೆ ಇದೆ.

ಎಲ್ಲ ಜಾತಿ-ವರ್ಗದ ಜನರಿಗೆ ಸಮಾನ ಅವಕಾಶ ಮುಕ್ತ ಪ್ರವೇಶವನ್ನು ನೀಡಿದ ವೀರಶೈವ ಧರ್ಮದ ಉದಾತ್ತ ಮಾನವತಾವಾದಿ ವಿಚಾರಗಳಿಂದ ಆಕರ್ಷಿತರಾಗಿ ವಚನಕಾರರ ಧರ್ಮವನ್ನು ಸ್ವೀಕರಿಸಿದ ಕೆಳವರ್ಗದ ನೂರಾರು ಶರಣರ ಉಲ್ಲೇಖಗಳು ಲಭ್ಯವಿದೆ. ಸಾಮಾಜಿಕ ವ್ಯವಸ್ಥೆಯ ತೀರ ನಿಷ್ಕೃಷ್ಟ ನೆಲೆಯಾದ ಅಸ್ಪೃಶ್ಯ ವರ್ಗದಿಂದ ಶರಣ ಧರ್ಮಕ್ಕೆ ಮತಾಂತರ ಹೊಂದಿ ಶರಣರಾದವರನ್ನು ವಚನ ಸಂಸ್ಕೃತಿಯಲ್ಲಿ 'ಹಿರಿಯ ಮಾಹೇಶ್ವರ'ರೆಂದು ಕರೆದು ಗೌರವಿಸಲಾಗಿದೆ. ಬಸವಣ್ಣನವರಂತೂ ಇಂಥ ಹಿರಿಯ ಮಾಹೇಶ್ವರರೊಂದಿಗೆ ತಮ್ಮ ರಕ್ತಸಂಬಂಧವನ್ನು ಆಕ್ಷೇಪಿಸಿಕೊಂಡು, ತಮ್ಮ ವಂಶ ಪರಂಪರೆಯನ್ನು ಗುರುತಿಸಿಕೊಳ್ಳುವ ಮೂಲಕ ದಲಿತ ವಚನಕಾರರಿಗೆ ಹಿರಿದಾದ ಮನ್ನಣೆ ಸಲ್ಲಿಸಿದ್ದಾರೆ. 'ಹಿರಿಯಯ್ಯ ಶ್ವಪಚಯ್ಯ ಕಿರಿಯಯ್ಯ ಡೋಹಾರ ಕಕ್ಕಯ್ಯ, ಅಯ್ಯಗಳಯ್ಯನು ನಮ್ಮ ಮಾದಾರ ಚೆನ್ನಯ್ಯ' ಇವರೆಲ್ಲರೂ ಒಲಿದು ಭಕ್ತಿ ಬಿಕ್ಷೆಯನ್ನಿಕ್ಕಿ ಭಕ್ತಿಯಿಲ್ಲದೇ ಬಡವನಾದ ತನ್ನನು ಉದ್ಧರಿಸಿದರೆಂದು ಹೇಳಿ ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಭಾವ ಭ್ರಮೆಯನ್ನು ಕಳೆದುಕೊಂಡಿದ್ದಾರೆ. ಶರಣ ಸಂಸ್ಕೃತಿಯ ಸಮಾನತೆಯ ತತ್ವದ ಪರಕಾಷ್ಠೆಯನ್ನು ಮೆರೆದಿದ್ದಾರೆ.

ಒಟ್ಟಿನಲ್ಲಿ ಶರಣರ ವಚನ ಸಾಹಿತ್ಯದ ಜಾತ್ಯಾತೀತ ನಿಲವು ಜೀವನದ ಎಲ್ಲ ಮೂಲಗಳನ್ನು ಪೂರ್ಣ ದೃಷ್ಟಿಯಿಂದ ಕಂಡಿದೆ. ವ್ಯಕ್ತಿಯ ಎಲ್ಲ ಶಕ್ತಿಗಳ ಬೆಳವಣಿಗೆಗೂ ಅವಕಾಶವನ್ನು ಕೊಟ್ಟಂತೆ. ವ್ಯಕ್ತಿಯಿಂದ ನಿರ್ಮಿತವಾದ, ಸಮಾಜದ ಒಟ್ಟು ಹಿತವನ್ನು ಗಮನಿಸಿದೆ. ವ್ಯಕ್ತಿಯ ಹಿತವೆಂದರೆ ಸಮಾಜದ ಹಿತಕ್ಕೆ ವಿರುದ್ಧವಾದುದೆಂದಲ್ಲ; ಸಮಾಜದ ಒಳಿತು, ವ್ಯಕ್ತಿಯ ಒಳಿತನ್ನು ಬಿಟ್ಟಿಲ್ಲ-ಎಂಬ ಸಮನ್ವಯ ಮಾರ್ಗ ವಚನಕಾಡರ ಜಾತ್ಯಾತೀತ ನಿಲವಿನಿಂದ ರೂಪಿತವಾಗಿದೆ. ಇದು ಜೀವನಕ್ಕೆ ಎಂದೆಂದಿಗೂ ಮಾರ್ಗದರ್ಶನವಾಗಿರಬೇಕಾದ ಚಿರಂತನವಾದ ಸತ್ಯ. ಇಂದು ಮಾನವ ಜೀವನ ದಿನ ದಿನಕ್ಕೆ ಹೊಸ ಹೊಸ ಅನುಭವಗಳನ್ನು ಪಡೆದು ವಿಕಾಸಗೊಳ್ಳುತ್ತಿದೆ. ವೈಜ್ಞಾನಿಕ ಸಂಶೋಧನೆಗಳಿಂದ ಅವನ ದೃಷ್ಟಿ ಪರಿಧಿ ವಿಸ್ತಾರಗೊಳ್ಳುತ್ತಿದೆ. ಅದರಿಂದ ಹೊಸ ಹೊಸ ಅನುಭವಗಳನ್ನು ಪಡೆದಂತೆ, ಹೊಸ ಹೊಸ ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿದೆ. ಇವೆಲ್ಲವುಗಳಿಂದ ಪ್ರಚೋದಿತವಾದ ಆಧುನಿಕ ಮಾನವನ ಮನಸ್ಸು, ಈ ಅನಿಶ್ಚಿತತೆಯ ಸಮುದಾಯಗಳ ಮಧ್ಯದಲ್ಲಿ, ನಿಶ್ಚಲ ಸತ್ಯವನ್ನು ಹುಡುಕಲು ಹವಣಿಸುತ್ತದೆ. ಇದೇ ಮಾನವನ ಮುಂದಿರುವ ಚಿರಂತನ ಸಮಸ್ಯೆ. ಮನುಷ್ಯನ ಜೀವನದ ಹೊರಗಿನ ಆವರಣಗಳಷ್ಟೇ ಬದಲಾವಣೆಯಾಗಿದ್ದರೂ ಈ ಸಮಸ್ಯೆ ಶಾಶ್ವತವಾಗಿ ಉಳಿದೇ ಇದೆ. ಜೀವನದ ಈ ಚಿರಂತನ ಸಮಸ್ಯೆಗೆ ವಚನಕಾರರು ಸರ್ವವ್ಯಾಪಕವಾದ, ಮತ್ತು ಸಾರ್ವಕಾಲಿಕವಾದ ಉತ್ತರವನ್ನು ಕೊಟ್ಟಿದ್ದಾರೆ. ಅದರಿಂದಲೇ ಅವರ ಮಾತುಗಳು ಸರ್ವಗ್ರಾಹ್ಯವಾಗಿ, ಚಿರಂತನವಾಗಿ ಉಳಿದಿವೆ. ಮಾನವ ಸಮಾಜವನ್ನು ಪರಿಪೂರ್ಣತೆಯ ಕಡೆಗೆ ನಡೆಸುವ ಚಿನ್ಮಯ ಚೈತನ್ಯ ಶಕ್ತಿಗಳಾಗಿ ಪ್ರಕಾಶಿಸುತ್ತಿವೆ; ಬಳಿಗೆ ಬಂದವರನ್ನು ಬೆಳಗುತ್ತಿವೆ.

ಕೊನೆ ಟಿಪ್ಪಣಿಗಳು

೧. ಮಹೇಶ ತಿಪ್ಪಶೆಟ್ಟಿ (ಸಂ) 'ಬಸವತತ್ವ ಸಾಮಾಜಿಕ ಬದಲಾವಣೆ' ಪು. ೩೮, ೨೦೦೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨. ಸಾ. ಶಿ. ಮರುಳಯ್ಯ (ಪ್ರ.ಸಂ.) 'ದಲಿತ ಪ್ರಭಾ' ಪು. ೩೧೫, ೨೦೧೧, ಪ್ರಕಾಶಕರು ಛಲವಾದಿ ಮಹಾಸಭಾ ಗಾಂಧಿನಗರ, ಬೆಂಗಳೂರು.

೩. ಶಿವಮೂರ್ತಿ ಮುರುಘಾ ಶರಣರು 'ಬಸವತ್ತ್ವ ವಿಶ್ವತತ್ತ್ವ' ಪು. ೮೨, ೨೦೧೭, ಪ್ರಕಾಶಕರು ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀಮುರುಘಾಮಠ, ಧಾರವಾಡ.

೪. ವಿಜಯ ಶ್ರೀ ಸಬರದ 'ವಚನ ತೋರಣ' ಪು. ೧೨೨, ೨೦೧೮, ಪ್ರಕಾಶಕರು ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀಮುರುಘಾಮಠ, ಧಾರವಾಡ.

೫. ಎನ್. ಜಿ. ಮಹಾದೇವಪ್ಪ 'ವಚನಗಳಲ್ಲಿ ತತ್ವಮೀಮಾಂಸೆ' ಪು. ೩೩, ೨೦೧೪, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ.

೬. ಬಿ. ಬಿ. ಹೆಂಡಿ 'ವಚನ ಪ್ರೇರಣೆ' ಪು. ೧೧೭, ೨೦೧೭, ಪ್ರಕಾಶಕರು ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀಮುರುಘಾಮಠ, ಧಾರವಾಡ.

ಅಧ್ಯಾಯ : ಏಳು

ವಚನಗಳಲ್ಲಿ ಸಾಮಾಜೋಧಾರ್ಮಿಕ, ಆರ್ಥಿಕ ಸಮಾನತೆಯ ವಿಶ್ವಾಸಾರ್ಹತೆಯ ತಾತ್ವಿಕತೆ

ಅಧ್ಯಾಯ : ಏಳು

ವಚನಗಳಲ್ಲಿ ಸಮಾಜೋಧಾರ್ಮಿಕ, ಆರ್ಥಿಕ ಸಮಾನತೆಯ ವಿಶ್ವಾಸಾರ್ಹತೆಯ ತಾತ್ವಿಕತೆ

ಸಾಮಾಜಿಕ ಹಾಗೂ ಧಾರ್ಮಿಕ ಸಮಾನತೆಗಾಗಿ ವಚನಕಾರರು ಕಲ್ಯಾಣದಲ್ಲಿ ನಡೆಸಿದ ಕ್ರಾಂತಿ-ಕರ್ನಾಟಕದ ಇತಿಹಾಸದಲ್ಲಿ ಒಂದು ಮಹತ್ವದ ಮೈಲುಗಲ್ಲು. ಹದಿನಾರನೆ ಶತಮಾನದಲ್ಲಿ ಮಾರ್ಟಿನ್‌ಲೂಥರ್‌ನಿಂದ ಜರ್ಮನಿಯ ಮೂಲಕ ಯುರೋಪಿನುದ್ದಕ್ಕೂ ಹರಡಿದ ಪ್ರೊಟೆಸ್ಟಂಟ್ ಧರ್ಮಕ್ರಾಂತಿಗಿಂತ ಶ್ರೇಷ್ಠ ತತ್ವಗಳಿಗಾಗಿ ಕಲ್ಯಾಣದಲ್ಲಿ ಕ್ರಾಂತಿ ನಡೆಯಿತು. ಫ್ರೆಂಚ್ ಹಾಗೂ ಅಮೇರಿಕೆಯ ಕ್ರಾಂತಿಗಳಲ್ಲಿ ಮೂಡಿಬಂದ ಸ್ವಾತಂತ್ರ್ಯ, ಸಮಾನತೆ, ವಿಶ್ವಬಾಂಧವ್ಯದ ಆದರ್ಶಗಳೂ ಬಸವಣ್ಣನವರ ತತ್ವಗಳಲ್ಲಿ ಅಡಕವಾಗಿದ್ದವು. ಸ್ವರ್ಗ ನರಕಗಳನ್ನು ಅಲ್ಲಗಳೆದು, ಬಹುದೈವತ್ವ ಹಾಗೂ ಮೂರ್ತಿ ಪೂಜೆಯನ್ನು ತಿರಸ್ಕರಿಸಿ, ಆಚಾರಕ್ಕೆ ಪ್ರಾಧಾನ್ಯತೆ ನೀಡಿ, ಕಾಯಕವೇ ಕೈಲಾಸವೆಂದು ಸಾರಿ, ಲಿಂಗಭೇದ, ವರ್ಗಭೇದ, ಜಾತಿಭೇದಗಳನ್ನು ತಿರಸ್ಕರಿಸಿದ ವಚನಕಾರರು ಧಾರ್ಮಿಕ-ಸಾಮಾಜಿಕ ಸಮಾನತೆಯ ಮೇಲೆ ಹೊಸ ಸಮಾಜವನ್ನು ಕಟ್ಟಬಯಸಿದರು. ಆದರೆ ಶ್ರೇಷ್ಠ ಬಸವತತ್ವಗಳು ಮಾರ್ಟಿನ್‌ಲೂಥರ್‌ನ ವಿಚಾರಗಳಂತೆ, ಅಥವಾ ಫ್ರಂಚ್ ಕ್ರಾಂತಿಯ ತತ್ವಗಳಂತೆ ವಿಶ್ವವ್ಯಾಪ್ತಿಯಾಗಿ ಹರಡಲೇ ಇಲ್ಲ, ಕರ್ನಾಟಕಕ್ಕೆ ಸೀಮಿತಗೊಂಡಿವೆ-ಹೆಚ್ಚೆಂದರೆ ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶದ ಗಡಿ ಪ್ರದೇಶದಲ್ಲಿಯ ಕೆಲವರಿಗೆ ತಿಳಿದಿರಬಹುದು. ಕನ್ನಡ ಭಾಷಿಕರನ್ನು ಬಿಟ್ಟು ಕರ್ನಾಟಕದಾಚೆಗಿನ ಜನರು 'ಬಸವಣ್ಣ' ಎಂದರೆ ಯಾರು? ಎಂದು ಪ್ರಶ್ನಿಸಿದರೆ ಸೋಜಿಗವಲ್ಲ! ಅದಕ್ಕೆ ಕಾರಣಗಳು ಅನೇಕ-ಕೆಲವು ಅವ್ಯಕ್ತ, ಹಲವು ಅಪಥ್ಯ, ಇನ್ನೂ ಕೆಲವು ಅಗೋಚರ!

ಕರ್ನಾಟಕದಲ್ಲಿ ವಚನ ಸಾಹಿತ್ಯ ವಿಫುಲವಾಗಿ ಬೆಳೆದಿದೆ ಎನ್ನುವವರಿದ್ದಾರೆ. ಸ್ವಲ್ಪಮಟ್ಟಿಗೆ ಮೇಲ್ನೋಟಕ್ಕೆ ಅದು ಸತ್ಯವೆಂದು ತೋರಲೂಬಹುದು. ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಒಂದು ಮಹತ್ವದ ಭಾಗವಾಗಿದೆ. ನೂರಾರು ವಚನಕಾರರು ಸಾವಿರಾರು ಅನುಭಾವಪೂರ್ಣ ವಚನಗಳನ್ನು ರಚಿಸಿದ್ದಾರೆ. ಸುಮಾರು ೨೨,೦೦೦ ವಚನಗಳನ್ನು ಕರ್ನಾಟಕ ಸರಕಾರ ೧೫ ಸಂಪುಟಗಳಲ್ಲಿ ೨೦೦೧ರಲ್ಲಿ ಪುನಃ ಪ್ರಕಟಿಸಿದೆ.

ಬಸವ ಸಾಹಿತ್ಯ, ಶರಣ ಸಾಹಿತ್ಯದ ಒಂದು ಭಾಗವಾಗಿದರೆ ವಚನ ಸಾಹಿತ್ಯ ಅದಕ್ಕಿಂತ ದೊಡ್ಡದು. ಆದರೆ ಇವೆಲ್ಲ ಕೇವಲ ವಿಚಾರಗಳ ಒಂದು ಸಂಗ್ರಹವಲ್ಲ. ಸ್ತುತ್ಯವಾದ ವಿಚಾರಗಳನ್ನು

ವೈಯಕ್ತಿಕ ಹಾಗೂ ಸಮಾಜಿಕ ಜೀವನದಲ್ಲಿ ಅಳವಡಿಸುವ ಮಹಾನ್ ಪ್ರಯತ್ನವನ್ನು ಶರಣರು ವಿಶೇಷವಾಗಿ ಅವರಲ್ಲಿ ಅಗ್ರಗಣ್ಯರಾದ ಬಸವಣ್ಣನವರು ಮಾಡಿದರು. ಒಂದು ಪ್ರದೇಶದ ಅಥವಾ ರಾಜ್ಯದ ರಾಜಕೀಯ ವ್ಯವಸ್ಥೆಯಲ್ಲಿ ಉನ್ನತ ಸ್ಥಾನದಲ್ಲಿದ್ದ ಬಸವಣ್ಣ ತನಗೆ ಲಭ್ಯವಿದ್ದ ಪ್ರತಿಷ್ಠೆ, ಹೇರಳ ಧನ ಹಾಗೂ ಅಧಿಕಾರಿಗಳನ್ನೂ ಕೂಡ ತನಗೆ ಶ್ರೇಷ್ಠವೆನಿಸಿದ ತತ್ವಗಳನ್ನು ಆಚರಣೆಯಲ್ಲಿ ತರಲು ಬಳಸಿದರು. ಅದರಿಂದ ಆ ಕಾಲದ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ವ್ಯವಸ್ಥೆಗಳಲ್ಲಿ ಮಹತ್ತರವಾದ ಬದಲಾವಣೆಗಳು ಬರಲಾರಂಭಿಸಿದವು. ದೂರ ದೂರದಿಂದ ಸಹಸ್ರಾರುಜನ ಅನುಯಾಯಿಗಳು ಆ ಪ್ರದೇಶಕ್ಕೆ ಬಂದು ಸೇರಿದರು. ಸ್ಥಳೀಯ ಬಹುಪಾಲು ಜನರು ವಚನಕಾರರ ಕ್ರಾಂತಿಕಾರಿ ವಿಚಾರಗಳನ್ನು ಒಪ್ಪಿಕೊಂಡು ಆಚರಣೆಯಲ್ಲಿ ತರಲಾರಂಭಿಸಿದರು. ಉಚ್ಚ ನೀಚ ಜಾತಿಗಳಲ್ಲಿ ವರ್ಗೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಯ ಗಾಳಿ ಬೀಸತೊಡಗಿತು. ಶತಮಾನಗಳಿಂದ ತುಳಿಯಲ್ಪಟ್ಟ ಕೆಳವರ್ಗದ ಕೆಳಜಾತಿಯ ಜನ ವಿಚಾರ ಸ್ವಾತಂತ್ರ್ಯದೊಂದಿಗೆ ಮುಕ್ತ ಸಮಾಜದ ಕನಸು ಕಾಣತೊಡಗಿದರು. ಅವರು ಬಹು ಸಂಖ್ಯೆಯಲ್ಲಿ ಬಸವಣ್ಣನವರೊಂದಿಗೆ ಪಾಲ್ಗೊಂಡರು. ಜಾತಿಗಳ ವಿನಾಶದೊಂದಿಗೆ ಲಿಂಗಭೇದ ಕಡಿಮೆಯಾಗಿ ಸ್ತ್ರೀಯರು ಪುರುಷರೊಂದಿಗೆ ಆಚಾರ-ವಿಚಾರಗಳಲ್ಲಿ ಸಮಪಾಲು ಪಡೆಯಲಾರಂಭಿಸಿದರು. ಮೇಲ್ಜಾತಿಯವರಿಗೆ ಕಸಿವಿಸಿಯಾಯಿತು. ಪಟ್ಟಭದ್ರ ಹಿತಾಸಕ್ತಿಗಳು ಕುಪಿತಗೊಂಡವು. ವಚನಕಾರರ ಸಮಾಜ ಪರಿವರ್ತನೆಯ ಕಾರ್ಯಕ್ಕೆ ವಿರೋಧ ಉಂಟಾಯಿತು. ಈ ಘರ್ಷಣೆ ವಿಕೋಪಕ್ಕೆ ಹೋದಾಗ ರಕ್ತಕ್ರಾಂತಿಯಾಯಿತು. ರಾಜನ ಕೊಲೆಯಾಯಿತು. ಶರಣ ಸಮುದಾಯದ ಬೇಟೆಯಲ್ಲಿ ಸಹಸ್ರಾರು ಜನರು ಅಸುನೀಗಿದರು. ಬದುಕುಳಿದವರು ಪಲಾಯನಗೈಯ್ದರು. ಬಸವಣ್ಣನವರು ಕಲ್ಯಾಣದಿಂದ ಕೂಡಲಸಂಗಮಕ್ಕೆ ಹಿಂದಿರುಗಿದರಲ್ಲದೆ ಕೆಲ ದಿನಗಳಲ್ಲಿ ಸ್ವರ್ಗಸ್ಥರಾದರು. ಕ್ರಾಂತಿಕಾರಿಗಳಿಗೆ ಹಿನ್ನಡೆ ಉಂಟಾಯಿತು. ಅವರು ತಕ್ಷಣ ವಿಫಲರಾದರು ಆದರೆ ಅವರು ಬಿತ್ತಿದ ಕ್ರಾಂತಿಯ ಬೀಜಗಳು ನಾಡಿನಾದ್ಯಾಂತ ಹಬ್ಬಿದವು. ಇದೊಂದು ಅತ್ಯಂತ ಮಹತ್ವದ ಸಾಮಾಜಿಕ ಪ್ರಯೋಗ.

ಈ ಪ್ರಯೋಗವನ್ನು ಸಮಾಜ ವಿಜ್ಞಾನ ಯಾವ ದೃಷ್ಟಿಯಿಂದ ನೋಡುತ್ತದೆ? ಈ ಪ್ರಯೋಗದ ಐತಿಹಾಸಿಕ, ಸಾಮಾಜಿಕ ಮಹತ್ವವೇನು? ಅದು ವಿಫಲವಾಯಿತೆ? ಸಫಲವಾಯಿತೆ? ಇಂದು ಆ ಪ್ರಯೋಗ ಎಷ್ಟರ ಮಟ್ಟಿಗೆ ಸಮಂಜಸ? ಬಸವಣ್ಣನವರ ತತ್ವಗಳು ಆದರ್ಶವಾದದ ಭಾವನಾಲೋಕದ ಪ್ರತಿಬಿಂಬಗಳೇ ಅಥವಾ ಅವುಗಳನ್ನು ವಾಸ್ತವಿಕ ಜಗತ್ತಿನಲ್ಲಿ ನಿತ್ಯ ಜೀವನದಲ್ಲಿ ಸಾಮಾಜಿಕ ರಚನೆಯಲ್ಲಿ ಅಳವಡಿಸಬಹುದೆ? ಬಸವಣ್ಣನವರು ಧರ್ಮ ಸಂಸ್ಥಾಪಕರೆ? ಸಮಾಜ ಸುಧಾರಕರೆ? ಸಾಹಿತಿಗಳೆ? ವಿಶ್ವಮಾನವರೆ? ದೇವಮಾನವರೆ? ಅಥವಾ ಕೇವಲ ವಿಚಾರವಾದಿಗಳೆ? ಅವರು ಕಟ್ಟಬಯಸಿದ ಸಮಾಜದ ವೈಜ್ಞಾನಿಕ ವಿಶ್ಲೇಷಣೆ ಸಾಧ್ಯವೆ? ಅವರ ವೈಫಲತೆಯನ್ನು ಸಮಾಜ ವಿಜ್ಞಾನ ಹೇಗೆ ವಿಶ್ಲೇಷಿಸುತ್ತದೆ. ಜಾಗತಿಕ ವೈಚಾರಿಕರಲ್ಲಿ ಬಸವಣ್ಣನವರ ಸ್ಥಾನವೇನು? ಜಾಗತಿಕ ಮಟ್ಟದಲ್ಲಿ ಸಾಮಾಜಿಕ ವಿಕಾಸವಾದದ ಪ್ರತಿಪಾದಕರಲ್ಲಿ ಬಸವಣ್ಣನವರು ಒಬ್ಬರಾಗಬಹುದೆ? ಸಮಾಜ ವಿಜ್ಞಾನಿಗಳು ವಿಶ್ಲೇಷಿಸಬೇಕಾದ ಕೆಲವು ಅಂಶಗಳಿವು.

ತಾಯಿಬೇರನ್ನು ಕಳೆದುಕೊಂಡು ಭಾರತದಲ್ಲಿ ನಿರ್ನಾಮವಾದ ಬೌದ್ಧಧರ್ಮ ಕೊಂಬೆ ಬೇರುಗಳೊಂದಿಗೆ ಅನೇಕ ದೇಶಗಳಲ್ಲಿ ಹರಡಿ ಇಂದು ಒಂದು ಅತೀ ದೊಡ್ಡ ಜಾಗತಿಕ ಧರ್ಮವಾಗಿ ಬೆಳೆದು ನಿಂತಿದೆ. ಅದು ಪರದೇಶ ಪರಭಾಷೆಗೆ ಹರಡಿ ಬೆಳೆಯಿತು. ಹಾಗೆ ಹರಡದೇ ವಚನಕಾರರ ಧರ್ಮ ಸ್ವಸ್ಥಳದಲ್ಲಿ ಬೌದ್ಧ ಧರ್ಮದಂತೆ ವಿನಾಶದ ಹಾದಿ ಹಿಡಿಯಿತು. 'ಹಿಂದೂ' ಮಹಾಸಾಗರದಲ್ಲಿ ಒಂದು ಬಿಂದುವಾಯಿತು. ಈ ಪ್ರಕ್ರಿಯೆಯಲ್ಲಿ 'ಹಿಂದೂ' ಸಾಮಾಜಿಕ ಶಕ್ತಿಗಳ ಪಾತ್ರವೇನು? ಅದರ ಸಮಾಜ ವೈಜ್ಞಾನಿಕ ವಿಮರ್ಶೆ ಇಂದಿನ ಅವಶ್ಯಕತೆ ಎನ್ನಬಹುದು.

ವಚನ ತತ್ವವೇ ತಮ್ಮ ಸ್ವತ್ತು ಎಂಬಂತೆ ಕೆಲ ಮೂಲ ಜಾತಿಗಳು ವರ್ತಿಸಿವೆ. ಇತ್ತ ಪೂರ್ಣ ಹಿಂದೂ ಆಗದೆ ಅತ್ತ ಪರಿಪೂರ್ಣ ಬಸವಾದಿಯಾಗದೇ ಎರಡರ ನಡುವಿನ ಸಂಘರ್ಷದಲ್ಲಿ ಅರೆಬೆಂದ ಅರೆಜೀವದ 'ಹಿಂದೂ-ಬಸವಾದಿ' 'ಹಿಂದೂ ಲಿಂಗವಂತ' 'ವೀರಶೈವ-ಲಿಂಗವಂತ' ಜಾತಿಗಳ ನಕಾರಾತ್ಮಕ ಪ್ರಭಾವ ಬಸವಣ್ಣನವರ ತತ್ವಗಳು ಇಂದಿಗೂ ಶಕ್ತಿಶಾಲಿಯಾಗದಿರಲು ಎಷ್ಟರ ಮಟ್ಟಿಗೆ ಕಾರಣ? ಇದರ ಸಮಾಜ-ವೈಜ್ಞಾನಿಕ ವಿಶ್ಲೇಷಣೆ ಅಷ್ಟೆ ಮುಖ್ಯ.

ಕರ್ನಾಟಕದ ಸಮಾಜಿಕ ಜೀವನದ ಮೇಲೆ ಬಸವಣ್ಣನವರ ಪ್ರಭಾವವೇನು? ಕೆಳ ಜಾತಿಗಳ, ಕೆಳವರ್ಗಗಳ ಪರಸ್ಪರ ಹಾಗೂ ಮೇಲ್ಜಾತಿಗಳೊಂದಿಗಿನ ಸಂಬಂಧ ಪರರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಭಿನ್ನವಾಗಿದೆಯೆ? ಕಾಯಕತತ್ವದ ಪ್ರಭಾವ ಕರ್ನಾಟಕದ ಪ್ರಗತಿಗೆ ಏನಾದರೂ ಸಂಬಂಧಿಸಿದೆಯೆ? ಸ್ತ್ರೀವಾದಿ ಬಸವಣ್ಣನವರ ವಿಚಾರಗಳು ಇಂದಿನ ಸ್ತ್ರೀಪರ ಚಳುವಳಿಗಳಿಗೆ ಎಷ್ಟು ಸಮಂಜಸ? ಇವೆಲ್ಲ ಪ್ರಶ್ನೆಗಳನ್ನು ವೈಜ್ಞಾನಿಕವಾಗಿ ಸಮಾಜ ವಿಜ್ಞಾನಿಗಳು ವಿಶ್ಲೇಷಿಸಬಹುದಲ್ಲವೆ?

ಕೆಲವೇ ಕೆಲವು ಇತಿಹಾಸ ತಜ್ಞರು ಬಸವಣ್ಣನವರ ಜೀವನ, ವಿಚಾರ, ಸಮಯ ಹಾಗೂ ಇತರ ಅಂಶಗಳ ಬಗ್ಗೆ ಮಹತ್ವದ ಅಧ್ಯಯನ ಕೈಗೊಂಡಿದ್ದಾರೆ. ಕೆಲವು ದಾರ್ಶನಿಕರು ಅವರ ತತ್ವಗಳ ದಾರ್ಶನಿಕ ಅಧ್ಯಯನ ಕೈಕೊಂಡಿದ್ದಾರೆ. ಆದರೆ ನಮಗೆ ಈಗ ಲಭ್ಯವಿರುವ ವಿಫುಲ ಬಸವಸಾಹಿತ್ಯ ಮುಖ್ಯವಾಗಿ ಸಾಹಿತಿಗಳಿಂದ ಹಾಗೂ ಪೌರಾಣಿಕ ಮೂಲಗಳಿಂದ ಬಂದಿದೆ. ಸಾಹಿತ್ಯಿಕ ಬರಹಗಳು ನಿರುಪಯೋಗವಲ್ಲದಿದ್ದರೂ ವೈಜ್ಞಾನಿಕವಾಗಿ ಅನೇಕ ಲೋಪದೋಷಗಳಿಂದ ಕೂಡಿರುತ್ತವೆ. ವಸ್ತುನಿಷ್ಠ ದೃಷ್ಟಿಕೋನದಿಂದ ಅನೇಕ ಸಲ ಬೇರ್ಪಟ್ಟು ಭಾವನಾತ್ಮಕ, ಸೃಜನಾತ್ಮಕ ಕಲ್ಪನೆಗಳಿಗೆ ಅವಕಾಶವಿತ್ತು ವಾಸ್ತವಾಂಶಗಳಿಗೆ ಕುಂದು ಬರುವ ಸಂಭವವೇ ಹೆಚ್ಚು. ಅದರಂತೆ ಪೌರಾಣಿಕ ಸಾಹಿತ್ಯ ಮಿಥ್ಯ ಹಾಗೂ ಅದ್ಭುತ ಪವಾಡಗಳ ಸರಮಾಲೆಗಳನ್ನು, ಕಟ್ಟುಕತೆಗಳನ್ನು ನಿರ್ಮಿಸಿ ದೇವಲೀಲೆ ದೇವಾಂಶಗಳಿಗೆ ಅತಿ ರಂಜಿತ ಅವಕಾಶ ನೀಡಿ ಸತ್ಯವನ್ನು, ಮಾನವೀಯ ಅಂಶಗಳನ್ನು ಮರೆಮಾಡುತ್ತವೆ. ಅದರಿಂದ ಐತಿಹಾಸಿಕ ಸತ್ಯಾಂಶಗಳಿಗೆ ವಂಚನೆಯಾಗುತ್ತದೆ.

ಕಳೆದ ಶತಮಾನದ ಪೂರ್ವಾರ್ಧದವರೆಗೆ ಬಸವಣ್ಣ ಜನರಿಗೆ ಪರಿಚಯವಿದ್ದುದ್ದು ಪೌರಾಣಿಕ ಮೂಲಗಳಿಂದಲೇ ಹೆಚ್ಚು. ಇಂದಿಗೂ ಕೂಡ ಅವರ ಜೀವನದ ಮುಖ್ಯಾಂಶಗಳು ನಮ್ಮ ಜ್ಞಾನ ಪುರಾಣಗಳಿಂದಲೇ ಬಂದದ್ದು. ಗೊತ್ತಿರುವ ಐದು ಪುರಾಣಗಳೆಂದರೆ ಪಾಲ್ಕುರಿಕೆ ಸೋಮನಾಥನ

ತೆಲುಗು ಮೂಲದ ಬಸವ ಪುರಾಣ(೧೧೮೦), ಭೀಮಕವಿಯ ಕನ್ನಡ ಬಸವ ಪುರಾಣ (೧೩೬೯), ಹರಿಹರನ ಬಸವರಾಜ ದೇವರ ರಗಳೆ, ಸಿಂಗಿರಾಜನ ಸಿಂಗಿರಾಜ ಪುರಾಣ ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿ. ಅನೇಕ ಐತಿಹಾಸಿಕ ಅಂಶಗಳ ಮೇಲೆ ಈ ಐದು ಪುರಾಣಗಳಲ್ಲಿ ಭಿನ್ನತೆಗಳಿವೆ. ಆದರೆ, ಶಾಸನಗಳ ಮೂಲಗಳಿಂದ ಖಚಿತವಾದ ಪುರಾವೆ, ಅಂಕಿ–ಅಂಶ, ದಿನಾಂಕ, ಕಾಲಮಾನ, ವ್ಯಕ್ತಿಗಳ ಮಾಹಿತಿಗಳಿಂದ ಪೌರಾಣಿಕ ವಿಷಯಗಳನ್ನು ಐತಿಹಾಸಿಕವಾಗಿ ವಿಶ್ಲೇಷಿಸಲು ಸಾಧ್ಯವಾಗಿದೆ. ಕಳೆದ ಸುಮಾರು ೨೦ ವರ್ಷಗಳಿಂದ ಜಾನಪದ ಕ್ಷೇತ್ರದಲ್ಲಿ ನಡೆದ ಸಂಶೋಧನೆಗಳು ಬಸವಣ್ಣನವರ ವಚನಗಳನ್ನು ಕ್ರೋಡೀಕರಿಸುವ ಮೂಲಕ ಕರ್ನಾಟಕದ ಜನಜೀವನದಲ್ಲಿ ಅವರ ಪ್ರಭಾವವನ್ನು ಅರಿತುಕೊಳ್ಳಲು ಸಹಾಯಕವಾಗಿದೆ. ಆಡುಭಾಷೆಯಲ್ಲಿ ನಾಡಜನರ ನೆನಪಿನಲ್ಲಿ ೮೦೦ ವರ್ಷಗಳ ನಂತರವೂ ನಿರಂತರವಾಗಿ ಬದುಕಿ ಬರುತ್ತಿರುವ ಭಜನೆಗಳಲ್ಲಿ, ಪಡೆನುಡಿಗಳಲ್ಲಿ, ಒಡಪುಗಳಲ್ಲಿ, ವೀರಗಾಸೆಗಳಲ್ಲಿ, ಪುರವಂತರ ಸ್ಮೃತಿಗಳಲ್ಲಿ ಬಸವಣ್ಣನವರು ಬದುಕಿದ್ದಾರೆ. ಇವುಗಳ ಸಮಾಜಿಕ, ವೈಜ್ಞಾನಿಕ ಅರ್ಥವೇನು? ಮಹತ್ವವೇನು? ಬಸವಣ್ಣನವರ ಹಾಗೂ ಎಲ್ಲ ವಚನಕಾರರ ವಚನಗಳು ಜನರಾಡುವ ಸರಳ ದೇಶಿ ಭಾಷೆಯಲ್ಲಿವೆ. ಅವರು ಸಂಸ್ಕೃತದಲ್ಲಿ ವಚನ ಬರೆಯಲಿಲ್ಲ. ಬುದ್ಧ ಪಾಲಿ ಭಾಷೆಯನ್ನು ಉಪಯೋಗಿಸಿದ. ಆದ್ದರಿಂದ ಧಾರ್ಮಿಕ ವಿಚಾರಗಳು ಪಂಡಿತರಿಗಲ್ಲದೇ ಪಾಮರರಿಗೂ ಲಭ್ಯವಾದವು. ಪ್ರೊಟೆಸ್ಟಂಟ್ ಧರ್ಮ ಸಂಸ್ಥಾಪಕನಾದ ಲೂಥರ್ ಬೈಬಲ್‌ನ್ನು ಜನರಾಡುವ ಜರ್ಮನ್ ಭಾಷೆಗೆ ತರ್ಜುಮೆ ಮಾಡಿದ.

ವಚನಕಾರರು ಒಡನಾಡಿದ ಸಮಾಜವಿದು ಎಂದಾಗ ಇಲ್ಲಿ ಸಾಮಾಜಿಕ ಜೀವನದ ಜೊತೆ ಧಾರ್ಮಿಕ ಜೀವನವೂ ಅವಿಭಾಜ್ಯ ಅಂಗವಾಗುತ್ತದೆ. ಇತಿಹಾಸಕಾಲೀನ ಬದುಕಿನಲ್ಲಿ ಧಾರ್ಮಿಕ ಜೀವನವನ್ನು ಸಾಮಾಜಿಕ ಜೀವನದಿಂದ ಬಿಡಿಸಿ, ಬೇರ್ಪಡಿಸಿ ನೋಡುವುದು ಕಷ್ಟ ಸಾಧ್ಯ. ಅವು ಒಂದರೊಡನೊಂದು ಸಂಬಂಧವನ್ನು ಹೊಂದುವ ಕಾರಣ ಇದನ್ನು ಬೇರೆ ಬೇರೆಯಾಗಿ ಅಭ್ಯಸಿಸುವುದು ಅಷ್ಟೇನೂ ಸಮಂಜಸವೆನಿಸದು. ೧೨ನೆಯ ಶತಮಾನದಲ್ಲಿ ಧರ್ಮವು ಸಮಾಜದ ಪ್ರತಿರೂಪವೆನಿಸಿತು. ಹೀಗಾಗಿ ಧರ್ಮ ಮತ್ತು ಸಮಾಜ ಅಥವಾ ಧರ್ಮೋಸಮಾಜ ಪರಿಭಾವನೆ ಒಂದು ನಾಣ್ಯದ ಎರಡು ಮುಗ್ಗಲುಗಳೆಂದೇ ಹೇಳಬೇಕು.

ಯಾವ ತತ್ವಾದರ್ಶಗಳ ಅನುಸರಣೆ, ಆಚರಣೆಗಳಿಂದ ಸಮಾಜ ಜೀವನ ಉತ್ತಮಗೊಂಡು ಅದಕ್ಕೆ ಬೆಲೆ ಬರುತ್ತದೆಯೋ ಆ ತತ್ವಾದರ್ಶಗಳನ್ನು ಸಮಾಜಿಕ ಪ್ರಜ್ಞೆ ಎನ್ನಬೇಕು. ಈ ತತ್ವಾದರ್ಶಗಳು ವ್ಯಷ್ಟಿಯ ಆತ್ಮವಿಕಸನಕ್ಕೆ ಮೂಲ ಪ್ರವೃತ್ತಿ, ಪ್ರಗತಿಪರ ಧೋರಣೆಗಳು, ಕ್ರಾಂತಿಕಾರಕ ವಿಚಾರಗಳನ್ನು ಅಸಂಖ್ಯಾತ ಶ್ರೀಸಾಮಾನ್ಯರು ಒಪ್ಪಿ, ಅವರದೇ ಸಮಾಜ ಸಂಪದ್ಭರಿತವಾಗಿರಬೇಕು. ಸರ್ವಾಂಗ ಸಂಪೂರ್ಣವಾಗಬೇಕು, ಉತ್ತಮವಾಗಬೇಕು. ವ್ಯಷ್ಟಿಯ ಉದ್ಧಾರದ ಜೊತೆಯಲ್ಲಿ ಸಮಾಜದ ಉದ್ಧಾರವನ್ನು ಅಹರ್ನಿಶಿ ಬಯಸಿ, ಪ್ರಯತ್ನಿಸುತ್ತ ಬಂದ ಶಿವಶರಣರ ತತ್ವಾದರ್ಶಗಳು, ಸಮಾಜೋಧಾರ್ಮಿಕ ಮೌಲ್ಯಗಳ ಮಹತಿ ಪಡೆದಿವೆ.

ಶರಣ ಸಮಾಜದ ಸರ್ವಶ್ರೇಷ್ಠ ಮೌಲ್ಯಗಳಲ್ಲಿ ಸರ್ವಸಮಾನತೆಗೆ ಪ್ರಥಮ ಆದ್ಯತೆ ಇದೆ. ತಾವು ಅತ್ಯಾಸೆಯಿಂದ ಕಟ್ಟಬಯಸಿದ ಸಮಾಜ ಸರ್ವ ಸಮಾನತೆಯ ಮೇಲೆ ಅವಲಂಬಿಸಿದ್ದು, ಇದು ಮಾನವನ ಆತ್ಮ ವಿಕಸನ ಸಾಧನೆಗೆ ಪೂರಕ ಮೌಲ್ಯವಾದರೆ ಶರಣರ ಅನುಭಾವಪೂರಿತ ವಚನಸಾಹಿತ್ಯ ಸಾರ್ವಕಾಲಿಕ ಮೌಲ್ಯವೆನಿಸಿದೆ. "ಶರಣರು ಸತ್ಯ, ಕಾಯಕ, ದಯೆ, ದಾಸೋಹಗಳನ್ನು ಅನುಷ್ಠಾನಗೊಳಿಸುವ ಮತ್ತು ಜಾತಿ–ಕುಲ, ಹಣ–ಅಧಿಕಾರ, ಶೋಷಣೆಗಳನ್ನು ತೊಡೆದುಹಾಕುವಲ್ಲಿ ಅತ್ಯಂತ ಸೂಕ್ಷ್ಮವಾದ ಲೋಕದೃಷ್ಟಿಯನ್ನು ಹೊಂದಿದ್ದರು. ಅದನ್ನು ಜೀವನ ಧರ್ಮವನ್ನಾಗಿ, ಗುರಿಯನ್ನಾಗಿ, ನಡೆ–ನುಡಿ ಒಂದಾದ ಬದುಕಾಗಿ, ಆಚರಣೆಗೆ ತಂದರು. ಇಂತಹ ಲೋಕ ಕಲ್ಯಾಣ ನೀತಜ್ಞನಾಗಿ ಹಡಪದಪ್ಪಣ್ಣನು ತನ್ನ ವಚನಗಳ ಮೂಲಕ ಕಂಡುಬರುತ್ತಾನೆ.

ಅನ್ನವನಿಕ್ಕಿದರೇನು? ಹೊನ್ನಕೊಟ್ಟರೇನು? ಹೆಣ್ಣು ಕೊಟ್ಟರೇನು? ಮಣ್ಣು ಕೊಟ್ಟರೇನು? ಪುಣ್ಯ ಉಂಟೆಂಬರು. ಇವೆಲ್ಲವೂ ಅವರಿಂದಾದವುಗಳೇ. ನಾವು ಕಟ್ಟೆವೆಂಬುದಕ್ಕೆ ಹೀಗೆ ಇವು ನಮ್ಮವು, ನಾವು ಕೊಟ್ಟೆವು ಎಂದು ಬೀಗುವವರು ನದಿಯ ನೀರ ನದಿಗೆ ಅರ್ಪಿಸಿ ಪುಣ್ಯಬಂತೆಂದು ಹೇಳುವ ಬಡಬ್ರಾಹ್ಮಣರಂತೆ ಎಂಬುದು ಅಪ್ಪಣ್ಣನವರ ನಿಲುವು. ಪ್ರಾಯಶಃ ಇದು ಆದ್ಯ ವಚನಕಾರ ದೇವರ ದಾಸಿಮಯ್ಯ ಹೇಳುವ 'ಇಳೆ ನಿಮ್ಮದಾನ–ಬೆಳೆ ನಿಮ್ಮದಾನ, ಸುಳಿದು ಸೂಸುವ ಗಾಳಿ ನಿಮ್ಮದಾನ, ನಿಮ್ಮ ದಾನವನ್ನುಂಟು ಅನ್ಯರ ಹೊಗಳುವ ಕುನ್ನಿಗಳನ್ನು ನೆನಪಿಗೆ ತರಿಸುತ್ತದೆ. ದಾನದ ಹೆಸರಿನಲ್ಲಿ ನಡೆಯುವ ನಿರಂಕುಶ ಪ್ರಭುತ್ವವನ್ನು ಹಡಪದ ಅಪ್ಪಣ್ಣನು ದೂಷಿಸುತ್ತಾನೆ"೧.

"ವಚನಗಳಲ್ಲಿ ವ್ಯಕ್ತಿತ್ವ ವಿಕಾಸ ಚಿಂತನೆಗಳಲ್ಲಿ ಪ್ರಮುಖ ಸ್ಥಾನ ಪಡೆದಿರುವುದು ಅಂತರಂಗ ಶುದ್ಧಿ. ಅಂತರಂಗಶುದ್ಧಿಯಿಲ್ಲದೆ, ವಿಕಾಸ ಸಾಧ್ಯವಿಲ್ಲ. ಬಹಿರಂಗ ಶುದ್ಧಿಯ ಬಗೆಗೆ ವಚನಕಾರರು ದೇಹದ ಪವಿತ್ರತೆಯ ಬಗೆಗೆ, ಅದನ್ನು ದೇವನೆಲೆಯನ್ನಾಗಿ ಮಾಡುವ ಬಗೆಗೆ, ಅದು ಏಡಿಸಿ, ಕಾಡುವ ಪರಿಯನ್ನು, ಅದರ ನಿಗ್ರಹದ ದಾರಿಗಳನ್ನು, ಶರಣರು ಕಂಡುಕೊಂಡಿದ್ದರು.

'ಮಂಡೆ ಮಾಸಿದಡೆ ಮಹಾಮಜ್ಜನವ ಮಾಡುವುದು
ವಸ್ತ್ರ ಮಾಸಿದಡೆ ಮಡಿವಾಳನಿಗಿಕ್ಕುವುದು
ಮನದ ಮೈಲಿಗೆ ತೊಳೆಯಬೇಕಾದಡೆ
ಕೂಡಲಚೆನ್ನಸಂಗಯ್ಯನ ಶರಣರ ಅನುಭಾವ ಮಾಡುವುದು.'

ದೇಹ ಮಲೀನವಾದರೆ ಮಜ್ಜನದ ಮೂಲಕ ಅದನ್ನು ಶುದ್ಧಿಗೊಳಿಸುತ್ತೇವೆ. ತೊಡುವ ಉಡುವ ಬಟ್ಟೆಗಳು ಮಾಸಿದಡೆ ಅಗಸನಿಗೆ ನೀಡಿ ಮಡಿ ಮಾಡಿಕೊಳ್ಳುತ್ತೇವೆ. ಆದರೆ, ಮನದ ಮೈಲಿಗೆಯನ್ನು ಕಳೆಯಲು ಚೆನ್ನಬಸವಣ್ಣನವರು ಒಂದು ದಾರಿಯನ್ನು ತೋಸರಿಸುತ್ತಾರೆ. ಅದೆಂದರೆ, ಶರಣರೊಂದಿಗೆ ಅನುಭಾವವ ಮಾಡುವುದು, ಹೊರಗೆ ಶುಚಿಯಾಗಿ ಒಳಗೆ ಶುಚಿಯಾಗದಿದ್ದರೆ, ಮನದ ಮೈಲಿಗೆ ಹಾಗೆ ಉಳಿದರೆ ಅಲ್ಲಿ ವಿಕಸನ ಹೇಗೆ ಸಾಧ್ಯ? ಆಧ್ಯಾತ್ಮಿಕ ನೆಲೆಯಲ್ಲಿ ಶರಣರ

ಅನುಭಾವವನ್ನು ಮಾಡಬೇಕೆಂದು ಅವರು ಸೂಚಿಸುತ್ತಾರೆ”[೨]. ಇಂತಹ ವಚನ ಸಾಹಿತ್ಯವನ್ನು ಗಮನಿಸುತ್ತ ಬಂದ ವಿದ್ವಾಂಸ ಸಿದ್ಧಯ್ಯ ಪುರಾಣಿಕರು ಹೇಳುವದು 'ಇದೊಂದು ಸಮಷ್ಟಿ ಸಾಹಿತ್ಯ, ಸಾಮಾನ್ಯ ಅಸಾಮಾನ್ಯರಿಬ್ಬರೂ ಸೇರಿ, ಗೌರವಾದರಗಳಿಂದ ಚರ್ಚಿಸಿ, ಉಸುರಿಸಿದ ತಲಸ್ಪರ್ಶಿ ಸಾಹಿತ್ಯ. ಗದ್ಯ-ಪದ್ಯ ಗೇಯತೆಗಳ ಹೃದಯಂಗಮ ಸಾಹಿತ್ಯ. ವರ್ಣಮುಕ್ತಕ, ವರ್ಗಮುಕ್ತಕ, ಅಷ್ಟಮದಮುಕ್ತಕ ಸಾಹಿತ್ಯ. ವ್ಯಷ್ಟಿ ಸಮಷ್ಟಿ ಹಿತ ಸಾಧಿಸಿದ ಸಾಹಿತ್ಯ. ಅನುಭವ, ಆಲೋಚನೆಗಳನ್ನು ಅಭಿವ್ಯಕ್ತಿಗೊಳಿಸಿದ ಸಮ್ಯಕ್‌ಸಾಹಿತ್ಯ. ಓದಿದಾಗಲೆಲ್ಲ ಹೊಸ ಅರ್ಥಗಳ ಬೆಳಕು ಬೀರುವ ಅನುಪಮ ಸಾಹಿತ್ಯ. ಅಲ್ಪದಲ್ಲಿ ಕಲ್ಪವನ್ನು ಕೆತ್ತಿದ ಸಾಹಿತ್ಯ. ಹನಿಯಲ್ಲಿ ಕಡಲನ್ನು ಹಿಡಿದಿಟ್ಟ ಸಾಹಿತ್ಯ. ಮಾತನ್ನು ಜ್ಯೋತಿ ಪರಂಜ್ಯೋತಿಯಾಗಿಸಿದ ಸಾಹಿತ್ಯ ಅಂತೆಯೇ ಶರಣರ ನುಡಿ ಮಾತೆಂಬುದು ಜ್ಯೋತಿರ್ಲಿಂಗ. ಅವರದು ಭಕ್ತಿಸುಭಾಷೆ, ಅವರು ಕೈಕೊಂಡ ಆಲೋಚನೆ ಪ್ರಾಯೋಗಿಕ ಶಿಕ್ಷಣಕ್ಕೆ ಸೋಪಾನವೆನಿಸಿತು'. ವೃತ್ತಿಕಾಯಕದ ಉದಾತ್ತೀಕರಣ, ಬಾಹ್ಯ ಅಂತರಂಗ ಜೀವನದ ಶುದ್ಧ ಸಿದ್ಧಿಯ ರಹಸ್ಯ ಅರಿತರು.

ವಚನಕಾರರ ಚಲನಶೀಲ ದೃಷ್ಟಿ-ಸೃಷ್ಟಿ

"ಭ್ರಷ್ಟಾಚಾರದ ಬದುಕು ಎಲ್ಲ ಕಾಲದಲ್ಲಿಯೂ ಇದೆ. ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಸಂತರ ಹೆಸರಿನಲ್ಲಿ, ಸಮಾಜದ ಹೆಸರಿನಲ್ಲಿ ಮತ್ತು ಅಧಿಕಾರದ ಹೆಸರಿನಲ್ಲಿ ಭ್ರಷ್ಟಾಚಾರ ತನ್ನ ಕರಾಳ ಸ್ವರೂಪವನ್ನು ತೋರಿಸುತ್ತಲೇ ಇರುತ್ತದೆ. ಜನರು ಎಲ್ಲವನ್ನೂ ಸಹಿಸಿಕೊಳ್ಳುತ್ತ ಜೀವನ ಸಾಗಿಸುತ್ತಿರುತ್ತಾರೆ. ಇದೆಲ್ಲ ಬದುಕಿನ ಭಾಗವೆಂದು ಸಹಿಸಿಕೊಳ್ಳುತ್ತಾರೆ. ಸಮಯ ಬಂದಾಗ ಅನೇಕರು ಅದೇ ದಾರಿಯಲ್ಲಿ ಮುನ್ನಡೆಯುತ್ತಾರೆ. ಆದರೆ ಸತ್ಯಕ್ಕ 'ನಾನು ಅನ್ಯಾಯದ ಧನದಿಂದ ದೂರವಿದ್ದೇನೆ' ಎಂದು ಎದೆತಟ್ಟಿ ಹೇಳುತ್ತಾಳೆ. ಅಷ್ಟೇ ಅಲ್ಲ, ಕಸಗುಡಿಸುವ ಕಾಯಕದ ಸಂದರ್ಭದಲ್ಲಿ ಬೆಲೆಯುಳ್ಳ ವಸ್ತುಗಳಾದ ಬಂಗಾರದ ಆಭರಣ, ರೇಷ್ಮೆ ವಸ್ತ್ರ ಮುಂತಾದವುಬೀದಿಯಲ್ಲಿ ಬಿದ್ದಿದ್ದರೂ ಕಾಲಕಸದಂತೆ ನೋಡುತ್ತ, ಅವುಗಳನ್ನು ಮುಟ್ಟುವುದಿಲ್ಲ ಎಂದು ಹೇಳುತ್ತಾಳೆ. ಇವೆಲ್ಲವನ್ನೂ ಪ್ರತಿಜ್ಞಾ ವಿಧಾನದಲ್ಲಿ ತಿಳಿಸಿತ್ತಾಳೆ. ತನಗೊಂದು ಪರಂಪರೆ ಇದೆ. ಅದುವೇ ಪ್ರಮಥರ ಪರಂಪರೆ. ಅಂಥ ಶರಣರ ಆಣೆ ಮಾಡುತ್ತ ದೃಢನಿಶ್ಚಯದಿಂದ ನುಡಿಯುತ್ತಾಳೆ. ತನ್ನ ಕಾಯಕದ ಮೂಲಕವೇ ಬದುಕುವುದಾಗಿ ವಚನ ನೀಡುತ್ತಾಳೆ.

ತನಗೆ ಈ ಶಕ್ತಿ ಹೇಗೆ ಬಂದಿತೆಂಬುದನ್ನು ಕೂಡ ಸತ್ಯಕ್ಕ ಮಾರ್ಮಿಕವಾಗಿ ತಿಳಿಸಿದ್ದಾಳೆ. ಪರಮಾತ್ಮನಲ್ಲಿ ಮತ್ತು ಕಾಯಕದಲ್ಲಿ ಅಚಲ ನಂಬಿಕೆ ಇದ್ದವರಿಗೆ ನಾಳಿನ ಭಯ ಇರುವುದಿಲ್ಲ ಎಂದು ಸೂಚಿಸಿದ್ದಾಳೆ. ಹೀಗೆ ನಂಬಿಕೆ ಇಲ್ಲದವರು ದುರ್ಬಲ ಮನದವರಾಗುತ್ತಾರೆ. ಭವಿಷ್ಯದ ಬಗ್ಗೆ ಹೆದರುತ್ತಾರೆ. ಹೇಗಾದರು ಮಾಡಿ ಸಂಗ್ರಹಿಸಿಡಬೇಕು ಎಂಬ ಭಾವ ತಾಳುತ್ತಾರೆ. 'ನಾನು ಈ ರೀತಿ ಆಸೆಬುರುಕಿಯಾದರೆ ನನ್ನನ್ನು ನರಕಕ್ಕೆ ಅಟ್ಟಿ ನನ್ನಿಂದ ದೂರ ಹೋಗು' ಎಂದು ದೇವರಿಗೆ ನಿರ್ಭಿಡೆಯಿಂದ ಹೇಳುತ್ತಾಳೆ. ಹಾಗೆ ಹೇಳುವುದರ ಮೂಲಕ ನಮ್ಮೊಳಗಿನ ಆತ್ಮಶಕ್ತಿಯನ್ನು ಜಾಗೃತಗೊಳಿಸುತ್ತಾಳೆ"[೩]

ಯಾವುದನ್ನು ಉತ್ತಮ ವರ್ಣೀಯರು ಸಾಧಿಸಲು ಅಸಾಧ್ಯವಿತ್ತೋ ಅಂತಹ ಸಾಮಾಜಿಕ ಮೌಲ್ಯ ಪರಿವರ್ತನೆಯನ್ನು ಬಸವಣ್ಣನ ಸಮಕಾಲೀನರು ಸಾಧಿಸಿದರು. 'ಅರಸನ ಮನೆಯಲ್ಲಿ ಅರಸಿಯಾಗಿಪ್ಪುದಕ್ಕಿಂತ ಶಿವಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಲೇಸು' ಎಂದರು. ರಾಜನ ಮುಂದೆ ಮಾತ್ರ ನುಡಿಸಬೇಕಿದ್ದ ಪಂಚ ಮಹಾವಾದ್ಯವನ್ನು ಉತ್ತಮವಾದ ಹೊಲೆಯನ ನಾಯಿಯ ಮುಂದೆ ನುಡಿಸುವೆನೆನ್ನುತ್ತ ಸ್ಥಗಿತ ವ್ಯವಸ್ಥೆಯ ಶ್ರೇಷ್ಠ ಮರುಷನಿಗಿಂತ ಚಲನಶೀಲ ಪ್ರಾಣಿ ನಾಯಿ ಶ್ರೇಷ್ಠವೆಂದರು. ಈ ಕ್ರಾಂತಿ ವಿಚಾರದ ಮಟ್ಟ ಆಚಾರದ ಮಟ್ಟಕ್ಕಿಳಿದುದು ಶಿವಶರಣರ ಕಾಲದಲ್ಲಿ.

ಈ ರಾಜಭಂಡಾರ ಪ್ರಭುವರ್ಗ ಪುರೋಹಿವರ್ಗದ್ದಲ್ಲ. ಇದು ಸಮಾಜದ್ದು. ಜಂಗಮವರ್ಗದ್ದು ಎಂಬ ಸ್ಪಷ್ಟ ಧೋರಣೆ ವ್ಯಕ್ತವಾಯಿತು. ರಾಜಭಂಡಾರ ಕೆಲವೇ ಪ್ರತಿಷ್ಠೆಯ ವ್ಯಕ್ತಿಗಳ ಸೊತ್ತಲ್ಲ. ಈ ಲೋಕ ಸರ್ವಭಕ್ತರ ಆಸ್ತಿ. ಶಿವನ ವಿಶ್ವಸ್ಥ ನಿಧಿ ಇದು. ನಾವು ಅದರ ಸದಸ್ಯರು ಎಂಬ ನಿಲುವು ಹರಿಹರನ ಬಸವರಾಜದೇವರ ರಗಳೆಯ ಮೂಲಕ ವ್ಯಕ್ತವಾಗಿದೆ.

ವರ್ಣಭೇದ ಭಾರತೀಯ ಸಮಾಜದ ಒಂದು ಅಭಿಪಾಶ. ಸ್ಪೃಶ್ಯ ಅಸ್ಪೃಶ್ಯ ಎಂಬ ಎರಡು ವರ್ಗಗಳ ಸಂಘರ್ಷಅನಾದಿ ಕಾಲದ್ದು. ಹರಿಹರನ ರಗಳೆಗಳುದ್ದಕ್ಕೂ ಈ ಸ್ಥಾವರ ವ್ಯವಸ್ಥೆಯನ್ನು ತಲಸ್ಪರ್ಶಿಯಾಗಿ ಅಲುಗಿಸುವ, ಪ್ರಯತ್ನ ತುಂಬ ಹಿಂದಿನಿಂದಲೂ ನಡೆಯುತ್ತಲೇ ಬಂದಿದೆ.

ಕರಿಕಾಲ ಚೋಳನ ಮನೆಯಲ್ಲಿ ಉಣ್ಣದ ಶಿವ ಮಾದರ ಚೆನ್ನಯ್ಯನ ಮನೆಯಲ್ಲಿ ಅಂಬಲಿ ಸುರಿದುಕೊಳ್ಳುವದು. ಇದನ್ನು ತಿಳಿದ ಚೋಳ ತನ್ನ ರಾಜಗಾಂಭೀರ್ಯವನ್ನು ಬದಿಗಿರಿಸಿ, ಹೊಲಗೇರಿಗೆ ನಡೆದು ಬರುವದು. ಬಂದವನೆ ನೇರವಾಗಿ ಚೆನ್ನಯ್ಯನ ಪಾದಕ್ಕೆರಗಿ 'ದೇವದೇವ ಶರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ ಸರ್ವಜ್ಞ ನಿಮ್ಮ ಕೆರ್ಪಿಂಗೆ ಎನ್ನ ಶಿರ ಸರಿಯೆ? ಎಂದು ಹಂಬಲಿಸತೊಡಗಿದನು. ತನ್ನ ಪಟ್ಟಗಜದ ಮೈಮೇಲೆ ಕುಳ್ಳಿರಿಸಿ ಚೆನ್ನಯ್ಯನನ್ನು ಮೆರವಣಿಗೆ ಮಾಡುವುದು ಅಂದಿನ ಜಾತಿಭೇದದ ನಿರ್ಮೂಲನೆಯ ಸ್ಪಷ್ಟ ಪ್ರತಿಪಾದನೆಯಾಗಿದೆ.

ವಿಪ್ರನಾದ ಸಾಮವೇದಿಯ ನೆರಳು ಬೀಳಬಾರದೆಂದು ಶೂದ್ರನಾದ ಶ್ವಪಚಯ್ಯ ತಾನು ಬೇಯಿಸುತ್ತಿದ್ದ ನಾಯಿ ಮಾಂಸದ ಗಡುಗೆಯನ್ನು ತನ್ನ ಪಾದರಕ್ಷೆಯಿಂದ ಮುಚ್ಚುವುದು, ಸಾಮವೇದಿ ರಗಳೆಯ ವಸ್ತು. ಇಲ್ಲಿ ಭವಿ ಸಾಮವೇದಿ ಪಂಡಿತನಾಗಿದ್ದರೂ ಶರಣ ಸಂವಿಧಾನದಲ್ಲಿ ಅಂಥವರಿಗೆ ಬೆಲೆ ಇಲ್ಲ. ಬಸವರಾಜದೇವರ ರಗಳೆಯಲ್ಲಿ ಹರಿಹರ ಇಂಥ ಹತ್ತಾರು ಮಹತ್ವದ ಆಕರಗಳನ್ನು ಒದಗಿಸಿರುವುದುಂಟು.

ಸಂಬೋಳಿ ನಾಗಿದೇವನ ಮನೆಯಲ್ಲಿ ಬಸವಣ್ಣ ಪ್ರಸಾದ ಸ್ವೀಕರಿಸುವುದನ್ನು ಮನಗಂಡ ಬ್ರಾಹ್ಮಣರು 'ಎಲೆಲೆ ಬಿಜ್ಜಳ, ಬಸವನ ನಡೆವಳಿ ದಿನದಿನಕ್ಕೆ ವಿಪರೀತಮಾಗಿರ್ಪುದು. ಹಿರಿಯ ಮಾಹೇಶ್ವರರೆಂದು ಬೆಸಗೊಂಡಿರ್ಪರಲ್ಲದೆ ಇಂದೀಗಳೀಗಳ್ ಪೊಲಗೇರಿಯೊಳೊರ್ಬ ಹಿರಿಯ ಭಕ್ತನ ಮನೆಯೊಳುಂಡು ಉಂಡುದಲ್ಲದೆ ನಿನ್ನೋಲಗದಳ್ ಪೊಲೆಗಲೆಸಲ್ ಬಂದ ಪರಿ ಇಂತಾದೊಡೆ ಎಮಗಿರಲ್ಬಾರದು' ಎಂದು ಹೇಳಿದಾಗ ದೊರೆ ಬಸವಣ್ಣನನ್ನು ವಿಚಾರಣೆಗೆ ಗುರಿಪಡಿಸಿದುದು.

ಹೊಲಗೇರಿಯಿಂದ ಬಂದ ಬಸವಣ್ಣನಿಂದ ಆಸ್ಥಾನ ಮೈಲಿಗೆಯಾಗುವುದೆಂದು ಬಗೆದು ರಾಜಾಂಗಣದ ಬಯಲಿನಲ್ಲಿ ನ್ಯಾಯ ವಿಚಾರಣೆ ನಡೆಸುವುದು. ಆಗ ಬಸವಣ್ಣ, 'ಎಲೆ ಬುದ್ಧಿಯಿಲ್ಲದ ಭೂಪ, ಎರಗಿವಿಯ ಮರುಳೆ ನಾರಣಕ್ರಮಿತರ ಕೇರಿಯಂ ಪೊಕ್ಕೆನೆ, ಮುಕುಂದ ಭಟ್ಟರ ಮನೆಯಲುಂಡೆನೆ, ಹರನನರಿಯರ ಹೊಲೆಯರ ಮನೆಯಂ ಪೊಕ್ಕುದಿಲ್ಲ' ಎಂದು ನುಡಿದ.

ಆಗ ಬಿಜ್ಜಳ 'ವೇದಶಾಸ್ತ್ರ ಪುರಾಣಾಗಮಜ್ಞ ವಿಧಿಯಿಂ ನಡೆವ ವಿಪ್ರರಂ ಹೊಲೆಯರೆಂದು ಶಿವಭಕ್ತನಾದ ಹೊಲೆಯನು ಉತ್ತಮನೆಂಬುದಕ್ಕೆ ಪ್ರಮಾಣವೇನು?' ಎನ್ನಲು 'ದೇವ, ಭಕ್ತದೇಹಿಕದೇವ ನೀಂ ಪೊಕ್ಕಲ್ಲಿ ಪೊಕ್ಕವರೊಕ್ಕುದ ಕೊಂಡೆಂ ನೀನಿರ್ದ ಕುಲವೆ ಸತ್ಕುಲಂ ನಿನ್ನಿಂದ ನಾಂ ಕುಲಜನೆ ಕೂಡಲಸಂಗ' ಎಂದು ನುಡಿದರು ೧೨ನೆಯ ಶತಮಾನದಲ್ಲಿಯ ಅಸ್ಪೃಶ್ಯತಾ ನಿವಾರಣೆಯ ಸ್ಪಷ್ಟ ಹೆಜ್ಜೆಗುರುತುಗಳೆನಿಸಿವೆ. ಬಸವಣ್ಣನಂತಹ ಮಹಾಮಹಿಮನನ್ನು ರಾಜಾಂಗಣದ ಬೀದಿಯಲ್ಲಿ ನಿಲ್ಲಿಸಿ ಸ್ಪೃಶ್ಯಾಸ್ಪೃಶ್ಯತೆಯ ಬಗೆಗೆ ನ್ಯಾಯ ವಿಚಾರಣೆ ನಡೆಸಿದ್ದು ಜಾಗತಿಕ ದಾಖಲೆ ಎನಿಸಿದೆ.

ವಚನಕಾರ್ತಿಯರಿಗೆ ಶಿಕ್ಷಣ ಸಂವೇದನೆ

ವಚನಕಾರರು ಸಮಾಜ ವಿವಿರ್ಶೆಯಲ್ಲಿ ಪುರುಷರಿಗಿಂತ ಎಂದೂ ಹಿಂದೆ ಬಿದ್ದವರಲ್ಲ. ಹಲವು ಶರಣೆಯರು ಕನ್ನಡವನ್ನಷ್ಟೇ ಅಲ್ಲ ; ಸಂಸ್ಕೃತಭಾಷೆಯಲ್ಲಿ ಪಾರಂಗತರೂ ಆಗಿದ್ದರು. ಅದರಲ್ಲಿ ಪ್ರೌಢಿಮೆಯನ್ನು ಸಾಧಿಸಿದ್ದರು. ಅಮುಗೆ ರಾಯಮ್ಮನ ಪ್ರಕಾರ ಇಷ್ಟಲಿಂಗ ಭಿನ್ನವಾದರೆ ಅದನ್ನು ಧರಿಯಿಸಿದವ ಪ್ರಾಣಾರ್ಪಣೆ ಮಾಡಬೇಕೆಂಬ ತನ್ನ ಸದಭಿಪ್ರಾಯಕ್ಕೆ ಚಿತ್ಪಿಂಡಾಗಮ, ವಾತುಲಾಗಮಗಳ ಉಲ್ಲೇಖ ನೀಡಿರುವುಳು. ಶರಣೆ ಮುಕ್ತಾಯಕ್ಕೆ ಏಕತತ್ವ, ತ್ರಿತತ್ವ, ಪಂಚತತ್ವ, ಪಂಚವಿಂಶತಿ ತತ್ವ, ಷಟ್ತ್ರಿಂಶತ್‌ತತ್ವಗಳ ವಿಷಯಗಳ ಮರ್ಮ ಅರಿತಿದ್ದಳು. ಶರಣೆ ಬೊಂತಾದೇವಿ ನಾಲ್ಕು ವೇದ, ಹದಿನಾರು ಶಾಸ್ತ್ರ, ಹದಿನೆಂಟು ಪುರಾಣ, ಇಪ್ಪತ್ತೆಂಟು ಆಗಮಗಳ ವಿಷಯಗಳನ್ನು ಕರಗತಗೊಳಿಸಿಕೊಂಡುದು ಅವಳ ವಚನಗಳಿಂದ ತಿಳಿದು ಬರುವ ಅಂಶ.

"ಮಹಿಳೆಯ ಬದುಕಿನ ಚರಿತ್ರೆಯ ಪುಟಗಳನ್ನು ಹಿಂದಕ್ಕೆ ತಿರುವಿ ನೋಡಿದರೆ ತುಂಬಾ ಭಯಾನಕವೆನಿಸುತ್ತದೆ. ೧೨ನೆಯ ಶತಮಾನದಲ್ಲಿ ಸ್ತ್ರೀ ಗೆ ಇದ್ದ ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಅದಕ್ಕೂ ಪೂರ್ವದಲ್ಲಿ ಇದ್ದಿರಲಿಲ್ಲ. ವೇದ ಪೂರ್ವದಲ್ಲಿ ಮಹಿಳೆ ಒಂದಷ್ಟು ಸ್ವಾತಂತ್ರ್ಯ ಹೊಂದಿದ್ದಳೆಂದು ಕೆಲವು ಗ್ರಂಥಗಳು ಹೇಳಲ್ಪಡುತ್ತವೆ. ಆದರೆ ವೇದ ಹಾಗೂ ವೇದೋತ್ತರದಲ್ಲಿ, ಸ್ಮೃತಿಗಳ ಕಾಲದಲ್ಲಿ ಸ್ತ್ರೀಗಿದ್ದ ಸಮಾನ ಅವಕಾಶಗಳು ಮರೆಯಾದವೆಂದು ಹೇಳಲಾಗುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಆಹಾರ ಉತ್ಪಾದನೆ ಮತ್ತು ವಿತರಣೆಯಿಂದ ಉಂಟಾದ ಆರ್ಥಿಕ ಸಂಬಂಧಗಳು ಇಡಿಯಾಗಿ ಸಾಮಾಜಿಕ ಸ್ವರೂಪವನ್ನೇ ಬದಲಾಯಿಸಿದವು. ಉತ್ಪಾದನಾ ಸಂಬಂಧಗಳ ಹಿನ್ನಲೆಯಲ್ಲಿ ರೂಪು ತಾಳಿದ ಸಾಮಾಜಿಕ ಸಂಬಂಧಗಳಲ್ಲಿ ಕಾಣಿಸಿಕೊಂಡ ವರ್ಗ ಪ್ರಜ್ಞೆಯು ಉತ್ಪಾದನಾ ಸಾಧನಗಳ ಮೇಲೆ ಪುರುಷನ ಹಿಡಿತ ಬಲವಾಗಿ, ಸ್ತ್ರೀ ಆಗ ದ್ವಿತೀಯ ದರ್ಜೆಗೆ ನೂಕಲ್ಪಟ್ಟಳು. ಈ ಹಂತದಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಬದುಕಿನಿಂದ ಸ್ತ್ರೀ

ವಂಚಿತಳಾಗಿ ಗಂಡಿನ ಆಶ್ರಯದಲ್ಲಿ ಬಾಳಿ ಬದುಕುವ ಪ್ರಸಂಗ ತಲೆದೋರಿತು. ಇಲ್ಲಿಂದ ಸ್ತ್ರೀಯ ಕುರಿತಾದ ಆಲೋಚನಾ ವಿಧಾನವೇ ಬದಲಾಯಿತು. ಸ್ತ್ರೀ ಕೇವಲ ನಾಲ್ಕು ಗೋಡೆಗಳ ಮಧ್ಯದಲ್ಲಿರಬೇಕು. ಅವಳು ಅಬಲೆ, ಅವಳು ಬಾಳಬೇಕಾದರೆ ಪುರುಷನ ನೆರವು ಅತ್ಯಗತ್ಯ. ಹೆಣ್ಣು ಮಾಯೆ, ರಾಕ್ಷಸಿ, ಚಂಚಲೆ, ಅಬಲೆ ಎಂಬೆಲ್ಲ ಪಟ್ಟಗಟ್ಟಿ ಅವಳನ್ನು ತುಂಬಾ ವ್ಯವಸ್ಥಿತವಾಗಿ ಪುರುಷಪ್ರಧಾನ ವ್ಯವಸ್ಥೆ ಹತ್ತಿಕ್ಕಲ್ಪಟ್ಟಿತು. ಸ್ಮೃತಿಕಾರರ ನಿಲುವಿನಿಂದ ಸ್ತ್ರೀಯ ಬದುಕಲ್ಲಿ ಅಂಧಕಾರ ಮುಸುಕಿತು.

ಅಂದಿನ ಪುರೋಹಿತಶಾಹಿ ಧಾರ್ಮಿಕ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿ ಹುಟ್ಟಿದ ಜೈನ, ಬೌದ್ಧ ಧರ್ಮಗಳು ಕೂಡ ಅಂಧಕಾರದಲ್ಲಿ ಮುಳುಗಿದ್ದ ಸ್ತ್ರೀಯ ಬದುಕಿಗೆ ಬೆಳಕಿನ ಕಿರಣಗಳಾಗಿ ಬಂದವಾದರೂ, ಜೈನ ಧರ್ಮವು ಸ್ತ್ರೀಗೆ ಮುಕ್ತಿಯನ್ನು ನಿರಾಕರಿಸಿದರೆ, ಆರಂಭದಲ್ಲಿ ಬೌದ್ಧ ಧರ್ಮವು ಸ್ತ್ರೀಯನ್ನು ತನ್ನ ಸಂಘದಲ್ಲಿ ಸೇರಿಸಿಕೊಳ್ಳು ಅನುಮತಿ ನೀಡಲಿಲ್ಲ. ನಂತರ ಬೌದ್ಧ ಧರ್ಮ ಸ್ತ್ರೀಗೆ ಉನ್ನತ ಸ್ಥಾನ ನೀಡಿತ್ತು. ಅನಂತರದಲ್ಲಿ ಈ ಧರ್ಮಗಳು ಸ್ತ್ರೀ ವಿಚಾರದಲ್ಲಿ ಹಗುರ ನಿಲುವನ್ನು ತಳೆದವು. ಹಿಂದೂ ಧರ್ಮ ಸ್ತ್ರೀಯ ಬದುಕನ್ನು ಪಾತಾಳಕ್ಕೆ ತಳ್ಳಿತು. ಸ್ತ್ರೀ ಈ ಗ್ರಹಣದಿಂದ ಬಿಡುಗಡೆಯಾಗಲು ೧೨ನೆಯ ಶತಮಾನದವರೆಗೆ ಕಾಯಬೇಕಾಯಿತು"೪.

ಕುಂಬಾರ ಗುಂಡಯ್ಯನ ಪತ್ನಿ ಕೇತಲದೇವಿ ಇಡೀ ಸಂಸ್ಕೃತ ಶ್ಲೋಕವನ್ನೇ ತನ್ನ ವಚನದಲ್ಲಿ ಉದಾಹರಿಸಿರುವಳು. ಉರಿಲಿಂಗ ಪೆದ್ದಿ ಶ್ರೇಷ್ಠ ಸಂಸ್ಕೃತ ವಿದ್ವಾಂಸ. ಅವನ ಮಡದಿ ಸಂಸ್ಕೃತ ಶ್ಲೋಕ ಒಂದರ ಉದಾಹರಣೆ ನೀಡಿರುವಳು. ಅಕ್ಕಮಹಾದೇವಿ ಪ್ರಾಚೀನ ಧರ್ಮಗ್ರಂಥಗಳಲ್ಲಿ ಅಗ್ರಗಣ್ಯೆಯೆನಿಸಿರುವಳು. ಶಿವಪುರಾಣ, ಶಿವರಹಸ್ಯ, ಪರಮರಹಸ್ಯಗಳ ಹಲವು (ವಚನಗಳನ್ನು) ಶ್ಲೋಕಗಳನ್ನು ತನ್ನ ವಚನಸಾಹಿತ್ಯದಲ್ಲಿ ಬಳಸಿಕೊಂಡಿರುವಳು. ಶಿವರಹಸ್ಯದ ಶ್ಲೋಕಗಳು ಷಟ್ಸ್ಥಲಗಳ ವಿವರಣೆ ನೀಡುತ್ತವೆ. 'ಅಣೋರಣೀಯಾನ್ ಮಹತೋ ಮಹೀಯಾನ್' ಶ್ಲೋಕ ತೈತ್ತರೀಯ ಶ್ರುತಿಯಲ್ಲಿಯದು. ಇದನ್ನು ಶಿವಶರಣೆಯರು ಬಳಸಿಕೊಂಡಿದ್ದನ್ನು ನೋಡಿದರೆ ಸ್ತ್ರೀಯರು ವೇದಾಧ್ಯಯನಕ್ಕೆ ಅನರ್ಹರೆಂದು ಮೇಲ್ವರ್ಗದವರು ಘೋಷಿಸಿದ್ದರೂ ವೇದಗಳು ಸೇರಿದಂತೆ ಸಂಸ್ಕೃತ ವಾಙ್ಮಯವನ್ನು ಸ್ತ್ರೀಯರು ಅಧ್ಯಯನ ಮಾಡಿದ್ದು, ವೀರಶೈವಧರ್ಮ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಮುಕ್ತ ಅವಕಾಶ ಮಾಡಿಕೊಟ್ಟಿದ್ದು, ಹೆಣ್ಣುಮಕ್ಕಳು ಅದನ್ನು ತಮ್ಮ ವಿದ್ಯಾಭ್ಯಾಸಕ್ಕೆ ಸದುಪಯೋಗಪಡಿಸಿಕೊಂಡು ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಂಡಿರುವರು.

ಉರಿಲಿಂಗಪೆದ್ದಿಯ ಬಗ್ಗೆ ಹೇಳಬೇಕಾದ ಕೆಲವು ಮಾತುಗಳಿವೆ. ದಲಿತ ವರ್ಗದವನನ್ನು ಶಿಷ್ಯನನ್ನಾಗಿ ಸ್ವೀಕರಿಸಿಕೊಂಡಿದಷ್ಟೇ ಅಲ್ಲದೆ ಅವನ ಹೆಂಡತಿ ಕಾಳವ್ವೆಯನ್ನು ಶಿಷ್ಯೆಯನ್ನಾಗಿ ಸ್ವೀಕರಿಸಿದ್ದು, ಅವಳನ್ನು ಕನ್ನಡ-ಸಂಸ್ಕೃತ ಬಲ್ಲಿದಳನ್ನಾಗಿಸಿದು. ಉರಿಲಿಂಗಪೆದ್ದಿ ಆಧುನಿಕಪೂರ್ವ ಭಾರತ ಕಂಡ ಮೊಟ್ಟ ಮೊದಲ ದಲಿತ ವರ್ಗದ ಸಂಸ್ಕೃತ ವಿದ್ವಾಂಸನೆನಿಸದರೆ, ಅವನ ಪತ್ನಿ ಕಾಳವ್ವೆ ಭಾರತದೇಶದ ದಲಿತವರ್ಗದ ಸಂಸ್ಕೃತಿ ಬಲ್ಲಿದ ಮೊದಲ ಕವಯಿತ್ರಿಯೆನಿಸಿಕೊಂಡಿರುವಳು. ಉರಿಲಿಂಗದೇವನ ಉತ್ತರಾಧಿಕಾರಿಯಾಗಿ ಅಸ್ಪೃಶ್ಯ ಜಾತಿಯ ಶಿಷ್ಯ ಉರಿಲಿಂಗಪೆದ್ದಿ ನೇಮಕವಾದುದು

ಇಂದಿಗೂ ಅಂಬಲಿಂಗದಲ್ಲಿಯ ಮೂರ್ತಿಗಳು ಬೀದರ ಜಿಲ್ಲೆಯಲ್ಲಿ ಕಂಡು ಬರುವವು. ಇದು ಭಾರತದ ಸಾಮಾಜಿಕ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ದಾಖಲಿಸಬೇಕಾದ ಸಂಗತಿ.

ಬಸವಾದಿ ಯುಗದ ಶರಣ-ಶರಣೆಯರು ರಚಿಸಿರುವ ವಚನಗಳ ಕಲಸ್ಥಿತಿ ಸೂಕ್ಷ್ಮ ವಿವೇಚನೆಗೈದರೆ ಅವಲೋಕಿಸಿದಾಗ ತಿಳಿದು ಬರುವ ಪ್ರಮುಖ ಅಂಶಗಳಿಷ್ಟು :

೧. ಶರಣರು ತಮ್ಮನ್ನು ಆಧ್ಯಾತ್ಮಿಕತೆಗೆ ಒಳಪಡಿಸಿಕೊಂಡರು.

೨. ತಾವು ಸಾಧನೆಗೈದು ನಿಜವಾದ ಸಾಧಕರೆನಿಸಿದರು.

೩. ಇತರರ ವಿಮರ್ಶೆಗೆ ಮುನ್ನ ತನ್ನನ್ನು ಆತ್ಮವಿಮರ್ಶೆಗೆ ಒಡ್ಡಿಕೊಂಡರು.

೪. ವ್ಯಕ್ತಿವರ್ಗ ವಿಮರ್ಶಿಸಿದರೂ ಅಸಹನೆ ವ್ಯಕ್ತಪಡಿಸಿರುವರು. ಬ್ರಾಹ್ಮಣ, ಜೈನವರ್ಗದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರೂ ಅದು ಸಾತ್ವಿಕ ಸಿಟ್ಟು ಆಗಿತ್ತೇ ಹೊರತು ಅದರಲ್ಲಿ ಯಾವುದೇ ದೋಷಕ್ಕೆ ಅವಕಾಶವಿರಲಿಲ್ಲ.

೫. ಬ್ರಾಹ್ಮಣರಂತೆ ವೀರಶೈವ ಸಮುದಾಯದ ಗುರು-ವಿರಕ್ತ-ಜಂಗಮದ ಬಗ್ಗೆ ಹೊಸಬಾದ ಟೀಕೆ, ಅರ್ಥಹೀನ ಕರ್ಮಾಚರಣೆಗಳ ಬಗ್ಗೆ ಟೀಕೆ.

೬. ಶಿವಭಕ್ತರನ್ನು ಸಮನಾಗಿ ಕಾಣುವಲ್ಲಿ ಅಂತರಂಗದ ಕಳಕಳಿ.

೭. ವೀರಶೈವಧರ್ಮದ ತಾತ್ವಿಕ ಸಿದ್ಧಾಂತಿಕ ಚೌಕಟ್ಟಿನಲ್ಲಿ ಚಳುವಳಿ ನಡೆದುದು.

ಹೀಗೆ ೧೨ನೆಯ ಶತಮಾನದಲ್ಲಿ ಧರ್ಮ ಮತ್ತು ಸಾಮಾಜಿಕ ಪ್ರಜ್ಞೆ ಒಂದಕ್ಕೊಂದು ಬೆಸೆದುಕೊಂಡೇ ಬಂದಿವೆ.

ವಚನಕಾರರು ತಮ್ಮೆದುರು ಇದ್ದ ಮಾನವ ಕುಲವನ್ನು ಎರಡೇ ವಿಭಾಗವಾಗಿ ವಿಂಗಡಿಸಿದ್ದಾರೆ. 'ಭಕ್ತವರ್ಗ, ಭವಿವರ್ಗ' ಈ ಎರಡೂ ವರ್ಗದವರ ಲಕ್ಷಣಗಳನ್ನೂ ತಿಳಿಸಿದ್ದಾರೆ. ವಚನಕಾರರು ದೈವದಲ್ಲಿ ನಂಬಿಗೆಯುಳ್ಳವರನ್ನು 'ಭಕ್ತ' ರೆಂದೂ 'ನಾಸ್ತಿಕರನ್ನು' ಅಥವಾ (ದೈವದಲ್ಲಿ) ದೇವರಲ್ಲಿ ನಂಬಿಗೆ ಇಲ್ಲದವರನ್ನು 'ಭವಿ' ಗಳೆಂದೂ ಕರೆದಂತೆ ತಿಳಿಯುತ್ತದೆ. ಬಸವಣ್ಣನವರ ಅಭಿಪ್ರಾಯದಲ್ಲಿ ವೈಷ್ಣವರು ಭವಿಗಳಲ್ಲ; ಅವರೆ ಜೈನರಾದ ಬಿಜ್ಜಳನು 'ಭವಿ'ಯು. ಬಸವಣ್ಣನವರೇ ಬಿಜ್ಜಳನಿಗೆ ಒಂದೆಡೆ 'ಭವಿ' ಎಂದು ಕರೆದಿದ್ದಾರೆ. ಅಂತೆಯೇ 'ಸಮಾಜ'ವೆಂದರೆ ವಚನಕಾರರ ಅರ್ಥದಲ್ಲಿ ಅದೊಂದು ವಿಶಿಷ್ಟ ಜಾತಿಯಲ್ಲ; ಅದೊಂದು ಸುಸಂಸ್ಕೃತ ವ್ಯಕ್ತಿಗಳ ಸಮುದಾಯ ಎಂದು ಹೇಳಬಹುದು.

ಇಂತಹ ಸುಸಂಸ್ಕೃತ ವ್ಯಕ್ತಿಗಳ ಸಮುದಾಯವನ್ನು ನಿರ್ಮಿಸುವುದೇ ಅವರ ಉದ್ದೇಶವಾಗಿತ್ತು; 'ಭಕ್ತ' ಮತ್ತು 'ಶರಣ' ಎನ್ನುವ ಅವರ ಪದಗಳು ಇಂತಹ ಜನರನ್ನೇ ಕುರಿತಾದವುಗಳೆಂದು ಹೇಳಬಹುದು. 'ಭಕ್ತ' ಮತ್ತು 'ಭವಿ' ಎಂಬ ವರ್ಗಗಳ ಲಕ್ಷಣಗಳನ್ನೂ ಅವರ ವಚನಗಳಲ್ಲಿ ಧಾರಳವಾಗಿ ಕಾಣುತ್ತೇವೆ.

'ಭವಿ' ಎಂಬ ಪದಕ್ಕೆ 'ವೀರಶೈವನಲ್ಲದವನು' ಎಂಬ ಅರ್ಥವನ್ನೇ ಕೇವಲ ಗ್ರಹಿಸಲಾಗದು. ಯಾಕೆಂದರೆ ವಚನ ಸಾಹಿತ್ಯದಲ್ಲಿ 'ಭವಿ' ಎಂಬ ಪದವನ್ನು ಅನೇಕಾರ್ಥಗಳಲ್ಲಿ ಬಳಸಿದ್ದಾರೆ. ಉದಾಹರಣೆಗೆ 'ಭಾವದಲ್ಲಿ ಗಮನ, ಪ್ರಾಣದಲ್ಲಿ ಲೋಭ, ಶ್ರೋತ್ರದಲ್ಲಿ ಕುಶಬ್ದ, ನಾಸಿಕದಲ್ಲಿ ದುರ್ಗಂಧ, ನೋಟದಲ್ಲಿ ಕಾಮ, ಶಬ್ದದಲ್ಲಿ ವಿರೋಧ, ಇಂತಹ 'ಭವಿ'ಯ ಕಳೆದು 'ಭಕ್ತ'ನ ಮಾಡಿದ.........ಎಮ್ಮ ಬಸವಣ್ಣ' ಎಂದು ಚೆನ್ನಬಸವಣ್ಣನು, 'ಭವಿ' ಎಂಬುದ ತೊಡೆದು 'ಭಕ್ತ' ನೆಂದೆಸಿದ ಗುರುವೆ' ಎಂದೂ ಮತ್ತು 'ಅಯ್ಯಾ ಆದಿ ಅನಾದಿಯಿಂದತ್ತತ್ತ ಮೀರಿತೋರುವ......... ಸತ್ಯಸನ್ಮಾರ್ಗದ ಶಿವಶರಣರನರಿಯದೆ ಮರ್ತ್ಯದ ಜಡಜೀವಿ 'ಭವಿ' ಪ್ರಾಣಿಗಳ ಹಾಗೆ, 'ಕಾಮ ಒಂದು ಭವಿ, ಕ್ರೋಧ ಒಂದು ಭವಿ...........ಇಂತೀ ಏಳು 'ಭವಿ'ಗಳ ತಮ್ಮೊಳಗಿಟ್ಟುಕೊಂಡು' ಎಂದು ಮಹಾದೇವಿಯಕ್ಕನು, 'ಒಡಲ ಕಳವಳಕ್ಕಾಗಿ ಅಡವಿಯಪೊಕ್ಕೆ; ಗಿಡಗಿಡದಪ್ಪದೆ ಬೇಡಿದೆ; ಆನುಬೇಡಿ 'ಭವಿ' ಯಾದೆಯೆಂದೂ, (ಅಕ್ಕ) 'ವಿಭೂತಿ ರುದ್ರಾಕ್ಷಿ ಇದ್ದವರವ 'ಲಿಂಗ'ವೆಂಬೆ ಇಲ್ಲದವರ 'ಭವಿ' ಯೆಂಬೆ, ಎಂದು ಬಸವಣ್ಣನವರು, 'ಭವಿಯ ಕಳೆದೆವೆಂಬ ಮರುಳು ಜನಂಗಳು ನೀವು ಕೇಳಿರೇ; ಭವಿಯಲ್ಲವೇ ನಿಮ್ಮ ತನುಗುಣಾದಿಗಳು, ನಿಮ್ಮ ಮನಗುಣಾದಿಗಳು,? ನಿಮ್ಮ ಪ್ರಾಣಗುಣಾದಿಗಳು?' ಎಂದು ಅಲ್ಲಮಪ್ರಭುವು, ಹೇರೂರಹೆಂಗಸು ಭವಿಗೆ ಸತಿಯಾಗಳೇ?' 'ಕಾಯವೇಷಂ! ಮನದ 'ಭವಿ'ತನವದೇಂಲೇಸೇ? ಎನ್ನನರ್ಚಿಸಿ ಭವಿಗೆ ಕೈಯಾನುವರೆ ದೇವಿ?' ಎಂದು ಹರಿಹರ ಕವಿಯೂ ಬಳಸಿದ್ದಾರೆ. 'ಭವಿ' ಎಂಬ ಪದಕ್ಕೆ ಹೊಲಸು, ಹೀನ, ದುರ್ಗಣ, ಅಪವಿತ್ರ, ಅಶುದ್ಧ, ಹೇಸಿಗುಣ, ಬೇಡುವುದು, ಎಂಬ ಅರ್ಥಗಳೇ ಮುಖ್ಯವಾಗಿದ್ದು 'ಭಕ್ತ'ನಾದವನು ಈ ದುರ್ಗುಣಗಳಿಂದ ದೂರವಿರಬೇಕೆಂದು ಅವರ ಅಭಿಮತ ವಾಗಿತ್ತು. ಶರಣರಲ್ಲಿ ಹಲವರು ಭವಿಗಳ ಸಂಗ, ಕೂಟ, ಊಟ, ಬೇಡವೆಂದು ಹೇಳಿದಾಗ ದುರ್ಜನರು ಆರೇ ಇರಲಿ ಅವರ ಸಂಗ, ಸಹವಾಸ ಬೇಡವೆಂದರು. ಅವರು ಹಾಗೆ ಹೇಳಿದ್ದು ಸಂಸ್ಕೃತಭಾಷೆಯವರು ಅನ್ಯಭಾಷೆಗಳನ್ನು 'ಅಪಭ್ರಂಶ' ಮ್ಲೇಚ್ಛ'ಗಳೆಂದು ಕರೆದು, ವಿಮತಸ್ಥರ ಭಾಷೆಗಳನ್ನು ಉಚ್ಚರಿಸುವುದೂ ಅಪವಿತ್ರವೆಂದು ತಿಳಿದಂತೆ, ವಚನಕಾರರು ಭವಿಗಳ ವಿಷಯಕ್ಕೆ ಹೇಳಿದಂತಿದೆ. 'ಶಿವಭಕ್ತಿ'ಯು ಸರ್ವಸಮಾನತೆಗೆ ಕಾರಣವಾಗಿದೆ ಬಸವಣ್ಣನವರಲ್ಲಿ. ಆದ್ದರಿಂದಲೇ 'ವಿಪ್ರ ಮೊದಲು ಅಂತಜ ಕಡೆಯಾಗಿ ಶಿವಭಕ್ತರನೊಂದೇ ಎಂಬೆ' ಎಂದು ಅವರು ಉದ್ಘೋಷಿಸಿದರು. ವಚನಕಾರರ ಸಮಾಜದಲ್ಲಿ ಹಿರಿದು ಕಿರಿದು ಭಾವನೆಗಳಿಗೆ ಪ್ರಧಾನವಾದುದು ಹಣವಲ್ಲ, ಗುಣ; ಮತ್ತು ಯೋಗ್ಯತೆ ಹಾಗೂ ಶೀಲ; ಅರಿವಿಂಗೆ ಹಿರಿದು ಕಿರಿದೆಂಬ ಭಾವವಿಲ್ಲ; ಶಿವ ಭಕ್ತರಾದಮೇಲೆ ಬಡವ-ಬಲ್ಲಿದ, ಹಿರಿ-ಕಿರಿಯ, ಪ್ರಜೆ-ಅರಸು, ಬ್ರಾಹ್ಮಣ-ಶೂದ್ರ, ಗುರು-ಶಿಷ್ಯ; ಎಲ್ಲರೂ ಒಂದೇ ಎಂಬ ಸಮಾನಭಾವವನ್ನು ವಚನಕಾರರು ತಳೆದಿದ್ದರು. ಸ್ತ್ರೀಪುರುಷರಲ್ಲಿಯೂ ಯಾವ ತರತಮಭಾವವನ್ನು ಅವರು ಎಣಿಸಿರಲಿಲ್ಲ. ಎಲ್ಲರಲ್ಲಿಯೂ ಆತ್ಮ ಮತ್ತು ಶಿವ ಇರುವುದರಿಂದ ಶಿವಭಕ್ತಿಯ ಸಮನ್ವಯ ಮಾರ್ಗಕ್ಕೆ ಯಾರು ಬೇಕಾದರೂ ಸೇರಬಹುದು; ವರ್ಗಭೇದಗಳು 'ಹಣ'ದ ಮೇಲಿಂದ ಬಂದರೆ, ವರ್ಣಭೇದಗಳು ಹುಟ್ಟಿದ ಜಾತಿ, ಕುಲ, ಗೋತ್ರಗಳನ್ನು ಅನುಸರಿಸಿ ಬಂದುವು; ಅಲ್ಲದೇ ಬಸವಣ್ಣನವರ ಕಾಲದಲ್ಲಿ ವರ್ಗಭೇದಗಳು,

ಉದ್ಯೋಗಗಳ ಮೇಲಿಂದಲೂ ಅನುಸರಿಸಿ ಬಂದಿವೆ. ಉದ್ಯೋಗಗಳು ನಿಯಮಿತವಾಗಿದ್ದವು; ಅವುಗಳಲ್ಲಿ ಬಸವಣ್ಣನವರು ಸಮಾನತೆಯನ್ನು ತಿಳಿಸಿದರು. ಮನೆಗೆ ಬಂದವನು ಭಕ್ತನಾದ ಮೇಲೆ ಅವನ 'ಕಾಯಕವಾವುದೆಂದು ಬೆಸಗೊಳ್ಳಲಾಗದೆಂದು' ತಿಳಿಸಿದರು.

"ಜಾತಿವ್ಯವಸ್ಥೆಯಿಂದಾಗಿ ಭಾರತೀಯ ಸಮಾಜ ಶತಶತಮಾನಗಳಿಂದಲೂ ನರಳುತ್ತಲೇ ಮುಂದುವರೆದಿದೆ. ಜಾತಿ ಮತ್ತು ಉಪ ಜಾತಿಗಳು ಮಾನವನ ಸಾಮಾಜಿಕ ಬೆಳವಣಿಗೆಯನ್ನು ಕುಬ್ಜಗೊಳಿಸಿವೆ. ಸಾಮಾಜಿಕ ಐಕ್ಯಕ್ಕೆ ಸವಾಲೊಡ್ಡಿವೆ. ೨೬೦೦ ವರ್ಷಗಳ ಹಿಂದೆ ಭಗವಾನ ಬುದ್ಧ ಜಾತ್ಯತೀತ ಧರ್ಮಮಾರ್ಗವನ್ನು ಕಂಡುಹಿಡಿದ. ವರ್ಣವ್ಯವಸ್ಥೆಯಿಂದಾಗಿ ತುಳಿತಕ್ಕೊಳಗಾದ ಜನ ಮೊದಲಬಾರಿಗೆ ಸಾಮಾಜಿಕ ಸ್ವಾತಂತ್ರ್ಯವನ್ನು ಉಸಿರಾಡಿದರು. ಆದರೆ ವರ್ಣವ್ಯವಸ್ಥೆಯನ್ನು ಪ್ರತಿಪಾದಿಸುವ ಮನುವಾದಿಗಳಿಂದಾಗಿ ಬೌದ್ಧಧರ್ಮ ದೇಶದಲ್ಲೇ ಪರಕೀಯವಾಗುವಂಥ ಪರಿಸ್ಥಿತಿ ಉಂಟಾಯಿತು"೫. ವಚನಕಾರರ ಕಾಲದಲ್ಲಿ 'ವರ್ಗಭೇದ'ಗಳಿಗಿಂತಲೂ 'ವರ್ಣಭೇದ'ಗಳೇ ವಿಶೇಷವಾಗಿದ್ದವು. ಎಲ್ಲರ ದೇಹವೂ ದೇವನ ವಾಸಸ್ಥಾನವಾದುದರಿಂದ ಯಾರದೇಹಗಳೂ ಅಪವಿತ್ರವಲ್ಲ; ನಾವು ವರ್ಣಭೇದ ಮಾಡುವುದೆಂದರೆ ದೇವನಲ್ಲಿಯೇ ಭೇದವನ್ನು ಅರಸಿದಂತೆ. ದೇವನಿಗೆ ಆವ ಕುಲವರ್ಣ ಗೋತ್ರಗಳಿಲ್ಲ. ದೇವನೊಲ್ದವನ ಕುಲವೇ ಸತ್ಕುಲ; ಸಜ್ಜಾತಿ ಎಂದು ತಿಳಿಸಿದರು.

ದಯೆಯೇ ಧರ್ಮದ ಮೂಲ. ಇದು ಅನುಭವ ಮಂಟಪ ರೂಪಿಸಿದ್ದಾಗಿದೆ. ವಚನಕಾರರು ಶಾಂತಿಪ್ರೀಯರು, ಮೂಢ ನಂಬಿಕೆಗಳನ್ನು ಕಿತ್ತು ಎಸೆಯಲು ಶ್ರಮಿಸಿದವರು. ಶಾಂತಿ, ಅಹಿಂಸೆ, ಸಹನೆ, ಸಹಬಾಳ್ವೆ, ಸೇವೆ, ಪ್ರೀತಿ, ಸದಾಚಾರ, ಸದ್ಗುಣ ಇವರದ್ದಾಗಿತ್ತು. ಲೋಕದ ವಿಪರೀತ ನಡವಳಿಕೆ ಶಿವಶರಣರಿಗೆ ಇಷ್ಟವಾಗಿಲ್ಲ. ದುರಾಚಾರಿಗಳ ಧರ್ಮವು 'ರಕ್ಕಸರ ಧರ್ಮ' ಎಂದು ಖಂಡಿಸಿದ್ದಾರೆ. ಅನುಭಾವ ಮಂಟಪದ ಮಹಾನುಭಾವಿಗಳು ರೂಪಿಸಿದ ಧರ್ಮದ ಮುಖ್ಯ ಲಕ್ಷಣಗಳು ಈ ಕೆಳಗಿನಂತಿವೆ.

- ❖ ದೇವರ ಕಲ್ಪನೆ
- ❖ ಏಕದೇವೋಪಾಸನೆ
- ❖ ದೇವರ ನೆಲೆ
- ❖ ದೇವರ ಬಗೆಗಿನ ಮಾನವನ ಚಿಂತನೆ
- ❖ ಗೊಡ್ಡು ಆಚಾರಗಳ ಉಚ್ಚಾಟನೆ

ಕಲ್ಲು, ಕಂಚು ಇತ್ಯಾದಿ ಮೂರ್ತಿಗಳನ್ನು ದೇವರೆಂದು ಭಾವಿಸಲಿಲ್ಲ. ಶಿವಶರಣರ ದೃಷ್ಟಿಯಲ್ಲಿ ದೇವರೆಂದರೆ ನಿರಾಕಾರ, ನಿರವಯವಾದ ಅಖಂಡ ಪರಾತ್ಪರ ವಸ್ತುವಾಗಿತ್ತು. ಇವರು ಇಷ್ಟಲಿಂಗ ತತ್ತ್ವಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟರು. ಇದರಿಂದಾಗಿ ಭಕ್ತ ಮತ್ತು ದೇವರ ನಡುವೆ ಅಡ್ಡಗೋಡೆಯಾಗಿದ್ದ ಪುರೋಹಿತ ಶಾಹಿಯು ಛಿದ್ರಛಿದ್ರವಾಗಲು ಕಾರಣವಾಯಿತು.

ಲಿಂಗಧಾರಿಗಳಿಗೆ 'ಇಷ್ಟಲಿಂಗವೇ ದೇವರು' ಅವನನ್ನು ಬಿಟ್ಟು ಅನ್ಯದೇವರಿಲ್ಲವೆಂದು ಸಾರಿದರು. ಬಸವಣ್ಣನವರು ಈ ರೀತಿ ಹೇಳಿದ್ದಾರೆ :

'ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ
ದೇವನೊಬ್ಬನೇ ಕಾಣಿರೋ. ಇಬ್ಬರೆಂಬುದು ಹುಸಿ ನೋಡಾ
ಕೂಡಲಸಂಗಮದೇವನೊಬ್ಬನೇ ಅಲ್ಲದೆ ಇಬ್ಬರಿಲ್ಲವೆಂದಿತ್ತು ಆ ವೇದ'

(ವ.ಶ.ಸಾ.ವ. ೧೪೩)

ಏಕದೇವೋಪಾಸನೆಯನ್ನು ಆಚರಿಸುತ್ತಿದ್ದರು. ಇದು 'ಅನುಭವ ಮಂಟಪ' ರೂಪಿಸುವುದೆಂದು ಮನಗಾಣಬೇಕು.

ದೇವರ ನೆಲೆಯನ್ನು ಹುಡುಕುವುದು ತರವಲ್ಲ. ತೀರ್ಥಕ್ಷೇತ್ರ, ಕೆರೆ, ಹಳ್ಳ, ಮರ, ದೇಗುಲ ಇಲ್ಲಿ ಹುಡುಕುವುದೇತಕೆ? ಎಂದು ಶಿವಶರಣರು ಪ್ರಶ್ನಿಸಿದ್ದಾರೆ. ಪ್ರತಿಯೊಬ್ಬರಲ್ಲೂ ಆ ಪರವಸ್ತು ಇರುವುದೆಂದು ತಿಳಿಸಿ ಅದನ್ನು ಇಷ್ಟಲಿಂಗದ ಮುಖಾಂತರ ಅರಿಯಲು ಬೋಧಿಸಿದರು. ದೇವರ ಬಗೆಗಿನ ಮಾನವನ ಚಿಂತನೆ ವಿಭಿನ್ನವಾಗಿದೆ. ಒಬ್ಬೊಬ್ಬರದ್ದು ಒಂದೊಂದು ರೀತಿಯಾಗಿದೆ. ತನ್ನಲ್ಲಿ ಆ ದೇವರನ್ನು ಕಾಣಬೇಕೆಂಬುದೇ ಶರಣರ ಅಭಿಮತವಾಗಿತ್ತು.

ವಚನಕಾರರ ಮೊತ್ತಮೊದಲ ಗಮನ ಗೊಡ್ಡು ಆಚಾರಗಳ ಉಚ್ಚಾಟನೆ ಮಾಡುವುದಾಗಿತ್ತು. ಇದಕ್ಕಾಗಿ ಶಕ್ತಿಮೀರಿ ಶ್ರಮಿಸಿದರು. ಜನಜಾಗೃತಿ ಮೂಡಿಸಿದರು. ವೀರಶೈವ ಧರ್ಮದ ನಿಜವಾದ ಆಚರಣೆಯೆಂದರೆ ನೂರಾರು-ಸಾವಿರಾರು ವ್ರತ ನಿಯಮಗಳ ಆಚರಣೆಯಲ್ಲ. ಅಷ್ಟಾವರಣ, ಷಟ್‌ಸ್ಥಲಗಳಾಚರಣೆಯೇ ಧರ್ಮದ ನಿಜವಾದ ಆಚರಣೆಯಾಗಿತ್ತು. ಇಷ್ಟಲಿಂಗಪೂಜೆಯಿಂದ ವ್ಯಕ್ತಿಗೆ ತಾನು ಇದ್ದ ಸ್ಥಳದಲ್ಲಿಯೇ ತನಗೆ ಅನುಕೂಲವಾದ ರೀತಿಯಲ್ಲಿ ದೇವರನ್ನು ಆರಾಧಿಸಬಹುದಾಗಿತ್ತು. ಅನುಭಾವದ ಸಾಧನೆ ಕೈಕೊಳ್ಳುವಂತಾಗಿತ್ತು.

ಹೀಗೆ ವೀರಶೈವರು ವಿಶ್ವಬಂಧುತ್ವವನ್ನು ಕುದುರಿಸುವ ಲಕ್ಷಣಗಳನ್ನು ಧರ್ಮದ ತತ್ತ್ವಗಳಾಗಿಸಿ; ವೀರಶೈವ ಧರ್ಮವನ್ನು ವಿಶ್ವಧರ್ಮವಾಗಿಸುವ ಮಟ್ಟಕ್ಕೆ ಬೆಳೆಸಿದರು. ಇದು ಅನುಭವ ಮಂಟಪದ ಸಾಧನೆಯ ಕೊಡುಗೆಯಾಗಿದೆ. ವಿಶ್ವದ ಧಾರ್ಮಿಕ ಇತಿಹಾಸದಲ್ಲಿ ಈ ರೀತಿ ಎಲ್ಲಿಯೂ ಆಗಿಲ್ಲ ಎನ್ನುವುದು ವಾಸ್ತವ ಸತ್ಯವಾಗಿದೆ.

ವಚನಕಾರರು ಸಮಾಜವನ್ನು ಜಂಗಮತತ್ತ್ವದ ಸಾಂಕೇತಿಕತೆಯಲ್ಲಿ ಕಂಡರು. ಇವರು ವರ್ಣಾಶ್ರಮ ಪದ್ಧತಿಯನ್ನು ವಿರೋಧಿಸಿದರು. ಜಾತಿ ಮತ ಪಂಥಗಳ ಅಸ್ತಿತ್ವವನ್ನು ಅಲ್ಲಗಳೆದರು.

ಜನ್ಮದಿಂದ ಯಾರೂ ದೊಡ್ಡವರಾಗುವುದಿಲ್ಲ. ದೊರಕುವ ಸುಸಂಸ್ಕಾರ, ಸದಾಚಾರ, ಅರಿಯುವ ಜ್ಞಾನ, ಬೆಳೆಸಿಕೊಳ್ಳುವ ಸದ್ಗುಣಗಳು ವ್ಯಕ್ತಿತ್ವವನ್ನು ಪ್ರಜ್ವಲಗೊಳಿಸುತ್ತವೆ. ಇದರಿಂದ ಸಾಮಾಜಿಕ

ಸ್ಥಾನಮಾನಗಳು ದೊರೆಯಬೇಕೆಂದು ಅಪೇಕ್ಷೆಯಾಗಿತ್ತು. ಒಬ್ಬ ವ್ಯಕ್ತಿಯ ಘನತೆಯನ್ನು ಹುಟ್ಟಿನಿಂದ ಗುರುತಿಸದೆ ಯೋಗ್ಯತೆಯಿಂದ ಗುರುತಿಸಬೇಕೆಂದು ಶಿವಶರಣರು ಆಚರಿಸಿ ತೋರಿಸಿದರು.

ಸಮಾಜದಲ್ಲಿ ಎಲ್ಲರು ಸಮಾನರು. ಶ್ರೀಮಂತ ಬಡವ ಭೇದಭಾವ ಕೂಡದು. ವಚನಕಾರರು ಇದನ್ನು ಸ್ವತಃ ನಡೆದು ತೋರಿಸಿ ಸಮಾಜಕ್ಕೆ ಮಾದರಿಯಾದರು.

ಮಹಾದೇವ ಭೂಪಾಲನು ರಾಜಭೋಗವನ್ನು ಬಿಟ್ಟು ಕಲ್ಯಾಣದಲ್ಲಿ ಗುಡಿಸಿನಲ್ಲಿದ್ದು ಕಟ್ಟಿಗೆ ಕಾಯಕ ಮಾಡಿ ಸಮಾಜಕ್ಕೆ ಮಾದರಿಯಾದರು. ರಾಜನಾಗಲೀ, ಶ್ರೀಸಾಮಾನ್ಯರಾಗಲೀ ಸಮಾಜದಲ್ಲಿ ಎಲ್ಲರೂ ಒಂದೇ ಎಂಬುದು ವಚನಕಾರರು ಪ್ರತಿಪಾದಿಸಿ ತೋರಿಸಿದ್ದಾರೆ.

"ಪ್ರಾಚೀನ ಹಿಂದೂ ಸಮಾಜ ವ್ಯಯಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಈ ರೀತಿ ನಾಲ್ಕು ವರ್ಣಗಳು ಅಸ್ತಿತ್ವದಲ್ಲಿದ್ದು ಮೊದಲ ಮೂರು ವರ್ಣಗಳ ಜನರು ದ್ವಿಜರೆನಿಸಿದ್ದರು. ಅವರು ತಮ್ಮ ಕೆಳಗಿನ ವರ್ಣಗಳ ಕನ್ಯೆಯರನ್ನು ವಿವಾಹವಾಗಬಹುದಿತ್ತು. ಬ್ರಾಹ್ಮಣ ಪುರುಷನು ಕ್ಷತ್ರಿಯ, ವೈಶ್ಯ ಮತ್ತು ಶೂದ್ರ, ಕ್ಷತ್ರಿಯ ಪುರುಷನು ವೈಶ್ಯ ಮತ್ತು ಶೂದ್ರ, ವೈಶ್ಯ ಪುರುಷನು ಶೂದ್ರ ಕನ್ಯೆಯನ್ನು ವಿವಾಹವಾಗಬಹುದಿತ್ತು ಆದರೆ ಸ್ತ್ರೀಯರು ಕೆಳವರ್ಣಗಳ ಪುರುಷರನ್ನು ವಿವಾಹವಾಗುವ ಅನುಮತಿ ಇರಲಿಲ್ಲ. ಬ್ರಾಹ್ಮಣ ಕನ್ಯೆಗೆ ಶೂದ್ರ ವರ್ಣದ ಪುರುಷನನ್ನು ವಿವಾಹವಾಗಲು ನಿರ್ಬಂಧವಿತ್ತು. ಏನೇ ನಿರ್ಬಂಧಗಳಿದ್ದರೂ ಮೇಲು ಜಾತಿಯ ಪುರುಷನು ಕೆಳ ಜಾತಿಯ ಸ್ತ್ರೀಯನ್ನು ಕೆಳ ಜಾತಿಯ ಪುರುಷನು ಮೇಲುಜಾತಿಯ ಸ್ತ್ರೀಯನ್ನು ವಿವಾಹವಾಗುವ ನಿದರ್ಶನಗಳು ಅಪರೂಪವಾಗಿದ್ದರೂ ಇದ್ದೆ ಇತ್ತು ಎಂದು ಹೇಳಬಹುದು. ಬೇರೆ ಬೇರೆ ವರ್ಣದ ಸ್ತ್ರೀ-ಪುರುಷರಲ್ಲಿ ವಿವಾಹ ಸಂಬಂಧವನ್ನು ಮನು ಈ ರೀತಿಯಾಗಿ ವಿವರಿಸಿದ್ದಾನೆ.

'ಸವರ್ಣಾಗ್ರೇ ದ್ವಿಜಾತೀನಾಂ ಪ್ರಶಸ್ತಾ ದಾರಕರ್ಮಣಿ ।

ಕಾಮತಸ್ತು ಪ್ರವೃತ್ತಾನಾಮಿಮಾಃ ಸ್ಯುಃ ಕ್ರಮಶೋ ವರಾಃ' ॥

(ಮನುಸ್ಮೃತಿ ೩.೧೨)

ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಮೊದಲ ವಿವಾಹದಲ್ಲಿ ತಮ್ಮ ತಮ್ಮ ಜಾತಿಯ ಕನ್ಯೆಯೇ ಆಗಿರಬೇಕು. ದೇಹ ಸುಖಕ್ಕಾಗಿ ಬೇರೆ ಜಾತಿಯವಳನ್ನು ಆಗಬಹುದು. ಸಾಂಪ್ರದಾಯಿಕ ಹಿಂದೂ ವಿವಾಹದ ಮುಖ್ಯ ಉದ್ದೇಶ ಧರ್ಮಾಚರಣೆ ಮತ್ತು ಸಂತಾನಾಭಿವೃದ್ಧಿ. ಮನುವಿನ ಪ್ರಕಾರ ಮೊದಲನೆಯ ಮಗ ಹುಟ್ಟಿದ ನಂತರ ಪುರುಷ 'ಪಿತೃ ಋಣದಿಂದ' ಮುಕ್ತನಾಗುತ್ತಿದ್ದ. ಅವನೇ ವಂಶೋದ್ಧಾರಕನಾಗಿದ್ದ. ಕ್ಷತ್ರಿಯರಲ್ಲೂ ಸಹ ಮೊದಲನೇ ರಾಣಿಯ ಹಿರಿಯ ಮಗನೇ ರಾಜ್ಯಕ್ಕೆ ಉತ್ತರಾಧಿಕಾರಿಯಾಗುತ್ತಿದ್ದ. ಆದ್ದರಿಂದ ತಮ್ಮ ಪೀಳಿಗೆಯನ್ನು ಮುಂದುವರೆಸಿಕೊಂಡು ಹೋಗಲು ಮೊದಲ ವಿವಾಹಕ್ಕೆ ಸವರ್ಣ ಕನ್ಯೆಯೇ ಆಗಬೇಕು. ನಂತರದ ವಿವಾಹಗಳಿಗೆ ತಮಗೆ ಇಷ್ಟವಾಗುವ ಯಾವುದೇ ವರ್ಣದ ಕನ್ಯೆಯನ್ನು ವಿವಾಹವಾಗಬಹುದು. ಅಂದು ಬಹುಪತ್ನಿತ್ವ ಪದ್ಧತಿ ರೂಢಿಯಲ್ಲಿತ್ತು

ಎನ್ನುವುದನ್ನು ಇದರಿಂದ ಅರ್ಥಮಾಡಿಕೊಳ್ಳಬಹುದು. ಯಾವ ವರ್ಣದ ಪುರುಷನು ಯಾವ ವರ್ಣದ ಕನ್ಯೆಯೊಂದಿಗೆ ವಿವಾಹವಾಗಬಹುದು ಎನ್ನುವುದನ್ನು ಮನು ಈ ರೀತಿ ವಿವರಿಸಿದ್ದಾನೆ"೬ ಸಮಾಜದಲ್ಲಿ ಸ್ತ್ರೀ-ಪುರುಷರು ಸಮಾನರು. ಇವರಿಬ್ಬರೂ ಸಮಾಜದ ರಥದ ಎರಡು ಚಕ್ರಗಳು. ಇವರಿಬ್ಬರಲ್ಲಿ ಸಮಾನತೆ ಇದ್ದಾಗ ಸಮಾಜದಲ್ಲಿ ಸಮನ್ವಯತೆಯನ್ನು ಸಾಧಿಸಲು ಸಾಧ್ಯ. ಸ್ತ್ರೀ-ಪುರುಷರು ಎರಡಾಗಿ ಕಂಡರೂ ಅವರಲ್ಲಿ ಅಡಗಿರುವ ಆದಿತ್ಯ ಶಕ್ತಿ ಒಂದೇ ಒಂದು. ಅದನ್ನು ವಿಕಾಸಗೊಳಿಸಬೇಕು ಹಾಗೂ ಸಾಕ್ಷಾತ್ಕಾರ ಮಾಡಿಕೊಳ್ಳುವ ಹಕ್ಕು ಇಬ್ಬರಿಗೂ ಸಮಾನವಾಗಿ ಸಿಗಬೇಕೆಂದು ಶಿವಶರಣರು ಸಮಾಜಕ್ಕೆ ಮನಗಾಣಿಸಿಕೊಟ್ಟಿದ್ದಾರೆ.

"ವಿಶ್ವವಿಶಾಲವಾದ ಶರಣರ ಮನದಲ್ಲಿ ಸಂಕುಚಿತತೆಗೆ ಎಡೆಯಿರಲಿಲ್ಲ. ಇವ ನಮ್ಮವ ಇವ ನಮ್ಮವ ಎಂಬ ಆತ್ಮೀಯಭಾವ ಅವರಲ್ಲಿ ನೆಲೆಗೊಂಡಿತ್ತು. ಜೊತೆಗೆ ಮನುಷ್ಯನ ಯೋಗ್ಯತೆಯನ್ನು ಅಳೆಯುವ ಅಳತೆಗೋಲು ಅವರಲ್ಲಿ ಬೇರೆಯಾಗಿತ್ತು. ವಂಶ, ಸಂಪತ್ತು, ಅಧಿಕಾರ, ಅಂತಸ್ತು, ಪ್ರಭಾವಗಳಿಂದ ಒಬ್ಬನ ದೊಡ್ಡಸ್ತಿಕೆಯನ್ನು ಗುರುತಿಸುತ್ತಿದ್ದ ಕಾಲದಲ್ಲಿ ಶರಣರು ವ್ಯಕ್ತಿಯ ಗುಣಕ್ಕೆ ಪ್ರಾಶಸ್ತ್ಯ ನೀಡಿದರು. ಒಬ್ಬನ ಯೋಗ್ಯತೆ ಅವನು ಜೀವನದಲ್ಲಿ ಹೇಗೆ ನಡೆದುಕೊಳ್ಳುತ್ತಿದ್ದಾನೆ ಎಂಬುದರಿಂದ ನಿರ್ಧಾರವಾಗಬೇಕೆ ಹೊರತು ಅವನ ಹುಟ್ಟು, ಅವನ ಸಂಪತ್ತು, ಅವನ ಅಧಿಕಾರಗಳಿಂದ ಅಲ್ಲವೆಂದೂ, ಅವನ ಸದಾಚಾರ ಸನ್ನಡತೆಗಳು-ತಾನೂ ಬದುಕಿ ಉಳಿದವರನ್ನೂ ಬಾಳಗೊಡುವ ಉದಾರಗುಣಗಳು ಮಾತ್ರ ಮನುಷ್ಯನನ್ನು ದೊಡ್ಡವನನ್ನಾಗಿ ಮಾಡುತ್ತವೆ. ಎಂಬುದನ್ನು ಅವರು ತೋರಿಸಿಕೊಟ್ಟರು"೭. ವೃತ್ತಿಗಳ ಮೂಲಕ ಮೇಲುಕೀಳೆಂದು ಗುರುತಿಸುವುದು ಸರಿಯಲ್ಲವೆಂದು ಶಿವಶರಣರು ಸಾರಿದರು. ಪ್ರತಿಯೊಂದು ವೃತ್ತಿಯೇ ಕಾಯಕದ ದೃಷ್ಟಿಯಿಂದ ಶ್ರೇಷ್ಠವೆಂದು ಸಮಾಜದಲ್ಲಿ ತೋರಿಸಿಕೊಟ್ಟಿದ್ದಾರೆ. ಯಾರ್ಯಾರು ಯಾವ್ಯಾವ ವೃತ್ತಿ ಮಾಡಬೇಕೆಂದು ವಿಧಿಸುವುದು ಸರಿಯಲ್ಲ. ಅವರಿಗಿಷ್ಟವಾದ ವೃತ್ತಿಯನ್ನು ಅವಲಂಬಿಸಲು ಪ್ರತಿಯೊಬ್ಬರು ಸ್ವತಂತ್ರರು ಎಂದು ತಿಳಿಸಿ,ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು.

ಹೀಗೆ ಅನುಭವ ಮಂಟಪದ ಅನುಭಾವಿಗಳು ಸಮಾಜವನ್ನು ಸೌಹಾರ್ದತೆ, ಬಂಧುತ್ವ, ಸ್ವಾತಂತ್ರ್ಯ, ಪರಸ್ಪರ ಪ್ರೇಮ, ವೃತ್ತಿಗೌರವ, ನೈತಿಕ ತತ್ತ್ವಗಳ ಮೇಲೆ ಸೃಷ್ಟಿಸಿದರು. ಇದರ ಅನುಷ್ಠಾನದ ಮೂಲಕ ನಾವು ಸುಖೀಸಮಾಜದ ಕನಸನ್ನು ನನಸು ಮಾಡಬಹುದು.

ಅನುಭವ ಮಂಟಪದ ಸಾಧಕರು ಕಾಯಕ ಪ್ರೇಮಿ ಗಳಾಗಿದ್ದರು. ಕಾಯಕತ್ವಕ್ಕೆ ವಿಶಾಲವಾದ ಅರ್ಥವಿದೆ.ಇದನ್ನು ಇವರು ಸಾಧಿಸಿ ತೋರಿಸಿದ್ದಾರೆ. ಸೋಮಾರಿತನಕ್ಕೆ ಇವರು ಆಸ್ಪದ ಕೊಡುತ್ತಿರಲಿಲ್ಲ. ಪ್ರತಿಯೊಬ್ಬರು ತಮಗೆ ಅನೂಕೂಲವಾದ 'ಕಾಯಕ'ದಲ್ಲಿ ತೊಡಗುತ್ತಿದ್ದರು. ಬೇರೆಯವರ ಹಣವನ್ನು ಸ್ವೀಕರಿಸುತ್ತಿರಲಿಲ್ಲ. ಪರಪೀಡನೆಯಿಂದ ಬಂದ ಹಣ ಪಾಪದ ಹಣವೆಂದು ಭಾವಿಸಿದ್ದರು. ಭೀಕ್ಷೆ ಬೇಡಿ ಬಂದ ಹಣವೂ ಸಹ ಪಾಪದ ಹಣವೆಂದು ತಿಳಿದಿದ್ದರು.

ಬಸವಣ್ಣನವರು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ :

'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ

ಸತ್ಪಾತ್ರಕ್ಕೆ ಸಲ್ಲುವುದೇನಯ್ಯ

ನಾಯಿಯ ಹಾಲು ನಾಯಿ ಮರಿಗಲ್ಲದೆ

ಪಂಚಾಮೃತಕ್ಕೆ ಸಲ್ಲುವುದೇನಯ್ಯ' (ಸ.ವ.ಸಂ:೧ ವ.ಸಂ, ೨೨೩)

ಇದರಿಂದ ಪರಪೀಡನೆ, ಭಿಕ್ಷಾವೃತ್ತಿ, ಮೈಗಳ್ಳತನ, ಅಸತ್ಯ, ಅನ್ಯಾಯ, ಅಪ್ರಾಮಾಣಿಕತೆಗಳಿಂದ ಮಾಡುವ ಕೆಲಸ ಮತ್ತು ಅದರಿಂದ ಬರುವ ಹಣವನ್ನು ಶಿವಶರಣರು ಪಾಪದ ಹಣವೆಂದು ಭಾವಿಸಿದ್ದರೆಂದು ತಿಳಿಯುತ್ತದೆ.

ಕಾಯಕದಲ್ಲಿ ದೈಹಿಕ ಶ್ರಮಕ್ಕೆ ಮಹತ್ವವಿದೆ. ಯಾವುದೇ ಕೆಲಸವಾದರೂ ತನು-ಮನಗಳು ಬಳಲಬೇಕು. ಶ್ರಮಗೊಳ್ಳಬೇಕೆಂಬ ಚನ್ನಬಸವಣ್ಣ ಒತ್ತಿಹೇಳಿದ್ದಾರೆ. ಆಗಲೇ 'ಕಾಯಕ'ವಾಗುತ್ತದೆ ಎಂದು ತಿಳಿಸಿರುತ್ತಾರೆ.

ಸತ್ಯ-ಶುದ್ಧ-ಪ್ರಾಮಾಣಿಕತೆಗಳಿಗೆ ಶರಣರು ಒತ್ತು ನೀಡಿದ್ದರು. ಇದನ್ನು ಅನುಸರಿಸಿ ಕಾಯಕದಲ್ಲಿ ನಿರತರಾಗಿರುತ್ತಿದ್ದರು. ಹುಸಿ, ವಂಚನೆ, ಮೋಸ, ಭ್ರಷ್ಟಾಚಾರಗಳು ಇವರಿಗೆ ಸರಿ ಬರುತ್ತಿರಲಿಲ್ಲ. ಕಾಯಕದಲ್ಲಿ ನಿಷ್ಠಭಾವವಿರಬೇಕೆಂದು ಅನುಭಾವಿಗಳು ಪ್ರತಿಪಾದಿಸಿದ್ದಾರೆ. ಅತಿಯಾಸೆ ಮಾಡದೆ ಶ್ರಮಕ್ಕೆ ತಕ್ಕ ಫಲದ ಗಳಿಕೆ ಸಿಗಬೇಕೆಂದು ಇವರ ವಾದವಾಗಿತ್ತು. ಅದರಂತೆ ನಡೆದು ತೋರಿಸಿ; ಸಮಾಜಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಕೆಲಸ ಮಾಡುವಾಗ ಮೇಲು-ಕೀಳು ಆಸ್ಪದವಿರಲಿಲ್ಲ. ಶಿವಶರಣರಲ್ಲಿ ಹಲವಾರು ಕಾಯಕಗಳು ಪ್ರಚಲಿತವಿದ್ದವು. ಕಟ್ಟಿಗೆ ಕಡಿಯುವುದು, ಕನ್ನಡಿ ಮಾರುವುದು, ದನ ಕಾಯುವುದು, ಕೃಷಿ, ನೇಯ್ಗೆ, ಚರ್ಮ ಹದಗೊಳಿಸುವುದು, ಅರವಟ್ಟಿಗೆ ಇಡುವುದು, ತಳವಾರಿಕೆ, ಓಲೆಗಳ ತಯಾರಿಕೆ ಹೀಗೆ ಅನೇಕ ಕೆಲಸಗಳನ್ನು ಮಾಡುತ್ತಿದ್ದರು. ಇವರಿಗೆ ವೈದಿಕ ವೃತ್ತಿಯಷ್ಟೇ ಮಹತ್ವ ಚಪ್ಪಲಿ ಮಾಡುವ ಕಾಯಕದಲ್ಲಿತ್ತು. ಕಾಯಕದ ವ್ಯಾಪ್ತಿಯು ಲೌಕಿಕದಿಂದ ಅಲೌಕಿಕದತ್ತ ಬೆಳೆಯಬೇಕೆಂದು ಇವರು ಭಾವಿಸಿದ್ದರು. ಕಾಯಕವು ಬಾಹ್ಯವಾಗಿ ಜೀವನ ಪರಿಪೋಷಣೆಯಾದರೆ, ಅಂತರಂಗದಲ್ಲಿ ಅವು ಆಧ್ಯಾತ್ಮಿಕ ಸಿದ್ಧಿಯನ್ನು ವೃದ್ಧಿಸುತ್ತಿದ್ದವು. ಕಾಯಕದಿಂದ ಬಂದ ಹಣವನ್ನು ಒಳ್ಳೆಯ ಕಾರ್ಯಕ್ಕೆ ಬಳಸುತ್ತಿದ್ದರು. 'ನಾನು ಶಿವನಿಗೆ ದಾಸ' ಎಂಬ ಭಾವದಿಂದ ಮಾಡುವ ಕೆಲಸವೇ ದಾಸೋಹ. ಅನುಭವ ಮಂಟಪದ ಅನುಭಾವಿಗಳನ್ನು ಇದನ್ನು ಮಾಡಿ ತೋರಿಸಿದ್ದಾರೆ. ಪ್ರತಿಯೊಬ್ಬರು ಗಳಿಸುವ 'ಹಣ' ಸತ್ಯನಿಷ್ಠೆ ಪ್ರಾಮಾಣಿಕತೆಯಿಂದ ಬಂದಿರುವುದಾಗಿತ್ತು. ಈ ಹಣವು ಒಳ್ಳೆಯ ಕೆಲಸಕ್ಕೆ ಬಳಸುತ್ತಿರುವುದರಿಂದ ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಯೂರಲು ಸಾಧ್ಯವಾಯಿತು.

ವಚನಗಳಲ್ಲಿ ಆರ್ಥಿಕವಾಗಿ ಸಮಾನತೆ

ಆರ್ಥಿಕ ಯೋಜನೆಗಳನ್ನು ವಿವರಿಸುವಲ್ಲಿ ವಚನಕಾರರು ಅರ್ಥ (ಹಣ)ವನ್ನು ಹೇಗೆ ವಿನಿಯೋಗಿಸಬೇಕು, ಅರ್ಥವಿರುವ ಸ್ಥಾನವೆಲ್ಲಿ? ಅರ್ಥವು ಹೆಚ್ಚು ಕಡಿಮೆ ಇರುವುದು ಎಂದರೆ ಆರ್ಥಿಕ ಅಸಮಾನತೆ ದೈವ ನಿರ್ಮಿತವೇ? ಅಥವಾ ಮಾನವ ನಿರ್ಮಿತವೇ? ಅರ್ಥವು ಬೇಕೇಬೇಕೆ? ಹಾಗೂ ಆರ್ಥಿಕ ವ್ಯವಸ್ಥೆಯ ಯೋಜನೆಗಳು ಎಂತಿರಬೇಕೆಂಬುದನ್ನು ಕುರಿತಾಗಿ ಆಡಿದ, ಮಾಡಿದ ಮಾತುಗಳ ಸಂಗ್ರಹವನ್ನು ಇಲ್ಲಿ ಕಾಣುತ್ತೇವೆ. ಬಸವಣ್ಣನವರು ರಾಜಕೀಯವನ್ನು ಪ್ರವೇಶಿಸುವಾಗ ಅವರು, ಅಧಿಕಾರಿಗಳು 'ಲಂಚ' ತಿನ್ನುವುದನ್ನು ಕಣ್ಣಾರೆ ಕಂಡು, ಅದರಿಂದ ರಾಷ್ಟ್ರದ (ರಾಜ್ಯದ) ಬೊಕ್ಕಸಕ್ಕೆ ಆದಾಯ ಕಡಿಮೆಯಾಗುವುದನ್ನು ಪ್ರತಿಭಟಿಸಿದರೆಂದು ಹರಿಹರ ಕವಿಯು ಬಸವರಾಜದೇವರ ರಗಳೆಯಲ್ಲಿ ಹೇಳಿರುತ್ತಾನೆ. (ಬ.ರಾ.ದೇ.ರ; ೫ನೆಯ ಸ್ಥಲ, ೬೬ ೮೪ ಚರಣ) ರಾಜ್ಯದ ಹಣದ ದುರುಪಯೋಗವಾಗದಂತೆ ನೋಡಿಕೊಂಡು ಹೋಗುವುದೂ ಅವರ ಕೆಲಸವಾಗಿತ್ತು.

ಆರ್ಥಿಕ ವ್ಯವಸ್ಥೆಯಲ್ಲಿ ರಾಜ್ಯದ ಸಂಪತ್ತು ಅಧಿಕವಾಗಿ, ಪ್ರತಿಯೊಬ್ಬ ವ್ಯಕ್ತಿಗೆ ಆ ರಾಜ್ಯದ ಆದಾಯದಲ್ಲಿ ಪಾಲು ಹೆಚ್ಚಾಗಿ ದೊರೆಯಬೇಕಾದರೆ, ರಾಜ್ಯದ ಹಣವು ಸರಿಯಾಗಿ ವಿನಿಯೋಗವಾಗಬೇಕು; ಅಲ್ಲದೆ ಪ್ರತಿವ್ಯಕ್ತಿಯ ಆದಾಯವು ಹೆಚ್ಚಬೇಕು; ಸರಳ ಶುದ್ಧ ಜೀವನವು ಅಳವಡಬೇಕು; ಉದ್ಯೋಗಗಳ ಗೌರವವು ಹೆಚ್ಚಬೇಕು. ಎಂದರೆ ಉದ್ಯೋಗಗಳಲ್ಲಿ ತಾರತಮ್ಯ ಭಾವನೆ ಇರಲಾಗದು; ಮಿತವ್ಯಯವು ಬೇಕು; ಮತ್ತು ದುಂದುಗಾರಿಕೆ, ವ್ಯರ್ಥವಾಗಿ ಖರ್ಚು ಮಾಡುವ ಪ್ರವೃತ್ತಿ ಕಡಿಮೆಯಾಗಬೇಕು; ಬಡವಬಲ್ಲಿದರಲ್ಲಿ ಹೆಚ್ಚುಕಡಿಮೆ ಭಾವನೆ ಅಳಿದು ಭ್ರಾತೃಭಾವ ಬೆಳೆಯಬೇಕು; ಕರುಣೆ ಮಮತೆಗಳು ಅಧಿಕವಾಗಬೇಕು; ವ್ಯಕ್ತಿಗೆ ತನಗೆ ಬೇಕಾದ ಉದ್ಯೋಗವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿರಬೇಕು; ವ್ಯಕ್ತಿಯಲ್ಲಿ ಉತ್ತಮ ಶೀಲ, ಚಾರಿತ್ರ ಸಹಕಾರ ಭಾವನೆ ಬೆಳೆಯಬೇಕು; ಬಡತನ ನಿವಾರಣೆಗೆ ಪ್ರತಿಯೊಬ್ಬ ವ್ಯಕ್ತಿಯೂ ದುಡಿದೇ ಉಣ್ಣಬೇಕು; ಉತ್ತಮ ಮಾತುಗಾರಿಕೆ ಬೇಕು; ಇತ್ಯಾದಿ ಗುಣಗಳು ಅವಶ್ಯವೆಂದು ಬಸವಣ್ಣವರು ತಿಳಿಸಿದಂತೆ ಅವರ ವಚನಗಳಲ್ಲಿ ಕಂಡುಬರುತ್ತದೆ. ರಾಜ್ಯದೊಳಗೆ ಬಡತನ ನಿವಾರಣೆಗೆ 'ಕಾಯಕವೇ ಕೈಲಾಸ'ವೆಂಬ ತತ್ವವನ್ನು ಸಾರಿದರು. ಒಟ್ಟಿನಲ್ಲಿ ಅವರು ಆರ್ಥಿಕ ಯೋಜನೆಯನ್ನು ಈ ರೀತಿ ಇಟ್ಟುಕೊಂಡಂತಿದೆ. ಆರ್ಥಿಕ ಸಮಾನತೆ ಸಾಧಿಸಬೇಕಾದಲ್ಲಿ :

ಅ) ಬಡವರ ಬಡತನ ದೂರಾಗಬೇಕು; ದುಡಿಮೆ ಹೆಚ್ಚಿ, ಭಿಕ್ಷೆ ತೊಲಗಬೇಕು;

ಆ) ಉದ್ಯೋಗದ ಗೌರವವು ಹೆಚ್ಚಬೇಕು;

ಇ) ಸಹಕಾರ ತತ್ವವು ಬೆಳೆಯಬೇಕು; (ಸಾಂಘಿಕ ಜೀವನವು ಬೆಳೆಯಬೇಕು.)

ಈ) ಮಿತವ್ಯವಯವನ್ನು ಸಾಧಿಸಿ, ದುಂದುಗಾರಿಕೆ ಮತ್ತು ವ್ಯರ್ಥವಾಗಿ ಖರ್ಚಾಗುವ ವೆಚ್ಚವನ್ನು ತಡೆದು, ಹಣವನ್ನು ಸದ್ವಿನಿಯೋಗಕ್ಕಾಗಿ ಬಳಸಬೇಕು.

ಉ) ಅಧಿಕ ಹಣವುಳ್ಳವರಲ್ಲಿ ದಯೆ, ವಿನಯ ತಲೆ ದೋರಬೇಕು; ಅವರ ಧನವು ಕೊರತೆಯುಳ್ಳವರಿಗೆ ಹರಿದು ಬರಬೇಕು;

ಊ) ರಾಜ್ಯದ ಆದಾಯವು ಕೊರತೆಯುಳ್ಳವರಿಗೆ ಹೆಚ್ಚಾಗಿ ಸಲ್ಲಬೇಕು.

ಋ) ಸಂಗ್ರಹಬುದ್ಧಿ, ದುರಾಸೆಗಳು ತೊಲಗಬೇಕು.

ಇತ್ಯಾದಿ ಯೋಜನೆಗಳನ್ನು ಇಟ್ಟುಕೊಂಡಂತೆ ತೋರುತ್ತದೆ.

ವಚನಕಾರರ 'ಕಾಯಕವೇ ಕೈಲಾಸ'ವೆಂಬ ತತ್ವದಲ್ಲಿ 'ಲೌಕಿಕ' 'ಪಾರಮಾರ್ಥಿಕ'ವೆರಡೂ ತತ್ವಗಳು ಬೇರೆಯಲ್ಲ; ಒಂದೇ ಎಂಬ ಭಾವನೆಯಡಗಿದುದರಿಂದ ಪಾರಮಾರ್ಥದ ಹೆಸರಿನಲ್ಲಿ ದುಡಿಯದೇ ತಿನ್ನುವ ಪ್ರವೃತ್ತಿಯನ್ನು ಕಡಿಮೆಮಾಡಿ, ದುಡಿಮೆಯೂ ಮೋಕ್ಷದಮಾರ್ಗವೆಂದು ಹೇಳಿ, ದುಡಿಮೆಯ ಗೌರವವನ್ನು ಹೆಚ್ಚಿಸಿದರು.

"ತುಳಿತಕ್ಕೀಡಾದವರು ಜಗತ್ತಿನ ನಾಯಕರು ಮತ್ತು ನೇರ ವಾರಸುದಾರರು ಆಗಬೇಕೆಂದು ನಾವು ಇಚ್ಛಿಸಿದ್ದೇವೆ' ಎಂದು ಕುರಾನ್ ಹೇಳುತ್ತದೆ. ಬಸವಣ್ಣನವರ ಕೂಡಲಸಂಗಮದೇವ ಮಾನವ ಹಕ್ಕುಗಳ ದೇವರಾಗಿದ್ದಾನೆ. ಆತ ಅಸ್ಪೃಷ್ಯ ಮಾದಾರ ಚೆನ್ನಯ್ಯನ ಮನೆಯಲ್ಲಿ ಅಂಬಲಿ ಕುಡಿಯುತ್ತಾನೆ. 'ವೇದ ನಡುಗಿತ್ತು, ಶಾಸ್ತ್ರವಗಲಿ ಕಲೆಕ್ಕೆ ಸಾರಿದ್ದಿತ್ತಯ್ಯಾ!....... ನಮ್ಮ ಕೂಡಲ ಸಂಗಯ್ಯನು ಮಾದಾರ ಚೆನ್ನಯ್ಯನ ಮನೆಯಲ್ಲುಂಡಕಾರಣ' ಎಂದು ಬಸವಣ್ಣನವರು ಹೇಳುತ್ತಾರೆ. ಹೀಗೆ ಪೈಗಂಬರರ ಅಲ್ಲಾಹ್ ಮತ್ತು ಬಸವಣ್ಣನವರ ಕೂಡಲಸಂಗಮದೇವ ಸದಾ ಬಡವರ, ದುಡಿಯುವವರ, ನಿರ್ಗತಿಕರ ಮತ್ತು ತುಳಿತಕ್ಕೊಳಗಾದವರ ಪರ ಇದ್ದಾರೆ. ಅವರಿಬ್ಬರೂ ಒಂದೇ ಆಗಿದ್ದಾರೆ. ದೇವನೊಬ್ಬ ನಾಮ ಹಲವು ಎಂದು ಬಸವಣ್ಣನವರು ಹೇಳಿದ್ದಾರೆ.

'ದುಡಿದು ಸಂಪಾದಿಸುವ ಮುಸ್ಲಿಮನನ್ನು ಅಲ್ಲಾಹನು ಪ್ರೀತಿಸುತ್ತಾನೆ' ಎಂದು ಪೈಗಂಬರರು ಹೇಳುವಲ್ಲಿ ಪ್ರತಿಯೊಬ್ಬ ಮುಸ್ಲಿಮನು ಕಾಯಕಜೀವಿಯಾಗಿರಬೇಕಾಗುತ್ತದೆ ಎಂದು ಎಚ್ಚರಿಸುತ್ತಾರೆ. 'ಶರಣರ ಬರವೆನಗೆ ಪ್ರಾಣ ಜೀವಾಳಯ್ಯಾ' ಎಂದು ಬಸವಣ್ಣನವರು ತಮ್ಮ ಧರ್ಮದ ಮೂಲಾಧಾರಗಳಾದ ಕಾಯಕಜೀವಿಗಳನ್ನು ಕೊಂಡಾಡುತ್ತಾರೆ.

'ತನ್ನ ಕೈಯಿಂದ ಸಂಪಾದಿಸಿದುದಕ್ಕಿಂತ ಉತ್ತಮ ಆಹಾರವನ್ನು ಎಂದು ಯಾರೂ ತಿಂದಿಲ್ಲ' ಎಂದು ಪೈಗಂಬರರು ಹೇಳುತ್ತಾರೆ. 'ಕೊಲುವವನೆ ಮಾದಿಗ, ಹೊಲಸು ತಿಂಬುವನೆ ಹೊಲೆಯ, ಕುಲವೇನೋ ಅವರಿಂದ ಕುಲವೇನೋ, ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರ ಕುಲಜರು' ಎಂದು ಬಸವಣ್ಣನವರು ಹೇಳುತ್ತಾರೆ. ಯಜ್ಞಯಾಗಾದಿಗಳಲ್ಲಿ ಪ್ರಾಣಿಬಲಿ ಕೊಡುವವರೇ ಮಾದಿಗರು. ಕಾಯಕ ಮಾಡದೆ ವರ್ಷಗಟ್ಟಲೆ ನಡೆಯುವ ಆ ಯಜ್ಞಯಾಗಾದಿಗಳಲ್ಲಿ ಬರಿ ತಿನ್ನುವುದು ಹೊಸಲು. ಆದರೆ ಹೊಲೆ ಮಾದಿಗರು ಮೊದಲುಮಾಡಿ ಜಾತಿಸಂಕರವಾಗಿ, ಎಲ್ಲರೂ ಒಂದಾಗಿ ದುಡಿಯುತ್ತ ಬದುಕುವ ಕೂಡಲಸಂಗನ ಶರಣರೇ ಕುಲಜರು ಎಂದು ಬಸವಣ್ಣನವರು ಘೋಷಿಸುತ್ತಾರೆ"೮.

ಒಟ್ಟಿನಲ್ಲಿ ಅವರ ಆರ್ಥಿಕ ವಿಷಯದ ಯೋಜನೆಗಳನ್ನು ಹೀಗೆ ಸಂಗ್ರಹಿಸಿರಬಹುದು. ಪ್ರತಿಯೊಬ್ಬನೂ ಅರ್ಥದ ಮಹಿಮೆಯನ್ನು ಅಲ್ಲಗಳೆಯಲಾಗದು; ಅರ್ಥಕ್ಕೆ ಅಧಿಪತಿ ಶಿವನು; ಅರ್ಥವು ವ್ಯಕ್ತಿಗೆ ಬರುವುದು ಹೋಗುವುದು ಹರನ ಕೃಪೆಯಿಂದ; ಅಧಿಕ ಹಣವುಳ್ಳವರು ಕೊರತೆಯುಳ್ಳವರಿಗೆ ನೀಡಬೇಕು; ಮಿತವ್ಯಯ, ಸರಳ ಶುದ್ಧ ಜೀವನ ಸಾಧಿಸಬೇಕು. ಮೋಕ್ಷಾಪೇಕ್ಷಿಯಾಗಿ ಅಲೆದಾಟವಾಗಲೀ, ಗುಡಿಗುಂಡಾರ ರಚನೆಯಾಗಲೀ, ಕೀರ್ತಿವಾರ್ತೆಗೆ ದಾನವಾಗಲೀ ಸಲ್ಲವು; ದುರಾಸೆಬೇಡ; ಭಿಕ್ಷೆಬೇಡುವುದು, ಸಂಗ್ರಹಬುದ್ಧಿ, ಕಡಕೊಡುವಬುದ್ಧಿ ಬೇಡ; ಬಡವರಲ್ಲಿ ದಯೆಬೇಕು; ಹಂಚಿಕೊಂಡ ತಿನ್ನುವ ಭಾವವು ಸಮಾಜದಲ್ಲಿ ಬಲಿಯಬೇಕು; ಉದ್ಯೋಗಗಳಲ್ಲಿ ಸಮಾನತೆ, ಗೌರವ ಬರಬೇಕು; ಕರ್ಮಯೋಗಿಯಾಗಬೇಕು; ಹಣವನ್ನು ಮಡಗಲಾಗದು; ಸಿರಿಯೆಂಬುದೇ ಶಾಶ್ವತವಲ್ಲವೆಂಬ ಭಾವವು ನೆಲೆಗೊಳ್ಳಬೇಕು; ಇತ್ಯಾದಿಯಾದವು ವಚನಕಾರರ ಆರ್ಥಿಕ ಯೋಜನೆಯ ರೂಪುರೇಷೆಗಳೆಂದು ತಿಳಿಯಬಹುದು. ಮಾನವರ ಶಕ್ತಿಯಿಂದ ಕಟ್ಟದ ದೇವಾಲಯಗಳು ಮೂರುದಿನಗಳಲ್ಲಿ ಭಗ್ನವಾಗಬಹುದು. ಆದರೆ ದೈವೀಶಕ್ತಿಯಿಂದ ನಿರ್ಮಿತವಾದ ದೇಹವೆಂಬ ದೇಗುಲ ಪರಮಾತ್ಮನ ಕೃಪೆಯಿಂದ ಅಧಿಕಾವಧಿ ನಿಲ್ಲಬಲ್ಲದು ಎಂದೂ ಅವರ ಭಾವನೆಯಾಗಿತ್ತು.

ಅಡಿಟಿಪ್ಪಣಿಗಳು

೧. ಕೆ. ರವೀಂದ್ರನಾಥ 'ಶರಣ ಸಂಸ್ಕೃತಿ ಮಾರ್ಗ' ಪು. ೭೯, ೨೦೧೮, ಪ್ರಕಾಶಕರು ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀಮುರುಘಾಮಠ, ಧಾರವಾಡ.

೨. ಸಿ.ಎಂ. ಕುಂದಗೋಳ, 'ವಚನಗಳಲ್ಲಿ ವ್ಯಕ್ತಿತ್ವ ವಿಕಾಸ' ಪು. ೨೭, ೨೦೧೭, ಪ್ರಕಾಶಕರು ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀಮುರುಘಾಮಠ, ಧಾರವಾಡ.

೩. ರಂಜಾನ್ ದರ್ಗಾ 'ಶರಣರ ಸಮಗ್ರ ಕ್ರಾಂತಿ' ಪು. ೭೫, ೨೦೧೫, ಲೋಹಿಯಾ ಪ್ರಕಾಶನ, ಬಳ್ಳಾರಿ.

೪. ಎಂ. ಬಿ. ಕಟ್ಟಿ, (ಸಂ) 'ವಚನಕಾರ್ತಿಯರು' ಪು, ೨೦, ೨೦೧೮. ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರ್ಗಿ.

೫. ರಂಜಾನ್ ದರ್ಗಾ 'ಜಾತಿ ವ್ಯವಸ್ಥೆಗೆ ಸವಾಲಾದ ಶರಣರು' ಪು. ೧೩, ೨೦೧೩, ಲೋಹಿಯಾ ಪ್ರಕಾಶನ, ಬಳ್ಳಾರಿ.

೬. ಭಾರತಿ ಹೆಗಡೆ 'ಮನುಸ್ಮೃತಿಯಲ್ಲಿ ಸ್ತ್ರೀಯರ ಸ್ಥಾನಮಾನ' ಪು. ೬೩, ೨೦೧೨, ರವೀಂದ್ರ ಆಕಳವಾಡಿ, ಮನೋಹರ ಮುದ್ರಣಾಲಯ, ಧಾರವಾಡ.

೭. ಟಿ. ಆರ್. ಮಹದೇವಯ್ಯ 'ಶರಣಸಿರಿ' ಪು. ೧೦, ೨೦೧೮, ಪ್ರಕಾಶಕರು ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀಮುರುಘಾಮಠ, ಧಾರವಾಡ.

೮. ರಂಜಾನ್ ದರ್ಗಾ 'ಬಸವಣ್ಣನವರ ಪರ್ಯಾಯ ಸಮಾಜ' ಪು. ೭೦, ೨೦೧೮, ಪ್ರಕಾಶಕರು ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀಮುರುಘಾಮಠ, ಧಾರವಾಡ.

ಅಧ್ಯಾಯ : ಎಂಟು

ವಚನಗಳಲ್ಲಿ ಮಹಿಳಾ ಸಮಾನತೆ ಮತ್ತು ವೈಚಾರಿಕತೆಯ ಅನುಸಂಧಾನ

ಅಧ್ಯಾಯ : ಎಂಟು

ವಚನಗಳಲ್ಲಿ ಮಹಿಳಾ ಸಮಾನತೆ ಮತ್ತು ವೈಚಾರಿಕತೆಯ ಅನುಸಂಧಾನ

೧೨ ನೇ ಶತಮಾನದಲ್ಲಿ ವಚನಕಾರರು ಹೆಣ್ಣಿಗೆ ಸ್ವಾತಂತ್ರ್ಯ, ಸಮಾನತೆಯ ಹಕ್ಕನ್ನು ನೀಡಿದಂತೆ ಪ್ರಪಂಚದ ಯಾವುದೇ ಸಮಾಜ ನೀಡಿಲ್ಲ. ದೇಶ–ವಿದೇಶದ ತತ್ತ್ವಜ್ಞಾನಿಗಳು, ಚಿಂತಕರು, ಸಮಾಜವಾದಿಗಳು, ಸುಧಾರಣಾವಾದಿಗಳು ಹೆಣ್ಣಿನ ಸ್ವಾತಂತ್ರ್ಯ–ಸಮಾನತೆಯ ಬಗೆಗೆ ಮೌನ ತಾಳಿದ್ದರು. ಫ್ರೆಂಚ್ ಕ್ರಾಂತಿಯ ನಂತರ ವಿದೇಶದ ಮಹಿಳೆಯರು ಸ್ತ್ರೀ ಸ್ವಾತಂತ್ರ್ಯ–ಸಮಾನತೆ ಹಕ್ಕುಗಳ ಕುರಿತು ಧ್ವನಿ ಎತ್ತಿದರು. ಮೇರಿ ಉಲ್‌ಸ್ಟನ್ ಕ್ರಾಫ್ಟ್‌ಳು '೧೭೯೨ರಲ್ಲಿ ಫ್ರಾನ್ಸ್‌ನ ಅಸೆಂಬ್ಲಿಯಲ್ಲಿ 'ಮಾನವ ಹಕ್ಕುಗಳ ಮಸೂದೆ' ಮತ್ತು ಅಮೆರಿಕದ 'Billof Right' ಪ್ರಕಾರ ಎಲ್ಲ ಮನುಷ್ಯರಿಗೂ ಹಕ್ಕುಗಳಿವೆ. ಹಾಗಾದರೆ ಸ್ತ್ರೀ ಮನುಷ್ಯಳಲ್ಲವೇ? ಪುರುಷ ಮತ್ತು ಸ್ತ್ರೀಯ ನಡವಳಿಕೆಗಳು ಒಂದೇ ಅಲ್ಲವೇ? ಸ್ತ್ರೀ ಪ್ರಾಣಿಯಲ್ಲದಿದ್ದರೆ ಮನುಷ್ಯಳಾಗಿರಲೇಬೇಕು. ಆದ್ದರಿಂದ ಅವಳಿಗೆ ಅವಳ ಹಕ್ಕುಗಳನ್ನು ಕೊಡಲೇಬೇಕೆಂದು ಹೇಳುತ್ತಾಳೆ'. ಮುಂದೆ ಮಿಲ್, ಟೇಲರ್ ಮೊದಲಾದ ಸಾಮಾಜಿಕ ಚಿಂತಕರ ಪ್ರಯತ್ನದಿಂದ, ಸಂಘ–ಸಂಸ್ಥೆಗಳ ಹೋರಾಟದ ತತ್ಪರಿಣಾಮವಾಗಿ ಸ್ತ್ರೀಗೆ ಮತದಾನದ ಮಸೂದೆ, ಹಕ್ಕು, ಸ್ವಾತಂತ್ರ್ಯದ ಹಕ್ಕು ಸಮಾನತೆಯ ಹಕ್ಕು ಪ್ರಾಪ್ತವಾಯಿತು. ಶಿಕ್ಷಣದಲ್ಲಿ ಅವಕಾಶ ಕೊಡಲಾಯಿತು. ಧರ್ಮಗುರು ಆಗುವ ಅವಕಾಶವನ್ನು ನೀಡಿದರು. ಹೀಗೆ ಸ್ತ್ರೀಯರ ಬಗೆಗೆ ಸಾಮಾಜಿಕ ದೃಷ್ಟಿ ಬದಲಾಗುವ ನೂರಾರು ವರ್ಷಗಳು ಹಿಡಿದವು. ಪ್ರಜಾಪ್ರಭುತ್ವ ವ್ಯವಸ್ಥೆಯ ದೇಶಗಳಲ್ಲಿ 'ಸ್ತ್ರೀ' ಸ್ವಾತಂತ್ರ್ಯ ಮತ್ತು ಸಮಾನತೆಯ ಹಕ್ಕುಗಳನ್ನು ಪಡೆದಿದ್ದಾಳೆಂಬುದು ಸಮಾಧಾನಕರ ಸಂಗತಿಯಾಗಿದೆ. ಆದರೂ ಕೌಟುಂಬಿಕ, ಉದ್ಯೋಗ ವಲಯದಲ್ಲಿ ಮಾನಸಿಕ ಹಿಂಸೆಗೊಳಗಾಗುತ್ತಿರುವುದು ಚಿಂತಾಜನಕವಾಗಿದೆ.

ಇಂದಿನ ಸಂವಿಧಾನದಲ್ಲಿರುವ ಅನೇಕ ಅಂಶಗಳನ್ನು ವಚನಗಳಲ್ಲಿ ಕಾಣಬಹುದಾಗಿದೆ. ಈ ವಿಷಯ ವಚನಕಾರ್ತಿಯರ ವಚನಗಳಿಗೂ ಅನ್ವಯಿಸುತ್ತದೆ. ರಾಜಕೀಯ ಶಕ್ತಿ ಇಲ್ಲದೆ ಜನಶಕ್ತಿಯ ಮೂಲಕ ನಿರ್ಮಿಸಿದ ಅನುಭವ ಮಂಟಪವೇ ನ್ಯಾಯಪೀಠವಾಗಿತ್ತು. ಅನುಭವ ಮಂಟಪದಲ್ಲಿ ಲಿಂಗ, ವರ್ಗ, ವರ್ಣಭೇದವಿಲ್ಲದೆ ಎಲ್ಲಾ ಜನರು ಸೇರುತ್ತಿದ್ದರು. ಅಲ್ಲಿ ತಮ್ಮ ಅನುಭವಗಳನ್ನು ಮುಕ್ತವಾಗಿ ಚರ್ಚಿಸುತ್ತಿದ್ದರು. ಪ್ರಜಾಪ್ರಭುತ್ವದ ವ್ಯವಸ್ಥೆಯ ಆಶಯಗಳನ್ನೊಳಗೊಂಡ ವಚನಕಾರರ ಮತ್ತು ವಚನಕಾರ್ತಿಯರ ಅಭಿವ್ಯಕ್ತಿಗಳೇ ಸಂಹಿತೆಗಳಾದವು. ಇಂದು ಸ್ತ್ರೀಪರವಾಗಿ ಚಿಂತಿಸುವ

ಸ್ತ್ರೀವಾದಿಗಳು ಪುರುಷಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸುವ ಬಗೆಯನ್ನು ಅಂದಿನ ವಚನಕಾರ್ತಿಯರ ಅಭಿವ್ಯಕ್ತಿಯಲ್ಲಿ ಕಾಣಬಹುದಾಗಿದೆ. ಹೀಗಾಗಿ ಜಗತ್ತಿನ ಮೊಟ್ಟಮೊದಲ ಸ್ತ್ರೀವಾದಿಗಳೆಂದರೆ ವಚನಕಾರರು ಮತ್ತು ವಚನಕಾರ್ತಿಯರು.

ಸ್ವಾತಂತ್ರ್ಯ, ಸಮಾನತೆ, ಸಹೋದರತೆ, ನ್ಯಾಯ ಈ ಮೊದಲಾದ ಸಂವಿಧಾನಾತ್ಮಕ ಅಂಶಗಳಿಗೂ ವಚನಕಾರ್ತಿಯರ ನ್ಯಾಯಪರಿಕಲ್ಪನೆಗೂ ಇರುವ ಸಾಮ್ಯತೆ ಹಾಗೂ ವಚನಕಾರರಿಗಿಂತಲೂ ಭಿನ್ನವಾಗಿ ತಮ್ಮದೇ ಆದ ರೀತಿಯಲ್ಲಿ ಸಾಮಾಜಿಕ ನ್ಯಾಯದ ಬಗೆಗೆ ವಚನಕಾರ್ತಿಯರು ಮಾತನಾಡಿದ ಬಗೆಯನ್ನು ಗುರುತಿಸುವುದೇ ಈ ಅಧ್ಯಾಯದ ಉದ್ದೇಶವಾಗಿದೆ.

ಸ್ವಾತಂತ್ರ್ಯವೆಂಬುದು ಮೂಲಭೂತವಾಗಿ ಮಾನವನ ಹಕ್ಕಾಗಿದೆ. ಇದು ನಿಸರ್ಗದತ್ತವಾದ ಹಕ್ಕಾಗಿದೆ. ಈ ಭೂಮಿಯ ಮೇಲೆ ಪ್ರತಿಯೊಬ್ಬನಿಗೂ ಬದುಕುವ, ಮಾತನಾಡುವ ಹಕ್ಕಿದೆ. ಇದನ್ನೇ ನಾವು ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಎನ್ನುತ್ತೇವೆ. ವಾಕ್ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯತೆಯಿಂದ ವಂಚಿತರಾದ ದೀನದಲಿತರು, ಶೋಷಿತರು, ಮಹಿಳೆಯರು ವಚನಕಾರರ ಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು. ತಮ್ಮ ಅನಿಸಿಕೆಗಳನ್ನು ವಚನಗಳ ರೂಪದಲ್ಲಿ ಅಭಿವ್ಯಕ್ತಿಸಿದರು. ಅಕ್ಕಮಹಾದೇವಿ ಮೊದಲುಗೊಂಡು ಎಲ್ಲಾ ವಚನಕಾರ್ತಿಯರು ತಮ್ಮ ಅನುಭವಗಳನ್ನು ನಿಸ್ಸಂಕೋಚವಾಗಿ, ನಿರ್ಭಯವಾಗಿ ವಚನಗಳ ಮೂಲಕ ಹೇಳಿದ್ದಾರೆ.

'ಎನ್ನಂತೆ ಪುಣ್ಯಗೈದವರುಂಟೆ? ಎನ್ನಂತೆ ಭಾಗ್ಯಂಗೈದವರುಂಟೆ? ಕಿನ್ನರನಂತಪ್ಪ ಸೋದರನೆನಗೆ, ಏಳೇಳು ಜನ್ಮದಲ್ಲಿ ಶಿವಭಕ್ತರೆ ಬಂಧುಗಳೆನಗೆ. ಚನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ' ಎಂದು ಅಕ್ಕಮಹಾದೇವಿ ರಕ್ತಸಂಬಂಧಗಳಿಗಿಂತಲೂ ಸ್ನೇಹ ಸಂಬಂಧಗಳನ್ನು ನಂಬಿದ್ದಳು. ಅಕ್ಕಮಹಾದೇವಿ ತನ್ನ ಸಂಬಂಧಗಳ ಕುರಿತು ಅಭಿಮಾನದಿಂದ ಹೇಳುವಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಣಬಹುದು. 'ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಗಳಿಗಂಜಿದಡೆಂತಯ್ಯಾ' ಎಂದು ಅಕ್ಕ ಪ್ರಶ್ನಿಸುವಲ್ಲಿ, ಕಾಮಾರಿಯ ಗೆಲಿದೆನು ಬಸವಾ ನಿಮ್ಮಿಂದ. ಸೋಮನಾಥನ ಹಿಡಿತಪ್ಪೆನು ಬಸವಾ ನಿಮ್ಮ ಕೃಪೆಯಿಂದ ನಾಮದಲ್ಲಿ ಹೆಂಗೊಸೆಂಬ ಹೆಸರಾದಡೇನು? ಭಾವಿಸಲು ಗಂಡು ರೂಪು ಬಸವಾ ನಿಮ್ಮ ದಯದಿಂದ, ಅತಿಕಾಮಿ ಚನ್ನಮಲ್ಲಿಕಾರ್ಜುನಂಗೆ ತೊಡರಿಕ್ಕಿ ಎರಡುವರಿಯದೆ ಕೂಡಿದೆನು ನಿಮ್ಮ ಕೃಪೆಯಿಂದ' ಎಂದು ಹೇಳುವಲ್ಲಿ ಸ್ವತಂತ್ರವಾಗಿ ಧೈರ್ಯದಿಂದ ಬದುಕುವ ವಿಚಾರವಿದೆ.

'ಅಯ್ಯಾ, ನೀನು ಕೇಳಿದಡೆ ಕೇಳು, ಕೇಳದಡೆ ಮಾಣು; ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ' ಎಂದು ಅಕ್ಕ ಹೇಳುವಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಗುರುತಿಸಬಹುದು. ವ್ಯಕ್ತಿ ಸ್ವಾತಂತ್ರ್ಯಕ್ಕೆ ಮಹತ್ವವನ್ನು ನೀಡಿ ಅಕ್ಕಮಹಾದೇವಿ ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವೇಚ್ಛಾಚಾರವಾಗಿ ಬದುಕುವುದನ್ನು ಒಪ್ಪುವುದಿಲ್ಲ. 'ಸುಜ್ಞಾನ ಸತಿಯಾ ಸುನೀತಿ ಮಾರ್ಗದಲ್ಲಿ ವರ್ತಿಸುವುದು. ಹೀಂಗಲ್ಲದೆ ಜ್ಞಾನವಾಯಿತ್ತೆಂದು ತನ್ನ ಮನಕ್ಕೆ ಬಂದ ಹಾಗೆ ಮೀರಿ ನುಡಿದು ನಡೆದೆನಾದಡೆ

ಶ್ವಾನಗರ್ಭದಲ್ಲಿ ಹುಟ್ಟಿಸದೆ ಬಿಡುವನೆ ಚನ್ನಮಲ್ಲಿಕಾರ್ಜುನಯ್ಯನು' ಎಂದು ಹೇಳಿದ್ದಾಳೆ. 'ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ, ಹಿಡಿದಡೆ ಬತ್ತಲೆ ನಿಲಿಸಿ ಕೊಲವರಯ್ಯಾ' ಎಂದು ಸೂಳೆ ಸಂಕವ್ವೆಯ ತನ್ನ ಅನಿಸಿಕೆಗಳನ್ನು ಮುಕ್ತವಾಗಿ ಹೇಳಿದ್ದಾಳೆ. 'ನುಡಿಯ ಹಂಗನ್ನೂ ನಿಮಗೆ ಹಿಂಗದು. ನಡೆಯನೆಂತು ಪರರಿಗೆ ಹೇಳುವಿರಿ?' ಎಂದು ಮುಕ್ತಾಯಕ್ಕ ಅಲ್ಲಮನನ್ನು ಕೇಳುವಲ್ಲಿ ವಿಚಾರ ಸ್ವಾತಂತ್ರ್ಯವಿದೆ. 'ಮುಂಡದಲ್ಲಿ ತಿರುಗುವವರು ಕೋಟ್ಯಾನುಕೋಟಿ; ತಲೆಯಲ್ಲಿ ತಿರುಗುವವರನಾರನೂ ಕಾಣೆ. ಅಂಗಲ್ಲಿದ್ದ ಮಲಿನವ ಕಳೆವರು ಕೋಟ್ಯಾನುಕೋಟಿ ಮನದಲ್ಲಿಪ್ಪ ಮಲಿನವ ಕಳೆವವರನಾರನೂ ಕಾಣೆ ಅಮುಗೇಶ್ವರಾ' ಎಂದು ಅಮುಗೆ ರಾಯಮ್ಮ, ಸರಳವಾದ ರೀತಿಯಲ್ಲಿ ವೈಚಾರಿಕವಾಗಿ ನುಡಿದಿದ್ದಾಳೆ. ಸಾಮಾಜಿಕರ ಅಜ್ಞಾನವನ್ನು ಕಂಡು ಮರುಗಿದ್ದಾಳೆ. ಹೀಗೆ ವ್ಯಕ್ತಿಸ್ವಾತಂತ್ರ್ಯಕ್ಕೆ, ವಿಚಾರ ಸ್ವಾತಂತ್ರ್ಯಕ್ಕೆ ಅಭಿವ್ಯಕ್ತಿಸ್ವಾತಂತ್ರ್ಯಕ್ಕೆ ವಚನಕಾರ್ತಿಯರ ಅನೇಕ ವಚನಗಳು ನಿದರ್ಶನಗಳಾಗಿವೆ.

ಅನುಭವ ಮಂಟಪದಲ್ಲಿ ಯಾವ ಭೇದಭಾವವಿಲ್ಲದೆ ವಚನಕಾರರು ವಚನಕಾರ್ತಿಯರು ಭಾಗವಹಿಸುವ ಸ್ವಾತಂತ್ರ್ಯವಿತ್ತು. ಅಲ್ಲಿ ತಮ್ಮ ಅನುಭವಗಳ ವಿಚಾರ ವಿನಿಮಯವನ್ನು ಮಾಡಿಕೊಳ್ಳುತ್ತಿದ್ದರು. ಪ್ರಸ್ತುತ ಸಾಮಾಜಿಕ, ಧಾರ್ಮಿಕ ಬದುಕಿಗೆ ಸಂಬಂಧಪಟ್ಟ ವಿಷಯಗಳ ಕುರಿತು ಚರ್ಚಿಸುತ್ತಿದ್ದರು. ವಚನಕಾರ್ತಿಯರು ಕೇಳುವ-ಹೇಳುವ ಸ್ವಾತಂತ್ರ್ಯವನ್ನು ಅನುಭವಮಂಟಪದಲ್ಲಿ ಪಡೆದುಕೊಂಡಿದ್ದರು. 'ಮುತ್ತು ನೀರಲ್ಲಾಯಿತ್ತು. ವಾರಿಕಲ್ಲು ನೀರಲ್ಲಾಯಿತ್ತು. ಉಪ್ಪು ನೀರಲ್ಲಾಯಿತ್ತು. ಉಪ್ಪು ಕರಗಿತ್ತು. ವಾರಿಕಲ್ಲು ಕರಗಿತ್ತು, ಮುತ್ತು ಕರಗಿದುದನಾರೂ ಕಂಡವರಿಲ್ಲ' ಎಂದು ಅಕ್ಕಮಹಾದೇವಿ ಹೇಳುವ ವಿಚಾರ ವಿಜ್ಞಾನಿಗಳು ಬೆರಗುಗೊಳ್ಳುವಂತಹದಾಗಿದೆ. 'ಹೊನ್ನ ಬಿಟ್ಟು ಲಿಂಗವನೊಲಿಸ ಬೇಕೆಂಬರು, ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?' ಎನ್ನುವ ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀಯು ಕೇಳುವ ಹಾಗೂ 'ಗಂಡು ಮೋಹಿಸಿ ಹೆಣ್ಣ ಹಿಡಿದಡೆ ಉತ್ತರವಾವುದೆಂದರಿಯಬೇಕು' ಎಂದು ಪ್ರಶ್ನಿಸುವ ಗೊಗ್ಗವ್ವೆಯ ವಿಚಾರ, ಸಂಪ್ರದಾಯವಾದಿಗಳನ್ನೇ ಅಲ್ಲಾಡಿಸುವಂತಿದೆ. ಹೀಗೆ ಅನೇಕ ಮಹತ್ವ ವಿಚಾರಗಳು ಅನುಭವಮಂಟಪದಲ್ಲಿ ಚರ್ಚೆಗೊಳಗಾಗುತ್ತಿದ್ದವು.

ಮನುಷ್ಯನು ಸಂಘಜೀವಿ. ಒಬ್ಬಂಟಿಗನಾಗಿ ಬದುಕಲು ಸಾಧ್ಯವಿಲ್ಲ. ಮನುಷ್ಯನಿಗೂ ಸಮಾಜಕ್ಕೂ ಅವಿನಾಭಾವ ಸಂಬಂಧವಿದೆ. ಮನುಷ್ಯನೆಂದರೆ ಸಮಾಜ, ಸಮಾಜವೆಂದರೆ ಮನುಷ್ಯ ಸಮಾಜವನ್ನು ಬಿಟ್ಟು ಮನುಷ್ಯ ಬದುಕಲಾರನು. ಮನುಷ್ಯನು ಸಮಾಜಕ್ಕಾಗಿ ದೇಶಕ್ಕಾಗಿ ಏನನ್ನಾದರೂ ಮಾಡಬೇಕೆಂದರೆ ಏಕವ್ಯಕ್ತಿಯಿಂದ ಸಾಧ್ಯವಿಲ್ಲ. ಸಂಘ, ಸಂಸ್ಥೆಯ ಮೂಲಕ ಮಾಡಲು ಸಾಧ್ಯ. ಆದುದರಿಂದ ವಚನಕಾರರು ಒಟ್ಟುಗೂಡಿ ಅನುಭವಮಂಟಪದಂತಹ ಸಂಸ್ಥೆಯನ್ನು ಕಟ್ಟಿದರು. ವಚನಕಾರರು ಸಮಾಜಮುಖಿ ಚಳವಳಿಗಳಿಗೆ ಚಾಲನೆ ನೀಡುವಲ್ಲಿ ಅನುಭವಮಂಟಪದ ಪಾತ್ರ ಹಿರಿದಾಗಿದೆ. ಅನುಭವಮಂಟಪ ಅಸಂಖ್ಯಾತ ವಚನಕಾರರನ್ನು ಮತ್ತು ವಚನಕಾರ್ತಿಯರನ್ನು ಬೆಳೆಸಿತು. ಅನುಭವ ಮಂಟಪದ ಸಂಬಂಧ ಇವರಿಗೆ ಬಹಳ ಆತ್ಮೀಯವಾಗಿತ್ತು. ವಚನಕಾರರು-ವಚನಕಾರ್ತಿಯರು

ಪರಸ್ಪರ ಕೃತಾರ್ಥಭಾವದಿಂದ, ಗೌರವದಿಂದ ಬದುಕಿದರು. 'ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯಿತು' ಎಂದು 'ಆಡುವುದು, ಹಾಡುವುದು, ಹೇಳುವುದು, ಕೇಳುವುದು, ನಡೆಯುವುದು, ನುಡಿವುದು ಸರಳ ಸಮ್ಮೇಳನವಾಗಿಪ್ಪುದಯ್ಯಾ' ಶರಣರೊಡನೆ ಚನ್ನಮಲ್ಲಿಕಾರ್ಜುನಯ್ಯಾ 'ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ ಲಿಂಗಸುಖಿಗಳ ಸಂಗದಲ್ಲಿ ದಿನಗಳ ಕಳೆವೆನು' ಎಂದು ಅಕ್ಕಮಹಾದೇವಿ ಅಭಿಮಾನದಿಂದ ಹೇಳಿದ್ದಾಳೆ. ಅಕ್ಕಮಹಾದೇವಿ ಮೊದಲಾದ ವಚನಕಾರ್ತಿಯರ ವಚನಕಾರರ ಸಂಗದಿಂದ ತಮಗಾದ ಅನುಭವಗಳನ್ನು ವಚನಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಇಂದಿನಂತೆ ಅಂದು ವಚನಕಾರರು-ವಚನಕಾರ್ತಿಯರು ದೇಶದಲ್ಲೆಲ್ಲ ಸಂಚರಿಸುವ ಮತ್ತು ವಾಸಮಾಡುವ ಹಕ್ಕನ್ನು ಪಡೆದಿದ್ದಾರೆ. ಇದಕ್ಕೆ ಅಕ್ಕಮಹಾದೇವಿ, ಮೋಳಿಗೆಯ ಮಾರಯ್ಯನ ಪತ್ನಿ ಮಹಾದೇವಮ್ಮ ಮೊದಲಾದವರು ಉದಾಹರಣೆಯಾಗಿದ್ದರು.

ಆರ್ಥಿಕ ಸಮಾನತೆಗೆ ವರ್ಗಭೇದಕ್ಕೆ ಆಸ್ತಿ ಸಂಪಾದನೆಯ ಹಕ್ಕು ಕಾರಣವೆಂಬುದನ್ನು ವಚನಕಾರರು ಅರಿತು ಸಂಗ್ರಹ ನೀತಿಯನ್ನು ವಿರೋಧಿಸಿದರು. ಕಾಯಕ ದಾಸೋಹ ಪದ್ಧತಿಯನ್ನು ಜಾರಿಗೆ ತಂದರು. ಇದರಿಂದ ಸಾಮಾಜಿಕ, ಆರ್ಥಿಕ ವ್ಯವಸ್ಥೆಯಲ್ಲಿ ಸುಧಾರಣೆ ಉಂಟಾಯಿತು. ವಚನಕಾರ್ತಿಯರು ಕಾಯಕ-ದಾಸೋಹ ತತ್ತ್ವವನ್ನು ಒಪ್ಪಿದರು. ಸಂಗ್ರಹ ನೀತಿಯನ್ನು ವಿರೋಧಿಸಿದರು. ಆಯ್ದಕ್ಕಿ ಮಾರಯ್ಯನು 'ಕಾಯಕವೇ ಕೈಲಾಸ' ಎಂದು ಕಾಯಕದ ಮಹತ್ವವನ್ನು ಹೇಳಿದರೆ; ಆಯ್ದಕ್ಕಿ ಲಕ್ಕಮ್ಮ 'ಈಸಕ್ಕಿಯಾಸೆ ನಿಮಗೇಕೆ?' ಎಂದು ಗಂಡನನ್ನು ಕೇಳುವುದರಲ್ಲಿ ಸಂಗ್ರಹ ನೀತಿಯನ್ನು ವಿರೋಧಿಸುವ ಭಾವವಿದೆ.

ಉತ್ಪಾದನೆಗೆ ಸಂಬಂಧಪಟ್ಟ ಯಾವುದೇ ವೃತ್ತಿ, ಉದ್ಯೋಗ, ವ್ಯಾಪಾರ, ವ್ಯವಹಾರ ಮಾಡುವ ಸ್ವಾತಂತ್ರ್ಯ ಹಕ್ಕು ಸಂವಿಧಾನದಲ್ಲಿರುವಂತೆ ವಚನಕಾರರ ಬಾಹ್ಯಪದ್ಧತಿಯಲ್ಲೂ ಇತ್ತೆಂಬುದಕ್ಕೆ ವಚನಕಾರರ-ವಚನಕಾರ್ತಿಯರ ವೃತ್ತಿಸೂಚಕ ಹೆಸರುಗಳೇ ಉದಾಹರಣೆಯಾಗಿವೆ. ಪ್ರತಿಯೊಬ್ಬ ವ್ಯಕ್ತಿಯೂ ಸತ್ಯ, ಶುದ್ಧಭಾವದಿಂದ ಪ್ರಾಮಾಣಿಕವಾಗಿ ಶ್ರದ್ಧೆಯಿಂದ ದುಡಿಯಬೇಕೆಂದು ಹೇಳಿದರು. 'ಕಾಯಕದಲ್ಲಿ ನಿರತನಾದರೆ ಗುರುದರ್ಶನವಾದರೂ ಮರೆಯಬೇಕು. ಲಿಂಗಪೂಜೆಯಾದಡೂ ಮರೆಯಬೇಕೆಂದು' ಆಯ್ದಕ್ಕಿ ಮಾರಯ್ಯನು ಹೇಳಿದ್ದಾನೆ. ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ 'ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ ಸತ್ಯಶುದ್ಧವಿಲ್ಲದುದು ಕಾಯಕವಲ್ಲ' ಎಂದು ಹೇಳಿದ್ದಾರೆ. ವಚನಕಾರ್ತಿಯರಿಗೆ ಕಾಯಕ ವೃತ್ತಿಯೆಂಬುದು ಒಂದು ವ್ರತವಾಗಿತ್ತು. ವೃತ್ತಿಯಲ್ಲಿ ಮೇಲು-ಕೀಳೆಂಬ ಭೇದಭಾವವಿಲ್ಲದೆ ಮಾಡುವ ವೃತ್ತಿಯನ್ನು ವ್ರತವನ್ನಾಗಿ ಭಾವಿಸಿದರೆಂಬುದಕ್ಕೆ ಅಕ್ಕಮ್ಮನ ವಚನದಿಂದ ತಿಳಿದುಕೊಳ್ಳಬಹುದು. 'ಆಸಿ, ಮಸಿ, ಕೃಷಿ ವಾಣಿಜ್ಯ ಮುಂತಾದ ಕಾಯಕವ ಮಾಡಿ ಭಕ್ತರ ಪಡುಗ, ಪಾದತ್ರಾಣ, ಪಹರಿ, ಬಾಗಿಲು, ಬೊಕ್ಕಸ, ಬಿಯಗ' ಮುಂತಾದ ಕಾಯಕವನ್ನು ಮಾಡಿಕೊಂಡು ವ್ರತಕ್ಕೆ ಋಣೆಯವಿಲ್ಲದೆ ಮಾಡುವ ಕೃತ್ಯಕ್ಕೆ ಕಡೆಯಾಗದೆ ಈ ಭಕ್ತರ ಅಂಗಳ ಅವಿಮುಕ್ತಿ ಕ್ಷೇತ್ರ, ಆತನ ಮನೆಯ ಆಚಾರವೇ ಪ್ರಾಣವಾದ ರಾಮೇಶ್ವರ ಲಿಂದಾಶ್ರಯ' ಎನ್ನುತ್ತಾಳೆ.

ವಚನಕಾರರಂತೆ ವಚನಕಾರ್ತಿಯರಿಗೂ ವೃತ್ತಿ ಆಯ್ಕೆಯ ಸ್ವಾತಂತ್ರ್ಯವಿತ್ತು. ಎಲ್ಲರೂ ಯಾವುದಾದರೊಂದು ಕೆಲಸದಲ್ಲಿ ನಿಷ್ಠೆಯಿಂದ, ಶ್ರದ್ಧೆಯಿಂದ ತೊಡಗಿಸಿಕೊಳ್ಳಬೇಕೆಂಬುದೇ ಅವರ ಉದ್ದೇಶವಾಗಿತ್ತು. ಆಯ್ದಕ್ಕಿ ಲಕ್ಕಮ್ಮ, ಮೋಳಿಗೆಯ ಮಹಾದೇವಿ ಮೊದಲಾದ ವಚನಕಾರ್ತಿಯರು ತಮ್ಮ ಪತಿಯ ಕಾಯಕದಲ್ಲಿ ಸಹಭಾಗಿಗಳಾಗಿದ್ದರು. ಸತ್ಯಕ್ಕ ರೆಮ್ಮವ್ವೆ, ಕಾಳವ್ವೆ, ಸೂಳೆಸಂಕವ್ವೆ, ಗೊಗ್ಗವ್ವೆ, ಕದಿರೆ ಕಾಯಕದ ಕಾಳವ್ವೆ, ಕೊಟ್ಟಣದ ಸೋಮಮ್ಮ ಮೊದಲಾದ ವಚನಕಾರ್ತಿಯರು ಸ್ವತಂತ್ರವಾಗಿ ಕಾಯಕಮಾಡುವ ಸ್ವಾತಂತ್ರ್ಯವನ್ನು ಪಡೆದಿದ್ದರು. ವಚನಕಾರರ, ವಚನಕಾರ್ತಿಯರ ಕಾಯಕದ ಹಕ್ಕು ಅವರ ಜೀವನದ ಉಸಿರಾಗಿತ್ತು.

ಆಧುನಿಕ ಸಂವಿಧಾನದ ಹಕ್ಕುಗಳಲ್ಲಿ ಸಮಾನತೆಯ ಹಕ್ಕು ಒಂದು. ಸಮಾಜದಲ್ಲಿದ್ದ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯನ್ನು ತರುವುದೇ ಸಂವಿಧಾನದ ಉದ್ದೇಶವಾಗಿದೆ. ಇದೇ ರೀತಿಯ ಉದ್ದೇಶವನ್ನು ಹೊಂದಿದ ವಚನಕಾರರು ಸಮಾನತೆಯ ತತ್ತ್ವವನ್ನು ಆಚರಣೆಯಲ್ಲಿ ತಂದರು. ವರ್ಗ–ವರ್ಣ–ಲಿಂಗದ ಭೇದವನ್ನಳಿಸಿ ಸಮಾನತೆಯಿಂದ ಜನರೆಲ್ಲರೂ ಬದುಕಬೇಕೆಂದು ವಚನಕಾರರು ಬಯಸಿದರು. ವರ್ಗ ಸಮಾನತೆಯನ್ನು ತರಲು ಕಾಯಕ–ದಾಸೋಹ ಪದ್ಧತಿಯನ್ನು ತಂದರು. ವರ್ಣ ಸಮಾನತೆಯನ್ನು ತರುವುದಕ್ಕೆ 'ನೆಲವೊಂದೆ ಹೊಲಗೇರಿ ಶಿವಾಲಯಕೆ, ಜಲವೊಂದು ಶೌಚಾಚಮನಕ್ಕೆ, ಕುಲವೊಂದೆ ತನ್ನತಾನರಿದವಂಗೆ,' 'ಆಚಾರವೆ ಕುಲ, ಅನಾಚಾರವೆ ಹೊಲೆ' ಎಂದು ಸಾರಿದರು. ವಚನಕಾರರಂತೆ ವಚನಕಾರ್ತಿಯರು ಅಸಮಾನತೆಯ ವ್ಯವಸ್ಥೆಯನ್ನು ನಿರ್ಭಿಡೆಯಿಂದ ಪ್ರಶ್ನಿಸಿದ್ದಾರೆ. ಸಂಗ್ರಹ ನೀತಿಯನ್ನು ವಿರೋಧಿಸಿದ ಆಯ್ದಕ್ಕಿ ಲಕ್ಕಮ್ಮ ಆರ್ಥಿಕ ಸಮಾನತೆಯನ್ನು ಬಯಸಿದಳು. 'ಕುರಿ ಕೋಳಿ ಕಿರಿಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು, ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು, ಅವರೆಂತು ಕೀಳುಜಾತಿಯಾದರು?' ಎಂದು ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಪ್ರಶ್ನಿಸಿದ್ದಾಳೆ. 'ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ?' ಊರೊಳಗೆ ಬ್ರಾಹ್ಮಣ ಬಯಲು ಊರ ಹೊರಗೆ ಹೊಲೆ ಬಯಲೆಂದುಂಟೆ? ಎಂದು ಬೊಂತಾದೇವಿ ಸಮಾಜದಲ್ಲಿದ್ದ ಜಾತಿಭೇದವನ್ನು ನಿರಾಕರಿಸಿದ್ದಾಳೆ. ವಚನಕಾರ್ತಿಯರಿಬ್ಬರು ವರ್ಣವ್ಯವಸ್ಥೆಯಲ್ಲಿರುವ ಅಸಮಾನತೆಯನ್ನು ವಿರೋದಿಸುತ್ತಲೇ ಸಮಾನತೆಯ ಆಶಯವನ್ನು ಹೊಂದಿದ್ದಾರೆ. ಭಾರತ ಜಾತ್ಯಾತೀತ ರಾಷ್ಟ್ರವಾಗಬೇಕೆಂದು ಇಂದಿನ ಸಂವಿಧಾನ ಬಯಸಿದರೆ, ವಚನಕಾರರು ಮತ್ತು ವಚನಕಾರ್ತಿಯರು ೧೨ನೇ ಶತಮಾನದಲ್ಲಿ ಜಾತ್ಯಾತೀತ ಭಾವದಿಂದ ಬದುಕಿ ತೋರಿಸಿದರು.

ಜಗತ್ತಿನಲ್ಲಿ ಮೊಟ್ಟಮೊದಲು ಹೆಣ್ಣಿಗೆ ಸ್ವಾತಂತ್ರ್ಯ–ಸಮಾನತೆಯ ಅವಕಾಶವನ್ನು ಕಲ್ಪಿಸಿಕೊಟ್ಟವರು ವಚನಕಾರರು. 'ಹೆಣ್ಣು ಮಾಯೆಯಲ್ಲ, ಹೆಣ್ಣು ರಕ್ಕಸಿಯಲ್ಲ, ಮನದ ಮುಂದಿನ ಆಸೆಯೆ ಮಾಯೆ,' 'ಹೆಣ್ಣು ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನ' ಎಂದು ವಚನಕಾರರು ಲಿಂಗಭೇದವನ್ನು ಅಳಿಸಿ ಲಿಂಗಸಮಾನತೆಯನ್ನು ತಂದರು. ಹೆಣ್ಣೆಂದರೆ ಕಡಿಮೆ, ಗಂಡೆಂದರೆ ಹೆಚ್ಚು ಎನ್ನುವ ಸಮಾಜದ

ನಿಲುವನ್ನು ಅಕ್ಕಮಹಾದೇವಿ ಮತ್ತು ಗೊಗ್ಗವ್ವೆ ಪ್ರಶ್ನಿಸಿದ್ದಾರೆ. ಅಕ್ಕಮಹಾದೇವಿ ಪ್ರಭು ಮತ್ತು ಪತಿಯನ್ನು ಏಕಕಾಲಕ್ಕೆ ಧಿಕ್ಕರಿಸಿ ಸ್ವತಂತ್ರವಾಗಿ ಬದುಕಿ ತೋರಿಸಿದಳು. 'ಆಳುತನದ ಮಾತನೇರಿಸಿನುಡಿದಡೆ ಆಗಳೆ ಕಟ್ಟಿದೆನು ಗಂಡುಗಚ್ಚೆಯ ತಿಗುರನೇರಿಸಿ ತಿಲಕವನಿಟ್ಟು ಕೈದುವಕೊಂಡು ಕಳನೇರಿದ ಬಳಿಕ ಕಟ್ಟಿದ ನಿರಿ ಸಡಿಲಿದಡೆ ಇನ್ನು ನಿಮ್ಮಾಣೆ, ಕಾಣಾ ಚೆನ್ನಮಲ್ಲಿಕಾರ್ಜುನಾ' ಎನ್ನುವಲ್ಲಿ ಹೆಣ್ಣು ಎಂದಿಗೂ ಪುರುಷನಿಗಿಂತ ಕಡಿಮೆ ಇಲ್ಲ. ಆತನಿಗೆ ಸರಿಸಮಾನವಾಗಿ ಬದುಕುವ ಯೋಗ್ಯತೆ ಅವಳಲ್ಲಿದೆಯೆಂಬುದನ್ನು ಅಕ್ಕಮಹಾದೇವಿ ಸ್ಪಷ್ಟಪಡಿಸಿದ್ದಾಳೆ. ಸಮಾಜದಲ್ಲಿ ಸ್ತ್ರೀಯರ ಮೇಲೆ ನಡೆಯುವ ಅತ್ಯಾಚಾರ, ದೌರ್ಜನ್ಯಗಳನ್ನು ಕಂಡ ಗೊಗ್ಗವ್ವೆ ಸಮಾಜದ ದ್ವಿನೀತಿಯ ವ್ಯವಸ್ಥೆಯನ್ನು ಪ್ರಶ್ನಿಸುವಲ್ಲಿ ಸಮಾನತೆಯನ್ನು ಬಯಸುವ ಕಾಳಜಿಯಿದೆ. ದೇಹದ ರಚನೆಯನ್ನು ಆಧರಿಸಿ ಹೆಣ್ಣು-ಗಂಡಿನಲ್ಲಿ ಭೇದವನ್ನು ಮಾಡುತ್ತಿದ್ದ ಸಮಾಜದ ರೀತಿಯನ್ನು ದೇವರ ದಾಸಿಮಯ್ಯನು ಪ್ರಶ್ನಿಸಿದ್ದಾನೆ. 'ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವಾತ್ಮನು ಗಂಡೂ ಅಲ್ಲ. ಹೆಣ್ಣು ಅಲ್ಲ ಕಾಣಾ ರಾಮನಾಥಾ' ಎಂದು ದೇವರ ದಾಸಿಮಯ್ಯನು ಪ್ರಶ್ನಿಸಿದಂತೆ ಗೊಗ್ಗವ್ವೆಯು 'ಮೊಲೆ ಮುಡಿ ಬಂದಡೆ ಹೆಣ್ಣೆಂಬರು, ಗಡ್ಡ ಮೀಸೆ ಬಂದಡೆ ಗಂಡೆಂಬರು ಈ ಉಭಯದ ಜ್ಞಾನ ಹೆಣ್ಣೊ ಗಂಡೊ ನಾಸ್ತಿನಾಥಾ' ಎಂದು ಲಿಂಗ ಅಸಮಾನತೆಯನ್ನು ಕುರಿತು ಪ್ರಶ್ನಿಸಿದ್ದಾಳೆ. ದೇಹದ ರಚನೆಯಲ್ಲಿ ಭಿನ್ನತೆ ಇರಬಹುದು. ಆದರೆ ಜ್ಞಾನಕ್ಕೆ ಭೇದವಿಲ್ಲೆಂದು ತಿಳಿಸಿದ್ದಾಳೆ. 'ಗಂಡು ಮೋಹಿಸಿ ಹೆಣ್ಣ ಹಿಡಿದಡೆ ಅದು ಒಬ್ಬರ ಒಡವೆ ಎಂದು ಅರಿಯಬೇಕು. ಹೆಣ್ಣು ಮೋಹಿಸಿ ಗಂಡ ಹಿಡಿದಡೆ ಉತ್ತರವಾವು ದೆಂದರಿಯಬೇಕು. ಈ ಎರಡರ ಉಭಯ ಕಳೆದು ಸುಖಿ ತಾನಾಗಬಲ್ಲಡೆ ನಾಸ್ತಿನಾಥನು ಪರಿಪೂರ್ಣನೆಂಬೆ' ಎಂದು ಗೊಗ್ಗವ್ವೆ ಸಮಾಜದ ದ್ವಿನೀತಿಯ ಕುರಿತು ಪ್ರಶ್ನಿಸಿದ್ದಾಳೆ. ಹೆಣ್ಣು-ಗಂಡಿನ ಸಮಾನತೆಯನ್ನು ಬಯಸಿದ್ದಾಳೆ. ಹೆಣ್ಣು ಜ್ಞಾನದಲ್ಲಿ ಗಂಡಿಗೆ ಸಮಾನಳೆಂದು ತಿಳಿಸಿದ್ದಾಳೆ. ಹೀಗೆ ವಚನಕಾರ್ತಿಯರು ಸ್ತ್ರೀ ಸಮಾನತೆಯನ್ನು ಸಾರಿದರು ಹಾಗೂ ಬದುಕಿ ತೋರಿಸಿದರು.

ವಿವಿಧತೆಯಲ್ಲಿ ಏಕತೆಯನ್ನು ಕಾಣುವ ವಿಚಾರವನ್ನು ವಚನಕಾರರು ತಮ್ಮ ಬದುಕಿನಲ್ಲಿ ನಡೆದು ತೋರಿಸಿದರು. ಸಹೋದರತೆ ಭಾವ ಎಲ್ಲರಲ್ಲಿಯೂ ಬರಬೇಕಾದರೆ ತಮ್ಮ ತಮ್ಮಲ್ಲಿ ಭೇದಭಾವಗಳನ್ನು ಮರೆತು, ಒಂದಾಗಬೇಕು ಎಂದು ತಿಳಿಸಿದರು. ಬಸವಣ್ಣನು 'ಇವನಾರವ ಇವನಾರವ ಎನ್ನದಿರಿ ಇವ ನಮ್ಮವ ಇವ ನಮ್ಮವ ಎನ್ನಿರಿ' ಎಂದು ಸಾರಿದನು. ವಚನಕಾರ್ತಿಯರು ವಚನಕಾರರ ಹಿರಿಮೆಯನ್ನು ತಮ್ಮ ವಚಗಳಲ್ಲಿ ಸ್ಮರಿಸಿದ್ದಾರೆ. ಈ ಮೂಲಕ ವಚನಕಾರ್ತಿಯರು ಸಹೋದರತೆಯ ಭಾವವನ್ನು ವ್ಯಕ್ತಪಡಿಸಿದ್ದಾರೆ. ಮತ-ಪಂಥ-ವರ್ಗ-ವರ್ಣ ಪ್ರತಿಷ್ಠೆಯನ್ನು ಮರೆತು ಬದುಕಿದ ವಚನಕಾರ್ತಿಯರ ಬದುಕು ಸೋದರಭಾವಕ್ಕೆ ಸಾಕ್ಷಿಯಾಗಿದೆ. ವಚನಕಾರ್ತಿಯರು ತಾವು ನಂಬಿದ ಮೌಲ್ಯ-ಸಿದ್ಧಾಂತಗಳಿಗೆ ಬದ್ಧರಾಗಿ ಬದುಕಬೇಕೆಂಬ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ವಚನಕಾರ್ತಿಯರು ವ್ರತನಿಷ್ಠರಾಗಿದ್ದರು. ತಮ್ಮ ವಿಚಾರಕ್ಕೆ ಬದ್ಧರಾಗಿ ನಡೆಯುತ್ತಿದ್ದರೆಂಬುದಕ್ಕೆ

ಕಾಳವ್ವೆಯ ಮಾತಿನಲ್ಲಿ ಕಾಣಬಹುದು. 'ವ್ರತವೆಂಬುದು ನಾಯಕ ರತ್ನ, ವ್ರತ ಹೋದಾಗ ಇಷ್ಟಲಿಂಗದ ಕಳೆ ನಷ್ಟವವ್ವಾ' ಎಂದಿದ್ದಾಳೆ.

ರಾಜಶಾಹಿ, ಪುರೋಹಿತಶಾಹಿಯ ವ್ಯವಸ್ಥೆಯಲ್ಲಿ ನಡೆಯುತ್ತಿದ್ದ ಅನ್ಯಾಯ, ಅತ್ಯಾಚಾರ, ಭ್ರಷ್ಟತೆಯನ್ನು ಪ್ರತಿಭಟಿಸಿ ಜನರಿಗೆ ನ್ಯಾಯವನ್ನು ದೊರಕಿಸಿಕೊಡುವುದೇ ವಚನಕಾರರ ನ್ಯಾಯಪದ್ಧತಿಯಾಗಿತ್ತು. ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಯನ್ನು ತಡೆಯುವುದಕ್ಕೆ, 'ದೇಹವೆ ದೇಗುಲ'ವೆಂದು 'ದಯವೇ ಧರ್ಮದ ಮೂಲ' ಎಂದು 'ಆಚಾರವೇ ಸ್ವರ್ಗ ಅನಾಚಾರವೇ ನರಕ' ಎಂದು ತಿಳಿಸಿದರು. ಆಚಾರ-ವಿಚಾರ ಒಂದಾದಾಗ, ಧರ್ಮ-ನೀತಿ ಮಾರ್ಗದಲ್ಲಿ ನಡೆದಾಗ ಸಾಮಾಜಿಕ ಅನ್ಯಾಯ ಕಡಿಮೆಯಾಗಬಹುದೆಂಬ ಆಶಯ ಅವರದಾಗಿತ್ತು. ವರ್ಣ-ವರ್ಗ ವ್ಯವಸ್ಥೆಯಲ್ಲಿ ನಡೆಯುತ್ತಿದ್ದ ಅನ್ಯಾಯವನ್ನು ತಡೆಗಟ್ಟಲು ಸಮಾನತೆಯ ತತ್ತ್ವವನ್ನು ತಂದರು. ವರ್ಗ ವ್ಯವಸ್ಥೆಯಲ್ಲಿ ನಡೆಯುತ್ತಿದ್ದ ಅನ್ಯಾಯವನ್ನು ನಿಲ್ಲಿಸಲು ಕಾಯಕ-ದಾಸೋಹ-ಅಸಂಗ್ರಹ ನೀತಿಯನ್ನು ಜಾರಿಗೆ ತಂದರು. ಲಿಂಗ ಅಸಮಾನತೆಯಿಂದ ಶತಮಾನಗಳಿಂದ ಹೆಣ್ಣು ಗುಲಾಮಳಾಗಿ ಬದುಕುತ್ತಿದ್ದಳು. ಅವಳನ್ನು ಸಮಾನತೆ ಮತ್ತು ಗೌರವ ಭಾವದಿಂದ ಕಂಡರು. ಹೆಣ್ಣು-ಗಂಡು ಸಮಾನರೆಂದು ಸಾರಿದರು. ಲಿಂಗಭೇದವನ್ನು ವಿರೋಧಿಸಿ ಹೆಣ್ಣಿಗೆ ಸಮಾನ ಅವಕಾಶವನ್ನು ಕಲ್ಪಿಸಿಕೊಂಡರು. ಕಾಯಕ-ದಾಸೋಹಗಳಂತಹ ತತ್ತ್ವಗಳು, ಸ್ವತಂತ್ರ್ಯ-ಸಮಾನತೆಯಂತಹ ಮೌಲ್ಯಗಳು ಅವರ ನ್ಯಾಯಪದ್ಧತಿಯ ಮಾನದಂಡಗಳಾಗಿದ್ದವು. ವರ್ಣ-ವರ್ಗ-ಲಿಂಗಭೇದವನ್ನು ವಚನಕಾರ್ತಿಯರು ಪ್ರಶ್ನಿಸಿದರು, ಪ್ರತಿಭಟಿಸಿದರು. ವಚನಕಾರರಿಗಿಂತಲೂ ವಚನಕಾರ್ತಿಯರು ವ್ಯವಸ್ಥೆಯ ಕುರಿತು ನಿರ್ಭಿಡೆಯಿಂದ, ಧೈರ್ಯದಿಂದ ಪ್ರಶ್ನಿಸಿದ್ದಾರೆ. ಅವರು ಕೇಳುವ ಪ್ರಶ್ನೆಗಳಲ್ಲಿ ಸಾಮಾಜಿಕ ವಿಷಯ ಮುಖ್ಯವಾಗಿದೆ. ಪ್ರಶ್ನೆಗೆ ಉತ್ತರಿಸುವಲ್ಲಿ ನ್ಯಾಯವನ್ನು ಬಯಸುವ ಕಾಳಜಿಯಿದೆ.

'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಇದಿರ ಹಳಿಯಲು ಬೇಡ, ತನ್ನ ಬಣ್ಣಿಸಬೇಡ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ'ಯೆಂದು ಬಸವಣ್ಣನವರು ಮನುಷ್ಯನ ನಡತೆಯ ಬಗೆಗೆ ಹೇಳಿದ್ದಾರೆ. ನಮ್ಮ ನಡೆ-ನುಡಿಯಲ್ಲಿ ಶುದ್ಧ ಭಾವವಿದ್ದರೆ ಅನ್ಯಾಯ ನಮ್ಮ ಹತ್ತಿರಕ್ಕೆ ಸುಳಿಯುವುದಿಲ್ಲ. ನಾವು ನ್ಯಾಯ ಸಮ್ಮತವಾಗಿ ಬದುಕಬಹುದೆಂಬುದೇ ವಚನಕಾರರ ನಿಲವಾಗಿತ್ತು. ಇದೇ ರೀತಿಯ ವಿಚಾರವನ್ನು ಅಕ್ಕಮ್ಮನ ವಚನದಲ್ಲಿ ಕಾಣಬಹುದು. 'ತಾ ವ್ರತಿಯಾಗಿದ್ದಲ್ಲಿ ತನ್ನ ಸೀಮೆ ಒಳಗಾಗಿ, ಕಟಕ ಪಾರದ್ವಾರ ಹುಸಿ, ಕೊಲೆ, ಕಳವು, ಅನ್ಯಾಹಾರ ಮುಂತಾದ ನಿಂದಕ ದುರ್ಜನ ಭವಿಸಂಗ ಉಳ್ಳವರ ತಂದೆ ತಾಯಿ ಯೆಂದು ಹೆಂಡಿರು ಮಕ್ಕಳೆಂದು ಬಂಧು ಬಳಗವೆಂದು ಅವರನ್ನು ಅಂಗಳದಲ್ಲಿ ಕೂಡಿಕೊಂಡಡೆ, ಅವರ ತಂದು ಕೊಳನಿಕ್ಕಿದಡೆ, ತಿಂಗಳು ಸತ್ತ ನಾಯ ಮಾಂಸವ ತಂದು ತಿಂದ ದೋಷ ತಪ್ಪದು' ಎಂದಿದ್ದಾಳೆ. 'ಕರುಣಾಕರ ನೀನೆಂದೆನಿಸಿ ಕೊಂಡೆ; ಸಿರಿಯಾಳನ ಮಗನ ಬೇಡುವರೇನಯ್ಯಾ', 'ಮಡದಿಯ ಜಂಗಮಕ್ಕೆ ಕೊಟ್ಟು ನೋಡಿದವರುಂಟೆ? ಹಡೆದ ಮಕ್ಕಳ ಕೊಂದು ಜಂಗಮಕ್ಕೆ

ಉಣಲಿಕ್ಕಿದವರುಂಟೆ?', 'ನಿಮ್ಮ ಹಿರಿಯತನಕ್ಕಿದು ಪಥವೆ, ಬಲ್ಲಾಳನ ವಧುವ ಬೇಡುವುದು? ನಿಮ್ಮ ಗುರುತನಕ್ಕಿದು ಪಥವೆ, ನಾರಿಯರಿಬ್ಬರೊಡನೆ ಇಪ್ಪುದು ಶಿವ ಶಿವಾ ನಿಮ್ಮ ನಡವಳಿ' ಎಂದು ಸತ್ಯಕ್ಕ ಶಿವನ ನಡತೆಯ ಬಗೆಗೆ ಪ್ರಶ್ನಿಸಿದ್ದಾಳೆ. ಪುರುಷಪ್ರಧಾನ ವ್ಯವಸ್ಥೆಯ ಪ್ರತೀಕನಾದ ಶಿವನ ನಡತೆಯಲ್ಲಿ ದೋಷವಿರುವುದನ್ನು ಸತ್ಯಕ್ಕ ಗುರುತಿಸಿದ್ದಾಳೆ. ವ್ಯಕ್ತಿ ತನ್ನ ಹಿತಾಸಕ್ತಿಗಾಗಿ ಅನೀತಿಯ ಮಾರ್ಗವನ್ನು ಅನುಸರಿಸುವುದು ಸತ್ಯಕ್ಕ ಒಪ್ಪುವುದಿಲ್ಲ. ಆದುದರಿಂದ ಶಿವನು ಸಿರಿಯಾಳನ ಮಗನನ್ನು ಬೇಡುವುದು. ಮಡದಿಯನ್ನು ಜಂಗಮನಿಗೆ ಕೊಡುವುದು, ಹಡೆದ ಮಕ್ಕಳ ಕೊಂದು ಜಂಗಮನಿಗೆ ಉಣಲಿಕ್ಕುವುದು, ಬಲ್ಲಾಳನ ಹೆಂಡತಿಯನ್ನು ಬಯಸುವುದು, ನಾರಿಯರಿಬ್ಬರೊಡನೆ ಇರುವುದು ಸತ್ಯಕ್ಕನಿಗೆ ಸರಿಯೆನಿಸುವುದಿಲ್ಲ. ಶಿವನ ನಡತೆಯಲ್ಲಿರುವ ಅನೀತಿ, ಅನ್ಯಾಯವನ್ನು ಪ್ರಶ್ನಿಸಿದ್ದಾಳೆ. ಸ್ವಾರ್ಥಭಾವದ ಸ್ವಾತಂತ್ರ್ಯವನ್ನು, ಪರರ ವಸ್ತುವನ್ನು ಬಯಸುವುದು, ಹಿಂಸಾ ಪ್ರವೃತ್ತಿಯನ್ನು, ಬಹುಪತ್ನಿತ್ವ ಪದ್ಧತಿಯನ್ನು ವಿರೋಧಿಸಿದ್ದಾಳೆ. ವಚನಕಾರ್ತಿಯರಿಗೆ ಅನೀತಿಯಿಂದ ಬದುಕುವ ಮಾರ್ಗ ಅನ್ಯಾಯದ ಮಾರ್ಗವಾಗಿ ಕಂಡರೆ ನೀತಿಯಿಂದ ಬದುಕುವ ಮಾರ್ಗ ನ್ಯಾಯದ ಮಾರ್ಗವಾಗಿ ಕಂಡಿದೆ.

ಬಸವಣ್ಣ ಮೊದಲಾದ ವಚನಕಾರರ ವ್ಯಕ್ತಿತ್ವದಿಂದ ಪ್ರಭಾವಿತರಾದ ವಚನಕಾರ್ತಿಯರು ಅವರ ವಿಚಾರಕ್ಕೆ ಪೂರಕವಾಗುವಂತೆ ಆಲೋಚಿಸಿದ್ದಾರೆ. ನ್ಯಾಯಪದ್ಧತಿಗೆ ಸಂಬಂಧಿಸಿದಂತೆ ವಚನಕಾರರ ಮತ್ತು ವಚನಕಾರ್ತಿಯರ ವಿಚಾರಗಳಲ್ಲಿ ಸಾಮ್ಯತೆಯನ್ನು ಕಾಣಬಹುದು. ಆದರೂ ಕೆಲವೊಮ್ಮೆ ವಚನಕಾರರ ವಿಚಾರಕ್ಕೆ ವಚನಕಾರ್ತಿಯರು ಪ್ರತಿಕ್ರಿಯಿಸುವ ರೀತಿ ವಿಶಿಷ್ಟವಾಗಿದೆ. ದೇವರ ದೇವನೆನಿಸಿಕೊಂಡ ಶಿವನ ನಡತೆಯನ್ನು ಸತ್ಯಕ್ಕ ಪ್ರಶ್ನಿಸುವಲ್ಲಿ ನ್ಯಾಯಸಮ್ಮತವಾದ ವಿಚಾರಗಳಿವೆ. ಕ್ರಮತಪ್ಪಿ ಬದುಕುವ ರೀತಿ ಸತ್ಯಕ್ಕನಿಗೆ ತಪ್ಪಾಗಿ ಕಾಣುತ್ತದೆ. ಆಚಾರ-ವಿಚಾರಕ್ಕೆ ಬದ್ಧರಾಗಿ ನೀತಿ-ನಿಯಮಗಳಿಂದ ಬದುಕುವುದೇ ನ್ಯಾಯವೆಂದು ಸತ್ಯಕ್ಕ ನಂಬಿದ್ದಳು. 'ನಾರಿಯರಿಬ್ಬರೊಡನೆ ಇಪ್ಪುದು? ಶಿವ ಶಿವಾ ನಿಮ್ಮ ನಡವಳಿ?' ಎಂದು ಸತ್ಯಕ್ಕ ಬಹುಪತ್ನಿತ್ವದ ಪದ್ಧತಿಯನ್ನು ನಿರಾಕರಿಸುತ್ತಾಳೆ. ಬಹುಪತ್ನಿತ್ವ ಪದ್ಧತಿ ಹೆಣ್ಣಿನ ಮಾನಸಿಕ ಹಿಂಸೆಗೆ ಕಾರಣವಾಗುತ್ತದೆ. ಇದನ್ನು ತಿಳಿದುಕೊಂಡ ಸತ್ಯಕ್ಕ ಬಹುಪತ್ನಿತ್ವ ಪದ್ಧತಿಯನ್ನು ಪ್ರಶ್ನಿಸಿದ್ದಾಳೆ. ಇಲ್ಲಿ ಸತ್ಯಕ್ಕನ ನ್ಯಾಯದ ಪರಿಕಲ್ಪನೆ ಭಿನ್ನವಾಗಿ ಕಾಣುತ್ತದೆ. ಸತ್ಯಕ್ಕನಂತೆ ಬಹುಪತ್ನಿತ್ವದ ಕುರಿತು ವಚನಕಾರರ್ಯಾರು ಆಲೋಚನೆ ಮಾಡಿಲ್ಲ. ಸ್ತ್ರೀ ಸಂವೇದನೆಯನ್ನು ಅರ್ಥಮಾಡಿಕೊಂಡ ಸತ್ಯಕ್ಕ ಮಾತ್ರ ಇಂತಹ ಪ್ರಶ್ನೆ ಕೇಳಲು ಸಾಧ್ಯವಾಗಿದೆ. 'ಅರ್ಚನೆ ಪೂಜನೆ ನೇಮವಲ್ಲ; ಮಂತ್ರ ತಂತ್ರ ನೇಮವಲ್ಲ; ಧೂಪದೀಪಾರತಿ ನೇಮವಲ್ಲ; ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ' ಎಂದು ಸತ್ಯಕ್ಕನ ನ್ಯಾಯದ ಬಗೆಗೆ ಇರುವ ನಿಲುವು ಮಹತ್ವದ್ದಾಗಿದೆ. 'ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಲ್ಲ. ವ್ರತಹೀನ ನೆರೆಯ ನರಕವಲ್ಲದೆ ಮುಕ್ತಿಯಿಲ್ಲ' ಎಂದು ಕೊಟ್ಟಣದ ಸೋಮವ್ವ ನುಡಿದರೆ, ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ 'ಹದ ಮಣ್ಣಲ್ಲದೆ ಮಡಕೆಯಾಗಲಾರದು. ವ್ರತಹೀನನ ಬೆರೆಯಲಾಗದು ಬೆರೆದಡೆ ನರಕ ತಪ್ಪದು' ಎಂದು ಹೇಳಿದ್ದಾಳೆ. ನೀತಿ-ನಿಯಮಗಳಿಗೆ ಬದ್ಧರಾಗಿ ವ್ರತನಿಷ್ಠೆಯಿಂದ

ಬದುಕುವುದೇ ನ್ಯಾಯವೆಂದು ವಚನಕಾರ್ತಿಯರು ಭಾವಿಸಿದ್ದರು. ಈ ರೀತಿಯ ಬದ್ಧತೆ ಭಾರತೀಯ ನಾಗರಿಕರಲ್ಲಿ ಇಲ್ಲದಿರುವುದರಿಂದ ಬಹುಶಃ ಸಾಮಾಜಿಕ ವ್ಯವಸ್ಥೆಯಲ್ಲಿ ಏರು–ಪೇರಾಗಿ ಜನರ ಬದುಕು ಅಶಾಂತಿ ಮತ್ತು ಆತಂಕದಿಂದ ಕೂಡಿದೆ. 'ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ, ಹಲವು ಪ್ರಾಣಿಯ ಕೊಂದು, ನಲಿನಲಿದಾಡುವ. ತನ್ನ ಮನೆಯಲೊಂದು ಶಿಶು ಸತ್ತಡೆ ಅದಕ್ಕೆ ಮರಗುವಂತೆ ಅವರೇಕೆ ಮರುಗರು?' ಎಂದು ಅಕ್ಕಮಹಾದೇವಿ ಜೀವಹಿಂಸೆಯನ್ನು ವಿರೋಧಿಸಿದ್ದಾಳೆ. ಜೀವಹಿಂಸೆಯಂತಹ ಅನ್ಯಾಯವನ್ನು ಅಕ್ಕಮಹಾದೇವಿ ಸಹಿಸುವುದಿಲ್ಲ. ಅಹಿಂಸಾ ಮಾರ್ಗದಲ್ಲಿ ನಡೆಯುವುದೇ ಅಕ್ಕಮಹಾದೇವಿಗೆ ನ್ಯಾಯವಾಗಿ ಕಂಡಿದೆ. 'ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು, ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ? ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು, ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ' ಎಂದು ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಕೇಳುವಲ್ಲಿ, 'ಗಂಡು ಮೋಹಿಸಿ ಹೆಣ್ಣ ಹಿಡಿದಡೆ ಅದು ಒಬ್ಬರ ನಡುವೆ ಎಂದು ಅರಿಯಬೇಕು. ಹೆಣ್ಣು ಮೋಹಿಸಿ ಗಂಡ ಹಿಡಿದಡೆ ಉತ್ತರವಾವುದೆಂದರಿಯಬೇಕು' ಎಂದು ಗೊಗ್ಗವ್ವೆ ಪ್ರಶ್ನಿಸುವಲ್ಲಿ ಸಾಂಪ್ರದಾಯಿಕ ಮೌಲ್ಯಗಳ ನಿರಾಕರಣೆಯಿದೆ. ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಹೆಣ್ಣಿಗೆ ಆದ ಅನ್ಯಾಯವನ್ನು ವಿರೋಧಿಸುವ ವಚನಕಾರ್ತಿಯರ ನ್ಯಾಯ ಪರಿಕಲ್ಪನೆ ವಿಚಾರಾರ್ಹವಾಗಿದೆ. ಅಕ್ಕಮಹಾದೇವಿ ಅರಸನಾದ ಗಂಡನ ಬಂಧನವನ್ನು ಕಡೆದುಕೊಂಡು ಅರಮನೆಯನ್ನು ಬಿಟ್ಟುಬರುವಳು. ಈ ಮೂಲಕ ಅಕ್ಕಮಹಾದೇವಿ ತನಗಾದ ಅನ್ಯಾಯವನ್ನು ಪ್ರತಿಭಟಿಸುವಳು. ಗಂಡನನ್ನು ಬಿಡುವುದರ ಮೂಲಕ ವಿವಾಹ ಮತ್ತು ಕೌಟುಂಬಿಕ ಪದ್ಧತಿಗೆ ತನ್ನದೇ ಆದ ರೀತಿಯಲ್ಲಿ ನ್ಯಾಯವನ್ನೊದಗಿಸುತ್ತಾಳೆ. ಕಟ್ಟಿಕೊಂಡ ಗಂಡನಿಗಿಂತಲೂ, ಹೆತ್ತ ತಾಯಿ–ತಂದೆಗಳಿಗಿಂತಲೂ ಈಕೆಗೆ ಆತ್ಮಗೌರವ ಮುಖ್ಯವಾಗುತ್ತದೆ. ಸ್ವಾಭಿಮಾನದಿಂದ ಸ್ವತಂತ್ರ್ಯವಾಗಿ ಬದುಕುವ ಮಾರ್ಗವನ್ನು ಕಂಡುಕೊಳ್ಳುತ್ತಾಳೆ. ಅಕ್ಕಮಹಾದೇವಿಯ ಈ ಮಾರ್ಗ ಸಮಾಜಕ್ಕೆ ಹೊಸದಾಗಿ ತೋರುತ್ತದೆ. ಪತಿಯೇ ಪರದೈವ ಎನ್ನುವ ಸ್ಥಾಪಿತ ಮೌಲ್ಯದ ಬದಲಾಗಿ ಶರಣಸತಿ–ಲಿಂಗಪತಿಯೆನ್ನುವ ತತ್ತ್ವದಂತೆ ನಡೆಯುವ ಅಕ್ಕಮಹಾದೇವಿಯ ನ್ಯಾಯದ ಪರಿಕಲ್ಪನೆ ನವೀನವಾಗಿದೆ. ಸ್ತ್ರೀಪರವಾಗಿ ಆಲೋಚಿಸುವಂತಹ ವಚನಕಾರ್ತಿಯರ ನ್ಯಾಯದ ಪರಿಕಲ್ಪನೆ ಸಾಮಾಜಿಕ ದೃಷ್ಟಿಯನ್ನು ಬದಲಾಯಿಸುವಂತಹದ್ದಾಗಿದೆ. ಸಾಮಾಜಿಕ ಬದುಕಾಗಲಿ, ವೈಯಕ್ತಿಕ ಬದುಕಾಗಲಿ ಸುವ್ಯವಸ್ಥಿತವಾಗಿ ನಡೆಯಬೇಕಾದರೆ, ತಾವು ರೂಪಿಸದ ನೀತಿ–ನಿಯಮಗಳಿಗೆ ಬದ್ಧರಾಗಿ ಬದುಕಬೇಕೆಂಬುದೇ ವಚನಕಾರ್ತಿಯರ ಉದ್ದೇಶವಾಗಿತ್ತು. ಸ್ವಾತಂತ್ರ್ಯತೆ ಸಮಾನತೆ–ನ್ಯಾಯಬದ್ಧತೆ–ಪ್ರಾಮಾಣಿಕತೆ–ವ್ರತನಿಷ್ಠೆಯಂತಹ ಅಂಶಗಳು ವಚನಕಾರ್ತಿಯರ ನ್ಯಾಯ ಪರಿಕಲ್ಪನೆಯ ತಿರುಳಾಗಿದ್ದವು.

ರಾಷ್ಟ್ರಕವಿ ಕುವೆಂಪು ಅವರ ಕವನದಲ್ಲಿ 'ವರ್ಣಾಶ್ರಮದ ಹೆಸರ ಹೊಲೆಗೆಸರ ವಂಚನೆಯ ಕುಂಡದಿಂದ ನಮ್ಮನೆಳೆದು ಬದುಕಿಸು' ಎಂದು ಬಸವೇಶ್ವರರನ್ನು ಪ್ರಾರ್ಥಿಸಿಕೊಳ್ಳಲಾಗುತ್ತಿದೆ. ವರ್ಣಾಶ್ರಮ ವ್ಯವಸ್ಥೆಯಲ್ಲಿ ಬೆಂದವರಲ್ಲಿ ಶೂದ್ರರು ಮತ್ತು ಸ್ತ್ರೀಯರು ಪ್ರಮುಖರಾಗಿದ್ದಾರೆ. ನಾವು

ವೈಚಾರಿಕ ಯುಗದಲ್ಲಿದ್ದೇವೆ ಎಂದು ಅಭಿಮಾನದಿಂದ ಎದೆತಟ್ಟಿಕೊಂಡು ಹೇಳುವ ಜನರೇ ಸ್ತ್ರೀಯರಿಗೆ-ದಲಿತ ಹಾಗೂ ಕೆಳಸ್ತರದ ಜನರಿಗೆ ಮುಕ್ತವಾಗಿ ಜೀವಿಸಲು ಅವಕಾಶ ನೀಡುತ್ತಿಲ್ಲ. ಇಂದಿಗೂ ಜಾತ್ಯಾತೀತ ರಾಷ್ಟ್ರದಲ್ಲಿ ಮೇಲು-ಕೀಳು, ಬಡವ-ಬಲ್ಲಿದ, ಹೆಣ್ಣು-ಗಂಡು ಎಂಬ ತಾರತಮ್ಯ ನೀತಿ ಜೀವಂತವಾಗಿದೆ. ಉಂಬುವಲ್ಲಿ, ಉಡುವಲ್ಲಿ ತಿಲಮಾತ್ರ ಜಾತೀಯತೆ ದೂರವಾದರೂ ಗಂಡು-ಹೆಣ್ಣುಗಳನ್ನು ಪರಸ್ಪರ ಕೊಡುವಲ್ಲಿ ಕೊಂಬಲ್ಲಿ ಜಾತಿ ಅಡ್ಡ ಬರುತ್ತಲೇ ಇದೆ. ಜಾತ್ಯಾತೀತ ರಾಷ್ಟ್ರದಲ್ಲಿ ಜಾತೀಯತೆ ಜೀವಂತವಾಗಿರಲು ಅನೇಕ ಕಾರಣಗಳಿವೆ. ಮೀಸಲಾತಿ ನೀತಿಯ ಪ್ರಯೋಜನ ಪಡೆಯಲು ಅಗ್ರಜರು ಕೂಡ ಅಂತ್ಯಜರ ಪಟ್ಟಿಯಲ್ಲಿ ತಮ್ಮ ಜಾತಿಯನ್ನು ಸೇರಿಸಲು ನಡೆಸಿದ ಪ್ರಯತ್ನಗಳನ್ನು ಕಂಡ ಬಳಿಕ ಜಾತಿಗೆ ಅಧಿಕ ಮಹತ್ವ ಬಂದಿದೆ.

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಸರ್ವರಿಗೂ ಸಮಬಾಳು-ಸರ್ವರಿಗೂ ಸಮಪಾಲು ದೊರೆಯುವದೆಂಬ ಭರವಸೆ, ಇಂದು ಭರವಸೆಯಾಗಿಯೇ ಉಳಿದಿದೆ. ಸ್ತ್ರೀ ಮತ್ತು ಶೂದ್ರರ ಪಾಲಿಗೆ ಸಮಾನತೆ ಎಂಬುದು ಮಾಯಾಮೃಗವಾಗಿದೆ. ಕವಿ ಕುವೆಂಪು ಅವರ ಕವನದ ಆಶಯ ಉದಾತ್ತ ಬಸವತ್ವದಿಂದಲೇ ಸರ್ವರಿಗೂ ಮುಕ್ತವಾಗಿ ಬದುಕುವ ಸಮಾನ ಅವಕಾಶ ದೊರೆಯಬಲ್ಲವು. ಬಸವಣ್ಣನವರು ಲಿಂಗ ಸಮಾನತೆಯ ಮೂಲಕ ಸ್ಥಾಪಿಸಿದ ಪ್ರಜಾಧರ್ಮದಲ್ಲಿ ಸರ್ವರಿಗೂ ಸಮಾನರಾಗಿ ಬಾಳಲು ಮುಕ್ತ ಅವಕಾಶಗಳಿವೆ. 'ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನಾ' ಎಂದು ಶಿವಯೋಗಿ ಸಿದ್ಧರಾಮೇಶ್ವರರು ವಚನದ ಮೂಲಕ ನೀಡಿದ ಗೌರವ ಶರಣರು ಸ್ತ್ರೀ ಸಮಾನತೆಗಾಗಿ ಹಾಗೂ ಮಹಾನತೆಗಾಗಿ ಹೊಂದಿದ ಮಾನವೀಯ ನಿಲುವು ಎಷ್ಟು ಅಂತಃಕರಣಪೂರ್ವಕವಾಗಿತ್ತೆಂಬುದನ್ನು ಸೂಚಿಸುವುದು. ಶೋಷಣೆಗೆ ಗುರಿಯಾಗಿ ಬೆಂದು ಬಳಲುತ್ತಿರುವ ಸ್ತ್ರೀಯರೂ, ದಲಿತರೂ ಹಾಗೂ ನಿಮ್ಮ ವರ್ಗದ ಜನಾಂಗದವರು ಸಮಾನತೆಗಾಗಿ ಇಂದು ಸಂಘರ್ಷಕ್ಕೆ ಸಿದ್ಧರಾಗಿದ್ದಾರೆ. ತಮ್ಮ ಉತ್ಕರ್ಷ-ಸಂಘರ್ಷದಿಂದಲೇ ಸಾಧ್ಯ; ಸಮಾನತೆಯು ಭಿಕ್ಷೆಯಿಂದ ಪಡೆಯುವ ದಾನವಲ್ಲ, ಸಮಾನತೆ ಮಾನವರೆಲ್ಲರ ಹಕ್ಕು. ಆ ಜನ್ಮ ಸಿದ್ಧ ಹಕ್ಕಿಗಾಗಿ ಹೋರಾಟವೇ ಏಕವೇವ ಮಾರ್ಗ ಎಂದು ನಂಬಿ ಸಂಘರ್ಷಕ್ಕೆ ಸನ್ನದ್ಧರಾಗುತ್ತಿದ್ದಾರೆ. ಸಂಘರ್ಷದ ಕಿಡಿ ಜ್ವಾಲಾಮುಖಿಯಾಗಿ ಸಮಾಜವನ್ನು ದಹಿಸುವ ಮುನ್ನ ಜಾಗೃತರಾಗುವುದು ಲೇಸು.

ರಾಜಕೀಯ ಕ್ಷೇತ್ರದಲ್ಲಿ ಸ್ತ್ರೀ-ಸಮಾನತೆಗಾಗಿ ಕಳಕಳಿಯ ಭಾಷಣಗಳು ಕೇಳಿ ಬರುತ್ತಿವೆ. ಸ್ಥಾನ ಹಂಚಿಕೆಯಲ್ಲಿ ೩೩ ಪ್ರತಿಶತ ಸ್ಥಾನಗಳನ್ನು ಕೊಡಲು ಲೋಕಸಭೆಯಲ್ಲಿ ಮಂಡಿಸಲಾಗುವ ವಿಧೇಯಕಕ್ಕೆ ಬೆಂಬಲ ನೀಡಲು ಯಾಕೆ ವಿಳಂಬವಾಗುತ್ತಿದೆ? ರಾಜಕೀಯದಲ್ಲಿ ಸ್ತ್ರೀಸಮಾನತೆಗಾಗಿ ನಡೆದ ಘಟನೆ, ಸಾಮಾಜಿಕವಾಗಿ ನಡೆದ ಸ್ತ್ರೀ ಶೋಷಣೆ ಧಾರ್ಮಿಕ ಕ್ಷೇತ್ರಗಳಲ್ಲಿ ಸ್ತ್ರೀಯರ ಬಗೆಗೆ ಹೊಂದಿರುವ ಅಸಂಗತ ಧೋರಣೆ ಇವೆಲ್ಲವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ಸ್ತ್ರೀಲೋಕ ಸ್ತ್ರೀಯರ ಉತ್ಕರ್ಷಕ್ಕಾಗಿ ನಡೆಸಿರುವ ಚಿಂತನೆ ಸಂಘಟನೆಗಳು ಗಮನಾರ್ಹ ಮತ್ತು ಸ್ವಾಗತಾರ್ಹ. ಸಮಾನತೆಯ ಗುರಿ ತಲುಪಲು ನಡೆಸಿರುವ ಪ್ರಯತ್ನ ಪ್ರಯಾಸ-ಸಾಹಸಗಳು ಅಭಿನಂದನಾರ್ಹ.

ಅಸಮಾನತೆಯು ಯಾವುದೇ ರಂಗದಲ್ಲಿ ಇರಲಿ ಅದು ಖಂಡನೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಗೆ ನೀಡಲಾದ ಸ್ಥಾನಮಾನ , ಸನ್ಮಾನಜನಕ ಸ್ಥಿತಿಯಲ್ಲಿ ಇಲ್ಲ. ಈ ಅಸಮಾನತೆಯು ವಿರುದ್ಧ ಸಿಡಿದೆದ್ದ ಮಹಿಳಾ ಶಕ್ತಿ ಒಂದು ಬೃಹತ್ ಶಕ್ತಿಯಾಗಿ ಹೊರಹೊಮ್ಮಬೇಕು. ಆ ಬೃಹತ್ ಶಕ್ತಿ ೧೨ನೇ ಶತಮಾನದ ಶರಣರ ಜೀವನ ದರ್ಶನ ಹಾಗೂ ವಚನಗಳ ಅಧ್ಯಯನ, ಮನನ-ಚಿಂತನೆಗಳಿಂದ ಪಡೆದುಕೊಳ್ಳಬೇಕು ಶೋಷಣೆಯ ಚಕ್ರವ್ಯೂಹದಲ್ಲಿ ಸಿಲುಕಿರುವ ಸ್ತ್ರೀಯರು ಆ ದುಷ್ಟವ್ಯೂಹವನ್ನು ಭೇದಿಸಿ-ಜಯಿಸಿ-ಸಮಾನತೆಯನ್ನು ಸಾಧಿಸಬೇಕಾದಲ್ಲಿ ಶರಣರ ಸಿದ್ಧಾಂತಗಳಿಂದ ಆತ್ಮಬಲ-ಜಯ ದೊರೆಯುವವರೆಗೆ ಹೋರಾಡುವ ಛಲ, ಹೋರಾಟದಲ್ಲಿ ಸರ್ವಸ್ವವನ್ನೂ ಪಣವಾಗಿಡುವ ಹಂಬಲ ಅವಶ್ಯಬೇಕು. ಈ ಮೂರನ್ನು ಸಂಪಾದಿಸಿಕೊಂಡಾಗಲೇ ಸ್ತ್ರೀಯಲ್ಲಿ ಬೃಹತ್ ಶಕ್ತಿ ಜಾಗೃತಗೊಳ್ಳುವುದು. ಸ್ತ್ರೀಯರಲ್ಲಿ ಬೃಹತ್ ಶಕ್ತಿಯಾಭರಣಕ್ಕಾಗಿ ಶರಣ ಸಿದ್ಧಾಂತಗಳೇ ಅವಶ್ಯ. ಸಮಾನತೆಗಾಗಿ ಸಂಘರ್ಷಕ್ಕಿಳಿದ ಸ್ತ್ರೀಯರು ಬಸವಾದಿ ಶರಣರು ಸಾಧಿಸಿ-ಪ್ರತಿಪಾದಿಸಿದ ಸ್ತ್ರೀ ಸಮಾನತೆಯ ಮೌಲ್ಯಗಳನ್ನು ಆಚರಣೆಗಳನ್ನಾಗಿ ಮಾಡಿಕೊಂಡರೆ ಸ್ತ್ರೀ ಸಮಾನಳಷ್ಟೇ ಅಲ್ಲ, 'ಮಹಾನ್'ಳಾಗಿ ವಿಶ್ವಜೀವನ ನಿತ್ಯ ಚೇತನ ನೀಡುವ ಚೇತನದಾಯಿನಿಯಾಗಬಲ್ಲಳು.

ಸ್ತ್ರೀಯರನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಗಳು ಅನೇಕ. ಅವುಗಳಲ್ಲಿ ಕೆಲವು ಜ್ವಲಂತ-ಹಲವು ಮರಣಾಂತಿಕ. ನಿತ್ಯ ಬದುಕಿನ ಪ್ರತಿಹಂತದಲ್ಲಿ ಮಾನಸಿಕ ತಾಕಲಾಟದಲ್ಲೂ ಮುಳುಗಿರುವ ಮಹಿಳೆಯರು ಅವಹೇಳನಕಾರಿ ಶೋಷಣೆಯಿಂದ ಮುಕ್ತಗೊಳ್ಳಲು ನಡೆಸಿರುವ ಅಭಿಯಾನಗಳು ಸ್ತ್ರೀ ಜೀವನದ ಉಳಿವಿಗೆ ಅಗತ್ಯ. ಸ್ತ್ರೀ ಸಮಾನತೆಗಾಗಿ ಸ್ತ್ರೀಯರು ಹೊಂದಿರುವ ಸಂಕಲ್ಪ ಸತ್ಯವಾಗಿದೆ. ನ್ಯಾಯ ಸಮ್ಮತವಾಗಿದೆ. ಶತಮಾನಗಳಿಂದ ಸ್ತ್ರೀಶೋಷಣೆಗೆ ಗುರಿಯಾದ ಸ್ತ್ರೀ ಮಾನವ ಕುಲದ ಶೋಷಣೆಗಾಗಿ ಹರಿಸಿದ ನೆತ್ತರ-ಸುರಿಸಿದ ಬೆವರು ಅಪಾರ. ಇದನ್ನರಿತೂ ಅರಿಯದವರ ಪರಿಯಲ್ಲಿ ನಡೆದಿರುವ ಪುರುಷ ವರ್ಗ ಸ್ತ್ರೀ ಸಮಾನತೆ ನೀಡುವಲ್ಲಿ ಯಾಕೆ ನಿರ್ದಯರಾಗಿದ್ದಾರೆಂಬುದನ್ನು ಸ್ತ್ರೀಯರು ಇಂದು ಚೆನ್ನಾಗಿ ಅರಿತವರಾಗಿದ್ದಾರೆ. ಆದ್ದರಿಂದಲೇ ಪುರುಷರಿಗೆ ಸರಿ ಸಮಾನವಾಗಿ ನಾವು ಸರ್ವರಂಗದಲ್ಲಿ ಸ್ಪರ್ಧಿಸಬಲ್ಲೆವು ಎಂಬುದನ್ನು ತಿಳಿಸಲೆಂದೇ ಸ್ತ್ರೀಯರು ಸಮಾನತೆಗಾಗಿ ಆಂದೋಲನ ಸಾರಿದ್ದಾರೆ. ಸ್ತ್ರೀಯ ಸಹನೆಯ ಮೇಲೆ ಪೋಷಣೆ ಹೊಂದುತ್ತಿರುವ ಕುಟುಂಬ-ಸಮಾಜ ಸ್ತ್ರೀಯ ಸಹನೆಯನ್ನು ಅಧಿಕ ಪರೀಕ್ಷಿಸುವ ಗೋಜಿಗೆ ಹೋದರೆ ವಿಪರೀತ ಸಾಮಾಜಿಕ ವೈಷಮ್ಯಗಳು ಬೆಳೆಯಬಹುದು.

ವೈಚಾರಿಕವಾಗಿ ಬಹು ಎತ್ತರದಲ್ಲಿದ್ದೇವೆ ಎಂದು ಜಂಬ ಕೊಚ್ಚಿಕೊಳ್ಳುವ ನಾವು ಹೃದಯ ಶೂನ್ಯರಾಗಿದ್ದೇವೆ. ನಿರ್ದಯರಾಗಿದ್ದೆವೆ. ಅಮಾನುಷ ಕಾರ್ಯದಲ್ಲಿ ತೊಡಗಿ ಮನುಷ್ಯತ್ವವನ್ನು ಮರೆತಿದ್ದೇವೆ. 'ವರದಕ್ಷಿಣೆ ತರಲಿಲ್ಲವೆಂದು ಸೊಸೆಯ ದಹನ ಮಾಡಿದ ಅತ್ತೆ ಮಾವಂದಿರು-ಗಂಡ ಪೋಲಿಸರ ವಶದಲ್ಲಿ' ಎಂಬ ಶೀರ್ಷಿಕೆಯ ಸಮಾಚಾರಗಳನ್ನೂ ದಿನಪತ್ರಿಕೆಗಳಲ್ಲಿ ಓದಿದಾಗ ನಮ್ಮ ವೈಚಾರಿಕತೆ ಕೇವಲ ಸೋಗಲಾಡಿತನವನ್ನು ಮಾತ್ರ ಸೂಚಿಸಲಾರದೆ? ಹೃದಯಶೂನ್ಯರಾದವರ

ಬುದ್ಧಿವಂತಿಕೆ ತಿರಸ್ಕಾರಕ್ಕೆ ಯೋಗ್ಯವೇ ವಿನಹ: ಸ್ವೀಕಾರಕ್ಕಲ್ಲ ಎಂಬುದನ್ನು ಹೇಳದೆ ಗತ್ಯಂತರವಿಲ್ಲ. ವಿಪ್ರ ಕುಲದಲ್ಲಿ ಜನಿಸಿದ ಸ್ತ್ರೀಗೆ ಧಾರ್ಮಿಕ ಸಂಸ್ಕಾರಗಳು ಯಾಕೆ ದೊರೆಯುತ್ತಿಲ್ಲ? ಧಾರ್ಮಿಕವಾಗಿ ಹೆಣ್ಣನ್ನೂ ಬಹಿಷ್ಕೃತಳನ್ನಾಗಿ ಮಾಡಿರುವ ಧೂರ್ತತನವನ್ನು ಇಂದು ಎಲ್ಲರೂ ಖಂಡಿಸುತ್ತಾರೆ ಯಾಕೆ ಎಂಬುದರ ಬಗ್ಗೆ ಚಿಂತನೆ ನಡೆಯಬಹುದೆ?

ಬಸವಣ್ಣನವರ ಆಗಮನದ ಪೂರ್ವದಲ್ಲಿ ಸಾಮಾಜಿಕ ಸ್ಥಿತಿಗತಿಗಳ ಅವಲೋಕನ ಮಾಡಿದರೆ, ಸ್ತ್ರೀ ಮತ್ತು ಶೂದ್ರರ ಬಾಳು ಕಣ್ಣೀರಿನ ಕಡಲಾಗಿತ್ತು. ಕೂಳನ್ನು ಕಣ್ಣೀರಿನಲ್ಲಿ ಬೆರೆಸಿ ತಿನ್ನುವ ಸ್ಥಿತಿ ನಿತ್ಯ ಗೋಚರವಾಗುತ್ತಿತ್ತು. ೧೨ನೇ ಶತಮಾನದಲ್ಲಿ ಪಂಡಿತರು, ಪುರೋಹಿತರು, ವೇದ ವಿದ್ವಾಂಸರು ಹೆಣ್ಣನ್ನು ಮಾಯೆಯೆಂಬುದನ್ನು ಶಾಸ್ತ್ರಾಧಾರ ಸಹಿತ ಸಿದ್ಧಮಾಡಲು ಇಲ್ಲದ ವಾದವನ್ನು, ಸಲ್ಲದ ಸಿದ್ಧಾಂತಗಳನ್ನೂ ಮಂಡಿಸಿ ಎಲ್ಲವನ್ನು ರಾದ್ಧಾಂತಗೊಳಿಸಿ ತಾವು ಸುಖದಲ್ಲಿದ್ದರು.

ಮೈತ್ರಾಯಣಿ ಸಂಹಿತೆಯ ಪ್ರಕಾರ ಮೂರು ಕೆಟ್ಟ ವಸ್ತುಗಳಿವೆ. ಜೂಜು, ಸೆರೆ, ಹೆಣ್ಣು, ಇದು ಸಂಹಿತಾ ಪ್ರಿಯ ವಿದ್ವಾಂಸರ ಪ್ರತಿಪಾದನೆ. ಹೆಣ್ಣಿನಲ್ಲಿ ಸತ್ವವನ್ನು ಶೋಧಿಸುವದು ಮೂರ್ಖತನ ಎಂದು ಕಥನ ಸಂಹಿತೆಯಲ್ಲಿ ಹೇಳಲಾಗಿದೆ ಎಂದು ರಾದ್ಧಾಂತಪ್ರಿಯ ಪಂಡಿತನ ಅಭಿಪ್ರಾಯ. ಅತೀ ದುಷ್ಟ ಪುರುಷನಕ್ಕಿಂತಲೂ ಒಳ್ಳೆಯ ಸ್ತ್ರೀ ಕನಿಷ್ಠಳು ಇದು ತೈತ್ತರೇಯ ಸಂಹಿತೆಯ ಸಿದ್ಧಾಂತವಾಗಿದೆ ಎಂದು ಕಟ್ಟ ಪುರುಷವಾದಿ ವಿದ್ವಾನನ ಕಥನ.

ಅಂತೆಯೇ ನಮ್ಮ ಹಿರಿಯರು ಹೆಣ್ಣಿಗೆ, ಅವಳ ಗುಣಕ್ಕೆ ತಕ್ಕ ಸ್ಥಾನ ನೀಡಿದ್ದಾರೆ. ಸ್ತ್ರೀ ಎಂದಿಗೂ ಪುರುಷನಿಗೆ ಸಮಾನಳಾಗಿ ನಿಲ್ಲಲಾರಳು ಎಂದು ಧೂರ್ತ ಧರ್ಮಾಧಿಕಾರಿ ನುಡಿದ. ಈ ಎಲ್ಲ ಕಾರಣದಿಂದಲೇ ಸ್ತ್ರೀಯರಿಗೆ ಉಪನಯನವನ್ನು ನಿರಾಕರಿಸಿದ್ದು ಯೋಗ್ಯವೇ? ಲಗ್ನ ಮಾಡಿಕೊಂಡು ಬದುಕುವುದೇ ಸ್ತ್ರೀಯರಿಗೆ ಉಪನಯನ ಪತಿ ಸೇವೆಯೇ ಗುರು ಗೃಹವಾಸ. ಗೃಹ ಕಾರ್ಯವೇ ಅಗ್ನೀ ಪರಿಕ್ರಿಯೆ. ಎಂದು ಮಹರ್ಷಿ ಮನು ಹೇಳಿಲ್ಲವೆ? ಅದು ಕಾರಣ ಸ್ತ್ರೀಗೆ ವಿವಾಹವೇ ಉಪನಯನ ಬೇರೆ, ಓದು-ಅಧ್ಯಯನ-ಜ್ಞಾನ ಜಪ-ತಪ ಹೋಮ-ಹವನ ಆರಾಧನೆ ಮಾಡಕೂಡದು. ಪತಿ ಸೇವೆಯ ಮೂಲಕವೇ ಸ್ತ್ರೀ ಈ ಸರ್ವ ಫಲಗಳನ್ನು ಪಡೆದುಕೊಳ್ಳಬೇಕು. ಸ್ತ್ರೀಗೆ ಪತಿಸೇವೆಯೇ ಸರ್ವಸ್ವ ಎಂದು ಬೋಧಿಸುತ್ತ, ಸ್ತ್ರೀಯನ್ನು ಪುರುಷನ ದಾಸಿಯನ್ನಾಗಿ ಮಾಡುವುದರಲ್ಲಿಯೆ ಈ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿದ ಪಂಡಿತರ ಧೂರ್ತತನವನ್ನು ಮಾನವೀಯ ಅಂತಃಕರಣವುಳ್ಳವರು ಎಂದಿಗೂ ಒಪ್ಪುವದಿಲ್ಲ, ಬೆಂಬಲಿಸುವುದಿಲ್ಲ.

ಇಂದು ಶುಷ್ಕ ಶಾಸ್ತ್ರಾರ್ಥಗಳನ್ನು ಬಸವಣ್ಣ ತನ್ನ ಮನೆಯಲ್ಲಿಯೇ ನೋಡಿದ. ಬಸವಣ್ಣನವರ ತಂದೆ ಅಗ್ರೇಸರರಾದ ಪ್ರಯುಕ್ತ ಅವರ ಮನೆಯು ಶಾಸ್ತ್ರಾರ್ಥ ಮಂಥನದ ಕೇಂದ್ರವಾಗಿತ್ತು. ಅನುದಿನ ತಥ್ಯವಿಲ್ಲದ ಶುಷ್ಕ ಚರ್ಚೆ ಕೇಳುತ್ತಿದ್ದ ಬಾಲಕ ಬಸವ ಒಂದು ದಿನ ಸಿಡಿದೆದ್ದು ಚರ್ಚಾಕೂಟದಲ್ಲಿ ಬಾಗಿಯಾದ ಪಂಡಿತರ ವಾದಕ್ಕೆ ಅವರೆಲ್ಲರೂ ತತ್ತರಿಸುವ ಹಾಗೆ ಪ್ರಶ್ನೆಹಾಕಿದ. 'ಓ ಮಹಾನ್ ಪಂಡಿತರೆ, ತಾವೆಲ್ಲ ಧರ್ಮಸೂತ್ರಗಳನ್ನು ಬ್ರಾಹ್ಮಣಗಳನ್ನು ಆಧಾರವಾಗಿರಿಸಿಕೊಂಡು

ಚರ್ಚಿಸುತ್ತಿರಲ್ಲವೇ? ಉಪನಿಷತ್ ಕಾಲದಲ್ಲಿ ಸ್ತ್ರೀಯರಿಗೆ ಇದ್ದ ಧಾರ್ಮಿಕ ಸ್ವಾತಂತ್ರ್ಯವನ್ನು ಇಂದು ನೀವೇಕೆ ಕಸಿದುಕೊಂಡಿರುವಿರಿ? ಯಜ್ಞ-ಯಾಗಾದಿಗಳನ್ನು ಜರುಗಿಸುವ ಹಕ್ಕನ್ನು ಅಪಹರಿಸಿದವರು ಯಾರು? ಅಪಲಾ, ವಿಶ್ವವಾರಾ, ಇಂದ್ರಾಣಿ ಇವರೆಲ್ಲರೂ ಯಂತ್ರರಚನಕಾರರು ಎಂಬುದನ್ನು ಮರೆತಿರಾ? ಲೋಪಮುದ್ರಾ, ವಿಶ್ವವಾರಾ, ಘೋಷಾ ಇವರಿಗೆ ಬ್ರಹ್ಮವಾದಿನಿಯರೆಂಬ ಗೌರವ ಪ್ರಾಪ್ತವಾಗಿರಲಿಲ್ಲವೆ? ಅಕೃಷ್ಣ ಭಾಷಾ, ಉತ್ತರ, ಸಿಕತನಿನಿವಾವರಿ ಗೌಪ್ಯಾಯನ ಇವರನ್ನೂ ಋಷಿಕಾ ಎಂದೇ ಗೌರವಿಸಿದ ಸಾಮವೇದವನ್ನು ನೆನಪಿಸಿಕೊಳ್ಳಿ. ವಿಷಯ ಹೀಗಿರುವಾಗ ನೀವೇಕೆ ಸ್ತ್ರೀಯರ ಧಾರ್ಮಿಕ ಸಂಸ್ಕಾರಗಳ ಮೇಲೆ ನಿಷೇಧ ವಿಧಿಸುವಿರಿ? ಈ ನಿಷೇಧವನ್ನು ಸಮ್ಮತಿಸಿ ಬೆಂಬಲಿಸುವ ಧರ್ಮಗ್ರಂಥ ಇದೆಯೇ? ಸ್ತ್ರೀಯರು ಯಾವ ಪಾಪ ಮಾಡಿರುವರೆಂದು ಈ ಬಗೆಯ ಕಠೋರತನವನ್ನು ಹೊಂದಿರುವಿರಿ.

ಬಸವಣ್ಣನವರು ವೇದ ಪ್ರಮಾಣದೊಂದಿಗೆ ಮಂಡಿಸಿದ ದಿಟ್ಟತನದ ಪ್ರಶ್ನಾವಳಿಗೆ ಉತ್ತರಿಸದ ಪಂಡಿತರ ಸಮೂಹ ತತ್ತರಿಸಿತು. ಸಭೆಯ ಮೌನವನ್ನು ಮುರಿದು ಬಸವಣ್ಣ ಪ್ರಶ್ನಿಸಿದ; ಅಕ್ಕ ನಾಗಮ್ಮನಿಗೆ ಯಾಕೆ ಉಪನಯನ ಸಂಸ್ಕಾರವಿಲ್ಲ? ನನಗೆ ಉಪನಯನ ಸಂಸ್ಕಾರ ನೀಡಿದ ನೀವು ನನ್ನ ಒಡಹುಟ್ಟಿದ ಸಹೋದರಿಗೆ ಯಾಕೆ ಉಪನಯನ ಸಂಸ್ಕಾರ ನೀಡಲು ಸಿದ್ಧರಿಲ್ಲ? ಎಂದು ಹಾಕಿದ ಸವಾಲು ಪಂಡಿತರ ರೋಷವನ್ನು ಕೆರಳಿಸಿತು. ಬ್ರಾಹ್ಮಣ್ಯವನ್ನೇ ತಿರಸ್ಕರಿಸುವ ಈ ಬಾಲಕನಿಗೆ ಯಾಕೆ ಜನಿವಾರದ ಹಂಗು. ಇಗೋ ತಗೆದುಕೊಳ್ಳಿ ನೀವು ಕೊಟ್ಟ ನಿಮ್ಮ ಜನಿವಾರ ಎಂದು ಧೀರ ಬಾಲಕ ಬಸವ ಜನಿವಾರಕ್ಕೆ ಕೈಹಾಕಿ ಹರಿದೊಗೆದು ಈ ಪಕ್ಷಪಾತದ ಈ ಅಗ್ರಹಾರವನ್ನೇ ತೊರೆದು ಹೊರಟೆ ಎಂದು ಧೀರ ಹೆಜ್ಜೆಗಳನ್ನು ಹಾಕುತ್ತಾ ಸಂಗಮದತ್ತ ನಡೆದ. ಅಕ್ಕ ನಾಗಮ್ಮ ಬಸವಣ್ಣನವರೊಂದಿಗೆ ಹೊರಟಳು. ಮುಂದೆ ಬಸವಣ್ಣನವರಿಗೆ ತಾಯಿಯಂತೆ ಆಸರೆ ನೀಡಿ ಬೆಳೆಸಿದಳು.

ಈ ರೋಚಕ ಹಾಗೂ ಬೊಧಕ ಪ್ರಸಂಗವನ್ನು ಶರಣ ಸಾಹಿತಿ ಚಂದ್ರಶೇಖರ ವಸ್ತ್ರದ ಅವರು 'ಮಾನವತಾವಾದಿ ಬಸವಣ್ಣನವರು' ಎಂಬ ಪುಸ್ತಕದಲ್ಲಿ ಮನಮುಟ್ಟುವ ಹಾಗೆ ಚಿತ್ರಿಸಿದ್ದಾರೆ. ಬಸವಣ್ಣನವರು ಬಾಲಕನಾಗಿರುವಾಗಲೇ ಎಲ್ಲರಿಗೂ ಬದುಕಲು ಸಮಾನ ಅವಕಾಶಗಳಿರಬೇಕೆಂಬ ವಿಚಾರ ಹೊಂದಿದ್ದರು.

ಬಾಲ್ಯವಯದಲ್ಲಿ ವಯಸ್ಸಿಗೂ ಮೀರಿದ ಮಾನವೀಯ ಚಿಂತನೆಗಳನ್ನು ಹೊಂದಿದ ಬಸವಣ್ಣನವರು ಅಗ್ರಹಾರದಲ್ಲಿದ್ದೂ ಸ್ತ್ರೀ-ಶೂದ್ರಾದಿಗಳಿಗೆ ಸಮಾನತೆಯನ್ನು ಒದಗಿಸುವುದು ಸಾಧ್ಯವಿಲ್ಲ. ತುಳಿಯುವ ಸಾಂಸ್ಕೃತಿಕ ಪರಿಸರದ ಅಗ್ರಹಾರವನ್ನು ತ್ಯಜಿಸಿ, ಸ್ತ್ರೀಯರ, ದಲಿತ ಬಂಧುಗಳ ಸಮಾನಸ್ಕಂದರಾಗಿ ಸಮಾಜದಲ್ಲಿ ಸಹಜೀವನ ನಡೆಸಲು ಸಾಧ್ಯವಾಗಲೆಂಬ ಆಶಯದಿಂದ ಲಿಂಗಧಾರಣೆ ಮೂಲಕ ಸಮಾನತೆಯನ್ನು ಸಾಧಿಸುವ ನೂತನ-ಸ್ವತಂತ್ರ ಧರ್ಮ ಸ್ಥಾಪಿಸಿದರು. ಆ ಹೊಸ ಧರ್ಮದ ಹೆಸರು ಪ್ರಜಾಧರ್ಮ. ತಾರತಮ್ಯಕ್ಕೆ ತಿಲಮಾತ್ರ ಅವಕಾಶವಿಲ್ಲದ ಪ್ರಜಾಧರ್ಮದಲ್ಲಿ ಸರ್ವರಿಗೂ ಸಮಾನರಾಗಿ

ಬಾಳುವ ಅವಕಾಶವಿದೆ. ಲಿಂಗಾಯತ ಧರ್ಮ ನಿಜ ಅರ್ಥದಲ್ಲಿ ಪ್ರಜಾಧರ್ಮವಾಗಿರುವುದರಿಂದ ಲಿಂಗಾಯತರು ಸರ್ವರಿಗೂ ಸಮಾನರಾಗಿ ಬಾಳಲು ಬದುಕಲು ಮುಕ್ತ ಅವಕಾಶ ನೀಡುವ ಆಂದೋಲನದಲ್ಲಿ ಅಗ್ರಪಾತ್ರ ನಿರ್ವಹಿಸಲು ಮುಂದಾಗಬೇಕು. ಸ್ತ್ರೀಯರಿಗೆ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಸಮಾನತೆಯನ್ನೂ ಒದಗಿಸಲೆಂದು ಬಾಲ್ಯ ಜೀವನದಲ್ಲಿಯೇ ತಾಯಿ-ತಂದೆಯರ ವಾತ್ಸಲ್ಯವನ್ನು ಸಹ ಧಿಕ್ಕರಿಸಿ, ಸುಖದ ಸದನವನ್ನು ತೊರೆದು ಹೊರಟ ಬಸವಣ್ಣನವರ ಮಾನವೀಯ ಚಿಂತನೆ ಅನುಕರಣೀಯ ಸಮಾನತೆಗಾಗಿ ಸಜ್ಜುಗೊಂಡಿರುವ ಸ್ತ್ರೀ ಸಮಾಜ ಬಸವಣ್ಣನವರನ್ನು ಮೊದಲು ಮನಸಾ ಸ್ಮರಿಸಿ, ಮನಸಾ ವಂದಿಸಿ, ಬಸವಾದಿ ಶರಣರ ವಚನಗಳ ಆಶಯಗಳನ್ನು ಅಮೂಲಾಗ್ರವಾಗಿ ಚಿಂತನ ಮಾಡಿ ಸ್ತ್ರೀ ಸಮಾನತೆಯ ಸಾಧನೆಗಾಗಿ ಅಡಿಯನ್ನು ಮುಂದಿರಿಸಿದರೆ ಜಯ ಖಂಡಿತ-ವಿಜಯ ಸುಲಭ ಸಾಧ್ಯ. ವಿಶ್ವ ಮಹಿಳಾ ಚೇತನರೂಪಿ ಸಮಾನತೆಯನ್ನು ಒದಗಿಸಿದ ಮಹಾ ಮಾನತಾವಾದಿ ಬಸವಣ್ಣನವರು ಪ್ರ-ಪ್ರಥಮರು, ಸಮಾನತೆ ನೀಡುವುದರಲ್ಲಿಯೇ ಅಗ್ರಜರು. ಇದು ಐತಿಹಾಸಿಕ ಸತ್ಯ.

'ಸರ್ವ ಸಮಾನತೆಯ ಆಧಾರದ ಮೇಲೆ ನಿಂತ ಸಾಮಾಜಿಕ ನ್ಯಾಯ' ಇದು ವಚನಕಾರರ ಯೋಗದಾನ. ವಚನಕಾರರ ಮೌಲ್ಯ ವಿವೇಚನೆಗೆ ಆಧಾರವಾಗಿದೆ. ಸಾಮಾಜಿಕ ನ್ಯಾಯ, ಅನ್ಯಾಯಕ್ಕೆ ಗುರಿಯಾದ ಜನರಿಗೆ ಬದುಕುವ ಹಕ್ಕನ್ನು ಪಡೆಯಲು ಕೇಳುವ ಸಾರ್ಥಕ ಪದಪುಂಜವು ಆಗಿದೆ. ಸಾಮಾಜಿಕ ನ್ಯಾಯ ದೊರಕಬೇಕಾದರೆ ಪುರಷರಿಗಿರುವಷ್ಟೇ ಹಕ್ಕುಗಳು ಸ್ತ್ರೀಯರಿಗೂ ದೊರೆಯಬೇಕು. ಮೇಲ್‌ವರ್ಗದ ಜನರಿಗೆ ದೊರೆಯುವ ಸೌಲಭ್ಯಗಳು ನಿಮ್ನ ವರ್ಗದ ಜನರಿಗೂ ದೊರೆಯಬೇಕು. ಅಸಮಾನತೆಯ ಕಾರಣದಿಂದ ಸಾಮಾಜಿಕ ಚಳುವಳಿಗಳು ಉದ್ಭವಿಸುವವು. ಚಳುವಳಿಯ ಯಶ ಸಮಾಜ ನೀಡುವ ಸಹಕಾರದ ಮೇಲೆ ಅವಲಂಬಿಸಿದೆ. ಉಳ್ಳವರು-ಬಡವರು, ಮೇಲುವರ್ಗ-ಕೆಳವರ್ಗ. ಸ್ತ್ರೀ-ಪುರುಷರೆಂಬ ಭೇದಭಾವ ಜೀವಂತವಾಗಿರುವ ಸಮಾಜ ಜೀವನದಲ್ಲಿ ತುಳಿಯುವ ಪ್ರಬಲರು, ತುಳಿತಕ್ಕೊಳಗಾಗುವ ದುರ್ಬಲರು ಒಂದೇ ಸಮಾಜದಲ್ಲಿ ಬದುಕಬೇಕಾಗುವುದು. ಹೀಗಿರುವಾಗ ತಾರತಮ್ಯ ಭಾವಗಳ-ಆಚರಣೆಗಳ ನಿರ್ಮೂಲನೆಯಾಗಬೇಕಲ್ಲವೆ? ಸಮಾಜದಲ್ಲಿ ಬದುಕುವ ವ್ಯಕ್ತಿ ಇತರರ ಬದುಕಿಗೆ ಆತಂಕಕಾರಿಯಾಗಬಾರದೆಂಬ ಪ್ರಜ್ಞೆ ಬೆಳೆಯಬೇಕು. ಜ್ಞಾನದ ಬಲದಿಂದ ಶರಣರು ವ್ಯಕ್ತಿಯ ಮನಸ್ಸನ್ನು ಹಸುನಗೊಳಿಸಿ ಮನೋವೈಶಾಲ್ಯತೆಯನ್ನು ಬೆಳೆಸಿದರು. ದಲಿತರೆ ಆಗಲಿ-ಸ್ತ್ರೀಯರೆ ಆಗಲಿ ತಾವು ಕೀಳು ಎಂಬ ಮನೋಭಾವನೆಯನ್ನು ತ್ಯಜಿಸಬೇಕು. ವಚನಕಾರರ ವಚನಕ್ರಾಂತಿ ಮನವನ್ನು ಉದಾತ್ತೀಕರಿಸುವ ಮಹಾಕಾರ್ಯ ಸಾಧಿಸಿತು. ೧೨ನೇ ಶತಮಾನದ ಸಾಮಾಜಿಕ ಪರಿಸ್ಥಿತಿ ಜನಮನ ಪರಿವರ್ತನೆಗೆ ಪ್ರತಿಕೂಲವಾಗಿತ್ತು. ಧರ್ಮ ಅಗ್ರಜರ ಪಾಲಿಗೆ ಕಾಮಧೇನು-ಕಲ್ಪವೃಕ್ಷವಾದರೆ-ಹಿಂದುಳಿದ ಜನರಿಗೆ-ಸ್ತ್ರೀಯರಿಗೆ ಬರುಡು ದನ-ಜಾಲಿಮರವಾಗಿತ್ತು. ಉಸಿರು ಕಟ್ಟಿದ ಸಾಮಾಜಿಕ ಪರಿಸರದಿಂದ ಜನರನ್ನೂ ಬಿಡುಗಡೆಗೊಳಿಸಲು ಮಾನವೀಯತೆಯ ಮೂಲ ಮೌಲ್ಯಗಳನ್ನು ಸಜೀವಗೊಳಿಸಿ ಸಾರ್ವತ್ರಿಕವಾಗಿ ಚಲಾವಣೆಯಲ್ಲಿ

ತಂದ ಶ್ರೇಯ ವಚನಕಾರರ ವಚನ ಚಳುವಳಿಗೆ ಸಲ್ಲುವದು. ಸಾಮೂಹಿಕ ಜಾಗೃತಿಗೆ ವಚನಕ್ರಾಂತಿ ಚೈತನ್ಯಶಕ್ತಿಯಾಯಿತು. ಅದೇ ರೀತಿ ಜೀವನದ ಸಮಗ್ರತೆಗೆ ಅನುಪಮ ತತ್ವವೂ ಆಗಿ ಪರಿಣಮಿಸಿತು. ಅಂತ್ಯಜರಿಗೆ ಧಾರ್ಮಿಕ ಸಮಾನತೆಯನ್ನು ನೀಡಿದ ಬಸವಣ್ಣನವರು, ಅವರೆಲ್ಲರೂ ಮಹಾನರಾಗಿ ಬೆಳೆಯಲು ನೀಡಿದ ಸಂಸ್ಕಾರ ಸಾಮಾಜಿಕ ಮನ್ನಣೆಯನ್ನು ದೊರಕಿಸಿಕೊಟ್ಟಿತು. ಹರಭಕ್ತ ಹರಳಯ್ಯ ಕಂಬಳಿನಾಗಿದೇವ, ಮಾದಾರ ಧೂಳಯ್ಯ ಏರಿದ ನಿಲವಿನಲ್ಲಿ ಬಸವಣ್ಣನವರ ಸಾಮಾಜಿಕ ಸಮಾನತೆಯ ಗೆಲವು ಇದೆ. ಅದೇ ರೀತಿ ಕಸಗೂಡಿಸುವ ಸತ್ಯಕ್ಕ, ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಇತ್ಯಾದಿ ಶರಣೆಯರ ಸಾಧನೆ. ಸ್ತ್ರೀ ಸಮಾನತೆ ಶರಣ ತತ್ವದಿಂದಲೇ ಸಾಧ್ಯ ಎಂಬುದನ್ನು ದೃಢೀಕರಿಸಿದ ದಾಖಲೆಗಳಾಗಿವೆ.

ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಬಸವಣ್ಣನವರ ಈ ವಚನೋಕ್ತಿ ಸಮಾಜಿಕ ನ್ಯಾಯ ದೊರಕಿಸಿಕೊಡುವುದು. ಶರಣರ ಅನೇಕ ಚಿಂತನೆಗಳನ್ನು ನಾವು ಅರ್ಥೈಸಿಕೊಂಡರೆ ಸಮಾಜಜೀವಿಯಾದ ಮಾನವ ಅನುಸರಿಸಬೇಕಾದ ಸಾಮಾಜಿಕ ನೀತಿ ಯಾವುದೆಂಬುದು ತಿಳಿಯಬಲ್ಲದು. ಪರರು ತನಗೆ ಏನನ್ನು ಮಾಡಬಾರದೆಂದು ವ್ಯಕ್ತಿಯು ಬಯಸುತ್ತಾನೆಯೋ, ಅದನ್ನು ತಾನು ಇತರರಿಗೆ ಮಾಡಬಾರದು ಎಂಬ ಪ್ರಜ್ಞೆ ಅವನಲ್ಲಿ ಬಂದರೆ ಸಾಮಾಜಿಕ ನ್ಯಾಯ ಎಲ್ಲರಿಗೂ ಸುಲಭವಾಗಿ ಲಭ್ಯ. ಶರಣರ ಈ ನಿಲುವು ಎಲ್ಲ ಸಾಮಾಜಿಕ ನೀತಿಯ ಮೂಲಸೂತ್ರ, ಸದುವಿನಯದ ನಡೆ ನುಡಿ, ನಿರಹಂಕಾರ, ಸರ್ವಸಮತಾಭಾವ, ನೆರೆಹೊರೆಯವರ ಕಷ್ಟದಲ್ಲಿ ಅನುಕಂಪ ಈ ನೈತಿಕ ನಿಯಮಗಳು ಮಾನವೀಯ ಸಂಸ್ಕೃತಿಯನ್ನು ಸಾರುತ್ತವೆ. ಈ ನೈತಿಕ ನಿಯಮಗಳ ಪಾಲನೆಯಿಂದಲೇ ಯಾರಿಗೂ, ಯಾರಿಂದಲೂ ಅನ್ಯಾಯವಾಗಲಾರದು. ಸಮಾಜಿಕವಾಗಿ ಎಲ್ಲರೂ ಮುಕ್ತಾನಂದದಿಂದ ಜೀವಿಸಬಲ್ಲರು, ಶರಣರು ಈ ನೀತಿ ಸೂತ್ರಗಳಿಂದ ಕಟ್ಟಿದ ಸಮಾಜದಲ್ಲಿ ಸರ್ವರಿಗೂ ಜೀವಿಸುವ ಹಕ್ಕನ್ನು ನೀಡಿದರು.

ಸದುವಿನಯದ ನಡೆ ನುಡಿ–ಸರ್ವ ಸಮತಾಭಾವಗಳ ಅಭಾವದಿಂದಲೇ ಇಂದಿನ ಸಾಮಾಜಿಕ ಮತ್ತು ರಾಷ್ಟ್ರೀಯ ಜೀವನದಲ್ಲಿ ಅನ್ಯಾಯಕ್ಕೊಳಗಾದವರು, ಸಾಮಾಜಿಕ ನ್ಯಾಯಕ್ಕಾಗಿ ಸಂಘರ್ಷಕ್ಕಿಳಿಯಬೇಕಾಗಿದೆ. ಸ್ತ್ರೀ ಶೋಷಣೆಯ ಮುಖ ಜ್ವಾಲಾಮುಖಿಯಂತೆ ಪ್ರಖರಗೊಂಡಿರುವುದರಿಂದ ಇಂದು ಸ್ತ್ರೀ ಸಮಾನತೆಗಾಗಿ ಹೋರಾಟಕ್ಕೆ ಸಿದ್ಧಳಾಗುತ್ತಿದ್ದಾಳೆ. ಸ್ತ್ರೀ ಎಂದರೆ ದುಡಿಯುವ ಎತ್ತಲ್ಲ. ಸಂಸಾರದ ಭಾರ ಹೊರುವ ಕತ್ತೆಯಲ್ಲ, ಕಣ್ಣೀರನ್ನು ಸುರಿಸುತ್ತಾ ಅಳುವನ್ನು ನುಂಗುವುದೇ ಅವಳ ಹಣೇಬರಹವಲ್ಲ ಎಂಬ ಮಾನವೀಯ ವಿಚಾರ ಕುಟುಂಬದ ಸದಸ್ಯರಲ್ಲಿ, ಸಮಾಜದಲ್ಲಿ ಬರಬೇಕು ಅಂದಾಗ ಅವಳ ಬದುಕಿನಲ್ಲಿ ನೆಮ್ಮದಿಯ ನೈದಿಲೆ ಅರಳಬಲ್ಲದು.

ಸ್ತ್ರೀ ಸಮಾನತೆ ಒಂದು ರೀತಿಯಿಂದಲ್ಲ ಅನೇಕ ವಿಧದಿಂದ ಬದುಕುವ ಹಕ್ಕು. ಹಾಯಾಗಿ ಬದುಕುವ ಹಕ್ಕು. ಆ ಹಕ್ಕನ್ನು ಪುರುಷವರ್ಗ ತಮ್ಮ ಸುಖಜೀವನಕ್ಕಾಗಿ ಕಸಿದುಕೊಳ್ಳುತ್ತಿರುವುದನ್ನು ತಪ್ಪಿಸಲು, ಆ ಹಕ್ಕನ್ನು ಪಡೆದು ಸಮಾನಸ್ಕಂದಳಾಗಿ ಬಾಳುವುದಕ್ಕಾಗಿಯೇ ಇಂದು ಸ್ತ್ರೀ ಸಂಘಟನೆಗಳು

ಸಮರ ಸಾರಿವೆ. ಸ್ತ್ರೀ ಕ್ಷೇಮಾಭಿವೃದ್ಧಿಯನ್ನು ಹಾರ್ದಿಕವಾಗಿ ಬಯಸುವವರು ಸಂಘಟನೆಗಳು ಸ್ತ್ರೀಸಮಾನತೆಯ ಆಂದೋಲನಕ್ಕೆ ಬೆಂಬಲಿಸಿ ಸಹಕರಿಸುವುದು ಒಂದು ರೀತಿಯಲ್ಲಿ ಸಾಮಾಜಿಕ ನ್ಯಾಯ ಒದಗಿಸಿದಂತೆ.

ಆಧ್ಯಾತ್ಮಿಕ ಚಿಂತನೆಗಳನ್ನು ಸಮಾಜದ ಆಚರಣೆಗಳನ್ನಾಗಿ ಮಾಡಿದ ಶರಣರು ಸ್ತ್ರೀಯರನ್ನು ನೋಡಿದ ಬಗೆ ಉದಾತ್ತ. ಹೆಣ್ಣು ಮಾಯೆಯಾಗಿ ಕಾಣಲಿಲ್ಲ. ಮನದ ಮುಂದಣ ಆಶೆಯೆ ಮಾಯೆ. ಇದು ಪ್ರಭುದೇವರ ವಚನೋಕ್ತಿ. ಮನದ ಮುಂದಣ ಆಶೆಯೇ ಮಾಯೆ. ಮನದ ಮುಂದಿನ ಆಶೆಯನ್ನು ಹರಿದು ನೋಡಿದಾಗ ಸ್ತ್ರೀ ಭೋಗದ ವಸ್ತುವೂ ಅಲ್ಲ, ತಿರಸ್ಕಾರಕ್ಕೆ ಪಾತ್ರಳೂ ಅಲ್ಲ. ಜೀವನದ ಸರ್ವರಂಗಗಳಲ್ಲಿ ಸಮಾನಳಾಗಿ ನಿಂತು ಸಮಾನಸ್ಕಂದಳಾಗಿ ಜೀವನದ ಗುರಿ ತಲುಪಿಸುವಲ್ಲಿ ಸಹಭಾಗಿಣಿಯಾಗಬಲ್ಲಳು. ವಚನಕಾರರು ಸ್ತ್ರೀಯನ್ನು ಕಂಡ ಬಗೆ ಉದಾತ್ತ. ಅವಳೊಂದಿಗೆ ನಡೆದುಕೊಂಡ ವಿಧಾನ ಪವಿತ್ರ. ಅಂದ ಬಳಿಕ ಸ್ತ್ರೀಯರಿಗೆ ೧೨ನೇ ಶತಮಾನದಲ್ಲಿ ಸಮಾನ ಸ್ಥಾನಮಾನ ಎಲ್ಲ ಕ್ಷೇತ್ರಗಳಲ್ಲಿಸಹಜವಾಗಿ ಪ್ರಾಪ್ತವಾಗಿದ್ದವು. ಸಾಮಾಜಿಕ ನ್ಯಾಯಕ್ಕಾಗಿ ಅವರು ಹೋರಾಡುವ ಪ್ರಸಂಗ ಬರಲಿಲ್ಲ. ಬಸವಾದಿ ಶರಣ ಚಿಂತನೆ, ಆಚರಣೆಯಿಂದ ದೂರಸರಿದ ಇಂದಿನ ಜನ ಅನ್ಯಾಯಕ್ಕೆ ಗುರಿಯಾದಾಗ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟಕ್ಕಿಳಿಯಬೇಕಾಗಿದೆ. ಅದೇ ರೀತಿ ಅನ್ಯಾಯ ಎದುರಿಸಿ ಜೈಯಿಸಲು ಸ್ತ್ರೀ ಸಮಾನತೆಗಾಗಿ ಅಂದೋಲನ ಮಾಡುವುದು ಅನಿವಾರ್ಯವಾಗಿದೆ.

ಸ್ತ್ರೀ ಪುರುಷರಿಬ್ಬರೂ ಸಾಮಾಜಿಕ ಜೀವನದ ಗತಿಗೆ ಅವಶ್ಯ. ಇವರಲ್ಲಿ ಮೇಲು-ಕೀಳು ಎಂಬ ಭೇದ ಸಲ್ಲದು. ಮುಕ್ತ ಸಮಾಜದ ನಿರ್ಮಿತಿಗೆ ಇಬ್ಬರೂ ಸಮಾನ ಮನದವರಾಗಿ ದುಡಿಯಬೇಕು. ಆಗ ಸರ್ವ ಸಮಾನತೆಯ ಸುಂದರ ಸಮಾಜ ನಿರ್ಮಾಣಗೊಂಡು ಸರ್ವರ ಕಲ್ಯಾಣ ಸುಸಾಧ್ಯವಾಗಬಲ್ಲದು. ಸ್ತ್ರೀಯರನ್ನು ಸಮಾನವಾಗಿ ಕಾಣುವದರಿಂದ ನಾನಾ ಬಗೆಯ ಕೌಟುಂಬಿಕ-ಸಾಮಾಜಿಕ ಸಹಜವಾಗಿಯೇ ಸಮಸ್ಯೆಗಳು ಪರಿಹಾರ ಕಾಣುವವು. ಸಂಭವನೀಯ ಅನಾಹುತಗಳು ಜರುಗಲಾರವು. ಈ ತಥ್ಯವನ್ನರಿತ ವಚನಕಾರರು ಸ್ತ್ರೀಯರನ್ನು ಗೌರವಭಾವದಿಂಧ ಕಂಡರು. ಸಹೃದಯಿಗಳಾಗಿ ಆದರಿಸಿದರು. ಜಗದಲ್ಲಿ ಸ್ತ್ರೀ ಸಮಾನತೆಗಾಗಿ ಅನೇಕ ಚಿಂತನೆಗಳು ನಡೆದಿವೆ. ವಚನಕಾರರ ಚಿಂತನೆಯಲ್ಲಿ ಇರುವ ದಿವ್ಯತೆ ಮಾತ್ರ ಇತರರ ಚಿಂತನೆಗಳಲ್ಲಿ ಇಲ್ಲ. ವಚನಕಾರರ ದಿವ್ಯ ಚಿಂತನೆಯಲ್ಲಿ ಸ್ತ್ರೀ.

"ಮೊಲೆ ಮುಡಿ ಬಂದಡೆ ಹೆಣ್ಣೆಂಬರು

ಮೀಸೆ ಕಾಸೆ ಬಂದಡೆ ಗಂಡೆಂಬರು

ಈ ಉಭಯದ ಜ್ಞಾನ

ಹೆಣ್ಣೋ ಗಂಡೋ ನಾಸ್ತಿನಾಥಾ?" ೧. **-ಗೊಗ್ಗವ್ವೆ**

ಗೊಗ್ಗವ್ವೆಯಂಥ ಸಾಮಾನ್ಯ ಮಹಿಳೆಯೊಬ್ಬಳು ಹನ್ನೆರಡನೆಯ ಶತಮಾನದಲ್ಲಿ ಎತ್ತಿದ ಈ ಪ್ರಶ್ನೆಗೆ ೧೨ನೇ ಶತಮಾನದಲ್ಲಿಯೂ ಉತ್ತರವನ್ನು ಕಂಡುಕೊಳ್ಳುವುದಾಗಿಲ್ಲ. ಸಂಘಜೀವನದಲ್ಲಿದ್ದ ಮಾತೃಪ್ರಾಧಾನ್ಯತೆ ಗುಲಾಮಗಿರಿಯಕಾಲಕ್ಕೆ ಕಣ್ಮರೆಯಾಗಿ ಗುಲಾಮಿ ನೊಗಹೊತ್ತ ಮೊದಲ ವ್ಯಕ್ತಿಯಾಗಿ ಮಹಿಳೆ ಚರಿತ್ರೆಯಲ್ಲಿ ಕಾಣಿಸುತ್ತಾಳೆ. ಅಂದಿನಿಂದ ಇಂದಿನವರೆಗೂ ಹೊತ್ತನೊಗದ ಭಾರಕ್ಕೆ ಹೆಗಲು ಬಿದ್ದರು ಇಳಿಸುವುದಾಗಿಲ್ಲ. ಸಾಮಂತಶಾಹಿ, ಅರೆಸಾಮಂತಶಾಹಿ, ಬಂಡವಳಶಾಹಿ, ಅರೆ ಬಂಡವಾಳಶಾಹಿ ಅಷ್ಟೇ ಅಲ್ಲ ಇಂದಿನ ವಸಾಹತುಶಾಹಿಯ ಸಂದರ್ಭದಲ್ಲಿಯೂ ಪಿತೃಸತ್ತೆಯ ಜೊತೆಗೆ ಈ ಎಲ್ಲ ಆರ್ಥಿಕ ಸಾಮಾಜಿಕ ಹೇರಿಕೆಗಳನ್ನು ಹೊತ್ತುಕೊಂಡು ಬದುಕುತ್ತಿದ್ದಾಳೆ. ಚರಿತ್ರೆಯ ಏಳುಬೀಳಿಗೆ ಆರ್ಥಿಕ ಸಂರಚನೆಯೇ ಕಾರಣ ಈ ಆರ್ಥಿಕ ವಾರಸುದಾರಿಕೆಯನ್ನು ವಂಶಪಾರಂಪರ್ಯದಿಂದ ಬದಲಿಸಿ ತಲೆ ಮತ್ತು ತೋಳ್‌ಬಲಗಳಿಗೆ ನೀಡಿದ ನಿದರ್ಶನಗಳಿವೆ. "ವಚನಕಾರ್ತಿಯರು ವೈಚಾರಿಕ ಕ್ರಾಂತಿಯುಗದ ಹರಿಕಾರರು. ತಮ್ಮ ವೈಚಾರಿಕ ದೀಪ್ತಿಯನ್ನು ವಚನಗಳ ಮೂಲಕ ಪ್ರಕಟಿಸಿದ ಶರಣಸತಿಯರು ಇಂದಿಗೂ 'ವಿಚಾರಪತ್ನಿ'ಯರೆಂದು ಕರೆಯಿಸಿಕೊಂಡವರು. 'ಬಸವನ ಅನುಭವದಿಂದ ವಿವರವ ಕಂಡು ವಿಚಾರಪತ್ನಿಯಾದೆನಯ್ಯ' ಎಂಬ ನೀಲಮ್ಮನ ಮಾತು ಶರಣೆಯರ ಸಾಮುದಾಯಕ ನುಡಿ. ಇವರೆಲ್ಲರ ಜೀವನ ಲಿಂಗ ಸಂಪುಟ. 'ಲಿಂಗ' ಮೆಚ್ಚಿ ಅಹುದಹುದೆನ್ನುವಂತಹ ಅನುಭಾವದ ಬದುಕು. ಪ್ರಾಪಂಚಿಕ, ಪಾರಮಾರ್ಥಿಕ ಸಮನ್ವಯ ಸಮಷ್ಟಿ ಬದುಕನ್ನು ಸುಂದರಗೊಳಿಸುವಲ್ಲಿ ಅದಮ್ಯ ಕಳಕಳಿ ಅಂತರಂಗ ನಿರೀಕ್ಷಣೆ, ಸಮಾಜ ವಿಮರ್ಶೆಗಳ ಮೂಲಕ ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಉದಾತ್ತ ಗುರಿ ಹೊಂದಿದ ಅಪೂರ್ವ ಸಾಹಿತ್ಯ ಸೃಷ್ಟಿ ಇದು"೨.

ಉತ್ಪಾದನಾ ವ್ಯವಸ್ಥೆಯಿಂದ ದೂರ ತಳ್ಳಲ್ಪಟ್ಟ ಹೆಣ್ಣು ಸಾಮಾಜಿಕ ಸಾಮೂಹಿಕ, ಉತ್ಪಾದನೆಯ ಮೇಲೆ ಹಕ್ಕು ಕಳೆದುಕೊಳ್ಳುತ್ತಲೇ ಆರ್ಥಿಕ 'ನಿರಾಧಾರತನ'ವನ್ನು ಅನುಭವಿಸುವಂತಾಯಿತು. ಇದರಿಂದ ಸಾಮಾಜಿಕ ಮನ್ನಣೆ ಸಿಗದೆ ಧಾರ್ಮಿಕ, ಸಾಂಸ್ಕೃತಿಕ ನೆಲೆಯಲ್ಲಿಯೂ ಅಸ್ಪೃಶ್ಯಳಾದಳು. ಸಾಂಘಿಕ ಜೀವನದಲ್ಲಿ ಶ್ರಮ ಮತ್ತು ಉತ್ಪಾದನೆಯ ವಸ್ತುವಿಗೆ ನೇರವಾದ ಸಂಭಂದವಿತ್ತು. ಶ್ರಮದಿಂದ ಉತ್ಪಾದನಾ ವಸ್ತುವನ್ನು ದೂರಕ್ಕಿಡುವ ತಲೆಯಬಲ, ತೋಳ್ಬಲಗಳು ಯಾವಾಗ ಪ್ರಬಲವಾದವೋ ಆಗ, ಗುಲಾಮಿತನ, ಹುಟ್ಟಿಕೊಂಡಿತು. ಹೀಗೆ ಗುಲಾಮಿತನಕ್ಕೆ ನೂಕಲ್ಪಟ್ಟವರಲ್ಲಿ ಬಲಹೀನ ಗಂಡಸರೂ ಇದ್ದರೆಂಬುದನ್ನು ಮರೆಯುವಂತಿಲ್ಲ. ಆದರೆ ಒಂದಲ್ಲ ಒಂದು ಕಾಲದಲ್ಲಿ ಈ ಬಲಹೀನ ಗಂಡಸರು ಬಲಿಷ್ಠರಾಗುವ ಸಾಧ್ಯತೆಗಳು ಸಮಾಜದಲ್ಲಿದ್ದವು. ಹಾಗೇ ಬಲಿಷ್ಠರಾಗಿದ್ದಾಗ ತಾವು ಕಳೆದುಕೊಂಡ ಸಾಮಾಜಿಕ ಸ್ಥಾನ–ಮಾನಗಳನ್ನು ಮರಳಿ ಪಡೆಯುವ ಸ್ವಾತಂತ್ರ್ಯ– ಸಾಧ್ಯತೆ ಇತ್ತು. ಅಂದಿನಿಂದ ಇಂದಿನವರೆಗೂ ಈ ಸ್ವಾತಂತ್ರ್ಯದ ನೆರಳು ಹೆಣ್ಣಿನ ಮೇಲೆ ಬೀಳದಂತೆ ನೋಡಿಕೊಳ್ಳಲಾಗಿದೆ. "ವಚನಕಾರ್ತಿಯರಲ್ಲಿ ಗೃಹಿಣಿಯರು, ವಿರಾಗಿಣಿಯದು, ದಾಸಿಯರು, ವೇಶ್ಯೆಯರು ಇದ್ದಾರೆ. ಗೃಹಿಣಿಯರು ಗೃಹಸ್ಥ ಜೀವನ–ಅನುಭಾವಗಳನ್ನು ಮೇಳೈಸಿಕೊಂಡು ನಡೆದಿದ್ದಾರೆ. ಅವರಿಗೆ ತಾವು ಹೊತ್ತ ಲೌಕಿಕ ಜವಾಬ್ದಾರಿಗಳ ಸಂಪೂರ್ಣ ಅರಿವಿದೆ. ತಮ್ಮ ಸಂಸಾರ

ಜೀವನವನ್ನೇ ಸದ್ಗತಿ ಮಾರ್ಗವೆಂದು ಭಾವಿಸಿರುವರು. ಮಹದೇವಿಯಕ್ಕನಂಥವರಿಗೆ ಪುರುಷರ ಸಂಬಂಧ ಗೌಣವಾಗಿದೆ. ಆದರೆ ಆಕೆಯು ತಾನು, 'ಭಾವಿಸಲು ಗಂಡುರೂಪು' ಎಂದು ತನ್ನ ಸಾಧನೆಯ ಬಗ್ಗೆ ನಿಷ್ಠೆ, ವೀರ ಛಲಗಳನ್ನು ಬಿಂಬಿಸಲೂ ಹೇಳಿದ್ದರೂ, ಪುರುಷ ಸಮಾಜದ ಬಗ್ಗೆ ಅಲ್ಲಿ ಯಾವುದೇ ವಿಕೃತ ಭಾವನೆಗಳಿಗೆ ಎಡೆಯಿಲ್ಲ. ವಚನಕಾರ್ತಿಯರು ಮೂಲತಃ ಕೆಲವು ವ್ಯತ್ಯಾಸ, ತರತಮಗಳನ್ನು ಬಿಟ್ಟರೆ ಹೆಣ್ಣು ಗಂಡುಗಳ ಭೇದ ಎಲ್ಲ ಕಡೆಗೂ ಅಗತ್ಯವಿಲ್ಲ ಎನ್ನುತ್ತಾರೆ. ಲಕ್ಕಮ್ಮ ಕೂಟಕ್ಕೆ ಸತಿ–ಪತಿ ಎಂಬ ನಾಮವಿದೆ ಅರಿವಿಗೇಕೆ ಭೇದ? ಎಂದು ಪ್ರಶ್ನಿಸುತ್ತಾಳೆ. ಜ್ಞಾನಾರ್ಜನೆಯ ಹಾದಿಯಲ್ಲಿ ಇಂತಹ ಭೇದಕೃತಕವೆಂಬುದು ಆಕೆಯ ಅಭಿಮತ. ಇದೇ ರೀತಿಯ ಅಭಿಪ್ರಾಯಗಳನ್ನು ಸತ್ಯಕ್ಕ ಗೊಗ್ಗೆಯರು ತಳೆದಿದ್ದಾರೆ"೬. ಚರಿತ್ರೆಯಲ್ಲಿ ಅಲ್ಲೊಬ್ಬ ಇಲ್ಲೊಬ್ಬ ಮಹಿಳೆಯರು ರಾಜ್ಯವಾಳಿದ ಉದಾಹರಣೆಗಳಿಂದ ಈ ಸ್ಥಿತಿಯನ್ನು ಸರಿಪಡಿಸಲು ಸಾಧ್ಯವಾಗದು ವಂಶಪಾರಂಪರ್ಯ ಆಳ್ವಿಕೆಯ ಬಲದಿಂದ ಅಪರೂಪಕ್ಕೆ ರಾಜಮನೆತನದ ಸ್ತ್ರೀಯರು ಆಡಳಿತದ ಚುಕ್ಕಾಣಿ ಹಿಡಿದಿರುವರೇ ವಿನಃ ಸಾಮರ್ಥ್ಯ, ಬುದ್ಧಿಬಲದಿಂದಲ್ಲ.

ಮನುಷ್ಯ ಹೆಣ್ಣು ಗಂಡುಗಳಾದಿಯಾಗಿ ತಮ್ಮ 'ಅಸ್ತಿತ್ವ'ದ ಉಳಿಕೆಗಾಗಿ ನಿರಂತರ ಸಂಘರ್ಷದ ಹಾದಿಯಲ್ಲಿ ನಡೆದಿರುವರು. ತನ್ನ ಸುತ್ತಲಿನ ನಿಸರ್ಗವನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡ, ಬಳಸಿಕೊಳ್ಳಲಾಗದಿದ್ದಾಗ 'ಭಯ' ದಿಂದ ದೂರ ಇದ್ದ. ಈ ಭಯದಿಂದಲೇ 'ದೇವರುಗಳು' ಹುಟ್ಟಿ, ಕಾಲಾಂತರದಲ್ಲಿ ಈ ಭಯವೆ 'ಭಕ್ತಿ'ಯಾಗಿ ಕಾಣಿಸಿಕೊಂಡಿದೆ. ಹೀಗೆ ಹುಟ್ಟಿದ ದೇವರುಗಳು, ಆ ದೇವರುಗಳ ಪೂಜೆ ಪುನಸ್ಕಾರಗಳೆಲ್ಲ ಸೇರಿ 'ಧರ್ಮ'ವೆಂದು ಕರೆಸಿಕೊಂಡಿರಬೇಕು. ಇಂತಹ ದೇವರು ಧರ್ಮ ಮೊದಮೊದಲು ಹುಟ್ಟಿಸಿದವರ ಜೊತೆಯಲ್ಲಿಯೇ 'ಅಲೆಮಾರಿ'ಯಾಗಿದ್ದವು. ಎಂದು ಮನುಷ್ಯ ಅಲೆಮಾರಿತನದಿಂದ, ನೆಲೆಯೂರಿ ಬದುಕುವ ಸ್ಥಿತಿಗೆ ಬಂದ, ಅಂದೇ ಧರ್ಮಗಳು 'ಸಾಂಸ್ಥಿಕ'ಗೊಳ್ಳಲು ಪ್ರಾರಂಭಿಸಿದವು. ಅಲೆಮಾರಿ ಹಂತದ ದೇವರು, ಧರ್ಮ ಯಾರಿಗೂ ಹೊರೆಯಾಗಿರಲಿಲ್ಲ ಉರಲಾಗಿರಲಿಲ್ಲ.

ಯಾವ ಕಾಲಘಟ್ಟದಲ್ಲಿ ಸಂಗ್ರಹ ಪ್ರವೃತ್ತಿ ಮನುಷ್ಯನಿಗೆ ಅಂಟಿಕೊಂಡಿತೋ ಅಲ್ಲಿ ಧರ್ಮ, ದೇವರುಗಳು ಹೆಚ್ಚು ಪ್ರಚಾರಗೊಂಡವು ಮತ್ತು ಬಲಿಷ್ಠಗೊಂಡವು. ತಾನು ಸಂಗ್ರಹಿಸಿದ್ದನ್ನು ತಾನು ತನ್ನ ಸಂತಾನವೇ ಉಪಭೋಗಿಸಬೇಕೆಂಬ ಆಸೆ. ಅದನ್ನು ಕಾಯಲು ಕಟ್ಟಲು ಉಳಿಸಲು ಹಲವು ಹತ್ತು ಆಚಾರಗಳನ್ನು ಹುಟ್ಟುಹಾಕಿಕೊಂಡ. ತಲೆ ಮತ್ತು ಬಲಗಳ 'ಸಾಂಗತ್ಯ'ತನದಿಂದ ದೇವರು ಧರ್ಮಗಳು ಕಾಲಾಂತರದಲ್ಲಿ, ಶೋಷಕ ಶಕ್ತಿಗಳ ಪ್ರಬಲ 'ಅಸ್ತ್ರ'ಗಳಾದವು. ಸಂಗ್ರಹ ಪ್ರವೃತ್ತಿ ಮನುಷ್ಯನಲ್ಲಿ ಎಂತಹ ಸ್ವಾರ್ಥವನ್ನು ತುಂಬಿತೆಂದರೆ, ಬಲಿಷ್ಠಳಾದ ಹೆಣ್ಣನ್ನು ಮತ್ತು ಅಸಹಾಯಕನಾದ ಗಂಡಸನ್ನು ಏಕಕಾಲದಲ್ಲಿ 'ದಮನ'ಕ್ಕೊಳಪಡಿಸಿತು. ಹಣ್ಣಿಗೆ 'ಶೀಲ', 'ಪಾತಿವ್ರತ್ಯ' ಏಕಪತ್ನಿ ಪದ್ಧತಿಗಳೆಲ್ಲಾ ಸೇರಿ ಆಕೆಯ ಎಲ್ಲಾ ಹಕ್ಕುಗಳನ್ನು ಕಿತ್ತುಕೊಂಡವು. ಅದೇ ರೀತಿಯಾಗಿ ದೈಹಿಕ

ಬುದ್ಧಿಬಲಗಳೆಲ್ಲಾ ಸೇರಿ ಗಂಡಸನ್ನು ದಮನಿಸಿದವು. ತಾನು ಸಂಗ್ರಹಿಸಿದ ಸಂಪತ್ತಿಗೆ ವಾರಸುದಾರ ತನ್ನ ಸಂತಾನವೇ ಆಗಿರಬೇಕೆಂಬ ಗಂಡಸಿನ ಹಂಬಲ ಕುಟುಂಬ, ಏಕಪತ್ನಿ ಪದ್ಧತಿಯ ಹುಟ್ಟಿಗೆ ಕಾರಣವಾಗಿದೆ. ಜೀವನದಲ್ಲಿದ್ದ ಸಂತಾನಾಭಿವೃದ್ಧಿಯ ಸ್ಥಿತಿಗಳೆಲ್ಲಾ ಈ ಕಾಲಕ್ಕೆ ಬೇರೆಯಾದವು. ಸಾಮಾಜಿಕ ಭಾಗವಾಗಿದ್ದ 'ಸಂತಾನ'ವು ಸಂಪತ್ತಿನ ಭಾಗವಾಯಿತು. ವಾರಸುದಾರಿಕೆಯ 'ಅಪೇಕ್ಷೆ'ಯಿಂದ ಹೆಣ್ಣಿಗೆ ಗಂಡಸು ಏಕಪತ್ನಿ ಸ್ಥಾನದ ಮೂಲಕ ಸುರಕ್ಷತೆ ಒದಗಿಸಿದಂತೆ ಮೇಲೆ ಮೇಲೆ ಅನಿಸಿದರೂ, ಅದರಾಳದಲ್ಲಿ ಮನುಷ್ಯನ ಸ್ವಾರ್ಥ ಹೆಣ್ಣನ್ನು 'ಶೀಲ'ದ ಹೆಸರಿನಲ್ಲಿ ಆಕೆಯ ಅಯ್ಕೆಯ ಹಕ್ಕನ್ನು ಕಿತ್ತುಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಗಂಡಸು ತನ್ನ ಕುಟುಂಬದಾಚೆಗೆ ತನ್ನ 'ಭೋಗ ಜೀವನ'ಕ್ಕೆ ಹೆಣ್ಣನ್ನು ಆಯ್ಕೆ ಮಾಡಿಕೊಂಡು ಆಕೆಯನ್ನು 'ಉಪಪತ್ನಿ' ವೇಶ್ಯೆ ಎಂದು ಕರೆದ. ಕುಟುಂಬದೊಳಗಿನ ಹೆಣ್ಣು ಸುಭದ್ರತೆ, ಸುರಕ್ಷತೆಯ ಭ್ರಮೆಯಲ್ಲಿ, ತನ್ನೆಲ್ಲಾ ಆಯ್ಕೆಯ ಹಕ್ಕನ್ನು, ಇಲ್ಲವೆ, ಆಯ್ಕೆಯ ಹಕ್ಕು ಸ್ವಾತಂತ್ರ್ಯವನ್ನು ಉಳಿಸಿಕೊಂಡ ಹಾಗೇ ಕುಟುಂಬದಾಚೆಯ ಹೆಣ್ಣುಗಳಿಗೆ ಅನಿಸಿದರೂ ಆಳದಲ್ಲಿ ಇಬ್ಬರೂ 'ಪುರುಷಸತ್ತೆ'ಯಿಂದ ನಿಯಂತ್ರಿಸಲ್ಪಟ್ಟವರೇ. ಅಷ್ಟೇ ಅಲ್ಲ ಪುರುಷಪ್ರಧಾನ ಸಂಸ್ಕೃತಿಯ ಈ ಬರ್ಬರತೆ 'ಸ್ತ್ರೀ'ಗೆ ತಿಳಿಯದ ಹಾಗೇ, ಗಂಡಸು ತನ್ನ ಹಿತರಕ್ಷಣೆಯ, ತನ್ನ ಅನುಕೂಲಕ್ಕನುಗುಣವಾದ ಮೌಲ್ಯಗಳನ್ನು ಮುಂದಿಟ್ಟು 'ಸ್ತ್ರೀ' ಕುಲವನ್ನು ಒಡೆದು ಆಳಿದ. ಪುರುಷ ಪ್ರಧಾನ ವ್ಯವಸ್ಥೆ ಇಂದಿಗೂ ಪ್ರಬಲವಾಗಿದೆ ಮತ್ತು ಜೀವ ವಿರೋಧಿತನವನ್ನು ಮೈಗೂಡಿಸಿಕೊಂಡಿದೆ.

ಉತ್ಪಾದನಾ ಸಾಧನಗಳ ಒಡೆತನವನ್ನು ಕಳೆದುಕೊಂಡ ಮಹಿಳೆ, ಇಂದಿನವರೆಗೂ ಅದನ್ನು ಪಡೆದುಕೊಳ್ಳುವುದಾಗಿಲ್ಲ. ಎಲ್ಲಿವರೆಗೂ ಉತ್ಪಾದನಾ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ, ತನ್ಮೂಲಕ ಅನುಭವಿಸುವ ಹಕ್ಕು ಇರುವುದಿಲ್ಲವೋ ಅಲ್ಲಿಯವರೆಗೂ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ಪಡೆಯುವುದಾಗಲೀ ವಿಮೋಚನೆಗೊಳ್ಳುವುದಾಗಲೀ ಸಾಧ್ಯವಾಗಲಾರದು. ವಿಮೋಚನೆಗೊಳ್ಳುವ ಹಂಬಲ ಒಳಗಿನ ಮತ್ತು ಹೊರಗಿನ ಒತ್ತಡಗಳಿಂದ ರೂಪಗೊಳ್ಳುವ ಸಾಧ್ಯತೆಗಳು ಇಂದಿನವರೆಗೂ ಸ್ಪಷ್ಟವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಿಲ್ಲ. ವಿಮೋಚನೆಗೊಳಿಸುವ, ವಿಮೋಚನೆಗೊಳ್ಳುವ ಕ್ರಿಯೆ ಏಕಕಾಲದಲ್ಲಿ ಆಗದೇ ಇರುವುದಕ್ಕೆ ಹಲವು ಹತ್ತು ಕಾರಣಗಳಿವೆ. ಒಂದೊಂದು ಸಲ ಸಾಕಿದ ಪಂಜರದ 'ಗಿಳಿ' ಬಾಗಿಲ ತೆರೆದರೂ ಹಾರಲಾರದು. ಬಂಧನವೇ ಬದುಕೆಂದು ಹೇಳಿದ ಯಜಮಾನ ಸಂಸ್ಕೃತಿಯನ್ನು ಒಪ್ಪಿಕೊಂಡಿರುವವರ, ಮನಸ್ಸಿನ ಸ್ಥಿತಿಗಳ ಒತ್ತಡವನ್ನು ಹಕ್ಕಿಯ ಹಾರುವ 'ಸಹಜತೆ'ಯನ್ನು ಮರೆಸಿರುವ ವ್ಯವಸ್ಥೆಯನ್ನು ಗುರುತಿಸದಿದ್ದರೆ ಬಿಡುಗಡೆಗೊಳ್ಳುವುದಾಗಲಿ ಬಿಡುಗಡೆಯಿಂದ ಹೊಂದಬೇಕಾದ ಸ್ಥಿತಿಯಾಗಲೀ ಅರ್ಥವಾಗದು.

"ವಚನ ಚಳುವಳಿಯ ಮಹಾಸಾಧನೆಯೆಂದರೆ ಸ್ತ್ರೀ-ಪುರುಷರ ಭೇದ-ಭಾವವನ್ನು ಹೊಡೆದುಹಾಕಿ, ಇಬ್ಬರೂ ಸರಿಸಮಾನರೆಂದು ಸಾರಿದ್ದು.

ಆದ್ಯ ವಚನಕಾರ ಜೇಡರ ದಾಸಿಮಯ್ಯನು –

'ಮೊಲೆ ಮೂಡಿ ಬಂದರೆ ಹೆಣ್ಣೆಂಬರು

ಗಡ್ಡ ಮೀಸೆ ಬಂದರೆ ಗಂಡೆಂಬರು

ನಡುವೆ ಸುಳಿವಾತ್ಮನು

ಗಂಡೂ ಅಲ್ಲ, ಹೆಣ್ಣು ಅಲ್ಲ'

(ಸ.ವ.ಸಂ:೭ ವ.ಸಂ, ೮೪೫)

ಎಂಬ ವಿಚಾರ ಮಹನೀಯವಾಗಿದೆ. ಜೇಡರದಾಸಿಮಯ್ಯನು ಉದಾಹರಣೆ ಮೂಲಕ ಹೀಗೆ ವಿವರಿಸುತ್ತಾನೆ.

'ನಿಡಿದೊಂದು ಕೋಲುವನು ಕಡಿದು ಎರಡು ಮಾಡಿ

ಅಡಿಯ ಹೆಣ್ಣ ಮಾಡಿ, ಒಡತಣದ ಗಂಡು ಮಾಡಿ

ನಡುವೆ ಹೊಸೆದೊಡೆ, ಹುಟ್ಟಿದ ಕಿಚ್ಚು

ಹೆಣ್ಣೊ ಗಂಡೊ ರಾಮನಾಥಾ?'

(ಸ.ವ.ಸಂ:೭ ವ.ಸಂ, ೮೧೪)

ಶಿವಶರಣರಲ್ಲಿ ಹೆಣ್ಣು-ಗಂಡಿನ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆಯಿತ್ತು ಎಂಬುದಕ್ಕೆ ಈ ವಚನವೊಂದು ನಿದರ್ಶನವಾಗಿದೆ"[೪].

ಚರಿತ್ರೆಯಲ್ಲಿ ಹೆಣ್ಣಿನ ಬಿಡುಗಡೆಯ ಸಲುವಾಗಿ ನಡೆದ ಚಳುವಳಿ ಹೋರಾಟಗಳಿರದಿದ್ದರೂ ಸಾಮಾಜಿಕ ಧಾರ್ಮಿಕ, ಚಳುವಳಿಯಲ್ಲಿ ಹೆಣ್ಣಿನ ಬಿಡುಗಡೆಯನ್ನು ಅಂಶಿಕವಾಗಿ ಬಯಸಿದ 'ಸದಾಶಯ'ಗಳಿವೆ. ತೋಳ್ಬಲ ಸಂಪತ್ತಿನ ಕೇಂದ್ರೀಕರಣದಲ್ಲಿ ಕೊಂಡದ್ದಷ್ಟೆ ಅಲ್ಲ ಸಂಪತ್ತಿನ ರಕ್ಷಣೆ-ಸಂಗ್ರಹಣೆಗೆ ತೋಳಿಗೆ 'ತಲೆ' ಆಸರೆ ನೀಡಿದೆ. ಹೀಗಾಗಿ ಈ ಸಂಪತ್ತಿನ ಉಪಭೋಗವನ್ನು ಶ್ರಮಿಕ 'ಭೋಗಿ'ಯೂ ಪಡೆಯಬೇಕೆಂದು ಹೊರಟ ಚಳುವಳಿಗೂ ಹೆಣ್ಣಿನ ಸ್ಥಾನ-ಮಾನಗಳ ಬಗ್ಗೆ ಆಲೋಚಿಸಿವೆ. ಸಾಂಸ್ಥಿಕ ಧರ್ಮದಿಂದ ಹೊರಟ ತತ್ವಗಳೆಲ್ಲ ಸಮಾಜವನ್ನು ಜನರನ್ನು ಪ್ರಗತಿಗಭಿಮುಖವಾಗಿ ಜಗ್ಗಲಾರವು. 'ಸಾಂಸ್ಥಿಕಧರ್ಮ'ದ ಜನ ವಿರೋಧಿತನವನ್ನು ಜೀವವೀರೊಧಿತನವನ್ನೆಲ್ಲಾ ಪ್ರತಿಭಟಿಸುತ್ತಾ ಬಂದ ವಿಚಾರಗಳೆಲ್ಲಾ ಮೊದ ಮೊದಲು ಸಾಮಾಜಿಕ ನೆಲೆಯಿಂದಲೇ ಹೊರಟಿವೆ. ಅಂತಿಮವಾಗಿ 'ಧಾರ್ಮಿಕ ನೆಲೆ' ಯಲ್ಲಿಯೇ 'ಪರ್ಯಾವಸಾನ'ಗೊಂಡಿವೆ.

ಜನಪರತೆ ಜೀವಪರತೆಯನ್ನು ಎತ್ತಿಹಿಡಿಯಲೆಂದು ಹುಟ್ಟಿದ, ವ್ಯಕ್ತಿ ವಿಚಾರಗಳು, ಸಂಘಟಿತ ಶಕ್ತಿಯ ವಿಚಾರಗಳೆಲ್ಲವೂ, ಸಮಾಜ ಸಂಬಂಧಿ ಸಂಗತಿಗಳೇ ಆಗಿದ್ದವು. ಹಿಂದೂ ಧರ್ಮವನ್ನು ಪ್ರತಿಭಟಿಸುತ್ತಾ ಬಂದ ಬೌದ್ಧ, ಜೈನ, ಲಿಂಗಾಯತಧರ್ಮಗಳೆಲ್ಲವೂ ಮೊಟ್ಟಮೊದಲು ಗಮನ ಹರಿಸಿದ್ದು ದಮನಿಸಲ್ಪಟ್ಟ ಹೆಣ್ಣು-ಗಂಡುಗಳ ಬಗ್ಗೆನೇ! ಬಲಿಷ್ಠರ ಬಾಯಾಗಿದ್ದ ಉಳ್ಳವರ

ಉದ್ದೇಶಗಳನ್ನಿಟ್ಟುಕೊಂಡು ಬೆಳೆದ ಹಿಂದೂ ಧರ್ಮ ತನ್ನೆಲ್ಲಾ ಶೋಷಣೆಯ ಸೂಕ್ಷ್ಮತೆಗಳಿಗೆ ಧರ್ಮ, ದೇವರುಗಳ ಹೆಸರಿನಲ್ಲಿ ಜನರೂಪ್ಪಿಗೆಯನ್ನು ಪಡೆದುಕೊಳ್ಳಲು ಅಂದಂದಿನ ಕಾಲದ 'ಅರ್ಥ ವ್ಯವಸ್ಥೆ'ಯ ವಾರಸುದಾರರನ್ನು ಸಮರ್ಥವಾಗಿಯೇ ಬಳಸಿಕೊಂಡಿದೆ. ಹೀಗೆ ದಮನಿಸಲ್ಪಟ್ಟ ಒಡಲಿನಿಂದಲೇ ಪ್ರತಿಭಟನೆ, ಪ್ರತಿರೋಧಕ ಶಕ್ತಿಗಳು ಸಿಡಿದು ಹೊರಬಂದು, ವೈದಿಕ ಧರ್ಮದ ವಿರುದ್ಧ ಸೆಣಸಾಡಿವೆ. ತೋಳ್ಬಲಕ್ಕಿಂತಲೂ ಬುದ್ಧಿಬಲವೇ ಧರ್ಮದ ನೇಪಥ್ಯದಲ್ಲದ್ದುಕೊಂಡು ಶೋಷಣೆಯನ್ನು ನಡೆಸಿದರೂ, ಚರಿತ್ರೆಯಲ್ಲಿ ಅದನ್ನು ವೈರಿಸ್ಥಾನದಲ್ಲಿ ನೋಡಲು ಸಾಧ್ಯವಾಗಿಲ್ಲ. ಇಂತಹ ಧರ್ಮದ ಜೀವ ವಿರೋಧಿ ನೆಲೆಯನ್ನು ಮೀರಿ ಜೀವಪರತೆಯ ಪಕ್ಷವಹಿಸಿ ಹುಟ್ಟಿದ ಎಲ್ಲ ಧರ್ಮಗಳು ಅಂದಂದಿನ ಸಮಾಜ ಕಡೆಗಣಿಸಲ್ಪಟ್ಟವರನ್ನು ಎತ್ತಿ ಎದೆಗೆ ಬಾಚಿಕೊಂಡು ಸಾಂತ್ವನ ನೀಡಿವೆ.

ಹಿಂದೂ ಧರ್ಮದ ಆಚಾರ–ವಿಚಾರಗಳೆಲ್ಲವೂ ಸಾಮಾನ್ಯ ಮನುಷ್ಯನ ಬೆವರನ್ನ ಹೀರುವ ಸಾಂಸ್ಕೃತಿಕ, ಸಾಮಾಜಿಕ ಸಂಗತಿಗಳಾದಾಗ, ಸಾಮಾನ್ಯ ಮನುಷ್ಯ ಕಂಗೆಟ್ಟು ಹೋಗಿದ್ದಾನೆ. ಸಮಾಜದಲ್ಲಿ ಧರ್ಮ ದೇವರುಗಳ ಹೆಸರಿನಲ್ಲಿ ನಿತ್ಯ ನಿರಂತರ ನಡೆದ ಮನುಷ್ಯನ ಶೋಷಣೆಯನ್ನು ಮನಗಂಡ ಬುದ್ಧನಂಥವರು ಸಾಮಾನ್ಯನ ಬದುಕಿನ ಪರವಾಗಿ ಧ್ವನಿ ಹೊರಡಿಸಬೇಕಾಯಿತು. ಅಂದಿನಿಂದ ಇಂದಿನವರೆಗೂ ಕೊಳೆತು ನಾರುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಪಿಚುಗುಡುವ ಹುಳುವಿನಂಥ ಹಿಂದೂ ಧರ್ಮದ ವಿನಾಶಕ್ಕೆ ಅದೇ ಕಾರಣವೆನ್ನುವುದನ್ನು ಕಾಲ ಗ್ರಹಿಸಿದೆ. ಹೀಗಾಗಿಯೇ ಬುದ್ಧನಂಥವರು ಉಳ್ಳವರ ಧರ್ಮದಿಂದ ಜನರನ್ನು ಬಿಡಿಸಿ ಉಳಿಯುವ ಉಳಿಸುವ, ಬೆಳೆಯುವ, ಬೆಳೆಸುವ ಧರ್ಮವನ್ನು ಜನರಿಗೆ ಬೋಧಿಸಿದರು. ದೇವರು ಧರ್ಮವೆನ್ನುವುದು ಸಾಮಾನ್ಯನಿಗೆ ಕೈಗೆಟುಕದ ಸಂಗತಿಗಳಾದಾಗ, ಮಧ್ಯವರ್ತಿಗಳ ದುರಾಸೆಯಿಂದ ತತ್ತರಿಸಿದ ಮನುಷ್ಯ ಪ್ರಾಣಿಗೆ ಅದೇ ಪರಿಭಾಷೆಯ ಹೊಸ ಮದ್ದನ್ನು ನೀಡಿ ಬದುಕುವ ಚೈತನ್ಯವನ್ನು ನೀಡಿತು. ಅತ್ಯಂತ ಉದಾತ್ತ ನೆಲೆಯಿಂದ ಹೊರಟ ಬೌದ್ಧಧರ್ಮವೂ ಹೆಣ್ಣಿನ ವಿಷಯದಲ್ಲಿ ಮೊದ ಮೊದಲು ಬಿಗು ಧೋರಣೆಯನ್ನು ಹೊಂದಿದಂತಿದೆ. ಪರಂಪರಾಗತವಾಗಿ ಪುರುಷನ ಸಾಧನಾ ಪಥದಲ್ಲಿ ಹೆಣ್ಣೊಂದು 'ಅಡ್ಡಿ' ಎಂಬುದನ್ನು ಸಂಪೂರ್ಣವಾಗಿ ಮೀರುವ ಸಾಧ್ಯತೆಗಳು ಬುದ್ಧನಿಗೂ ಕಾಣಿಸದೆ ಹೋಗಿರಬೇಕು. ಯಾವುದೇ ಕ್ಷೇತ್ರದಲ್ಲಿ ಸಾಧನೆ ಎನ್ನುವುದು ಹೆಣ್ಣು–ಗಂಡುಗಳ ಬದುಕಿನ ಉಪಭೋಗದ ಉಪಕ್ರಿಯೆ. ಅವರ ಬದುಕಿನ ಬೆವರಿನ ಮೊತ್ತ.

ಹೆಣ್ಣನ್ನು ಕಟ್ಟಿಹಾಕಿದ ಧರ್ಮದ ಕಟ್ಟುಗಳನ್ನು ಕಿತ್ತುಹಾಕಿದೆ ಸಾಮಾಜಿಕ ಜೀವನದಲ್ಲಿ ಬದಲಾವಣೆಯನ್ನು ತರಲಾಗದು ಎನ್ನವಷ್ಟರಮಟ್ಟಿಗೆ ಧರ್ಮ ಭಾರತೀಯರ ಬದುಕಿನಲ್ಲಿ ಹಾಸು ಹೊಕ್ಕಾಗಿದೆ. ವೇದಪೂರ್ವ ಯುಗದಲ್ಲಿ 'ಸ್ತ್ರೀ' ಜನನದ ಬಗ್ಗೆ ಅಂತಹ ಕ್ರೂರವಾದ ಕಟ್ಟುಪಾಡುಗಳೇನು ಇರಲಿಲ್ಲ. ವೇದಯುಗದಲ್ಲಿ ಸ್ತ್ರೀಯನ್ನು 'ಖಾಸಗಿ ಆಸ್ತಿ'ಯೆಂದು ಪರಿಗಣಿಸಿ, ಆಕೆಯನ್ನು ಕೌಟುಂಬಿಕ ಚೌಕಟ್ಟಿನಿಂದ ಬಂಧಿಸಲಾಯಿತು. ಗಂಡಸಿಗೆ ಇಂತಹ ಬಂಧನಗಳಿರಲಿಲ್ಲ. ವೇದಪೂರ್ವಯುಗದಲ್ಲಿ ಪತಿಪತ್ನಿಯರಿಬ್ಬರೂ ಯಜ್ಞದಂತಹ ಕಾರ್ಯದಲ್ಲಿ ಸಹ ಸಮಾನ ಪಾಲ್ಗೊಳ್ಳುವಿಕೆಯನ್ನು ಹೊಂದಿದ್ದರೆ,

ವೇದಗಳ ಕಾಲಕ್ಕೆ ಯಜ್ಞವೆನ್ನುವುದು ಪುರುಷನೇ ಮಾಡಬೇಕಾದ ಶ್ರೇಷ್ಠ ಕಾರ್ಯವಾಗಿ ಕಾಣಿಸಿಕೊಂಡಿದೆ. ವೇದಯುಗದಲ್ಲಿ ಹೆಂಡತಿ ಅಕಾಲಮರಣಕ್ಕೆ ಒಳಗಾದರೆ ವಿಧುರನು ಬೇರೆಯೇ ಆದ ಅಗ್ನಿಯನ್ನು ಸ್ಥಾಪಿಸಿಕೊಳ್ಳಬೇಕು. ದೈನಂದಿನ ಯಜ್ಞಕಾರ್ಯಗಳಿಗಾಗಿ ಹೊಸ ಸಹಭಾಗಿಯೊಬ್ಬಳನ್ನು ಆರಿಸಬೇಕು. ಸತ್ತಮೇಲೆ ಗಂಡ ಹಿಡಿಯಬೇಕಾದ ಹಾದಿಯೆಂದರೆ ಪ್ರಾಪಂಚಿಕತೆಯನ್ನು ತ್ಯಜಿಸಿ ಕಾಡಿಗೆ ಹೋಗಬೇಕು. (ವಾನಪ್ರಸ್ಥ) ಇಲ್ಲವೇ ಅವನು ಗೃಹಸ್ಥ ಸ್ಥಿತಿಯನ್ನು ಮುಂದುವರೆಸಲು ಇಚ್ಛಿಸಿದರೆ ಅಶೌಚದ ಅವಧಿ ಮುಗಿದ ತಕ್ಷಣವೇ ಮದುವೆಯಾಗಬೇಕು. ಏಕೆಂದರೆ ಗೃಹಸ್ಥನ ಅತ್ಯಂತ ಮುಖ್ಯವಾದ ಅಗ್ನಿಹೋತ್ರವನ್ನು ಪತ್ನಿಯಿಲ್ಲದೆ ನಡೆಸಲಾಗದು. ಇಲ್ಲಿ ಹೆಣ್ಣಿಗೆ ಯಜ್ಞ ಯಾಗಾದಿಯಲ್ಲಿ ಭಾಗವಹಿಸುವ ಸ್ವಾತಂತ್ರ್ಯವಿತ್ತು ಎಂಬುದನ್ನು ಗಮನಿಸುತ್ತಲೇ ಇನ್ನೊಂದನ್ನು ಗಮನಿಸಬೇಕಾಗಿದೆ. ವಿಧುರ ಗಂಡಸಿನ ಕೌಟುಂಬಿಕ ಜೀವನದಲ್ಲಿ ಹೆಂಡತಿಯರನ್ನು ಹೊಂದುವ ಸಾಮಾಜಿಕ ಅವಕಾಶವಿತ್ತು. ಮತ್ತು ಧರ್ಮ ಸಮ್ಮತಿಯೂ ಅದಕ್ಕಿತ್ತು. ಇದೇ ಸಂದರ್ಭದಲ್ಲಿ ಗಂಡಸತ್ತ ವಿಧವೆಗೆ ಬದುಕುವ ಎಲ್ಲಾ ಅವಕಾಶಗಳನ್ನು ಕಿತ್ತುಕೊಳ್ಳಲಾಗಿದೆ. ವಿವಾಹ ಬಂಧನದ ಪವಿತ್ರತೆಯು ಭಾರತದಲ್ಲಿ ವಿಧವಾ ವಿವಾಹವನ್ನು ಅಸಾಧ್ಯವೆಂದು ಸಾರಿದೆ. ಗಂಡ ಸತ್ತ ಮೇಲೆ ಹೆಂಡತಿಯಾದವಳು ಅವನೊಡಗೊಡಿಯೆ ಸ್ಮಶಾನಕ್ಕೆ ಹೋಗಬೇಕು, ಎಂಬುದಕ್ಕಾಗಿ ಸತಿ ಪದ್ಧತಿ ಚಲಾವಣೆಗೆ ಬಂದಿರಬೇಕು. ಮಕ್ಕಳ ಪಾಲನೆ–ಪೋಷಣೆಯ ಜವಾಬ್ದಾರಿ ಇದ್ದರೆ ಅವಳ ದೇಹದಂಡಿಸುತ್ತಾ, ಧಾರ್ಮಿಕ ಕಾರ್ಯಗಳಲ್ಲಿ ತೊಡಗುತ್ತಾ ದಿನ ಕಳೆಯಬೇಕು. ಅವಳಿಗೆ ಸಾಮಾಜಿಕ ಜೀವನ ನಿಷಿದ್ಧವಾಗಿತ್ತು. ಹೀಗೆ ಕುಟುಂಬ ಜೀವನದಲ್ಲಿ ತಾಯಿಯಾಗಿ ಹೆಣ್ಣಿನ ಕರ್ತವ್ಯದ ಬಗ್ಗೆ ನಮ್ಮ ವೇದಗಳು ಒತ್ತಿ ಒತ್ತಿ ಹೇಳಿವೆ. ಆದರೆ ಎಲ್ಲಿಯೂ ತಂದೆಯ ಕರ್ತವ್ಯದ ಬಗ್ಗೆ ಮಾತನಾಡುವುದಿಲ್ಲ. ಇದರಿಂದ ಕುಟುಂಬದ ಹೊಣೆಗಾರಿಕೆ ಗಂಡಸಿಗೆ ಹೊರೆ ಎನಿಸಲಿಲ್ಲ. ಹೆಣ್ಣಿನ ಈ ಹೊಣೆಗಾರಿಕೆ ಬಲವಂತದಿಂದ ಹೇರಲ್ಪಡುವ ಸಂಗತಿ ಎಂಬುದರಲ್ಲಿ ಸಂದೇಹವಿಲ್ಲ.

ನಮ್ಮ ಕೆಲಸಕಾರ್ಯಗಳನ್ನು ನಮ್ಮ ನಮ್ಮ ಅಭಿಲಾಷೆ ಅಪೇಕ್ಷೆಗೆ ಅನುಗುಣವಾಗಿ ಮಾಡಲಾಗದು. ಇದರ ಬಗ್ಗೆಯೂ 'ಹಿಂದೂ ಸಮಾಜ' ಹಲವು ಹತ್ತು ನಿರ್ದೇಶನಗಳನ್ನು ನೀಡಿದೆ. ಮಹಿಳೆಯರ ಕುರಿತ ಹಾಗೆ ಗಾಂಧೀಜಿ ಒಂದು ಕಡೆ ಈ ರೀತಿಯಾಗಿ ಹೇಳುತ್ತಾರೆ: 'ವಿವಾಹಿತ ದಂಪತಿಗಳಲ್ಲಿ ಬಾಹ್ಯಕಾರ್ಯಗಳಿಗೆ ಸಂಬಂಧಿಸಿದಂತೆ ಪುರುಷನೇ ಶ್ರೇಷ್ಠ. ಆದುದರಿಂದ ಅದರ ಬಗೆಗೆ ಅವನು ವಿಶೇಷ ಜ್ಞಾನವನ್ನು ಸಂಪಾದಿಸಿಕೊಳ್ಳುವುದು ಯುಕ್ತವಾದುದು. ಇದಕ್ಕೆ ಪ್ರತಿಯಾಗಿ ಗೃಹಜೀವನ ಪೂರ್ಣವಾಗಿ ಮಹಿಳೆಯ ಕ್ಷೇತ್ರ; ಆದುದರಿಂದ ಗೃಹಕೃತ್ಯದಲ್ಲಿಯೂ ಮಕ್ಕಳ ಪಾಲನೆ ಮತ್ತು ಶಿಕ್ಷಣಗಳಲ್ಲಿಯೂ ಅವಳು ವಿಶೇಷ ಜ್ಞಾನವನ್ನು ಸಂಪಾದಿಸಬೇಕು.' ಗಾಂಧೀಜಿಯಂತಹ ಮಹಾನ್ ಚಿಂತಕರೆ ಹೆಣ್ಣಿನ ಬಗ್ಗೆ ಮಾತನಾಡುವಾಗಲೆಲ್ಲಾ ಹಿಂದೂ ಧರ್ಮದ 'ನೀತಿ ಸಂಹಿತೆ'ಯನ್ನು ಮುಂದಿಟ್ಟು ಮಾತನಾಡಿದ್ದು ನೋಡಿದರೆ ಮಹಿಳೆಯ ಸ್ವಾತಂತ್ರ್ಯದ ಬಗ್ಗೆ ವೈಜ್ಞಾನಿಕವಾಗಿ ಆಲೋಚನೆ ಮಾಡುವ ವ್ಯಕ್ತಿಗಳೇ ಹುಟ್ಟಿಲ್ಲವೆನ್ನಬಹುದು. ಹೀಗೆ ವೈದಿಕಕಾಲದಲ್ಲಿ ಹೆಣ್ಣು ಕುಟುಂಬದ 'ಖಾಸಗಿ

ಆಸ್ತಿ'ಯ ಭಾಗವಾಗಿರುವುದರಿಂದಲೇ ಆಕೆಯನ್ನು ಮಾರುವ-ಕೊಳ್ಳುವ, ಅಡವು ಇಡುವ ಹಕ್ಕೆಲ್ಲವೂ ಯಜಮಾನ ಸಂಸ್ಕೃತಿಯಲ್ಲಿ 'ಮೌಲ್ಯ'ವಾಗಿ ವಿಜೃಂಭಿಸಿದೆ. ನಿರಂತರ ಅನ್ಯಾಕ್ರಮಣದ ಭಯದಿಂದ ಅನ್ಯಾಶ್ರಯದಲ್ಲಿ ಬದುಕುವ ಹೆಣ್ಣು ಕುಲ ದಿಢೀರನೆ ಸ್ವಾತಂತ್ರ್ಯ ಸಮಾನತೆಯ ಬಗ್ಗೆ ಆಲೋಚಿಸುವ ಶಕ್ತಿಯನ್ನಾದರೂ ಪಡೆದುಕೊಳ್ಳಲು ಹೇಗೆ ಸಾಧ್ಯ. ಹೀಗೆ ಹೆಣ್ಣನ್ನು ವೈದಿಕ ಧರ್ಮ ಆಕಳಿನ ಸ್ಥಾನದಲ್ಲಿಟ್ಟು ನೋಡುವಾಗಲೆಲ್ಲ ಸಾಮಂತಶಾಹಿ ನಡೆಸಿದ ಆಕ್ರಮಣವೆಲ್ಲವೂ ಹೆಣ್ಣಿನ ಮೇಲೆಯೇ ಬಹುಪಾಲು ಕೇಂದ್ರೀಕೃತವಾಗಿರುತ್ತಿದ್ದವು.

ವೈದಿಕ ಧರ್ಮದ ಈ ನೀತಿಯನ್ನು ಪ್ರತಿಭಟಿಸುತ್ತಾ ಪರ್ಯಾಯ ಬದುಕಿನ ಕ್ರಮವನ್ನು ತೋರಲು ಹೊರಟ ಬೌದ್ಧಧರ್ಮ ಪ್ರಾರಂಭದಲ್ಲಿ ಹೆಣ್ಣಿನ ವಿಷಯದಲ್ಲಿ 'ಆಸ್ಥೆ; ವಹಿಸಲಿಲ್ಲ. ಬಿಗುವಿನಿಂದಲೇ ವರ್ತಿಸಿತು. ತಾಯಿಯ ಬಲವಂತಕ್ಕೆ ಕಟ್ಟುಬಿದ್ದ ಗೌತಮ ಬುದ್ಧ ಮಹಿಳೆಯರಿಗೆ ಸಂಘ ಸೇರಲು, ಬಿಕ್ಷುನಿಯರಾಗಲು ಒಪ್ಪಿಗೆ ನೀಡಿದ. ಆದರೆ ಎಂಟು ಕರಾರುಗಳನ್ನು ಹಾಕಿ ಒಪ್ಪಿಗೆ ನೀಡಿದ್ದ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಗೌತಮ ಬುದ್ಧನಿಗೂ ಹೆಣ್ಣಿನ ವಿಷಯದಲ್ಲಿ ಭಯ ಕಾಡಿದೆ. ಅದಕ್ಕೆಂದೆ ಹೇಳುತ್ತಾನೆ. 'ಭಿಕ್ಷುಗಳು ಇದ್ದಕಡೆಗೆ ಭಿಕ್ಷುಣಿಯರು ಮಳೆಗಾಲದಲ್ಲಿ ವಾಸಿಸಬಾರದು' ಎಂದು ಕಟ್ಟಪ್ಪಣೆ ಮಾಡುತ್ತಾನೆ. ಮುಂದುವರೆದು ಹೇಳುತ್ತಾನೆ. ಉಚ್ಚಮಟ್ಟದ ದೀಕ್ಷೆಯನ್ನು ಬಹುಹಿಂದೆಯೇ ಪಡೆದ ಭಿಕ್ಷುಣಿಯಾದರೂ ಅದೇ ಆಗ ದೀಕ್ಷೆ ಪಡೆದ 'ಭಿಕ್ಷು'ವೊಬ್ಬ ಬಂದಾಗ ಎದ್ದು ನಿಂತು ನಮಸ್ಕರಿಸಬೇಕು' ಎಂದು ಅಪ್ಪಣೆ ವಿಧಿಸುತ್ತಾನೆ. ಇದು ಏನನ್ನು ತೋರಿಸುತ್ತದೆ ಎಂದರೆ, ಹೆಣ್ಣಿನ ವಯಸ್ಸು, ಬುದ್ಧಿ, ಭಾವ ಬಲಗಳ ಶ್ರೇಷ್ಠತೆಗಿಂತಲೂ, ಗಂಡಾಗಿ ಹುಟ್ಟುವುದೊಂದೇ, ಗಂಡಸಿನ ಯೋಗ್ಯತೆ-ಅರ್ಹತೆ ಆಗಿರುತ್ತದೆ. ಗಂಡಸಿನ ಹುಟ್ಟನ್ನು ಶ್ರೇಷ್ಠವೆಂದು ಭಾವಿಸಿದ ಸಮಾಜದಲ್ಲಿಯೇ, ಬುದ್ಧನಂತಹವರು ಬೆಳೆದಿರುವರು. ಈ ಪುರುಷ ಪ್ರಧಾನ ಸಂಸ್ಕೃತಿಯ 'ಲಿಂಗನೆಲೆ'ಯ ಶ್ರೇಷ್ಠವಾಸನೆ ಎಲ್ಲೋ ಒಂದು ಕಡೆ ಬುದ್ಧನಲ್ಲಿ ಇದ್ದು ಈ ಮಾತುಗಳನ್ನು ಆಡಿಸಿರಬಹುದು. ಇಂತಹ ಪ್ರಸಂಗದಲ್ಲಿ ಬುದ್ಧನ ಕರಾರುಗಳಿಗೆ ಒಪ್ಪಿ ಸಂಘಸೇರಿ, ಭಿಕ್ಷುಣಿಯಾದವರು ತಮ್ಮ ಅನುಭವಗಳನ್ನು ದಾಖಲಿಸಿದ್ದಾರೆ. 'ಬದ್ಧ ಕುಂಡಲ ಕೇಸಾಳಂ'ತಹವರು ಹೆಣ್ಣಿನಶಕ್ತಿ ಯುಕ್ತಿಯ ಬಗ್ಗೆ ಮಾತನಾಡಿದ್ದಾರೆ, ಪುರುಷ ಪ್ರಧಾನ ಸಂಸ್ಕೃತಿಯ ಗರ್ವ ಸೋರಿ ಹೋಗುವಂತೆ. ಪುರುಷನೆ ಜಾಣನೇನಲ್ಲ ಎಲ್ಲ ಕಾಲದೊಳಗೆ, ಹೆಣ್ಣು ಜಾಣೆಯಾಗಿರುತ್ತಾಳೆ-'ತುಸು' ವೇಗದೊಳಗೆ, ಗಂಡೇ ವಿವೇಕಿಯೇನಲ್ಲ, ಎಲ್ಲ ಕಾಲಗಳಲ್ಲಿ ಹೆಣ್ಣು ಹಾಗೆನಿಸುವಳು-ಕ್ಷಣಕಾಲಚಿಂತಿಸಿದಲ್ಲಿ.' (ಥೇರಿ ಗಾಥಾ, ಮಧು ವೆಂಕಾರಡ್ಡಿ)

ಹೆಣ್ಣಿನ ಬುದ್ಧಿವಿಕಾಸ, ದೈಹಿಕ ಬಲವರ್ಧನೆಯನ್ನು, ಈ ಸಮಾಜ ಎಂದೂ ಬಯಸಿಲ್ಲ, ಬುದ್ಧಿಬಲಿತರೆ ಪ್ರಶ್ನಿಸಬಲ್ಲಳು, ದೇಹಬಲಿತರೆ ಪ್ರತಿಭಟಿಸಬಲ್ಲಳು ಎನ್ನುವ ಕಾರಣಕ್ಕಾಗಿ ಅವಳನ್ನು 'ಅಬಲೆ', 'ಕೋಮಲೆ' ಮೃದುವಾದ ಶರೀರದವಳೆನ್ನುತ್ತಾ ಆಕೆಯ ಶಕ್ತಿಯೆನ್ನೆಲ್ಲಾ 'ಹರಣ'ಮಾಡಿದೆ. ಇಂತಹ ಸಮಾಜದಲ್ಲಿ 'ಹೆಣ್ಣು' ತನ್ನ ಸ್ಥಾನ-ಮಾನಗಳನ್ನು ಬದಲಿಸಿಕೊಳ್ಳಬೇಕಾಗಿದೆ. ಆ ನಿಟ್ಟಿನೆಡೆಗೆ

ಆಲೋಚಿಸುವ ವ್ಯಕ್ತಿ ಸಮುದಾಯ ಶಕ್ತಿಗಳು ಹುಟ್ಟಬೇಕಾಗಿವೆ. ಬುದ್ಧಿಯನ್ನು 'ಗುತ್ತಿಗೆ' ಹಿಡಿದ ಪುರುಷ ಪ್ರಧಾನ ಸಮಾಜದಲ್ಲಿ 'ಭದ್ರಾ ಕುಂಡಲ ಕೇಸಾಳ'ಂತಹವರು ಪ್ರಶ್ನಿಸಿದರು ಮತ್ತು ಅವಕಾಶ ಸಿಕ್ಕರೆ ಹೆಣ್ಣು ಪುರುಷನ ಸರಿದೊರೆಯಾಗಬಲ್ಲಳು ಎನ್ನುವುದನ್ನು ಆಡಿಯೂ ತೋರಿಸಿದಳು.

ಒಟ್ಟಿನಲ್ಲಿ ಹೆಣ್ಣಿನ 'ಹಿತ'ವನ್ನು ಗಮನಿಸಿ ಮಾತನಾಡಿದ್ದು ಕಡಿಮೆಯೇ ಎನ್ನಬೇಕು. ಅಂಶಿಕವಾಗಿ ಆ ನಿಟ್ಟಿನಲ್ಲಿ ಪ್ರಯತ್ನಗಳು ಚರಿತ್ರೆಯಲ್ಲಿ ನಡೆದಿವೆ. ಭಾರತೀಯ ಸಂದರ್ಭದಲ್ಲಿ ಧರ್ಮವೇ ಪ್ರಧಾನವಾದ್ದರಿಂದ ಎಲ್ಲರನ್ನು ಅದರ ಮೂಲಕವೇ ನೋಡಲು ಬಯಸುತ್ತೇವೆ. ಹೀಗಾಗಿ ಇಲ್ಲಿ ಒಂದು ಧರ್ಮವನ್ನ ವಿರೋಧಿಸಿ ಇನ್ನೊಂದು ಧರ್ಮ, ಜನ ಮನ್ನಣೆಯನ್ನು ಪಡೆದುಕೊಳ್ಳುವ ಸಲುವಾಗಿ ಹುಡುಕಿಕೊಂಡು ಹೊರಟಿದ್ದು 'ಸ್ತ್ರೀ'ಯರನ್ನು ಮತ್ತು ಅಸಹಾಯಕ ಗಂಡಸರನ್ನು, ಇದೇ ತಂತ್ರಗಾರಿಕೆಯನ್ನು ಬೌದ್ಧಧರ್ಮವೂ ಇಟ್ಟುಕೊಂಡು, ತನ್ನ ಕಾಲದಲ್ಲಿ ಮಹಿಳೆಯರ ಕುರಿತು ಮೃದುಧೋರಣೆಯಿಂದ ನಡೆದುಕೊಂಡಿದೆ.

ನಂತರ ಬಂದ ಜೈನಧರ್ಮ, ಹೆಣ್ಣಿನ ಬಗ್ಗೆ ಅಂತಹ ವಿಶೇಷವಾದದ್ದೇನನ್ನೂ ಮಾಡಲಿಲ್ಲ. ಬೌದ್ಧಧರ್ಮದ ಹಾಗೇ 'ಜೈನಧರ್ಮ'ದಲ್ಲಿಯೂ ಧರ್ಮ ಪ್ರಸಾರ ಕಾರ್ಯದಲ್ಲಿ ಭಾಗವಹಿಸುವ ಅವಕಾಶವನ್ನು ಕಲ್ಪಿಸಿದ್ದೇನೋ ನಿಜ. ಅದಕ್ಕೆಂದೇ 'ಕಂತಿ'ಯರು ಕಾಣಿಸುತ್ತಾರೆ. ಆದರೆ 'ಮೋಕ್ಷ'– ಪಡೆಯಲು ಜೀವ 'ಗಂಡು ಶರೀರ'ವನ್ನು ಪಡೆಯಬೇಕೆಂದು ಒತ್ತಿ ಒತ್ತಿ ಹೇಳುತ್ತದೆ. ಇಂತಹ 'ತಾತ್ವಿಕ ಲಿಂಗ ವಿರೋಧಿ' ನೆಲೆಯ ಧರ್ಮದಿಂದಲೂ ಹೆಣ್ಣಿನ ಸಂಪೂರ್ಣ ಬಿಡುಗಡೆ ಸಾಧ್ಯವಾಗದು. ಉಚ್ಚವರ್ಗದ ಮಹಿಳೆಯರು ಗಂಡ ಸತ್ತ ಮೇಲೆ 'ಸತಿ' ಹೋಗುವದಕ್ಕಿಂತಲೂ ಧಾರ್ಮಿಕ ಕಾರ್ಯದಲ್ಲಿ ಪುರುಷ ಪ್ರಧಾನ ಮೌಲ್ಯಗಳನ್ನು ಎತ್ತಿಹಿಡಿದು, ಬದುಕಿನ ಸಾರ್ಥತೆಯನ್ನು ಪಡೆದುಕೊಳ್ಳಬೇಕೆಂದು ಉದಾರವಾಗಿ ಹೇಳುತ್ತದೆ, 'ವಾರಸುದಾರಿಕೆ'ಯ ಪರಿಶುದ್ಧತೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಂಡೇ ಈ ಕಾಲದಲ್ಲಿ 'ಮಹಿಳೆ'ಯರು ತಮ್ಮ ಕರ್ತವ್ಯವನ್ನು ನಿರ್ವಹಿಸಿರುವರು. ಅಂತಹ ಮಹಿಳೆಯರು ಚರಿತ್ರೆಯಲ್ಲಿ ದಾಖಲಾಗಿರುವರು. 'ಅತ್ತಿಮಬ್ಬೆ'ಯಂತಹ ರಾಜ ಮಹಿಳೆಯರನ್ನು ಮುಂದಿಟ್ಟುಕೊಂಡು ಜೈನಧರ್ಮದ 'ಉದಾರತೆ'ಯನ್ನು ಅಳೆಯುವಾಗ ಚರಿತ್ರೆಯ 'ಗ್ರಹಿಕೆ' ಇರಬೇಕಾಗುತ್ತದೆ. ಅದೇ ರೀತಿ ವಿಶ್ವಧರ್ಮದೆತ್ತರಕ್ಕೆ ಏರಬಲ್ಲ ಶಕ್ತಿ ಪಡೆದ ಲಿಂಗಾಯತಧರ್ಮ ಹೆಣ್ಣನ್ನು ಕಂಡ ಮತ್ತು ಹೆಣ್ಣಿನ ಶಕ್ತಿಯನ್ನು ಸಮಾಜಿಕ ಹೆದ್ದೊರೆಯಲ್ಲಿ ಸೇರಿಸಬಯಸಿದ್ದು ಗಂಭೀರವಾದ ಸಂಗತಿ ಎಂಬುದರಲ್ಲಿ ಎರಡು ಮಾತಿಲ್ಲ.

ಆದರೆ ಕೆಲವು ಸಂದರ್ಭಗಳಲ್ಲಿ ವೈದಿಕ ಧರ್ಮದ 'ಲಿಂಗನೆಲೆ'ಯ ವಿರೋಧಿತನವನ್ನು ಸಂಪೂರ್ಣವಾಗಿ ಮೆಟ್ಟಲು ಸಾಧ್ಯವಾಗಿಲ್ಲ. ಖಾಸಗಿ ಆಸ್ತಿಗೆ ಸೇರಿಸಲ್ಪಟ್ಟ ಹೆಣ್ಣನ್ನು 'ವ್ಯಕ್ತಿನೆಲೆ'ಯಲ್ಲಿ ಸ್ವತಂತ್ರ್ಯಗೊಳಿಸುವ, ಸಾಮಾಜಿಕ ಮನ್ನಣೆಯನ್ನು ತಂದುಕೊಡುವ ನಿಟ್ಟಿನೆಡೆಗೆ ಸರ್ವ ಪ್ರಯತ್ನಗಳು ಯಾವ ಕಾಲದಲ್ಲಿಯೂ ಆಗಿಲ್ಲ. ಎಲ್ಲ ಕಾಲದಲ್ಲಿಯೂ ವೈಚಾರಿಕ ಔನ್ನತ್ಯದಿಂದ ವ್ಯಕ್ತಿನೆಲೆಯ

ಪ್ರಯತ್ನಗಳೇ ಹೆಣ್ಣಿನ ಬಿಡುಗಡೆಯ ಬಗ್ಗೆ ಧ್ವನಿ ಎತ್ತಿವೆ. ಸಾಮಾಜಿಕ ಚಳುವಳಿಯ ರೂಪದಲ್ಲಿ ಆಂದೋಲನದ ರೂಪದಲ್ಲಿ ಯಾವ ಕಾಲದಲ್ಲಿಯೂ ಪ್ರಬಲವಾಗಿ ಕಾಣಿಸಿಕೊಂಡಿಲ್ಲ. ಗಂಡಿನ ಖಾಸಗಿ ಆಸ್ತಿಯ ವಾರಸುದಾರಿಕೆಯನ್ನು ಹೆತ್ತುಕೊಡುವ ಸಲುವಾಗಿ ಕುಟುಂಬದ ಉಗಮದೊಂದಿಗೆ ಬಂಧಿಸಲ್ಪಟ್ಟ ಹೆಣ್ಣಿನ ಅಸ್ತಿತ್ವದ ಬಗ್ಗೆ ಕೆಲವು ಮಹಿಳೆಯರಾದರೂ, ಅತ್ಯಂತ ವೈಜ್ಞಾನಿಕವಾಗಿ ಆಲೋಚನೆ ಮಾಡಿದ್ದು ಚರಿತ್ರೆಯಲ್ಲಿ ಕಾಣಿಸುತ್ತದೆ.

ಧಾರ್ಮಿಕ, ಸಾಮಾಜಿಕ ನೆಲೆಯಲ್ಲಿ ತಮ್ಮ ಬಿಡುಗಡೆಯನ್ನು ದೇವರ ಮಾನವರೂಪದ ದೇವರಾಗಬಹುದಾದ ಗಂಡಿನ ಮೂಲಕವೇ ಆಗಬೇಕೆಂದು ಬಯಸಿದವರೆಲ್ಲ ಬಿಡುಗಡೆ ಹೊಂದಬೇಕಾದ ಮಹಿಳೆಯರು ಮಾನಸಿಕವಾಗಿ ಬಿಡುಗಡೆಗೊಳ್ಳಲು ಸನ್ನದ್ಧತೆಯನ್ನು ಮಾಡಿಕೊಳ್ಳಬೇಕೆಂಬ ಹಂಬಲವು ಅವರಲ್ಲಿತ್ತು. ಜಮೀನ್ದಾರಿ ಸಂಸ್ಕೃತಿಯ ಕ್ರೌರ್ಯತೆಯ ಮೂಲಕ ಹೊರಹೊಮ್ಮಿದ 'ಪಿತೃಸತ್ತೆ'ಯ ಎಲ್ಲಾ ದಬ್ಬಾಳಿಕೆ ದಮನಕಾರ ನೀತಿಯನ್ನು ಮೆಟ್ಟುವ ಸದೃಢ ಮನಸ್ಸಿನ ಬಗ್ಗೆಯೂ ಒತ್ತಿ ಹೇಳುತ್ತಾರೆ.

ಸಾಮಾಜಿಕ ಬಿಡುಗಡೆಯ ಜೊತೆಗೆ ಮಾನಸಿಕವಾಗಿ ಸ್ವಬಿಡುಗಡೆಯ ಕಲ್ಪನೆಯನ್ನು ಹಲವಾರು ಶರಣೆಯರು ತಮ್ಮ ವಚನಗಳ ಮೂಲಕ ಹೇಳಿರುವುದನ್ನು ನೋಡಬಹುದು. ಹಸಿದವರಿಗೆ ಮಾತ್ರ ಅನ್ನ ರುಚಿಸಬಲ್ಲದು ಮತ್ತು ಅರಗಿ ರಕ್ತವಾಗಬಲ್ಲದು ಎಂಬುದರ ವಾಸ್ತವದ ಅರಿವು ಅಮುಗೆ ರಾಯಮ್ಮನಂಥವರಿಗೆ ಇರುವುದರಿಂದಲೇ ಪಿತೃ ಪ್ರಾಧಾನ್ಯತೆ ಸ್ವಘೋಷಿತ, ಆರೋಪಿತ ದಾಸ್ಯತ್ವದಿಂದ ಬಿಡುಗಡೆಗೊಳ್ಳುವುದು ಅತ್ಯಂತ ತುರ್ತಿನ ವಿಚಾರವೆಂದು ಸಾರಿ ಸಾರಿ ಹೇಳುತ್ತಾರೆ. ಬಂಧನದ ಗಿಳಿ ಬಿಡುಗಡೆ ಬಯಸದಿದ್ದರೆ ಪಂಜರದ ಬಾಗಿಲು ತೆರದಿದ್ದರೂ ವ್ಯರ್ಥವೆನ್ನುವ ಭಾವ ಎಲ್ಲ ಕಾಲದ ಪ್ರಜ್ಞಾವಂತರಿಗಿದೆ. ಅದಕ್ಕೆಂದೇ ಅಮುಗೆ ರಾಯಮ್ಮ–

'ಎನ್ನ ಕಣ್ಣೊಳಗಣ ಕಟ್ಟಿಗೆಯ ಮುರಿಯುವವರನಾರನೂ ಕಾಣೆ
ಎನ್ನ ಕಾಲೊಳಗಣ ಮುಳ್ಳ ತೆಗೆಯುವವನಾರನೂ ಕಾಣೆ
ಎನ್ನ ಅಂಗದಲ್ಲಿದ್ದ ಅಹಂಕಾರವ ಸುಡುವವನಾರನೂ ಕಾಣೆ
ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚವ
ಕೆಡಿಸುವವನಾರನೂ ಕಾಣೆನಯ್ಯಾ
ಆದ್ಯರ, ವೇದ್ಯರ, ವಚನಂಗಳಿಂದ
ಅರಿದೆಯೆಂಬುವರು ಅರಿಯಲಾರರು ನೋಡಾ
ಎನ್ನ ಕಣ್ಣೊಳಗಣ ಕಟ್ಟಿಗೆಯ ನಾನೇ ಮುರಿಯಬೇಕು.
ಎನ್ನ ಕಾಲೊಳಗಣ ಮುಳ್ಳ ನಾನೇ ತೆಗೆಯಬೇಕು.
ಎನ್ನ ಅಂಗದಲ್ಲಿಪ್ಪ ಅಹಂಕಾರವ ನಾನೇ ಸುಡಬೇಕು.

ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚವ ನಾನೇ ಕಳೆಯಬೇಕು.

ಅಮುಗೇಶ್ವರ ಲಿಂಗವ ನಾನೇ ಅರಿಯಬೇಕು'

(ಶಿ.ವ.ಸಂ. ಪು.೧೭೩, ವ. ೫೩೩)

ಯಜಮಾನ ಸಂಸ್ಕೃತಿಯ ಎಲ್ಲ ವಸ್ತುವಿಷಯಗಳನ್ನು ಮಾನಸಿಕವಾಗಿ ಕಿತ್ತೊಗೆದು ವ್ಯಕ್ತಿನೆಲೆಯ ಆತ್ಮಗೌರವ ಬೌದ್ಧಿಕ ಸಾಮರ್ಥ್ಯ ಹೊಂದಿದಾಗ ಮಾತ್ರ ನಿಜವಾದ ಅರ್ಥದ, ಸ್ವಾತಂತ್ರ್ಯ ಸಮಾನತೆಯನ್ನು ಕಂಡುಕೊಳ್ಳಲು ಸಾಧ್ಯವೆನ್ನುವುದರ ಬಗ್ಗೆ ಸಾಮಾನ್ಯ ವಚನಕಾರ್ತಿಯರು ವಾಸ್ತವ, ವೈಚಾರಿಕ ಹಿನ್ನಲೆಯಲ್ಲಿ ವಚನ ಚಳುವಳಿಯ ಭಾಗವಾಗಿಯೇ ಮಾತನಾಡಿದ್ದಾರೆ. ಅಂದು ನಡೆದ ಮಹಿಳಾ ವಿಮೋಚನೆಯ ಚಳುವಳಿಯ ಮುಂದುವರಿಕೆಯಾಗಿ ಆಧುನಿಕ ಕಾಲದಲ್ಲಿಯೂ ಹಲವಾರು ವ್ಯಕ್ತಿಗಳು ರಾಷ್ಟ್ರೀಯ ಆಂದೋಲನದ ಒಂದು ಭಾಗವಾಗಿ ಸ್ತ್ರೀ ವಿಮೋಚನೆಯನ್ನು ಕೈಗೆತ್ತಿಕೊಂಡರು. ರಾಜಾರಾಮ್ ಮೋಹನ್‌ರಾಯ್, ಕರ್ವೆ, ಪರಿಯಾರ್, ಬ್ರಹ್ಮಸಮಾಜ, ಆರ್ಯಸಮಾಜಗಳು ಈ ನಿಟ್ಟಿನಲ್ಲಿ ಕಾರ್ಯ ಮಾಡಿರುವುದನ್ನು ಗಮನಿಸಬಹುದು. ಸತಿ ಪದ್ಧತಿಯಂತಹ ಅಮಾನವೀಯವಾದ ಸಂಪ್ರದಾಯಗಳನ್ನು ಬ್ರಿಟೀಷ ಅಧಿಕಾರಿಗಳ ಒತ್ತಾಸೆಯನ್ನು ಪಡೆದುಕೊಂಡೇ ರಾಜಾರಾಮ್ ಮೋಹನರಾಯರು ಕಾಯಿದೆ ಬದ್ಧವಾಗಿ ಈ ಅನಿಷ್ಠವನ್ನು ತಡೆಗಟ್ಟಲು ಪ್ರಯತ್ನಿಸಿದರು. ಎಲ್ಲಾ ಕಾಲದಲ್ಲಿಯೂ ಆಡಳಿತ ಯಂತ್ರದ ಮೂಲಕ ಹೊರಹೊಮ್ಮಿದ ಕಾಯಿದೆ ಕಾನೂನುಗಳಿಗೆ ಜನಮನ್ನಣೆ, ಸಾಮಾಜಿಕ ಮನ್ನಣೆ ಸಿಗದಿರುವುದರಿಂದಲೇ ನಮ್ಮೆಲ್ಲ ಸಮಾಜ ಸುಧಾರಕರ ಪ್ರಯತ್ನ ಫಲಕಾರಿಯಾಗಿಲ್ಲ. ಕೂಡಿ ಬದುಕುವ ಮನುಷ್ಯ ವೈಯಕ್ತಿಕ ಸ್ವಾರ್ಥದ ನೆಲೆಯಲ್ಲಿ ಹುಟ್ಟಿಸಿಕೊಂಡ ಪದ್ಧತಿ, ಆಚರಣೆಗಳನ್ನು ಸಾಮಾಜಿಕ ನಿಯಂತ್ರಣ ಶಾಸನೋಪಾದಿಯಲ್ಲಿಯೇ ಬೆಳೆಸಿಕೊಂಡು ಬಂದಿರುವದರಿಂದ ಹಿಂದುತ್ವದ ಅಮಲಿನಲ್ಲಿ ಇರುವ ಜನರ ಕೈಯಲ್ಲಿ ಜೀವ ವಿರೋಧಿತನ ಇರುತ್ತದೆ. ಹೀಗಾಗಿಯೇ ಕಾಯಿದೆಯ ಮೂಲಕ ತಡೆಗಟ್ಟಿದ ಸತಿ ಪದ್ಧತಿಯನ್ನು ಜನಸಹಿಷ್ಣುತೆಯ ಮೂಲಕ ತಡೆಗಟ್ಟಲು ಸಾಧ್ಯವಾಗದೇ ಇರುವುದರಿಂದ 'ರೂಪಕನ್ವಾರ್‌ಳ' ಪ್ರಸಂಗ ಕಾಣಿಸಿಕೊಂಡಿದ್ದು ಲಿಂಗನೆಲೆಯ ಕ್ರೌರ್ಯ ಎಷ್ಟೊಂದು ಆಗಾಧವಾಗಿ ಬೆಳೆದಿದೆ ಎಂದರೆ ಲಿಂಗ ನಿರ್ಧಾರದ ಯಂತ್ರದ ಮೂಲಕ ಹೆಣ್ಣು ಭ್ರೂಣವನ್ನು ಕೊಲ್ಲುವ ಹಂತಕ್ಕೆ ಬಂದು ನಿಂತಿದೆ. ವಿಜ್ಞಾನ ಮನುಷ್ಯನ ಬದುಕಿನೊಳಗೆ ಬೆಳಕಾಗಬೇಕಿತ್ತು. ಆದರೆ ಇಂದು ಬಲಿಷ್ಠ ವ್ಯಕ್ತಿಯ ಕೈಯಲ್ಲಿ ಉರಿಯುವ ಕೊಳ್ಳಿಯಾಗಿದೆ.

ಆರ್ಯ ಸಮಾಜ ಬ್ರಹ್ಮಸಮಾಜಗಳು ಈ ಸಮಾಜದಲ್ಲಿ ಹೊತ್ತಿ ಉರಿಯುತ್ತಿದ್ದ ಹಲವು ಸಾಮಾಜಿಕ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಜನಪರವಾದ ದಿಕ್ಕಿನೆಡೆಗೆ ಹೆಜ್ಜೆ ಹಾಕಿರುವುದನ್ನು ಕಾಣಬಹುದು. ಬಾಲ್ಯ ವಿವಾಹ, ವಿಧವಾ ವಿವಾಹ, ಸ್ತ್ರೀ ವಿಧ್ಯಾಭ್ಯಾಸದ ಬಗ್ಗೆ ಜನರಲ್ಲಿ ಅರಿವನ್ನು ತುಂಬುವಂತಹ ಮಹತ್ಕಾರ್ಯವನ್ನು ಸಮಾಜ ಸುಧಾರಕರು ರಾಷ್ಟ್ರೀಯ ನಾಯಕರುಗಳು

ಕೈಗೆತ್ತಿಕೊಂಡರು. ಜ್ಯೋತಿ ಬಾ ಫುಲೆ, ಈಶ್ವರ ಚಂದ್ರ ವಿದ್ಯಾಸಾಗರ, ಗಾಂಧಿ, ಮುಂತಾದ ಮಹನೀಯರು ಸ್ತ್ರೀ ಸಮಸ್ಯೆಗಳ ಕುರಿತು ಜನಾಭಿಪ್ರಾಯ ರೂಪಿಸುವದರ ಕಡೆಗೆ ದುಡಿದವರು ವರದಕ್ಷಿಣೆ ದೇವದಾಸಿ ಪದ್ಧತಿಯಂತಹ ಅಮಾನುಷ ಪದ್ಧತಿಗಳು ಈ ಸಮಾಜದಲ್ಲಿ ವಿರಾಟ ರೂಪದಲ್ಲಿ ಬೆಳದಿರುವಾಗ ಇವುಗಳನ್ನು ನಿರ್ಮೂಲನೆ ಮಾಡಲು ಬಿರುಗಾಳಿಯ ಚಳುವಳಿಗಳೇ ನಡೆಯಬೇಕಾಗಿದೆ.

"ಕನ್ನಡವು ಒಂದು ಪ್ರಬುದ್ಧವಾದ ಸಮೃದ್ಧವಾದ ಪ್ರಾಚೀನ ಭಾಷೆಯಾಗಿದೆ. ಆಗಾಧವಾದ ಸಾಹಿತ್ಯ ಭಂಡಾರ ಕನ್ನಡದಲ್ಲಿದೆ, ಹಳಗನ್ನಡ, ನಡಗನ್ನಡ ಹೊಸಗನ್ನಡ ನವ್ಯ ನವ್ಯೋತ್ತರ ಬಂಡಾಯ ಹೀಗೆ ಕಾಲಕಾಲಕ್ಕೆ ಬದಲಾವಣೆ ಹೊಂದುತ್ತ ತನ್ನ ಸಾಹಿತ್ಯ ಶ್ರೀಮಂತಿಕೆಯನ್ನು ಮರೆಯುತ್ತ ಬಂದಿದೆ. ಒಂದು ಪಟ್ಟಭದ್ರ ವ್ಯವಸ್ಥೆಯ ವಿರುದ್ಧ ಪ್ರತಿಭಟನಾ ರೂಪವಾಗಿ ಹೊರಹೊಮ್ಮಿದ ಸಾಹಿತ್ಯ ಪ್ರಕಾರವೇ ಬಂಡಾಯ ಸಾಹಿತ್ಯವೆನಿಸಿದೆ. ಬಂಡಾಯ ಸಾಹಿತ್ಯವು ೨೦ನೆಯ ಶತಮಾನದಲ್ಲಿ ಹುಟ್ಟಿತೆಂದು ಕವಿಚರಿತೆಕಾರರು ಹೇಳುತ್ತಾರೆ. ಆದರೆ ೧೨ನೆಯ ಶತಮಾನದಲ್ಲೇ ಮಹಾಮಾನವತಾವಾದಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಮಾಜೋಧಾರ್ಮಿಕ ಆಂದೋಲನದ ಕಾಲಕ್ಕೆ ಈ ಬಂಡಾಯ ಸಾಹಿತ್ಯ ಹುಟ್ಟಿಕೊಂಡಿರುವುದನ್ನು ನಾವು ಕಾಣುತ್ತೇವೆ. ವಚನಗಳ ರೂಪದಲ್ಲಿ ಹೊರಹೊಮ್ಮಿದ ಈ ಸಾಹಿತ್ಯಕ್ಕೆ ಶಿವಶರಣೆಯರ ಕೊಡುಗೆ ವೈಶಿಷ್ಟ್ಯಪೂರ್ಣವಾಗಿದೆ"೫. ಸ್ತ್ರೀ ಪುರುಷನ ಭೇದದಷ್ಟೇ ಆರ್ಥಿಕ ಸಮಾನತೆಯೂ ಆಳದಾಗಿದೆ. ಶ್ರೀಮಂತರು ವೈಯಕ್ತಿಕ ಆಸ್ತಿಯ ಒಡೆತನದಿಂದಾಗಿ-ಹೆಚ್ಚು ಹೆಚ್ಚು ಶ್ರೀಮಂತರಾಗುತ್ತಿದ್ದಾರೆ ಮತ್ತು ಬಡವರ ಎದುರಿಗೆ ತಮ್ಮ ಶ್ರೀಮಂತಿಕೆಯ ಅನೈತಿಕ ಪ್ರದರ್ಶನ ಮಾಡುತ್ತಿದ್ದಾರೆ. ಗರಿಷ್ಠ ಆಸ್ತಿಯ ಮೇಲೆ ನಿರ್ಬಂಧ ಹೇರುವುದು, ವ್ಯಕ್ತಿ ವ್ಯಕ್ತಿಗಳ ಗಳಿಕೆಯಲ್ಲಿ ಅಂತರ ಕಡಿಮೆ ಮಾಡುವುದು-ಈ ಎರಡು ಉಪಾಯಗಳಿಂದ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಬಹುದು. ಇಂದು ಹೊಲದಲ್ಲಿ ದುಡಿಯುವ ರೈತನಿಗೆ, ಪ್ಯಾಕ್ಟರಿಯಲ್ಲಿ ದುಡಿಯುವ ಕಾರ್ಮಿಕನಿಗೆ ಅತ್ಯಂತ ಕಡಿಮೆ ಕೂಲಿ ದೊರೆಯುತ್ತದೆ. ಒಂದಿಷ್ಟೂ ದೈಹಿಕ ಶ್ರಮ ಮಾಡದಿರುವ ನೌಕರಶಾಹಿ ವರ್ಗಕ್ಕೆ ಮಿತಿ ಮೀರಿದ ಸಂಬಳ ದೊರೆಯುತ್ತಿದೆ. ಅದಕ್ಕಾಗಿ ಗರಿಷ್ಠ ಕನಿಷ್ಠ ಸಂಬಳಗಳಲ್ಲಿ ಅಂತರ ಕಡಿಮೆ ಮಾಡಬೇಕು. ಶಾರೀರಿಕ ಶ್ರಮದ ಕುರಿತ ತಾತ್ಸಾರ ಕಡಿಮೆಯಾಗಿ ಎಲ್ಲ ವೃತ್ತಿಗಳೂ ಸಮಾನವೆನ್ನುವ ತತ್ತ್ವ ಬೇರುರಬೇಕು. ಇಂದಿನ ನಮ್ಮ ಸಮಾಜದಲ್ಲಿ ಬೇರೂರಿದ ದೈವವಾದ ಮಾಯವಾಗಿ, ಪೌರುಷವಾದ ಹುಟ್ಟಿದಾಗ ಮಾತ್ರ ನಮ್ಮ ದೇಶದ ಬಡತನ ಮಾಯವಾಗುತ್ತದೆ.

ಭಾರತದಲ್ಲಿ ವರ್ಗಭೇದಕ್ಕಿಂತ ವರ್ಣಭೇದ ಹೆಚ್ಚು ಕ್ರೂರವಾಗಿದೆ. ಶತ ಶತಮಾನಗಳಿಂದ ಉಚ್ಚ ಜಾತಿಯ ಜನ, ನೀಚ ಜಾತಿಯ ಜನರನ್ನು ಅವಮಾನದ ರಸಾತಳಕ್ಕೆ ಇಳಿಸುತ್ತಿದ್ದಾರೆ. ತಾವುಹುಟ್ಟಿದ್ದು ಸೇವೆ ಮಾಡಿಸಿಕೊಳ್ಳುವುದಕ್ಕಾಗಿ, ಅಸ್ಪಶ್ಯರು ಹುಟ್ಟಿದ್ದು ಸೇವೆಮಾಡುವುದಕ್ಕಾಗಿ ಎಂದು ಶಾಸ್ತ್ರ-ಪುರಾಣಗಳ ಸೃಷ್ಟಿ ಮಾಡಿ ಅವರನ್ನು ತುಳಿಯುತ್ತ ಬಂದಿದ್ದಾರೆ. ಆದರೆ ಕಾಲಕಾಲಕ್ಕೆ ಬುದ್ಧ, ಬಸವ, ಗಾಂಧಿ, ಅಂಬೇಡ್ಕರರು ನಮ್ಮ ದೇಶಕ್ಕಂಟಿದ ಕಲಂಕವಾದಿ ಜಾತೀಯ ಅಸಮಾನತೆಯನ್ನು ಹೋಗಲಾಡಿಸಲು ಅಖಂಡ ಹೋರಾಟ ನಡೆಸಿದುದರ ಪರಿಣಾಮವಾಗಿ ಉಚ್ಚ ನೀಚ ಜಾತಿಗಳ

ನಡುವಿನ ಅಂತರ ಕಡಿಮೆಯಾಗಿದೆ. ಅದರೆ ಜಾತೀಯತೆಯ ಕಲ್ಮಷ ಸಂಪೂರ್ಣನಾಶವಾಗಿಲ್ಲ. ಕೀಳುಕುಲದವರಿಗೆ ವಿದ್ಯಾಭ್ಯಾಸ ಸೌಲಭ್ಯ ನೌಕರಿ ಹುದ್ದೆಗಳಲ್ಲಿ ಮೀಸಲಾತಿ, ಅಂತರ್ಜಾತಿ ವಿವಾಹವಾದವರಿಗೆ ನೌಕರಿಗಳಲ್ಲಿ ಆದ್ಯತೆ ಒದಗಿಸಿದರೆ ಜಾತಿ ಜಾತಿಗಳ ನಡುವಿನ ವೈಷಮ್ಯ ಮಾಯವಾಗಬಹುದು.

ಸಾಕ್ಷರರ ಹಾಗೂ ನಿರಕ್ಷರಿಗಳ ನಡುವಿನ ಅಸಮಾನತೆ ಸಾಂಸ್ಕೃತಿಕ ಅಸಮಾನತೆಯಾಗಿದೆ. ಸಂಪೂರ್ಣ ಸಾಕ್ಷರತಾ ಯೋಜನೆಯ ಅನುಷ್ಠಾನದ ಮೂಲಕ ಸಾಂಸ್ಕೃತಿಕ ಅಸಮಾನತೆಯನ್ನು ನಿವಾರಿಸಬಹುದಾಗಿದೆ.

ವೈಚಾರಿಕ ವಿಚಾರದಲ್ಲಿ ಎಲ್ಲ ಪ್ರಾಣಿಗಳಲ್ಲಿಯೂ ಮಾನವ ಪ್ರಾಣಿಯೇ ಶ್ರೇಷ್ಠನೆನಿಸಿದ್ದಾನೆ. ಮತಿಯೇ ಅವನನ್ನು ಎಲ್ಲ ಪ್ರಾಣಿಗಳಿಂದ ಬೇರ್ಪಡಿಸಿ ನಿಲ್ಲಿಸಿದೆ. ಮತಿಯ ಶಕ್ತಿಯಿಂದಲೇ ಮನುಷ್ಯನಿಂದು ಪ್ರಕೃತಿಯ ಮೇಲೆ ತನ್ನ ಪ್ರಭುತ್ವ ಸಾಧಿಸುತ್ತ ನಡೆದಿದ್ದಾನೆ. ಮತಿಯ ನೆರವಿನಿಂದ ಅವನಿಂದು ಕುಟುಂಬ, ಸಮಾಜ, ನಾಡು, ದೇಶಗಳೆಂಬ ಸಂಸ್ಥೆಗಳನ್ನು ರಚಿಸಿಕೊಂಡು ನಾಗರಿಕತೆಯ ಜೀವನವನ್ನು ನಡೆಸುತ್ತಿದ್ದಾನೆ. ಆದರೆ ಮಾನವ ಮತಿ ಹಲವು ಸಂಕೋಲೆಗಳಿಂದ ಬಂಧಿಸಲ್ಪಟ್ಟಿದೆ. ಆ ಸಂಕೋಲೆಗಳಲ್ಲಿ ಬಹು ಮುಖ್ಯವಾದುದು ಧರ್ಮ, ಧರ್ಮವು ತನ್ನಷ್ಟಕ್ಕೆ ತಾನು ಜೀವನ ವಿರೋಧಿಯಲ್ಲ. ಅದು ಉನ್ನತ ಜೀವನದ ಮಾರ್ಗವಾಗಿದೆ. ಹೊಸ ಧರ್ಮವೊಂದು ಉದಯವಾದಾಗ ಅದು ಒಳ್ಳೆಯದನ್ನು ನೊಡು, ಒಳ್ಳೆಯದನ್ನೇ ಮಾಡು, ಒಳ್ಳೆಯವನೇ ಆಗಿರು ಎಂದು ಬೋಧಿಸುತ್ತದೆ. ಅದು ಯಾವಾಗಲೂ ಕರುಣೆಯನ್ನು ಸಾರುತ್ತ ಮಾನವ ಪ್ರೇಮವನ್ನು ಹರಡುತ್ತದೆ

"ಶರಣರ ಮಾತುಗಳು ಅನೇಕ ಸಂದರ್ಭಗಳಲ್ಲಿ, ಕಾಲ, ದೇಶ, ಭಾಷೆಗಳಿಗೆ ಅತೀತವಾದ ಅನಂತಸತ್ಯವನ್ನು 'ಸಾಂತ'ವಾದ ಭಾಷೆಯಲ್ಲಿ ಹಿಡಿದಿಡುವುದರಲ್ಲಿ ತೊಡಗಿದೆ. ನಮ್ಮ ಸಾಮಾನ್ಯ ಮರ್ತ್ಯಪ್ರಜ್ಞೆಗೆ ಮೀರಿದ ಅಮರ್ತ್ಯ ಅನುಭವವನ್ನು ಮರ್ತ್ಯಭಾಷೆಯಲ್ಲಿ ಹಿಡಿದಿಡುವ ಪ್ರಯತ್ನ ಕಾವ್ಯವಾಗುವುದಾದರೆ ಅಂತಹ ಕಾವ್ಯಾಂಶದಿಂದ ಶ್ರೀಮಂತವಾಗಿದೆ ಶರಣರ ವಚನಸಾಹಿತ್ಯ. ಲಿಂಗಾಂಗ ಸಾಮರಸ್ಯದ ಕೊನೆಯ ನಿಲವನ್ನು ಕುರಿತು ಹೇಳುವ ಅಲ್ಲಮನ ಮಾತುಗಳಾಗಲೀ, ಬಸವೇಶ್ವರನ ಭಕ್ತಿಭಂಡಾರವನ್ನಾಗಲೀ, ಅಕ್ಕಮಹಾದೇವಿಯ ಸತಿಪತಿ ಭಾವದ ಮಧುರ ವಚನಗಳನ್ನಾಗಲೀ, ಈ ಸಮಯದಲ್ಲಿ ಜ್ಞಾಪಿಸಿಕೊಳ್ಳಬಹುದು"೬

ಆದರೆ ಕಾಲ ಗತಿಸಿದಂತೆ ಧರ್ಮದಲ್ಲಿ ಕೆಲ ಅನಿಷ್ಟ ಅಂಶಗಳು ಸೇರಿಬಿಡುತ್ತವೆ. ಯಾವುದೇ ಧರ್ಮದಲ್ಲಿ ಸೇರ್ಪಡೆಯಾದ ಮೊದಲನೇ ಅನಿಷ್ಟವೆಂದರೆ ಆ ಮತಕ್ಕೆ ಸೇರಿದ ಅನುಯಾಯಿಗಳು ತಮ್ಮ ಮತಕ್ಕೆ ತೋರುವ ಮಿತಿಮೀರಿದ ಅಭಿಮಾನ. ಜಗತ್ತಿನ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾದ ಬರ್ಟ್ರೆಂಡ್ ರಸ್ಸೆಲ್ ಹೇಳುವುದೇನೆಂದರೆ-ಯಾವುದೊಂದು ಮತವೂ ಇನ್ನೊಂದು ಮತಕ್ಕಿಂತ ಶ್ರೇಷ್ಠವಿರಲಾರದು. ಇದನ್ನು ಎಲ್ಲ ಬುದ್ಧಿವಂತರೂ ಒಪ್ಪಬೇಕು. ಆದರೆ ತನ್ನ ಮತದ ಮೇಲಿನ ಕುರುಡು ಅಭಿಮಾನದಿಂದ ಮನುಷ್ಯ ಅದನ್ನು ಒಪ್ಪಿಕೊಳ್ಳುವುದಿಲ್ಲ. ತನ್ನ ಧರ್ಮ ಬಗ್ಗೆ ಪ್ರೀತಿ

ಇರಲಿ; ಆದರೆ ಆ ಪ್ರೀತಿ ಪರಧರ್ಮ ದ್ವೇಷಕ್ಕೆ ದಾರಿ ಮಾಡಿಕೊಡಬಾರದು. ಈ ಕುರುಡು ಪರಧರ್ಮ ದ್ವೇಷವೇ ಮೂಲಭೂತವಾದದಲ್ಲಿ ಪರಿವರ್ತವಾಗುವ ಭಯವಿದೆ. ಅದಕ್ಕಾಗಿ ಮೊಟ್ಟ ಮೊದಲು ನಮ್ಮ ಮತಿಯನ್ನು ಸ್ವಮತದ ಕುರಿತ ನಮ್ಮ ಕೆಟ್ಟ ಅಭಿಮಾನದಿಂದ ರಕ್ಷಿಸಿಕೊಳ್ಳಬೇಕು.

ಎರಡನೆಯದಾಗಿ ನಮ್ಮಲ್ಲಿ ಅನೇಕ ಮತ ಪಂಗಡಗಳಿದ್ದುದರಿಂದ ಅಷ್ಟೇ ಸಂಖ್ಯೆಯಲ್ಲಿ ದೇವರುಗಳನ್ನು ಸೃಷ್ಟಿಸಿದ್ದೇವೆ. ನಮ್ಮ ಕಲ್ಪನೆಗೆ ತಕ್ಕಂತೆ ನಾವು ದೇವರಿಗೆ ಭಿನ್ನಭಿನ್ನವಾದ ರೂಪ ಕೊಡುತ್ತಲೇ ಬಂದಿದ್ದೇವೆ. ಕಲ್ಲಿನ ದೇವರು, ಮಣ್ಣಿನ ದೇವರು, ಲೋಹದ ದೇವರು, ಅರಗಿನ ದೇವರುಗಳ ಸೃಷ್ಟಿಮಾಡುತ್ತ ಅವುಗಳನ್ನು ಪೂಜಿಸುತ್ತಲೇ ಬಂದಿದ್ದೇವೆ. ನಮ್ಮ ಭಕ್ತಿ, ಭಯದಿಂದ ಹುಟ್ಟಿದ್ದೇ ವಿನಃ ಅರಿವಿನಿಂದ ಹುಟ್ಟಿದ್ದಲ್ಲ. ಈ ದೇವರನ್ನು ನಾವು ನಮ್ಮ ಮನೆಗಳಲ್ಲಿ ಹೇಗಾದರೂ ಪೂಜಿಸಲಿ, ಎಂತಾದರೂ ಪೂಜಿಸಲಿ, ಅದಕ್ಕೆ ಯಾರದೇನೂ ಆಕ್ಷೇಪವಿರದು. ಆದರೆ ಈ ದೇವರುಗಳನ್ನು ನಮ್ಮ ಧರ್ಮದ ಸ್ಥಾಪಕರ ಮೂರ್ತಿಗಳನ್ನು ಪ್ರತಿ ಓಣಿ, ಗಲ್ಲಿಗಳಲ್ಲಿ ನಿಲ್ಲಿಸಿ ಅವುಗಳಿಗೆ ಸ್ವಲ್ಪ ಧಕ್ಕೆ ತಗುಲಿದರೆ ಪ್ರತಿಭಟನೆ ಮಾಡಿಬಿಡುತ್ತೇವೆ. ಹಾಗೆ ಪ್ರತಿಭಟನೆ ಪ್ರಾರಂಭವಾದಾಗ ಸಮಾಜ ದ್ರೋಹಿಗಳು ಪ್ರವೇಶಮಾಡಿ ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಲೂಟಿ ಮಾಡುವುದನ್ನು ಪ್ರಾರಂಭಿಸುತ್ತಾರೆ. ಈಗ ದೇಶದಲ್ಲಿ ನಡೆದಿರುವ ಎಲ್ಲ ಮತೀಯ ಗಲಭೆಗಳ ಮೂಲ ಓಣಿ ಗಲ್ಲಿಗಳಲ್ಲಿ ನಿಲ್ಲಿಸಿರುವ ಮೂರ್ತಿಗಳೇ ಕಾರಣವೆಂದರೆ ತಪ್ಪಾಗಲಿಕ್ಕಿಲ್ಲ. ಇಂತಹ ಮೂರ್ತಿ ಸಂಸ್ಕೃತಿಗೆ ನಾವು ಒಂದಿಷ್ಟು ಕಡಿವಾಣ ಹಾಕಬೇಕಾಗಿದೆ.

ಇನ್ನು ಮೂರನೆಯಯದಾಗಿ ಅನ್ಯಮತದ ಬಗೆಗಿರುವ ಮತ ಸಹಿಷ್ಣುತೆಯೇ ಶ್ರೇಷ್ಠ ಸಂಸ್ಕೃತಿಯ ಸಂಕೇತವಾಗಿದೆ. ನಮ್ಮ ಧರ್ಮಗಳನ್ನು ಪ್ರೀತಿಸುವುದರ ಜೊತೆಗೆ ಅನ್ಯರ ಧರ್ಮವನ್ನು ಪ್ರೀತಿಸುವುದು ಬೇಡ, ಕನಿಷ್ಠ ಅದರ ಬಗ್ಗೆ ಸಹನೆ ಗುಣವನ್ನಾದರು ಬೆಳೆಸಿಕೊಳ್ಳುವದು ಅವಶ್ಯವಾಗಿದೆ.

"ವಚನಗಳ ಕಾಲದ ಸಾಮಾಜಿಕ ಅಧ್ಯಯನವನ್ನು ಈ ಅಧ್ಯಾಯದಲ್ಲಿ ಕೆಲವು ವಿಭಾಗಗಳಲ್ಲಿ ಕೈಗೊಂಡಿದ್ದೇವೆ; ಜಾತಿಗಳು, ಸ್ತ್ರೀಯರ ಸ್ಥಾನ, ಸಂಸ್ಕಾರಗಳು, ಗುಲಾಮ ಪದ್ಧತಿ, ಅಂಧಶ್ರದ್ಧೆಗಳು ಮತ್ತು ವಚನಕಾರರ ಆದರ್ಶ ಸಮಾಜದ ಕಲ್ಪನೆಗಳ ಬಗ್ಗೆ ನಮ್ಮ ಸಮಾಜ ವ್ಯವಸ್ಥೆಯ ಬಹುಮುಖ್ಯ ಅಂಶವಾದ ಜಾತಿಗಳ ಬಗ್ಗೆ ನಮ್ಮ ಚರ್ಚೆಯು ಸ್ವಲ್ಪ ವಿಸ್ತಾರವಾಗಿಯೇ ಇರುವುದನ್ನು ಗಮನಿಸಬಹುದು. ಇದಕ್ಕೆ ಕಾರಣ ವಚನಗಳಲ್ಲಿ ಈ ವಿಷಯದ ಬಗ್ಗೆ ದೊರೆಯುವ ಸಾಮಗ್ರಿಯ ವೈಪುಲ್ಯದ ಜೊತೆಗೆ, ಜಾತಿಪದ್ಧತಿಯ ವಿಕಾಸಕ್ರಮವನ್ನು ಗುರುತಿಸುವುದಲ್ಲದೆ, ಶರಣರು ಜಾತಿಪದ್ಧತಿಯ ಬಗ್ಗೆ ತೋರಿಸಿದ ಮನೋಭಾವದ ವಿವರಣೆಯಿತ್ತಿರುವುದು ಸಹ ಕಾರಣವಾಗಿದೆ"[೭]. ಯಾವುದೇ ಧರ್ಮ ಕಾಲಕ್ರಮೇಣ ಒಂದು ಜಡ ವ್ಯವಸ್ಥೆಯಾಗಿ ಪರಿವರ್ತಿತವಾಗುತ್ತದೆ. ಆ ಜಡ ವ್ಯವಸ್ಥೆಯಲ್ಲಿ ಶುಷ್ಕ ಸಂಪ್ರದಾಯಗಳದ್ದೇ ಒಂದು ಮೇಲುಗೈ. ಆ ಸಂಪ್ರದಾಯಗಳಿಗೆ ಕಟ್ಟು ಬಿದ್ದೇ ನಾವಿಂದು ಹಿಂದುಳಿದಿದ್ದೇವೆ. ನಮ್ಮ ಮತಿಯನ್ನು ಮತಾಭಿಮಾನದಿಂದ ಶುಷ್ಕ ಸಂಪ್ರದಾಯಗಳಿಂದ ಕುರುಡು ಕಂದಾಚಾರಗಳಿಂದ ಮುಕ್ತ ಮಾಡಿದಾಗಲೇ ಅದು ಪ್ರಜ್ವಲಿಸುತ್ತದೆ. ಅಲ್ಲಿ ವೈಚಾರಿಕತೆ ಮೂಡುತ್ತದೆ. ಆ ವೈಚಾರಿಕತೆಯ ಬೆಳಕಿನಲೇ ನಮ್ಮ ಜೀವನ ಸುಸಂಬದ್ಧವೂ, ಉಪಯುಕ್ತವೂ ಆಗುವುದರಲ್ಲಿ ಸಂದೇಹವಿಲ್ಲ.

ಅದಕ್ಕಾಗಿ ಬಸವಣ್ಣನವರು ಅಂದು ಸೂಚಿಸಿದಂತೆ ದೇವಾಲಯದ ಬದಲಾಗಿ ನಮ್ಮ ಕಾಲೆಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವೆಂದು ತಿಳಿಯುವ ಕಾಲ ಇದೀಗ ಬಂದಿದೆ. ಈಗ ದೇವಾಲಯಕ್ಕೆ ಹೋಗಿ ಪೂಜಿಸುವ ಬದಲಾಗಿ ನಮ್ಮ ಅಂತರಂಗ ಪರೀಕ್ಷೆಗೆ ತೊಡಗಿದ್ದೇ ಆದರೆ ಆಗ ಅದು ದೇವಾಲಯಕ್ಕೆ ಹೋಗಿ ದೇವರ ಪೂಜೆ ಮಡುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ, ಅರ್ಥಪೂರ್ಣವಾಗಿ ಇರುತ್ತದೆ.

ಕೊನೆ ಟಿಪ್ಪಣಿಗಳು

೧. ಶಾಂತಾ ಇಮ್ರಾಪೂರ. 'ಧರ್ಮ-ಮಹಿಳೆ ಮತ್ತು ಸಮಾಜ' ಪು. ೪೨, ೨೦೦೧, ಮನೋಹರ ಪ್ರಿಂಟಿಂಗ್ ಪ್ರೆಸ್, ಮಾರ್ಕೆಟ್, ಧಾರವಾಡ.

೨. ಚನ್ನಕ್ಕ ಪಾವಟೆ, 'ಶರಣ ಸಂಸ್ಕೃತಿ : ಮುಖಾಮುಖಿ' ಪು. ೨೬, ೨೦೦೪, ಮನೋಹರ ಪ್ರಿಂಟಿಂಗ್ ಪ್ರೆಸ್, ಮಾರ್ಕೆಟ್, ಧಾರವಾಡ.

೩. ಶೈಲಜಾ ಉಡಚಣ 'ವಚನಕಾರರ ದೃಷ್ಟಿಯಲ್ಲಿ ಸ್ತ್ರೀ' ಪು. ೨೬೩, ೨೦೧೬, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಮುರುಘಾಮಠ, ಚಿತ್ರದುರ್ಗ.

೪. ಅಶೋಕ ನರೋಡೆ, 'ವಚನ ಸಾಹಿತ್ಯದ ವಿಭಿನ್ನ ನೆಲೆಗಳು' ಪು. ೮೨, ೨೦೧೭, ಪ್ರಕಾಶಕರು ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀಮುರುಘಾಮಠ, ಧಾರವಾಡ.

೫. ಆರ್. ಎಸ್. ಚಾಪಗಾವಿ 'ಶರಣ ಸಾಹಿತ್ಯ ಸಂಸ್ಕೃತಿ ಚಿಂತನ' ಪು. ೭೬, ೨೦೧೭, ಪ್ರಕಾಶಕರು ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀಮುರುಘಾಮಠ, ಧಾರವಾಡ.

೬ ಎಚ್. ತಿಪ್ಪೇರುದ್ರಸ್ವಾಮಿ 'ಶರಣರ ಅನುಭಾವ ಸಾಹಿತ್ಯ' ಪು. ೨೯೫, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಮುರುಘಾಮಠ, ಚಿತ್ರದುರ್ಗ.

೭ ಪಿ. ವಿ. ನಾರಾಯಣ 'ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ' ಪು. ೫೯, ೨೦೧೬, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಮುರುಘಾಮಠ, ಚಿತ್ರದುರ್ಗ.

ಅಧ್ಯಾಯ : ಒಂಬತ್ತು

ಉಪಸಂಹಾರ

ಫಲಿತಗಳು

ಅಧ್ಯಾಯ : ಒಂಬತ್ತು

ಉಪಸಂಹಾರ

ಹನ್ನೆರಡನೆಯ ಶತಮಾನದ ವಚನಕಾರರ ಸಾಮಾಜಿಕ ಕ್ರಾಂತಿ ಸಾಮಾಜಿಕ ಬದಲಾವಣೆಯ ಇತಿಹಾಸದಲ್ಲೇ ಒಂದು ಮಹತ್ವದ ಘಟ್ಟವಾಗಿದೆ. ವಚನಕಾರರ ಸಮಾಜವನ್ನು ಉಪನಿಷತ್ಕಾಲದ ಸಮಾಜದೊಡನೆ ಹೋಲಿಸಿದಾಗ ವಚನಕಾರರ ಸಾಮಾಜಿಕ ಪರಿಕಲ್ಪನೆಯು ಉಪನಿಷತ್ತುಗಳಿಗಿಂತಲೂ ಮಿಗಿಲಾದುದೆಂದು ಸ್ಪಷ್ಟವಾಗುತ್ತದೆ. ಉಪನಿಷತ್ ಋಷಿಗಳು ದೃಷ್ಟಾರರೆನಿಸಿದರೂ ಸಹ ಅವರು ಅರಣ್ಯವಾಸಿಗಳಾಗಿ ವಾನಪ್ರಸ್ಥಕ್ಕೆ ಮಹತ್ವವಿತ್ತು. ಲೋಕದಿಂದ ಬಹುದೂರ ನಿಂತು ಲೋಕೋದ್ಧಾರದಂತಹ ಮತ್ತು ಸರ್ವಾತ್ಮ ಭೂತಹಿತ ಕುರಿತ ಚಿಂತನೆಗಳನ್ನು ಉಪನಿಷತ್ತಿನ ಮಂತ್ರಗಳಲ್ಲಿ ಸಾರುತ್ತಾರೆ.

ವೈದಿಕ ಸಂಸ್ಕೃತಿಯ ಕಾಲದಿಂದಲೂ ಸಪ್ತರ್ಷಿಗಳಾದಿಗಳಿಂದ ಬಂದ ಸೂತ್ರ–ಗೋತ್ರಾದಿಗಳು ಪರಂಪರಾನುಗತವಾಗಿ ಮುಂದುವರಿದವು. ಅಲ್ಲದೆ ಬ್ರಾಹ್ಮಣ–ಕ್ಷತ್ರಿಯ–ವೈಶ್ಯ ಮತ್ತು ಶೂದ್ರಗಳೆಂಬ ಚತುರ್ವರ್ಣಗಳೂ ಸಹ ಮುಂದುವರೆಯುತ್ತ ಕ್ರಮೇಣ ತಮ್ಮ ತಮ್ಮಲ್ಲಿಯೇ ಮತ್ತೆ ಅನೇಕ ಪಂಗಡಗಳಾಗಿ ಒಡೆಯುತ್ತಾ ಬಂದವು. ಬ್ರಾಹ್ಮಣರಲ್ಲಿಯೇ ವೈಷ್ಣವ ಬ್ರಾಹ್ಮಣ, ಶೈವ ಬ್ರಾಹ್ಮಣವೆಂದು ಮತ್ತು ಗೋತ್ರಗಳಿಂದ ವಶಿಷ್ಟಗೋತ್ರ ಹೆಚ್ಚು. ವಿಶ್ವಾಮಿತ್ರಗೋತ್ರ ಕಡಿಮೆ, ವಿಶ್ವಾಮಿತ್ರಗೋತ್ರದವರಾದರೆ 'ಇಲ್ಲ ನಾವೇ ಹೆಚ್ಚು ವಶಿಷ್ಟ ಗೋತ್ರದವರು ಕಡಿಮೆ' ಎಂದು ಹೀಗೆ ತಮ್ಮಲ್ಲಿಯೇ ಭೇದಭಾವಗಳು ಮೂಡಲು ಪ್ರಾರಂಭಿಸಿದವು. ಕ್ಷತ್ರಿಯರಲ್ಲಿಯೂ ಸಹ ಮಹಾರಾಜನಿಂದ ಹಿಡಿದು ಸಣ್ಣ ಪ್ರಾಂತದ ರಾಜರು, ತಳವಾರರು, ಬೇಡರು ಅಥವಾ ವಾಲ್ಮೀಕಿ ಜನಾಂಗದವರೆಲ್ಲ ವಿಭಾಗವಾಗಲು ಪ್ರಾರಂಭಿಸಿದವು. ಹೀಗೆ ವೈಶ್ಯರಲ್ಲಿಯೂ ಸಹ ಅನೇಕ ಪಂಗಡಗಳಾಗಿ ವಿಭಜನೆಗೊಂಡವು. ಶೂದ್ರರಲ್ಲಂತೂ ಹಲವಾರು ವೃತ್ತಿಗಳಿಂದ ನೂರಾರು ಪಂಗಡಗಳಾಗಿ ಮತ್ತೆ ಅವರಲ್ಲಿಯೇ ಸ್ಪೃಶ್ಯ–ಅಸ್ಪೃಶ್ಯರೆಂದು ಸ್ಥೂಲವಾಗಿ ವಿಂಗಡನೆಯಾಗಿ ಅಲ್ಲಿಂದಲೆ ಮತ್ತೆ ಬಡಿಗ, ಕುಂಬಾರ, ಕಮ್ಮಾರ, ಮಡಿವಾಳ, ನೇಕಾರ, ಅಂಬಿಗ, ಮಚ್ಚಿಗ, ಮಾದಾರ ಮುಂತಾದ ಜಾತಿ ಅಥವಾ ಕುಲಗಳಾಗಿ ನಿರ್ಮಾಣವಾದವು. ಸ್ಪೃಶ್ಯರು ಅಸ್ಪೃಶ್ಯರನ್ನು ಊರು ಬಿಟ್ಟು ಹೊರಗೆ ಇಟ್ಟರು. ಇದರಿಂದ ವಿದ್ಯೆಯೆಂಬುದು ಕೇವಲ ಉನ್ನತ ವರ್ಗದವರಿಗೇ ಮೀಸಲಾಯಿತು. ಜಾತಿ–ಕುಲ–ಗೋತ್ರಗಳನ್ನು ನೋಡಿ ಮಂತ್ರ ಅಥವಾ ವಿದ್ಯೆಯನ್ನು ಬೋಧಿಸಲು ಪ್ರಾರಂಭಿಸಿದರು. ವೈದಿಕ ಸಂಸ್ಕೃತಿಯವರು ಕಾಲಾನಂತರ ಪರಾವಿದ್ಯೆಗಿಂತ ಅಪರಾವಿದ್ಯೆಗೆ ಹೆಚ್ಚಿನ ಪ್ರಾಶಸ್ತ್ಯಕೊಡಲು ಪ್ರಾರಂಭಿಸಿದರು. ಜ್ಞಾನರಹಿತ ಆಡಂಬರ ಕ್ರಿಯೆಗಳು ಹೆಚ್ಚಾದವು.

ಶೂದ್ರರಿಗಂತೂ ವಿದ್ಯೆಯಂಬುದು ಆಕಾಶಮಾವಿನ ಫಲವಾಯಿತು. ಶೂದ್ರರಿಗೆ ವೇದ ಓದಿಸುವುದು-ಬೋಧಿಸುವುದು ದೂರವಿರಲಿ, ಶೂದ್ರನು ವೇದವನ್ನು ಎಲ್ಲೋ ಹೇಗೋ ಸ್ವಲ್ಪ ಕೇಳಿದರೆ ಅವನಿಗೆ ಗಾಜನ್ನು ಕಾಯಿಸಿ ಕಿವಿಯಲ್ಲಿ ಹಾಕುವುದು, ವೇದಪಠಣ ಮಾಡಿದರೆ ನಾಲಿಗೆ ಕೊಯ್ಯುವಂತಹ ಕಠಿಣ ಶಿಕ್ಷೆಗಳು ಬರತೊಡಗಿದವು. ಇದರಿಂದ ಶೂದ್ರರಿಗೆ ವೇದವೆಂಬುದು ಕನಸಿನ ಮಾತಾಯಿತು. ಕ್ಷತ್ರಿಯ ರಾಜಮಹಾರಾಜರಿಗೆ ಮೊದಲಿದ್ದ ಬ್ರಹ್ಮ ವಿದ್ಯಾಸಕ್ತಿ ಕಡಿಮೆಯಾಯಿತು. ಆಳುವದಷ್ಟೇ ತಮ್ಮ ಗುಣವೆಂದು ಅರಿತುಕೊಂಡರು. ವೈಶ್ಯರಾದರೂ ವ್ಯವಹಾರಕ್ಕೆ ಹೆಚ್ಚು ಮಹತ್ವಕೊಟ್ಟು ತಾವೂ ಸಹ ಬ್ರಹ್ಮ ಬೋಧೆಯನ್ನು ಪಡೆದುಕೊಂಡು ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ಅಭಿಲಾಷೆ ಹೊರಟುಹೋಗಿ, ಕೇವಲ ಜ್ಞಾನರಹಿತ ಕ್ರಿಯಾಸಂಸ್ಕಾರಗಳಿಗೆ ಮಾತ್ರ ಹೆಚ್ಚಿಗೆ ಒತ್ತು ಕೊಟ್ಟರು. ಬ್ರಾಹ್ಮಣರಿಗೆ ಈ ಮಂತ್ರ ಬೋಧೆ, ವೈದಿಕಾಚರಣೆಗಳು, ಯಜ್ಞಯಾಗಾದಿಗಳನ್ನು ಮಾಡುವುದು, ದೇವಸ್ಥಾನಗಳಲ್ಲಿ ಪೂಜೆಯನ್ನು ಮಾಡುವುದು ಒಂದು ವೃತ್ತಿಯಾಗಿ ಪರಿಣಮಿಸಿತು. ದೇವಸ್ಥಾನಗಳಲ್ಲಿ ಕೇವಲ ಉನ್ನತ ಮತ್ತು ಶಿಷ್ಟಜಾತಿಯವರಿಗೆ ಅಷ್ಟೇ ಪ್ರವೇಶ, ಉಳಿದವರಿಗೆ ಇಲ್ಲ ವೆಂಬ ಪದ್ಧತಿಗಳು ಬೆಳೆಯುತ್ತಾ ನಡೆದವು. ಹೀಗೆ ಕುಲ-ಗೋತ್ರ-ಸೂತ್ರ, ಜಾತಿಗಳು ಅಂಧ ಶ್ರದ್ಧೆಯಿಂದ ಬೆಳೆದು, ಸಮಾಜದಲ್ಲಿ ಪರಸ್ಪರ ಮನುಷ್ಯ-ಮನುಷ್ಯರಲ್ಲಿ ದ್ವೇಷ, ಅಸೂಯೆ, ತಾರತಮ್ಯ, ವೈಷಮ್ಯ, ಜಗಳ ಮುಂತಾದ ಕ್ರೂರ ಸ್ವಭಾವಗಳು ತಲೆದೋರಿದವು.

ಮುಂದೆ ಹನ್ನೆರಡನೆಯ ಶತಮಾನದಲ್ಲಿ ವಚನಕಾರರು ಇವೆಲ್ಲವುಗಳನ್ನು ನೋಡಿ ಬೇಸತ್ತು, ಒಂದು ಹೊಸ ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು. ಎಲ್ಲ ವೈಚಾರಿಕ ಜ್ಞಾನವಂತರು ಒಟ್ಟಿಗೆ ಸೇರಿ, ಎಲ್ಲ ಕುಲ-ಗೋತ್ರ-ಜಾತಿಗಳು ಮನುಷ್ಯ ನಿರ್ಮಿತವೆಂದು, ದೇವನೊಲಿದಾತನೇ ಜಾತನೆಂದು ಎಲ್ಲ ಹಳೇ ಪರಂಪರೆಯ ಕುಲ-ಗೋತ್ರ-ಸೂತ್ರಾದಿಗಳ ಜಿಡ್ಡನ್ನು ಸಂಪೂರ್ಣವಾಗಿ ಕಿತ್ತೆಸೆದರು. ಆಗ ಉದಾರ ವೀರಶೈವ ತತ್ತ್ವಾಚಾರಗಳ ಹಿನ್ನೆಲೆಯಲ್ಲಿ ಹೊಸ ಸಮಾಜವನ್ನೇ ನಿರ್ಮಿಸಿದರು. ಉಪನಿಷತ್ಕಾರರ ಹಾಗೆ ಬ್ರಹ್ಮಬೋಧೆ, ಬ್ರಹ್ಮಸಾಕ್ಷಾತ್ಕಾರ ಪ್ರತಿಯೊಬ್ಬ ಮನುಷ್ಯನಿಗೂ ಸಾಧ್ಯ. ಈ ತರದ ಸಾಕ್ಷಾತ್ಕಾರಕ್ಕೆ ಯಾವ ಕುಲ-ಗೋತ್ರ, ಜಾತಿಗಳು ಪ್ರಮುಖವಲ್ಲ, ಅಭೀಪ್ಸೆಗಳಾದ ಯವುದೇ ಜಾತಿಯವರಾದರೂ ಪಡೆದುಕೂಳ್ಳಬಹುದು. ಯಾವನು ಶಿವದೀಕ್ಷೆ ಪಡೆದುಕೊಂಡು ಶಿವಸಾಕ್ಷಾತ್ಕಾರ ಮಾಡಿಕೂಳ್ಳುವನೋ ಅವನೇ ಶ್ರೇಷ್ಠ ಕುಲದವನು. ಮಿಕ್ಕವರೆಲ್ಲ ಭವಿಗಳು, ಶೂದ್ರರು, ಕನಿಷ್ಠರೆಂದು ನಿಜತ್ವವನ್ನು ಸಾರಿ ಹೇಳಿದರು. 'ಕೊಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ', 'ಆಚಾರವೇ ಸ್ವರ್ಗ ಅನಾಚಾರವೇ ನರಕ', 'ಶಿವಭಕ್ತನೇ ಕುಲಜನು', '.....ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ?' ಎಂದು ಪೂರ್ವ ವೈದಿಕ ಸಂಸ್ಕೃತಿಯ ಸಂಸ್ಕೃತ ಸೂಕ್ತಿಗಳನ್ನು ಸರಳವಾಗಿ ಅಚ್ಚು ಕನ್ನಡದಲ್ಲಿ ಜನಸಾಮಾನ್ಯರಿಗೆ ತಿಳಿಯುವ ಹಾಗೆ ಹೇಳಿದರು.

ಈ ವೈಚಾರಿಕ ಶಿವಶರಣರ ಗುಂಪಿಗೆ ಮೊದಲು ಸೇರಿದವರು ಉನ್ನತ ಜಾತಿಯ ಬ್ರಾಹ್ಮಣರಾದ ಬಸವಣ್ಣನವರು. ತಮ್ಮ ಕುಲ-ಗೋತ್ರ-ಸೂತ್ರಗಳನ್ನೆಲ್ಲ ಬಿಟ್ಟು ವೀರಶೈವ ಧರ್ಮವನ್ನು ಸ್ವೀಕರಿಸಿ, ಲಿಂಗದೀಕ್ಷೆ ಪಡೆದರು. ತಮ್ಮಂತೆಯೇ ಅನೇಕ ಜಾತಿಯವರನ್ನು ದೀನ ದಲಿತರನ್ನು ಎತ್ತಿ, ಜಾತಿಯೆಂಬುದು ವೃತ್ತಿಪರ ಬಂದುದು. ಲಿಂಗದೀಕ್ಷೆಗೆ ಜಾತಿ-ಕುಲಗಳು ಸಂಬಂಧವಿಲ್ಲವೆಂದು ಸಮಾಜದ ಸಂಘಟನೆಗೆ ಮತ್ತು ಸಮಾನತೆಯ ವಾತಾವರಣಕ್ಕೆ ಪ್ರಮುಖ ಪಾತ್ರವಹಿಸಿದರು. ಮೇಲು ಜಾತಿಯವರನ್ನು ಸಂಪೂರ್ಣ ಉಪೇಕ್ಷಿಸಿ ನೇರವಾಗಿ ಸಾಮಾನ್ಯ ಜನತೆಯ ಬಳಿ ಹೋದರು. ಅವರ ಮೌಢ್ಯವನ್ನು ತೊಡೆದು ಹಾಕಿ ಅನೇಕ ಅನಾರೋಗ್ಯಕರವಾದ ಆಚರಣೆಗಳನ್ನು ಬಿಡಿಸಿದರು. ಜನಸಾಮಾನ್ಯರಲ್ಲಿ ಪ್ರಚಲಿತವಾದ ಅಂಧಶ್ರದ್ಧೆಯ ಪ್ರಾದೇಶಿಕ ದೈವಗಳ ಪೂಜೆಗಳನ್ನು ಬಿಡಿಸಿ, ಏಕದೇವೊಪಾಸನಗೇ ಮಹತ್ವಕೊಟ್ಟರು. ಇದರಿಂದ ಕೀಳು ದೈವಗಳ ಆರಾಧನೆಯಿಂದ ಜನರಲ್ಲಿದ್ದ ಕೀಳುಭಾವನೆಯೆಂಬುದು ಹೊರಟು ಹೋದವು. ದೇಹವನ್ನೇ ದೇಗುಲವನ್ನಾಗಿ ಮಾಡಿ, ಹೃದಯ ಪೀಠದಲ್ಲಿ ಲಿಂಗವನ್ನು ಸ್ಥಾಪಿಸಿ ಪ್ರತಿಯೊಬ್ಬರ ಕಾಯವನ್ನು ಕೈಲಾಸವನ್ನಾಗಿಸಿದರು. ತತ್ಪರಿಣಾಮವಾಗಿ ಎಲ್ಲ ಶರಣರು ದೇವಾಲಯಗಳನ್ನು, ಸ್ಥಾವರಲಿಂಗಗಳನ್ನು ಖಂಡಿಸಿದರು. ಈ ಖಂಡನೆಗೆ ಕಾರಣ ದೀನ-ದಲಿತರನ್ನು ದೇವಸ್ಥಾನದ ಒಳಗೆ ಪ್ರವೇಶಿಸಲು ಅನುಮತಿ ಕೊಡದೇ ಇದ್ದುದಕ್ಕೂ ಸಹ ಇರಬಹುದು. ಈ ದೇವಸ್ಥಾನಗಳೆಲ್ಲವು ಉಳ್ಳವರ ಸವಲತ್ತಾಗಿದ್ದರಿಂದ, ಜನಸಾಮಾನ್ಯನಿಗೆ ಶ್ರೇಷ್ಠ ದೇವಾರಾಧನೆಯು ಅಶಕ್ಯವಾದದ್ದು ಇದರಿಂದ ಶಕ್ಯವಾಯಿತು.

ವೈದಿಕ ಸಂಸ್ಕೃತಿ ಕಾಲದಲ್ಲಿದ್ದ ಅನುಲೋಮ ವಿವಾಹ ಪದ್ಧತಿಯು ಮುಂದುವರೆಯುತ್ತ ಬಂದಿತ್ತಾದರೂ, ವೇದೋತ್ತರ ಕಾಲದಲ್ಲಿ ಜಾತಿಗಳು ಸ್ಥಿರಗೊಂಡಾಗ ಈ ಅನುಲೋಮ ಕ್ರಮಕ್ಕಿಂತ ತಮ್ಮ ತಮ್ಮ ಜಾತಿಯಲ್ಲೇ ಕನ್ಯೆಯನ್ನು ಕೊಡುವ-ತೆಗೆದುಕೊಳ್ಳುವ ಪದ್ಧತಿ ಹೆಚ್ಚಾಗುತ್ತಾ ಬಂದಿತ್ತೆನ್ನಬಹುದು. ಅನುಲೋಮ ಕ್ರಮದ ವಿವಾಹಗಳು ವಿರಳವಾದರೂ ವಿರೋಧವಾಗಲಿಲ್ಲ. ಮತ್ತು ವಿಲೋಮ ಕ್ರಮದ ಬಗೆಗೆ ಸಮಾಜವು ಬಹು ಎಚ್ಚರಿಕೆಯನ್ನು ವಹಿಸುತ್ತಾ ಬಂದಿತ್ತು. ಆದರೆ ಹನ್ನೆರಡನೆಯ ಶತಮಾನದ ಶಿವಶರಣರು ಈ ಎಲ್ಲ ಕ್ರಮಗಳನ್ನು ಕಿತ್ತುಹಾಕಿ ಹೊಸ ವಿವಾಹ ಪದ್ಧತಿಯನ್ನು ಪ್ರಾರಂಭಿಸಿದರು. ಈ ಹಿಂದೆ ಹೇಳಿದಂತೆ ಶಿವಶರಣರಲ್ಲಿ ಎರಡೇ ಕುಲಗಳು. ಒಂದು 'ಭಕ್ತ' ಇನ್ನೊಂದು 'ಭವಿ'. ಭಕ್ತ ಭಕ್ತರಲ್ಲಿ ವಿವಾಹ ನಡೆಸಲು ಯಾವ ಅಭ್ಯಂತರವೂ ಇಲ್ಲ. ಅವರು ಯಾವ ಜಾತಿಯವರಾದರೂ ಸರಿ. ಆದರೆ ಭಕ್ತರು ಭವಿಗಳಿಗೆ ಕನ್ಯೆಯನ್ನು ಕೊಡುವುದಾಗಲಿ, ಸ್ವೀಕರಿಸುವುದಾಗಲಿ ಮಾಡುತ್ತಿರಲಿಲ್ಲ. ಇಂತಹ ವಿವಾಹದ ಘಟನೆಯನ್ನು ಮಾಡಿ ಶಿವಶರಣರು ಹೊಸ ಸಾಮಾಜಿಕ ಕ್ರಾಂತಿಯೆನ್ನೆಸಗಿದರು. ನಿದರ್ಶನಕ್ಕೆ ಒಮ್ಮೆ ಅಂತಹ ಮಹತ್ವದ ವಿವಾಹ ನಡೆಯಿತು. ಶಿವಶರಣರ ಧರ್ಮದ ಅನುಯಾಯಿಗಳು 'ಶಿವಭಕ್ತರೆಲ್ಲಾ ಸಮಾನರು' ಎಂಬ ಭಾವನೆಯಿಂದ ವ್ಯವಹರಿಸುತ್ತಿದ್ದರು. ಅಸ್ಪೃಶ್ಯತೆಯನ್ನಂತೂ ಅವರು ಒಪ್ಪಿಕೊಂಡಿರಲಿಲ್ಲ. ಮೊದಲು ಸಮಗಾರನಾಗಿದ್ದ ಹರಳಯ್ಯ ಮತ್ತು ದ್ವಿಜನಾಗಿದ್ದ ಮಧುವಯ್ಯ ಇವರಿಬ್ಬರೂ ಇಷ್ಟಲಿಂಗವನ್ನು

ಧಾರಣೆ ಮಾಡಿಕೊಂಡು ಶಿವಾನುಭವ ಮಂಟಪವನ್ನು ಸೇರಿದರು. ಆಗ ಶಿವಶರಣರು ಅವರನ್ನು ಸಮಾನರೆಂದು ಭಾವಿಸಿದರು. ಮುಂದೆ ಹರಳಯ್ಯನ ಮಗನು ಮಧುವಯ್ಯನ ಮಗಳನ್ನು ಮದುವೆಯಾದ. ಈ ಸಂಪ್ರದಾಯಕ್ಕೆ ವಿರುದ್ಧವಾದ (ವಿಲೋಮ ಕ್ರಮದ) ಮದುವೆಗೆ ಶಿವಶರಣರ ಬೆಂಬಲ ಸಂಪೂರ್ಣವಿತ್ತು ಆದರೆ ದ್ವಿಜನು ಅತ್ಯಂತ ಶ್ರೇಷ್ಠ ಸಮಗಾರನು ಅತ್ಯಂತ ಕನಿಷ್ಠವೆಂದು ಭಾವಿಸಿದ್ದ ಸಾಂಪ್ರದಾಯಕ ಭವಿಗಳು ಈ ಮದುವೆಯನ್ನು ತೀವ್ರವಾಗಿ ಪ್ರತಿಭಟಿಸಿದರು. ಆದರೂ ಈ ವರ್ಣಸಂಕರ ವಿವಾಹವನ್ನು ಪ್ರಚೋದಿಸಿ ಒಂದು ದೊಡ್ಡ ಸಾಮಾಜಿಕ ಕ್ರಾಂತಿಯನ್ನೇ ಎಸಗಿದರು. ಇದಕ್ಕಿಂತ ಪೂರ್ವದಲ್ಲಿ (ಅನುಲೋಮ ಪ್ರಕಾರ) ಬಸವಣ್ಣನವರು ಕ್ಷತ್ರಿಯನಾದ ಬಿಜ್ಜಳನ ತಂಗಿಯನ್ನು ಮದುವೆಯಾಗಿದ್ದನು. ಆಗ ಯಾವ ವಿರೋಧವನ್ನೂ ಸಮಾಜ ವ್ಯಕ್ತಪಡಿಸಲಿಲ್ಲ. ಕಾರಣ ಈ ಪದ್ಧತಿ ಪ್ರಾಚೀನ ಕಾಲದಿಂದ ಬಂದುದಾಗಿತ್ತು. ಹೀಗೆ ವಿವಾಹವೆಂಬುದು, ಶರಣರಲ್ಲಿ ಭಕ್ತ, ಭಕ್ತರಲ್ಲಿ ಅಂದರೆ ಇಷ್ಟಲಿಂಗವನ್ನು ಧರಿಸಿದ ಶಿವಭಕ್ತರೊಂದಿಗೆ ತಮ್ಮ ಸಂಬಂಧವನ್ನು ಬೆಳೆಸುತ್ತಿದ್ದರು. ಬಸವಣ್ಣನವರ ಎರಡನೇ ಪತ್ನಿಯಾದ ನೀಲಾಂಬಿಕೆ ಕ್ಷತ್ರೀಯ ಕುಲದವಳಾದರೂ ಲಿಂಗವನ್ನು ಧರಿಸಿಕೊಂಡು ಜ್ಞಾನಿಯಾಗಿ ಉನ್ನತ ಸ್ಥರದಲ್ಲಿ ನಿಂತಿದ್ದಳು.

ಮೇಲಿನಂತಹ ಅಂತರ್ಜಾತಿಯ ವಿವಾಹವು ಅಂದು ಬಹಳ ತೊಡಕುಳ್ಳದ್ದಾಗಿತ್ತು. ಶರಣರ ಈ ವೈಚಾರಿಕ ವಿವಾಹಕ್ಕೆ ಸಾಂಪ್ರದಾಯಿಕ ಜನರ ವಿರೋಧವೂ ಹೆಚ್ಚಾಗಿತ್ತು. ಇಂತಹ ಸಮಾಜವನ್ನು ಒಪ್ಪಿಸುವುದು ಬಹಳ ಕಷ್ಟಕರವಾಗಿತ್ತು. ಆದರೂ ಶರಣರು ತಮ್ಮ ಅನೇಕ ವಚನಗಳಲ್ಲಿ ಇದನ್ನು ಸಮರ್ಥನೆ ಮಾಡಿದ್ದಾರೆ. ಅಲ್ಲದೆ ಸಾಂಪ್ರದಾಯಿಕ ಮೌಢ್ಯತೆಯನ್ನು ಸಹ ಖಂಡಿಸಿದ್ದಾರೆ.–

೧. 'ಉಂಬಲ್ಲಿ ಉಡುವಲ್ಲಿ ಕುಲವಳಿಯಿತ್ತೆಂಬಿರಿ, ಕೊಂಬಲ್ಲಿ ಕೊಡುವಲ್ಲಿ ಕುಲವನರಿಸುವ ಮಾದಿಗರನೇನೆಂಬೆನಯ್ಯ? ಇವರನ್ನೆಂತು ಭಕ್ತರೆಂಬೆನಯ್ಯ?...... ಅವರಲ್ಲಿ ಕುಲವ ನೋಡದೆ ಆಚಾರವ ನೋಡಿ, ಅವರಿಂಗೆ ಬೇಕಾದ ಹೆಣ್ಣು ಕೊಟ್ಟು, ತಮಗೆ ಬೇಕಾದ ಹೆಣ್ಣತಂದುಕೊಂಬುದು. ಈ ಕ್ರಮವರಿಯದವರ ಭಕ್ತಿ ಹೊಲಕಿ ಶುದ್ಧ ನೀರು ಮಿಂದಂತಾಯಿತ್ತು ಕೂಡಲಸಂಗಮದೇವಾ'

೨. 'ಉಂಬುದು ಉಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರ, ಎಂಬ ಅನಾಚಾರಿಯ ಮಾತು ಕೇಳಲಾಗದು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರು ಒಂದೇ ಎಂದು ಕೊಟ್ಟು ಕೊಂಬುದು ಸದಾಚಾರ, ಉಳಿದವರೆಲ್ಲ ಅನಾಚಾರ.....ಕೂಡಲಸಂಗಮದೇವ.'

ಶಿವಶರಣರಲ್ಲಿ ಜಾತಿ–ಕುಲ–ಗೋತ್ರಗಳೆಂಬುವು ಇರಲಿಲ್ಲ. ಅವರ ನಿಜತ್ವವೆಂದರೆ 'ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ ಪೂಜಿಸಿ, ಪಾದೋದಕ ಪ್ರಸಾದವ ಕೊಂಬುದು ಯೋಗ್ಯ'ವೆಂದು ಉಪನಿಷತ್ಕಾರರು ಪರಿಚಾರಿಣಿಯ ಮಗನಾದ ಸತ್ಯಕಾಮ ಜಾಬಾಲನನ್ನು ಮನ್ನಿಸಿದಂತೆ ಶರಣರೂ ಇಂಥವರನ್ನು ಮನ್ನಿಸಿದ್ದಾರೆ.

ಲೌಕಿಕ ಜೀವನವನ್ನು ಶರಣರು ನಿಕೃಷ್ಟವಾಗಿ ಕಾಣುವುದಿಲ್ಲ. ಅದರ ಪರವಾಗಿ ಆಶಾವಾದವನ್ನು ತುಂಬುತ್ತಾರೆ; ದುಃಖವಾದವನ್ನು ತುಂಬುವದಿಲ್ಲ. ಇಹಲೋಕದ ಜೀವನವನ್ನು ತುಂಬುಜೀವನವನ್ನಾಗಿ

ಮಾಡಿಕೊಳ್ಳಬೇಕು. ಮನುಷ್ಯದೇಹವನ್ನು ಧರಿಸಿ ಹುಟ್ಟಿದುದಕ್ಕೆ ದುಃಖಪಡಬೇಕಾದುದಿಲ್ಲ. ಐಹಿಕ ಸುಖವನ್ನು ಪರಮಾರ್ಥದ ಆನಂದವನ್ನು ದೊರಕಿಸಿ ಕೊಳ್ಳುವವನೇ ಜಾಣ. ಹೀಗೆ ಶರಣರು ಬದುಕನ್ನು ತಿರಸ್ಕರಿಸದೇ ಉಪನಿಷತ್ಕಾರರಂತೆ ಬದುಕುವ ಸ್ವಾರಸ್ಯವನ್ನು ಬೋಧಿಸುತ್ತಾರೆ.

೧) 'ಅಂಗವೇ ಭೂಮಿಯಾಗಿ, ಲಿಂಗವೇ ಬೆಳೆಯಾಗಿ, ವಿಶ್ವಾಸವೆಂಬ ಬತ್ತ ಬಲಿದು,

ಉಂಡು ಸುಖಿಯಾಗಿರಬೇಕೆಂದ ಕಾಮ ಭೀಮ ಜೀವದೊಡೆಯ'.

೨) 'ಭಕ್ತನ ಮನ ಹೆಣ್ಣಿನೊಳಗಾದರೆ, ವಿವಾಹವಾಗಿ ಕೂಡುವುದು, ಭಕ್ತನ ಮನ ಮಣ್ಣಿನೊಳಗಾದರೆ, ಕೊಂಡು ಆಲಯವ ಮಾಡುವುದು ಭಕ್ತನ, ಮನ ಹೊನ್ನಿನೊಳಗಾದರೆ, ಬಳಲಿ ದೊರಕಿಸುವುದು ನೋಡಾ ಕಪಿಲಸಿದ್ದ ಮಲ್ಲಿಕಾರ್ಜುನಾ'

ದಾಂಪತ್ಯ ಜೀವನ ಕುರಿತಂತೆ ಶರಣರಲ್ಲಿ ಒಮ್ಮತವಿದೆ. ಹನ್ನೆರೆಡನೆಯ ಶತಮಾನದ ಬಹುಶಃ ಎಲ್ಲ ಶರಣರು ತಾವು ಸ್ವತಃ ದಾಂಪತ್ಯ ಜೀವನವನ್ನು ನಡಸಿ ಇನ್ನೊಬ್ಬರಿಗೆ ದಾರಿದೀಪವಾಗಿದ್ದಾರೆ. ಸತಿ–ಪತಿಗಳು ಪರಸ್ಪರ ಅನ್ಯೋನ್ಯ ಪ್ರೀತಿಯಿಂದರಬೇಕು. ಒಬ್ಬರಿಗೊಬ್ಬರು ಅರ್ಥಮಾಡಿಕೊಂಡು ಬದುಕಬೇಕು. ಒಬ್ಬರ ಉನ್ನತ ವಿಚಾರಕ್ಕೆ ಇನ್ನೊಬ್ಬರು ಅದನ್ನು ವಿರೋಧಿಸದೆ ಅದರ ಮಹತ್ವವನ್ನು ಅರಿತು ಪ್ರಚೋದಿಸಬೇಕು. ಆಗ ಇಬ್ಬರ ಮನಸ್ಸು ಒಮ್ಮನವಾದರೆ ಪರಮಾತ್ಮನ ಅಚ್ಚುಮೆಚ್ಚುಗೆಗೆ ಪಾತ್ರರಾಗುತ್ತಾರೆ.–

'ಸತಿ–ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿ–ಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆದಂತೆ ಕಾಣಾ! ರಾಮನಾಥ' (ವ.ಶಾ.ಸಾ.ವ. ೬೬೬)

ವೈವಾಹಿಕ ಜೀವನದಲ್ಲಿ ಸತಿ–ಪತಿಗಳು ಒಂದಾಗದಿದ್ದರೆ ಅದು ಅಮೃತದೊಳಗೆ ವಿಷ ಬೆರೆಸಿದಂತೆ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಸತಿಪತಿಗಳು ಯಾವುದೇ ಕಾರ್ಯದಲ್ಲಿ ಒಂದಾಗಿ ಮಾಡಿದರೆ ಅವರ ಜೀವನ ಉತ್ಕೃಷ್ಟವಾಗಿರುವದು. ಇಲ್ಲದಿದ್ದರೆ ಏನಾಗುವದೆಂಬುದನ್ನು ಬಸವಣ್ಣನವರು ತಮ್ಮವೊಂದು ವಚನದಲ್ಲಿ–

'ಗಂಡ ಶಿವಲಿಂಗ ದೇವರ ಭಕ್ತ
ಹೆಂಡತಿ ಮಾರಿಮಸನಿಯ ಭಕ್ತೆ
ಗಂಡ ಕೊಂಬುದು ಪಾದೋದಕ ಪ್ರಸಾದ,
ಹೆಂಡತಿ ಕೊಂಬುದು ಸುರೆ ಮಾಂಸ...
ಬಾಂಡ ಭಾಜನ ಶುದ್ದವಿಲ್ಲದವರ ಭಕ್ತಿ
ಹೆಂಡದ ಮಡಿಕೆ ಹೂರಗೆ ತೊಳೆದಂತೆ
ಕೂಡಲಸಂಗಮ ದೇವಾ." (ವ.ಶಾ.ಸಾ.ವ. ೬೬೮)

ಪತಿ-ಪತ್ನಿಯರ ದೃಷ್ಟಿ ಒಂದೇ ಆಗಿದ್ದರೆ ಸಂಸಾರ ಸುಗಮವಾಗಿ ಸಾಗುವುದು. ಸಮರಸ ಸಂಸಾರ ಸ್ವರ್ಗ. ವಿರಸಸಂಸಾರ ನರಕ. ಅದ ಕಂಡೇ ಅಲ್ಲಮಪ್ರಭು-

'ಉಭಯ ದೃಷ್ಟಿಯಿಂದ ದೃಷ್ಟವ ಕಾಂಬಂತೆ, ದಂಪತಿ ಏಕ ಭಾವವಾಗಿ ನಿಂದಲ್ಲಿ

ಗುಹೇಶ್ವರ ಲಿಂಗಕ್ಕೆ ಅಪ್ರಿತವಾಯಿತು' ಎಂದಿದ್ದಾನೆ. ಹೀಗೆ ದಾಂಪತ್ಯ ಜೀವನದ ಅನ್ಯೋನ್ಯತೆಗೆ ಪರಮಾರ್ಥದ ಸ್ವರೂಪವನ್ನು ಕೊಟ್ಟಿರುತ್ತಾರೆ.

ವೈದಿಕ ಸಂಸ್ಕೃತಿಯ ಅನಂತರ ಸ್ತ್ರೀಯ ಸ್ಥಾನ-ಮಾನಗಳು ಬರುಬರುತ್ತ ಕಡಿಮೆಯಾದವು. ಸ್ತ್ರೀಯೆಂದರೆ ಪತಿಯ ಸೇವೆಗೊ, ಕಾಮೋಪಭೋಗಕ್ಕೊ ಸೃಷ್ಟಿಯಾದ ಪಶುವಿನಂತೆ ಬದುಕುವ ಪರಿಸ್ಥಿತಿ ಬರಲು ಪ್ರಾರಂಭಿಸಿತು. ಅಷ್ಟೇ ಅಲ್ಲದೆ ಸ್ತ್ರೀಯು ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ಮುಂತಾದ ಕ್ಷೇತ್ರಗಳಲ್ಲಿ ತನ್ನ ಸ್ಥಾನಮಾನಗಳನ್ನು ಕಳೆದುಕೊಂಡು ಸ್ವತಂತ್ರಹೀನಳಾದಳು. ಮೋಕ್ಷವೆಂಬುದೂ ಸಹ ಆಕೆಯ ಪಾಲಿಗೆ ಇಲ್ಲದಾಯಿತು. ಸ್ತ್ರೀಯರಿಗೆ ವೇದಾಧ್ಯಯನ ಉಪನಯನ ಮಂತ್ರೋಪದೇಶಗಳ ಸಂಸ್ಕಾರಗಳು ಇಲ್ಲದೆ ಶೂದ್ರರೀತಿಯಲ್ಲಿ ಕಾಣಲು ಪ್ರಾರಂಭಿಸಿದರು. ಮನುವಿನಂತಹ ಧರ್ಮ ಶಾಸ್ತ್ರಕಾರನಂತೂ 'ಸ್ತ್ರೀಣಾಂ ಸ್ವಾತಂತ್ರ್ಯಂ ನ ಅರ್ಹತಿ' ಎಂದು ತನ್ನ ಗ್ರಂಥದಲ್ಲಿ ಖಡಾ-ಖಂಡಿತವಾಗಿ ಹೇಳಿದ. ಅಲ್ಲದೆ, 'ಸ್ತ್ರೀಯು ಬಾಲ್ಯಾವಸ್ಥೆಯಲ್ಲಿ ತಂದೆಯ ವಶದಲ್ಲೂ, ಯೌವನಾವಸ್ಥೆಯಲ್ಲಿ ಪತಿಯ ವಶದಲ್ಲೂ ಮತ್ತು ಸ್ತ್ರೀಯು ಪತಿ ತೀರಿದನಂತರ ಪುತ್ರನ ವಶದಲ್ಲೂ ಇರಬೇಕು. ಸ್ತ್ರೀಗೆ ಸ್ವಾತಂತ್ರ್ಯ ಇರಬಾರದು ಎಂದು ಮತ್ತು ಸ್ತ್ರೀಯು ಬಾಲ್ಯದಲ್ಲಾಗಲಿ ಯೌವ್ವನದಲ್ಲಾಗಲಿ ಮತ್ತು ಮುಪ್ಪಿನಲ್ಲಾಗಲಿ ಯಾವಾಗಲೂ ಮನೆಯಲ್ಲಿಯೂ ಸಹ ಸ್ವತಂತ್ರವಾಗಿ ಕಾರ್ಯಮಾಡಬಾರದು.' ಎಂದು ಹೇಳಿದ್ದಾನೆ. ಒಟ್ಟಿನಲ್ಲಿ ಮನುವಿನ ಕಾಲಕ್ಕೆ ಸ್ತ್ರೀಯು ಸ್ವತಂತ್ರಹೀನಳು, ಪರಾಧೀನಳು, ಆಗಿ ಅನೇಕ ಕಟ್ಟಪ್ಪಣೆಗಳಿಂದ ಮುಂದುವರಿಯದೆ ನಾಲ್ಕುಗೋಡೆಗಳ ಮಧ್ಯದಲ್ಲಿ ಬೆಳೆಯುಂತಾಯಿತು.

ವೈದಿಕ ಕಾಲದಲ್ಲಿ ಸ್ತ್ರೀಯು ಸಂಸಾರದಲ್ಲಿದ್ದು ದುರ್ಗಮವಾದ ಮಾರ್ಗವನ್ನು ಸುಗಮಮಾಡುವಳು, ಕಲ್ಯಾಣಪ್ರದಳು ಎಂದು ಹೇಳಿದರೆ, ಮನು 'ಸ್ತ್ರೀಯು ಸಂಸಾರದಲ್ಲಿ ಮೂರ್ಖನಿಗೆ ಕಾಮ-ಕ್ರೋಧ ವಶೀಭೂತ ಪಂಡಿತನಿಗೆ ಕೆಟ್ಟಮಾರ್ಗದಲ್ಲಿ ಒಯ್ಯಲು ಸಮರ್ಥಳಿರುತ್ತಾಳೆ'. ಎಂದು ಹೇಳುತ್ತಾನೆ. ಹೀಗಾಗಿ ಸ್ತ್ರೀಯು ತನ್ನ ವೈವಾಹಿಕ ಜೀವನದಲ್ಲಿ ಪತಿ ಮಾವ ಅತ್ತೆಯವರ ಸೇವೆ ಮಾಡುತ್ತಾ ಮೌನಳಾಗಿ ಎಷ್ಟೇ ಸಾಂಸಾರಿಕ ಕಷ್ಟಗಳು ಬಂದರು ಸಹನೆಯಿಂದ ನುಂಗಿ ಬದುಕುವ ಸ್ಥಿತಿ ಬಂದಿತು. ಇಂತಹವು ಸ್ತ್ರೀ ಬಗೆಗೆ ಇರುವ ಮನುವಿನ ಶಾಸನಗಳ ಪ್ರಭಾವವನ್ನು ನಾವು ಈಗಲೂ ಕಟ್ಟುಬದ್ಧ ಸಾಂಪ್ರದಾಯಿಕ ಮನೆಗಳಲ್ಲಿ ಕಾಣುತ್ತೇವೆ.

ಸ್ತ್ರೀಯರ ಸಂಪೂರ್ಣ ಸ್ವಾತಂತ್ರ್ಯವನ್ನು ನಾವು ವೈದಿಕ ಸಂಸ್ಕೃತಿಯಲ್ಲಿ ಬಿಟ್ಟರೆ ಮತ್ತೆ ಹನ್ನೆರಡನೆಯ ಶತಮಾನದ ಶಿವಶರಣರಲ್ಲಿ ಕಾಣುತ್ತೇವೆ. ಇಲ್ಲಿಯ ಸ್ತ್ರೀಯರು ಉಪನಿಷತ್ಕಾಲದ ಸ್ತ್ರೀಯರಿಗಿಂತಲೂ ಜಾಗ್ರತರು, ಪ್ರತಿಭಾವಂತರು, ಕವಿತ್ರಿಯರು, ಧೈರ್ಯಶಾಲಿಗಳು ಆಗಿ ಅವರಿಗಿಂತಲೂ

ಒಂದು ಹೆಜ್ಜೆ ಮುನ್ನಡೆದಿದ್ದಾರೆ. ಅಲ್ಲದೆ ಅವರಿಗೆ ಅಂದಿನ ಶಿವಶರಣರ ಸಮಾಜವೂ ಪರಿಪೂರ್ಣ ಸ್ವತಂತ್ರತೆಯನ್ನು ಕಲ್ಪಿಸಿಕೊಟ್ಟಿತ್ತು.

ಹನ್ನೆರಡನೆಯ ಶತಮಾನಕ್ಕಿಂತ ಪೂರ್ವದಲ್ಲಿ ಸ್ತ್ರೀಯರಿಗೆ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ 'ಸ್ವಾತಂತ್ರ್ಯ'ವೆಂಬ ಸುಳಿವೇ ಇರಲಿಲ್ಲ. ವೇದೋತ್ತರಕಾಲದಿಂದ ಕಠಿಣ ಕಟ್ಟುಪಾಡುಗಳಿಗೆ ಒಳಗಾಗಿದ್ದ ಸ್ತ್ರೀಯು ಮೂಲೆಗುಂಪಾಗಿದ್ದಳು. ಜೀವನದಲ್ಲಿ ಎಷ್ಟೇ ಕಷ್ಟಗಳು ಬಂದರೂ ಎಲ್ಲವನ್ನು ನುಂಗಿ ಸಹನೆಯಿಂದ, ತಾಳ್ಮೆಯಿಂದ ಬದುಕುವವಳೇ 'ಹೆಣ್ಣು' ಎಂದು, 'ಕ್ಷಮಯಾಧರಿತ್ರಿ' ಎಂಬ ಪ್ರಶಂಸೆಯಿಂದೆ ಏನೇ ಕಷ್ಟಬಂದರೂ ಅದನ್ನು ಭೂಮಿಯ ಹಾಗೆ ಸಹಿಸಿಕೊಂಡು ಸುಮ್ಮನಿರಬೇಕೆಂಬಂತಹ ಸನ್ನಿವೇಶ ನಿರ್ಮಾಣವಾಗಿತ್ತು. ಒಟ್ಟಾರೆ ಸ್ತ್ರೀಯನ್ನು ಅನೇಕ ಪ್ರಕಾರದ ಸಹನೆಯ ಸಾಕಾರಮೂರ್ತಿಯೆಂದು, ದೇವತೆಯೆಂದು ಬಂಗಾರಪಂಜರದಲ್ಲಿ ಬಂಧಿಸಿದ್ದರು. ಹೀಗಾಗಿ ಹೆಣ್ಣು ಅಬಲೆಯಾಗಿ ಸ್ವತಂತ್ರಹೀನಳಾಗಿ, ಕೀಳಾಗಿ ಬದುಕುವ ಪರಿಸ್ಥಿತಿ ಬಂದೊದಗಿತ್ತು.

ಈ ಹಿನ್ನಲೆಯಲ್ಲಿ ವಚನಕಾಲದ ಶಿವಶರಣರು ವೀರಶೈವ ತಾತ್ವಿಕ ತಳಹದಿಯ ಮೇಲೆ ಸ್ತ್ರೀಯರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟರು. ಸ್ತ್ರೀಯೆಂದರೆ ಭೋಗದ ವಸ್ತುವಲ್ಲ, ಅವಳೂ ಪುರುಷನ ಹಾಗೆ ಒಂದು ಜೀವಿ. ಅವಳಿಗೂ ಜ್ಞಾನ, ಪ್ರತಿಭೆ, ಸಾಹಸ, ಧೀರತನ, ಸ್ವಾತಂತ್ರ್ಯ ಎಂಬವುಗಳೆಲ್ಲ ಉಂಟು, ಎಂದು ಶರಣರು ತಮ್ಮ ವೈಚಾರಿಕ ಪ್ರತಿಜ್ಞೆಯಿಂದ ಘಂಟಾಘೋಷವಾಗಿ ಸಾರಿದರು.

ಒಟ್ಟಾರೆ ೧೨ನೇ ಶತಮಾನದ ವಚನ ಚಳುವಳಿ ಅದೊಂದು ಸಮಾಜೋ-ಧಾರ್ಮಿಕ ಆಂದೋಲನ. ಇಲ್ಲಿ ವಚನಕಾರರ ಚಿಂತನೆಗಳು ಕೇವಲ ಅಧ್ಯಾತ್ಮಿಕತೆನ್ನು ಬಿತ್ತುವ ಆಸ್ತಿಕ ಭಾವಗಳಾಗದೇ ಸಾಮಾಜಿಕವಾಗಿ ವರ್ಣ, ವರ್ಗ, ಜಾತಿ, ಲಿಂಗಗಳ ಸಮನ್ವಯವನ್ನು ಸಾರುವ ಸೈದ್ಧಾಂತಿಕ ನೆಲೆಗಳಾಗಿ ಕಂಡುಬರುತ್ತವೆ. ಈ ನಿಟ್ಟಿನಲ್ಲಿ ಬಸವಾದಿ ಶರಣರು ಸಾಮಾಜಿಕ ಅಸಮತೋಲನದ ಮೂಲಾಧಾರವಾಗಿರುವ ಜಾತಿವ್ಯವಸ್ಥೆಯನ್ನು ಕಟುವಾಗಿ ಟೀಕಿಸಿ, ಜಾತಿ ನಿರ್ಮಿತಿಯ ಸಾಮಾಜಿಕ ಸ್ಥಿತಿಗತಿಗಳನ್ನು ವಿಡಂಬಿಸುತ್ತಾ ಅದನ್ನು ಮೀರುವಿಕೆಯ ಕ್ರಮವನ್ನು ಅಷ್ಟೇ ಸೂಕ್ಷ್ಮವಾಗಿ ವಚನಗಳ ಮೂಲಕ ಹನ್ನೆರಡನೆಯ ಶತಮಾನದಲ್ಲಿ ಎಲ್ಲ ವಚನಕಾರರು ವಿವರಿಸಿದ್ದಾರೆ.

ಫಲಿತಗಳು :

೧. ಹನ್ನೆರಡನೆ ಶತಮಾನ ಜನಪದ ನಿಲುವಿನತ್ತ ಒಲಿದು ಜನಸಾಮಾನ್ಯರ ಭಾಷೆಯ ಮೂಲಕ ಭಕ್ತಿ, ಆಧ್ಯಾತ್ಮ, ಅನುಭಾವ, ಸಮಾನತೆ , ವೈಚಾರಿಕತೆ ,ಹೀಗೆ ಹಲವು ವಿಚಾರಧಾರೆಗಳನ್ನು ಅಭಿವ್ಯಕ್ತಿಸಿ ಕನ್ನಡ ಸಾಹಿತ್ಯದಲ್ಲಿಯೂ ಬದಲಾವಣೆಯ ಗಾಳಿ ಬೀಸಲು ಅವಕಾಶ ಮಾಡಿಕೊಟ್ಟಿತು.

೨. ಹನ್ನೆರಡನೆಯ ಶತಮಾನದ ಈ ಶರಣಸಂಸ್ಕೃತಿಯ ಸಾಮಾಜಿಕ ಆಂದೋಲನದಲ್ಲಿ ಮಹಿಳೆಗೆಸಿಕ್ಕ ಸ್ಥಾನಮಾನ, ಗೌರವ, ಘನತೆಗಳು ಗಮನಾರ್ಹವಾದವು. ಲಿಂಗಾಧಾರಿತ ಅಸಮಾನತೆಯ

ಒಳಸುಳಿಗಳು ಇಂದಿಗೂ ಸಮಾಜವನ್ನು ಅಸ್ವಸ್ಥಗೊಳಿಸುತ್ತಿರುವಾಗ ಆ ಕಾಲದ ಮಹಿಳೆಯರ ಸ್ಥಿತಿಗತಿಗಳು ಹೇಗಿತ್ತು ಎಂಬುದನ್ನು ಸುಲಭವಾಗಿಯೇ ಊಹಿಸಬಹುದು. ವಚನಕಾರರು ಈ ಪರಿಮಿತಿಯಿಂದ ಹೊರ ಬಂದು ತಾನು ಕನಸು ಕಂಡ ಸಮಾನತೆ, ಸ್ವಾತಂತ್ರ್ಯಗಳ ಸಮಾಜದಲ್ಲಿ ಗಂಡು-ಹೆಣ್ಣೆಂಬ ಭೇದವನ್ನು ಉಳಿಸಿಕೊಳ್ಳದ ಹಿರಿತನವನ್ನು ತೋರಿತು.

೩. ಹನ್ನೆರಡನೆಯ ಶತಮಾನದ ಶರಣರಿಗೆ ತಮ್ಮ ಅನುಭವ, ಆಲೋಚನೆಗಳನ್ನು ಹೇಳಲು, ದಾಖಲಿಸಲು ಸರಳ ಸ್ವರೂಪದ ಮತ್ತು ಕಾವ್ಯ ಸೌಂದರ್ಯದ ಭಾಷಾ ಪ್ರಕಾರವೊಂದು ಅನಿವಾರ್ಯವಾಗಿದ್ದರಿಂದ ಅವರು ಸಂಶೋಧಿಸಿಕೊಂಡ ಪ್ರಕಾರವೇ 'ವಚನ'. ಗದ್ಯ-ಪದ್ಯಗಳ ಹೃದಯ ಸಂಗಮ ಅದು. ಘನ ಭಾಷೆಗೆ ಸಂವಾದಿಯಾಗಿ ರೂಪುಗೊಂಡು ಜನಭಾಷೆ ರೂಢಿಗತವಾಗಿ 'ವಚನ' ಎಂದರೆ, 'ಪ್ರಮಾಣ ಮಾಡುವುದು' ಅಥವಾ 'ನಿರ್ದಿಷ್ಟ ಕೆಲಸವನ್ನು ಪ್ರಾಮಾಣಿಸಿ ನಿರ್ವಹಿಸುವ ಪ್ರತಿಜ್ಞೆ'ಯಾಗಿದೆ. ಲೆಕ್ಕಾಚಾರದ ಛಂದಸ್ಸಿನೊಳಗೆ ಬಂಧಿಸಿಡುವ ಅಥವಾ ಭಾವನೆಗಳಿಗೆ ತೊಡಿಸುವ ಅಸಹಜ ಚೌಕಟ್ಟನ್ನು ಕಿತ್ತು ಸಹಜ ಸ್ವಭಾವದಲ್ಲಿ ಧಾರೆಯಾಗಿ ಹರಿಯುವ ಝರಿಯಂತೆ, ಭೋರ್ಗರೆವ ಜಲಪಾತದಂತೆ, ತಣ್ಣಗೆ ನಿಂತು ಮತ್ತೆ ಹರಿಯುವ ನದಿಯಂತೆ ಚಲನೆಗೊಳಿಸುವುದೇ ವಚನಾಭಿವ್ಯಕ್ತಿಯ ಉದ್ದೇಶ.ಶರಣರ ಅನುಭವ, ಅನುಭಾವಗಳೇ ಈ ಹರಿವಿನ ವೈವಿಧ್ಯಮಯ ಸ್ವರೂಪ.

೪. ವಚನಗಳು ವಿಲಕ್ಷಣವಾದ ಶೈಲಿಯನ್ನು ಹೊಂದಿವೆ.

ವಚನಗಳ ವಿಚಾರಗಳು ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡುತ್ತವೆ.

ಬೇರೆ ಭಾಷೆಯಲ್ಲಿ ಇಲ್ಲದ ವಿಶಿಷ್ಟ ವಾಙ್ಮಯ.

ವಚನಗಳು ವ್ಯಾಕರಣದ ಕಟ್ಟುಗಳನ್ನು ಮೀರಿವೆ.

ವಚನಗಳು ಚಮತ್ಕಾರವಾದ ವಾಕ್ಯರಚನೆಗಳನ್ನು ಹೊಂದಿವೆ.

ಸ್ಪಷ್ಟವಾದ ಅಭಿಪ್ರಾಯಗಳು ಮೂಡಿಬರುವಲ್ಲಿ ಅನಿಶ್ಚಿತತೆ ಉಂಟಾಗದು.

ಕನ್ನಡ ಭಾಷೆಯಲ್ಲಿ ವಚನಗಳು ಆಶ್ಚರ್ಯಕರವಾಗಿವೆ.

೫. ಕನ್ನಡ ಸಂಸ್ಕೃತಿಯ ಪ್ರಧಾನ ಗುಣಗಳನ್ನು ನಾವು ಜನಪದ ಸಾಹಿತ್ಯ ಹಾಗೂ ಶರಣರ ವಚನ ಸಾಹಿತ್ಯದಲ್ಲಿ ಕಾಣುತ್ತೇವೆ. ಇವೆರಡೂ ಕನ್ನಡ ನೆಲದಲ್ಲಿ ಹುಟ್ಟಿ ಬೆಳೆದು ತನ್ನದೆಯಾದ ಪರಂಪರೆ ಮತ್ತು ಚರಿತ್ರೆಯನ್ನು ಹೊಂದಿವೆ. ಆದರೆ, ವಿಪರ್ಯಾಸವೆಂದರೆ ವಚನ ಸಾಹಿತ್ಯದ ಚರಿತ್ರೆಯನ್ನು ನಿಶ್ಚಿತವಾಗಿ ಹೇಳುವಂತೆ, ಜನಪದ ಸಾಹಿತ್ಯದ ಪ್ರಾಚೀನ ಚರಿತ್ರೆಯನ್ನು ಹೇಳಲಿಕ್ಕಾಗುವುದಿಲ್ಲ.

೬. ವಚನಕಾರರು ಜನ ಸಾಮಾನ್ಯರೊಡನೆ ಬೆರೆತರು, ಉಸಿರಾಡಿದರು. ಅವರ ಆಚಾರ ವಿಚಾರಗಳಲ್ಲಿನ ಸೊಗಸನ್ನು ಕಂಡರು, ಮೆಚ್ಚಿದರು, ಅವರ ಮೌಢ್ಯವನ್ನು, ಕೊಳಕನ್ನು

ತೋಳೆದರು. ಇಡೀ ಮನುಕುಲವನ್ನು 'ಏಕ'ವಾಗಿ ಕಂಡರು ಏಕದೇವತೋಪಾಸನೆ, ಭೇದರಹಿತವಾದ ಅಖಂಡವಾದ ಶರಣ-ಸಮಾಜ ಅವರು ಕಂಡ ಕನಸು.

೭. ನಾಡಿನ ಸಾಂಸ್ಕೃತಿಕ-ಸಾಹಿತ್ಯ ಕ್ಷೇತ್ರವನ್ನು ಗಮನಿಸಿದಾಗ ಮೂಢನಂಬಿಕೆಯ ವಿರುದ್ಧ ಮೊಟ್ಟಮೊದಲು ಧ್ವನಿಯೆತ್ತಿದವರು ಹನ್ನೆರಡನೇ ಶತಮಾನದ ವಚನಕಾರರೆಂಬುದು ಸ್ಪಷ್ಟವಾಗುತ್ತದೆ. ವಚನಸಾಹಿತ್ಯವು ಏಕಕಾಲಕ್ಕೆ ಧಾರ್ಮಿಕ-ಸಾಮಾಜಿಕ ಎರಡೂ ಕ್ಷೇತ್ರಗಳಲ್ಲಿ ಆಂದೋಲನವನ್ನು ಪ್ರಾರಂಭಿಸಿದ್ದರಿಂದ ಮೂಢನಂಬಿಕೆಯ ವಿಷಯ ವಚನಕಾರರಿಗೆ ಮುಖ್ಯವಾಯಿತು.

೮. ವೈಚಾರಿಕತೆಯಿರುವಲ್ಲಿ ಮೂಢನಂಬಿಕೆ ಇರಲಾರದು. ಆದರೆ ಅನಕ್ಷರಸ್ಥರೇ ಹೆಚ್ಚಾಗಿರುವಂತಹ ಈ ದೇಶದಲ್ಲಿ ವೈಚಾರಿಕತೆ ಬೆಳೆಯುವುದು ತುಂಬಾ ನಿಧಾನ. ಮೂಢನಂಬಿಕೆಗೆ ಸಿಗುವ ಪ್ರಚಾರ ವೈಚಾರಿಕತೆಗೆ ಸಿಗುವುದಿಲ್ಲ. ಸಮಾಜ ವ್ಯವಸ್ಥೆಯ ಅಸಮಾನತೆಗೆ ಶೋಷಣೆ ಕಾರಣವಾಗಿರುವಂತೆ, ನಮ್ಮ ಮೌಢ್ಯತೆಯು ಕಾರಣವಾಗಿದೆ. ಅಂತೆಯೇ ಶರಣರು ಪರೋಹಿತಶಾಹಿಯ ಶೋಷಣೆಯನ್ನು ಬಯಲು ಮಾಡುತ್ತಲೇ ಜನಸಮುದಾಯದಲ್ಲಿರುವ ಮೂಢನಂಬಿಕೆಗಳನ್ನೂ ಅವರ ವಚನಗಳಲ್ಲಿ ತಿಳಿಸಿದ್ದಾರೆ.

೯. ವಚನಕಾರರು ಜಾತ್ಯಾತೀತ ಸಮಾಜ ನಿರ್ಮಾಣಕ್ಕೆ ತಮ್ಮ ಕಸುಬುಗಳ ಮೂಲಕ ಸಮಾನತೆಯ ಕೊಂಡಿಯನ್ನು ಬೆಸೆಯುತ್ತಾರೆ. ಕಸುಬು ಅನ್ನುವ ಪದಕ್ಕೆ ವೃತ್ತಿ, ಕೆಲಸ ಹೀಗೆ ಹಲವಾರು ಪರ್ಯಾಯ ಪದಗಳಿವೆ. ಆದರೆ ವಚನಕಾರರು ಈ ಕಸುಬು ಅನ್ನುವ ಪದಕ್ಕೆ 'ಕಾಯಕ' ಎಂದು ಕರೆದಿದ್ದಾರೆ.

೧೦. ಮಕರಜ್ಯೋತಿ ಸಹಜವಾದುದಲ್ಲ. ಮಾನವ ನಿರ್ಮಿತವಾದುದು ಎಂದು ಅನೇಕ ವಿಚಾರವಾದಿಗಳು, ವಿಜ್ಞಾನಿಗಳು, ದೇವಸ್ಥಾನ ಮಂಡಳಿಯ ಮಾಜಿ ಆಯುಕ್ತರೊಬ್ಬರು ಹೇಳಿದರೂ ಇನ್ನೂ ಅನೇಕ ಜನರು ಮಕರ ಜ್ಯೋತಿಯನ್ನು ಕಾಣಲು ಪ್ರಸ್ತುತಕಾಲದಲ್ಲಿಯೂ ಹೋಗುತ್ತಲೇ ಇದ್ದಾರೆ. ದೇವರು ಧರ್ಮದ ಹೆಸರಿನಲ್ಲಿ ಮನುಷ್ಯರನ್ನು ನಂಬಿಸುವ, ವಂಚಿಸುವ ಪ್ರಕ್ರಿಯೆಗಳ ಬಗ್ಗೆ ಜನರು ಎಚ್ಚರಗೊಳ್ಳಬೇಕು. ವಚನಕಾರರು ಅಂತರಂಗದಲ್ಲಿರುವ ಅರಿವಿನ ಜ್ಯೋತಿಯನ್ನು ಪ್ರತಿದಿನ ಕಂಡುಕೊಳ್ಳುವ 'ಶಿವಯೋಗ' ವನ್ನು ತಿಳಿಸಿದ್ದಾರೆ. ಅದನ್ನು ಅಳವಡಿಸಿಕೊಂಡರೆ ಶಬರಿಮಲೆಯ ಮಕರಜ್ಯೋತಿ, ಮುಂತಾದ ಬಯಲ ಜ್ಯೋತಿಗಳ ಹಾವಳಿ ಕಡಿಮೆಯಾಗಿ ಒಳಗಿನ ಜ್ಯೋತಿ ತಂತಾನೆ ಪ್ರಜ್ವಲಿಸುವುದು.

೧೧. ಸರ್ವಸಮತ್ವದಿಂದ ಕೂಡಿದ ಶರಣಸಂಕುಲದಲ್ಲಿ ಸಂಸ್ಕಾರ, ಸಂಸ್ಕೃತಿ, ಸಮಾಜ, ಅರ್ಥವ್ಯವಸ್ಥೆ, ಧರ್ಮದ ಮಾನವೀಯ ಸ್ಪಂದನ, ಅನುಭಾವದ ನೆಲೆ, ಕಾಯಕದ ಬೆಲೆ ಮುಂತಾದವುಗಳೆಲ್ಲ ಸರ್ವರಿಗೂ ಒಂದೇ ತೆರನಾಗಿದ್ದವು. ಇಲ್ಲಿ ಎಲ್ಲರೂ ಶರಣರು, ಅಂದರೆ ನವಮಾನವರು. ಎಲ್ಲ ರೀತಿಯ ಅಸಮಾನತೆಯಿಂದ ಮುಕ್ತರಾಗಿ ಹೊಸ ಬಾಳಿಗೆ ಬೆಳಕಾದವರು. ಇಂಥ

ಬದುಕುವ ವಿಧಾನವನ್ನು ಕಂಡುಹಿಡಿದ ಬಸವಣ್ಣನವರ ಅನುಭಾವ ಸಮಾನತೆಯ ಮೇಲೆ ನಿಂತಿದ್ದರೆ, ವೈದಿಕರ ಆಧ್ಯಾತ್ಮವೆಂಬುದು ಅಸಮಾನತೆಯ ಮೇಲೆ ನಿಂತಿದೆ.

೧೨. ಅನುಭವ ಮಂಟಪವೆಂಬುದು ಯುವಕರ, ಮಹಿಳೆಯರ ಮತ್ತು ದುಡಿಯುವ ಜನರ ವಾಕ್ ಸ್ವಾತಂತ್ರ್ಯದ ತಾಣವಾಯಿತು. ತಮ್ಮ ಭಾಷೆಯಲ್ಲಿ ಅವರು ಮಾತನಾಡುವ ವಾತಾವರಣ ಸೃಷ್ಟಿಯಾಗದ ಸಹಸ್ರಾರು ವರ್ಷಗಳಿಂದ ತುಂಬಿಕೊಂಡಿದ್ದ ನೋವು ಒಮ್ಮೆಲೆ ಹೊರಚಿಮ್ಮಿತು. ಹೀಗೆ ವಚನಕಾರರು ವ್ಯಷ್ಟಿ ಮತ್ತು ಸಮಷ್ಟಿ ಪ್ರಜ್ಞೆಯೊಂದಿಗೆ ಶೋಷಣೆ ಇಲ್ಲದ ನವಸಮಾಜದ ನಿರ್ಮಾಪಕರಾದರು.

೧೩. ರಾಜಶಾಹಿ, ಪುರೋಹಿತಶಾಹಿಯ ವ್ಯವಸ್ಥೆಯಲ್ಲಿ ನಡೆಯುತ್ತಿದ್ದ ಅನ್ಯಾಯ, ಅತ್ಯಾಚಾರ, ಭ್ರಷ್ಟತೆಯನ್ನು ಪ್ರತಿಭಟಿಸಿ ಜನರಿಗೆ ನ್ಯಾಯವನ್ನು ದೊರಕಿಸಿಕೊಡುವುದೇ ವಚನಕಾರರ ನ್ಯಾಯಪದ್ಧತಿಯಾಗಿತ್ತು.

೧೪. ೧೨ನೇ ಶತಮಾನದ ವಚನ ಚಳುವಳಿ ಅದೊಂದು ಸಮಾಜೋ-ಧಾರ್ಮಿಕ ಆಂದೋಲನ. ಇಲ್ಲಿ ವಚನಕಾರರ ಚಿಂತನೆಗಳು ಕೇವಲ ಅಧ್ಯಾತ್ಮಿಕತೆನ್ನು ಬಿತ್ತುವ ಆಸ್ತಿಕ ಭಾವಗಳಾಗದೇ ಸಾಮಾಜಿಕವಾಗಿ ವರ್ಣ, ವರ್ಗ, ಜಾತಿ, ಲಿಂಗಗಳ ಸಮನ್ವಯವನ್ನು ಸಾರುವ ಸೈದ್ಧಾಂತಿಕ ನೆಲೆಗಳಾಗಿ ಕಂಡುಬರುತ್ತವೆ. ಈ ನಿಟ್ಟಿನಲ್ಲಿ ಬಸವಾದಿ ಶರಣರು ಸಾಮಾಜಿಕ ಅಸಮತೋಲನದ ಮೂಲಾಧಾರವಾಗಿರುವ ಜಾತಿವ್ಯವಸ್ಥೆಯನ್ನು ಕಟುವಾಗಿ ಟೀಕಿಸಿ, ಜಾತಿ ನಿರ್ಮಿತಿಯ ಸಾಮಾಜಿಕ ಸ್ಥಿತಿಗತಿಗಳನ್ನು ವಿಡಂಬಿಸುತ್ತಾ ಅದನ್ನು ಮೀರುವಿಕೆಯ ಕ್ರಮವನ್ನು ಅಷ್ಟೇ ಸೂಕ್ಷ್ಮವಾಗಿ ವಚನಗಳ ಮೂಲಕ ಹನ್ನೆರಡನೆಯ ಶತಮಾನದಲ್ಲಿ ಎಲ್ಲ ವಚನಕಾರರು ವಿವರಿಸಿದ್ದಾರೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೨. ವಕ್ತೃವಿವರ

೩. ಲೇಖನಗಳು

೪. ಇಂಗ್ಲೀಷ್ ಗ್ರಂಥಗಳು

೧. ಪರಾಮರ್ಶನ ಗ್ರಂಥಗಳು

೧. ಅನ್ನದಾನೀಶ್ವರ ಮಹಾಶಿವಯೋಗಿಗಳು, ೨೦೦೩, ಬೆಡಗಿನ ಬಿನ್ನಾಣ, ಶ್ರೀ ಜ. ಅನ್ನದಾನೀಶ್ವರ ಧರ್ಮ-ಸಂಸ್ಕೃತಿ ಪ್ರಸಾರ ಮಂಡಳ, ಮುಂಡರಗಿ.

೨. ಅನ್ನಪೂರ್ಣೇಶ್ವರಿ.ಎನ್, ಒಡೆಯರ್.ಡಿ,ಹೆಗಡೆ, ೨೦೦೮, ಜಾಗತೀಕರಣ ಮತ್ತು ಮಹಿಳೆ, ಚೇತನ ಬುಕ್ ಹೌಸ್, ಅಂಜನಾದ್ರಿ, ಮೈಸೂರ.

೩. ಅವಿನಾಶ್ ಕೊಡೆಂಕಿರಿ, ೨೦೦೯, ಹಿಂದೂಧರ್ಮ ನಂಬಿಕೆ ನಡೆವಳಿಕೆ, ಕೊಡೆಂಕಿರಿ ಪ್ರಕಾಶನ, ನರಿಮೊಗರು, ಪುತ್ತೂರು, ದಕ್ಷಿಣ ಕನ್ನಡ.

೪. ಅಶೋಕ ನರೋಡೆ, ೨೦೧೭ ವಚನ ಸಾಹಿತ್ಯದ ವಿಭಿನ್ನ ನೆಲೆಗಳು, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಶ್ರೀ ಮುರುಘಾಮಠ ಧಾರವಾಡ.

೫. ಇಮ್ಮಡಿ ಶಿವಬಸವಸ್ವಾಮಿಗಳು(ಸಂ), ೨೦೧೪, ಅಲ್ಲಮಪ್ರಭುದೇವರ ಟೀಕಿನ ವಚನಗಳು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಮೈಸೂರು.

೬. ಇಮ್ಮಡಿ ಶಿಬಸವಸ್ವಾಮಿಗಳು, ೨೦೧೨, ಸಾಯಣ ಮಾಧವ ಪ್ರಣೀತ ಸರ್ವದರ್ಶನ ಸಂಗ್ರಹ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.

೭. ಉಜ್ಜಿನಿ ರುದ್ರಪ್ಪ, ೨೦೧೨, ಕೌತುಕ, ಉರುಪ್ರಕಾಶನ, ಸುಟ್ಟಕೋಡಿಹಳ್ಳಿ ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.

೮. ಉಜ್ಜಿನಿ ರುದ್ರಪ್ಪ, ೨೦೧೪, ಅಚ್ಚರಿ, ದಶಪ್ರಕಾಶನ ಗಾಯತ್ರಿನಗರ ಬೆಂಗಳೂರು.

೯. ಉಮಾಪತಿ.ಎಸ್, ೨೦೦೮, ಶರಣರ ವಿಚಾರಕ್ರಾಂತಿ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

೧೦. ಉಮಾಪತಿ.ಜಿ.ಎಮ್.(ಸಂ), ೧೯೬೯, ವಿವೇಕ ಚಿಂತಾಮಣಿ, ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಲ, ಮೂರುಸಾವಿರಮಠ, ಹುಬ್ಬಳ್ಳಿ.

೧೧. ಕಟ್ಟಿ.ಎಂ.ಬಿ.(ಸಂ), ೨೦೧೮, ವಚನಕಾರ್ತಿಯರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

೧೨. ಕಲಬುರ್ಗಿ.ಎಮ್.ಎಮ್.(ಸಂ), ೨೦೧೮, ಮಾರ್ಗಸಂಪುಟ-೧, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

೧೩. ಕಲಬುರ್ಗಿ.ಎಂ.ಎಂ.(ಸಂ), ೨೦೦೭, ಮಾರ್ಗ ಸಂಪುಟ ೧, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರ.

೧೪. ಕುಂದಗೋಳ.ಸಿ.ಎಂ. ೨೦೧೭, ವಚನಗಳಲ್ಲಿ ವ್ಯಕ್ತಿತ್ವ ವಿಕಾಸ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೫. ಕುಪೇಂದ್ರ ಪಾಟೀಲ, ೨೦೧೭, ಶರಣ ಸಂಪದ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೬. ಗಂಗಾಧರ. ದೈವಜ್ಞ, ೨೦೧೫, ಬುಡಕಟ್ಟು ಸಮಾಜ ಹುಟ್ಟು-ಸಾವಿನ ನಡುವೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ಗುರುಪಾದ ಮರಿಗುದ್ದಿ(ಸಂ), ೨೦೧೭, ಬಸವ ದರ್ಶನ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೮. ಗುರುಲಿಂಗ ಕಾಪಸೆ, ೨೦೧೮, ಶರಣರ ಸತ್ಸಂಗದಲ್ಲಿ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೯. ಚಂದ್ರಶೇಖರ ವಸ್ತ್ರದ (ಸಂ), ೧೯೯೯, ನಿರ್ವಚನ, ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ.

೨೦. ಚಂದ್ರಶೇಖರ.ಹೆಚ್. ೨೦೧೭, ವಚನ ನಿಧಿ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೨೧. ಚಂದ್ರಶೇಖರ ಯರವಿನತೆಲಿಮಠ(ಸಂ), ೨೦೧೭, ಸಮಾನತೆಯ ಸ್ವರ್ಗ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೨೨. ಚಂದ್ರಶೇಖರ ವಸ್ತ್ರದ, ೨೦೧೭, ವಚನ ವಾರಿಧಿ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೨೩. ಚಂದ್ರಶೇಖರ.ಟಿ.ಅರ್., ೨೦೧೭, ವಚನ ಸಂಸ್ಕೃತಿ : ಕೆಲವು ಅಧ್ಯಯನಗಳು, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೨೪. ಚಂದ್ರಧರ ಶರ್ಮಾ, ಸಿದ್ಧರಾಮ ಸ್ವಾಮಿಗಳು, ೨೦೧೮, ಭಾರತೀಯ ತತ್ತ್ವಶಾಸ್ತ್ರ ವಿಮರ್ಶಾತ್ಮಕ ಅಧ್ಯಯನ, ನಾಗನೂರು ಶ್ರೀ ಶಿವಬಸವ ಸ್ವಾಮಿಗಳ ಕಲ್ಯಾಣಕೇಂದ್ರ(ರಿ) ಶಿವಬಸವನಗರ, ಬೆಳಗಾವಿ.

೨೫. ಚನ್ನಬಸವಸ್ವಾಮಿಗಳು,ಓಲೇಮಠ, ೨೦೧೫, ನಿತ್ಯ ವರ್ತಮಾನ, ಶ್ರೀ ಕುಮಾರೇಶ್ವರ ಗ್ರಂಥಮಾಲೆ ಓಲೇಮಠ-ಜಮಖಂಡಿ.

೨೬. ಚನ್ನಬಸಪ್ಪ.ಗೊ.ರು. ಬಸವರಾಜ ಸಾದರ(ಸಂ), ೨೦೦೮, ನೂರೊಂದು ಚಿಂತನ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೨೭. ಚನ್ನವೀರ ಕಣವಿ, ೨೦೧೭, ವಚನಾಂತರಂಗ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೨೮. ಚನ್ನಬಸಪ್ಪ. ಕೋ. ೨೦೧೦, ಕುವೆಂಪು ಸಾಹಿತ್ಯದಲ್ಲಿ ವೈಚಾರಿಕ-ಸಾಮಾಜಿಕ ನಿಷ್ಠೆ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು

೨೯. ಚರಂತಿಮಠ.ವಿ.ಎಸ್. ೨೦೦೮, ಬಸವಣ್ಣನವರ ವಚನಗಳಲ್ಲಿ ದಲಿತ ದರ್ಶನ, ಬಸವಧರ್ಮ ಪ್ರಸಾರ ಸಂಸ್ಥೆ ಹಿರೇಮಠ ಸಂಸ್ಥಾನ, ಭಾಲ್ಕಿ(ಬೀದರ ಜಿಲ್ಲೆ).

೩೦. ಚಾಪಗಾವಿ.ಆರ್.ಎಸ್. ೨೦೧೭, ಶರಣ ಸಾಹಿತ್ಯ ಸಂಸ್ಕೃತಿ ಚಿಂತನ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೩೧. ಚಾಪಗಾವಿ.ಆರ್.ಸಿ. ೨೦೧೧, ಕಲ್ಯಾಣದ ಕ್ರಾಂತಿಕಾರರು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು.

೩೨. ಚಿಂತಾಮಣಿ, ೨೦೧೮, ಯುಗಪ್ರವರ್ತಕ ಬಸವಣ್ಣನವರು, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೩೩. ಚಿದಾನಂದಮೂರ್ತಿ.ಎಂ. ೨೦೧೨, ವಚನ ಸಾಹಿತ್ಯ, ಸಪ್ನ ಬುಕ್ ಹೌಸ್ ಗಾಂಧಿನಗರ, ಬೆಂಗಳೂರು.

೩೪. ಚಿದಾನಂದಮೂರ್ತಿ.ಎಂ. ೨೦೧೪, ದೇವರದಾಸೀಮಯ್ಯ-ಶಂಕರದಾಸೀಮಯ್ಯ-ಜೇಡರದಾಸೀಮಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು.

೩೫. ಚಿಕ್ಕರಿಯಪ್ಪ.ಜಿ.ಪಿ.(ಸಂ), ೨೦೦೪, ಶರಣತತ್ವ ಚಿಂತನ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು. ಜಯನಗರ, ಬೆಂಗಳೂರು.

೩೬. ಚೆನ್ನಶ್ರೀ(ಡಾ.ಚನ್ನಮಲ್ಲಸ್ವಾಮೀಜಿ) ೨೦೧೯, ನಿರ್ಬಯಲ ನೆಯ್ಗೆ, ಸುವರ್ಣಗಿರಿ ಜ್ಞಾನಮಾಲೆ ಶ್ರೀ ಸುವರ್ಣಗಿರಿ ಸಂಸ್ಥಾನ ವಿರಕ್ತಮಠ ಕನಕಗಿರಿ.

೩೭. ಚೆನ್ನಕ್ಕ ಪಾವಟೆ, ೨೦೦೪, ಶರಣ ಸಂಸ್ಕೃತಿ : ಮುಖಾಮುಖಿ, ಚಿತ್ತರಗಿ ಶ್ರೀವಿಜಯ ಮಹಾಂತೇಶ್ವರ ಸಂಸ್ಥಾನಮಠ, ಇಳಕಲ್ಲ.

೩೮. ಜಯಶ್ರೀ ದಂಡೆ, ೨೦೧೭, ವಚನಗಳಲ್ಲಿ ಲಿಂಗವಂತ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೩೯. ಜಯಶ್ರೀ ದಂಡೆ, ವೀರಣ್ಣ ದಂಡೆ, ೨೦೧೨, ೧೨ನೇ ಶತಮಾನದ ಶರಣ ಸ್ಮಾರಕಗಳು, ಬಸವ ಕಲ್ಯಾಣದಿಂದ ಕೂಡಲಸಂಗಮದವರೆಗೆ ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ,

೪೦. ಜಯಾರಾಜಶೇಖರ್.ಜಿ.ವಿ, ೨೦೧೫, ಶೂನ್ಯ ಸಂಪಾದನೆಯ ಅಂತರಂಗದ ದೃಶ್ಯಗಳು, ಬಸವ ಧರ್ಮ ಪ್ರಚಾರ ಸಂಸ್ಥೆ ಹಿರೇಮಠ ಸಂಸ್ಥಾನ, ಭಾಲ್ಕಿ.

೪೧. ತಿಪ್ಪೇರುದ್ರಸ್ವಾಮಿ.ಎಚ್. ೧೯೯೯, ಜಡದಲ್ಲಿ ಜಂಗವ, ಅಖಂಡೇಶ್ವರ ಗ್ರಂಥಮಾಲೆ, ಷಣ್ಮುಖನಗರ, ಜೇವರಗಿ.

೪೨. ತಿಪ್ಪೇರುದ್ರಸ್ವಾಮಿ.ಎಚ್. ೨೦೧೦, ಶರಣರ ಅನುಭಾವ ಸಾಹಿತ್ಯ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೪೩. ತಿರುಪತಿ ಭಂಗಿ, ೨೦೧೪, ಜಾತಿ ಕುಲಮ್ಯಾಗ ಅರಳಿದ ಪ್ರೀತಿ, ಗೌರಿ ಪ್ರಕಾಶನ, ಬಾಗಲಕೋಟ.

೪೪. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ(ಸಂ), ೨೦೧೪, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಅಭಿನವ ಪ್ರಕಾಶನ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು.

೪೫. ದಯಾ ಪುತ್ತೂರ್ಕರ, ೨೦೦೯, ಮಹಿಳಾ ದೌರ್ಜನ್ಯ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೪೬. ನಾಗರಾಜ್.ಎಂ.ಜಿ, ಸಿದ್ದಗಂಗಪ್ಪ.ಎಚ್.ಎಸ್.(ಸಂ), ೨೦೦೦, ಶರಣತತ್ವ ಚಿಂತನ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು. ಜಯನಗರ, ಬೆಂಗಳೂರು.

೪೭. ನಾಗರಾಜ್.ಎಂ.ಜಿ, ಸಿದ್ದಗಂಗಪ್ಪ.ಎಚ್.ಎಸ್.(ಸಂ), ೨೦೦೬, ಶರಣತತ್ವ ಚಿಂತನ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು. ಜಯನಗರ, ಬೆಂಗಳೂರು.

೪೮. ನಾಗರಾಜ.ಜಿ.ದ್ಯಾಮನಕೊಪ್ಪ(ಸಂ), ೨೦೧೦, ನೆಲದ ನಕ್ಷತ್ರಗಳು, ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾವೇರಿ.

೪೯. ನಾಗಭೂಷಣಸ್ವಾಮಿ.ಓ.ಎಲ್.(ಸಂ), ೨೦೧೪, ವಚನ ಸಾವಿರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೦. ನಾಯಕ್.ಡಿ.ಬಿ.(ಸಂ), ೨೦೧೦, ವಚನ ವಿಮರ್ಶೆ, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ.

೫೧. ನಾರಾಯಣ.ಡಿ.ವಿ. ೨೦೧೭, ವಚನ ಸಮಸ್ತ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

೫೨. ನೀಲಗಿರಿ ತಳವಾರ, ದೇವರಡ್ಡಿ ಹದ್ಲಿ(ಸಂ), ೨೦೧೮, ಡಾ.ಎಲ್. ಬಸವರಾಜು ಸಂಶೋಧನ ಪಥ, ಸಪ್ನ ಬುಕ್ ಹೌಸ್, ಬೆಂಗಳೂರ.

೫೩. ನೀಲತ್ತಹಳ್ಳಿ ಕಸ್ತೂರಿ, ೨೦೧೪, ಗಾಂಧೀ ತತ್ತ್ವಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೫೪. ನೀಲಾವರ. ಸುರೇಂದ್ರ ಅಡಿಗ, ೨೦೦೭, ಅನುಭವ ಮಂಟಪ, ಬಸತತ್ವ ಪ್ರಚಾರ ಹಾಗೂ ಸಂಶೋಧನಾ ಕೇಂದ್ರ ಪ್ರಕಾಶನ ಬೆಂಗಳೂರು.

೫೫. ಪಂಡಿತ ರಾಠೋಡ, ಹನಮಂತ ಮೇಲಿನಮನಿ(ಸಂ), ೨೦೧೮, ಸೀಮಾ ಪುರುಷ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೫೬. ಪಂಡಿತ ರಾಠೋಡ, ಹನುಮಂತ ಮೇಲಿನಮನಿ (ಸಂ) ೨೦೧೮, ಕನ್ನಡ ಭಕ್ತಿದೀಪಕ ಬಸವಣ್ಣ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೫೭. ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿ, ೨೦೦೯, ವಚನ ವೈಭವ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು.

೫೮. ಪ್ರಭುಸ್ವಾಮಿಮಠ.ಸಿ.ವಿ. ೨೦೧೪, ಬಸವಣ್ಣನವರ ವಚನಗಳ ಸಾಹಿತ್ಯಕ ಅಧ್ಯಯನ, ಪ್ರಿಯದರ್ಶಿನಿ ಪ್ರಕಾಶನ. ಹಂಪಿನಗರ. ಬೆಂಗಳೂರು.

೫೯. ಪರಮೇಶ್ವರಿ ಮೃತ್ಯುಂಜಯ ಹಿರೇಮಠ, ೨೦೧೫, ಶಿವಾಗಮಗಳು ಮತ್ತು ವಚನ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೬೦. ಪ್ರಕಾಶ ಗಿರಿಮಲ್ಲನವರ, ೨೦೧೮, ವಚನ ಧರ್ಮ : ವೈಚಾರಿಕ ವಿವೇಚನೆ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೬೧. ಬಸವರಾಜ.ಈ.ಕಡ್ಡಿ, ೨೦೧೩, ವಚನಕಾರರ ವೈಚಾರಿಕ ಸ್ಪರ್ಶ, ಗೆಳೆಯರ ಬಳಗ, ತುಂಗಳ ತಾ॥ ಜಮಖಂಡಿ. ಜಿ॥ ಬಾಗಲಕೋಟ.

೬೨. ಬಸವೇಶ್ವರ. ಶಿವಪ್ಪ. ತುಪ್ಪದ, ೨೦೧೦, ಶ್ರೀ ಬಸವದರ್ಶನಂ,(ಸಂಶೋಧಿತ ಪ್ರಕಟನೆ) ಶ್ರೀ ಜಗದ್ಗುರು ಅನ್ನದಾನೀಶ್ವರ ಧರ್ಮ ಸಂಸ್ಕೃತಿ ಪ್ರಚಾರ ಮಂಡಳ, ಸಂಸ್ಥಾನಮಠ ಮುಂಡರಗಿ.

೬೩. ಬಸವಪ್ರಭು ಸ್ವಾಮೀಜಿ, ೨೦೧೬, ಚಿಂತನ ತವನಿಧಿ, ವಿಶ್ವಕಲ್ಯಾಣ ಮಿಷನ್, ಬಸವಮಂಟಪ, ರಾಜಾಜಿನಗರ, ಬೆಂಗಳೂರು.

೬೪. ಬಸವರಾಜ ಪೋಲಿಸಪಾಟೀಲ(ಸಂ), ೨೦೧೮, ಶರಣರ ಜಾನಪದ, ಕನ್ನಡ ಅಧ್ಯಯನ ಸಂಸ್ಥೆ, ಗುಲಬುರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

೬೫. ಬಸವರಾಜ ಸಬರದ, ೨೦೧೩, ಹಡಪದ ಶರಣರ ವಚನಗಳಲ್ಲಿ ವೈಚಾರಿಕತೆ, ಬಸವ ಧರ್ಮ ಪ್ರಸಾರ ಸಂಸ್ಥೆ ಹಿರೇಮಠ ಸಂಸ್ಥಾನ, ಭಾಲ್ಕಿ.

೬೬. ಬಸವರಾಜ ಸಾದರ, ೨೦೧೮, ವರ್ತಮಾನಕ್ಕೂ ವಚನ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೬೭. ಬಸವಲಿಂಗ ಪಟ್ಟದೇವರು, ೨೦೧೭, ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೬೮. ಬಸವರಾಜ ಸಬರದ, ೨೦೧೮, ಹೈದರಾಬಾದ ಕರ್ನಾಟಕ ವಚನಸಾಹಿತ್ಯ ಚರಿತ್ರೆ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೬೯. ಬಸವರಾಜ ಹೂಗಾರ(ಸಂ), ೨೦೧೮, ಸಂಪಾದನೆಯ ಸಿದ್ಧವೀರಣ್ಣ ಸೇರಿಸಿದ ಆಚರಣೆಯ ಸಂಬಂಧದ ವಚನಗಳು, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೭೦. ಬಸವಲಿಂಗ ಸೊಪ್ಪಿಮಠ, ೨೦೧೭, ಶರಣಮಾರ್ಗ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ, ಶ್ರೀ ಮುರುಘಾಮಠ ಧಾರವಾಡ.

೭೧. ಬಾಲಚಂದ್ರ ಜಯಶೆಟ್ಟಿ, ೨೦೧೮, ಅಪರಿಮಿತ ಕತ್ತಲೆಯೊಳಗೆ ವಿಪರೀತದ ಬೆಳಕು, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೭೨. ಬಾಲಚಂದ್ರರಾವ್, ಎಸ್, ೨೦೦೫, ಸಂಪ್ರದಾಯ ವಿಜ್ಞಾನ ಮತ್ತು ಸಮಾಜ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

೭೩. ಬಾಳೇಕುಂದ್ರಿ.ಎಸ್.ಸಿ. ೨೦೦೬, ಶರಣರು ರೂಪಿಸಿದ ಸ್ತ್ರೀ ಸಮಾನತೆ, ಪಾರು ಪ್ರಕಾಶನ ಸ್ಟೇಶನ್ ರಸ್ತೆ, ಗದಗ.

೭೪. ಭಾರತಿ ಹೆಗಡೆ, ೨೦೧೨, ಮನಸ್ಮೃತಿಯಲ್ಲಿ ಸ್ತ್ರೀಯರ ಸ್ಥಾನಮಾನ, ನಾಟ್ಯಶ್ರೀ ಪಬ್ಲಿಕೇಷನ್ಸ್ ಕವಲಕ್ಕಿ, ತಾ. ಹೊನ್ನಾವರ.

೭೫. ಮಂಜುನಾಥಸ್ವಾಮಿ. ಎಸ್, ೨೦೧೨, ವಚನ ಚಳುವಳಿ–ಆಂತರಿಕ ವೈರುಧ್ಯಗಳು, ಸಂವಹನ, ಶಿವರಾಂಪೇಟೆ, ಮೈಸೂರು.

೭೬. ಮಲ್ಲಿಕಾರ್ಜುನಪ್ಪ.ಜಿ.ಎಸ್.(ಸಂ), ೨೦೧೬, ಜನರೆಡೆಗೆ ಜಂಗಮ ಮತ್ತು ಇತರೆ ನಾಟಕಗಳು, ಅಲ್ಲಮಪ್ರಭು ಸಂಶೋಧನ ಕೇಂದ್ರ, ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ ಶ್ರೀ ಮುರುಘಾಮಠ, ಚಿತ್ರದುರ್ಗ.

೭೭. ಮಲ್ಲಿಕಾ ಘಂಟಿ, ೨೦೧೭, ವಚನಸಾಹಿತ್ಯದಲ್ಲಿ ಸ್ತ್ರೀಪರ ಧೋರಣೆ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೭೮. ಮರುಳಸಿದ್ದಯ್ಯ.ಎಚ್.ಎಂ.(ಸಂ), ೨೦೦೪, ಸ್ಮರಣೀಯರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಜಯನಗರ, ಬೆಂಗಳೂರು.

೭೯. ಮರುಳಯ್ಯ.ಸಾ.ಶಿ. ೨೦೧೮, ಬಸವಣ್ಣನವರ ಸಿದ್ಧಾಂತಗಳು, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೮೦. ಮಹಾದೇವಪ್ಪ.ಎನ್.ಜಿ. ೨೦೧೭, ಬಸವೇಶ್ವರರ ತತ್ತ್ವಮೀಮಾಂಸೆ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೮೧. ಮಹಾದೇವಪ್ಪ.ಎನ್.ಜಿ. ೨೦೧೭, ಲಿಂಗಾಯತ ಸಿದ್ಧಾಂತಗಳು, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ

೮೨. ಮಹಾದೇವಪ್ಪ.ಎನ್.ಜಿ. ೨೦೧೪, ವಚನಗಳಲ್ಲಿ ತತ್ವ ಮೀಮಾಂಸೆ, ವಚನ ಅಧ್ಯಯನ ಕೇಂದ್ರ ನಾಗನೂರ, ರುದ್ರಾಕ್ಷಿಮಠ ಶಿವಬಸವನಗರ, ಬೆಳಗಾವಿ.

೮೩. ಮಹೇಶ ತಿಪ್ಪಶೆಟ್ಟಿ(ಸಂ), ೨೦೧೪, ಬಸವತತ್ವ ಸಾಮಾಜಿಕ ಬದಲಾವಣೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೪. ಮಹದೇವಯ್ಯ.ಟಿ.ಆರ್.(ಸಂ), ೧೯೯೮, ಶರಣತತ್ವ ಚಿಂತನ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು. ಜಯನಗರ, ಬೆಂಗಳೂರು.

೮೫. ಮಹಾಂತ ಸ್ವಾಮೀಜಿ, ಮುದಗಲ್ಲ, ೨೦೧೨, ವಚನ ಪ್ರಜ್ಞೆ, ಶ್ರೀ ಮಹಾಂತ ಗುರುಬಸವ ಸ್ಪಿರ್‍ಯುಚುವೆಲ್ ಆ್ಯಂಡ್ ಎಜ್ಯುಕೇಷನಲ್ ಟ್ರಸ್ಟ್(ರಿ) ಕಲ್ಯಾಣಾಶ್ರಮ ಸಿಂಧನೂರು ಜಿಲ್ಲಾ-ರಾಯಚೂರು.

೮೬. ಮಹೇಶ ತಿಪ್ಪಶೆಟ್ಟಿ ೨೦೧೭ ಕಲ್ಯಾಣ ಕ್ರಾಂತಿ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ ಧಾರವಾಡ.

೮೭. ಮಹೇಶ ತಿಪ್ಪಶೆಟ್ಟಿ, ೨೦೦೬, ಪರಂಪರೆ : ಪರಿವರ್ತನೆ, ದಾಳಿಂಬ ಪ್ರಕಾಶನ, ಹುನಗುಂದ, ಬಾಗಲಕೋಟ ಜಿಲ್ಲೆ.

೮೮. ಮಹೇಂದ್ರ.ಜಿ.ಹರಿಹರ, ೨೦೧೫, ದಲಿತ ವಚನಕಾರರು : ವೈಚಾರಿಕ ಪ್ರಜ್ಞೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೮೯. ಮಾಳವಾಡ.ಸ.ಸ(ಸಂ), ೨೦೧೭, ಲಿಂಗಾಯತ ದರ್ಶನ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೯೦. ಮಾತೆ ಮಹಾದೇವಿ, ೧೯೮೭, ವಿಶ್ವಧರ್ಮ ಪ್ರವಚನ, ವಿಶ್ವ ಕಲ್ಯಾಣ ಮಿಷನ್, ಬಸವ ಮಂಟಪ, ರಾಜಾಜಿನಗರ, ಬೆಂಗಳೂರು.

೯೧. ಮಾತೆ ಮಹಾದೇವಿ, ೨೦೦೨, ಸಮಸ್ಯೆ? ಸಮಾಧಾನ!, ವಿಶ್ವಕಲ್ಯಾಣ ಮಿಷನ್, ಬಸವಮಂಟಪ, ರಾಜಾಜಿನಗರ, ಬೆಂಗಳೂರು.

೯೨. ಮೊಗಳ್ಳಿ ಗಣೇಶ, ೨೦೧೫, ದಲಿತ ಪದಕತನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೩. ಮೋಹನ್‌ರಾಂ.ಎನ್.ಕೆ. ೨೦೧೭, ದಲಿತರ ದೇವಸ್ಥಾನ ಪ್ರವೇಶದ ಸಾವಿರ ವರ್ಷ : ದಲಿತರು ಮೆರೆತ ರಾಮಾನುಜ, ಐ.ಬಿ.ಎಚ್. ಪ್ರಕಾಶನ ರಾಮರಾವ್ ಲೇಔಟ್, ಬೆಂಗಳೂರ.

೯೪. ಮಹದೇವಯ್ಯ.ಟಿ.ಆರ್. ೨೦೧೮, ಶರಣಸಿರಿ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೯೫. ರಂಜಾನ ದರ್ಗಾ, ೨೦೧೪, ಬಸವಣ್ಣನ ಪರ್ಯಾಯ ಸಮಾಜ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೯೬. ರಂಜಾನ್ ದರ್ಗಾ, ೨೦೧೫, ಶರಣರ ಸಮಗ್ರ ಕಾಂತ್ರಿ, ಲೋಹಿಯಾ ಪ್ರಕಾಶನ, ಗಾಂಧಿನಗರ, ಬಳ್ಳಾರಿ.

೯೭. ರಂಜಾನ್ ದರ್ಗಾ, ೨೦೧೩, ಜಾತಿ ವ್ಯವಸ್ಥೆಗೆ ಸವಾಲಾದ ಶರಣರು, ಲೋಹಿಯಾ ಪ್ರಕಾಶನ, ಗಾಂಧಿನಗರ ಬಳ್ಳಾರಿ.

೯೮. ರಂಜಾನ್ ದರ್ಗಾ, ೨೦೧೦, ನೆಡೆ ನುಡಿ ಸಿದ್ಧಾಂತ, ಲೋಹಿಯಾ ಪ್ರಕಾಶನ, ಗಾಂಧಿನಗರ ಬಳ್ಳಾರಿ.

೯೯. ರಂಜಾನ್ ದರ್ಗಾ, ೨೦೧೮, ವಚನ ಬೆಳಕು, ನೂರೊಂದು ವಚನ ವಿಶ್ಲೇಷಣೆ, ಲಡಾಯಿ ಪ್ರಕಾಶನ, ಪ್ರಸಾದ ಹಾಸ್ಟೇಲ್, ಗದಗ.

೧೦೦. ರಂಜಾನ್ ದರ್ಗಾ, ೨೦೦೭, ಬಸವಧರ್ಮದ ವಿಶ್ವಸಂದೇಶ, ಲೋಹಿಯಾ ಪ್ರಕಾಶನ, ಗಾಂಧಿನಗರ ಬಳ್ಳಾರಿ.

೧೦೧. ರಂಜಾನ್ ದರ್ಗಾ, ೨೦೦೭ ಲಿಂಗವ ಪೂಜಿಸಿ ಫಲವೇನಯ್ಯಾ?, ಲೋಹಿಯಾ ಪ್ರಕಾಶನ, 'ಕ್ಷಿತಿಜ' ಕಪ್ಪಗಲ್ಲು ರಸ್ತೆ ಬಳ್ಳಾರಿ.

೧೦೨. ರಮೇಶ.ಬೆ.ಗೋ. ೧೯೯೭, ವಿಶ್ವವಿಖ್ಯಾತ ಮಹಿಳೆಯರು, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

೧೦೩. ರವೀಂದ್ರನಾಥ.ಕೆ. ೨೦೧೮, ಶರಣ ಸಂಸ್ಕೃತಿ ಮಾರ್ಗ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೦೪. ರವಿಕುಮಾರ ಬಾಗಿ, ೨೦೧೧, ಜನಪರ ಚಳುವಳಿಗಳು ಮತ್ತು ಸಾಂಸ್ಕೃತಿಕ ಜಾಥಗಳು, ಪ್ರಸಾರಾಂಗ್ಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೫. ರಾಜಶೇಖರ ಜಮದಂಡಿ, ೨೦೧೭, ವಚನಾನುಭವ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೦೬. ರಾಮಚಂದ್ರನ್.ಸಿ.ಎಸ್. ೨೦೧೨, ಸಮಕಾಲೀನ ತಲ್ಲಣಗಳು ಚರಿತ್ರೆ, ಸಾಹಿತ್ಯ... ಇತ್ಯಾದಿ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರ.

೧೦೭. ರುದ್ರೇಶ ಕಿತ್ತೂರ, ೨೦೧೭, ವಚನದಂತೆ ವಿಜ್ಞಾನ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೦೮. ರೇವಣ್ಣ.ಕೆ.ಎಂ. ೨೦೦೯, ಶರಣಾಂತರಂಗ, ಸ್ನೇಹಾ ಪ್ರಿಂಟರ್ಸ್, ಅತ್ತಿಗುಪ್ಪೆ, ವಿಜಯನಗರ ಎರಡನೇ ಹಂತ, ಬೆಂಗಳೂರು.

೧೦೯. ಲಕ್ಷ್ಮೆ.ಎಂ.ಎಸ್. ೨೦೧೭, ಶರಣ ಸಂಸ್ಕೃತಿ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೧೦. ವಿನಯ್‌ಯೋಗಿ ಗುರುಜಿ, ೨೦೧೩, ಸಂಪ್ರದಾಯ ಮತ್ತು ವೈಚಾರಿಕತೆ, ಪದ್ಮಶ್ರೀ ಪ್ರಕಾಶನ ಪ್ರಶಾಂತ ನಗರ, ಬೆಂಗಳೂರು .

೧೧೧. ವಿಜಯಶ್ರೀ ಸಬರದ, ೨೦೧೮, ವಚನ ತೋರಣ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೧೨. ವಿದ್ಯಾಶಂಕರ.ಎಸ್. ೨೦೦೦, ಚಾಮರಸನ ಪ್ರಭುಲಿಂಗಲೀಲೆ, ಪ್ರಿಯದರ್ಶಿನಿ ಪ್ರಕಾಶನ, ವಿಜಯನಗರ ೨ನೇ ಹಂತ, ಬೆಂಗಳೂರು.

೧೧೩. ವಿಜಯಶ್ರೀ ಇಟ್ಟಣ್ಣವರ, ೨೦೧೧, ಹದಿನೆಂಟು ಜಾತಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೪. ವಿವೇಕಾನಂದ ಸಜ್ಜನ, ೨೦೧೮, ವಚನ ವೈವಿಧ್ಯ, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.

೧೧೫. ವೀರಣ್ಣ ದಂಡೆ, ೨೦೧೭, ವಚನ ಸಾಹಿತ್ಯ ಮೀಮಾಂಸೆ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೧೬. ವೀರಣ್ಣ ರಾಜೂರು(ಸಂ), ೨೦೧೮, ಬಸವಯುಗದ ಸ್ವರವಚನ ಸಂಪುಟ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೧೭. ವೀರಣ್ಣ ದಂಡೆ, ೨೦೧೭, ವಚನ ವಿವೇಚನೆ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೧೮. ವೀರಣ್ಣ ರಾಜೂರು(ಸಂ), ೨೦೦೩, ಶಿವಶರಣೆಯರ ವಚನಗಳು ವಿಭಿನ್ನ ನೆಲೆಗಳು, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೧೯. ವೀರಣ್ಣ ರಾಜೂರು, ೨೦೦೮, ಶರಣ ಸಂಚಯ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

೧೨೦. ಶಂಕರಗೌಡ.ಮ.ಬಿರಾದಾರ, ೨೦೧೮, ಶರಣ ಸಂಗಮ, ಶ್ರೀ ಗವಿಮಠ ಬೆಟ್ಟದಹಳ್ಳಿ, ಚೇಳೂರು ಹೋಬಳಿ, ಗುಬ್ಬಿ ತಾಲ್ಲೂಕ.

೧೨೧. ಶಂಕರಗೌಡ.ಮ.ಬಿರಾದಾರ, ೨೦೧೫, ಎಚ್ಚರಿಕೆ ಕಾಯಕದ ಶರಣರು, ಕಾಡಾದಿ ಟ್ರಸ್ಟ್, ಕಾಡಾದಿ ಹಾಸ್ಪಿಟಲ್ ಬಾಳಿವೇಸ್, ಸೊಲ್ಲಾಪುರ (ಮಹಾರಾಷ್ಟ್ರ).

೧೨೨. ಶಂಭುಲಿಂಗ ದರೂರ, ೧೯೯೮, ಶ್ರೀಮನ್ನಿಜಗುಣರ ವಚನಸುಧೆ, ವಿಸ್ತೃತ ಸೇವಾಸಮಿತಿ ಶ್ರೀ ರುದ್ರಾಕ್ಷಿಮಠ, ಬೈಲಹೊಂಗಲ.

೧೨೩. ಶರಭೇಂದ್ರಯ್ಯ.ಬಿ.ಎಂ. ೨೦೧೬, ನಿಮ್ಮ ಚೆಮ್ಮಾವುಗೆಯ ಬಂಟ, ಅಲ್ಲಮಪ್ರಭು ಸಂಶೋಧನ ಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ, ಶ್ರೀ ಮುರುಘಾಮಠ, ಚಿತ್ರದುರ್ಗ.

೧೨೪. ಶರಭೇಂದ್ರಯ್ಯ.ಬಿ.ಎಂ. ೨೦೧೬, ಸುಳಿಯೊಡೆದ ಬೆಳೆ, ಅಲ್ಲಮಪ್ರಭು ಸಂಶೋಧನ ಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ, ಶ್ರೀ ಮುರುಘಾಮಠ, ಚಿತ್ರದುರ್ಗ.

೧೨೫. ಶಾಂತಾ. ಇಮ್ರಾಪೂರ, ೨೦೦೧, ಧರ್ಮ–ಮಹಿಳೆ ಮತ್ತು ಸಮಾಜ, ಚೇತನ ಪ್ರಕಾಶನ, ಧಾರವಾಡ.

೧೨೬. ಶ್ಯಾಮಸುಂದರ. ಬಿದರಕುಂದಿ(ಸಂ), ೨೦೧೧, ಬೋಧವೊಂದೆ ಬ್ರಹ್ಮನಾದವೊಂದೆ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು.

೧೨೭. ಶಿವಮೂರ್ತಿ ಮುರುಘಾ ಶರಣರು, ೨೦೧೭, ಬಸವತತ್ತ್ವ ವಿಶ್ವತತ್ತ್ವ, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೨೮. ಶಿವಮೂರ್ತಿ ಮುರುಘಾ ಶರಣರು, ೨೦೧೬, ವಚನಕ್ರಾಂತಿ, ಅಲ್ಲಮಪ್ರಭು ಸಂಶೋಧನ ಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ, ಶ್ರೀ ಮುರುಘಾಮಠ, ಚಿತ್ರದುರ್ಗ.

೧೨೯. ಶಿವಮೂರ್ತಿ ಮುರುಘಾ ಶರಣರು, ೨೦೧೬, ವಚನ ಶ್ರೀ, ಅಲ್ಲಮಪ್ರಭು ಸಂಶೋಧನ ಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ, ಶ್ರೀ ಮುರುಘಾಮಠ, ಚಿತ್ರದುರ್ಗ.

೧೩೦. ಶಿವಮೂರ್ತಿ ಮುರುಘಾ ಶರಣರು, ೨೦೧೬, ನಿಜಾಚರಣೆ, ಅಲ್ಲಮಪ್ರಭು ಸಂಶೋಧನ ಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ, ಶ್ರೀ ಮುರುಘಾಮಠ, ಚಿತ್ರದುರ್ಗ.

೧೩೧. ಶಿವಮೂರ್ತಿ ಮುರುಘಾ ಶರಣರು, ೨೦೧೪, ವಚನ ವಿವೇಕ, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಶ್ರೀ ಮುರುಘಾಮಠ, ಚಿತ್ರದುರ್ಗ.

೧೩೨. ಶಿವರಾಜ.ವಿ.ಪಾಟೀಲ. ೨೦೧೦, ಅನುಭಾವದ ನುಡಿಗಳು, ರಾಯಚೂರ ಜಿಲ್ಲಾ ಏಳನೇಯ ಕನ್ನಡ ಸಾಹಿತ್ಯ ಸಮ್ಮೇಳನ ದೇವದುರ್ಗ. ರಾಯಚೂರ ಜಿಲ್ಲಾ.

೧೩೩. ಶಿವರುದ್ರಪ್ಪ.ಜಿ.ಎಸ್. ೨೦೧೮, ವಚನ ಸಾಹಿತ್ಯ ದರ್ಶನ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೩೪. ಶಿರೂರ.ಬಿ.ವ್ಹಿ. ೨೦೧೭, ವಚನಕಾರ ಸಮಗ್ರಕ್ರಾಂತಿ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ

೧೩೫. ಶಿರೂರ.ಬಿ.ವ್ಹಿ.(ಸಂ), ೨೦೧೦, ಅಮೃತ ದರ್ಶನ, ಪ್ರಭುದೇವ ಪ್ರಕಾಶನ, ಶ್ರೀ ಗುರುಬಸವ ಮಹಾಮನೆ ಚೆನ್ನಯ್ಯನಗಿರಿ, ತಾ॥ ಮನಗುಂಡಿ.

೧೩೬. ಶ್ರೀಶೈಲ ನಾಗರಾಳ(ಸಂ), ೨೦೧೮, ತಳವರ್ಗದ ವಚನಕಾರರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೩೭. ಶೈಲಜ.ಎಚ್.ಟಿ.(ಸಂ), ೨೦೧೬, ಕರ್ತಾರನ ಕಮ್ಮಟ, ವಚನ ಅಧ್ಯಯನ ಕೇಂದ್ರ, ನಾಗನೂರ, ರುದ್ರಾಕ್ಷಿಮಠ, ಶಿವಬಸವನಗರ, ಬೆಳಗಾವಿ.

೧೩೮. ಶೈಲಜಾ.ಎಚ್.ಟಿ.(ಸಂ), ೨೦೧೮, ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ವಚನಗಳಲ್ಲಿ ತತ್ತ್ವತ್ರಯ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೩೯. ಸಚ್ಚಿದಾನಂದ ಚಟನಳ್ಳಿ, ೨೦೦೮, ಅನುಭಾವದಡಿಗೆ, ವಿಶ್ವಕಲ್ಯಾಣ ಮಿಷನ್, ರಾಜಾಜಿನಗರ ಬೆಂಗಳೂರು.

೧೪೦. ಸಿದ್ದರಾಮ ಸ್ವಾಮಿಗಳು, ೨೦೧೮, ಅಮೃತಾನುಭಾವ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೪೧. ಸಿದ್ದರಾಮ ಸ್ವಾಮಿಗಳು, ೨೦೧೮, ವಚನಾರ್ಥ ಚಿಂತನ, ವಚನ ಅಧ್ಯಯನ ಕೇಂದ್ರ, ನಾಗನೂರು ಶ್ರೀ ರುದ್ರಾಕ್ಷಿಮಠ ಶಿವಬಸವನಗರ, ಬೆಳೆಗಾವಿ.

೧೪೨. ಸಿದ್ಧರಾಮ ಶರಣರು ಬೆಲ್ದಾಳ, ಧನ್ನೂರು.ಡಿ.ಎಂ. ೧೯೯೯, ಬಸವತತ್ತ್ವ ಪ್ರದೀಪಿಕೆ, ಅಲ್ಲಮಪ್ರಭು ಸಂಶೋಧನ ಕೇಂದ್ರ, ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ ಬಸವಕೇಂದ್ರ ಶ್ರೀ ಮುರುಘಾಮಠ, ಚಿತ್ರದುರ್ಗ.

೧೪೩. ಸಿದ್ದಯ್ಯ ಪುರಾಣಿಕ, ೨೦೧೮, ಬಸವಣ್ಣವರ ಜೀವನ ಹಾಗೂ ಸಂದೇಶ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೪೪. ಸಿದ್ಧಲಿಂಗಯ್ಯ.ಜಿ.ಎಸ್. ೨೦೧೮, ಯುಗದ ಶಕ್ತಿ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೪೫. ಸಿಪಿಕೆ, ೨೦೧೭, ಬಸವ ಸಂದೇಶ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೪೬. ಸುನೀಲಕುಮಾರ ಕಾಂಬಳೆ, ಸಂತೋಷಕುಮಾರ ಕಂಬಾರ(ಸಂ), ೨೦೧೮, ಕನ್ನಡ ದಲಿತ ಸಾಹಿತ್ಯ, ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ.

೧೪೭. ಸೂಗಯ್ಯ ಹಿರೇಮಠ(ಸಂ), ೨೦೦೫, ಚಿಂತನ ಲೇಖನಗಳು, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬುರ್ಗಾ.

೧೪೮. ಸೋಮನಾಥ ಯಾಳವಾರ(ಸಂ), ೨೦೧೬, ಜಗತ್ತಿನ ಪ್ರಪ್ರಥಮ ಸಂಸತ್ತು ಅನುಭವ ಮಂಟಪ, ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ, ಬಸವಕಲ್ಯಾಣ.

೧೪೯. ಹಳಕಟ್ಟಿ.ಫ.ಗು.(ಸಂ) ೧೯೯೯, ವಚನಶಾಸ್ತ್ರಸಾರ, ಭಾಗ-೧, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೊಂಟದಾರ್ಯ ಸಂಸ್ಥಾನಮಠ, ಡಂಬಳ- ಗದಗ.

೧೫೦. ಹಳಕಟ್ಟಿ.ಫ.ಗು.(ಸಂ) ೧೯೯೯, ವಚನಶಾಸ್ತ್ರಸಾರ, ಭಾಗ-೨, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೊಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ.

೧೫೧. ಹಳಕಟ್ಟಿ.ಫ.ಗು.(ಸಂ) ೧೯೮೨, ವಚನಶಾಸ್ತ್ರಸಾರ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೊಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ.

೧೫೨. ಹಿರೇಮಠ.ಎಸ್.ಎಮ್. ೧೯೯೦, ಅನುಭಾವ ಮಂಟಪ ದರ್ಶನ, ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ, ಮುಂಡರಗಿ.

೧೫೩. ಹೂಗಾರ.ಎಂ.ಬಿ. ೨೦೧೭, ಬಸವ ಬಿತ್ತಿದ ಬೆಳಕು, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

೧೫೪. ಹೆಂಡಿ.ಬಿ.ಬಿ. ೨೦೧೭, ವಚನ ಪ್ರೇರಣೆ, ಶ್ರೀ ಬಾಲಲೀಲಾ ಮಹಾಂತ ಶಿವಯೊಗೀಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.

ಕಾವ್ಯ ಪುರಾಣಗಳು :

೧. ರಾಮಣ್ಣ ಬ್ಯಾಟಿ, ೨೦೧೭, ಬುದ್ಧ ಪುರಾಣ, ಡಾ. ಎಂ.ಎಂ.ಕಲಬುರ್ಗಿ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೊಂಟದಾರ್ಯ ಸಂಸ್ಥಾನಮಠ, ಗದಗ.

೨. ರಾಮಣ್ಣ ಬ್ಯಾಟಿ, ೨೦೧೪, ಬಸವ ಪುರಾಣ, ಗ್ರಾಮೀಣ ಸಾಹಿತ್ಯ ರತ್ನಮಾಲೆ, ಶ್ರೀ ಜಗದ್ಗುರು ತೊಂಟದಾರ್ಯ ಸಂಸ್ಥಾನಮಠ, ಎಡೆಯೂರು-ಡಂಬಳ-ಗದಗ.

೩. ರಾಮಣ್ಣ ಬ್ಯಾಟಿ, ೨೦೧೯, ಸಾವಿತ್ರಿಬಾಯಿ ಜ್ಯೋತಿಬಾ ಫುಲೆ ದಂಪತಿಗಳ ಪುರಾಣ, ಗ್ರಾಮೀಣ ಸಾಹಿತ್ಯ ರತ್ನಮಾಲೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಡಂಬಳ–ಗದಗ.

೪. ರಾಮಣ್ಣ ಬ್ಯಾಟಿ, ೨೦೧೯, ಹರ್ಲಾಪೂರ ಹಠಯೋಗಿ ಶ್ರೀಗುರು ಕೊಟ್ಟೂರೇಶ್ವರ ಪುರಾಣ, ಶ್ರೀಗುರು ಕೊಟ್ಟೂರೇಶ್ವರ ಪ್ರಕಾಶನ, ಶ್ರೀಗುರು ಕೊಟ್ಟೂರೇಶ್ವರ ವಿರಕ್ತಮಠ ಹರ್ಲಾಪೂರ. ತಾ॥ಜಿ॥ ಗದಗ.

೫. ರಾಮಣ್ಣ ಬ್ಯಾಟಿ, ೨೦೧೭, ಬಾಗಲಕೋಟೆಯ ವೈರಾಗ್ಯ ಮಲ್ಲಣಾರ್ಯರಪುರಾಣ, ಶ್ರೀ ಒಪ್ಪತ್ತೇಶ್ವರ ಪ್ರಕಾಶನ, ಶ್ರೀಗುರು ಒಪ್ಪತ್ತೇಶ್ವರ ಸಂಸ್ಥಾನಮಠ, ಗುಳೇದಗುಡ್ಡ.

೬. ರಾಮಣ್ಣ ಬ್ಯಾಟಿ, ೨೦೧೦, ಡಾ. ಬಾಬಾಸಾಹೇಬ ಅಂಬೇಡ್ಕರ ಪುರಾಣ, ಗ್ರಾಮೀಣ ಸಾಹಿತ್ಯ ರತ್ನಮಾಲೆ, ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ–ಗದಗ.

೭. ಲತಾ ರಾಜಶೇಖರ್, ೨೦೧೦, ಬಸವ ಮಹಾದರ್ಶನ, ಕಾವೇರಿ ಪ್ರಕಾಶನ ಲಕ್ಷ್ಮೀಪುರಂ, ಮೈಸೂರು.

೮. ವಿರೂಪಾಕ್ಷ ಸ್ವಾಮಿಗಳು(ಸಂ), ಗದ್ಯಾನುವಾದ : ಎಂ. ಬಸವಲಿಂಗಶಾಸ್ತ್ರಿ, ೨೦೧೫, ಸಿಂಗಿರಾಜಪುರಾಣ, ಎನ್. ನಾಗರತ್ನ ಪ್ರಕಾಶನ, ಹಂಪಿನಗರ, ಬೆಂಗಳೂರು.

ಅಭಿನಂದನ ಗ್ರಂಥ :

೧. ಗುರುಲಿಂಗಪ್ಪ ಧಬಾಲೆ(ಸಂ), ೨೦೧೪, ಕಲ್ಯಾಣ ದೀಪ್ತಿ, ಪೂಜ್ಯ ಶ್ರೀ ಮ,ಘ,ಚ, ಡಾ. ಬಸವಲಿಂಗ ಪಟ್ಟದ್ದೇವರ ಅಭಿನಂದನ ಗ್ರಂಥ, ಶ್ರೀ ಮ,ಘ,ಚ, ಡಾ. ಬಸವಲಿಂಗ ಪಟ್ಟದ್ದೇವರ ಅಭಿನಂದನ ಗ್ರಂಥ ಸಮಿತಿ, ಹಿರೇಮಠ ಸಂಸ್ಥಾನ, ಭಾಲ್ಕಿ, ಜಿಲ್ಲಾ ಬೀದರ.

೨. ಪ್ರಕಾಶ ಗಿರಿಮಲ್ಲನವರ, ಡಾ. ಬಿ.ನಂಜುಂಡಸ್ವಾಮಿ(ಸಂ), ೨೦೧೮, ಬಸವ ಬೆಳಕು, ಜಗದ್ಗುರು ಡಾ. ತೋಂಟದ ಸಿದ್ಧರಾಮ ಸ್ವಾಮಿಗಳ ಅಭಿನಂದನ, ಸವಿ ಚೇತನ ಪ್ರಕಾಶನ, 'ಗೋಧೂಳಿ' ಆದರ್ಶನಗರ, ಗದಗ.

೩. ಪ್ರಕಾಶ ಗಿರಿಮಲ್ಲನವರ(ಸಂ), ೨೦೧೭, ಲಿಂಗಾಯತ ಸಂಸ್ಕೃತಿ, ಡಾ. ತೋಂಟದ ಸಿದ್ಧಲಿಂಗ ಶ್ರೀಗಳ ಅಭಿನಂದನ, ಬೆಳದಿಂಗಳು ಪ್ರಕಾಶನ, ಬೆಳಗಾವಿ.

ಸ್ಮರಣ ಸಂಪುಟ :

೧. ಈಶ್ವರಯ್ಯ ಮಠ(ಸಂ), ೨೦೦೬, ಬಸವಸಾಗರ, (ಸ್ಮರಣಗ್ರಂಥ) ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಆದರ್ಶನಗರ ಕಲಬುರ್ಗಿ.

೨. ಗೊರವರ.ಬ.ಸೊ, ಅರ್ಜುನ ಗೊಳಸಂಗಿ, ೨೦೧೦, ಬೆಳ್ವೊಲ ಬೆಳಕು, ಸ್ಮರಣ ಸಂಚಿಕೆ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಅಖಿಲ ಭಾರತ ೭೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ.

೩. ವೀರಣ್ಣ ರಾಜೂರ, ಬಸವರಾಜ ಹೂಗಾರ(ಸಂ), ೨೦೧೩, ಯುಗ ಯುಗದ ಉತ್ಸಾಹ, ಬಸವಜಯಂತಿ ಆಚರಣೆಯ ಶತಮಾನೋತ್ಸವ ಸ್ಮರಣ ಸಂಪುಟ, ಶ್ರೀ ಮುರುಘಾಮಠ, ಮೃತ್ಯುಂಜಯನಗರ, ಧಾರವಾಡ.

೪. ವೀರಣ್ಣ ರಾಜೂರ, ಬಸವರಾಜ ಹೂಗಾರ(ಸಂ), ೨೦೧೫, ಮಹಾಂತ ಬೆಳಗು, ಪೂಜ್ಯ ಲಿಂ. ಮಹಾಂತಪ್ಪಗಳವರ ಜನ್ಮಶತಮಾನೋತ್ಸವ ಸ್ಮರಣ ಸಂಪುಟ. ಶ್ರೀ ಮುರುಘಾಮಠ ಶ್ರೀ ಮೃತ್ಯುಂಜಯನಗರ, ಧಾರವಾಡ.

೫. ರಾಜೇಂದ್ರ.ಎಸ್.ಗಡಾದ, ನೀಲಕಂಠ ಮರಡಿ(ಸಂ), ೨೦೦೫, ಮೌನ ಮಲ್ಲಿಗೆ, ಸ್ಮರಣ ಸಂಚಿಕೆ ಪರಮಪೂಜ್ಯ ಮೌನಯೋಗಿ ಶ್ರೀ ಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳ ಮೌನ ಮುಕ್ತಾಯ ಹಾಗೂ ನಿರಂಜನ ಪಟ್ಟಾಧಿಕಾರ ಮಹೋತ್ಸವ ಸಮಿತಿ ಲಕ್ಕುಂಡಿ, ತಾ॥ಜಿ॥ ಗದಗ.

೬. ಸೋಮನಾಥ ಯಾಳವಾರ(ಸಂ), ೨೦೧೭, ಲಿಂಗಾಯತಂ ಭೊ ಸ್ವತಂತ್ರಶೀಲ, ಅನುಭವ ಮಂಟಪ ಉತ್ಸವ ಹಾಗೂ ಶರಣ ಸಂಗಮ ಸ್ಮರಣ ಸಂಪುಟ. ವಿಶ್ವಬಸವಧರ್ಮ ಟ್ರಸ್ಟ್, ಪ್ರಸಾರಾಂಗ, ವಚನ ವಿಶ್ವವಿದ್ಯಾಲಯ ಅನುಭವ ಮಂಟಪ ಬಸವಕಲ್ಯಾಣ.

೭. ಸೋಮನಾಥ ಯಾಳವಾರ(ಸಂ), ೨೦೧೬, ಜ್ಯೋತಿ ಮುಟ್ಟಿದ ಬತ್ತಿ, ಪೂಜ್ಯ ಶ್ರೀ ಗುರುಬಸವದೇವರ ಸ್ಥಿರ-ಚರ ಪಟ್ಟಾಧಿಕಾರ ಮಹೋತ್ಸವದ ಸ್ಮರಣ ಸಂಪುಟ. ಪೂಜ್ಯ ಶ್ರೀ ಗುರುಬಸವದೇವರ ಸ್ಥಿರ-ಚರ ಪಟ್ಟಾಧಿಕಾರ ಮಹೋತ್ಸವ ಸಮಿತಿ, ಹಿರೇಮಠ ಸಂಸ್ಥಾನ, ಭಾಲ್ಕಿ, ಬೀದರ್ ಜಿಲ್ಲೆ.

೮. ವೀರಣ್ಣ.ಜಿ.ತುರಮರಿ, ೨೦೧೧, ಲಕ್ಕುಂಡಿ ಉತ್ಸವ, ಸ್ಮರಣ ಸಂಚಿಕೆ. ಶ್ರೀ ಎಸ್. ಶಂಕರನಾರಾಯಣ ಭಾ.ಅ.ಸೇ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾದಂಡಾಧಿಕಾರಿಗಳು, ಗದಗ.

ಸಂಶೋಧನೆ :

೧. ಕುಮಾರ್.ಜೆ, ೨೦೧೬, ನೂರೊಂದು ವಿರಕ್ತರು : ಒಂದು ಅಧ್ಯಯನ, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ ಶ್ರೀ ಮುರುಘಾಮಠ, ಚಿತ್ರದುರ್ಗ.

೨. ತಿಪ್ಪೇರುದ್ರಸ್ವಾಮಿ.ಎಚ್, ೨೦೧೬, ಶರಣರ ಅನುಭಾವ ಸಾಹಿತ್ಯ, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ ಶ್ರೀ ಮುರುಘಾಮಠ, ಚಿತ್ರದುರ್ಗ.

೩. ನಾರಾಯಣ.ಪಿ.ವಿ, ೨೦೧೬, ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ ಶ್ರೀ ಮುರುಘಾಮಠ, ಚಿತ್ರದುರ್ಗ.

೪. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು, ೨೦೧೬, ಉಪನಿಷತ್ತು ಮತ್ತು ವಚನಗಳು : ತೌಲನಿಕ ಅಧ್ಯಯನ, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ ಶ್ರೀ ಮುರುಘಾಮಠ, ಚಿತ್ರದುರ್ಗ.

೫. ಶೈಲಜಾ ಉಡಚಣ, ೨೦೧೬, ವಚನಕಾರರ ದೃಷ್ಟಿಯಲ್ಲಿ ಸ್ತ್ರೀ, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ ಶ್ರೀ ಮುರುಘಾಮಠ, ಚಿತ್ರದುರ್ಗ.

೬. ಸದಾನಂದ ಪಾಟೀಲ(ಸಂ), ೧೯೯೯, ಹರಿಹರನ ರಗಳೆಗಳು ಒಂದು ಸಾಂಸ್ಕೃತಿಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ.

೭. ಸಾವುಕಾರ.ಎಸ್.ಕಾಂಬಳೆ, ೨೦೧೬, ಲಿಂಗಾಯತ ಅಸ್ಪೃಶ್ಯರು ಒಂದು ಅಧ್ಯಯನ, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ ಶ್ರೀ ಮುರುಘಾಮಠ, ಚಿತ್ರದುರ್ಗ.

೮. ಹಿರಿಶಾಂತವೀರ ಮಹಾಸ್ವಾಮಿಗಳು, ೨೦೧೬, ಗಂಗಾಂಬಿಕೆ–ನೀಲಾಂಬಿಕೆ ಒಂದು ಅಧ್ಯಯನ, ಪ್ರಭುದೇವ ಜನಕಲ್ಯಾಣ ಸಂಸ್ಥೆ ಶ್ರೀ ಪ್ರಭುದೇವ ಸಂಸ್ಥಾನ ವಿರಕ್ತಮಠ ಸಂಡೂರು.

ಪತ್ರಿಕೆಗಳು :

೧. ಅಂದಾನಪ್ಪ ವಿಭೂತಿ(ಸಂ), ವಿಭೂತಿ, ಸಂಪುಟ ೪, ಸಂಚಿಕೆ ೯, ಜನೇವರಿ ೨೦೦೭, ಕವಿತಾ ಪಬ್ಲಿಕೇಶನ್, ರಾಜೀವಗಾಂಧಿ ನಗರ, ಗದಗ.

೨. ನಿರ್ಮಲಾನಂದನಾಥ ಮಹಾಸ್ವಾಮಿಗಳು(ಸಂ), ಆದಿಚುಂಚನಗಿರಿ, ಸಂಪುಟ ೩೬, ಸಂಚಿಕೆ ೪, ಡಿಸೆಂಬರ್ ೨೦೧೮, ಅಭಿಯಾನ ಪ್ರಕಾಶನ ರಾಜಾಜಿನಗರ, ಬೆಂಗಳೂರು.

೩. ಪೂರ್ಣಿಮ.ಬಿ.ಜಿ(ಸಂ), ಜನಪದ, ಸಂಪುಟ ೨, ಸಂಚಿಕೆ ೮, ಮೇ ೨೦೧೯, ನಿರ್ದೇಶಕರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಹಾವೀರ ರಸ್ತೆ ಬೆಂಗಳೂರು.

೪. ಪೂರ್ಣಿಮ.ಬಿ.ಜಿ(ಸಂ), ಜನಪದ, ಸಂಪುಟ ೨, ಸಂಚಿಕೆ ೫, ಫೆಬ್ರುವರಿ ೨೦೧೯, ನಿರ್ದೇಶಕರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಹಾವೀರ ರಸ್ತೆ ಬೆಂಗಳೂರು.

೫. ಮಹದೇವಪ್ಪ.ಎನ್.ಜಿ(ಸಂ), ಲಿಂಗಾಯತ ದರ್ಶನ, ಸಂಪುಟ ೫, ಸಂಚಿಕೆ ೯, ಸಪ್ಟಂಬರ್ ೨೦೧೮, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವನಗರ, ಬೆಳಗಾವಿ.

೬. ಮಂಜುನಾಥ ಬಮ್ಮನಕಟ್ಟಿ(ಸಂ), ಸಾಧನ ಕಿರಣ, ಮೇ ೧೯೯೬, ಪ್ರಕಾಶಕರು ಎಂ. ಶಿವ, ಗಂಜೀಗಟ್ಟಿ ತಾ॥ ಶಿಗ್ಗಾಂವ.

೭. ರಮೇಶ.ಬಿ.ಎನ್(ಸಂ), ಕನ್ನಡ ನುಡಿ, ಸಂಪುಟ ೮೩, ಸಂಚಿಕೆ ೧೨, ಡಿಸೆಂಬರ್ ೨೦೧೮–ಮೇ–೨೦೧೯, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೮. ಲಿಂಗಣ್ಣ ಸತ್ಯಂಪೇಟೆ, ಸಂತೋಷ ಸತ್ಯಂಪೇಟೆ(ಸಂ), ಬಸವ ಮಾರ್ಗ, ಸಂಪುಟ ೧೦, ಸಂಚಿಕೆ ೧, ಸಪ್ಟಂಬರ್ ೨೦೦೯, ಬಸವ ಮಾರ್ಗಪ್ರಕಾಶನ ಶ್ರೀ ಚ.ಬ. ಕಾಲೋನಿ, ಶಹಾಪೂರು ಕಲ್ಬುರ್ಗಿ ಜಿಲ್ಲೆ.

೯. ರುದ್ರಮುನಿ ದೇವರು ಷಡಕ್ಷರಮಠ, ತಿಪಟೂರು(ಸಂ), ಪರಂಜ್ಯೋತಿ, ಸಂಪುಟ ೨೩, ಸಂಚಿಕೆ ೧೦, ಮೇ ೧೯೯೧, ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ ಮೂರುಸಾವಿರಮಠ, ಹುಬ್ಬಳ್ಳಿ.

೧೦. ವೀರಭದ್ರಯ್ಯ.ಹೆಚ್.ವಿ(ಸಂ), ಸಿದ್ಧಗಂಗಾ, ಸಂಪುಟ ೩೩, ಸಂಚಿಕೆ ೬, ಜೂನ್ ೧೯೯೭, ಶ್ರೀ ಸಿದ್ಧಗಂಗಾಮಠ, ತುಮಕೂರು ಜಿಲ್ಲೆ.

೧೧. ಶಂಕರಗೌಡ.ಮ.ಬಿರಾದಾರ(ಸಂ), ನಿಸ್ಸೀಮ, ಸಂಪುಟ ೫, ಸಂಚಿಕೆ ೨, ಜೂನ್ ೨೦೧೮, ಶ್ರೀ ಓಂಕಾರೇಶ್ವರ ಪ್ರಕಾಶನ ಚಿಕ್ಕತೊಟ್ಲುಕೆರೆ, ತುಮಕೂರು ಜಿಲ್ಲೆ.

೧೨. ಶಂಕರಗೌಡ.ಮ.ಬಿರಾದಾರ(ಸಂ), ನಿಸ್ಸೀಮ, ಸಂಪುಟ ೬, ಸಂಚಿಕೆ ೨, ಜೂನ್ ೨೦೧೯, ಶ್ರೀ ಓಂಕಾರೇಶ್ವರ ಪ್ರಕಾಶನ ಚಿಕ್ಕತೊಟ್ಲುಕೆರೆ, ತುಮಕೂರು ಜಿಲ್ಲೆ.

೧೩. ಹಿರೇಮಠ.ಐ.ಎಸ್(ಸಂ), ಶ್ರೀ ಬೂದೀಶ ಪ್ರಭೆ, ಸಂಪುಟ ೨, ಸಂಚಿಕೆ ೪, ಮೇ ೨೦೧೮, ಶ್ರೀ ಪ್ರಭು ಪ್ರಕಾಶನ ಬೂದೀಶ್ವರ ಸಂಸ್ಥಾನಮಠ ಬೂದೀಶ್ವರ ಸಂಸ್ಥಾನಮಠ ಹೊಸಳ್ಳಿ

೨. ವಕ್ತೃ ವಿವರ

೧. ಶಿವಮೂರ್ತಿ ಮುರುಘಾ ಶರಣರು ವಯಸ್ಸು ಸು. ೫೫ ಮುರುಘಾಮಠ, ಚಿತ್ರದುರ್ಗ.

೨. ಮ.ನಿ.ಪ್ರ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ವಯಸ್ಸು ಸು. ೫೭ ಶ್ರೀ ತೋಂಟದಾರ್ಯಮಠ ಗದಗ.

೩. ಮ.ನಿ.ಪ್ರ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ವಯಸ್ಸು ಸು. ೬೨ ಮುರುಘಾಮಠ, ಧಾರವಾಡ.

೪. ಮ.ನಿ.ಪ್ರ ಡಾ. ಚೆನ್ನಮಲ್ಲ ಮಹಾಸ್ವಾಮಿಗಳು, ವಯಸ್ಸು ೪೦. ಕನಕಗಿರಿ.

೫. ಮ.ನಿ.ಪ್ರ ಡಾ. ಹಿರಿಶಾಂತವೀರ ಮಹಾಸ್ವಾಮಿಗಳು, ವಯಸ್ಸು ೪೧ ಹೂವ್ವಿನಹಡಗಲಿ.

೬. ಮ.ಘ.ಚ ಗುರುಬಸವ ಪಟ್ಟದ್ದೇವರು, ವಯಸ್ಸು ೩೬ ಹಿರೇಮಠ ಸಂಸ್ಥಾನ ಭಾಲ್ಕಿ.

೭. ಎಂ.ಜಿ.ಹಿರೇಮಠ, ವಯಸ್ಸು ಸು. ೫೧ ಜಿಲ್ಲಾಧಿಕಾರಿಗಳು, ಗದಗ.

೮. ಎಸ್.ಎಸ್.ಪಟ್ಟಣಶೆಟ್ಟಿ, ವಯಸ್ಸು ಸು. ೫೮ ಕಾರ್ಯದರ್ಶಿಗಳು ತೋಂಟದಾರ್ಯಮಠ ಗದಗ.

೯. ಬಿ.ಬಿ.ಹೊಸಮನಿ, ವಯಸ್ಸು ೬೮ 'ಲಿಂಗಾಯತ ದರ್ಶನ' ಮಾಸಿಕ ಪತ್ರಿಕೆ ಸಂಪಾದಕರು, ವಚನ ಅಧ್ಯಯನ ಕೇಂದ್ರ ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ, ಬೆಳಗಾವಿ.

೧೦. ಜಿ.ಕೆ.ಕಡಬಡಿ, ವಯಸ್ಸು ೭೦ ಲೇಖಕರು, ಪರಿಸರವಾದಿ ನಿವೃತ್ತ ಪ್ರಾಂಶುಪಾಲರು ಬೆಳಗಾವಿ.

೩.ಲೇಖನಗಳು

೧. ಅರ್ಜುನ ಗೊಳಸಂಗಿ, ಶರಣ ಸಾಹಿತ್ಯದಲ್ಲಿ ಸಮಾನತೆ, ಹೊಸಳ್ಳಿ ಬೂದೀಶ್ವರ ಮಠದ, ಕನ್ನಡ ತ್ರೈಮಾಸಿಕ ಪತ್ರಿಕೆ 'ಶೀ ಬೂದೀಶ ಪ್ರಭೆ' ಸಂಪುಟ ೧, ಸಂಚಿಕೆ ೧, ಮೇ ೨೦೧೭ರ ಲೇಖನ.

೨. ಕಲಬುರ್ಗಿ.ಎಂ.ಎಂ, ೨೦೧೪, ಕಲ್ಯಾಣವೆಂಬ ಪ್ರಣತೆಯಲ್ಲಿ....., ಭಾಲ್ಕಿ ಹಿರೇಮಠ ಸಂಸ್ಥಾನದ ಶ್ರೀ ಮ.ಘ.ಚ ಡಾ. ಬಸವಲಿಂಗ ಪಟ್ಟದೇವರ ಅಭಿನಂದನ ಗ್ರಂಥ ಲೇಖನ.

೩. ಕಲಬುರ್ಗಿ.ಎಂ.ಎಂ, ೨೦೧೧, ಅಸ್ಪೃಶ್ಯತೆಯ ನಿರ್ಮೂಲನ : ಶರಣರ ಕಾರ್ಯವಿಧಾನ, ಡಾ. ಸಾ.ಶಿ.ಮರುಳಯ್ಯ ಪ್ರಧಾನ ಸಂಪಾದಕತ್ವದ ದಲಿತಪ್ರಭಾ ಗ್ರಂಥ ಲೇಖನ.

೪. ಚಂದ್ರಶೇಖರ. ವಸ್ತ್ರದ, ೨೦೧೬, ವಚನಕಾರರ ವೈಚಾರಿಕ ನಿಲುವು, ಭಾಲ್ಕಿ ಹಿರೇಮಠ ಸಂಸ್ಥಾನಮಠದ ಶ್ರೀ ಗುರುಬಸವೇಶ್ವರ ಸ್ಥಿರ-ಚರ ಪಟ್ಟಾಧಿಕಾರ ಸ್ಮರಣ ಸಂಪುಟ ಲೇಖನ.

೫. ಪೀರ್‌ಬಾಷಾ.ಬಿ, ಚಳುವಳಿಯ ನೆಲೆ ಸ್ವರೂಪಗಳು, ಬೆಳಗಾವಿ ರುದ್ರಾಕ್ಷಿಮಠ, ಮಾಸಿಕ ಪತ್ರಿಕೆ, ಲಿಂಗಾಯತ ದರ್ಶನ, ಸಂಪುಟ ೬, ಸಂಚಿಕೆ ೪, ಎಪ್ರೀಲ್ ೨೦೧೯ರ ಲೇಖನ.

೬. ಪಾಟೀಲ.ಜೆ.ಎಸ್, ವಿಜಯಪುರ. ಶರಣ ಸಾಹಿತ್ಯದಲ್ಲಿ ಜನಪದ ಸಂವೇದನೆಗಳು, ಬೆಳಗಾವಿ, ಶಿವಾನಂದ ಮೇಟ್ಯಾಲ ಸಂಪಾದಕತ್ವದ ಲಿಂಗಾಯತ ಕ್ರಾಂತಿ, ಮಾಸಪತ್ರಿಕೆ, ಸಂಪುಟ ೧, ಸಂಚಿಕೆ ೧, ಸಪ್ಟಂಬರ್ ೨೦೧*೮ರ ಲೇಖನ.

೭. ಭಗವಾನ್.ಕೆ.ಎಸ್, ೨೦೧೩, ವಚನ ಚಳುವಳಿ ಸಬಲಗೊಳಿಸುವ ಕಾರ್ಯಾವಳಿ, ಧಾರವಾಡ ಶ್ರೀ ಮುರುಘಾಮಠದ ಬಸವಜಯಂತಿ ಆಚರಣೆಯ ಶತಮಾನೋತ್ಸವ ಸ್ಮರಣ ಸಂಪುಟ ಲೇಖನ.

೮. ಮಹಾಂತೇಶ.ಮ.ಜಾಂಗಟಿ, ದೇವದಾಸಿ ಪದ್ಧತಿ ನಿರ್ಮೂಲನೆಗೆ ಪಣ ತೊಟ್ಟಿರುವ ಸೀತವ್ವ, ಬೆಂಗಳೂರು, ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ, ಮಾಸಿಕ ಪತ್ರಿಕೆ "ಜನಪದ" ಸಂಪುಟ ೬೧, ಸಂಚಿಕೆ ೩, ಜೂನ್ ೨೦೧೮ರ ಲೇಖನ.

೯. ರಂಜಾನ್ ದರ್ಗಾ, ೨೦೧೬, ಜಾಗತೀಕರಣಕ್ಕೆ ವಚನಕಾರರ ಸವಾಲು, ಭಾಲ್ಕಿ ಹಿರೇಮಠ ಸಂಸ್ಥಾನದ, ಶ್ರೀ ಗುರುಬಸವೇಶ್ವರ ಸ್ಥಿರ-ಚರ ಪಟ್ಟಾಧಿಕಾರ ಸ್ಮರಣ ಸಂಪುಟ ಲೇಖನ.

೧೦. ರಾಜಶೇಖರ ಜಮದಂಡಿ, ವಚನಗಳಲ್ಲಿ ಅನುಕಂಪದ ನೆಲೆಗಳು, ಬೆಳಗಾವಿ ರುದ್ರಾಕ್ಷಿಮಠ, ಮಾಸಿಕ ಪತ್ರಿಕೆ, ಲಿಂಗಾಯತ ದರ್ಶನ, ಸಂಪುಟ ೬, ಸಂಚಿಕೆ ೭, ಜುಲೈ ೨೦೧೯ರ ಲೇಖನ.

೧೧. ರುದ್ರೇಶ. ಗಂಗಾಧರ. ಕಿತ್ತೂರು, ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ, ವೈಜ್ಞಾನಿಕ ಚಿಂತನೆ, ಬೆಳಗಾವಿ, ಶಿವಾನಂದ ಮೇಟ್ಯಾಲ ಸಂಪಾದಕತ್ವದ ಲಿಂಗಾಯತ ಕ್ರಾಂತಿ, ಮಾಸಪತ್ರಿಕೆ, ಸಂಪುಟ ೧, ಸಂಚಿಕೆ ೨, ಅಕ್ಟೋಬರ್ ೨೦೧೮ರ ಲೇಖನ.

೧೨. ವಿಶ್ವಾರಾಧ್ಯ ಸತ್ಯಂಪೇಟೆ, ಬಸವಣ್ಣನವರು ಕಟ್ಟಬಯಸಿದ ಸಮಾಜ ಯಾವುದು?, ಬೆಳಗಾವಿ. ಶಿವಾನಂದ ಮೇಟ್ಯಾಲ ಸಂಪಾದಕತ್ವದ ಲಿಂಗಾಯತ ಕ್ರಾಂತಿ, ಮಾಸಪತ್ರಿಕೆ, ಸಂಪುಟ ೧, ಸಂಚಿಕೆ ೨, ಅಕ್ಟೋಬರ್ ೨೦೧೮ರ ಲೇಖನ.

೧೩. ವೀರಭದ್ರಪ್ಪ.ಕುಂ, ೨೦೧೬, ವೈಚಾರಿಕ ತವನಿಧಿ ನಮ್ಮ ಶರಣರೇ ಒಂದು ಸೈನ್ಯ, ಚಿತ್ರದುರ್ಗ ಶ್ರೀ ಮುರುಘಾಮಠದ ಡಾ. ಶಿವಮೂರ್ತಿ ಮುರುಘಾ ಶರಣರ ಶೂನ್ಯಪೀಠಾರೋಹಣ ಬೆಳ್ಳಿಹಬ್ಬ, ಸಂಭಾವನ ಗ್ರಂಥ ಲೇಖನ.

೪. ಇಂಗ್ಲೀಷ್ ಗ್ರಂಥಗಳು

1. ANANTHANARAYANA,S, 1990, 'Thus sang the veerasaiva mysteries', SREE JAGADGURU GANGADHARA DHARMA PRACHARAKA. MOORUSAVIRAMATH, HUBLI.
2. GURU .S. BALE, 2003, 'DIVINE GUIDES' Sid- Asha Publishing Company,Edision, NJ 08817.
3. Sheshagiri Rao, L.S, 2009, 'sri basaveshwara' Sapna Book House, Gandhinagar, bangalore.



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಜಾನಪದ ಅಧ್ಯಯನ ವಿಭಾಗ